|| ಶ್ರೀಃ ||

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂ. ೩೨)

ಶ್ರೀಶಿವರಹಸ್ಯ

ಸಂಪುಟ ೧೧

ಅನುವಾದಕ
ಆಸ್ಥಾನವಿದ್ವಾನ್ ಎಚ್. ಗಂಗಾಧರಶಾಸ್ತ್ರೀ
ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲು ಅಧ್ಯಾಪಕ
ಮೈಸೂರು

ಮೈಸೂರು
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
1948

|| ಶ್ರೀಃ ||

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂ. ೩೨)

ಶ್ರೀಶಿವರಹಸ್ಯ

ಸಂಪುಟ ೧೧

ಅನುವಾದಕ

ಆಸ್ಥಾನವಿದ್ವಾನ್ ಎಚ್. ಗಂಗಾಧರಶಾಸ್ತ್ರೀ

ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲು ಅಧ್ಯಾಪಕ

ಮೈಸೂರು

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1948

Printed by D. Rajarathnam

Sree Panchacharya Electric Press

Sayaji Rao Road, Mysore.

For The Palace Mysore.

ಮುನ್ನುಡಿ

"ಸ್ವಕರ್ಮಸೂತ್ರಗ್ರಥಿತೋ ಹಿ ಲೋಕಃ" ಎಂಬ ಅಧ್ಯಾತ್ಮ ರಾಮಾಯಣದ ವಚನದಂತೆ ಸಕಲ ಜೀವಿಗಳೂ ತಮ್ಮ ಕರ್ಮಾಯತ್ತವಾದ ಸುಖದುಃಖಗಳನ್ನು ಅನುಭವಿಸುತ್ತಾ ತಮ್ಮ ಜೀವಮಾನವನ್ನು ಕಳೆಯುವುವು ಎಂಬುದು ನಿಜ. ಇದರಿಂದ ಯಾವ ಪ್ರಾಣಿಗೂ, ಆಗಾಗ ಬರುವ ಕಷ್ಟಸುಖಾದಿಗಳನ್ನು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲವೆಂದು ತಿಳಿದುಬರುವುದು. ಆದರೆ ಆ ಮಾತು ಕೇವಲ ಕರ್ಮವಾದಿಗಳಿಗೆ ಮಾತ್ರ. ಕರ್ಮಫಲವನ್ನು ದೂರಮಾಡಿ, ಸದಾನಂದ ಲಹರಿಯಲ್ಲಿ ತೇಲಾಡುವಂತೆ ಮಾಡಿಕೊಳ್ಳುವ ಶಕ್ತಿ ಜ್ಞಾನಿಗಿರುವುದು. ಆದರೆ ಆ ಜ್ಞಾನಪ್ರಾಪ್ತಿಯೂ ಒಂದು ಕರ್ಮಫಲವೇ ಎಂದು ಹೇಳುವುದಾದರೆ ಆಗ ಚರ್ಚೆಯೇ ಇರುವುದಿಲ್ಲ. ಸತ್ಕರ್ಮದಿಂದ ಸುಜ್ಞಾನವೊದಗುವುದು ಅನುಭವಸಿದ್ಧ ವಾದುದೇ ಸರಿ. ಕರ್ಮದಿಂದ ಲಭಿಸಿದ ಯಾವ ಫಲವೂ ಪರಂಪರೆಯಾಗಿ ಒದಗುವ ದುಃಖವನ್ನು ನಿವಾರಿಸಲಾರದು. ಹಾಗೆ ನಿವಾರಿಸುವುದಾದರೆ ಜ್ಞಾನವೊಂದು ಸಮರ್ಥವಾದೀತು. ಇದನ್ನು ವಿಮರ್ಶೆಮಾಡಿದರೆ, ನಾವು ಯಾವ ಕರ್ಮ ಮಾಡಿದರೂ, ಯಾವ ದೇವತೆಯನ್ನು ಆರಾಧಿಸಿದರೂ, ಇತರ ಐಹಿಕಸುಖಗಳನ್ನು ಬೇಡುವುದಕ್ಕಿಂತ, ಜ್ಞಾನ (ತಿಳಿವಳಿಕೆ) ವನ್ನು ಯಾಚಿಸುವುದೇ ಅತ್ಯಂತ ಶ್ರೇಷ್ಠವಾದುದು ಎಂದು ಗೊತ್ತಾಗುವುದು. ಆದ್ದರಿಂದಲೇ ನಮ್ಮಲ್ಲಿ ಪೂಜ್ಯರಾದವರು "ನ ಹಿ ಜ್ಞಾನೇನ ಸದೃಶಂ" "ಜ್ಞಾನವಿಹೀನಸ್ಸರ್ವಮತೇನ ಮುಕ್ತಿಂ ನ ಭಜತಿ ಜನ್ಮಶತೇನ" ಎಂಬ ಜ್ಞಾನಪ್ರಧಾನವಾದ ಮಾತುಗಳನ್ನು ಉದಾಹರಿಸಿರುವರು.

ಈ ಗ್ರಂಥದಲ್ಲಿ ಶಿವಪೂಜಾ, ಶಿವಸ್ತುತಿರೂಪವಾದ ಕರ್ಮಗಳು ಜ್ಞಾನಪ್ರದಗಳೆಂದು ವಿಶೇಷ ರೀತಿಯಲ್ಲಿ ಉಕ್ತವಾಗಿವೆ. ಕರ್ಮವು ಸಾಂಗವಾಗಿ ನಡೆದರೆ ಆಗ ಅಪೂರ್ವವು (ಪುಣ್ಯ) ಪ್ರಾಪ್ತಿಯಾಗಿ ತದ್ದ್ವಾರಾ ಜ್ಞಾನ, ಆನಂದಾದಿಗಳು ಲಭಿಸುವುವು. ಹಾಗೆಯೇ ಶಿವಪೂಜಾರೂಪವಾದ ಸತ್ಕರ್ಮವು ವಿಧಿವತ್ತಾಗಿ ನಡೆದರೆ ಸೋಹಂಭಾವವುಂಟಾಗಿ ಶಿವಸಾಯುಜ್ಯರೂಪವಾದ ಮತ್ತು ದುಃಖರಹಿತವಾದ ಫಲವು ದೊರೆಯುವುದೆಂಬುದೇ ಈ ಗ್ರಂಥದ ಮುಖ್ಯ ಸಿದ್ಧಾಂತ. ವೈದಿಕಕರ್ಮಗಳಾವುವೂ ಸುಲಭಸಾಧ್ಯಗಳಲ್ಲ. ಅನೇಕ ಕಾರಣಗಳಿಂದ ಚಂಚಲಮನಸ್ಕರಾಗುವ

ಕಲಿಯುಗದ ಜನರಿಗೆ ವೈದಿಕಕರ್ಮಗಳು ಫಲಕೊಡಲಾರವು. ಅವುಗಳಿಂದ ಸತ್ಫಲವು ದೊರೆಯುವುದಾದರೂ, ಸ್ಥಿರಮನಸ್ಸಿಲ್ಲದವರಿಗೆ ಅವು ಈಶ್ವರತ್ವವನ್ನು ದೊರಕಿಸಲಾರವು. ಅಲ್ಪಾಯಾಸದಿಂದ ವಿಶೇಷ ಫಲ, ಅದರಲ್ಲೂ ದೇವತಾ ಭಾವವನ್ನೇ ಒದಗಿಸುವ ಪೂಜ್ಯಕರ್ಮವೆಂದರೆ ಶಿವಲಿಂಗಾರಾಧನೆಯೊಂದೇ, ಎಂಬ ತತ್ತ್ವವನ್ನು ಪ್ರತಿಪಾದಿಸುವುದೇ ಈ ಗ್ರಂಥಕರ್ತರ ಮುಖ್ಯೋದ್ದೇಶ. ಇದನ್ನನು ಸರಿಸಿ, ಅನೇಕರ ಇತಿಹಾಸಗಳು, ಶಿವಸ್ತುತಿ, ಶಿವಾರಾಧನೆಯಫಲ, ಶಿವಮಹಿಮೆ ಇವು ವಿಧವಿಧವಾಗಿ ಈ ಅಂಶದಲ್ಲಿ ವರ್ಣಿತವಾಗಿವೆ.

ಕಥಾಭಾಗದಲ್ಲಿ ಅನೇಕ ಮಹಾತ್ಮರ ವಿಷಯಗಳು ಇಲ್ಲಿ ಇತರ ಗ್ರಂಥಗಳಿಗಿಂತ ಸ್ವಲ್ಪ ಭಿನ್ನವಾದ ರೀತಿಯಲ್ಲಿಯೇ ನಿರೂಪಿಸಲ್ಪಟ್ಟವೆ. ಹೇಗೆ ಕಥೆಯು ತಿರುಗಿ ಬಂದರೂ ಈಶ್ವರಪ್ರಾಶಸ್ತ್ಯದಲ್ಲಿ ಅಥವಾ ಈಶ್ವರಭಕ್ತರ ಪ್ರಾಧಾನ್ಯದಲ್ಲಿ ಬಂದು ನಿಲ್ಲುತ್ತದೆ. 'ಲೋಕಕ್ಕೆ ದೇವರು ಒಬ್ಬನೇ, ಅವನೇ ಈಶ್ವರನು' ಎಂಬುದೇ ಈ ಇತಿಹಾಸಗಳಲ್ಲಿ ಕಂಡುಬರುವ ನೀತಿಯುತವಾದ ಜ್ಞಾನ. ಹೀಗೆ ಸರ್ವಾಂಶ ದಲ್ಲಿಯೂ ಒಂದೇ ದೇವತೆಗೆ ಪ್ರಾಶಸ್ತ್ಯಕೊಟ್ಟು ವಿಸ್ತಾರವಾಗಿ ಉಪಪಾದಿತವಾಗಿರುವ ಗ್ರಂಥವೆಂದರೆ ಈ ಶಿವರಹಸ್ಯವೊಂದೇ.

ಸಕಲ ಪ್ರಜಾವರ್ಗಕ್ಕೂ ಉಪಯೋಗಕರವಾಗುವಂತೆ ಇಂತಹ ಗ್ರಂಥರಾಶಿ ಯನ್ನು ಕನ್ನಡಕ್ಕೆ ಪರಿವರ್ತಿಸಲು ಸಕಲ ಸಹಾಯಗಳನ್ನು ಒದಗಿಸಿಕೊಟ್ಟ ನಮ್ಮ ನ್ನಾಳುವ ಶ್ರೀಮನ್ಮಹಾರಾಜರವರು **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.,** ಮಹಾಪ್ರಭುಗಳವರಿಗೂ, ಅವರ ಕುಟುಂಬವರ್ಗಕ್ಕೂ ಸರ್ವೇಶ್ವರನು ಸಮಸ್ತ ಸನ್ಮಂಗಳಗಳನ್ನೂ ಕರುಣಿಸಿ ಚಿರಾಯುಷ್ಮಂತರನ್ನಾಗಿ ಮಾಡಿ ಸಲಹಲಿ ಎಂದು ಭಗವಂತನನ್ನು ಸದಾ ಪ್ರಾರ್ಥಿಸುತ್ತೇನೆ.

ಶ್ರೀ ಸರ್ವಧಾರಿ ಸಂವತ್ಸರದ
ಆಷಾಢ ಕೃಷ್ಣ ದ್ವಿತೀಯಾ
ಶುಕ್ರವಾರ
23—7—1948.

ಸಜ್ಜನವಿಧೇಯ,
ಹೊನ್ನೇನಹಳ್ಳಿ ಗಂಗಾಧರಶಾಸ್ತ್ರೀ,
ಆಸ್ಥಾನವಿದ್ವಾನ್, ಮೈಸೂರು.

ಶ್ರೀ ಶಿವರಹಸ್ಯದಲ್ಲಿ ಶಿವನಾಮಕ ಚತುರ್ಥಾಂಶದ ವಿಷಯಾನುಕ್ರಮಣಿಕಾ

ನಾಗುವುದು, ಆಗಲೇ ಸುಯಶಾದೇವಿಯೆಂಬ ಪಿತೃದೇವತೆಗಳ ಮಾನಸಪುತ್ರಿಯನ್ನು ನಂದಿಕೇಶನಿಗೆ ವಿವಾಹಮಾಡಿಸುವುದು, ಅನಂತರ ಈಶ್ವರನು ಕೈಲಾಸಕ್ಕೆ ಪ್ರಯಾಣ ಮಾಡುವುದು. ...... ಪುಟ ೪೯–೫೬

ಏಳನೆಯ ಅಧ್ಯಾಯ

ಚಂಡಿಕೇಶ್ವರನ ಕಥೆ, ಕಣಭದ್ರನೆಂಬುವನು ಮಾಲ್ಯವತ್ಪರ್ವತದ ಶಿಖರದಲ್ಲಿ ಪತ್ನಿಯೊಡನೆ ತಪಸ್ಸುಮಾಡುವುದು, ಅಲ್ಲಿಗೆ ವೈದರ್ಭನೆಂಬ ರಾಜನು ಬರುವುದು. ಆತನು ಅಶ್ವಮೇಧಯಾಗಮಾಡಿ, ಅನೇಕ ಗೋವುಗಳನ್ನೂ, ದಕ್ಷಿಣೆಯನ್ನೂ ಕಣಭದ್ರನಿಗೆ ಕೊಡುವುದು, ಅವನ ಮಗನಾದ ಚಂಡೀಶ್ವರನು ಪ್ರತಿನಿತ್ಯವು ಅರಣ್ಯದಲ್ಲಿರುವ ಶಿವಲಿಂಗಗಳಿಗೆ ಆ ಗೋಕ್ಷೀರದಿಂದ ಅಭಿಷೇಕಮಾಡುತ್ತಾ ಲಿಂಗಪೂಜೆ ಮಾಡುವುದು, ಮನೆಗೆ ಬಂದ ಹಸುವು ಹಾಲುಕೊಡದಿರುವುದನ್ನು ನೋಡಿ, ತಂದೆಯು ಮಗನನ್ನು ನಿಂದಿಸುವುದು, ಮಗನು ನನಗೇನೂ ತಿಳಿಯದೆಂದೂ, ಕರುವು ದೊಡ್ಡದಾದಮೇಲೆ ಹಸುವು ಹಾಲುಕೊಡಲಾರದೆಂದೂ ವಾದಿಸುವುದು, ಆದರೆ ಮಗನು ಅರಣ್ಯದಲ್ಲಿ ಮಾಡುವ ಶಿವಪೂಜಾವಿಧಿಯನ್ನು ಅವನ ಸ್ನೇಹಿತರ ಮೂಲಕ ಕೇಳಿ, ತಂದೆಯೇ ಅರಣ್ಯದ ಮಧ್ಯೆ ಇರುವ ಒಂದು ಮರದ ಕೊಂಬೆಯ ಮೇಲೆ ಅವಿತುಕೊಂಡು ಮಗನು ಮಾಡಿದ ಶಿವಾರಾಧನೆಯನ್ನೆಲ್ಲಾ ನೋಡುವುದು, ಕೋಪದಿಂದ ತಂದೆಯು ಮಗನು ಮಾಡುತ್ತಿರುವ ಪೂಜಾಸ್ಥಾನಕ್ಕೆ ಹೋಗಿ ತನ್ನ ಕಾಲುಗಳಿಂದ ಎಲ್ಲವನ್ನೂ ತುಳಿದು ನಾಶಪಡಿಸುವುದು, ಆಗ ಮಗನಾದ ಚಂಡೀಶನು ಕೋಪದಿಂದ ತನ್ನ ತಂದೆಯ ಕಾಲುಗಳನ್ನು ಕಡಿದು, ಈಶ್ವರನನ್ನು ಮರೆಹೊಗುವುದು, ಹಾಗೆಯೇ ಈಶ್ವರನನ್ನು ಬಹುವಾಗಿ ಸ್ತುತಿಸುವುದು. ಪುಟ ೫೭–೬೭

ಎಂಟನೆಯ ಅಧ್ಯಾಯ

ಚಂಡೀಶಸ್ತುತಿ, ಚಂಡೀಶ್ವರನಿಗೆ ವರಪ್ರದಾನಮಾಡುವಿಕೆ, ಆದರಿಂದ ಚಂಡೀಶ್ವರನು ಗಣಾಧಿಪತಿಯಾಗುವುದು, ಅವನ ತಂದೆಯನ್ನೂ ಕಾಪಾಡುವುದು, ಮಾತಾಪಿತೃಗಳಿಗೂ ವರವನ್ನು ಕೊಡುವುದು, ಶಿವಾಲಯದಲ್ಲಿ ಚಂಡೀಶದರ್ಶನದಿಂದ ಶಿವದರ್ಶನದ ಫಲವು ಲಭಿಸುವುದು, ಸರ್ವದೇವಾದಿಗಳಿಂದಲೂ ಚಂಡೀಶ್ವರನಿಗೆ ಪೂಜ್ಯತೆಯು ದೊರಕುವುದು. .... ಪುಟ ೬೮–೭೯

ಒಂಬತ್ತನೆಯ ಅಧ್ಯಾಯ

ಹತ್ತನೆಯ ಅಧ್ಯಾಯ

ಹನ್ನೊಂದನೆಯ ಅಧ್ಯಾಯ

ಹನ್ನೆರಡನೆಯ ಅಧ್ಯಾಯ

ಹದಿಮೂರನೆಯ ಅಧ್ಯಾಯ

ಹದಿನಾಲ್ಕನೆಯ ಅಧ್ಯಾಯ

ಹತ್ತೊಂಬತ್ತನೆಯ ಅಧ್ಯಾಯ

ಇಪ್ಪತ್ತನೆಯ ಅಧ್ಯಾಯ

ಇಪ್ಪತ್ತೊಂದನೆಯ ಅಧ್ಯಾಯ

ಇಪ್ಪತ್ತೆರಡನೆಯ ಅಧ್ಯಾಯ

ಇಪ್ಪತ್ತುಮೂರನೆಯ ಅಧ್ಯಾಯ

ಇಪ್ಪತ್ತುನಾಲ್ಕನೆಯ ಅಧ್ಯಾಯ

ಮೂವತ್ತೊಂದನೆಯ ಅಧ್ಯಾಯ

ಮೂವತ್ತೆರಡನೆಯ ಅಧ್ಯಾಯ

ಮೂವತ್ತುಮೂರನೆಯ ಅಧ್ಯಾಯ

ಮೂವತ್ತುನಾಲ್ಕನೆಯ ಅಧ್ಯಾಯ

ಮೂವತ್ತೈದನೆಯ ಅಧ್ಯಾಯ

ಮನುಗಳು, ಮುನಿಗಳು ಮುಂತಾದವರೆಲ್ಲಾ ಶಿವನನ್ನು ಆರಾಧಿಸಿ ತಮ್ಮ ತಮ್ಮ ಇಷ್ಟಾರ್ಥಗಳನ್ನು ಪಡೆಯುವುದು. .... ಪುಟ ೩೫೬–೩೬೭

ನಾಲ್ಕನೆಯ ಅಂಶದ ಅನುಕ್ರಮಣಿಕೆಯು
ಸಮಾಪ್ತವಾದುದು

॥ ಶ್ರೀಃ ॥

॥ ಶ್ರೀಗಣೇಶಶಾರದಾಗುರುಭ್ಯೋ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಪ್ರಥಮೋಽಧ್ಯಾಯಃ

ಶರ್ವಾಣೀವದನಾರವಿಂಪವಿಕಸತ್ಸೂರ್ಯಪ್ರಭಂ ಸಿಂಧುರಂ
ಸಿಂದೂರಾರುಣವಕ್ತ್ರಪದ್ಮಮಮಲಂ ವಿಘ್ನಾದ್ರಿವಜ್ರಪ್ರಭಂ ।
ಮುಕ್ತಾಗುಂಭಿತಕರ್ಣತಾಲಮಮರೇಂದ್ರಾದ್ಯೈಶ್ಚ ವಂದ್ಯಂ ಭಜೇ
ಭಕ್ತಾನಾಮಭವಾಯ ಭೂತಿವಿಲಸದ್ಗಾತ್ರೈಕಮೋದಪ್ರಿಯಂ ॥೧॥

ಮಾದ್ಯನ್ಮೋದಕದಂತಪಾಶಸೃಣಿಭಿಃ ಸಂಶೋಭಿಬಾಹುಂ ವಿಭುಂ

॥ ಓಂ ಜೈಗೀಷವ್ಯ ಉವಾಚ ॥

ಪಂಚಾಸ್ಯಸಿತಪಾಥೋಜವಿಕಾಸನದಿವಾಕರ ।
ಶ್ರುತಂ ತೇ ತಾರಕಾರಾತೇ ಕಥಾಖ್ಯಾನಮನುತ್ತಮಂ ॥೨॥

ಶ್ರೀ ಶಿವರಹಸ್ಯದ ಚತುರ್ಥಾಂಶದಲ್ಲಿ ಮೊದಲನೆಯ ಅಧ್ಯಾಯ

ಪಾರ್ವತೀದೇವಿಯ ಮುಖಕಮಲವನ್ನರಳಿಸುವ ದಿವಾಕರನೂ, ಕುಂಕುಮದಂತೆ ಕೆಂಪಾದ ಮುಖವುಳ್ಳವನೂ, ವಿಘ್ನಗಳೆಂಬ ಬೆಟ್ಟಗಳಿಗೆ ವಜ್ರಾಯುಧದಂತಿರುವವನೂ, ಅಗಲವಾದ ಕಿವಿಗಳಲ್ಲಿ ಮುತ್ತಿನ ಕುಂಡಲಗಳನ್ನು ಧರಿಸಿದವನೂ, ದೇವೇಂದ್ರಾದಿಗಳಿಂದ ವಂದಿಸಲ್ಪಡುವವನೂ, ಭಕ್ತರಿಗೆ ಮುಕ್ತಿಯನ್ನು ನೀಡುವವನೂ, ಮೈಯಲ್ಲಿ ಪವಿತ್ರವಾದ ಭಸ್ಮವನ್ನು ಲೇಪಿಸಿಕೊಂಡಿರುವವನೂ, ಕೈಗಳಲ್ಲಿ ಮೋದಕ, ದಂತ, ಪಾಶ, ಅಂಕುಶಗಳನ್ನು ಹಿಡಿದಿರುವವನೂ ಆದ ಗಣೇಶನನ್ನು ಶಿವರಹಸ್ಯದಾದಿಯಲ್ಲಿ ಭಜಿಸುವೆನು, ಎಂದು ಗ್ರಂಥಕಾರರು ಗ್ರಂಥಾರಂಭದಲ್ಲಿ ವಿಘ್ನೇಶ್ವರನನ್ನು ಸ್ತುತಿಸಿ, ಚತುರ್ಥಾಂಶವನ್ನು ಆರಂಭಿಸುವರು. ॥೧॥

ಜೈಗೀಷವ್ಯಮುನಿಯು ಕುಮಾರಸ್ವಾಮಿಯನ್ನು ಕುರಿತು ಮತ್ತೆ ಹೀಗೆ. ಕೇಳಿದನು. ಪರಮೇಶ್ವರನ ಮುಖಕಮಲವನ್ನರಳಿಸುವ ದಿನಮಣಿಯಾದ ಮತ್ತು

ಶಿವಢುಂಢಿಚರಿತ್ರಂ ಚ ಶೈವವರ್ಯಸ್ಯ ಚಾದ್ಭುತಂ ।
ಗಣಾನಾಂ ಚ ಗಣೇಶತ್ವೇ ಕೋ ಹೇತುರ್ವದ ಸಾಂಪ್ರತಂ ॥೩॥

ನಂದಿಕೇಶಾದಯಃ ಸ್ಕಂದವಿಷ್ಣುಬ್ರಹ್ಮಾದಯಸ್ಸುರಾಃ ।
ಮುನಯಶ್ಚ ದಧೀಚಾದ್ಯಾ ಮಾರ್ಕಂಡೇಯಾದಿಗೌತಮಾಃ ॥೪॥

ಘಟೋದ್ಭವೋಪಮನ್ಯುಶ್ಚ ಭೃಗುರ್ದೂರ್ವಾಸಕಃ ಸದಾ ।
ಸಂಮ್ಯಕ್ಪ್ರಸಾದ್ಯ ಸಂಪ್ರಾಪುಃ ಸ್ವಾಭೀಷ್ಟಂ ತತ್ಕಥಂ ವದ ॥೫॥

ಮಹೇಶ್ವರಾದ್ದೇವದೇವಾಚ್ಛಂಕರಾಲ್ಲೋಕಶಂಕರಾತ್ ।
ತ್ವಂ ವೈ ಕಾರುಣಿಕಶ್ರೇಷ್ಠೋ ಗುರುರ್ಮಮ ಶಿವಾತ್ಮಜಃ ॥೬॥

ಅನ್ಯೇತು ಗುರವೋ ಲೋಕೇ ಗುಣತ್ರಯಪರಾಯಣಾಃ ।
ತ್ವಂ ನಿರ್ಗುಣೋಽಸಿ ಭಗವಾನ್ ಷಾಡ್ಗುಣ್ಯಪರಿಪೂಜಿತಃ ॥೭॥

ತಾರಕವೈರಿಯಾದ ಷಣ್ಮುಖನೇ, ನಿನ್ನಿಂದ ನಾನು ಶಿವಭಕ್ತಾಗ್ರೇಸರನಾದ ಢುಂಢಿ ರಾಜನ ಚರಿತ್ರೆಯನ್ನು ಪೂರ್ಣವಾಗಿ ಕೇಳಿದೆನು. ಅವನು ಶಿವಗಣಗಳಿಗೆಲ್ಲಾ ನಾಯಕನಾಗಲು ಅವನಲ್ಲಿ ಅಂತಹ ಮಹತ್ವವೇನಿದ್ದಿತು ? ಅದನ್ನು ಈಗ ಹೇಳು. ||೨-೩||

ನಂದಿಕೇಶ್ವರ, ಸ್ಕಂದ, ವಿಷ್ಣು, ಬ್ರಹ್ಮ ಮೊದಲಾದವರೂ, ದಧೀಚಿ ಮಾರ್ಕಂಡೇಯ, ಗೌತಮ ಮೊದಲಾದ ಮುನಿಗಳೂ, ಅಗಸ್ತ್ಯಮುನಿ, ಉಪಮನ್ಯು ಭೃಗುಮುನಿ, ದೂರ್ವಾಸಮುನಿ, ಇವರೆಲ್ಲರೂ ಶಿವನನ್ನು ಭಕ್ತಿಯಿಂದ ಹೇಗೆ ಆರಾಧಿಸಿ ಕೃತಕೃತ್ಯರಾದರು ? ಇದನ್ನೂ ಹೇಳು. ದೇವದೇವನಾದ ಮತ್ತು ಲೋಕ ಗಳಿಗೆ ಸುಖವನ್ನುಂಟುಮಾಡುವ ಶಂಕರನಿಂದ ಅವರೆಲ್ಲರೂ ಹೇಗೆ ತಮ್ಮ ಇಷ್ಟಾರ್ಥ ಗಳನ್ನು ಪಡೆದರು ; ಇದನ್ನು ತಿಳಿಸು. ||೪-೫||

ಶಂಕರನ ಪುತ್ರನಾದ ನೀನೇ ನನ್ನ ಗುರುವು ; ದಯಾಮಯನು, ಮಿಕ್ಕ ಗುರುಗಳು ಸತ್ವ ರಜಸ್ಸು ತಮಸ್ಸು ಎಂಬ ಗುಣಗಳಿಗೆ ಅಧೀನರಾಗಿರುವರು, ನೀನು ನಿರ್ಗುಣನು, ಅಂದರೆ ಆ ಗುಣಗಳಿಗೆ ಅಧೀನನಲ್ಲ. ಸಕಲೈಶ್ವರ್ಯಸಂಪನ್ನನು ನೀನು. ||೬-೭||

ತ್ವತ್ತೋಽದ್ಯ ಶ್ರೋತುಮಿಚ್ಛಾಮಿ ಗಣಾನಾಂ ಚರಿತಂ ಶುಭಂ ।
ಶಿವಭಕ್ತಾನುಚರಿತಂ ಸುರಾಣಾಂ ಭಕ್ತಿಕಾರಣಂ ॥೮॥

ದೇವದೇವೇ ವಿರೂಪಾಕ್ಷೇ ಶಂಕರೇ ಸರ್ವಕಾಮದೇ ।
ಮಹಾದೇವೇ ಪರಾನಂದೇ ಭಕ್ತಿಕಾರಣಮುತ್ತಮಂ ॥೯॥

ಯಸ್ಯ ಜ್ಞಾನೇನ ಭಕ್ತ್ಯಾ ಚ ಸರ್ವಂ ವಿಜ್ಞಾತಮೇವ ಹಿ ।
ಯಮಾತ್ಮಾನಂ ಮಹಾದೇವಂ ಜ್ಞಾತ್ವಾ ಶಿವಮಯೋ ಭವೇತ್ ॥೧೦॥

ಯಸ್ಯ ಧ್ಯಾನೇನ ಮುನಯೋ ನಿವೃತ್ತಾ ಮುಕ್ತಿಮಾಸ್ಥಿತಾಃ ।
ಸಗುಣೋ ನಿರ್ಗುಣೋಽಪ್ಯಾತ್ಮಾ ಶಿವ ಏವ ಸನಾತನಃ ॥೧೧॥

ಶ್ರೋತವ್ಯೋಽಪಿ ಚ ಮಂತವ್ಯೋ ನಾಮರೂಪಕಥಾರಸೈಃ ।
ಶಿವಾನಂದಾಬ್ಧಿಕಲ್ಲೋಲಮಹಾನಂದೈಕಚಂದ್ರಮಾಃ ॥೧೨॥

ಇಂತಹ ನಿನ್ನಿಂದ ಶಿವಗಣಗಳ ಶುಭಚರಿತವನ್ನು ಕೇಳಲಿಚ್ಛಿಸುವೆನು. ಅಂತಹ ಶಿವಭಕ್ತರ ಚರಿತವು ದೇವತೆಗಳಿಗೂ ಭಕ್ತಿಯನ್ನುಂಟುಮಾಡುವುದು.॥೮॥

ದೇವದೇವನೂ, ಮುಕ್ಕಣ್ಣನೂ, ಸುಖಕರನೂ, ಇಷ್ಟಾರ್ಥಗಳನ್ನು ಕೊಡುವವನೂ, ಆನಂದಮಯನೂ ಆದ ಮಹಾದೇವನಲ್ಲಿ ಭಕ್ತಿಯನ್ನು ಆ ಕಥೆಗಳು ತಪ್ಪದೇ ಉಂಟುಮಾಡುವುವು. ॥೯॥

ಶಿವಭಕ್ತಿಯು ಮುಖ್ಯವಾದುದು, ಏಕೆಂದರೆ ಆ ದೇವನಲ್ಲಿ ಭಕ್ತಿಯಿಂದಲೂ ಅವನ ಜ್ಞಾನದಿಂದಲೂ ಎಲ್ಲವನ್ನೂ ತಿಳಿದಂತಾಗುವುದು. ಆ ಶಿವನೇ ಆತ್ಮನೆಂದು ತಿಳಿದು ಆರಾಧಿಸಿದರೆ ಭಕ್ತನು ಶಿವಸ್ವರೂಪನೇ ಆಗುವನು. ॥೧೦॥

ಆ ಶಿವನ ಧ್ಯಾನದಿಂದ ಮುನಿಗಳು ವಿರಕ್ತರಾಗಿ ಮುಕ್ತಿಯನ್ನು ಪಡೆಯುವರು. ಆ ಶಿವನೇ ಸಗುಣನಾದ ಈಶ್ವರನೂ ನಿರ್ಗುಣನಾದ ಬ್ರಹ್ಮನೂ ಆಗಿರುವನು. ಅನಾದಿ ಪುರುಷನವನು. ॥೧೧॥

ಆ ಶಿವನ ಹೆಸರು ರೂಪ ಕಥೆಗಳನ್ನು ಕೇಳಬೇಕು, ಧ್ಯಾನಿಸಬೇಕು, ಅನುಭವಿಸಬೇಕು. ಆ ದೇವನು ಭಕ್ತರ ಹೃದಯದಲ್ಲಿ ಮಂಗಳವಾದ ಬ್ರಹ್ಮಾನಂದವೆಂಬ ಕ್ಷೀರಸಾಗರವನ್ನು ಅನುಗ್ರಹ ಕಿರಣಗಳಿಂದ ಉಕ್ಕಿಸುವ ಚಂದ್ರನಾಗಿರುವನು. ಅಂದರೆ ಚಂದ್ರನು ಸಾಗರವನ್ನುಕ್ಕಿಸುವಂತೆ ಶಿವನು ಭಕ್ತರ ಹೃದಯದಲ್ಲಿ ಬ್ರಹ್ಮಾನಂದವನ್ನು ಹೆಚ್ಚಿಸುವನು. ॥೧೨॥

ತ್ವಮೇವ ದೇವಸೇನಾನಾಂ ಸೇನಾನೀಃ ಶ್ರುತಿಚೋದಿತಃ ।
ವದ ಮೇಽದ್ಯ ಕೃಪಾಸಾರತುಷಾರವರಶೀಕರೈಃ ॥೧೩॥

ಪ್ಲಾವಯಾಽಽಶು ಕಥಾಽಽಖ್ಯಾನೈಶ್ಶಂಭೋರ್ಭಕ್ತಿನಿವರ್ಧನೈಃ ।
ಭಕ್ತಿರೇವ ವಿರೂಪಾಕ್ಷೇ ಶ್ರೇಯಸ್ಕರತರೀ ನೃಣಾಂ ॥೧೪॥

ಮುಕ್ತ್ಯೈಯೇ ಭವತೀತ್ಯೇವ ನ ತಥಾ ವೇದನಂ ಶಿವೇ ।
ಅವ್ಯಕ್ತವೇದನಂ ನೄಣಾಂ ಭೌತಿಕಾನಾಂ ಸುದುರ್ಲಭಂ ॥೧೫॥

ಶಿವಪ್ರಸಾದಹೀನಾನಾಂ ವಾಸನಾ ವಿಷಯಾತ್ಮಿಕಾಃ ।
ಭವಂತಿ ನಿಯತಂ ಪುಣ್ಯೇ ಪಾಪೇ ವಾ ಪಾಪಿನಾಂ ಧ್ರುವಂ ॥೧೬॥

ಕಿಂಚಿತ್ಸತ್ವವತಾಂ ನೄಣಾಂ ಪುಣ್ಯೇಷು ರಮತೇ ಮನಃ ।
ಇಷ್ಟಾಪೂರ್ತಾದಿಧರ್ಮೇಷು ರಾಜಸಾನಾಂ ಭವೇನ್ಮತಿಃ ॥೧೭॥

ಓ ದೇವನೇ, ನೀನು ದೇವಸೇನಾಪತಿಯೆಂದು ವೇದವೇ ಸಾರುವುದು. ಇಂತಹ ನೀನು ಶಿವನಲ್ಲಿ ಭಕ್ತಿಯನ್ನುಂಟುಮಾಡುವಂತಹ ಕಥೆಗಳನ್ನು ದಯೆಯಿಟ್ಟು ಹೇಳಿ ನನ್ನ ಮನಸ್ಸನ್ನು ಸಮಾಧಾನಗೊಳಿಸು. ॥೧೩॥

ಪರಮೇಶ್ವರನ ಭಕ್ತಿಯೇ ಮಾನವರಿಗೆ ಅತ್ಯಂತ ಶ್ರೇಯಸ್ಸನ್ನುಂಟುಮಾಡುವುದು, ಮುಕ್ತಿಯನ್ನೂ ಸಂಪಾದಿಸಿ ಕೊಡುವುದು. ಶಿವನಲ್ಲಿ ಅಂತಹ ಉತ್ತಮ ಭಕ್ತಿಯು ಸಾಮಾನ್ಯ ಮಾನವರಿಗೆ ಉಂಟಾಗಲಾರದು. ಅದು ಶಿವನ ಅನುಗ್ರಹದಿಂದಲೇ ಲಭಿಸಬೇಕು. ॥೧೪-೧೫॥

ಶಿವನ ಅನುಗ್ರಹವಿಲ್ಲದವರಿಗೆ ಹೇಯವಾದ ಸಂಸಾರ ಸುಖಗಳಲ್ಲಿ ಆಸಕ್ತಿಯೂ ಸಂಸಾರದಲ್ಲಿ ಬಂಧಿಸುವ ಪುಣ್ಯಪಾಪಗಳಲ್ಲಿ ಆದರವೂ ಉಂಟಾಗುವುವು. ॥೧೬॥

ಸ್ವಲ್ಪವಾದರೂ ಸತ್ವಗುಣವುಳ್ಳವರಿಗೆ ಪುಣ್ಯದಲ್ಲಾಸಕ್ತಿಯು ಉದಯಿಸುವುದು. ದೇವಾಲಯವನ್ನು ಕಟ್ಟುವುದು, ಯಾಗ ಮೊದಲಾದ ಧರ್ಮಕಾರ್ಯಗಳನ್ನು ನಡೆಸುವುದು, ಬಾವಿ ಕೆರೆಗಳನ್ನು ತೋಡಿಸುವುದು, ಮುಂತಾದ ಧರ್ಮಕಾರ್ಯಗಳಲ್ಲಿ ಕೇವಲ ರಜೋಗುಣವುಳ್ಳವರಿಗೆ ಅಸಕ್ತಿಯುಂಟಾಗುವುದು. ॥೧೭॥

ಸಾತ್ವಿಕಾನಾಂ ಶಿವಾರ್ಚಾದೌ ಭಸ್ಮರುದ್ರಾಕ್ಷಧಾರಣೇ ।
ತ್ರಿಪುಂಡ್ರಧಾರಣೇ ಪುಣ್ಯೇ ತಥಾ ಶಿವಕಥಾರತಿಃ ॥೧೮॥

ಭವತ್ಯೇವ ಮತಿಃ ಪುಂಸಾಂ ಶಾಂಭವಾನಾಂ ಮಹಾತ್ಮನಾಂ ।
ತಾಮಸಾನಾಂ ಚ ಹಿಂಸಾದೌ ಪಾಪಧರ್ಮೇ ಮತಿರ್ಭವೇತ್ ॥೧೯॥

ಗುಣತ್ರಯಾತ್ಮಿಕಾಸ್ಸರ್ವೇ ಸದೇವಾಸುರಮಾನುಷಾಃ ।
ಪುಣ್ಯೈರ್ದೇವತ್ವಮಾಪ್ನೋತಿ ಪಾಪೈಸ್ತಿರ್ಯಕ್ತ್ವಮಶ್ನುತೇ ॥೨೦॥

ಗುಣತ್ರಯಾತ್ಮಿಕಾ ಭಕ್ತಿರ್ನಿರೂಪಾಕ್ಷೇ ಮಹೇಶ್ವರೇ ।
ಶಮಾದ್ಯಾತ್ಮಗುಣಾ ಯೇ ವೈ ಅಹಿಂಸಾ ಬ್ರಹ್ಮಚರ್ಯಕಂ ॥೨೧॥

ಪರಮೇಶ್ವರನ ಅರ್ಚನೆ, ಭಸ್ಮಧಾರಣೆ, ರುದ್ರಾಕ್ಷಿಧಾರಣೆ, ಶಿವಕಥೆ ಇವುಗಳಲ್ಲಿ ಸಾತ್ವಿಕ (ಸತ್ವಗುಣವುಳ್ಳವ) ರಿಗೆ ಮಾತ್ರ ಆಸಕ್ತಿಯುಂಟಾಗುವುದು. ||೧೮||

ಹೀಗೆ ಸತ್ವಗುಣವುಳ್ಳವರೇ ಮಹಾತ್ಮರಾದ ಶಿವಭಕ್ತರಾಗುವರು. ಕೇವಲ ತಮೋಗುಣವುಳ್ಳವರಿಗೆ ಹಿಂಸೆ-ಮೊದಲಾದ ಪಾಪಕಾರ್ಯಗಳಲ್ಲಿ ಆಸಕ್ತಿಯು ಹೆಚ್ಚಾಗಿರುವುದು. ||೧೯||

ದೇವ ರಾಕ್ಷಸ ಮನುಷ್ಯ-ಇವರೆಲ್ಲರೂ ಸತ್ವರಜಸ್ತಮೋಗುಣಗಳುಳ್ಳವರು. ಅಂದರೆ ಪ್ರತಿಯೊಬ್ಬರಲ್ಲಿಯೂ ಯಾವುದಾದರೂ ಒಂದು ಗುಣವಾದರೂ ಇರುವುದು. ಪುಣ್ಯಗಳಿಂದ ದೇವನಾಗುತ್ತಾನೆ, ಪಾಪದಿಂದ ಮೂಗಜಂತುವಾಗಿ ಜನಿಸುವನು. ಒಟ್ಟಿನಲ್ಲಿ ಈ ಮೂರು ಗುಣಗಳುಳ್ಳವರೂ ಮಹೇಶ್ವರನಲ್ಲಿ ಭಕ್ತಿಯುಳ್ಳವರಾಗಿರಬಹುದು. ಸಾಧುಗಳು ಸಾತ್ವಿಕವೃತ್ತಿಯಿಂದ ಶಿವನನ್ನಾರಾಧಿಸುವರು. ರಜೋಗುಣವುಳ್ಳವರು ಆಡಂಬರದ ಪೂಜೆಗಳಿಂದ ಶಿವನನ್ನಾರಾಧಿಸುವರು. ತಾಮಸರು ಬಲಿ ಮೊದಲಾದ ಹಿಂಸಾಕರ್ಮಗಳಿಂದ ಶಿವನನ್ನು ಆರಾಧಿಸುವರು, ಇವರಲ್ಲಿ ಸಾತ್ವಿಕರೇ ಉತ್ತಮರು. ||೨೦||

ನಿಜವಾದ ಶಿವಭಕ್ತರು ಹೀಗಿರಬೇಕು—ಶಮ, ದಮ, ತಿತಿಕ್ಷಾ, ಉಪರತಿ, ವಿರಕ್ತಿ, ಶ್ರದ್ಧೆ—ಈ ಗುಣಗಳು ಅವರಲ್ಲಿರಬೇಕು. ಅಹಿಂಸೆ ಬ್ರಹ್ಮಚರ್ಯಗಳು ಸದಾ ಅನುಷ್ಠಾನದಲ್ಲಿರಬೇಕು. ಸ್ನೇಹ ಭೂತದಯೆ ಸಮದರ್ಶಿತ್ವಗಳೂ ಕಾರ್ಯತಃ ತೋರಬೇಕು, ಎಲ್ಲೆಡೆಯಲ್ಲೂ ಶಿವನಿರುವನೆಂಬ ಜ್ಞಾನವು ಅನುಭವಸಿದ್ಧವಾಗಿರಬೇಕು.

ಮೈತ್ರೀ ಭೂತೇಷು ಕರುಣಾ ಸರ್ವತ್ರ ಶಿವದರ್ಶನಂ ।
ನಿರ್ಗುಣೋವಾಽಪಿ ಸಗುಣೋ ಭಕ್ತಿಜ್ಞಾನಸಮುಚ್ಚಯಃ ॥೨೨॥

ಜ್ಞಾನೇಽಪಿ ಯಾದೃಶಂ ಸಾಧ್ಯಂ ಸಾಧನಂ ವಾ ಸನಾತನಂ ।
ಭಕ್ತ್ಯಾಂ ತು ಸಾಧನಂ ಯಾದೃಕ್ ತಾದೃಗೇವ ಹಿ ವೇದನೇ ॥೨೩॥

ಸಗುಣೋ ಗುಣರೂಪೈಶ್ಚ ಶಿವೋ ಜ್ಞೇಯಸ್ಸುಖೇನ ಹಿ ।
ಉಮಾಸಹಾಯೋ ವಿಶ್ವೇಶೋ ಧ್ಯೇಯೋ ಜ್ಞೇಯಶ್ಚ ನಿತ್ಯಶಃ॥೨೪॥

ದಹರೇ ಪುಂಡರೀಕೇ ತು ಹಿರಣ್ಯಶ್ಮಶ್ರುರೀಶ್ವರಃ ।
ಹಿರಣ್ಯಬಾಹುರಾಶಾಸ್ಯೋ ಜ್ಞೇಯಃ ಸ್ವಾತ್ಮತಯೈವ ತು ॥೨೫॥

ಕ್ಷಣಮೇಕಂ ಶಿವಧ್ಯಾನಾತ್ಸಗುಣೇ ಕ್ರತುಲಕ್ಷಜಂ ।
ಫಲಮಾಪ್ನೋತಿ ಕಾಮಾತ್ಮಾ ನಿರ್ಗುಣೇ ಬ್ರಹ್ಮ ವೈ ಭವೇತ್ ॥೨೬॥

ಸಗುಣನಾದ ಶಿವನಲ್ಲಾಗಲೀ ನಿರ್ಗುಣನಾದ ಶಿವನಲ್ಲಾಗಲೀ ಭಕ್ತಿಜ್ಞಾನಗಳುಳ್ಳವನಾಗಿರಬೇಕು. ಅಂದರೆ ಸಗುಣನಾದ ಪರಮೇಶ್ವರನಲ್ಲಿ ಭಕ್ತಿಯೂ ನಿರ್ಗುಣನಾದ ಶಿವ(ಬ್ರಹ್ಮ)ನಲ್ಲಿ ಜ್ಞಾನವೂ ಇರಬೇಕು, ನಿರ್ಗುಣೋಪಾಸನೆಗೆ ಜ್ಞಾನವೇ ಸಾಧನವು. ॥೨೧-೨೨॥

ಜ್ಞಾನದಿಂದ ಯಾವ ವಸ್ತುವನ್ನು ಚಿಂತಿಸಬಹುದೋ, ಜ್ಞಾನಕ್ಕೆ ಯಾವುವು ಸಾಧನಗಳೋ ಅದೇ ವಸ್ತುವನ್ನು ಭಕ್ತಿಯಿಂದಲೂ ಧ್ಯಾನಿಸಬಹುದು. ॥೨೩॥

ಸಗುಣನಾದ ಪರಮೇಶ್ವರನನ್ನು ಅವನ ಗುಣರೂಪಗಳಿಂದ ಸುಲಭವಾಗಿ ತಿಳಿದು ಆರಾಧಿಸಬಹುದು. ಆದುದರಿಂದ ಪಾರ್ವತಿಯೊಡನಿರುವ ಪರಮೇಶ್ವರನನ್ನು ನಿತ್ಯವೂ ಚಿಂತಿಸಬೇಕು, ಭಾವಿಸಬೇಕು. ॥೨೪॥

ಹೃದಯಕಮಲದಲ್ಲಿ, ಹಿರಣ್ಮಯವಾದ ಕೂದಲುಳ್ಳವನೂ, ಹಿರಣ್ಮಯವಾದ ತೋಳುಗಳುಳ್ಳವನೂ ಆದ ಸುವರ್ಣಮಯನಾದ ಶಿವನನ್ನು ಅವನೇ ತಾನೆಂಬ ಭಾವನೆಯಿಂದ ಧ್ಯಾನಿಸಬೇಕು. ॥೨೫॥

ಫಲಾಪೇಕ್ಷೆಯುಳ್ಳವನು ಸಗುಣೇಶ್ವರನನ್ನು ಕ್ಷಣಮಾತ್ರ ಧ್ಯಾನಿಸಿದರೆ ಲಕ್ಷಯಾಗಗಳ ಫಲವನ್ನು ಪಡೆಯುವನು. ನಿಷ್ಕಾಮಿಯಾಗಿ ಆನಂದಸ್ವರೂಪವೂ

ಋತಂ ಸತ್ಯಂ ಪರಂ ಬ್ರಹ್ಮ ಧ್ಯಾನಾದ್ಬ್ರಹ್ಮೈವ ಸೋ ಭವೇತ್ ।
ಕಾಮಾನ್ಯಃ ಕಾಮಯೇತ್ಯೈವ ಪುಣ್ಯಪಾಪೇಷು ವೈ ನರಃ ॥೨೭॥

ಸ್ವರ್ಗಂ ವಾ ನರಕಂ ಯಾತಿ ವಾಸನಾವಾಸಿತೋ ನರಃ ।
ಪರ್ಯಾಪ್ತಕಾಮೋ ಭಕ್ತ್ಯೈವ ಜ್ಞಾನೇನೈವಾಶ್ನುತೇ ಪರಂ ॥೨೮॥

ಶ್ರೋತವ್ಯೋ ಭಗವಾನ್ ಶಂಭುಃ ಕಥಾಭಿರ್ಗುಣಕೀರ್ತನೈಃ ।
ಮಂತವ್ಯೋ ರೂಪಮನನೈರ್ಯಥಾಯೋಗ್ಯಂ ತು ನಿರ್ಗುಣಃ ॥೨೯॥

ಸ ಬ್ರಹ್ಮಾ ಸ ಶಿವಸ್ಸೇಂದ್ರಸ್ಸೋಽಕ್ಷರಃ ಪರಮೇಶ್ವರಃ ।
ಸ ಏವ ವಿಷ್ಣುಸ್ಸಪ್ರಾಣಸ್ಸಕಾಲೋಽಗ್ನಿಸ್ಸಚಂದ್ರಮಾಃ ॥೩೦॥

ಸ ಏವ ಸರ್ವಂ ಯದ್ಭೂತಂ ಯಚ್ಚ ಭವ್ಯಂ ಮಹೇಶ್ವರಃ ।
ಜ್ಞಾತ್ವಾ ತಂ ಮೃತ್ಯುಮತ್ಯೇತಿ ಭಕ್ತಿಜ್ಞಾನೇನ ವೈ ಮುನಿಃ ॥೩೧॥

ಸತ್ಯವೂ ಜ್ಞಾನಸ್ವರೂಪವೂ ಆದ ಬ್ರಹ್ಮವಸ್ತುವನ್ನು ಧ್ಯಾನಿಸಿದರೆ ಅಂತಹವನು ಬ್ರಹ್ಮನೇ ಆಗುವನು, ಅಂದರೆ ಮುಕ್ತನಾಗುವನು. ॥೨೬॥

ಪುಣ್ಯಕರ್ಮದಿಂದಲಾಗಲೀ ಪಾಪಕರ್ಮದಿಂದಲಾಗಲೀ ಫಲವನ್ನಪೇಕ್ಷಿಸಿ ನಡೆಯತಕ್ಕವನು ಕ್ರಮವಾಗಿ ಸ್ವರ್ಗವನ್ನಾಗಲೀ ನರಕವನ್ನಾಗಲೀ ಪಡೆಯುವನು. ಅಂದರೆ ಫಲಾಪೇಕ್ಷೆಯಿಂದ ಕರ್ಮಮಾಡಿದರೆ ತಕ್ಕ ಫಲವನ್ನನುಭವಿಸಲೇ ಬೇಕು. ಆದಕ್ಕಾಗಿ ಪುನಃ ಜನ್ಮಗಳನ್ನೆತ್ತಿ ಕಷ್ಟಪಡಲೇ ಬೇಕಾಗುವುದು. ಆದರೆ ನಿಷ್ಕಾಮಿಯಾಗಿ ಫಲಾಪೇಕ್ಷೆಯಿಲ್ಲದೇ ಭಕ್ತಿಯಿಂದ ಪರಮೇಶ್ವರನನ್ನು ಆರಾಧಿಸಿದರೆ ಮುಂದೆ ಪರಮಾರ್ಥಜ್ಞಾನವು ಉದಯಿಸಿ ಅವನು ಪರ (ಬ್ರಹ್ಮ) ವಸ್ತುವಿನಲ್ಲೇ ಐಕ್ಯವಾಗುವನು, ಅವನಿಗೆ ಪುನಃ ಜನ್ಮವಿಲ್ಲ. ॥೨೭-೨೮॥

ಆದುದರಿಂದ ಆ ಬ್ರಹ್ಮಸ್ವರೂಪನಾದ ಶಿವನ ಕಥೆಗಳನ್ನೂ ಗುಣಗಳನ್ನೂ ಕೇಳಬೇಕು, ಸ್ವರೂಪವನ್ನರಿಯಬೇಕು, ಆ ಮೇಲೆ ಅವನ ನಿರ್ಗುಣರೂಪವನ್ನು ಯಥಾಶಕ್ತಿ ತಿಳಿದುಕೊಂಡು ಮನನಮಾಡಬೇಕು. ॥೨೯॥

ಆ ಪರಮೇಶ್ವರನೇ ಬ್ರಹ್ಮನು, ಅವನೇ ರುದ್ರನು, ಅವನೇ ಇಂದ್ರನು, ಅವನೇ ಓಂಕಾರವು, ಅವನೇ ವಿಷ್ಣುವು, ಅವನೇ ವಾಯುವು, ಅವನೇ ಕಾಲನು, ಅವನೇ ಅಗ್ನಿಯು, ಅವನೇ ಚಂದ್ರನು, ಮತ್ತೂ ಹಿಂದಾದುದೂ ಈಗಿರುವುದೂ

ಇತ್ಯುಕ್ತಂ ಮುನಿವಚನಂ ನಿಶಮ್ಯ ಹರ್ಷಾತ್
ಭವಭಕ್ತಂ ಮುನಿಮಾಹ ಶಂಭುಸೂನುಃ ।
ಆಲೋಕ್ಯಾಖಿಲವಕ್ರಲೋಚನೈರ್ಗಣೇಂದ್ರಾನ್
ಧ್ಯಾತ್ವಾ ಹೃತ್ಕಮಲೇ ಮಹೇಶಮಿಷ್ಟಂ ॥೩೨॥

ಇತಿ ಶ್ರೀ ಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ಸ್ಕಂದಂ ಪ್ರತಿ ಜೈಗೀಷವ್ಯಪ್ರಶ್ನವರ್ಣನಂ ನಾಮ ಪ್ರಥಮೋಧ್ಯಾಯಃ

ಮುಂದಾಗುವುದೂ ಎಲ್ಲವೂ ಅವನೇ, ಇಂತಹ ಪರಮೇಶ್ವರನನ್ನು ಭಕ್ತಿಜ್ಞಾನದಿಂದ ತಿಳಿದರೆ ಅಂತಹವನು ಮುಕ್ತನಾಗಿ ಕೊನೆಗೆ ಅವನನ್ನೇ ಸೇರುವನು. ಇದೇ ಅರ್ಥವನ್ನು "ತಮೇವ ವಿದಿತ್ವಾಽತಿಮೃತ್ಯುಮೇತಿ" ಎಂಬ ಶ್ರುತಿಯೂ ಪ್ರತಿಪಾದಿಸುವುದು. ||೩೦-೩೧||

ಹೀಗೆ ಜೈಗೀಷವ್ಯಮುನಿಯು ಹೇಳಿದ ಮಾತನ್ನು ಕೇಳಿ ಕುಮಾರಸ್ವಾಮಿಯು ಸಂತಸಗೊಂಡು, ಅಲ್ಲಿದ್ದ ತನ್ನ ಗಣಗಳನ್ನು ಒಂದುಸಾರಿ ಕಡೆಗಣ್ಣಿನಿಂದ ನೋಡಿ ಪರಮೇಶ್ವರನನ್ನು ಹೃದಯಕಮಲದಲ್ಲಿ ಧ್ಯಾನಿಸಿ ಆ ಶಿವಭಕ್ತನಾದ ಮುನಿಯನ್ನು ಕುರಿತು ಹೀಗೆ (ಮುಂದಿನ ಅಧ್ಯಾಯದಲ್ಲಿ) ಹೇಳಿದನು, ಎಂದು ಸೂತಮಹರ್ಷಿಗಳು ವಾಜಶ್ರವಸಾದಿ ಸಕಲ ಮುನಿಗಳಿಗೂ ಶಿವರಹಸ್ಯವನ್ನು ಬೋಧಿಸತೊಡಗಿದರು. ||೩೨||

ಇಲ್ಲಿಗೆ ಶ್ರೀ ಶಿವರಹಸ್ಯದ ಶಿವಚತುರ್ಥಾಂಶದಲ್ಲಿ ಒಂದನೆಯ
ಅಧ್ಯಾಯವು ಮುಗಿದುದು

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ದ್ವಿತೀಯೋಽಧ್ಯಾಯಃ

ಸಮ್ಯಗುಕ್ತಂ ತ್ವಯಾ ತಾತ ಜೈಗೀಷವ್ಯ ಮಹಾಮತೇ ।
ಭವತಾಪಹರಂ ಶಂಭೋಶ್ಚರಿತಂ ಸರ್ವಪಾಪಹೃತ್ ॥೧॥

ಶಿವಾರ್ಚಕಜನಾನಾಂ ಚ ಚರಿತ್ರಂ ಶಿವತೋಷಕೃತ್ ।
ಯಥಾ ಶಿವಸ್ತಥಾ ಶೈವಾ ಭೇದೋ ನೈತೇಷು ವಿದ್ಯತೇ ॥೨॥

ಶಾಂಭವಾನಾಂ ಚ ಮಾಹಾತ್ಮ್ಯಂ ಶಿವೋ ವೇದ ನ ಚೇತರೇ ।
ಶಾಂಭವಶ್ಶಿವ ಏವೇತಿ ವಿಜ್ಞೇಯೋ ಮುಕ್ತಿಕಾಂಕ್ಷಿಭಿಃ ॥೩॥

ಎರಡನೆಯ ಅಧ್ಯಾಯ

ಎಲೈ ಬುದ್ಧಿಶಾಲಿಯಾದ ಜೈಗೀಷವ್ಯಮುನಿಯೇ, ನೀನು ನಿಜವಾದುದನ್ನೇ ಹೇಳಿರುವೆ. ಶಿವನ ಚರಿತವು ಸಂಸಾರದುಃಖವನ್ನು ಹೋಗಲಾಡಿಸುವುದು, ಸಕಲ ಪಾಪಗಳನ್ನೂ ಕಳೆಯಬಲ್ಲುದು. ||೧||

ಶಿವಭಕ್ತರ ಚರಿತದಿಂದ ಶಿವನೂ ಸಂತುಷ್ಟನಾಗುವನು. ಶಿವನಂತೆ ಶಿವಪೂಜಕರೂ ಮಹಿಮೆಯುಳ್ಳವರು, ಆದುದರಿಂದ ಶಿವಶಿವಭಕ್ತರಿಗೆ ಭೇದವಿಲ್ಲ. ||೨||

ಶಾಂಭವರ ಮಾಹಾತ್ಮ್ಯವನ್ನು ಶಿವನೇ ಬಲ್ಲನು. ಇನ್ನಾರೂ ತಿಳಿಯರು, ಮುಕ್ತಿಯನ್ನು ಬಯಸುವವರು ಶಿವಭಕ್ತರು. ಅವರನ್ನು ಶಿವನ ಸ್ವರೂಪವೆಂದೇ ತಿಳಿಯಬೇಕು. ||೩||

ಚರಂ ಶರೀರಂ ಯಚ್ಛಂಭೋಃ ಶಾಂಭವಸ್ತನ್ಮನೀಶ್ವರ ।
ಸ್ಥಾವರಾಜ್ಜಂಗಮಂ ಶ್ರೇಷ್ಠಂ ಶರೀರಂ ಶಿವಸಮ್ಮತಂ ॥೪॥

ಚರಾಚರಾತ್ಮಾ ಭಗವಾನೇಕ ಏವ ಮಹೇಶ್ವರಃ ।
ನ ಶಾಂಭವಾತ್ಪರಂ ಸ್ಥಾನಂ ಶಂಭೋಃ ಪ್ರಿಯಕರಂ ಮಹತ್ ॥೫॥

ಯತ್ರ ಶಾಂಭವವರ್ಗಾಣಾಂ ಸಮಾಜಸ್ತತ್ರ ಶಂಕರಃ ।
ಲಿಂಗೇ ತುಂಗೇ ಬಿಲ್ವವನೇ ಸದಾಶಿವಕಥಾಸು ಚ ॥೬॥

ಪ್ರನೃತ್ಯತ್ಯಂಬಿಕಾಯುಕ್ತೋ ಸ್ಕಂದಹೇರಂಬಪೂರ್ವಕೈಃ ।
ತತ್ಕ್ಷೇತ್ರಂ ಪುಣ್ಯರಾಶೀನಾಂ ಸ್ಥಾನಂ ಪ್ರೀತಂ ತ್ರಿಶೂಲಿನಃ ॥೭॥

ಶಾಂಕರಾ ಏವ ದೇವಸ್ಯ ಸರ್ವದಾ ಪ್ರಿಯವಿಗ್ರಹಾಃ ।
ನ ಗೌರ್ಯಾಂ ನೈವ ವಿಘ್ನೇಶೇ ನ ನಂದೌ ಸ್ಕಂದಕೇ ನ ಚ ॥೮॥

ಪ್ರೀತಿರ್ವೈ ದೇವದೇವಸ್ಯ ಯಾದೃಶೀ ಹಾರಸತ್ತಮೇ ।
ಮನೋಹರಾಶ್ಶಿವಸ್ಯೈವ ಹಾರಾ ರುದ್ರಾಕ್ಷಧಾರಿಣಃ ॥೯॥

ಶಾಂಭವನನ್ನು ಶಿವನ ಸಂಚರಿಸುವ ಶರೀರವೆಂದು ತಿಳಿಯಬೇಕು. ಸ್ಥಿರವಾದ ಲಿಂಗ ಮೊದಲಾದ ವಸ್ತುಗಳಿಗಿಂತಲೂ ಶಿವನಿಗೆ ಚಲಿಸುವ ಶಾಂಭವ ಶರೀರವು ಇಷ್ಟವಾದುದು. ಶಿವನು ಚರಸ್ಥಿರಸ್ವರೂಪನಾಗಿದ್ದರೂ ಶಾಂಭವನಂತಹ ಜಂಗಮಸ್ಥಾನವು ಆವನಿಗೆ ತುಂಬಾ ಪ್ರಿಯವಾದುದು. ||೪-೫||

ಶಾಂಭವರ ಸಮಾಜದಲ್ಲಿ ಶಿವನು ಸದಾ ನೆಲಸಿರುವನು, ಮತ್ತು ಉನ್ನತವಾದ ಶಿವಲಿಂಗ, ಬಿಲ್ವವನ, ಶಿವಕಥೆ—ಇವುಗಳಲ್ಲೂ, ಶಿವನು ಸ್ಕಂದ, ಗಣೇಶ, ಪಾರ್ವತಿ ಇವರೊಡನೆ ಸೇರಿ ನರ್ತಿಸುವನು. ಅಂತಹ ಪ್ರದೇಶವು ಪುಣ್ಯತಮವಾದುದು. ಶಿವನಿಗೆ ಪೂರ್ಣ ಇಷ್ಟವಾದುದು. ||೬-೭||

ಶಾಂಭವರೇ ಶಿವನಿಗೆ ಪ್ರಿಯವಾದ ಶರೀರವು. ಶಿವಭಕ್ತಾಗ್ರೇಸರನಲ್ಲಿರುವ ಪ್ರೀತಿಯು ಶಿವನಿಗೆ ಗೌರಿ, ಗಣೇಶ, ನಂದಿಕೇಶ್ವರ, ಕುಮಾರಸ್ವಾಮಿ,–ಇವರಾರಲ್ಲಿಯೂ ತೋರುವುದಿಲ್ಲ. ||೮||

ರುದ್ರಾಕ್ಷಿ ಮೊದಲಾದುವನ್ನು ಧರಿಸಿದ ನಿಜವಾದ ಶಿವಭಕ್ತರೇ ಶಿವನಿಗೆ

ತಸ್ಮಾದ್ಧರಾರ್ಚನೇನ್ಯೈವ ಶಿವಃ ಪ್ರೀತೋ ಭವಿಷ್ಯತಿ ।
ಶಾಂಭವಾಶ್ಶಂಭವೋ ವಿಪ್ರ ಮುಕ್ತಿಕಾಂತಾಮನೋಹರಾಃ ॥೧೦॥

ತೇಷು ಪ್ರೀತೇಷು ಭಗವಾನ್ ಪ್ರೀತ ಏವ ಮಹೇಶ್ವರಃ ।
ಯಥಾ ಭಕ್ತಜನಾರ್ಚಾತಃ ಪ್ರೀತೋ ಭದ್ರಾಣಿ ಯಚ್ಛತಿ ॥೧೧॥

ನ ತಥಾ ಶಿವಲಿಂಗೇಷು ಪೂಜಿತೋಽಪಿ ಮಹೇಶ್ವರಃ ।
ತಸ್ಮಾಚ್ಛಾಂಭವಪೂಜೈವ ಶಿವಪೂಜಾ ನ ಸಂಶಯಃ ॥೧೨॥

ಶಿವಭಕ್ತಾಶ್ಶಿವಾಚಾರಾಃ ಶಿವಲಿಂಗೈಕತತ್ಪರಾಃ ।
ಭಸ್ಮತ್ರಿಪುಂಡ್ರರುದ್ರಾಕ್ಷಧಾರಿಣೋಽಮಲವಿಗ್ರಹಾಃ ॥೧೩॥

ರುದ್ರಾಧ್ಯಾಯಜಪಾಸಕ್ತಾಃ ಪಂಚಾಕ್ಷರಪರಾಯಣಾಃ ।
ಶಿವನಾಮಾನುಸಂಧಾನಕಂದಲೀಕೃತಮಾನಸಾಃ ॥೧೪॥

ಶಿವಧ್ಯಾನಪರಾಶ್ಶೈವಾ ಪಾವನಾಃ ಪಾವಯಂತ್ಯಪಿ ।
ತೇಷು ಪ್ರೀತೇಷು ಭಗವಾನ್ ಪ್ರೀತ ಏವ ಮಹೇಶ್ವರಃ ॥೧೫॥

ಇಷ್ಟರಾದವರು, ಆದುದರಿಂದ ಶಿವಭಕ್ತರನ್ನರ್ಚಿಸಿದರೇ ಶಿವನು ಸಂತುಷ್ಟನಾಗುವನು. ॥೯॥

ಶಾಂಭವರೇ ಶಿವಸ್ವರೂಪರಾಗಿ ಮುಕ್ತಿಸುಂದರಿಯನ್ನು ಮದುವೆಯಾಗುವರು, ಅವರು ಸಂತುಷ್ಟರಾದರೆ ಭಗವಾನ್ ಶಿವನೂ ಸಂತುಷ್ಟನಾಗುವನು. ॥೧೦॥

ಶಿವಭಕ್ತರನ್ನು ಅರ್ಚಿಸಿದರೆ ಶಿವನು ಪ್ರೀತನಾಗಿ ವರಗಳನ್ನು ಕೊಡುವಂತೆ ಕೇವಲ ಶಿವಲಿಂಗವನ್ನರ್ಚಿಸಿದರೆ ಸುಪ್ರೀತನಾಗಿ ತಾನು ವರಗಳನ್ನು ಕೊಡಲಾರನು. ॥೧೧॥

ಆದುದರಿಂದ ಶಿವಭಕ್ತಪೂಜೆಯೇ ಶಿವಪೂಜೆಯು, ಶಿವಲಿಂಗಪೂಜೆಗಿಂತ ಇದು ಶ್ರೇಷ್ಠವಾದುದು. ಇದು ಸತ್ಯವು. ॥೧೨॥

ಶಿವಭಕ್ತರು ಸದಾ ಶಿವನ ಸೇವೆಯನ್ನೇ ಮಾಡುವರು, ಶಿವಲಿಂಗವನ್ನೇ ಅರ್ಚಿಸುವರು, ಭಸ್ಮರುದ್ರಾಕ್ಷಿಗಳನ್ನು ಧರಿಸಿ ಪರಿಶುದ್ಧರಾಗಿರುವರು. ರುದ್ರಸೂಕ್ತವನ್ನು ಜಪಿಸುವರು. “ ಓಂ ನಮಃ ಶಿವಾಯ ” ಎಂಬ ಪಂಚಾಕ್ಷರೀಮಂತ್ರವನ್ನು ಸದಾ ಜಪಿಸುವರು, ಶಿವನ ಹೆಸರುಗಳನ್ನೇ ಸ್ಮರಿಸುತ್ತಿರುವರು. ಶಿವನನ್ನೇ ಅನನ್ಯ

ನಾನ್ಯೇನ ಕರ್ಮಣಾ ಶಂಭುಃ ಪ್ರೀತೋ ಭವತಿ ಸತ್ತಮ ।
ಸ್ವತಃ ಪೂರ್ಣೋ ಮಹಾದೇವಸ್ತಸ್ಯ ಕಿಂ ತೋಷಣೇನ ಹಿ ॥೧೬॥

ಶಿವಭಕ್ತಾರ್ಚನೇನೈವ ತೋಷಮೇತಿ ಮಹೇಶ್ವರಃ ।
ಶಂಭುಶ್ಶಾಂಭವತೋಷೇಣ ತುಷ್ಟಃ ಕಷ್ಟವಿನಾಶಕಃ ॥೧೭॥

ಅಷ್ಟಮೂರ್ತಿಃ ಸ್ವಯಂ ತುಷ್ಟೋ ಮುಕ್ತಿಂ ತಸ್ಯ ಪ್ರಯಚ್ಛತಿ ।
ಶಿವಭಕ್ತೋ ಯತ್ರ ತಿಷ್ಠೇತ್ತತ್ರ ಸನ್ನಿಹಿತಃ ಶಿವಃ ॥೧೮॥

ತಸ್ಮಿನ್ ಭುಕ್ತೇ ಶಿವೋ ಭುಂಕ್ತೇ ತಸ್ಮಿನ್ ತುಷ್ಟೇ ಶಿವಃ ಸ್ವಯಂ ।
ಪುಷ್ಟಸ್ತುಷ್ಟಸ್ತಥಾ ರಾಯಸ್ತಸ್ಯ ನಿತ್ಯಂ ಪ್ರಯಚ್ಛತಿ ॥೧೯॥

ಶಿವಾರ್ಚಕೋ ಯಶ್ಚ ಭಕ್ತಃ ದ್ವಿಜೋ ವಾ ಶ್ವಪಚೋಽಪಿ ವಾ ।
ಭವಭಕ್ತೋ ವಿಮುಚ್ಯೇತ ಭಸ್ಮರುದ್ರಾಕ್ಷಧಾರಕಃ ॥೨೦॥

ಭಕ್ತಿಯಿಂದ ಧ್ಯಾನಿಸುವರು. ಶಿವಭಕ್ತರು ಹೀಗಿದ್ದು ತಾವು ಪವಿತ್ರರಾಗಿರುವುದಲ್ಲದೇ ಜಗತ್ತನ್ನೇ ಪವಿತ್ರಗೊಳಿಸುವರು. ಇಂತಹ ಪರಮ ಶಾಂಭವರು ಸಂತುಷ್ಟರಾದರೆ ಮಹೇಶ್ವರನೂ ಸಂತುಷ್ಟನಾಗುವನು. ||೧೩-೧೪-೧೫||

ಶಿವನು ಸ್ವಯಂ ಪರಿಪೂರ್ಣನು, ನಿತ್ಯತೃಪ್ತನು. ಅವನು ಮಿಕ್ಕಾವ ಕರ್ಮಗಳಿಂದಲೂ ಪ್ರೀತನಾಗಲಾರನು. ಆದರೆ ಶಿವಭಕ್ತರ ಅರ್ಚನೆಯಿಂದ ಮಾತ್ರವೇ ಸಂತುಷ್ಟನಾಗುವನು. ||೧೬||

ಶಿವಭಕ್ತನನ್ನು ಸಂತೋಷಗೊಳಿಸಿದರೆ ಶಿವನೂ ತುಷ್ಟನಾಗಿ ಕಷ್ಟವನ್ನು ಪರಿಹರಿಸುವನು. ಹಾಗೆ ಸಂತುಷ್ಟನಾದ ಶಿವನು ಮುಕ್ತಿಯನ್ನು ಕರುಣಿಸುವನು. ಒಟ್ಟಿನಲ್ಲಿ ಭಕ್ತನು ಇದ್ದಲ್ಲಿಯೇ ಶಿವನು ನೆಲಸಿರುವನು. ||೧೭-೧೮||

ಶಿವಭಕ್ತನು ಊಟಮಾಡಿದರೆ ಶಿವನೂ ಭುಜಿಸುವನು, ಭಕ್ತನು ಸಂತುಷ್ಟನಾದರೆ ಶಂಕರನೂ ಸಂತುಷ್ಟನಾಗಿ ಐಶ್ವರ್ಯವನ್ನು ಕರುಣಿಸುವನು. ||೧೯||

ಭಸ್ಮರುದ್ರಾಕ್ಷಗಳನ್ನು ಧರಿಸಿ ಶಿವನನ್ನು ಅನನ್ಯ ಭಕ್ತಿಯಿಂದ ಭಜಿಸುವವನು ಬ್ರಾಹ್ಮಣನಾದರೂ ಹೊಲೆಯನಾದರೂ ಮುಕ್ತಿಯನ್ನು ಪಡೆಯುವನು. ||೨೦||

ನ ವರ್ಣಾಶ್ರಮನಿಷ್ಠಾತ್ರ ಭಕ್ತಿನಿಷ್ಠಾತ್ರ ಕೇವಲಾ ।
ನಾಸ್ಯಾಚಾರಃ ಪರೀಕ್ಷೇತ ನ ಕುಲಂ ನ ವ್ರತಂ ತಥಾ ॥೨೧॥

ನ ಶಿವಾಶ್ರಯವತ್ ಜ್ಞಾನಂ ಪರೀಕ್ಷೇತ ದ್ವಿಜೋತ್ತಮ ।
ಸ ಮುನಿಃ ಸ ತಪಸ್ವೀ ಚ ಸ ಯತಿಸ್ಸ ಚ ಪಂಡಿತಃ ॥೨೨॥

ತೇನಾಧೀತಂ ಶ್ರುತಂ ತೇನ ಸ ಚ ತೀರ್ಥಸಮಾಹಿತಃ ।
ಸ ಪಾತ್ರಂ ತಾರಯೇತ್ಸರ್ವಾನ್ ಹವ್ಯೇ ಕವ್ಯೇ ಸುರಾನ್ ಪಿತೄನ್ ॥೨೩॥

ಶಿವಭಕ್ತೇ ಗೃಹಂ ಯಾತೇ ನೃತ್ಯಂತಿ ಪಿತರಸ್ಸದಾ ।
ತೇಷು ಶ್ರಾದ್ಧಂ ಪ್ರದಾತವ್ಯಂ ತೃಪ್ತಾಃ ಸ್ಯುಃ ಪ್ರಪಿತಾಮಹಾಃ ॥೨೪॥

ಶಿವಭಕ್ತಾನತಿಕ್ರಮ್ಯ ಅನ್ಯೇಷು ನಿಹಿತಂ ಹವಿಃ ।
ದಾನಂ ಭೋಜ್ಯಂ ಹಿ ಯದ್ವಿಪ್ರ ತದ್ಭಸ್ಮನಿ ಹುತಂ ಹವಿಃ ॥೨೫॥

ಈ ದಾರಿಯಲ್ಲಿ ವರ್ಣಾಶ್ರಮಭೇದವಿಲ್ಲ, ಭಕ್ತಿಯೇ ಮುಖ್ಯವಾದುದು. ಈ ಭಕ್ತಿಮಾರ್ಗದಲ್ಲಿ ಆಚಾರ ಕುಲನಿಯಮಗಳು ಮುಖ್ಯವಲ್ಲ. ಶಿವಭಕ್ತನು ಆಚಾರ ಕುಲನಿಯಮಗಳ ಪರೀಕ್ಷೆಗೆ ಒಳಗಾಗತಕ್ಕವನಲ್ಲ. ॥೨೧॥

ಶಿವಭಕ್ತನೇ ನಿಜವಾದ ಮುನಿಯು, ತಪಸ್ವಿಯು, ಜಿತೇಂದ್ರಿಯನು, ಪಂಡಿತನು. ಅವನು ಎಲ್ಲವನ್ನೂ ಓದಿ ತಿಳಿದಂತಹ ಜ್ಞಾನಿಯು, ಮಹಾ ಪವಿತ್ರನು. ದೈವಪೈತೃಕ ಕರ್ಮಗಳಿಗೆ ಅವನೇ ಯೋಗ್ಯನು. ದೇವತೆಗಳನ್ನೂ ಪಿತೃಗಳನ್ನೂ ಅವನೇ ಉದ್ಧರಿಸಬಲ್ಲನು. ॥೨೨-೨೩॥

ಶಿವಭಕ್ತನು ಮನೆಗೆ ಬಂದರೆ ಆ ಮನೆ ಯಜಮಾನನ ಪಿತೃಗಳು ಆನಂದ ದಿಂದ ಕುಣಿಯುವರು. ಶಿವಭಕ್ತರಿಗೆ ಬಡಿಸಿ ಶ್ರಾದ್ಧವನ್ನು ಮಾಡಿದರೆ ಪಿತೃಗಳೆಲ್ಲರೂ ತೃಪ್ತರಾಗುವರು. ॥೨೪॥

ಪರಶಿವಭಕ್ತರನ್ನು ಬಿಟ್ಟು ಮಿಕ್ಕವರಿಗೆ ಶುಭಾಶುಭ ಕರ್ಮಗಳಲ್ಲಿ ದಾನಾದಿ ಗಳನ್ನು ಮಾಡಿದರೆ ಅದು ಭಸ್ಮದಲ್ಲಿ ಹೋಮಮಾಡಿದಂತೆ ವ್ಯರ್ಥವಾಗುವುದು. ಅಷ್ಟೇ ಅಲ್ಲದೆ ಶಿವನೂ ಕೋಪಗೊಂಡು ಕಷ್ಟವನ್ನು ಕೊಡುವನು. ॥೨೫॥

ರುಷ್ಟ ಏವ ಹಿ ಗೌರೀಶಸ್ತಸ್ಯ ಕಷ್ಟಂ ದದಾತಿ ಹಿ ।
ಅಷ್ಟಮೂರ್ತಿಕೃಪಾನಿಷ್ಠಾಃ ಶೈವಾ ಏವ ನ ಸಂಶಯಃ ॥೨೬॥

ವರಿಷ್ಠಪಾತ್ರಮೇತೇ ಹಿ ತಸ್ಮಾತ್ಪೂಜ್ಯಾಃ ಶಿವಾರ್ಚಕಾಃ ।
ಗಣಾಸ್ಸುರಾ ಮುನಿಗಣಾಃ ಕೇಚಿಚ್ಛಂಭೋಃ ಪ್ರಸಾದತಃ ॥೨೭॥

ಶಿವಭಕ್ತಶಿವಜ್ಞಾನಮುಕ್ತಾ ಏವ ದ್ವಿಜೋತ್ತಮ ।
ತಸ್ಮಾಚ್ಛಿವಭಕ್ತಾಸ್ಸದಾ ಪೂಜ್ಯಾಃ ಶಾಂಭವಾಃ ಶಿವಸಮ್ಮತಾಃ ॥೨೮॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಶ್ಶೂದ್ರಾಶ್ಚಾನ್ಯೇಽಪಿ ಸಂಕರಾಃ ।
ಶಿವಭಕ್ತಾಶ್ಶಿವಾಚಾರಾ ಭಸ್ಮರುದ್ರಾಕ್ಷಧಾರಿಣಃ ॥೨೯॥

ಪೂಜ್ಯಾ ಏವ ಸದಾ ಸರ್ವೈರ್ಭಕ್ತಿಶ್ಚಾತ್ರ ಗರೀಯಸೀ ।
ಶಿಲಾಶನಶ್ಚ ಶೈಲಾದಿಶ್ಚಂಡಿಕೇಶೋಽಥ ಭೃಂಗಿಕಃ ॥೩೦॥

ರಿಟಿಸ್ತುಂಡಃ ಸೋಮನಂದೀ ಮಾರ್ಕಂಡೇಯೋ ಘಟೋದ್ಭವಃ ।
ಉಪಮನ್ಯುರ್ದಧೀಚಶ್ಚ ದೂರ್ವಾಸೋ ಗೌತಮೋ ಮುನಿಃ ॥೩೧॥

ಕೃಷ್ಣಶ್ಶತಾರ್ಚನೋ ರೈಭ್ಯೋ ಭೃಗುರ್ಬಾಣೋ ಭೃಗೂದ್ವಹಃ ।
ಅಹಂ ಗಜಾನನೋ ಗೌರೀ ವಿಷ್ಣುಬ್ರಹ್ಮಾದಯಸ್ಸುರಾಃ ॥೩೨॥

ಶೈವವರ್ಯರು ಶಿವನ ಕೃಪೆಗೆ ಪಾತ್ರರು, ಎಲ್ಲ ಕರ್ಮಗಳಿಗೂ ಅವರು ಯೋಗ್ಯರು, ಆದುದರಿಂದ ಅವರನ್ನೇ ಸದಾ ಪೂಜಿಸಬೇಕು. ॥೨೬॥

ಕೆಲವು ಶಿವಗಣಗಳೂ ಮುನಿಗಳೂ ದೇವತೆಗಳೂ ಶಿವಭಕ್ತರಿಂದ ಉಪದೇಶ ಪಡೆದು ಶಿವನ ಅನುಗ್ರಹವನ್ನು ಸಂಪಾದಿಸಿ ಮುಕ್ತರಾದರು. ॥೨೭॥

ಆದುದರಿಂದ ಶಿವನ ಕೃಪೆಗೆ ಪಾತ್ರರಾದ ಶಿವಭಕ್ತರನ್ನು ಪೂಜಿಸಬೇಕು. ಭಸ್ಮರುದ್ರಾಕ್ಷಧಾರಿಗಳಾದ ಅವರು ಬ್ರಾಹ್ಮಣರಾಗಲಿ, ಕ್ಷತ್ರಿಯರಾಗಲೀ, ವೈಶ್ಯ ಶೂದ್ರರಾಗಲಿ, ಸಂಕರಜಾತಿಯವರಾಗಿರಲಿ ಅವರನ್ನು ಪೂಜಿಸಲೇಬೇಕು. ಇಲ್ಲಿ ಭಕ್ತಿಯೇ ಪ್ರಧಾನವಾದುದು, ಜಾತಿಯಲ್ಲ. ॥೨೮-೨೯॥

ಶಿಲಾಶನ, ಶಿಲಾದಪುತ್ರ (ನಂದಿ) ಚಂಡಿಕೇಶ, ಭೃಂಗಿ, ರಿಟಿ, ಸೋಮನಂದಿ ಮಾರ್ಕಂಡೇಯ, ಅಗಸ್ತ್ಯಮುನಿ, ಉಪಮನ್ಯು, ದಧೀಚಮುನಿ, ದುರ್ವಾಸಮುನಿ, ಗೌತಮಮುನಿ, ಶ್ರೀಕೃಷ್ಣ (ವ್ಯಾಸ) ಶತಾರ್ಚನಮುನಿ, ರೈಭ್ಯಮುನಿ, ಭೃಗುಮುನಿ,

ಇಂದ್ರೋ ಯಕ್ಷಾಧಿಪಃ ಸೂರ್ಯಚಂದ್ರಾದ್ಯಾ ಗ್ರಹನಾಯಕಾಃ ।
ಸಮಭ್ಯರ್ಚ್ಯ ವಿರೂಪಾಕ್ಷಂ ಲಬ್ಧವಂತಃ ಪರಂ ಪದಂ ॥೩೩॥

ಗಣತ್ವಂ ನಂದಿಕೇಶಾದ್ಯಾ ವಿಷ್ಣುಬ್ರಹ್ಮಾದಯೋ ದ್ವಿಜ ।
ಸೃಷ್ಟಿಂ ಸುದರ್ಶನಂ ದೇವನಾಯಕತ್ವಂ ಸುರಾ ಗ್ರಹಾಃ ॥೩೪॥

ಗ್ರಹತ್ವಂ ದೇವದೇವಸ್ಯ ಪ್ರಸಾದೇನ ಮುನೀಶ್ವರ ।
ಲೇಭಿರೇ ವಾಂಛಿತಾಂ ಸಿದ್ಧಿಂ ಶಿವಲಿಂಗಾರ್ಚನೇನ ಹಿ ॥೩೫॥

ರಾಜ್ಯಂ ಭುಕ್ತಿಂ ಚ ಮುಕ್ತಿಂ ಚ ಲೇಭಿರೇ ನೃಪಸತ್ತಮಾಃ ।
ಕೇಚಿದ್ಗಣಾ ಮುನೀಂದ್ರಾಶ್ಚ ಸುರಾನ್ ವಿಷ್ಣ್ವಾದಿಕಾನಪಿ ॥೩೬॥

ವಕ್ಷ್ಯಾಮಿ ಭಕ್ತಾನ್ ಗಣಯೋ ತೇಷಾಂ ಚ ಚರಿತಂ ಮುನೇ ।
ಪ್ರಸಾದಾಪ್ತಿರ್ಮಹಾದೇವಾತ್ತೇಷಾಂ ಭಕ್ತಿಂ ಚ ಕೇವಲಾಂ ॥೩೭॥

ಬಾಣಾಸುರ, ಶುಕ್ರಾಚಾರ್ಯ, ನಾನು (ಕುಮಾರಸ್ವಾಮಿ) ಗಜಾನನ, ಗೌರಿ, ವಿಷ್ಣು, ಬ್ರಹ್ಮ ಮೊದಲಾದ ದೇವತೆಗಳು, ಇಂದ್ರ, ಕುಬೇರ, ಸೂರ್ಯ, ಚಂದ್ರ ಮೊದಲಾದ ನವಗ್ರಹಗಳು ಇವರೆಲ್ಲರೂ ಪರಮೇಶ್ವರನನ್ನೇ ಆರಾಧಿಸಿ ಪರಮಪದವಿಯನ್ನು ಪಡೆದಿರುವರು. ॥೩೦-೩೧-೩೨-೩೩॥

ಮಹಾದೇವನ ಅನುಗ್ರಹದಿಂದ ನಂದಿಕೇಶ್ವರ ಮೊದಲಾದವರು ಗಣನಾಯಕರಾದರು. ಹರಿಯು ಸುದರ್ಶನ ಚಕ್ರವನ್ನೂ, ಪಾಲನಶಕ್ತಿಯನ್ನೂ, ದಿವ್ಯಜ್ಞಾನವನ್ನೂ ಪಡೆದನು. ಬ್ರಹ್ಮನು ಸೃಷ್ಟಿಕರ್ತನಾದನು, ದೇವತೆಗಳು ದೇವನಾಯಕರಾದರು, ಗ್ರಹಗಳು ಗ್ರಹಸ್ಥಾನವನ್ನು ಹೊಂದಿದರು. ॥೩೪॥

ಕೆಲವರು ಶಿವಲಿಂಗವನ್ನರ್ಚಿಸಿ ಇಷ್ಟಾರ್ಥಗಳೆಲ್ಲವನ್ನೂ ಪಡೆದರು. ರಾಜರು ಶಿವನ ಅನುಗ್ರಹದಿಂದ ರಾಜ್ಯಭೋಗವನ್ನೂ ಮುಕ್ತಿಯನ್ನೂ ಹೊಂದಿದರು. ಕೆಲವು ಗಣಗಳೂ ಮುನಿಗಳೂ ಶಿವನ ಅನುಗ್ರಹದಿಂದ ಹರಿಯೇ ಮೊದಲಾದ ದೇವನಾಯಕರ ಪದವಿಯನ್ನು ಪಡೆದರು. ॥೩೫-೩೬॥

ಎಲೈ ಮುನಿಯೇ, ಅಂತಹ ಶಿವಭಕ್ತರನ್ನೂ, ಅವರ ಚರಿತವನ್ನೂ ಮತ್ತು ಮಹಾದೇವನಲ್ಲಿ ಅವರಿಗಿದ್ದ ಭಕ್ತಿಯನ್ನೂ, ಶಿವನ ಅನುಗ್ರಹವನ್ನು ಈಗ ಹೇಳು

ಯಾಂ ಶ್ರುತ್ವಾನುಭವೇದ್ಭಕ್ತಿಂ ನರಃ ಶಿವಪದಾಬ್ಜಯೋಃ ॥೩೮॥

ತ್ವತ್ಸಂಗಾದಧುನಾ ಶಿವಾರ್ಚಕಜನಾಚಾರ್ಯೈಕಭಕ್ತಿಪ್ರಭಾಃ
ಶಂಭೋಃ ಪುಣ್ಯಚರಿತ್ರಕೀರ್ತನಮಹಾಮುಕ್ತಿಪ್ರವೀಣಾಃ ಕಥಾಃ ।
ವಕ್ತುಂ ಮೇ ಮತಿರೀಶಪಾದಭಜನಪ್ರಾಮಾಣ್ಯತೋ ನಿಸ್ಸರ
ತ್ಯೇಷಾ ವಕ್ತ್ರಸರೋರುಹೈಶ್ಚ ಭಗವಾಂಶ್ಚಾಂಬಾಪತೇಸ್ಸಂಸ್ತವಃ ॥೩೯॥

ಜಿಹ್ವಾಜಿಹ್ಮವಿವರ್ಜಿತಾತ್ಮಮಹಿತಾ ತ್ವತ್ಸಂಗಮೋದಪ್ರದಾಂ ।
ವಕ್ತುಂ ಚಾಭಿಲಷೇತ ಶಂಕರಕಥಾಂ ಶಾಂಗಾಂಗಸಂಗೇನ ಹಿ ।
ಏತೇಽಮೀ ಮುನಯೋ ಗಣಾಸ್ಸುರಗಣಾಃ ಶೃಣ್ವಂತು ತಾಂ ಶಾಂಭವೀಂ
ಭಕ್ತಾಭೀಪ್ಸಿತದಾನಮೋಕ್ಷಪರಮಾನಂದಪ್ರದಾಂ ಭಕ್ತಿತಃ ॥೪೦॥

ಇತಿ ಶ್ರೀಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ಶಿವಭಕ್ತಮಹಿಮಾನು
ವರ್ಣನಂ ನಾಮ ದ್ವಿತೀಯೋಽಧ್ಯಾಯಃ

ವೆನು. ಅದನ್ನು ಕೇಳಿದರೆ, ನಾಸ್ತಿಕನಾದ ಮಾನವನೂ ಸಹ ಶಿವನ ಚರಣಾರವಿಂದ ಗಳಲ್ಲಿ ಭಕ್ತಿಯುಳ್ಳವನಾಗುವನು. ||೩೭-೩೮||

ಎಲೈ ಜೈಗೀಷವ್ಯಮುನಿಯೇ, ನಿನ್ನ ಸಹವಾಸದಿಂದ ಈಗ ನಾನು ಪವಿತ್ರ ವಾದ ಶಿವಭಕ್ತರ ಚರಿತ್ರೆಯನ್ನು ಹೇಳುವಂತಾಯ್ತು. ಪುಣ್ಯವಶಾತ್ ನನಗೆ ಇಂತಹ ಸುಯೋಗವೊದಗಿದುದು ಶಿವನ ಅನುಗ್ರಹದಿಂದಲೇ. ಅವನ ಸ್ತೋತ್ರಗ ಳಿಂದ ಶೋಭಿಸುವ ಈ ಶಿವಚರಿತ್ರೆಯನ್ನು ಇಂದು ನಾನು ನನ್ನ ಸಂತೋಷದಿಂದ ಹೇಳುವೆನು. ||೩೯||

ಸಂಕುಚಿತ ಬುದ್ಧಿಯಿಲ್ಲದ ಮಮಕಾರರಹಿತನಾದ ನಿನ್ನಂತಹ ಶಿವಭಕ್ತ ವರ್ಯನಿಗೆ, ಶಿವಭಕ್ತರ ಕಥೆಯನ್ನು ವಿವರವಾಗಿ ಹೇಳಲು ನಿಮ್ಮ ಸಹವಾಸದಿಂದ ಈಗ ನನ್ನ ಮನವು ಆತುರಗೊಂಡಿದೆ. ಭಕ್ತರಿಗೆ ಸಕಲೇಷ್ಟಾರ್ಥವನ್ನೂ ಮುಕ್ತಿ ಯನ್ನೂ ಕೊಡುವಂತಹ ಈ ಚರಿತೆಯನ್ನು ದೇವತೆಗಳೆಲ್ಲರೂ ಮುನಿಗಳೂ ಸಹ ಆದರದಿಂದ ಕೇಳಲಿ, ಎಂದು ಕುಮಾರ ಸ್ವಾಮಿಯು ಜೈಗೀಷವ್ಯಾದಿಗಳ ಮಧ್ಯದಲ್ಲಿ ಶಿವರಹಸ್ಯವನ್ನು ಹೇಳಲು ಆರಂಭಿಸಿದನು. ||೪೦||

ಇಲ್ಲಿಗೆ ಶ್ರೀ ಶಿವರಹಸ್ಯದ ಶಿವಚತುರ್ಥಾಂಶದಲ್ಲಿ ಎರಡನೆಯ
ಅಧ್ಯಾಯವು ಮುಗಿದುದು

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ತೃತೀಯೋಽಧ್ಯಾಯಃ

॥ ಸ್ಕಂದ ಉವಾಚ ॥

ಶಿಲಾಶನತಪಶ್ಚರ್ಯಾಂ ಪ್ರಸಾದಂ ಪರಮೇಷ್ಠಿನಃ ।
ಶೃಣು ತ್ವಂ ಮುನಿಶಾರ್ದೂಲ ಕಥ್ಯಮಾನಂ ಗಣೈಸ್ಸಹ ॥೧॥

ಯಚ್ಛ್ರುತ್ವಾ ಲಭತೇ ಭಕ್ತಿಂ ಶಿವಪಾದಾಂಬುಜೇ ಮುನೇ ।
ಅಗಜಾನಾಯಕೇ ಯಸ್ಯ ಭಕ್ತಿಃ ಕಿಂ ತಸ್ಯ ಕರ್ಮಭಿಃ ॥೨॥

ಸರ್ವಸಂಪತ್ಪ್ರದಾ ಭಕ್ತಿಃ ಸರ್ವಾಪದ್ವಿನಿವಾರಿಣೀ ।
ಸರ್ವಭಾಗ್ಯಪ್ರದಾ ನೃಣಾಂ ಭಕ್ತಿಃ ಸ್ವರ್ಗಾಪವರ್ಗದಾ ॥೩॥

ಮೂರನೆಯ ಅಧ್ಯಾಯ

ಎಲೈ ಜೈಗೀಷವ್ಯಮುನಿಯೇ "ಶಿಲಾಶನ"ನೆಂಬ ಶಿವಭಕ್ತನ ತಪಸ್ಸನ್ನೂ ಅವನಿಗೆ ಲಭಿಸಿದ ಪರಮೇಶ್ವರಾನುಗ್ರಹವನ್ನೂ ಈಗ ಹೇಳುವೆನು. ಈ ಪ್ರಮಥಗಣಗಳೊಡನೆ ಶ್ರದ್ಧೆಯಿಂದ ಕೇಳು. ॥೧॥

ಈ ಕಥೆಯನ್ನು ಕೇಳಿದರೆ ಶಿವನ ಚರಣಾರವಿಂದಗಳಲ್ಲಿ ಭಕ್ತಿಯುದಯಿಸುವುದು. ಶಿವನಲ್ಲಿ ಭಕ್ತಿಯೊಂದಿದ್ದರೆ ಸಾಕು, ಮಾನವರು ಮಿಕ್ಕಾವ ಕರ್ಮಗಳನ್ನೂ ಮಾಡಬೇಕಾಗಿಲ್ಲ. ॥೨॥

ಭಕ್ತಿಯು ಸಕಲಸಂಪತ್ತನ್ನೂ ಉಂಟುಮಾಡುವುದು, ಆಪತ್ತುಗಳೆಲ್ಲವನ್ನೂ ನಾಶಗೊಳಿಸುವುದು. ಸಕಲೈಶ್ವರ್ಯಗಳನ್ನೂ ಅನುಗ್ರಹಿಸುವುದು, ಸ್ವರ್ಗಮೋಕ್ಷಗಳೆರಡೂ, ಭಕ್ತಿಯಿಂದ ಲಭಿಸುವುವು. ॥೩॥

ಮಾಹೇಶ್ವರೇ ಪುರಾ ಕಲ್ಪೇ ಮಾಲವಾಖ್ಯೇ ಮಹೀಧರೇ ।
ನಾನಾವೃಕ್ಷಸಮಾಕೀರ್ಣೇ ನಾನಾಪಕ್ಷಿಮೃಗಾವೃತೇ ॥೪॥

ಪುಷ್ಪವಲ್ಲೀಗಣಭರೈರ್ಮಂದಮಾರುತಸಂಯುತೇ ।
ನದತ್ಸು ದೇವತೂರ್ಯೇಷು ಗಂಧರ್ವೇಷು ತಪಸ್ವಿಷು ॥೫॥

ಸರೋವರಯುತೇ ರಮ್ಯೇ ಫುಲ್ಲಾಂಬುಜಸಮನ್ವಿತೇ ।
ದೇವೋದ್ಯಾನೋಪಮೇ ತತ್ರ ಗಿರಿಕಂದರಸುಂದರೇ ॥೬॥

ಪರ್ಣಾಂಬುಭೋಜೀ ಫಲಭುಕ್ ನಿತ್ಯಂ ವಾತಸುಪಾರಣಃ ।
ಉವಾಸ ಚೋಟಜಂ ವಿಪ್ರೋ ಪತ್ನ್ಯಾ ಸ ತಪಸಾ ಮುನಿಃ ॥೭॥

ನಿನಾಯ ನಿಯತೇನಾಯುರ್ಮಹರ್ಷಿಃ ಸಂಶಿವವ್ರತಃ ।
ಜುಹ್ವನ್ ಅಗ್ನೀನ್ ಸದಾಕಾಲೇ ಕುರ್ವನ್ನತಿಥಿಸತ್ಕ್ರಿಯಾಂ ॥೮॥

ಹಿಂದೆ ಮಾಹೇಶ್ವರಕಲ್ಪದಲ್ಲಿ ಮಾಲವವೆಂಬ ಗಿರಿಯೊಂದಿದ್ದಿತು. ಅದರಲ್ಲಿ ಅತ್ಯುನ್ನತವಾದ ಅನೇಕ ಮರಗಳಿದ್ದುವು. ಅನೇಕ ಬಗೆಯ ಹಕ್ಕಿಗಳೂ ಮೃಗಗಳೂ ಆ ಗಿರಿಯಲ್ಲಿ ವಾಸವಾಗಿದ್ದುವು. ॥೪॥

ಆ ಬೆಟ್ಟಕ್ಕೆ ದೇವತೆಗಳು ಬಂದು ವಿಹರಿಸುತ್ತಿದ್ದರು, ಗಂಧರ್ವರು ಹಾಡುತ್ತಿದ್ದರು, ತಪಸ್ವಿಗಳು ಅಲ್ಲಿ ವಾಸವಾಗಿದ್ದರು. ॥೫॥

ಅಲ್ಲಿ ಮನೋಹರವಾದ ಸರೋವರಗಳಿದ್ದುವು, ಸರಸ್ಸುಗಳಲ್ಲಿ ಸದಾ ತಾವರೆಗಳು ಅರಳಿರುತ್ತಿದ್ದುವು. ಅದರ ಸುವಾಸನೆಯನ್ನು ಮಂದಮಾರುತವು ಒಯ್ದು ದಿಕ್ಕುದಿಕ್ಕಿಗೆ ಹರಡುತ್ತಿದ್ದಿತು. ಸುಂದರವಾದ ಗುಹೆಗಳು ಅಲ್ಲಿ ಕಾಣುತ್ತಿದ್ದುವು. ಒಟ್ಟಿನಲ್ಲಿ ಅದು ನಂದನವನಕ್ಕೆ ಸದೃಶವಾಗಿತ್ತು. ॥೬॥

ಇಂತಹ ಆ ಮಾಲವಪರ್ವತದ ತಪ್ಪಲಲ್ಲಿ ಪರ್ಣಶಾಲೆಯನ್ನು ಕಟ್ಟಿಕೊಂಡು ಆ ಶಿಲಾಶನಮುನಿಯು ಪತ್ನಿಯೊಡನೆ ವಾಸವಾಗಿದ್ದನು. ಅವನು ಕೆಲವು ದಿನ ಎಲೆಗಳನ್ನು ತಿನ್ನುತ್ತಾ ತಪಸ್ಸು ಮಾಡುತ್ತಿದ್ದನು. ಕೆಲವು ಸಾರಿ ಹಣ್ಣನ್ನೇ ಸೇವಿಸುತ್ತಿದ್ದು ತಪಸ್ಸುಮಾಡುತ್ತಿದ್ದನು. ಅನೇಕಕಾಲ ಹೆಚ್ಚಾಗಿ ಗಾಳಿಯಿಂದಲೇ ಜೀವಿಸುತ್ತಿದ್ದು ತಪಸ್ಸುಮಾಡುತ್ತಿದ್ದನು. ॥೭॥

ಜಿತೇಂದ್ರಿಯನಾಗಿದ್ದು ಆ ಮುನಿಯು ಸಕಾಲದಲ್ಲಿ ಶಿವನನ್ನುದ್ದೇಶಿಸಿ ಹೋಮಗಳನ್ನು ಮಾಡುತ್ತಿದ್ದನು. ಸದಾ ಅತಿಥಿಗಳನ್ನು ಸತ್ಕರಿಸುತ್ತಿದ್ದನು. ಭಕ್ತಿ

ಶಿವಾರ್ಪಿತೇನ ಜೀವನ್ ಸ ಶಿವಲಿಂಗಾರ್ಚನಪ್ರಿಯಃ ।
ತಸ್ಯೈವಂ ವರ್ತಮಾನಸ್ಯ ವಯಃ ಪರಿಣತಂ ಬಹು ॥೧೦॥

ತಮಾಹ ಭಾರ್ಯಾ ವಿನಯಾದ್ವೈತಹವ್ಯಂ ಮಹಾಮುನಿಂ ।
ನಾಮ್ನಾ ಚಿತ್ರವತೀ ಹೃದ್ಯಾ ವಿಚಿತ್ರಾರ್ಥವಿಶಾರದಾ ॥೧೧॥

॥ ಸೂತ ಉವಾಚ ॥

ಪ್ರಣಮ್ಯ ರಹಸಿ ಸ್ವೈರಂ ಪ್ರಖಿನ್ನಾನನಪಂಕಜಾ ॥೧೨॥

॥ ಚಿತ್ರವತ್ಯುವಾಚ ॥

ಕಿಂಚಿದ್ವಿಜ್ಞಾಪ್ತುಮಿಚ್ಛಾಮಿ ತದಿಹೈಕಮನಾಃ ಶೃಣು ।
ನಾವಮಾನ್ಯಾಸ್ಮಿ ವಿಪ್ರರ್ಷೇ ಸಾರಂ ಮೇ ವಚನಂ ಹಿತಂ ॥೧೩॥

ಕುರು ಕರ್ಣೇ ಮುನಿಶ್ರೇಷ್ಠ ತಪಸೈವಾಶು ಸಾಧಯ ।
ತಪಸಾ ಪ್ರಾಪ್ಯತೇ ಭೋಗೋ ಭಕ್ತಿರ್ಮುಕ್ತಿಶ್ಚ ಶಾಶ್ವತೀ ॥೧೪॥

ಯಿಂದ ಶಿವಲಿಂಗವನ್ನು ಅರ್ಚಿಸುತ್ತಿದ್ದನು. ಶಿವನನ್ನೇ ಸದಾ ಧ್ಯಾನಿಸುತ್ತಿದ್ದನು. ಭಸ್ಮರುದ್ರಾಕ್ಷಿಗಳನ್ನು ಧರಿಸಿದ್ದು ತಪಸ್ಸುಮಾಡುತ್ತಿದ್ದು ಹಣ್ಣುಹೂವುಪತ್ರೆಗಳಿಂದ ಶಿವಭಕ್ತರನ್ನು ಆ ವೀತಹವ್ಯನ ಮಗನಾದ ಶಿಲಾಶನನು ಸದಾಅರ್ಚಿಸುತ್ತಿದ್ದನು.॥೯॥

ಹೀಗಿರುತ್ತಿರಲು ಅನೇಕ ವರ್ಷಗಳು ಕಳೆದುವು. ಅವನಿಗೆ ಸುಂದರಿಯಾದ ಚಿತ್ರವತಿಯೆಂಬ ವಿದ್ಯಾವತಿಯಾದ ಹೆಂಡತಿಯಿದ್ದಳು. ಒಂದು ದಿನ ತನ್ನಪತಿಯಾದ ಶಿಲಾಶನನನ್ನು ಕುರಿತು ವಿನಯದಿಂದ, ॥೧೦-೧೧॥

ಚಿತ್ರವತಿಯು ಏಕಾಂತದಲ್ಲಿ ಪತಿಯನ್ನು ವಂದಿಸಿ ದೈನ್ಯದಿಂದ ಹೀಗೆಂದಳು. ಆಗ ಆಕೆಯ ಮುಖವು ದುಃಖದಿಂದ ಕಂದಿಹೋಗಿದ್ದಿತು. ॥೧೨॥

"ನಾಥನೇ, ನಾನೊಂದು ವಿಷಯವನ್ನು ವಿಜ್ಞಾಪಿಸುವೆನು. ದಯೆಯಿಟ್ಟು ಸಾವಧಾನದಿಂದ ಕೇಳು. ಹೆಂಗಸಿನ ಮಾತೆಂದು ನನ್ನ ಹಿತವಚನವನ್ನು ಅನಾದರಿಸದೇ ತಪಸ್ಸಿನಿಂದಲೇ ಅದನ್ನು ನಡೆಸಿಕೊಡು. ॥೧೩॥

ತಪಸ್ಸಿನಿಂದಲೇ ಸಕಲ ಭೋಗವೂ ಲಭಿಸುವುದು. ಭಕ್ತಿಯೂ ಅದರಿಂದ ಮುಕ್ತಿಯೂ ಉಂಟಾಗುವುವು. ತಪಸ್ಸಿನಿಂದಲೇ ಹಿಂದೆ ಮುನಿಗಳು ತಮ್ಮ ಇಷ್ಟಾರ್ಥಗಳನ್ನು ಪಡೆದಿರುವರು. ॥೧೪॥

ತಪಸಾ ಮುನಯಃ ಪೂರ್ವಂ ಲೇಭಿರೇ ವಾಂಛಿತಾನಿ ಹಿ ।
ತಪಸಾ ಪರಮೇಶಾನಂ ಶರಣಂ ವ್ರಜ ಶಂಕರಂ ॥೧೫॥

ಭಕ್ತ್ಯಾಽಽರಾಧ್ಯ ಮಹಾದೇವಂ ಕೋ ನ ಕಾಮಮವಾಪ್ನುಯಾತ್ ।
ಯಸ್ಯ ಲಿಂಗಂ ಸಮಭ್ಯರ್ಚ್ಯ ಮುನಯಸ್ತತ್ಪರೇ ಸ್ಥಿತಾಃ ॥೧೬॥

ಬ್ರಹ್ಮಾ ಬ್ರಹ್ಮತ್ವಮಾಪನ್ನೋ ಮಹೇಶಸ್ಯ ಪ್ರಸಾದತಃ ।
ವಿಷ್ಣುರ್ವಿಷ್ಣುತ್ವಮಾಪನ್ನೋ ರುದ್ರೋ ರುದ್ರತ್ವಮಾಪ್ನುಯಾತ್ ॥೧೭॥

ಇಂದ್ರಾದಯೋ ದೇವಸಂಘಾ ವಿದ್ಯಾಧರವರಾಪ್ಸರಾಃ ।
ಕಿನ್ನರಾ ಮುನಯಸ್ಸಿದ್ಧಾ ಯಕ್ಷಗಂಧರ್ವಜಾಃ ಖಗಾಃ ॥೧೮॥

ಮುನಯೋ ಮನವೋ ಯೇ ಚ ಭೂತಭವ್ಯಗ್ರಹಾ ಗಣಾಃ ।
ಅಸುರಾ ಯಕ್ಷರಕ್ಷಾಂಸಿ ದೈತ್ಯನಾಥಾಃ ಸಹಸ್ರಶಃ ॥೧೯॥

ಪ್ರಜಾನಾಂ ಪತಯಸ್ಸರ್ವೇ ರಾಜಾನೋ ಭೂರಿದಕ್ಷಿಣಾಃ ।
ಸಮಾರಾಧ್ಯೈವ ತಪಸಾ ಮಹೇಶಂ ಸರ್ವಕಾಮದಂ ॥೨೦॥

ಆದುದರಿಂದ ಪರಮೇಶ್ವರನನ್ನು ತಪಸ್ಸಿನಿಂದ ಶರಣುಹೊಂದು. ಭಕ್ತಿಯಿಂದ ಮಹಾದೇವನನ್ನು ಆರಾಧಿಸಿದರೆ ಯಾರಿಗೆ ತಾನೇ ಇಷ್ಟಾರ್ಥವು ಲಭಿಸಲಾರದು? ||೧೫||

ಆ ಮಹಾದೇವನ ಲಿಂಗವನ್ನು ಅರ್ಚಿಸಿ ಮುನಿಗಳು ಶಿವಸಾಯುಜ್ಯವನ್ನು ಪಡೆದಿರುವರು. ಬ್ರಹ್ಮನು ಬ್ರಹ್ಮಪದವಿಯನ್ನು ಪಡೆದನು, ಹರಿಯು ಪಾಲನಶಕ್ತಿಯನ್ನು ಹೊಂದಿದನು. ರುದ್ರರು ಸಂಹಾರರುದ್ರನಾದನು. ||೧೬-೧೭||

ಇಂದ್ರನೇ ಮೊದಲಾದ ದೇವತೆಗಳು, ವಿದ್ಯಾಧರರು, ಅಪ್ಸರೆಯರು, ಕಿನ್ನರರು, ಮುನಿಗಳು, ಸಿದ್ಧರು, ಯಕ್ಷರು, ಗಂಧರ್ವರು, ಮಹರ್ಷಿಗಳು, ಮನುಗಳು, ಗ್ರಹಗಳು, ಗಣಗಳು, ಅಸುರರು, ರಾಕ್ಷಸರು, ದೈತ್ಯರು, ಪ್ರಜಾಪತಿಗಳು, ದಾನಶೀಲರಾದ ರಾಜರು, ಇವರೆಲ್ಲರೂ ಸಹ ಸಕಲೇಷ್ಟಗಳನ್ನೂ ಕರುಣಿಸುವ ಶಂಕರನನ್ನು ತಪಸ್ಸಿನಿಂದ ಆರಾಧಿಸಿ ತಮ್ಮ ತಮ್ಮ ಇಷ್ಟಾರ್ಥಗಳನ್ನು ಪಡೆದರು. ಅಂತಹ ಮಹೇಶ್ವರನನ್ನು ಇಷ್ಟಾರ್ಥಸಿದ್ಧಿಗಾಗಿ ನೀನು ತಪಸ್ಸಿನಿಂದ ಆರಾಧಿಸು. ||೧೮-೧೯-೨೦||

ಲೇಭಿರೇ ವಾಂಛಿತಾನ್ಯೇವ ತಂ ಸಮಾರಾಧಯೇಶ್ವರಂ ।
ಅನಪತ್ಯತ್ವಮುಭಯೋರ್ಲೋಕಯೋರ್ಗರ್ಹಿತಂ ಖಲು ॥೨೧॥

ನಾಪುತ್ರಸ್ಯ ಹಿ ಲೋಕೋಽಸ್ತಿ ಇತಿ ಸಂಶ್ರೂಯತೇ ಶ್ರುತಿಃ ।
ಪುತ್ರೇಣ ಲೋಕಾನ್ ಜಯತಿ ಪೌತ್ರೇಣಾನಂತ್ಯಮಶ್ನುತೇ ॥೨೨॥

ಜರಾಶಿಥಿಲದೇಹೌ ಚ ತಪಸಾ ಕರ್ಶಿತಾಂಗಕೌ ।
ನ ದೃಶ್ಯತೇಽದ್ಯ ಸಂತಾನಂ ಕುಲಹೇತುಕರಂ ತವ ॥೨೩॥

ಇತ್ಥಂ ಸ ಭಾರ್ಯಾವಚಸಾ ಮುನಿರ್ದುಃಖಾದುವಾಚ ಹ ॥೨೪॥

ಕಿಂ ಮೇ ತಪಸ್ಯಭಿರತಿರ್ನಾಪುತ್ರಸ್ಸುಖಮೇಧತೇ ।
ಪುತ್ರಹೀನಸ್ಯ ಹಿ ಗೃಹಂ ಧನಧಾನ್ಯಸಮೃದ್ಧಿಮತ್ ॥೨೫॥

ಮಕ್ಕಳಿಲ್ಲದಿರುವಿಕೆಯು ಇಹಪರಗಳೆರಡರಲ್ಲೂ ನಿಂದ್ಯವಾದುದು, "ಪುತ್ರನಿಲ್ಲದವನಿಗೆ ಯಾವ ಲೋಕವೂ ಇಲ್ಲ. ಪುತ್ರನಿಂದಲೇ ಲೋಕಗಳೆಲ್ಲವನ್ನೂ ಜಯಿಸುವನು, ಪೌತ್ರ (ಮೊಮ್ಮಗ)ನಿಂದ ಮುಕ್ತಿಯನ್ನು ಪಡೆಯುವನು," ಎಂದು ವೇದವೇ ಸಾರುತ್ತಿರುವುದು. ||೨೧-೨೨||

ತಪಸ್ಸನ್ನಾಚರಿಸಿ ನಮ್ಮ ಶರೀರವು ಶಿಥಿಲವಾಗಿದೆ, ಮೇಲಾಗಿ ಮುಪ್ಪು ತಲೆದೋರಿದೆ. ಆದರೂ ಇಲ್ಲಿಯವರೆವಿಗೂ ನಿನ್ನ ವಂಶವನ್ನು ಬೆಳೆಯಿಸುವಂತಹ ಸಂತಾನವನ್ನು ನಾವು ಪಡೆಯಲಿಲ್ಲ" ||೨೩||

ಎಂದು ಹೇಳಿದ ಹೆಂಡತಿಯ ಮಾತನ್ನು ಕೇಳಿ ಶಿಲಾಶನಮುನಿಯು ದುಃಖಗೊಂಡು ಹೀಗೆ ಹೇಳಿದನು. ||೨೪||

ಎಲೌ ಪ್ರಿಯೆ, ನೀನು ಹೇಳಿದುದು ನಿಜ. ಇಷ್ಟು ದಿನಗಳಿಂದ ಮಾಡಿದ ತಪಸ್ಸಿನಿಂದ ಪ್ರಯೋಜನವೇನು? ಪುತ್ರಸಂತಾನವಿಲ್ಲದವನಿಗೆ ಸುಖವಿಲ್ಲ. ಮನೆಯು ಎಷ್ಟು ಧನಧಾನ್ಯಗಳಿಂದ ತುಂಬಿದ್ದರೂ ಪುತ್ರನೊಬ್ಬನಿಲ್ಲದಿದ್ದರೆ ಅದು ವನವೇ ಸರಿ. ಪುತ್ರನಿದ್ದರೆ ಕಾಡಾದರೂ ಅದು ಮನೆಯಂತೆ ಸಂತಸಪ್ರದವಾಗುವುದು. ||೨೫||

ಭವನಂ ತದ್ವನಂ ಪ್ರಾಹುರ್ವನಂ ಪುತ್ರ್ಯಂ ಗೃಹಾಯತೇ ।
ಪಶ್ಯೈಣಬಾಲಕಾನಂತೇ ಮಾತೃಭಿಸ್ಸಹ ಶೇರತೇ ॥೨೬॥

ಪಶ್ಯ ವಾನರನಾರ್ಯೋಽಪಿ ಕಟಿಬದ್ಧಸ್ತನಂಧಯಾಃ ।
ಪುತ್ರಪ್ರೇಮಾನ್ವಿತಾಸ್ಸರ್ವೇ ಪಕ್ಷಿಣೋ ನೀಡಮಾಶ್ರಿತಾಃ ॥೨೭॥

ದಿಶಃ ಕಣಾನ್ ಸಮಾದಾಯ ಪೋಷಯಂತಿ ಸುತಾನ್ ಸ್ವಕಾನ್ ।
ಕಿಮಪ್ರಾಪ್ಯಂ ಮಹೇಶಾರ್ಚಾನಿಯತಾನಾಂ ಶಿವಾತ್ಮನಾಂ ॥೨೮॥

ಭುಕ್ತಿಮುಕ್ತಿಪ್ರದೋ ದೇವೋ ಭಕ್ತವಶ್ಯೋ ಮಹೇಶ್ವರಃ ।
ಸಮ್ಯಗಾರಾಧಿತೋ ಭಕ್ತ್ಯಾ ಕುಲಹೇತುಕರಂ ಮಮ ॥೨೯॥

ದದಾತಿ ಪುತ್ರಮೀಶಾನಃ ಸರ್ವಸೌಭಾಗ್ಯವಾರಿಧಿಃ ।
ಮಾನೋ ಮಹಾಂತಮುನಯೋ ಇತಿ ರುದ್ರೇಷು ಗೀಯತೇ ॥೩೦॥

ನೋಡು, ಈ ತಾಯಿ ಜಿಂಕೆಗಳ ಬಳಿಯಲ್ಲಿ ಮಲಗಿರುವ ಜಿಂಕೆಮರಿಗಳನ್ನು. ಇಲ್ಲಿ ನೋಡು, ಹೆಣ್ಣು ಕಪಿಗಳೂ ಸೊಂಟಗಳಲ್ಲಿ ಮರಿಗಳನ್ನು ಕಟ್ಟಿಕೊಂಡು ಹೇಗೆ ಓಡಾಡುತ್ತಿವೆ? ॥೨೬॥

ಹಕ್ಕಿಗಳೂ ಸಹ ದಿಕ್ಕುದಿಕ್ಕುಗಳಿಂದ ಧಾನ್ಯದ ಕಾಳುಗಳನ್ನು ತಂದು ಗೂಡಿನಲ್ಲಿರುವ ತಮ್ಮ ಮರಿಗಳನ್ನು ಪ್ರೇಮದಿಂದ ಪೋಷಿಸುತ್ತಿರುವುವು. ನೋಡು. ॥೨೭॥

ಅನನ್ಯಭಕ್ತಿಯಿಂದ ಮಹೇಶ್ವರನನ್ನಾರಾಧಿಸುವವರಿಗೆ ಪಡೆಯಲಸಾಧ್ಯವಾದುದಾವುದೂ ಇಲ್ಲ. ಭಕ್ತಪರಾಧೀನನಾದ ಆ ದೇವನು ಭಕ್ತರಿಗೆ ಭೋಗಮೋಕ್ಷಗಳೆರಡನ್ನೂ ಕರುಣಿಸುವನು. ॥೨೭-೨೮॥

ಅಂತಹ ಸಕಲೈಶ್ವರ್ಯಗಳಿಗೂ ನಿಧಿಯಾದ ಪರಮೇಶ್ವರನನ್ನು ಆರಾಧಿಸಿದರೆ ಅವನು ನನಗೆ ವಂಶವನ್ನು ಬೆಳೆಸುವಂತಹ ಸುಪುತ್ರನನ್ನು ಕರುಣಿಸುವನು. ॥೨೯॥

"ಮಾನೋಮಹಾಂತಮುತಮಾನೋ ಅರ್ಭಕಂ"ಎಂದು ರುದ್ರಸೂಕ್ತಮಂತ್ರವು ಈಶ್ವರನನ್ನು ಸುಪುತ್ರಪ್ರದನೆಂದು ಸ್ತುತಿಸುವುದು. ಅಂತಹ ದೇವನನ್ನು ಭಕ್ತಿಯಿಂದ ಸ್ತುತಿಸಿದರೆ ಅವನು ಖಂಡಿತವಾಗಿ ನನ್ನ ಇಷ್ಟಾರ್ಥವನ್ನು ಈಡೇರಿಸುವನು. ॥೩೦॥

ಸ್ತೂಯತೇ ಪರಯಾ ಭಕ್ತ್ಯಾ ಸ ಮೇ ಕಾಮಂ ವಿಧಾಸ್ಯತಿ ।
ತದಾ ತಯಾ ಚಿತ್ರವತ್ಯಾ ವೈತಹವ್ಯಮಹಾಮುನಿಃ ॥೩೧॥

ಗಿರಿಮೌಳೌ ಗಿರೀಶಸ್ಯ ಲಿಂಗಮಾರಾಧಯಂಸ್ತದಾ ।
ಗೃಹೀತನಿಯಮಸ್ತತ್ರ ದಶವರ್ಷಾಣಿ ಸೋಚಿರಾತ್ ॥೩೨॥

ಭಸ್ಮಸ್ಥಂಡಿಲಮಧ್ಯಸ್ಥೋ ಭಸ್ಮರುದ್ರಾಕ್ಷಧಾರಣಃ ।
ರುದ್ರಮಾವರ್ತಯನ್ಮೌನೀ ಪಂಚಾಕ್ಷರಜಪಾದರಃ ॥೩೩॥

ವರ್ಷಂ ಶಿಲಾಶನೋ ವಿಪ್ರಃ ಫಲಮೂಲಾಂಬುಭೋಜನಃ ।
ನಿರಾಹಾರಸ್ತತೋ ವರ್ಷಂ ವರ್ಷಂ ಪವನಭೋಜನಃ ॥೩೪॥

ತಸ್ಯೈವಂ ತಪಸಾ ದೇವಸ್ತುಷ್ಟಃ ಕಷ್ಟನಿವಾರಕಃ ।
ಅಷ್ಟಮೂರ್ತಿಃ ಪುರಸ್ತಸ್ಥೌ ವೃಷಾರೂಢಃ ಸಹೋಮಯಾ ॥೩೫॥

ಹೀಗೆ ಹೇಳಿ ಆ ವೀತಹವ್ಯನ ಮಗನಾದ ಶಿಲಾಶನಮುನಿಯು ಪತ್ನಿಯಾದ ಚಿತ್ರವತಿಯೊಡನೆ ಆದೇ ಬೆಟ್ಟದ ಶಿಖರದಲ್ಲಿ ಶಿವಲಿಂಗವನ್ನಾರಾಧಿಸುತ್ತಾ ನಿಯಮದಿಂದಲೂ ಭಕ್ತಿಯಿಂದಲೂ ತಪಸ್ಸುಮಾಡಿದನು. ಹೀಗೆ ಹತ್ತುವರ್ಷಗಳು ಕಳೆದುವು. ||೩೧-೩೨||

ಭಸ್ಮದ ಆಸನದಲ್ಲಿ ಕುಳಿತು ಆ ಶಿಲಾಶನಮುನಿಯು ಭಸ್ಮ ಮತ್ತು ರುದ್ರಾಕ್ಷಗಳನ್ನು ಧರಿಸಿದವನಾಗಿ ರುದ್ರಸೂಕ್ತವನ್ನೂ ಶಿವಪಂಚಾಕ್ಷರಮಂತ್ರವನ್ನೂ ಜಪಿಸುತ್ತಾ ತಪಸ್ಸುಮಾಡಿದನು. ||೩೩||

ಆಗ ಅವನು ಒಂದು ವರ್ಷ ಹಣ್ಣು, ಗೆಡ್ಡೆಗೆಣಸುಗಳನ್ನು ಸೇವಿಸುತ್ತಾ ತಪಸ್ಸು ಮಾಡಿದನು. ಮತ್ತೊಂದುವರ್ಷ ನಿರಾಹಾರನಾಗಿ ತಪಸ್ಸು ಮಾಡಿದನು. ಮತ್ತೊಂದುವರ್ಷ ಗಾಳಿಯನ್ನು ಮಾತ್ರ ಸೇವಿಸುತ್ತಾ ಹೀಗೆ ಹತ್ತುವರ್ಷಗಳವರೆಗೆ ತಪಸ್ಸನ್ನು ಮುಂದುವರಿಸಿದನು. ||೩೪||

ಈ ರೀತಿಯಾದ ತಪಸ್ಸಿನಿಂದ ಭಕ್ತರ ಕಷ್ಟವನ್ನು ಪರಿಹರಿಸುವ ಪರಮೇಶ್ವರನು ಸಂತುಷ್ಟನಾಗಿ ನಂದಿಯನ್ನೇರಿ ಪಾರ್ವತಿಯೊಡನೆ ಅಲ್ಲಿ ಪ್ರತ್ಯಕ್ಷನಾದನು. ||೩೫||

ಗಣಗಂಧರ್ವದೇವೈಶ್ಚ ಸೇವಿತೋವಾಚ ತಂ ಪ್ರತಿ ।
ಸ್ತುವಂತಿ ಪರಿತೋ ದೇವಂ ರುದ್ರವಿಷ್ಣುಪಿತಾಮಹಾಃ ॥೩೬॥

ಜಯೇಶೇತಿ ಚ ಶರ್ವೇತಿ ತದಾ ಪ್ರಾಂಜಲಯೋ ಮುದಾ ।
ದೃಷ್ಟ್ವಾ ದೇವಂ ವಿರೂಪಾಕ್ಷಮುಷ್ಟೌಷೀಚ್ಛಕ್ತಿಭಾವನಃ ॥೩೭॥

॥ ಮುನಿರುವಾಚ ॥

ತಮೇಕರುದ್ರಮೀಶ್ವರಂ ವಿಜಾನತೋ ತಮೇಕಧಾ
ನ ಚೈವಭೇದಸಂತತಿರ್ಭಯಂ ನ ಚೈವ ತಸ್ಯ ಹಿ ।
ತಮೇಕಮೇವ ಸಂತಮುಪ್ಯನೇಕಧಾಽವದಚ್ಛ್ರುತಿಃ
ಸುರೇಂದ್ರನಾಯಕಾದಿನಾಮಭಿಸ್ತಮೇಕಮೇವ ತಂ ಭಜೇ ॥೩೮॥

ನ ದ್ವಿತೀಯಸಂಭವಂ ಮಹೇಶ್ವರಾಜ್ಜಗದ್ಗತಂ
ದ್ವಿತೀಯಕಲ್ಪನಾವಶಾದ್ಭಯಂ ಭವೇತ ತಸ್ಯ ಹಿ ।
ದ್ವಿಧೈವ ದೇಹಭೇದತೋ ಭಜೇಽದ್ಯ ಕೃಷ್ಣಪಿಂಗಲಂ
ಸುಮಂಗಳಂ ಶಿವಾಯುತಂ ದಿವಾಕರಾಂತರಂ ಸದಾ ॥೩೯॥

ಆ ದೇವನನ್ನು ಪ್ರಮಥಗಣಗಳೂ, ಗಂಧರ್ವರೂ, ದೇವತೆಗಳೂ ಸೇವಿಸುತ್ತಿದ್ದರು. ರುದ್ರ, ವಿಷ್ಣು, ಬ್ರಹ್ಮರು ಆ ಮಹಾದೇವನೆದುರಿನಲ್ಲಿ ತಲೆಬಾಗಿ ನಿಂತು "ಓ ಪರಮೇಶ್ವರ, ಜಯಿಸು. ಓ ಶರ್ವ ಸರ್ವೋತ್ಕೃಷ್ಟನಾಗಿರು" ಎಂದು ಭಕ್ತಿಯಿಂದ ಸ್ತುತಿಸುತ್ತಿದ್ದರು. ಹೀಗೆ ಪ್ರತ್ಯಕ್ಷನಾದ ಮಹಾದೇವನನ್ನು ನೋಡಿ ಶಿಲಾಶನ ಮುನಿಯು ಭಕ್ತಿಯಿಂದ ಹೀಗೆ ಸ್ತುತಿಸಿದನು. ॥೩೬-೩೭॥

"ಓ ದೇವನೇ, ಅದ್ವಿತೀಯಬ್ರಹ್ಮಸ್ವರೂಪನಾದ ನಿನ್ನನ್ನು ತಿಳಿದರೆ ಭೇದಬುದ್ಧಿಯೆಲ್ಲವೂ ನಶಿಸಿ ಭಯವೆಲ್ಲವೂ ನಾಶವಾಗುವುದು. ನೀನು ಓರ್ವನೇ ಆದರೂ ನಿನ್ನನ್ನು ವೇದವು ಉಪಾಸನಾಭೇದದಿಂದ ಸುರೇಂದ್ರನಾಯಕ ಮೊದಲಾದ ಹೆಸರುಗಳಿಂದ ಹೇಳುತ್ತಿರುವುದು. ಇಂತಹ ನಿನ್ನನ್ನು ಭಜಿಸುವೆನು. ॥೩೮॥

ಜಗತ್ತು ಮಹೇಶ್ವರನಿಂದ ಹೊರತಾಗಿ ಎರಡನೆಯದಾಗಿಲ್ಲ. ಶಿವನೋರ್ವನೇ ಯಾವಾಗಲೂ ಇರುವ ಸತ್ಯವಸ್ತು. ಎರಡನೆಯದಿಲ್ಲ. ಎರಡನೆಯದಿದ್ದರೆ ಅದರಿಂದ ಭಯವೊದಗುವುದು. "ದ್ವಿತೀಯಾದ್ವೈ ಭಯಂ ಭವತಿ" ಎಂಬ ಶ್ರುತಿಯೇ

ಗುಣತ್ರಯಾದಿದೂರಗಂ ತ್ರಿಲೋಚನಂ ತ್ರಿಮೂರ್ತಿಗಂ
ತ್ರಿಧಾಮಭೂಮನಾಮಭಿಸ್ತ್ರಿಲೋಕವಾಸಮೀಶ್ವರಂ।
ಭಜೇ ತ್ರಿಮಾತ್ರಸಂಗತಂ ತತೋಮಿತಿಶ್ರುತೀರಿತಂ
ಅಹಾವುಹಾವು ಇತ್ಯಥೋ ಸುಸಾಮವೇದಬೋಧದಂ ॥೪೦॥

ಚತುರ್ಭುಜಾಂಗದೇ ಪ್ರದಗ್ಧಭಸ್ಮಧಾರಕಂ ಭಜೇ
ಚತುಃಶ್ರುತೀಭಿರೀಡ್ಯಮಾನಪಾದುಕಂ ಪರಂ ಶಿವಂ।
ಚತುರ್ವಿಧಾರ್ಥಭೋಗದಾಯಕಂ ಚತುರ್ದಿಗಂಬರಂ
ಚತುರ್ಮುಖಸ್ತುತಂ ಶಿವಂ ಚತುರ್ಥಮದ್ವಯಂ ಸದಾ ॥೪೧॥

ಇದಕ್ಕೆ ಆಧಾರ. ಅಂದರೆ ಭಯವಿಲ್ಲದಂತಾಗಬೇಕಾದರೆ ತನ್ನ ಹೊರತು ಎರಡನೆಯ ವಸ್ತುವು ಇಲ್ಲವೆಂದು ತಿಳಿಯಬೇಕು. ಆದರೂ ಮಾಯೆಯಿಂದ ಪಾರ್ವತೀ ಪರಮೇಶ್ವರರೆಂಬೆರಡು ರೂಪವನ್ನು ಹೊಂದಿ, ಸೂರ್ಯಮಂಡಲದಲ್ಲಿ ಜಗತ್ಸಾಕ್ಷಿಯಾಗಿರುವ ನಿನ್ನನ್ನು ಸದಾ ಸ್ತುತಿಸುವೆನು. ॥೩೯॥

ಸತ್ವರಜಸ್ತಮೋಗುಣಗಳಿಗೆ ನಿಲುಕದವನಾದ ನಿರ್ಗುಣಬ್ರಹ್ಮನು ನೀನು. ಮೂರು ಕಣ್ಣುಗಳುಳ್ಳ ಮಹಾಜ್ಞಾನಿಯೂ ಜಿತೇಂದ್ರಿಯನೂ ನೀನೇ. ಬ್ರಹ್ಮವಿಷ್ಣು ಮಹೇಶ್ವರರೂಪದಿಂದ ನೀನೇ ಬ್ರಹ್ಮಲೋಕ, ವೈಕುಂಠ, ಕೈಲಾಸಗಳಲ್ಲಿ ವಾಸಿಸುವೆ. ಮೂರು ಲೋಕಗಳಲ್ಲೂ ನೀನೇ ಅಂತರ್ಯಾಮಿಯಾಗಿ ನೆಲಸಿರುವೆ. ಪ್ರಕೃತಿ, ಪುರುಷ, ಮಹತ್ತತ್ವ ಈ ಮೂರು ತತ್ವಗಳಲ್ಲೂ ಅಡಗಿರುವವನು ಇಲ್ಲವೇ ಪಂಚಭೂತಗಳಲ್ಲೂ ತೋರುವವನು ನೀನು. ಓಂಕಾರವು ನಿನ್ನ ಸ್ವರೂಪವನ್ನೇ ಹೇಳುವುದು. "ಆಹಾ ವುಹಾವು" ಎಂಬ ಸಾಮವಾಕ್ಯವು ನಿನ್ನನ್ನೇ ಸದಾ ಸ್ತುತಿಸುವುದು. ಇಂತಹ ನಿನ್ನನ್ನು ಭಜಿಸುವೆನು. ॥೪೦॥

ನಾಲ್ಕು ಭುಜಗಳಲ್ಲೂ ಲಕ್ಷಣವಾಗಿ ಭಸ್ಮವನ್ನು ಧರಿಸಿರುವ, ನಾಲ್ಕುವೇದಗಳಿಂದಲೂ ಸ್ತುತಿಸಲ್ಪಡುವ, ಪರಶಿವನಾದ, ಧರ್ಮಾರ್ಥಕಾಮಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೂ ಕರುಣಿಸುವ, ನಾಲ್ಕು ದಿಕ್ಕುಗಳೇ ಬಟ್ಟೆಯಾಗುಳ್ಳ ನಾಲ್ಕು ಮುಖಗಳುಳ್ಳ ಬ್ರಹ್ಮನಿಂದ ಸ್ತುತಿಸಲ್ಪಡುವ, ತ್ರಿಮೂರ್ತಿಗಳನ್ನು ನಿಯಮಿಸುವ ನಾಲ್ಕನೆಯ ಪರಶಿವನಾದ ಅದ್ವಿತೀಯಬ್ರಹ್ಮನಾದ ಮಹಾದೇವನನ್ನು ನಾನು ಸದಾ ಸೇವಿಸುವೆನು. ॥೪೧॥

ಭಜಾಮಿ ಕೋಶಪಂಚಕಾದಿಕಾಶಮೀಶ್ವರಂ ಪ್ರಪಂ
ಚಭೂತಸೃತ್ಸಪಂಚಬಾಣಹೃತ್ತಮೋನಿವಾರಕಂ ।
ಸುಪಂಚವರ್ಣಮಂತ್ರರೂಪಿಣಂ ಮಹಾಘಪಂಚಹಾರಿಣಂ
ನಮಶ್ಶಿವಾಯ ಮಂತ್ರತಃ ಪ್ರಸನ್ನಮೀಶ್ವರಂ ಸದಾ ॥೪೨॥

॥ ಸ್ಕಂದ ಉವಾಚ ॥

ತತ್ಸ್ತುತ್ಯಾ ಪರಯಾ ಪ್ರೀತೋ ವರೇಣೈಚ್ಛಂದಯದ್ದ್ವಿಜಂ ॥೪೩॥

॥ ಶಿವ ಉವಾಚ ॥

ವೃಣು ಕಾಮಾನ್ ವೃತಹವ್ಯ ತತ್ತೇ ಸಂಪೂರಯಾಮ್ಯಹಂ ।
ಮಹೇಶವಚಸಾ ಪ್ರಾಹ ವಿಪ್ರೋ ವಿಪ್ರಕುಲೇಶ್ವರಂ ॥೪೪॥

॥ ಮುನಿರುವಾಚ ॥

ತ್ವದ್ಭಕ್ತಿಮೇವ ಯಾಚೇಽಹಂ ಸರ್ವಕಾಮಾರ್ಥದಾಯಿನೀಂ ।
ಪುತ್ರಂ ವಂಶಕರಂ ಮೇಽದ್ಯ ದಿಶ ಶಂಭೋ ಚಿರಾಯುಷಂ ॥೪೫॥

ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯಗಳೆಂಬ ಐದು ಕೋಶಗಳಲ್ಲಿ ನೆಲಸಿರುವಂತಹ, ಪೃಥಿವೀ, ಜಲ, ತೇಜಸ್ಸು, ವಾಯು, ಆಕಾಶಗಳೆಂಬ ಐದು ಭೂತಗಳನ್ನು ನಿರ್ಮಿಸುವ, ಐದು ಬಾಣಗಳುಳ್ಳ ಮನ್ಮಥನನ್ನು ಭಸ್ಮಮಾಡಿದ, ಓಂ ನಮಃ ಶಿವಾಯ ಎಂಬ ಐದು ಅಕ್ಷರಗಳುಳ್ಳ ಮಂತ್ರದ ಸ್ವರೂಪನಾದ, ಬ್ರಹ್ಮಹತ್ಯೆ, ಗರ್ಭಹತ್ಯೆ, ಶಿಶುಹತ್ಯೆ, ಸುರಾಪಾನ, ಗುರುಪತ್ನೀಸಂಗಗಳೆಂಬ ಐದು ಮಹಾಪಾಪಗಳನ್ನೂ ಹೋಗಲಾಡಿಸುವ ಆನಂದರೂಪನಾದ ಶಿವನನ್ನು ಸದಾ ಭಜಿಸುವೆನು. ॥೪೨॥

ಶಿಲಾಶನನ ಈ ಮಹಾಸ್ತೋತ್ರದಿಂದ ಸಂತುಷ್ಟನಾಗಿ ಶಿವನು ಅವನಿಗೆ ವರವನ್ನು ಅನುಗ್ರಹಿಸುತ್ತಾ, ॥೪೩॥

"ಎಲೈ ಶಿಲಾಶನಮುನಿಯೇ, ಬೇಕಾದ ವರವನ್ನು ಕೇಳು. ಅನುಗ್ರಹಿಸುವೆನು" ಎಂದೊಡನೆಯೇ ಶಿವನ ಈ ಮಾತನ್ನು ಕೇಳಿ ಶಿಲಾಶನನು ಹೀಗೆ ಹೇಳಿಕೊಂಡನು. ॥೪೪॥

ಓ ಪರಮೇಶ್ವರ, ಮುಖ್ಯವಾಗಿ ಸಕಲೇಷ್ಟಾರ್ಥಗಳನ್ನೂ ಸಂಪಾದಿಸಿಕೊಡುವ ನಿನ್ನ ಭಕ್ತಿಯು ನನ್ನಲ್ಲಿ ನೆಲಸಿರುವಂತೆ ಅನುಗ್ರಹಿಸು. ಮತ್ತು ದೀರ್ಘಾಯುಸ್ಸುಳ್ಳ

॥ ಸೂತ ಉವಾಚ ॥

ದೇವೋ ವಿಪ್ರವಚಃ ಶ್ರುತ್ವಾ ತಮಾಹ ಪ್ರಹಸನ್ನಿವ ॥೪೬॥

॥ ಈಶ್ವರ ಉವಾಚ ॥

ವೃದ್ಧೋಽಸಿ ಸಾಂಪ್ರತಂ ಬ್ರಹ್ಮನ್ ಯಜ ಯಜ್ಞೇನ ಮಾಂ ಶಿವಂ ।
ಯಜ್ಞೇಶ್ವರಂ ವಿರೂಪಾಕ್ಷಂ ಸರ್ವದೇವಶರೀರಗಂ ॥೪೭॥

ಹಲತಃ ಕರ್ಷತೋ ಭೂಮಿಂ ಸುಪುತ್ರಸ್ತೇ ಹ್ಯಯೋನಿಜಃ ।
ಭವೇಚ್ಚ ಮತ್ಸಮೋ ವಿಪ್ರ ನಾಮ್ನಾ ತ್ವಂ ಚ ಶಿಲಾಶನಃ ॥೪೮॥

ಗಣೇಂದ್ರಶ್ಚ ಮಹಾಯೋಗೀ ಇತ್ಯುಕ್ತ್ವಾಽದರ್ಶನಂ ಗತಃ ।
ಅಂತರ್ಹಿತೇ ಮಹಾದೇವೇ ದಂಪತೀ ಹರ್ಷಿತೌ ತದಾ ॥೪೯॥

ಪ್ರಣಮ್ಯ ಸ್ವಗೃಹಂ ಯಾತೌ ಸ್ಮರಂತೌ ಶಿವಶಾಸನಂ ।
ಸಂಭೃತ್ಯ ಸರ್ವಸಂಭಾರಂ ಯಜ್ಞಾಯೈವ ಮನೋ ದಧೇ ॥೫೦॥

ನನ್ನ ವಂಶವನ್ನು ಬೆಳೆಯಿಸುವಂತಹ ಒಬ್ಬ ಸುಪುತ್ರನನ್ನು ಕರುಣಿಸು" ಎಂದು ಪ್ರಾರ್ಥಿಸಲು, ॥೪೫॥

ಮಹಾದೇವನು ಶಿಲಾಶನನ ಆ ಮಾತನ್ನು ಕೇಳಿ ನಗುತ್ತಾ ಹೀಗೆಂದನು. ॥೪೬॥

ಎಲೈ ಬ್ರಾಹ್ಮಣೋತ್ತಮನೇ, ನೀನು ಮುದುಕನಾಗಿರುವೆ. ವಯೋನುಗುಣವಾಗಿ ನಿನಗೆ ಮಕ್ಕಳಾಗಲಾರದು. ಆದುದರಿಂದ ಯಜ್ಞವನ್ನು ಮಾಡು. ಆ ಯಜ್ಞದಲ್ಲಿ ಯಜ್ಞಪತಿಯೂ ಸರ್ವದೇವಸ್ವರೂಪನೂ ಆದ ನನ್ನನ್ನು ಆರಾಧಿಸು. ನಿನ್ನ ಇಷ್ಟಾರ್ಥವು ಈಡೇರುವುದು. ॥೪೭॥

ಯಜ್ಞಾಂಗವಾಗಿ ನೇಗಿಲಿನಿಂದ ನೀನು ಉಳುತ್ತಿರುವಾಗ ಗರ್ಭದಿಂದ ಜನಿಸದಂತಹ ಓರ್ವ ಅಯೋನಿಜ ಪುತ್ರನು ನಿನಗೆ ಲಭಿಸುವನು. ಅವನು ಗುಣಗಳಲ್ಲಿ ನನಗೆ ಸಮನಾಗಿರುವನು. ನೀನೂ ಶಿಲಾಶನನೆಂದು ಪ್ರಸಿದ್ಧಿಹೊಂದಿ ಮಹಾಯೋಗಿಯಾಗಿ ನನ್ನ ಪ್ರಮಥಗಣಗಳಿಗೆ ನಾಯಕನಾಗುವೆ" ಎಂದು ಹೇಳಿ ಶಿವನು ಅಲ್ಲಿಯೇ ಅಂತರ್ಧಾನನಾದನು. ॥೪೮॥

ಶಿವನು ಹೀಗೆ ಅಂತರ್ಧಾನನಾಗಲು ಶಿಲಾಶನ ದಂಪತಿಗಳು ಸಂತುಷ್ಟರಾಗಿ ಆ ದೇವದೇವನನ್ನು ವಂದಿಸಿ ತಮ್ಮ ಮನೆಗೆ ತೆರಳಿದರು. ಅಲ್ಲಿ ಶಿವನಪ್ಪಣೆಯಂತೆ

ಇತ್ಥಂ ಶಂಕರವಾಕ್ಯತಃ ಪ್ರಮುದಿತೋ ಪತ್ನ್ಯಾ ಮುನಿಃ ಸ್ವಂ ಗೃಹಂ
ಯಾತಃ ಪಾತಕವರ್ಜಿತೋನ್ನತಮತಿರ್ಯಜ್ಞಾಯ ದಧ್ರೇ ಮನಃ ।
ಪುಣ್ಯೈರ್ವಿಪ್ರವರೈರ್ಗಿರೀಂದ್ರತಟಿನೀತೀರೇ ಪವಿತ್ರೇ ತದಾ
ಶಾಲಾಂ ಶೀಲಯದಗ್ನಿಷು ದ್ವಿಜಯುತೋ ಜುಹ್ವನ್ನೃಷೀನ್ನಿಶಾಃ ॥೫೧॥

ಇತಿ ಶ್ರೀಶಿವರಹಸ್ಯೇ ಶಿವಚತುರ್ಥಾಂಶೇ ಶಿಲಾಶನತಪಶ್ಚರ್ಯಾ
ಶಿವಪ್ರಸಾದವರ್ಣನಂ ನಾಮ ತೃತೀಯೋಽಧ್ಯಾಯಃ

ಎಲ್ಲ ಸಾಮಗ್ರಿಗಳನ್ನೂ ಸಿದ್ಧಪಡಿಸಿಕೊಂಡು ಯಜ್ಞಮಾಡಲು ಸಿದ್ಧರಾದರು. ||೪೯-೫೦||

ಹೀಗೆ ಶಂಕರನ ಅಪ್ಪಣೆಯಿಂದ ಸಂತುಷ್ಟನಾಗಿ ಮನೆಗೆ ತೆರಳಿದ ಶಿಲಾಶನ ಮುನಿಯು ಯಜ್ಞಕ್ಕಾಗಿ ಸಿದ್ಧನಾದನು. ಅಲ್ಲಿಯೇ ಹರಿಯುತ್ತಿದ್ದ ಗಿರಿನದಿಯ ಪವಿತ್ರ ತೀರದಲ್ಲಿ ಬ್ರಾಹ್ಮಣರ ಸಲಹೆಯಂತೆ ಯಜ್ಞಶಾಲೆಯನ್ನು ನಿರ್ಮಿಸಿ, ಅದರಲ್ಲಿ ಅಗ್ನಿಯನ್ನು ಪ್ರತಿಷ್ಠಿಸಿ ಯಜ್ಞಮಾಡ ತೊಡಗಿದನು ಎಂದು ಕುಮಾರಸ್ವಾಮಿಯು ಜೈಗೀಷವ್ಯಾದಿಗಳಿಗೆ ಶಿಲಾದನ ವೃತ್ತಾಂತವನ್ನು ವಿವರಿಸಿದನು. ||೫೧||

ಇಲ್ಲಿಗೆ ಶ್ರೀ ಶಿವರಹಸ್ಯದ ಶಿವಚತುರ್ಥಾಂಶದಲ್ಲಿ ಮೂರನೆಯ ಅಧ್ಯಾಯವು
ಮುಗಿದುದು.

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಚತುರ್ಥೋಽಧ್ಯಾಯಃ

|| ಜೈಗೀಷವ್ಯ ಉವಾಚ ||

ಕಥಂ ಸಮಭವತ್ತಸ್ಯ ಪುತ್ರೋಽನಲ್ಪಪರಾಕ್ರಮಃ ।
ಶ್ವೈತಹವ್ಯಸ್ಯ ಯಜತಃ ಪರಮೇಶ್ವರತುಷ್ಟಯೇ ॥೧॥

ಮಾಲವಾದ್ರೌ ಮುನಿಗಣೈಸ್ತನ್ಮೇ ಕಥಯ ವಿಸ್ತರಾತ್ ॥೨॥

|| ಸೂತ ಉವಾಚ ||

ಇತಿ ತದ್ವಚನಂ ಶ್ರುತ್ವಾ ತಮುವೋಚತ್ ಷಡಾನನಃ ।
ಶ್ವೈತಹವ್ಯಸುತಾವಾಪ್ತಿಂ ಯಜ್ಞಂ ತಸ್ಯ ಶಿವಪ್ರಿಯಂ ॥೩॥

ನಾಲ್ಕನೆಯ ಅಧ್ಯಾಯ

ಮತ್ತೆ ಜೈಗೀಷವ್ಯಮುನಿಯು ಹೀಗೆ ಪ್ರಶ್ನಿಸಿದನು – ಓ ಕುಮಾರ ಸ್ವಾಮಿಯೇ, ಹಾಗೆ ಮಾಲವಗಿರಿಯಲ್ಲಿ ಮುನಿಗಳೊಡನೆ ಶಿಲಾಶನಮುನಿಯು ಶಿವನ ಪ್ರೀತ್ಯರ್ಥವಾಗಿ ಯಜ್ಞಮಾಡುತ್ತಲಿರಲು ಮುಂದೆ ಹೇಗೆ ಆವನಿಗೆ ಮಹಾ ಪರಾಕ್ರಮಿಯಾದ ಪುತ್ರನು ಲಭಿಸಿದನು. ಈ ಸಮಾಚಾರವನ್ನು ವಿಸ್ತಾರವಾಗಿ ಹೇಳು. ||೨||

ಜೈಗೀಷವ್ಯನ ಆ ಮಾತನ್ನು ಕೇಳಿ ಕುಮಾರಸ್ವಾಮಿಯು ಆ ಮುನಿಗೆ ಶಿಲಾಶನನು ಮಾಡಿದ ಯಾಗದ ವೈಭವವನ್ನೂ, ಅವನಿಗೆ ಪುತ್ರನು ಲಭಿಸಿದು ದನ್ನೂ ಹೇಳಿದನೆಂದು ಸೂತರು ಮುನಿಗಳಿಗೆ ಉಸುರಿದರು. ||೩||

॥ ಸ್ಕಂದ ಉವಾಚ ॥

ವೈಖಾನಸೈರ್ವಾಲಖಿಲ್ಯೈರ್ಭರ್ಗಗರ್ಗಕುಲೋದ್ಭವೈಃ ।
ಮುನಿಭಿಸ್ಸ ಮುನಿಶ್ರೇಷ್ಠೋ ಋತ್ವಿಗ್ಭೂತೈರ್ಗಿರೌ ತದಾ ॥೪॥

ಚತೂರಾತ್ರಂ ಪುರಾರಾತಿಪ್ರಸಾದಾಯ ಸಮಾರಭತ್ ।
ದೀಕ್ಷಯಾಮಾಸ ತಂ ಧೌಮ್ಯೋ ಬ್ರಹ್ಮಾ ತಸ್ಯಾಭವತ್ಕುಣಿಃ ॥೫॥

ಭಾರ್ಗವಶ್ಚಾಭವದ್ಧೋತಾ ಉದ್ಗಾತಾ ತತ್ರ ತುಂಬುರುಃ ।
ಸದಸ್ಯಶ್ಚಾಮಮಿತ್ರೋಽಭೂತ್ಪ್ರವರ್ಗ್ಯೈರುಪಸನ್ಮುಖೈಃ ॥೬॥

ಸ ತದಾ ವವೃಧೇ ಯಜ್ಞೋ ವಿಶ್ವೇಶೇನಾನುಮೋದಿತಃ ।
ಲೇಖಮೋದೈಕಜನಕಃ ಸ್ವಾದ್ವನ್ನೋ ಬಹುದಕ್ಷಿಣಃ ॥೭॥

ತಸ್ಯ ತತ್ರ ಮಹಾವಿಪ್ರೈಃ ಕೃಷತೋ ಯಜ್ಞಭೂತಲಂ ।
ಋತ್ವಿಗ್ಭಿರ್ಲಾಂಗಲೇನೈವ ತತಸ್ಸೀತಾಮುಖೋತ್ಥಿತಾಂ ॥೮॥

ವೈಖಾನಸರು, ವಾಲಖಿಲ್ಯರು, ಭರ್ಗಗೋತ್ರದವರು, ಗರ್ಗಗೋತ್ರದವರು — ಮೊದಲಾದ ಮುನಿಗಳನ್ನು ಋತ್ವಿಜರನ್ನಾಗಿ ಮಾಡಿಕೊಂಡು ಆ ಶಿಲಾಶನ ಮುನಿಯು ಶಿವನ ಪ್ರೀತ್ಯರ್ಥವಾಗಿ ನಾಲ್ಕು ದಿನ ನಡೆಯುವ ಚತೂರಾತ್ರವೆಂಬ ಯಾಗವನ್ನು ಪ್ರಾರಂಭಿಸಿದನು. ॥೪॥

ಧೌಮ್ಯಮುನಿಯು ಅಧ್ವರ್ಯುವಾಗಿ ಆ ಶಿಲಾಶನಮುನಿಗೆ ಯಜ್ಞದೀಕ್ಷೆಯನ್ನು ಕೊಟ್ಟನು. ಕುಣಿಯೆಂಬ ಮುನಿಯು ಬ್ರಹ್ಮನಾದನು. ಭಾರ್ಗವ ಮುನಿಯು ಹೋತೃವಾದನು. ತುಂಬುರುನಾರದನು ಉದ್ಗಾತೃವಾದನು. ಚಾಮ ಮಿತ್ರನೆಂಬ ಮುನಿಯು ಸದಸ್ಯನಾದನು. ಜೊತೆಗೆ ಪ್ರವರ್ಗ್ಯ ಉಪಸತ್ತುಗಳು ಸೇರಿದ್ದರು. ॥೫-೬॥

ಶಿವನಿಂದ ಅನುಮೋದಿಸಲ್ಪಟ್ಟ ಆ ಯಾಗದಲ್ಲಿ ಶಿಲಾಶನನು ಋತ್ವಿಜರಿಗೆ ಹೇರಳವಾಗಿ ದಕ್ಷಿಣೆಯನ್ನು ಕೊಟ್ಟನು. ರುಚಿಯಾದ ಭಕ್ಷ್ಯಭೋಜ್ಯಗಳಿಂದ ಸಾವಿರಾರು ಜನರಿಗೆ ಭೋಜನಮಾಡಿಸಿದನು. ಅಲ್ಲಿ ಸೇರಿದವರೆಲ್ಲರೂ ಸಂತುಷ್ಟರಾದರು. ॥೭॥

ಆಮೇಲೆ ಆ ಶಿಲಾಶನನು ಋತ್ವಿಜರಿಂದ ಯಜ್ಞಭೂಮಿಯನ್ನು ನೇಗಿಲಿನ ಸಹಾಯದಿಂದ ಉಳಿಸಿದನು. ಆಗ ನೇಗಿಲಿನ ದಾರಿಯಲ್ಲಿ ಒಂದು ಬಾಯಿ

ಮಂಜೂಷಾಂ ಪಿಹಿತಾಂ ತತ್ರ ಭೂಮಿಸ್ಥಾಂ ಸಂದದರ್ಶ ಹ ।
ಹಿರಣ್ಮಯೀಂ ದ್ಯುತಿಮತೀಂ ನೈತಹವ್ಯೋ ದ್ವಿಜೈಸ್ಸಹ ॥೯॥

ತಾಂ ಗೃಹೀತ್ವಾ ಸದೋಮಧ್ಯಮಾಜಗಾಮ ಮಹಾಮುನಿಃ ।
ಉತ್ಪಾಟ್ಯ ದರ್ಶಯಾಂಚಕ್ರೇ ಸರ್ವೇಷಾಂ ಶರ್ವತೋಷಕೃತ್॥೧೦॥

ತತ್ರಾ್ಕ ಸಮನ್ವಿತಸ್ತತ್ರ ಬಾಲಮುತ್ತಾನಶಾಯಿನಂ ।
ಪೂರ್ಣಚಂದ್ರಪ್ರತೀಕಾಶಂ ದ್ವಿಭುಜಂ ಭೂಷಣಾನ್ವಿತಂ ॥೧೧॥

ತಂ ಗೃಹೀತ್ವಾಽಥ ಪರ್ಯಂಕೇ ನಿವೇಶ್ಯಾಪ್ತಮನೋರಥಃ ।
ಪತ್ರಾ್ಕ ಋತ್ವಿಗ್ವರೈಸ್ತತ್ರ ಶಿವದತ್ತೋಽಯಮಿತ್ಯುತ ॥೧೨॥

ತದಾ ಬ್ರಹ್ಮಾದಯೋ ದೇವಾ ಇಂದ್ರಾದ್ಯಾಸ್ಸಮರುದ್ಗಣಾಃ ।
ವಿದ್ಯಾಧರಾಶ್ಚ ಗಂಧರ್ವಾ ಯಕ್ಷಕಿಂಪುರುಷಾದಯಃ ॥೧೩॥

ಮುಚ್ಚಿದ್ದ ಪ್ರಕಾಶಮಾನವಾದ ಚಿನ್ನದ ಪೆಟ್ಟಿಗೆಯು ಸಿಕ್ಕಿತು. ಆ ಪೆಟ್ಟಿಗೆಯನ್ನು ಮೇಲಕ್ಕೆ ತೆಗೆಯಿಸಿದನು. ॥೮-೯॥

ಆ ಪೆಟ್ಟಿಗೆಯನ್ನು ತೆಗೆದುಕೊಂಡು ಶಿಲಾಶನಮುನಿಯು ಋತ್ವಿಜರ ಸಭೆಗೆ ಬಂದು, ಅದರ ಬಾಗಿಲನ್ನು ತೆಗೆದು ಎಲ್ಲರಿಗೂ ತೋರಿಸಿದನು. ॥೧೦॥

ಅದರಲ್ಲಿ ಓರ್ವ ಬಾಲಕನು ಮೇಲ್ಮುಖನಾಗಿ ಮಲಗಿದ್ದನು. ಅವನು ಅನೇಕ ಆಭರಣಗಳಿಂದ ಕೂಡಿದ್ದು ಪೂರ್ಣಚಂದ್ರನಂತೆ ಬೆಳಗುತ್ತಿದ್ದನು. ॥೧೧॥

ಆ ಬಾಲಕನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಋತ್ವಿಜರಿಗೆ ತೋರಿಸುತ್ತಾ, "ಇವನು ಶಿವನು ನನಗೆ ಅನುಗ್ರಹಿಸಿದ ಬಾಲನು" ಎಂದು ಹೇಳಿ ತನ್ನ ಇಷ್ಟಾರ್ಥವು ಪೂರ್ತಿಯಾದುದಕ್ಕಾಗಿ ಸಂತಸಗೊಂಡನು. ॥೧೨॥

ಆಗ ಬ್ರಹ್ಮ, ಇಂದ್ರ ಮೊದಲಾದ ದೇವತೆಗಳೂ, ವಿದ್ಯಾಧರರೂ, ಗಂಧರ್ವರೂ, ಯಕ್ಷರೂ, ಕಿಂಪುರುಷರೂ, ನಾರದನೇ ಮೊದಲಾದ ಮುನಿಗಳೂ ಸಹ ಆ ಬಾಲಕನಿಗೆ ಮಂಗಳವನ್ನು ಹಾರೈಸಿದನು. ॥೧೩॥

ಮುನಯಶ್ಚ ತಥೈವಾನ್ಯೇ ನಾರದಾದ್ಯಾ ಜಗುಃ ಕಲಂ ।
ವವರ್ಷ ವಾಸವಃ ಪುಷ್ಪೈರ್ಮೇಘಗರ್ಭಸಮುದ್ಭವೈಃ ॥೧೪॥

ದೇವತೂರ್ಯಾಣ್ಯವಾದ್ಯಂತ ಯಜ್ಞವಾಟೇ ಮುನೇಸ್ತದಾ ।
ಚಿತ್ರವತ್ಯಪಿ ಸ್ವಸ್ತನ್ಯಂ ಪಾಯಯತ್ಪ್ರಸ್ರುತಂ ತದಾ ॥೧೫॥

ಜಾತೇಷ್ಟಪ್ರಮುಖಾಸ್ತತ್ರ ಕ್ರಿಯಾಶ್ಚಕ್ರುರ್ಮುನೀಶ್ವರಾಃ ।
ಅಷ್ಟಮೂರ್ತಿಮಯಾನ್ ದೇವಾನ್ ಯಜನ್ನಷ್ಟಾಕಪಾಲತಃ ॥೧೬॥

ಗೋಧನಾನಿ ಚ ಧಾನ್ಯಾನಿ ಪ್ರಾದಾದ್ವಿಪ್ರೇಷು ಹರ್ಷಿತಃ ।
ಬ್ರಹ್ಮೇಂದ್ರಪ್ರಮುಖಾನ್ ದೇವಾನ್ ಪೂಜಯಾಮಾಸ ವೈ ಮುನಿಃ ॥೧೭॥

ತಮಾಹ ವಿಧಿರಿಂದ್ರೇಣ ಶಿಲಾಶನಮುನೇಸ್ಸುತಂ ॥೧೮॥

॥ ಬ್ರಹ್ಮೋವಾಚ ॥

ಸರ್ವಾನಂದಮಯೋ ಯಸ್ಮಾತ್ ನಂದೀಶಾಖ್ಯಾಮವಾಪ್ಯ ತಾಂ ।
ನಾಮ ಚಕ್ರುರ್ಮುನಿಗಣಾಃ ಶೈಲಾದಿರಿತಿ ಚಾಪರೇ ॥೧೯॥

ಇಂದ್ರನು ಮೇಘಮಧ್ಯದಿಂದ ಹೂಮಳೆಯನ್ನು ಸುರಿಸಿದನು. ದೇವವಾದ್ಯಗಳು ಆಗ ಬಾರಿಸಲ್ಪಟ್ಟುವು. ನಾರದಮುನಿಗಳು ಇಂಪಾಗಿ ಹಾಡಿದರು. ॥೧೪॥

ಚಿತ್ರವತಿಯೂ ಹಾಲು ತುಂಬಿದ ತನ್ನ ಸ್ತನವನ್ನು ಮಗುವಿಗೆ ಉಣಿಸಿದಳು. ಜಾತಕರ್ಮ ಮೊದಲಾದ ಕ್ರಿಯೆಗಳನ್ನು ವಿಪ್ರರು ಶಿಶುವಿಗಾಗಿ ಮಾಡಿಸಿದರು. ॥೧೫॥

ಅಷ್ಟಮೂರ್ತಿಸ್ವರೂಪರಾದ ದೇವತೆಗಳನ್ನು ಶಿಲಾಶನನು ಅಷ್ಟಾಕಪಾಲವೆಂಬ ಇಷ್ಟಿಯಿಂದ ಸಂತೋಷಗೊಳಿಸಿದನು. ಗೋವುಗಳನ್ನೂ, ಧಾನ್ಯಗಳನ್ನೂ ಬ್ರಾಹ್ಮಣರಿಗೆ ವಿಶೇಷ ದಾನಮಾಡಿದನು. ॥೧೬॥

ಬ್ರಹ್ಮ, ಇಂದ್ರ ಮೊದಲಾದ ದೇವವರ್ಯರನ್ನು ಶಿಲಾಶನನು ಆದರದಿಂದ ಪೂಜಿಸಿದನು. ಆಗ ಬ್ರಹ್ಮನು ಆ ಮುನಿಯನ್ನು ಕುರಿತು ಹೀಗೆ ಹೇಳಿದನು. ॥೧೭-೧೮॥

ಈ ಬಾಲಕನು ನೋಡಿದೊಡನೆ ಆನಂದವನ್ನುಂಟುಮಾಡುತ್ತಲಿರುವುದರಿಂದ ಈತನು "ನಂದೀಶ" ನೆಂಬ ಹೆಸರನ್ನು ಹೊಂದಲಿ ಎಂದನು. ಶಿಲಾದಪುತ್ರನಾದುದರಿಂದ "ಶೈಲಾದಿ" ಯೆಂಬ ಮತ್ತೊಂದು ಹೆಸರನ್ನೂ ಮುನಿಗಳಿಟ್ಟರು. ॥೧೯॥

ಅನುಜ್ಞಾಪ್ಯ ಸುರಾನ್ ಸರ್ವಾನ್ ಸಂಪೂಜ್ಯ ಮುನಿಸತ್ತಮಾನ್ ।
ಸಮಾಪ್ಯ ಯಜ್ಞಶೇಷಂ ಚ ವಿಶ್ರಾಣ್ಯ ಬಹುದಕ್ಷಿಣಾಃ ॥೨೦॥

ಗಾವಶ್ಚಾನ್ನಂ ತಥಾ ವಾಸೋ ಯಯೌ ಸಾಗ್ನಿಸುತೋ ಗೃಹಾನ್ ।
ವಿಪ್ರಾನುಮೋದಿತಃ ಪತ್ನ್ಯಾ ವೈತಹವ್ಯೋ ನಿಜಾಶ್ರಮೇ ॥೨೧॥

ಪುತ್ರಂ ವೀಕ್ಷ್ಯೇಂದುಸಂಕಾಶಂ ವರ್ಧಮಾನಂ ದಿನೇ ದಿನೇ ।
ಜಾತಹರ್ಷೌ ತದಾ ತತ್ರ ದಂಪತೀ ಶಿವಭಾವಿತೌ ॥೨೨॥

ತಂ ವಿದ್ಯಾ ಗ್ರಾಹಯಾಮಾಸ ಚತುಷ್ಷಷ್ಟಿಕಲಾತ್ಮಿಕಾಃ ।
ಕಲಾಧರೋರುಚೂಡಸ್ಯ ಪ್ರಸಾದಾದೇವ ಸೋಽಗ್ರಹೀತ್ ॥೨೩॥

ವಿಶ್ವಾನಂದಮಯೇ ಬಾಲೇ ತಸ್ಮಿನ್ನೇವಂ ಸ್ಥಿತೇ ಸತಿ ।
ವರ್ಧಮಾನೇ ಪಿತುರ್ಮಾತುಃ ಪ್ರೀತ್ಯೈ ಚಂದ್ರಕಲೇವ ತಂ ॥೨೪॥

ಉಪನಾಯ್ಯ ಚ ತಂ ಕಾಲೇ ಶಾಲಂಕಾಯನಗೋತ್ರಜಂ ।
ಮುನಿಭಿರ್ವಿನಯೋಪೇತಂ ವೇದಾನಧ್ಯಾಪಯತ್ಕ್ರಮಾತ್ ॥೨೫॥

ಆಮೇಲೂ ಶಿಲಾಶನನು ದೇವತೆಗಳೆಲ್ಲರನ್ನೂ ಬೀಳ್ಕೊಟ್ಟು, ಉಳಿದ ಯಜ್ಞಶೇಷವನ್ನು ಮುಗಿಸಿ, ಬ್ರಾಹ್ಮಣರಿಗೆ ಗೋವು ಅನ್ನವಸ್ತ್ರಗಳನ್ನು ದಾನಮಾಡಿ ಆ ಬಾಲಕ ಮತ್ತು ಅಗ್ನಿಗಳೊಡನೆ ಮನೆಗೆ ಬಂದನು. ॥೨೦॥

ಯಜ್ಞಕ್ಕೆ ಬಂದ ಬ್ರಾಹ್ಮಣೋತ್ತಮರನ್ನು ಬೀಳ್ಕೊಟ್ಟು ಶಿಲಾಶನಮುನಿಯು ತನ್ನ ಆಶ್ರಮದಲ್ಲಿ ವಾಸಿಸತೊಡಗಿದನು. ಅಲ್ಲಿ ಆ ಮುನಿದಂಪತಿಗಳು ಶುಕ್ಲಪಕ್ಷದ ಚಂದ್ರನಂತೆ ದಿನದಿನವೂ ಬೆಳೆಯುತ್ತಲಿರುವ ಆ ಬಾಲಕನನ್ನು ನೋಡಿ ತುಂಬಾ ಆನಂದದಿಂದ ಕೂಡಿ ಸದಾ ಶಿವನನ್ನು ಸ್ಮರಿಸುತ್ತಿದ್ದರು. ॥೨೧-೨೨॥

ತಕ್ಕ ಸಮಯದಲ್ಲಿ ಶಿಲಾಶನನು ಆ ಬಾಲಕನಿಗೆ ಅರವತ್ತುನಾಲ್ಕು ಕಲೆಗಳನ್ನು ಗುರುಗಳಿಂದ ಹೇಳಿಸಿದನು. ಕಲಾಧರನಾದ ಶಿವನ ಅನುಗ್ರಹದಿಂದ ಆ ಕುಮಾರನು ಸಕಲ ಕಲೆಗಳನ್ನೂ ಅನಾಯಾಸವಾಗಿ ಕಲಿತನು. ॥೨೩॥

ಆ ನಂದೀಶಕುಮಾರನು ಹಾಗೆ ಎಲ್ಲರಿಗೂ ಆನಂದವನ್ನುಂಟುಮಾಡುತ್ತಾ ಚಂದ್ರಕಲೆಯಂತೆ ಬೆಳೆಯುತ್ತಿರಲು, ಅವನಿಗೆ ತಕ್ಕ ವಯಸ್ಸಿನಲ್ಲಿ ಶಿಲಾಶನ

ಸೋಽಗೃಹ್ಣಾಚ್ಚತುರೋ ವೇದಾನ್ ಸಷಡಂಗಪದಕ್ರಮಾನ್ ।
ಈಶದತ್ತಾನ್ ಪುರೋ ವೇಧಾಶ್ಚತುರ್ವಕ್ತ್ರೈರ್ಯಥಾಽಗ್ರಹೀತ್ ॥೨೬॥

ತಥಾಯಂ ವೇದಸಾರಜ್ಞೋ ಹ್ಯಭವದ್ಭವಪೂಜಕಃ ।
ತಮುಪಾದಿಶ್ಯ ಸನ್ಮಂತ್ರಂ ಪಂಚಾಕ್ಷರಮಸೌ ಪಿತಾ ॥೨೭॥

ಸಮುಪಾದಿಶ್ಯ ಲಿಂಗಾರ್ಚಾಂ ಭಸ್ಮರುದ್ರಾಕ್ಷಭೂಷಿತಂ ।
ಅನುಶಾಸ್ಯಾಥ ಧರ್ಮೇಷು ಗುರುವೃತ್ತೋ ಭವೇತಿ ತಂ ॥೨೮॥

ಪಿತರೌ ಪರಮಾನಂದಹೃತ್ಸಾಗರತರಂಗಕೈಃ ।
ಪೂರ್ಣೌ ಪುತ್ರಾನನೇಂದೂತ್ಥದರ್ಶನಾನಂದಮೇದುರೌ ॥೨೯॥

ಮುನಿಯು ತನ್ನ ಶಾಲಂಕಾಯನಗೋತ್ರಕ್ಕನುಸಾರವಾಗಿ ಉಪನಯನಮಾಡಿದನು. ಆಮೇಲೆ ಮುನಿಗಳಿಂದ ಅವನಿಗೆ ವೇದಾಧ್ಯಯನವನ್ನು ಮಾಡಿಸಿದನು. ||೨೪-೨೫||

ಆಗ ಆ ಕುಮಾರನು ನಾಲ್ಕು ವೇದಗಳನ್ನೂ ಅವುಗಳ ಪದ ಕ್ರಮ ಘನಗಳನ್ನೂ ವೇದಾಂಗಗಳನ್ನೂ ಸುಲಭವಾಗಿ ಅಭ್ಯಾಸಮಾಡಿದನು. ಮತ್ತು ಹಿಂದೆ ಪರಮೇಶ್ವರನು ಉಪದೇಶಿಸಿದ ವೇದಗಳನ್ನು ಬ್ರಹ್ಮನು ನಾಲ್ಕು ಮುಖಗಳಿಂದ ಧರಿಸಿ ವೇದಸಾರಜ್ಞನಾದಂತೆ ಇವನೂ ವೇದಸಾರವೆಲ್ಲವನ್ನೂ ತಿಳಿದವನಾದನು. ಮತ್ತು ಶಿವಭಕ್ತಿಯುಕ್ತನಾದನು. ||೨೬||

ಶಿವಪಂಚಾಕ್ಷರಮಂತ್ರವನ್ನು ಭಸ್ಮರುದ್ರಾಕ್ಷಿಗಳಿಂದ ಭೂಷಿತನಾದ ಆ ಕುಮಾರನಿಗೆ ಉಪದೇಶಿಸಿದನು. ಮತ್ತು ಲಿಂಗಾರ್ಚನೆಯ ಕ್ರಮವನ್ನು ಉಪದೇಶಿಸಿ ಹೇಗೆ ಧರ್ಮವನ್ನು ಆಚರಿಸಬೇಕು ಎಂಬುದನ್ನೂ ಬೋಧಿಸಿದನು. ||೨೭-೨೮||

ಶಿಲಾಶನದಂಪತಿಗಳು ತಮ್ಮ ಕುಮಾರನ ಪ್ರೀತಿದಾಯಕವಾದ ನಡತೆಯನ್ನೂ ಆನಂದಮಯವಾದ ಮುಖವನ್ನೂ ನೋಡಿ ಸಂತಸದಿಂದ ಸದಾ ನಲಿಯುತ್ತಿದ್ದರು. ||೨೯||

ಸೋಽಪಿ ವಿಪ್ರಸುತೈಸ್ಸಾರ್ಧಂ ಸದಾ ಗುರುಕುಲೇ ವಸನ್ ।
ವಿದ್ಯಾ ವೇದಾಗಮಾಸ್ಸರ್ವೇ ಜಗೃಹೇ ಗುರುಸೇವಯಾ ॥೩೦॥

ಗುರುಗೇಹೇ ವಸನ್ನಂದೀ ದ್ವಾದಶಾಬ್ದಂ ಶಿವಾರ್ಚಕಃ ।
ತಸ್ಯಾರ್ಚತೋ ಮಹೇಶಾನಂ ಸಹಾಧ್ಯಾಯಕುಮಾರಕಾಃ ॥೩೧॥

ಫಲಾನಿ ಪುಷ್ಪಾಣ್ಯಾಜಹ್ರುಃ ಸ್ವಾದೂನಿ ವಿಮಲಾನಿ ಚ ।
ಬಿಲ್ವಪತ್ರಾಣಿ ಚಾಪ್ಯನ್ಯೇ ಭಸ್ಮರುದ್ರಾಕ್ಷಭೂಷಣಾಃ ॥೩೨॥

ಸಂಪೂಜ್ಯ ಪರಮೇಶಾನಂ ಸ್ತುವನ್ನಿತ್ಥಮವರ್ತತ ॥೩೩॥

॥ ನಂದಿಕೇಶ ಉವಾಚ ॥

ವಿಧಿತುಂಗಕಪಾಲಮಾಲಜಾಲಂ
ಸುರಸಾಲಾಯಿತಬಾಹುಧೃಕ್ತ್ರಿಶೂಲಂ ।
ಗರನೀಲಗಲಂ ಕಲೇಶಮೌಲಿಂ
ಭಜ ಕಂಕಾಲಶಿವಂ ಕೃಪಾಲವಾಲಂ ॥೩೪॥

ಆ ಶಿಲಾದಿಕುಮಾರನೂ ಸಹ ಬ್ರಾಹ್ಮಣವಟುಗಳೊಡನೆ ಸದಾ ಗುರುಕುಲದಲ್ಲಿ ವಾಸಿಸುತ್ತಾ ವೇದಾನುಸಾರಿಯಾದ ವಿದ್ಯೆಯೆಲ್ಲವನ್ನೂ ಗುರುಸೇವೆಯಿಂದ ಕಲಿತನು. ॥೩೦॥

ಗುರುಕುಲದಲ್ಲಿ ಶಿವನನ್ನರ್ಚಿಸುತ್ತಾ, ವಿದ್ಯಾಭ್ಯಾಸಮಾಡುತ್ತಾ ಹನ್ನೆರಡು ವರ್ಷಗಳವರೆಗಿದ್ದನು. ಆಗ ಅವನ ಪೂಜೆಗೆ ಸಹಪಾಠಿಗಳು ಹೂವು ಹಣ್ಣುಗಳನ್ನೂ ಬಿಲ್ವಪತ್ರಗಳನ್ನೂ ತಂದುಕೊಟ್ಟು ತಾವೂ ರುದ್ರಾಕ್ಷಿಭಸ್ಮಗಳನ್ನು ಧರಿಸುತ್ತಾ ಸಹಕರಿಸುತ್ತಿದ್ದರು. ॥೩೧-೩೨॥

ಶಿವನನ್ನು ಪೂಜಿಸಿ ಆ ನಂದಿಯು ಆಗಾಗ ಹೀಗೆ ಸ್ತುತಿಸುತ್ತಿದ್ದನು. ॥೩೩॥

"ಬ್ರಹ್ಮನ ಮಹಾಕಪಾಲವನ್ನು ಧರಿಸಿದವನೂ, ಆಲದಮರದ ಕೊಂಬೆಯಂತೆ ನೀಳವಾದ ತೋಳುಗಳುಳ್ಳವನೂ, ವಿಷದಿಂದ ಕಪ್ಪಾದ ಕಂಠವುಳ್ಳವನೂ, ಶಿರಸ್ಸಿನಲ್ಲಿ ಚಂದ್ರಕಲೆಯನ್ನು ಧರಿಸಿದವನೂ, ಕೃಪಾಮಯನೂ ಆದ ಪರಮೇಶ್ವರನನ್ನು ಎಲೈ ಮನವೇ ಭಜಿಸು. ॥೩೪॥

ಭಜ ಕಾಲಾನಲಶೈಲಜಾತಕನ್ಯಾ
ಕಲನಾಲೋಕನವಿಪ್ರಬಾಲಪಾಲಂ ।
ಕಲಧೌತಾಮಲಶೈಲಮೂಲವಾಸಂ
ಜಿತಕಾಲಂ ಕುಮುದೋತ್ಪಲೋರುಮಾಲಂ ॥೩೫॥

ಕರೀಂದ್ರಪೂಜ್ಯಪೂಜಿತಂ ಕರೀಂದ್ರಚರ್ಮಧಾರಕಂ
ಕರೀಂದ್ರಮೌಲಿನೃತ್ತಕಂ ಕರೀಂದ್ರದೈತ್ಯಘಾತಕಂ ।
ಕರೀಂದ್ರವಾಹಸಂಸ್ತುತಂ ಕರೀಂದ್ರಪೂಜ್ಯಪಾದುಕಂ
ಭಜೇ ಕರೀಂದ್ರಕಾನನಾಧಿಪಂ ಮಹೇಶ್ವರಂ ಸದಾ ॥೩೬॥

ಏವಂ ಸ್ತುವನ್ ವಿಪ್ರಸುತೈರ್ವಸನ್ ಗುರುಕುಲೇ ಸದಾ ।
ವೇದವೇದಾಂಗಸರ್ವಸ್ವಂ ವಿದ್ಯಾಸ್ತತ್ರ ಕಲಾಯುತಾಃ ॥೩೭॥

ಅಧ್ಯಗೀಷ್ಟ ತದಾ ನಂದೀ ಅಷ್ಟಮೂರ್ತಿಪ್ರಸಾದತಃ ।
ಗುರವೇ ದಕ್ಷಿಣಾಂ ದತ್ವಾ ಪಿತ್ರೋರಾಯಾದ್ಗೃಹಂ ತದಾ ॥೩೮॥

ಮೂರನೇ ಕಣ್ಣಿನಲ್ಲಿ ಕಾಲಾಗ್ನಿಯನ್ನು ಧರಿಸಿರುವವನೂ, ಗಿರಿಜೆಯ ಪತಿಯೂ, ಬ್ರಾಹ್ಮಣವಟುವನ್ನು (ನನ್ನನ್ನು) ರಕ್ಷಿಸುವವನೂ, ಚಿನ್ನದಂತೆ ಇರುವ ಕೈಲಾಸಗಿರಿಯಲ್ಲಿ ವಾಸವಾಗಿರುವವನೂ, ತಾವರೆಗಳ ಹಾರವನ್ನು ಧರಿಸಿರುವವನೂ, ಮೃತ್ಯುಂಜಯನೂ ಆದ ಆ ಪರಶಿವನನ್ನು ಭಜಿಸು. ॥೩೫॥

ಗಜೇಂದ್ರನನ್ನು ಸಲಹಿದ ಹರಿಯಿಂದ ಪೂಜಿಸಲ್ಪಡುವವನೂ, ಗಜಚರ್ಮವನ್ನು ಧರಿಸಿದವನೂ, ಆನೆಯಮೇಲೆ ನರ್ತಿಸುವವನೂ, ಗಜಾಸುರನನ್ನು ಸಂಹರಿಸಿದವನೂ, ಗಜವಾಹನನಾದ ಇಂದ್ರನಿಂದ ಸ್ತುತಿಸಲ್ಪಡುವವನೂ, ಐರಾವತವೆಂಬ ಆನೆಯಿಂದ ಪೂಜಿಸಲ್ಪಡುವ ಪಾದುಕೆಯುಳ್ಳವನೂ, ಕರೀಂದ್ರಕಾನನ(ಗಜಾರಣ್ಯ)ಕ್ಕೆ ಒಡೆಯನೂ ಆದ ಶಿವನನ್ನು ಭಜಿಸು." ॥೩೬॥

ಹೀಗೆ ಶಿವನನ್ನು ಬ್ರಾಹ್ಮಣವಟುಗಳೊಡನೆ ಸ್ತುತಿಸುತ್ತಾ ಆ ನಂದಿಯು ಗುರುಕುಲದಲ್ಲಿ ನಾಲ್ಕು ವೇದಗಳನ್ನೂ, ವೇದಾಂಗಗಳನ್ನೂ, ಅರುವತ್ತನಾಲ್ಕು ಕಲೆಗಳನ್ನೂ ಸಂಪೂರ್ಣವಾಗಿ ಅಭ್ಯಾಸಮಾಡಿದನು. ಆ ಮೇಲೆ ಗುರುದಕ್ಷಿಣೆಯನ್ನು ಕೊಟ್ಟು ತಂದೆಯ ಮನೆಗೆ ಹಿಂತಿರುಗಿ ಬಂದನು. ॥೩೭-೩೮॥

ನತ್ವಾ ಸ ಪಿತರೌ ತತ್ರ ತಾವಾನಂದಪರಿಪ್ಲುತೌ ।
ಯಥಾ ಕುಮಾರಸಂದರ್ಶೇ ಜಗತಾಂ ಪಿತರೌ ಗಿರೌ ॥೩೯॥

ತಂ ದೃಷ್ಟ್ವಾ ಪೂರ್ಣಚಂದ್ರಾಭಂ ಪಿತರೌ ತೋಷವೀಯತುಃ ।
ತಮುಲ್ಲಸಿತತಾರುಣ್ಯಂ ನಂದಿನಂ ವಿಶ್ವನಂದಿನಂ ॥೪೦॥

ತಸ್ಯೋದ್ವಾಹವಿಧಿಪ್ರಾಪ್ತ್ಯೈ ಕೃತಕೌತುಕಮಂಗಳೌ ।
ತಾವುವಾಚ ಪ್ರಣಮ್ಯಾಸೌ ನಂದೀ ನಂದಿತಸದ್ಗುಣಃ ॥೪೧॥

॥ ನಂದೀಶ ಉವಾಚ ॥

ತಪಸ್ಯಭಿರತಂ ಚೇತೋ ನಿಯುಕ್ತಂ ಮಾಂ ಶಿವಾರ್ಚನೇ ।
ಪ್ರಸಾದ್ಯ ದೇವಂ ಭವತಾಂ ಪೂರಯಿಷ್ಯಾಮಿ ಹೃದ್ಗತಂ ॥೪೨॥

ಸ ನಂದಿನೋ ವಚಃ ಶ್ರುತ್ವಾ ತಂ ಪಿತಾ ಪ್ರಾಹ ಖಿನ್ನಧೀಃ ॥೪೩॥

ಅಲ್ಲಿ ಆ ನಂದಿಯು ತಂದೆತಾಯಿಗಳಿಗೆ ನಮಸ್ಕರಿಸಿದನು. ಅವರು ಕುಮಾರಸ್ವಾಮಿಯನ್ನು ನೋಡಿದ ಪಾರ್ವತೀಪರಮೇಶ್ವರರಂತೆ ಆ ತರುಣನಾದ ನಂದಿಕೇಶ ಕುಮಾರನನ್ನು ನೋಡಿ ತುಂಬಾ ಸಂತಸಗೊಂಡರು. ॥೩೯-೪೦॥

ಆಮೇಲೆ ಶಿಲಾಶನದಂಪತಿಗಳು ತರುಣನಾದ ನಂದಿಕೇಶ್ವರನಿಗೆ ಮದುವೆಯನ್ನು ಮಾಡುವ ಸಂಕಲ್ಪವುಳ್ಳವರಾದರು. ಆಗ ನಂದಿಯು ಅವರಿಗೆ ನಮಸ್ಕರಿಸಿ ವಿನಯದಿಂದ ಹೀಗೆ ಹೇಳಿದನು. ॥೪೧॥

" ಓ ಮಾತಾಪಿತೃಗಳೇ, ನನ್ನ ಮನಸ್ಸು ಸದ್ಯಃ ತಪಸ್ಸುಮಾಡಬೇಕೆಂದಿರುವುದು. ತಪಸ್ಸಿನಿಂದ ಶಿವನನ್ನು ಆರಾಧಿಸಿ ಸಂತಸಗೊಳಿಸಿ ಆ ಮೇಲೆ ನಿಮ್ಮ ಕೋರಿಕೆಯನ್ನು ನೆರವೇರಿಸುವೆನು." ॥೪೨॥

ನಂದಿಯ ಆ ಮಾತನ್ನು ಕೇಳಿ ತಂದೆಯಾದ ಶಿಲಾಶನನು ಖೇದಗೊಂಡು ಹೀಗೆಂದನು. ॥೪೩॥

|| ಶಿಲಾಶನ ಉವಾಚ ||

ನಂದೀನ್ ಕುಸುಮಸಂಕಾಶಾ ತನುಸ್ತೇಽದ್ಯ ತಪೋಽದ್ಯ ಹಿ ।
ನ ಬಾಲ್ಯೇ ರಮತೇ ಚೇತೋ ಯುವಾಽಸಿ ಚಲಚಿತ್ತಕಃ ||೪೪||

ತಪೋವಿಘ್ನಕರಾ ದೇವಾ ಮಾ ತೇ ಭೂದ್ಬುದ್ಧಿರೀದೃಶೀ ।
ವಾರ್ಧಕ್ಯೇ ತಪಸಿ ಸ್ವೈರಂ ಭವತೋ ರಮತಾಂ ಮನಃ ||೪೫||

ಚಿರಲಬ್ಧೋಽಸಿ ಪುತ್ರತ್ವಂ ತಪಸೇಶಪ್ರಸಾದತಃ ।
ಪುತ್ರ ಮಾ ಸಾಹಸಂ ಕಾರ್ಷೀರ್ವತ್ಸಲಾಂ ಪಶ್ಯ ಮಾತರಂ ||೪೬||

ವಧ್ವಾ ವಿಹರ ಚೈವಾತ್ರ ಮಮಾನಂದಪ್ರದಾಯಕಃ ।
ಇತ್ಯುಕ್ತಸ್ತೌ ಪ್ರಣಮ್ಯೈವ ಸಾಂತ್ವಯಾಮಾಸ ವಾಗ್ರಸೈಃ ||೪೭||

|| ನಂದೀಶ ಉವಾಚ ||

ಕಿಮಸಾಧ್ಯಂ ಭಗವತಿ ಪ್ರೀತೇ ಶಂಭೌ ಸನಾತನೇ ।
ನ ದೇವಪದಮಾಕಾಂಕ್ಷೇ ತ್ರ್ಯಕ್ಷಭಕ್ತ್ಯುಜ್ಝಿತಾಶಯಃ ||೪೮||

ಎಲೈ ನಂದಿಯೇ, ಕುಸುಮದಂತೆ ಮೃದುವಾದ ನಿನ್ನ ಶರೀರವು ಇನ್ನು ತಪಸ್ಸಿಗೆ ಯೋಗ್ಯವಾಗಿಲ್ಲ. ಅಲ್ಲದೆ ನೀನು ಯೌವನವಂತನಾಗಿರುವೆ. ಯೌವನದಲ್ಲಿ ಮನಸ್ಸು ಸ್ಥಿರವಾಗಿರಲಾರದು. ||೪೪||

ತಪಸ್ಸಿಗೆ ದೇವತೆಗಳೇ ವಿಘ್ನವನ್ನೊಡ್ಡುವರು. ಆದುದರಿಂದ ಈಗ ಈ ಬುದ್ಧಿಯನ್ನು ಬಿಡು. ಮುಪ್ಪಿನಲ್ಲಿ ತಪಸ್ಸನ್ನು ಮಾಡುವೆಯಂತೆ. ||೪೫||

ಎಲೈ ಮಗನೇ, ತಪಸ್ಸಿನಿಂದ ಈಶ್ವರನನ್ನು ಮೆಚ್ಚಿಸಿ ಬಹುಕಾಲಕ್ಕೆ ನಿನ್ನನ್ನು ಪಡೆದಿರುವೆನು. ಈಗ ಇಂತಹ ಸಾಹಸವನ್ನು ಮಾಡಬೇಡ. ಪುತ್ರವತ್ಸಲೆಯಾದ ನಿನ್ನ ತಾಯಿಯನ್ನು ನೋಡು. ||೪೬||

ಆದುದರಿಂದ ಮದುವೆಯಾಗಿ ಸುಂದರಿಯಾದ ಹೆಂಡತಿಯೊಡನೆ ಇಲ್ಲಿಯೇ ವಿಹರಿಸು. ಅದನ್ನು ನೋಡಿ ನಾವೂ ಸಂತಸಪಡುವೆವು. ಎಂದು ಹೇಳಿದ ಮಾತಾಪಿತೃಗಳ ಮಾತನ್ನು ಕೇಳಿ ನಂದಿಯು ಪುನಃ ಅವರಿಗೆ ನಮಸ್ಕರಿಸಿ ಹೀಗೆ ಸಮಾಧಾನ ಮಾಡಿದನು. ||೪೭||

ತಂದೆಯೇ, ಪರಮಾತ್ಮನಾದ ಪರಮೇಶ್ವರನು ಪ್ರಸನ್ನನಾದರೆ ಅಸಾಧ್ಯ ವಾವುದು ? ಶಿವನಲ್ಲಿ ಭಕ್ತಿಯನ್ನು ಬಿಟ್ಟು ದೇವಪದವಿಯೂ ನನಗೆ ಬೇಡ. ||೪೮||

ದೇವದೇವೇ ವಿರೂಪಾಕ್ಷೇ ತಪಸಾ ಪರಿತೋಷಿತೇ ।
ಕಿಂ ಮಮಾಲಭ್ಯಮಸ್ತೀಹ ಇತಿ ಚಿತ್ತವಿನಿಶ್ಚಯಂ ॥೪೯॥

ಹೃದಯೇ ಪರಿಮುಂಚಂತು ಜ್ವರಮೇನಂ ಸುದಾರಣಂ ।
ಇತ್ಯುಕ್ತ್ವಾ ತತ್ರ ಹಿ ಗಿರೌ ಚಕಾರಾಶ್ರಮಮುತ್ತಮಂ ॥೫೦॥

ತಸ್ಮಿನ್ ತಪಸ್ಯಭಿರತೇ ಮುನಿವರ್ಯಸಂಘಾಃ
ವಿಸ್ಮಾಯಿತೋರುಹೃದಯಾಸ್ಸದಯಾಸ್ತದಾನೀಂ ।
ಭಸ್ಮತ್ರಿಪುಂಡ್ರನಿಟಿಲೇ ವರರುದ್ರನೇತ್ರ
ಹಾರಾವಲೀಕಲಿತದೇಹವರೇ ಮನೋಜ್ಞೇ ॥೫೧॥

ಬಿಲ್ವೇದಲಾರ್ಚನರತೇ ಪರಮೇಶಲಿಂಗೇ
ಪಂಚಾಕ್ಷರಾವೃತಪರೇ ವರರುದ್ರಜಾಪ್ಯೇ ।
ದೇವಾ ಅಪಿ ತ್ರಿನಯನಾರ್ಚನಜಾತಹರ್ಷಂ
ತಪ್ಯೈರ್ವಿಹೀನಮವಲೋಕ್ಯ ನಮಂತಿ ತಂ ವೈ ॥೫೨॥

ದೇವದೇವನಾದ ಪರಮೇಶ್ವರನನ್ನು ತಪಸ್ಸಿನಿಂದ ಸಂತೋಷಗೊಳಿಸಿದರೆ ನನಗೆ ಅಸಾಧ್ಯವಾದುದು ಯಾವುದೂ ಇಲ್ಲವಾಗುವುದು. ಆದುದರಿಂದ ಈ ವ್ಯಥೆಯನ್ನು ಬಿಡಿರಿ. ತಪಸ್ಸಿಗೆ ಅನುಮತಿಯನ್ನೀಯಿರಿ. ॥೪೯॥

ಹೀಗೆ ಹೇಳಿ ನಂದಿಯು ತಪಸ್ಸಿಗಾಗಿ ಹೊರಟು ಅದೇ ಬೆಟ್ಟದಲ್ಲಿ ಆಶ್ರಮವೊಂದನ್ನು ನಿರ್ಮಿಸಿಕೊಂಡನು. ॥೫೦॥

ಆ ಆಶ್ರಮದಲ್ಲಿ ನಂದಿಯು ಭಸ್ಮರುದ್ರಾಕ್ಷಿಸರಗಳನ್ನು ಧರಿಸಿ ಶಿವನನ್ನೇ ತಲ್ಲೀನತೆಯಿಂದ ಭಜಿಸುತ್ತಾ ತಪಸ್ಸನ್ನು ಆಚರಿಸುತ್ತಲಿರಲು, ಅದನ್ನು ನೋಡಿ ಮಹಾಮಹಾಮುನಿಗಳೂ ಆಶ್ಚರ್ಯಚಕಿತರಾದರು. ॥೫೧॥

ಶಿವಪಂಚಾಕ್ಷರೀಮಂತ್ರವನ್ನು ಜಪಿಸುತ್ತಾ, ರುದ್ರಸೂಕ್ತವನ್ನುಚ್ಚರಿಸುತ್ತಾ ಮಹಾಭಕ್ತಿಯಿಂದ ಬಿಲ್ವದಳಗಳಿಂದ ಶಿವಲಿಂಗವನ್ನರ್ಚಿಸುತ್ತಲಿರುವ ಆ ನಂದಿಯನ್ನು ನೋಡಿ ದೇವತೆಗಳೂ ಸಹ ನಮಸ್ಕಾರಮಾಡತೊಡಗಿದರು. ॥೫೨॥

॥ ಶಿಲಾದ ಉವಾಚ ॥

ವಿತರ ಪುರಹರಾದ್ಯ ಶಂಭೋ
ತವ ಸಾರೂಪ್ಯಧರಂ ಕುಮಾರತುಲ್ಯಂ ।
ಇತಿ ಶಂಭುಃ ಪ್ರಜಗಾದ ವಾಕ್ಯಜಾತಂ
ಮುನಯೇ ಭಕ್ತಿಯುತಾಯ ದೇವದೇವಃ ॥೫೩॥

॥ ಶಿವ ಉವಾಚ ॥

ಮಮ ಸಾರೂಪ್ಯಧರಸ್ತ್ವಯೋನಿಜಾತೋ
ಕೃಷ ಭೂಮಿಂ ಮಖಕರ್ಮಣೋ ದ್ವಿಜಾಶು ।
ತದುಪಶ್ರುತ್ಯ ಗತೇ ಶಿವಂ ಪ್ರಣಮ್ಯ
ದ್ರುತಮೇವಾಶು ಚಕರ್ಷ ಲಾಂಗಲೈಃ ॥೫೪॥

ಮಖಭೂಮೌ ನಿಹಿತಾಂ ವಿಲೋಕ್ಯ ಪಾತ್ರೀಂ
ಶಿವದತ್ತಾಮವಲೋಕಯನ್ಮುನೀಂದ್ರಃ ।
ತವ ಗುಣಗಣನಾ ಗಣಾಧಿನಾಥಂ
ಗುಣವಂತಂ ತ್ರಿಗುಣಾಧಿಕಂ ತನೂಜಂ ॥೫೫॥

(ಇಲ್ಲಿ ಶಿವನು ಶಿಲಾಶನನ ಭಕ್ತಿಗೆ ಮೆಚ್ಚಿ ಅವನಿಗೆ ತನ್ನಂತಹ ಪುತ್ರನನ್ನು ಕರುಣಿಸಿದ ಕಥೆಯನ್ನು ಹೇಳಿ ನಂದಿಯು ಸ್ತೋತ್ರಮಾಡುವನು.) ನಂದಿಯು ಹೀಗೆಂದನು. "ತ್ರಿಪುರವೈರಿಯಾದ ಶಂಕರನೇ ನಿನ್ನ ಸರೂಪನಾದ ಪುತ್ರನನ್ನು ಕರುಣಿಸು" ಎಂದು ದೈನ್ಯದಿಂದ ಪ್ರಾರ್ಥಿಸಿದ ಶಿಲಾಶನನಿಗೆ ದೇವದೇವನಾದ ನೀನು ಹೀಗೆ ಅನುಗ್ರಹಿಸಿದೆ. ॥೫೩॥

"ಎಲೈ ಶಿಲಾಶನ, ನನ್ನ ಸಮಾನನಾದ ಪುತ್ರನು ಬೇಕಾದರೆ ಅವನು ನಿನ್ನ ಗರ್ಭದಿಂದ ಜನಿಸಲಾರನು. ಆದುದರಿಂದ ಈಗ ಹೋಗಿಯಜ್ಞ ಭೂಮಿಯನ್ನು ನೇಗಿಲಿನಿಂದ ಅಗೆ" ಎಂದು ಹೇಳಿದ ಆ ಮಾತನ್ನು ಕೇಳಿ ಆ ಮುನಿಯು ಯಜ್ಞಭೂಮಿಗೆ ಬಂದು ಅದನ್ನು ನೇಗಿಲಿನಿಂದ ಅಗೆಯಿಸಿದನು. ॥೫೪॥

ಆಗ ಆ ಯಜ್ಞಭೂಮಿಯಲ್ಲಿ ಒಂದು ಚಿನ್ನದ ಪೆಟ್ಟಿಗೆಯು ಸಿಕ್ಕಿತು. ಅದರಲ್ಲಿ ಶಿವನಂತೆ ತೇಜಸ್ವಿಯಾದ ಓರ್ವ ಕುಮಾರನು (ನಾನು) ಶಿಲಾಶನನಿಗೆ ಲಭಿಸಿದನು.

ಸಿಕತಾಶನಕಾಮನಾಂ ಮಹೇಶೋ
ಗಣವರ್ಯೋ ಭವಿತೇತಿ ತೇ ತನೂಜಃ ।
ಇತಿ ಪೂರಯದಂಜಸಾ ಮುನೇಃ
ಇಮಮೇವ ಶೃಣುಯಾನ್ನರಃ ಸುತಾಪ್ತ್ಯೈ ॥೫೬॥

ಇತಿ ಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ಶಿಲಾಶನಾಧ್ವರ
ಪ್ರಭೂತ ನಂದೀಶಚಾರಿತ್ರವರ್ಣನಂ ನಾಮ
ಚತುರ್ಥಃ ಅಧ್ಯಾಯಃ

ಓ ಪರಮೇಶ್ವರ, ಹೀಗೆ ಶಿಲಾಶನನಿಗೆ ಪುತ್ರನನ್ನು ಕರುಣಿಸಿದ ನಿನ್ನ ಮಹಿಮೆಯು ಅಗಾಧವಾದುದು. ॥೫೫॥

ಆಗ ನೀನು ಶಿಲಾಶನನಿಗೆ ನಿನ್ನ ಮಗನು ಗಣೇಶನೇ ಆಗುವನೆಂದೂ ವರವನ್ನು ಕೊಟ್ಟು ಅವನನ್ನನುಗ್ರಹಿಸಿದೆ ಎಂದು ನಂದಿಯು ಸ್ತುತಿಸುತ್ತಿದ್ದನು. ಹೀಗೆ ಶಿವನ ಮಹಿಮೆಯು ಅಸಾಧಾರಣವಾದುದು, ಶಿಲಾಶನನಿಗೆ ಪುತ್ರಪ್ರಾಪ್ತಿಯಾದ ಈ ಕಥೆಯನ್ನು ಕೇಳಿದರೆ ಸುಪುತ್ರನು ಜನಿಸುವನು. ಅವನ ವಂಶವು ಅಭಿವೃದ್ಧಿಯನ್ನೈದುವುದು ಎಂದು ಕುಮಾರಸ್ವಾಮಿಯು ಜೈಗೀಷವ್ಯನಿಗೆ ತಿಳಿಸಿದನು. ॥೫೬॥

ಇಲ್ಲಿಗೆ ಶ್ರೀಶಿವರಹಸ್ಯದ ಚತುರ್ಥಾಂಶದಲ್ಲಿ ನಾಲ್ಕನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಪಂಚಮೋಽಧ್ಯಾಯಃ

|| ಸ್ಕಂದ ಉವಾಚ ||

ನಂದೀ ರುದ್ರಮುನಾ ಮೌನೀ ಭಸ್ಮರುದ್ರಾಕ್ಷಧಾರಕಃ ।
ಹೇಮಂತಗ್ರೀಷ್ಮವರ್ಷಾಸು ಸ ಚಾಕಾಶತನುಚ್ಛದಃ ॥೧॥

ಫಲಮೂಲಾಶನಸ್ತೀವ್ರಂ ತಪಶ್ಚಕ್ರೇ ಸುದಾರುಣಂ ।
ಭಸ್ಮಚ್ಛನ್ನೋ ಭಸ್ಮನಿಷ್ಠೋ ರುದ್ರಮಾವರ್ತಯನ್ಮುದಾ ॥೨॥

ದಿವಾರಾತ್ರಂ ಪ್ರಸನ್ನೇನ ಚೇತಸಾ ಪೂಜಯನ್ ಹರಂ ।
ನಿದ್ರಾತಂದ್ರಾದಿರಹಿತಃ ಶಿವವಿನ್ಯಸ್ತಮಾನಸಃ ॥೩॥

ಶತವರ್ಷಾಣಿ ನಿಯುತಂ ತಪಶ್ಚಕ್ರೇ ಸುದುಷ್ಕರಂ ।
ತಪಸ್ಯಭಿರತಂ ದೃಷ್ಟ್ವಾ ಸರ್ವೇ ತತ್ರ ಮುನೀಶ್ವರಾಃ ॥೪॥

ಐದನೆಯ ಅಧ್ಯಾಯ

ಆ ಆಶ್ರಮದಲ್ಲಿ ನಂದಿಕೇಶ್ವರನು ಭಸ್ಮರುದ್ರಾಕ್ಷಿಗಳನ್ನು ಧರಿಸುತ್ತಾ, ಚಳಿಗಾಲ ಮಳೆಗಾಲ ಬಿಸಿಲುಗಾಲಗಳೆನ್ನದೆ ದಿಗಂಬರನಾಗಿ ಗೆಡ್ಡೆಗೆಣಸುಗಳನ್ನು ಮಾತ್ರ ತಿನ್ನುತ್ತಾ ರುದ್ರಸೂಕ್ತವನ್ನು ಪಠಿಸುತ್ತಾ ಘೋರವಾದ ತಪಸ್ಸನ್ನಾಚರಿಸಿದನು.॥೧-೨॥

ರಾತ್ರಿಯಲ್ಲಿ ನಿದ್ರೆಯಿಲ್ಲದೆ, ಹಗಲು ಆಲಸ್ಯವಿಲ್ಲದೇ, ಶಿವನನ್ನೇ ನೆಟ್ಟಮನಸ್ಸಿನಿಂದ ಧ್ಯಾನಿಸುತ್ತಾ ನೂರು ವರ್ಷಗಳು ಪೂರ್ತಿಯಾಗಿ ಘೋರವಾದ ತಪಸ್ಸನ್ನಾಚರಿಸಿದನು. ॥೩॥

ನಂದಿಯ ಈ ಘೋರತಪಸ್ಸನ್ನು ನೋಡಿ ಮುನಿಗಳೂ ವಿಷ್ಣು, ಬ್ರಹ್ಮ, ಮೊದಲಾದವರೂ ಸಹ ತುಂಬಾ ಆಶ್ಚರ್ಯಗೊಂಡರು. ॥೪॥

ವಿಷ್ಣುಬ್ರಹ್ಮಾದಯೋ ದೇವಾ ವ್ಯಸ್ಮಯಂಸ್ತತ್ರಪಸ್ಯಯಾ ।
ದೃಷ್ಟ್ವಾ ತಸ್ಯ ತಪೋ ಘೋರಂ ರುದ್ರವಿನ್ಯಸ್ತಚೇತಸಃ ॥೫॥

ಸುರವಿತ್ರಾಸಜನಕಂ ದೇವಾನಾಂ ಭಯಮಾವಿಶತ್ ।
ತಪೋಂತಿಮೇ ತತೋ ವರ್ಷೇ ತಸ್ಮೈ ಪ್ರಾದುರ್ಬಭೌ ಹರಃ ॥೬॥

ವೃಷಾರೂಢೋ ಮಹಾದೇವೋ ದೇವ್ಯಾ ತತ್ರ ತ್ರಿಲೋಚನಃ ।
ಬ್ರಹ್ಮವಿಷ್ಣ್ವಾದಿಭಿರ್ದೇವೈಸ್ಸುರಾಸುರಗಣಾನ್ವಿತಃ । ॥೭॥

ನಂದಿನಂ ಪ್ರಾಹ ವಿಶ್ವಾತ್ಮಾ ವತ್ಸಾಲಂ ತಪಸಾ ತವ ।
ಕಾಮಪ್ರದೋಹಂ ಸಂಪ್ರಾಪ್ತಃ ತ್ವತ್ಕಾಮಾನ್ ಪೂರಯಾಮ್ಯಹಂ॥೮॥

ದೃಷ್ಟ್ವಾ ದೇವಂ ತತೋನ್ಮೀಲ್ಯ ನಯನೇ ಕೋಟಿಭಾಸ್ಕರಂ ।
ಉದ್ಯಂತಮಿವ ಚಾದ್ರಾಕ್ಷೀತ್ ತ್ರ್ಯಕ್ಷಂ ದೇವಂ ಸಹಾಂಬಯಾ ॥೯॥

ನಂದೀ ತದಾ ಪ್ರಣಮ್ಯೇಶಂ ತುಷ್ಟಾವೇವಂ ಕೃತಾಂಜಲಿಃ ॥೧೦॥

ಶಿವನಲ್ಲಿ ಸ್ಥಿರವಾದ ಮನಸ್ಸುಳ್ಳ ನಂದಿಯ ಆ ಘೋರತಪಸ್ಸನ್ನು ನೋಡಿ ದೇವತೆಗಳು ಬಹಳ ಭಯಗೊಂಡರು. ||೫||

ಹೀಗೆ ನೂರು ವರ್ಷಗಳು ಮುಗಿಯಲು, ಶಿವನು ಆ ನಂದಿಗೆ ಪಾರ್ವತಿಯೊಡನೆ ಪ್ರತ್ಯಕ್ಷನಾದನು. ಆಗವನು ವೃಷಭವನ್ನೇರಿದ್ದನು, ಜೊತೆಯಲ್ಲಿ ಬ್ರಹ್ಮವಿಷ್ಣು ಮೊದಲಾದವರೂ ದೇವದಾನವರೂ ಬಂದಿದ್ದರು. ||೬-೭||

ಆಗ ಶಿವನು ನಂದಿಯನ್ನು ಕುರಿತು "ಎಲೈ ವತ್ಸ, ತಪಸ್ಸು ಸಾಕು, ನಿನಗೆ ಏನು ಬೇಕೋ ಅದನ್ನು ಕೇಳು, ಸರ್ವಪ್ರದನಾದ ನಾನು ಪೂರಯಿಸಿಕೊಡುವೆನು," ಎಂದನು. ||೮||

ಆಗ ನಂದಿಯು-ಕಣ್ಣುಬಿಟ್ಟು ಉದಯಿಸುತ್ತಲಿರುವ ಕೋಟಿಸೂರ್ಯರಂತೆ ತೇಜಸ್ವಿಯಾಗಿ, ಪಾರ್ವತಿಯೊಡನಿರುವ ಮಹಾದೇವನನ್ನು ನೋಡಿದನು. ||೯||

ಆಮೇಲೆ ನಂದಿಯು ಶಿವನಿಗೆ ನಮಸ್ಕರಿಸಿ ಅಂಜಲಿಬದ್ಧನಾಗಿ ನಿಂತು ಶಿವನನ್ನು ಹೀಗೆ ಸ್ತುತಿಸಿದನು. ||೧೦||

ಜಯಾಂಧಕಾಂತಕೆ ಮುಖಪುರಸ್ಮರಗಜಾಂತಕೆ ।
ಜಯ ಷಣ್ಮುಖವಿಘ್ನೇಶ ಸುಂದರಸ್ಮಿತಸನ್ಮುಖ ॥೧೧॥

ಜಯಪ್ರಣವನಾದಾದಿವೇದಾಂತವಚನಾತಿಗ ।
ಜಯ ವಿಶ್ವಾಧಿಕಾಶಾಸ್ಯ ಘನವಾಹಾಘಭೇದಕ ॥೧೨॥

ಜಯ ಧೀರತರಾಮೇಯಪನ್ನಗಾಕಲ್ಪಸಚ್ಛದ ।
ಜಯ ಕಲ್ಯಾಣಶೈಲೋದ್ಯದ್ಧರಿಬಾಣಮಹಾಭುಜ ॥೧೩॥

ಜಯ ಝುಂಕಾರಫೂತ್ಕಾರಕೃತಾಹೀಸ್ವರಶಿಂಜಿತ ।
ಜಯ ವಿಶ್ವಜನಾಧಾರ ಚಂದ್ರಚೂಡ ಚರಾಚರ ॥೧೪॥

ಜಯ ಟಂಕಮಹಾಹಸ್ತನೃತ್ಯದಂಗಮಹಾನಟ ।
ಜಯ ನೃತ್ಯಪ್ರಭಗ್ನೋರುಧರಾಧೋತ್ಥಿತಕಾಮದ ॥೧೫॥

ಅಂಧಕಾಸುರನನ್ನು ಸಂಹರಿಸಿದವನೂ, ತ್ರಿಪುರಾಸುರ, ಗಜಾಸುರ, ಮನ್ಮಥರನ್ನು ನಾಶಗೊಳಿಸಿದವನೂ, ಷಣ್ಮುಖಗಣೇಶರಲ್ಲಿ ಅಪಾರವಾದ ವಾತ್ಸಲ್ಯವುಳ್ಳವನೂ, ಆದ ಪರಮೇಶ್ವರನೇ ಜಯಿಸು. ॥೧೧॥

ಓಂಕಾರ-ನಾದ ಮೊದಲಾದ ವೇದಾಂತವಚನಗಳಿಗೆ ನಿಲುಕದವನೂ ಸರ್ವೋತ್ತಮನೂ, ಇಂದ್ರನ ಪಾಪಗಳನ್ನು ಪರಿಹರಿಸಿದವನೂ ಆದ ಶಿವನೇ ಸದಾ ಸರ್ವೋತ್ಕರ್ಷದಿಂದಿರು. ॥೧೨॥

ಧೀರನೂ, ಇಂದ್ರಿಯಗಳಿಗೆ ಅಗೋಚರನೂ, ಸರ್ಪಭೂಷಣನೂ, ತ್ರಿಪುರಸಂಹಾರಕಾಲದಲ್ಲಿ ಮೇರುವನ್ನು ಧನುಸ್ಸನ್ನಾಗಿಯೂ ಹರಿಯನ್ನು ಬಾಣವಾಗಿಯೂ ಹಿಡಿದವನೂ ಆದ ಓ ಮಹಾದೇವನೇ ನಿನಗೆ ಸದಾ ಜಯವಿರಲಿ. ॥೧೩॥

ಝುಂಕಾರಫೂತ್ಕಾರಗಳನ್ನು ಮಾಡುವ ಸರ್ಪಗಳನ್ನು ಧರಿಸಿದವನೂ, ಎಲ್ಲ ಪ್ರಾಣಿಗಳಿಗೆ ಆಧಾರನೂ, ಚಂದ್ರಶೇಖರನೂ, ಸ್ಥಿರಚರಪ್ರಪಂಚಸ್ವರೂಪನೂ ಆದ ಓ ದೇವನೇ ಜಯಿಸು. ॥೧೪॥

ಡಮರುಗವನ್ನು ಹಿಡಿದು ತಾಂಡವನೃತ್ಯವನ್ನು ಆಡುವ ನಟರಾಜನೂ, ಪ್ರಳಯನೃತ್ಯವೇಗವನ್ನು ತಡೆಯದೆ ಬಳಲಿದ ಭೂಮಿದೇವಿಗೆ ಬೇಕಾದ ಇಷ್ಟಾರ್ಥವನ್ನು ಕರುಣಿಸುವವನೂ ಆದ ದೇವನೇ ಜಯಿಸು. ॥೧೫॥

ಜಯಾಹೀಶಮಣಿಜಾಲಫಣಾವಿಶ್ರಾಣಿತಾಂಬರ ।
ಜಯ ಮಂದರಕೈಲಾಸಮೌಳಿಸಂಚಾರಪಾವಿತ ॥೧೬॥

ಜಯ ತ್ರಿದಶಕಾರ್ಯೋದ್ಯನ್ನೇತ್ರೋಜ್ವಲಿತಮನ್ಮಥ ।
ಜಯ ಕಾಮದ ಕಾಲಾರೇ ಭಕ್ತಶ್ರೈವಜನಾಧಿಪ ॥೧೭॥

ಜಯ ದೀನದಯಾಪಾರಗಣವೀರಧನಾಧಿಪ ।
ಜಯ ಸಂತಾನಮಂದಾರಪಾರಿಜಾತಸುಚಂದನ ॥೧೮॥

ಜಯ ಭೂತಭರಾಪಾರದಿಗ್ಗಜಾಧಿಪ ದೇವಪ ।
ಜಯ ಪಾವಿತಲೋಕಾದೇ ಫಣೀಶ ಫಣಿಮೌಲಿಕ ॥೧೯॥

ಜಯ ವಿಶ್ವಜನೋದ್ಬೋಧಬಂಧಹೃದ್ಬಂಧಕಾರಕ ।
ಜಯ ಭದ್ರದ ಭಸ್ಮಾಂಗ ನಾಗಾಭರಣತತ್ಪರ ॥೨೦॥

ಸರ್ಪರಾಜನ ತಲೆಯಲ್ಲಿನ ನಾಗರತ್ನದ ಪ್ರಭೆಯಿಂದಲೇ ಬಟ್ಟೆಯುಟ್ಟಂತೆ (ಉಂಟಾದಂತೆ ತೋರುವ)ತೋರುವವನೂ, ಸಂಚಾರದಿಂದ ಮಂದರ ಮತ್ತು ಕೈಲಾಸ ಗಿರಿಶಿಖರಗಳನ್ನು ಪವಿತ್ರಗೊಳಿಸುವವನೂ ಆದ ಓ ದೇವನೇ ಜಯಿಸು. ॥೧೬॥

ದೇವಕಾರ್ಯದಲ್ಲಿ ಉದ್ಯುಕ್ತನಾದ ಮನ್ಮಥನನ್ನು ಮೂರನೆಯ ಕಣ್ಣಿಂದ ಭಸ್ಮಮಾಡಿದವನೂ, ಮೃತ್ಯುಂಜಯನೂ, ತನ್ನ ಭಕ್ತರಿಗೆ ಸಕಲೇಷ್ಟಾರ್ಥಗಳನ್ನು ಅನುಗ್ರಹಿಸುವವನೂ ಆದ ದೇವನೇ ಜಯಿಸು. ॥೧೭॥

ದೀನರಲ್ಲಿ ದಯೆಯುಳ್ಳವನೂ, ಧನಾಧಿಪನಾದ ಕುಬೇರನಿಂದ ಸೇವಿಸಲ್ಪಡುವವನೂ, ಸಂತಾನಾಪೇಕ್ಷಿಗಳಿಗೆ ಕಲ್ಪವೃಕ್ಷದಂತಿರುವವನೂ ಆದ ದೇವನೇ ವರ್ಧಿಸು. ॥೧೮॥

ಪ್ರಾಣಿಗಳೆಲ್ಲವನ್ನು ರಕ್ಷಿಸುವವನೂ, ದಿಗ್ಗಜಗಳಿಗೂ, ದಿಕ್ಪಾಲಕರಿಗೂ ಒಡೆಯನೂ, ಲೋಕವೆಲ್ಲವನ್ನು ಪವಿತ್ರಗೊಳಿಸುವವನೂ, ಸರ್ಪಗಳಿಗೆ ಒಡೆಯನೂ (ಅಂದರೆ ಸುಬ್ರಹ್ಮಣ್ಯಸ್ವಾಮಿಯ ತಂದೆಯೂ) ಸರ್ಪಗಳನ್ನು ತಲೆಯಲ್ಲಿ ಧರಿಸುವವನೂ ಆದ ಓ ಮಹಾದೇವ ನೀನು ಜಯಿಸು. ॥೧೯॥

ಸುಜನರಿಗೆ ಜ್ಞಾನವನ್ನುಂಟುಮಾಡಿ ಮುಕ್ತಿಯನ್ನು ಕರುಣಿಸುವವನೂ, ದುಷ್ಟರನ್ನು ಬಂಧನದಲ್ಲಿ ಕೆಡಹುವವನೂ, ಮಂಗಳದಾಯಕನೂ, ಭಸ್ಮವನ್ನು

ಜಯ ಮಾಯಾಮಯಾತೀತ ಮಾತೃಮಾನವಿವರ್ಜಿತ ।
ಜಯ ಯಂತ್ರಪರಾಜಯ್ಯ ಜಯಮಾನ ಹರಾವ್ಯಯ ॥೨೧॥

ಜಯ ರಾತ್ರಿಚರಾಕ್ಷಯ್ಯ ಮಹೇಶ ಶಿವಶಂಕರ ।
ಜಯ ವಿಶ್ವವಿಧಾನಾದಿವಿನಾಶನಮಹಾಬಲ ॥೨೨॥

ಜಯ ಸಾಮಮಹಾನಂದಸ್ತೋಮಸಂಭವಹರ್ಷಿತ ।
ಜಯ ಶಂಭೋ ಶಿವಾಮೇಯ ಶಮನಾಂತಕರ ಪ್ರಭೋ ॥೨೩॥

ಜಯಾಶೇಷವಿಷಾಕಾರದಗ್ಧದೇಹಾಭಯಪ್ರಭ ।
ಜಯ ಸರ್ವಸುರಾಧೀಶ ಸರ್ವಜ್ಞ ಪರಮೇಶ್ವರ ॥೨೪॥

ಜಯ ಹೇತಿಧರಾಪಾರಹರಹಂತಹನಾಹನ ।
ಜಯ ಬ್ರಹ್ಮಮಹಾಕ್ಷತ್ರಸಂಭಕ್ತಾಧ್ವರಶಿಕ್ಷಕ ॥೨೫॥

ಧರಿಸುವವನೂ, ಸರ್ಪಗಳನ್ನು ಅಲಂಕರಿಸಿಕೊಳ್ಳುವವನೂ ಆದ ಓ ದೇವ ಸರ್ವೋತ್ಕರ್ಷನಾಗು. ||೨೦||

ಮಾಯೆಯ ಸ್ವರೂಪನೂ ಮಾಯೆಗೆ ಅಧೀನನಲ್ಲದವನೂ, ಪ್ರಮಾಣ ಪ್ರಮಾತೃಪ್ರಮೇಯ ಈ ಮೂರು ಅಂಶಗಳಿಲ್ಲದವನೂ, ಯಂತ್ರಗಳಿಂದ ಜಯಿಸಲ್ಪಡದವನೂ, ನಾಶರಹಿತನೂ, ಸಂಹಾರಕರ್ತೃವೂ, ಆದ ಓ ದೇವದೇವನೇ ನೀನು ಸದಾ ಜಯಶಾಲಿಯಾಗು. ||೨೧||

ಜನರಲ್ಲೆಲ್ಲಾ ರಾತ್ರಿಯಂತಹ ಮಾಯೆಯನ್ನು ಹರಡಿ ವಿಹರಿಸುವವನೂ, ಮಂಗಳರೂಪನೂ, ಸುಖಕರನೂ, ಪ್ರಪಂಚದ ಸೃಷ್ಟಿಸ್ಥಿತಿಲಯಗಳನ್ನು ನಡೆಸುವವನೂ, ಮಹಾಬಲಿಷ್ಠನೂ, ಆದ ಓ ದೇವ ಜಯಿಸು. ||೨೨||

ಇಂಪಾದ ಸಾಮಗಾನದಿಂದ ಸಂತಸಪಡುವವನೂ, ಇಂದ್ರಿಯ ಪ್ರಮಾಣಗಳಿಗೆ ನಿಲುಕದವನೂ, ಯಮನನ್ನೂ ಸಂಹರಿಸುವವನೂ, ಆದ ಓ ಶಿವನೇ ಜಯಿಸು. ||೨೩||

ಸಂಸಾರಮೋಹವೆಂಬ ವಿಷವೇರಿದವರನ್ನು ಸಲಹುವವನೂ, ದೇವತೆಗಳೆಲ್ಲರಿಗೆ ಒಡೆಯನೂ, ಸರ್ವಜ್ಞನೂ, ಪರಮೇಶ್ವರನೂ, ಆದ ದೇವನೇ ಜಯಿಸು. ||೨೪||

ತ್ರಿಶೂಲ ಮೊದಲಾದ ಆಯುಧಗಳನ್ನು ಧರಿಸಿದವನೂ, ತುದಿ ಮೊದಲಿಲ್ಲದವನೂ, ಪ್ರಳಯಕರ್ತೃವೂ, ದುಷ್ಟರನ್ನು ಶಿಕ್ಷಿಸುವವನೂ, ಶಿಷ್ಟರನ್ನು ರಕ್ಷಿಸು

ಮದನದಮನ ಶಂಭೋ ಕಾಲಕಾಲ ಪ್ರಸೀದ
ಮಧುಮಥನ ಕಟಾಕ್ಷೋದ್ಭೂತಪಾದಾಬ್ಜ ಶಂಭೋ ।
ಗರಧರ ಗಿರಿಕನ್ಯಾನಾಯಕಾವಾದ್ಯಮುಗ್ಧ
ತ್ವಯಿ ಸದಯಧನಾಬ್ಧೌ ಕಾಮಿತಾ ಕಾಮಿದಾತಃ ॥೨೬॥

ದ್ವಿರದಾನನತಾತ ವೀತಶೋಕ
ಮುರಜಂಭಾಂತಕಮೌಲಿವಂದ್ಯಪಾದ ।
ಪುರವರ್ಗಾನಲನೇತ್ರಪಾಲಿಕೀಲಾ
ನಲತೂಲಾಯಿತಕಾಮ ಕಾಮಿತಾಂಗ ॥೨೭॥

ಮದಮುದಿತಕರೇಣುಯೂಥನಾಥೋ
ದ್ಧೃತಚರ್ಮಾಂಬರಸಾಕ್ಷಿಫಾಲ ಶಂಭೋ ।
ಗರತರಲಗಲ ಪ್ರಸೀದ ವಿಶ್ವಾ
ಧಿಕಕಾಲಾಂತಕ ಪಾಹಿ ಮಾಮನಾಥಂ ॥೨೮॥

ವವನೂ, ಬ್ರಾಹ್ಮಣ ಕ್ಷತ್ರಿಯ-ಮೊದಲಾದ ಪ್ರಪಂಚವೆಲ್ಲವನ್ನೂ ಪ್ರಳಯದಲ್ಲಿ ಸಂಹರಿಸುವನೂ, ದಕ್ಷಯಜ್ಞವನ್ನು ಸಂಹರಿಸಿದವನೂ, ಆದ ಓ ದೇವನೇ ಜಯಿಸು. ॥೨೫॥

ಮನ್ಮಥ ವೈರಿಯೂ, ಮೃತ್ಯುಂಜಯನೂ, ಆದ ಶಂಭುವೇ, ಪ್ರಸನ್ನನಾಗು. ನಾರಾಯಣನಿಂದ ವಂದಿಸಲ್ಪಡುವ ಓ ದೇವ ಅನುಗ್ರಹಿಸು. ಕಾಲಕೂಟ ವಿಷವನ್ನು ಧರಿಸಿರುವ ನೀಲಕಂಠನೂ, ಗಿರಿಜೆಯ ಪ್ರಿಯಪತಿಯೂ, ಭಕ್ತರ ಇಷ್ಟಾರ್ಥಗಳನ್ನು ಪೂರಯಿಸುವವನೂ ಆದ ಓ ಪರಮೇಶ್ವರ ರಕ್ಷಿಸು. ॥೨೬॥

ಗಜಾನನನ ತಂದೆಯೂ, ದುಃಖಸಂಬಂಧವಿಲ್ಲದವನೂ, ನಾರಾಯಣ, ಇಂದ್ರ ಇವರಿಂದ ವಂದಿಸಲ್ಪಡುವವನೂ, ಮೂರನೆಯ ಕಣ್ಣಿನುರಿಯಿಂದ ಕ್ಷಣಮಾತ್ರದಲ್ಲಿ ತ್ರಿಪುರಗಳನ್ನೂ, ಮನ್ಮಥನನ್ನೂ ಭಸ್ಮಮಾಡಿದವನೂ, ಸುಂದರಮೂರ್ತಿಯೂ ಆದ ಪರಶಿವನೇ, ನನ್ನನ್ನು ಉದ್ಧರಿಸು, ಸಲಹು, ಪ್ರಸನ್ನನಾಗು. ॥೨೭॥

ಮದಿಸಿದ ಆನೆಯ ಚರ್ಮವನ್ನು ಧರಿಸಿದವನೂ ಮುಕ್ಕಣ್ಣನೂ ಶ್ರೀಕಂಠನೂ ಸರ್ವೋತ್ತಮನೂ, ಮೃತ್ಯುಂಜಯನೂ, ಆದ ಶಂಕರನೇ. ಅನಾಥನಾದ ನನ್ನನ್ನು ಕರುಣೆಯಿಂದ ಸಲಹು. ॥೨೮॥

|| ಸೂತ ಉವಾಚ ||

ಉಪಲಕಣಾಶನಾತ್ಮಜೋ ಮಹೇಶಂ
ಪ್ರಣನಾಮೇಂದುಕಲಾಧರಂ ಮಹಾತ್ಮಾ ।
ವಚಸಾ ಮನಸಾ ಮುನಿರ್ಮಹೇಶಂ
ಕರಣಾನನ್ಯಗತೇನ ಭಕ್ತಿಯುಕ್ತಃ ॥೨೯॥

ಸುರಸಾಯನವಾಕ್ಯಪುಷ್ಪಮಾಲಾಂ
ಸುರಸಾಲಾಯಿತಶಂಭುಪಾದಪದ್ಮೇ ।
ವಿರಚಯ್ಯ ಸನಂದನಾದಿವಂದ್ಯೇ
ಜಗದಾದ್ಯೇ ಭಗವತ್ಪಥೇವ ನಂದೀ ॥೩೦॥

ಇತಿ ಶ್ರೀಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ನಂದಿಕೇಶ್ವರ ತಪೋವರ್ಣನ ಶಿವಪ್ರಾದುರ್ಭಾವನಂದಿಕೇಶಕೃತಸ್ತೋತ್ರವರ್ಣನಂ ನಾಮ ಪಂಚಮೋಽಧ್ಯಾಯಃ

ಶಿಲಾಶನನ ಮಗನಾದ ನಂದಿಯು ಹೀಗೆ, ಚಂದ್ರಶೇಖರನಾದ ಮಹೇಶ್ವರನನ್ನು ಭಕ್ತಿಯಿಂದ ಪರವಶನಾಗಿ ದೀನತೆಯಿಂದ ಸ್ತುತಿಸಿ ನಮಸ್ಕರಿಸಿದನು. ||೨೯||

ಅರ್ಥಗರ್ಭಿತವಾದ ಈ ರಸವತ್ತಾದ ಸ್ತೋತ್ರಗಳೆಂಬ ಹೂಸರವನ್ನು ನಂದಿಯು, ಸನಂದನಾದಿ ಮುನಿಗಳು ವಂದಿಸುವ ಮತ್ತು ದೇವತೆಗಳನ್ನು ರಕ್ಷಿಸುವ ಶಿವನ ಅಡಿದಾವರೆಯಲ್ಲಿ ಅರ್ಪಿಸಿ ಕೃತಕೃತ್ಯನಾದನು ಎಂದು ಸೂತರು ಮಹರ್ಷಿಗಳಿಗೆ ತಿಳಿಸಿದರು. ||೩೦||

ಇಲ್ಲಿಗೆ ಶ್ರೀಶಿವರಹಸ್ಯದ ಚತುರ್ಥಾಂಶದಲ್ಲಿ ಐದನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಷಷ್ಠೋಽಧ್ಯಾಯಃ

|| ಈಶ್ವರ ಉವಾಚ ||

ವತ್ಸಾಲಂ ಪರಿಖಿನ್ನೋಽಸಿ ತಪಸಾ ವೃಣು ಯದ್ವದ ।
ತತ್ತೇ ಸಂಪೂರಯಾಮ್ಯದ್ಯ ಅಲಂ ಖೇದೇನ ಸತ್ತಮ ॥೧॥

ಪುನರ್ನಂದೀ ಪ್ರಣಮ್ಯೇಶಂ ಉವಾಚ ಚ ಕೃತಾಂಜಲಿಃ ॥೨॥

ದೇವದೇವ ಮಹಾದೇವ ಶರಣಾಗತವತ್ಸಲ ।
ತ್ವತ್ಪಾದಾಂಬುರುಹದ್ವಂದ್ವೇ ನಿಶ್ಚಲಾ ಭಕ್ತಿರಸ್ತು ಮೇ ॥೩॥

ರುದ್ರಲಿಂಗಾರ್ಚನೇ ರುದ್ರಜಪೇ ಭಸ್ಮಾವಧಾರಣೇ ।
ನಿಶ್ಚಲೈವ ಭವೇದ್ಭಕ್ತಿಸ್ತೇನ ಕಿಂ ದುರ್ಲಭಂ ಮಮ ॥೪॥

ಆರನೆಯ ಅಧ್ಯಾಯ

ಎಲೈ ವತ್ಸ, ತಪಸ್ಸಿನಿಂದ ತುಂಬಾ ದಣಿದಿರುವೆ. ಸಾಕು, ಯಾವ ವರವು ಬೇಕೋ ಕೇಳು, ಕೊಡುವೆನು." ಎಂದು ಶಂಕರನು ಪ್ರೀತಿವಚನಗಳನ್ನಾಡಲು, ||೧||

ಆಗ ನಂದಿಯು ಶಿವನಿಗೆ ನಮಸ್ಕರಿಸಿ ಅಂಜಲಿಯನ್ನು ಧರಿಸಿ ಹೀಗೆ ಹೇಳಿದನು. ||೨||

ಭಕ್ತವತ್ಸಲನೂ ದೇವದೇವನೂ ಆದ ಓ ಮಹಾದೇವನೇ, ನಿನ್ನ ಅಡಿದಾವರೆಯಲ್ಲಿ ನನಗೆ ಸ್ಥಿರವಾದ ಭಕ್ತಿಯು ಸದಾ ನೆಲಸಿರಲಿ. ||೩||

ಶಿವಲಿಂಗದ ಪೂಜೆಯಲ್ಲೂ ರುದ್ರಸೂಕ್ತಜಪದಲ್ಲೂ, ಭಸ್ಮಧಾರಣೆಯಲ್ಲಿಯೂ ನನಗೆ ನಿಶ್ಚಲವಾದ ಭಕ್ತಿಯಿರಲಿ, ಅಷ್ಟೇ ಸಾಕು. ಅದರಿಂದ ನನಗೆ ಯಾವುದೂ ದುರ್ಲಭವಾಗಲಾರದು. ||೪||

ತಥೇತಿ ತಂ ವಿಶ್ವನೇತಾ ಅನುಮಾನ್ಯ ತಿರೋದಧೇ ।
ದೇವದೇವೋ ವಿರೂಪಾಕ್ಷೋ ದೇವೈಸ್ಸಹ ಜಗತ್ಪತಿಃ ॥೫॥

ಪುನಸ್ತತಾಪ ಶರದಾಂ ಶತಂ ವಾಯ್ವಂಬುಭೋಜನಃ ।
ರುದ್ರಂ ಜಪನ್ ಹೃಷ್ಟಮನಾಃ ಶಿವಲಿಂಗಂ ಸಮರ್ಚಯನ್ ॥೬॥

ತತೋಽಂತಿಮೇ ಪುನರ್ವರ್ಷೇ ದೇವದೇವ ಉಮಾಪತಿಃ ।
ಪ್ರಾದುರ್ಭೂತ್ವಾ ಮಹಾದೇವಃ ಕೃಪಯಾ ತಮುವಾಚ ಹ ॥೭॥

॥ ಶ್ರೀ ಈಶ್ವರ ಉವಾಚ ॥

ವತ್ಸಾಲಂ ತಪಸಾ ತೇಽದ್ಯ ದತ್ತಾ ತವ ಗಣೇಂದ್ರತಾ ।
ಗಣಾಧಿಗಣಪಾನ್ಮೇಽದ್ಯ ಯಥಾಽಹಂ ಸರ್ವಶಾಸಕಃ ॥೮॥

ನತ್ವಾ ಸ್ತುತ್ವಾ ಮಹಾದೇವಂ ನಾನ್ಯತ್ಕಿಂಚಿದಯಾಚತ ।
ಲಿಂಗಾರ್ಚನಾದ್ರುದ್ರಜಪಾತ್ ಭಸ್ಮರುದ್ರಾಕ್ಷಧಾರಣಾತ್ ॥೯॥

"ಹಾಗೆಯೇ ಆಗಲೆಂದು" ಅನುಗ್ರಹಿಸಿ ದೇವದೇವನೂ, ಜಗತ್ಪತಿಯೂ ಆದ ಪರಮೇಶ್ವರನು ದೇವತೆಗಳೊಡನೆ ಅಲ್ಲಿಯೇ ಅಂತರ್ಧಾನನಾದನು. ॥೫॥

ಆಮೇಲೆ ನಂದಿಯು ಪುನಃ ವಾಯುಜಲಗಳನ್ನು ಮಾತ್ರ ಸೇವಿಸುತ್ತಾ ರುದ್ರಸೂಕ್ತವನ್ನು ಪಠಿಸುತ್ತಾ, ಶಿವಲಿಂಗವನ್ನರ್ಚಿಸುತ್ತಾ ಭಕ್ತಿಯಿಂದ ನೂರು ವರ್ಷಗಳ ವರೆಗೆ ತಪಸ್ಸುಮಾಡಿದನು. ॥೬॥

ನೂರು ವರ್ಷಗಳ ಕೊನೆಯಲ್ಲಿ ದೇವದೇವನೂ ಗಿರಿಜಾಪತಿಯೂ ಆದ ಶಿವನು ಪುನಃ ಪ್ರತ್ಯಕ್ಷನಾದನು. ಮತ್ತು ನಂದಿಯನ್ನು ಕುರಿತು ದಯೆಯಿಂದ ಹೀಗೆ ಹೇಳಿದನು. ॥೭॥

ಎಲೈ ವತ್ಸ, ತಪಸ್ಸು ಸಾಕು, ನನ್ನ ಗಣಗಳ ಒಡೆತನವನ್ನು ನಿನಗೆ ಕೊಟ್ಟಿರುವೆನು. ನನ್ನಂತೆಯೇ ನೀನು ಸರ್ವಶಕ್ತನಾಗುವೆ. ॥೮॥

ಆಗಲೂ ನಂದಿಯು ಮಹಾದೇವನಿಗೆ ನಮಸ್ಕರಿಸಿ, ಸ್ತುತಿಸಿ, ಶಿವಲಿಂಗಾರ್ಚನೆ, ರುದ್ರಜಪ, ಭಸ್ಮರುದ್ರಾಕ್ಷಧಾರಣೆ ಇವುಗಳಲ್ಲಿ ಭಕ್ತಿಯನ್ನು ಹೊರತು ಇನ್ನಾವುದನ್ನೂ ಯಾಚಿಸಲಿಲ್ಲ.

ಅದರಂತೆಯೇ ಅನುಗ್ರಹಿಸಿ, ಆಗಲೂ ನಂದಿಯು ನೋಡುತ್ತಿರುವಂತೆಯೇ ದೇವತೆಗಳೊಡನೆ ಅಲ್ಲಿಯೇ ಅಂತರ್ಧಾನನಾದನು. ॥೯॥

ತಥೇತ್ಯುಕ್ತ್ವಾ ಯಯೌ ಸಾಂಬೋ ನಂದಿನಃ ಪಶ್ಯತಸ್ಸುರೈಃ ।
ಪುನಸ್ತತಾಪ ಶರದಾಂ ಶತಮಾಹಾರವರ್ಜಿತಃ ॥೧೦॥

ರುದ್ರಮಾರಾಧಯಂಸ್ತೀವ್ರಂ ರುದ್ರಾಧ್ಯಾಯಜಪಾದರಃ ।
ತಸ್ಮೈ ಪ್ರಾದುರ್ಬಭೌ ಸಾಂಬೋ ವೃಷಾರೂಢಸ್ಸುರೈರ್ವೃತಃ ॥೧೧॥

ಸಂಸ್ತುತೋ ದೇವಸಂಘೈಶ್ಚ ಮರುದ್ಭಿರ್ಯಕ್ಷಕಿನ್ನರೈಃ ।
ಪೃಷ್ಟ್ವೋತ್ಥಾಯ ತದಾ ನಂದೀ ಪ್ರಾಂಜಲಿಃ ಸ್ತೌತಿ ಶಂಕರಂ ॥೧೨॥

ರಮಾನಾಥನೇತ್ರಾಬ್ಜಪೂಜ್ಯಾಂಘ್ರಿಪದ್ಮಂ
ಮಹಾಕಾಲಕೂಟೋಜ್ವಲನ್ನೀಲಕಂಠಂ ।
ಸುಧಾಧಾಮಖಂಡೋರ್ಧ್ವಮೌಳಿಂ ತ್ರಿನೇತ್ರಂ
ಭಜೇ ಕಾಮಿನೀದೇಹಭಾಗಾರ್ಧಮೂರ್ತಿಂ ॥೧೩॥

ಪುನಃ ಆ ನಂದಿಯು ಯಾವ ಆಹಾರವನ್ನೂ ಸೇವಿಸದೆ ರುದ್ರಸೂಕ್ತವನ್ನು ಜಪಿಸುತ್ತಾ ರುದ್ರನನ್ನು ಭಕ್ತಿಯಿಂದಾರಾಧಿಸುತ್ತಾ ನೂರುವರ್ಷಗಳ ವರೆಗೆ ತಪಸ್ಸು ಮಾಡಿದನು. ॥೧೦॥

ನೂರುವರ್ಷಗಳ ಕೊನೆಯಲ್ಲಿ ಶಿವನು, ದೇವತೆಗಳು, ಯಕ್ಷಕಿನ್ನರರು, ಮರುತ್ತುಗಳು ಇವರಿಂದ ಪ್ರಾರ್ಥಿಸಲ್ಪಟ್ಟು ಪುನಃ ದೇವತೆಗಳೊಡನೆ ವೃಷಭವನ್ನೇರಿದವನಾಗಿ ನಂದಿಗೆ ಪ್ರತ್ಯಕ್ಷನಾದನು. ॥೧೧॥

ಶಿವನನ್ನು ನೋಡಿ ಸಡಗರದಿಂದೆದ್ದು ನಂದಿಯು ಆಗ ಅಂಜಲಿಯನ್ನು ಶಿರದಲ್ಲಿಟ್ಟು ಹೀಗೆ ಸ್ತುತಿಸಿದನು. ॥೧೨॥

(ಹಿಂದೊಮ್ಮೆ ಹರಿಯು ಜಗದೀಶ್ವರನಾದ ಶಿವನನ್ನು ಸಾವಿರ ಕಮಲಗಳಿಂದ ಪೂಜಿಸಲೋಸುಗ ಕಮಲಗಳನ್ನು ಸಿದ್ಧಪಡಿಸಿ ಕುಳಿತು ಭಕ್ತಿಯಿಂದ ಅರ್ಚಿಸುತ್ತಿದ್ದನು. ಆಗ ಶಿವನು ಅವನ ಭಕ್ತಿಯನ್ನು ಪರೀಕ್ಷಿಸಲೋಸುಗ ಅವುಗಳಲ್ಲಿ ಒಂದು ಕಮಲವನ್ನು ಮಾಯ ಮಾಡಿದನು. ಒಂಭಯ್ನೂರ ತೊಂಭತ್ತೊಂಬತ್ತು ಕಮಲಗಳ ಅರ್ಚನೆಯಾಯ್ತು, ಒಂದು ಕಮಲವು ಅಲ್ಲಿರಲೇ ಇಲ್ಲ. ಪೂಜೆಯಿಂದ ಬಿಟ್ಟೇಳುವಂತಿಲ್ಲ. ಆಗ ಹರಿಯು—" ನನ್ನನ್ನು ಕಮಲಾಕ್ಷನೆಂದು ಶ್ರುತಿಯು ಹೇಳುತ್ತಿರುವುದು. ಆದುದರಿಂದ ನನ್ನ ಕಣ್ಣನ್ನೇ ಕಿತ್ತು ಕಮಲವಾಗಿ ಶಿವನಿಗೆ

ಮಹೀಜಹ್ನುಕನ್ಯಾಜಟಾಜೂಟಕೋಟಿ
ತಟಿತ್ಕೋಟಿಕರ್ಪೂರಖಂಡಾಭದೇಹಂ ।
ಸುಧಾಧಾಮಖಂಡೋರ್ಧ್ವಮೌಲಿಂ ತ್ರಿನೇತ್ರಂ
ಭಜೇ ಕಾಮಿನೀದೇಹಭಾಗಾರ್ಧಮೂರ್ತಿಂ ॥೧೪॥

ಸದಾಽಹೀಶ್ವರೋದ್ಯೋತಿತೈರಾಸ್ಫುರಂತಂ
ನಟಂತಂ ಭಜೇಽಹಂ ಭವಾನ್ಯಾ ಸಮೇತಂ ।
ಸುಹೇರಂಬತಾತಂ ಷಡಾಸ್ಯೈಕದೃಷ್ಟಿಂ
ಮಹಾಂಭೋರುಹೋದ್ಭೂತಮೌಲ್ಯರ್ಧಹಸ್ತಂ ॥೧೫॥

ಸ್ರವಚ್ಛ್ವಾಸೃಗಾಸ್ರಾವಿಸ್ತಂಬೇರಮಾಧೀಶ
ಚರ್ಮೈಕವಸ್ತ್ರಂ ಭಜೇ ದೇವದೇವಂ ಮಹೇಶಂ ಚಿದಾದ್ಯಂ ।
ಅಸಂಗಂ ಚಿದಂಗಂ ಭುಜಂಗಂ ಭವಾನ್ಯಾಃ
ಮಹಾದೇವಹೃದ್ಯಂ ಪ್ರಸನ್ನಂ ಜನಾನಾಂ ।

ಆರ್ಪಿಸುವೆನು, ಎಂದು ನಿಶ್ಚಯಿಸಿ ಅದರಂತೆಯೇ ಮಾಡಿದನು, ಆಗ ಶಿವನು ಅವನ ಭಕ್ತಿಗೆ ಮೆಚ್ಚಿದನು.) ಹೀಗೆ ನಾರಾಯಣನ ನೇತ್ರಕಮಲದಿಂದ ಪೂಜಿಸಲ್ಪಟ್ಟ ಆಡಿದಾವರೆಯುಳ್ಳವನೂ, ಕಾಲಕೂಟವಿಷದಿಂದ ನೀಲವಾದ ಕಂಠವುಳ್ಳವನೂ, ತಲೆಯಲ್ಲಿ ಚಂದ್ರಕಲೆಯನ್ನು ಧರಿಸಿದವನೂ, ಹಣೆಯಲ್ಲಿ ಅಗ್ನಿ ನೇತ್ರವುಳ್ಳವನೂ, ಅರ್ಧನಾರಿಯ ವೇಷವುಳ್ಳವನೂ ಆದ ಶಿವನನ್ನು ಭಜಿಸುವೆನು. ॥೧೩॥

ಜಟೆಯಲ್ಲಿ ಗಂಗೆಯನ್ನು ಧರಿಸಿದವನೂ, ಕರ್ಪೂರಖಂಡದಂತೆ ಶುದ್ಧವಾಗಿ, ಬಿಳುಪಾದ ನಿರ್ಮಲವಾದ ಶರೀರವುಳ್ಳವನೂ ಆದ ಚಂದ್ರಶೇಖರನಾದ ಅರ್ಧನಾರೀಶ್ವರನನ್ನು ಭಜಿಸುವೆನು. ॥೧೪॥

ಸ್ಫುರಿಸುತ್ತಲಿರುವ ಸರ್ಪಗಳನ್ನು ಧರಿಸಿ ಪಾರ್ವತಿಯೊಡನೆ ನರ್ತಿಸುವವನೂ, ವಿನಾಯಕನ ತಂದೆಯೂ, ಕುಮಾರಸ್ವಾಮಿಯಲ್ಲಿ ಅಮಿತವಾತ್ಸಲ್ಯವುಳ್ಳವನೂ, ಬ್ರಹ್ಮದೇವನಿಗೆ ಅಭಯಪ್ರದಾನಮಾಡಿ ಅನುಗ್ರಹಿಸುವವನೂ ಆದ ಶಿವನನ್ನು ಭಜಿಸುವೆನು. ॥೧೫॥

ಗಜಚರ್ಮವನ್ನು ಧರಿಸುವವನೂ, ಅನಾದಿಪುರುಷನೂ, ನಿರ್ವಿಕಾರನೂ, ಜ್ಞಾನರೂಪನೂ, ಪಾರ್ವತೀದೇವಿಯ ಪ್ರಿಯ ಪತಿಯೂ, ಭಕ್ತವತ್ಸಲನೂ,

ಕುರಂಗಂ ವಹಂತಂ ಸ್ವಪಾಣೌ ಭಜೇಽಹಂ
ಮಹೋಕ್ಷಾಂಗಸಂಗಂ ಸದಾ ಸ್ವಾತ್ಮರಂಗಂ ॥೧೬॥

ವಿನಿರ್ಧೂತಕಾಮಂ ಸದಾಸ್ವಾತ್ಮರಾಮಂ
ಮಹಾವಾಮದೇವಾದಿಸಾಮೈಕಸೀಮಂ ।
ಘನಾನಂದಭಸ್ಮೈಕಧಾಮಾನವಿಾಶಂ
ಭಜೇ ವಿಸ್ಮೃತಾಪಾರಸರ್ವೇಂದ್ರಿಯಾರ್ಥಂ ॥೧೭॥

ತತ್ಸ್ತುತ್ಯಾ ತೋಷಿತಶ್ಶಂಭುಸ್ತಮುವಾಚ ಪ್ರಸನ್ನಧೀಃ ॥೧೮॥

॥ ಈಶ್ವರ ಉವಾಚ ॥

ನಿತ್ಯೋಽಸಿ ಸರ್ವದಾ ಸರ್ವೈಃ ಸೇವ್ಯಃ ಸ್ತುತ್ಯೋಽಸಿ ಸಾಂಪ್ರತಂ ।
ಗಣೇಂದ್ರೋಽಸ್ಯಮರಾಧೀಶಃ ಸಮಾಹೂಯ ಮಹೇಶ್ವರಃ ॥೧೯॥

ಸಾರೂಪ್ಯಂ ಚ ದದೌ ತಸ್ಮೈ ದೇವದೇವೋ ಮಹೇಶ್ವರಃ ।
ಕಪರ್ದಚಂದ್ರಾರ್ಧಧರಂ ನೀಲಕಂಠಂ ತ್ರಿಲೋಚನಂ ॥೨೦॥

ಕೈಯಲ್ಲಿ ಜಿಂಕೆಯನ್ನು ಧರಿಸಿರುವವನೂ, ವೃಷಭವಾಹನನೂ, ಸದಾ ಆತ್ಮಚಿಂತನೆಯಿಂದ ತೃಪ್ತನೂ ಆದ ಶಿವನನ್ನು ಸೇವಿಸುವೆನು. ॥೧೬॥

ಜಿತೇಂದ್ರಿಯನೂ, ತನ್ನಲ್ಲಿಯೇ ವಿಹರಿಸುವವನೂ, ವಾಮದೇವ-ಮೊದಲಾದ ಮುನಿಗಳ ಸಾಮಗಾನದಿಂದ ಸ್ತುತಿಸಲ್ಪಡುವವನೂ, ಇಂದ್ರಿಯಗಳಿಗೆ ಅಧೀನನಲ್ಲದವನೂ ಆನಂದಮಯನೂ ಆದ ದೇವದೇವನನ್ನು ಭಜಿಸುವೆನು." ॥೧೭॥

ನಂದಿಯ ಈ ಸ್ತುತಿಯಿಂದ ಸಂತುಷ್ಟನಾಗಿ ಶಿವನು ಪ್ರಸನ್ನತೆಯಿಂದ ಹೀಗೆ ಹೇಳಿದನು. ॥೧೮॥

"ಎಲೈ ನಂದೀಶ್ವರ, ನೀನು ನಿತ್ಯನಾಗುವೆ, ಎಲ್ಲರಿಂದಲೂ ಸ್ತುತಿಸಲ್ಪಡುವೆ." ಎಂದು ಮಹೇಶ್ವರನು ಹೇಳಿ ತನಗೆ ಸಮಾನವಾದ ರೂಪವನ್ನೂ ಅನುಗ್ರಹಿಸಿದನು. ॥೧೯॥

ಆಗ ನಂದಿಯು ಶಿವನಂತೆ ಜಟೆಯಲ್ಲಿ ಚಂದ್ರನುಳ್ಳವನಾದನು. ನೀಲಕಂಠನಾದನು. ಮುಕ್ಕಣ್ಣನಾದನು. ನಾಲ್ಕು ತೋಳುಗಳುಳ್ಳವನಾದನು. ಕೈಗಳಲ್ಲಿ

ಚತುರ್ಭುಜಂ ಚೈಣಪಾಶಖಟ್ವಾಂಗಪರಿಶೋಭಿತಂ ।
ದ್ವೀಪಿಚರ್ಮಪರೀಧಾನಂ ಸರ್ವಾಭರಣಭೂಷಿತಂ ॥೨೧॥

ಭಸ್ಮರುದ್ರಾಕ್ಷಸಂಪನ್ನಂ ತಂ ತದಾ ಕಾಂಚನೈರ್ಘಟೈಃ ।
ಭದ್ರಾಸನೇ ಚೋಪವಿಶ್ಯ ಗಣೇಂದ್ರಮಭ್ಯಷೇಚಯತ್ ॥೨೨॥

ಗಾಣಾಪತ್ಯೇ ಗಣೇಂದ್ರಾಣಾಂ ನಂದಿನಂ ವಿಶ್ವನಂದಿನಂ ।
ವಿಷ್ಣುಬ್ರಹ್ಮಮಹೇಂದ್ರಾಂಶ್ಚ ವೀಕ್ಷ್ಯ ಪ್ರಾಹ ಮಹೇಶ್ವರಃ ॥೨೪॥

॥ ಈಶ್ವರ ಉವಾಚ ॥

ಏಷ ಸರ್ವಗಣೇಂದ್ರಾಣಾಮಧಿಕಃ ಕಲ್ಪಿತೋ ಮಯಾ ।
ಗಣೇಶಸ್ಕಂದತುಲ್ಯೋಽಯಂ ಪೂಜ್ಯಸ್ಸರ್ವದಿವೌಕಸಾಂ ॥೨೫॥

ಶೈವಾಚಾರ್ಯೋಽಯಮತುಲಃ ಶಿವಜ್ಞಾನೈಕಭಾಜನಃ ।
ಅಪರ್ಣಾತನಯೋ ನಿತ್ಯೋ ಮಮ ಸಾರೂಪ್ಯಭಾಗಯಂ ॥೨೬॥

ಜಿಂಕೆ, ಪಾಶ, ಡಮರುಗ, ತ್ರಿಶೂಲಗಳು ಕಂಡುಬಂದುವು. ಹುಲಿಯ ಚರ್ಮವನ್ನು ಧರಿಸಿದನು. ಸರ್ಪಭೂಷಣನಾದನು. ಭಸ್ಮರುದ್ರಾಕ್ಷಿಗಳನ್ನು ಧರಿಸಿದವನಾದನು. ಇಂತಹ ನಂದಿಯನ್ನು ಶಿವನು ಭದ್ರಾಸನದಲ್ಲಿ ಕುಳ್ಳಿರಿಸಿ ಚಿನ್ನದ ಕಲಶಗಳಲ್ಲಿ ನೀರು ತರಿಸಿ ಗಣೇಂದ್ರ ಪದವಿಯಲ್ಲಿ ಅಭಿಷೇಕಮಾಡಿದನು. ॥೨೦-೨೧-೨೨॥

ಹೀಗೆ ನಂದಿಯನ್ನು ತನ್ನ ಗಣಗಳ ನಾಯಕನನ್ನಾಗಿ ಮಾಡಿದ ಮಹೇಶ್ವರನು ಹರಿಬ್ರಹ್ಮದೇವೇಂದ್ರರನ್ನು ಕುರಿತು ಹೀಗೆ ಹೇಳಿದನು. ॥೨೪॥

"ಎಲೈ ದೇವತೆಗಳೇ, ಇವನನ್ನು ನಾನು ನನ್ನ ಗಣಗಳಿಗೆಲ್ಲಾ ನಾಯಕನನ್ನಾಗಿ ಮಾಡಿರುವೆ. ವಿನಾಯಕಸ್ಕಂದರಿಗೆ ಇವನು ಸಮಾನನಾಗಿರುವನು. ಆದುದರಿಂದ ನೀವೆಲ್ಲರೂ ಇವನನ್ನು ಅರ್ಚಿಸಬೇಕು. ॥೨೫॥

ಶಿವಜ್ಞಾನಿಯಾದ ಈತನು ಶಿವಭಕ್ತರಿಗೆ ಆಚಾರ್ಯನಾಗಿದ್ದು ಗಿರಿಜೆಗೆ ಪ್ರೀತಿಯ ಸಾಕುಮಗನಾಗಿರುವನು. ನನ್ನ ಸಮಾನರೂಪವನ್ನು ಹೊಂದಿದ ಇವನು ನನ್ನ ಎರಡನೆಯ ಶರೀರವಾಗಿ ನನ್ನಂತೆಯೇ ಪ್ರಪಂಚವನ್ನಾಳುವನು. ॥೨೬॥

ಮಮಾಪರಾ ತನುರ್ನಂದೀ ವಿಶ್ವಸ್ಯಾಜ್ಞಾಪ್ರವರ್ತಕಃ ।
ಇತ್ಯುಕ್ತ್ವಾಽಥ ಮಹಾದೇವೋ ಗಣೇಂದ್ರಾಂಸ್ತತ್ರ ಭೂಧರೇ ॥೨೭॥

ಮಂಟಪೇ ರತ್ನಸಂಕೀರ್ಣೇ ದೇವಪುಷ್ಪವಿರಾಜಿತೇ ।
ನದತ್ಸು ದೇವತೂರ್ಯೇಷು ನೃತ್ಯಂತೀಷ್ವಪ್ಸರಸ್ಸು ಚ ॥೨೮॥

ಪಿತ್ರೂಣಾಂ ಮಾನಸೀಂ ಕನ್ಯಾಂ ಸುಯಶಾಂ ನಾಮ ಸುಂದರೀಂ ।
ಸರ್ವಾಭರಣಸಂಪನ್ನಾಂ ತತ್ಪಾಣಿಂ ಗ್ರಾಹಯುಚ್ಛಿವಃ ॥೨೯॥

ದೇವೀ ಸ್ನುಷಾಂ ಸಮಾಲಿಂಗ್ಯ ಚಕ್ರೇ ವೈವಾಹಿಕೀಂ ವಿಧಿಂ ।
ದೇವೈಸ್ಸಹ ಮಹಾದೇವೋ ದೇವ್ಯಾ ವಿಘ್ನೇಶನಂದಿನಾ ॥೩೦॥
ಸ್ಕಂದೇನ ಗಣಸಂಘೈಶ್ಚ ಯಯೌ ಕೈಲಾಸಪರ್ವತಂ ।

ಏವಂ ಶಿಲಾದತನಯಂ ಶಶಿಶೇಖರೋಽಸೌ
ದತ್ವಾ ಗಣೇಂದ್ರಪದವೀಂ ಚ ವಿವಾಹ್ಯ ದೇವೈಃ ।
ರುದ್ರಾದಿಜಾಪ್ಯಪರಿತೋಷಣತೋ ಮುನೀಂದ್ರ
ಗೌರ್ಯಾ ವಿರಾಜಿತವಪುಃ ಪ್ರಯಯೌ ಗಿರೀಂದ್ರಂ ॥೩೧॥

ಹೀಗೆ ಹೇಳಿ ಮಹಾದೇವನು ಆ ಮಲಯಗಿರಿಯಲ್ಲಿ ರತ್ನಖಚಿತವಾದ ಮಂಟಪದಲ್ಲಿ ದೇವವಾದ್ಯಗಳು ಮೊಳಗುತ್ತಿರಲು, ಅಪ್ಸರೆಯರು ನರ್ತಿಸುತ್ತಿರಲು, ಪಿತೃದೇವತೆಗಳ ಮಾನಸಪುತ್ರಿಯಾದ, ಸುಂದರಿಯಾದ, ಸರ್ವಾಭರಣಭೂಷಿತಳಾದ ಸುಯಶಾದೇವಿಯೊಡನೆ ಆ ನಂದಿಕೇಶನಿಗೆ ಪಾಣಿಗ್ರಹಣಮಾಡಿಸಿದನು. ಪಾರ್ವತಿಯು ಆ ತನ್ನ ಸೊಸೆಯನ್ನು ಪ್ರೀತಿಯಿಂದಾಲಿಂಗಿಸಿ ಮದುವೆಯ ಮಂಗಳ ಕಾರ್ಯಗಳನ್ನು ತಾನೇ ನೆರವೇರಿಸಿದಳು. ||೨೭-೨೮-೨೯||

ಆಮೇಲೆ ಮಹಾದೇವನು ದೇವತೆಗಳು, ಪಾರ್ವತಿ, ವಿನಾಯಕ, ಸ್ಕಂದ, ನಂದಿಕೇಶದಂಪತಿಗಳು, ಗಣಗಳು— ಇವರೊಡನೆ ಕೈಲಾಸಗಿರಿಗೆ ತೆರಳಿದನು. ||೩೦||

ಎಲೈ ಜೈಗೀಷವ್ಯಮುನಿಯೇ, ಹೀಗೆ ಶಿಲಾಶನನ ಮಗನಾದ ನಂದಿಯ ಭಕ್ತಿಪೂರ್ವಕವಾದ ತಪಸ್ಸಿಗೆ ಮೆಚ್ಚಿ, ಶಿವನು ಅವನಿಗೆ ಗಣೇಂದ್ರಪದವಿಯನ್ನು

ಇತಿ ಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ನಂದಿಕೇಶ್ವರ ವರಪ್ರದಾನಗಾಣಾಪತ್ಯಾಭಿಷೇಚನ ವಿವಾಹಾದಿವರ್ಣನಂ ನಾಮ ಷಷ್ಠೋಽಧ್ಯಾಯಃ

ಅನುಗ್ರಹಿಸಿ ಪಿತೃಕನ್ಯೆಯೊಡನೆ ಮದುವೆಮಾಡಿ, ಪಾರ್ವತಿಯೊಡನೆಯೂ ದೇವತೆಗಳೊಡನೆಯೂ ಕೈಲಾಸಗಿರಿಗೆ ತೆರಳಿದನು. ಎಂದು ಕುಮಾರಸ್ವಾಮಿಯು ನಂದೀಶ್ವರನು ಗಾಣಾಪತ್ಯಪದವಿಯನ್ನು ಹೊಂದಿದ ವಿಷಯವನ್ನು ಜೈಗೀಷವ್ಯನಿಗೆ ವಿವರಿಸಿದನು. ||೩೧||

ಇಲ್ಲಿಗೆ ಶ್ರೀಶಿವರಹಸ್ಯದ ಚತುರ್ಥಾಂಶದಲ್ಲಿ ಆರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಸಪ್ತಮೋಽಧ್ಯಾಯಃ

॥ ಜೈಗೀಷವ್ಯ ಉವಾಚ ॥

ಶ್ರುತಂ ತೇ ತಾರಕಾರಾತೇ ನಂದಿನಶ್ಚರಿತಂ ಶುಭಂ ।
ನಂದಿಕೇಶಸ್ಯ ಭಕ್ತಸ್ಯ ಚರಿತಂ ಸಂಶ್ರುತಂ ಮಯಾ ॥೧॥

ತ್ವತ್ತಃ ಷಡ್ವಕ್ತ್ರ ಶುಭದಂ ದೇವದೇವಪ್ರಸಾದಜಂ ॥೨॥

ನ ತೃಪ್ತಿರಸ್ತಿ ಭಕ್ತಾನಾಂ ಶಂಭೋಃ ಸಂಶೃಣ್ವತೋ ಮಮ ।
ಚರಿತ್ರಂ ಪರಮಂ ಪುಣ್ಯಂ ತ್ರಿನೇತ್ರಪ್ರಿಯಕೃತ್ತಮಂ ॥೩॥

ಚಂಡೀಶಃ ಪರಮೋ ಯೋಗೀ ಚಂಡಂ ಪಾಪಂ ಮಹತ್ಪುರಾ ।
ಕೃತವಾನ್ ಪಿತರಂ ಹತ್ವಾ ಸಕಥಂ ಗಣಪೋಽಭವತ್ ॥೪॥

ದೇವದೇವಪ್ರಸಾದೇನ ಚರಿತಂ ವಕ್ತುಮರ್ಹಸಿ ॥೫॥

ಏಳನೆಯ ಅಧ್ಯಾಯ

ಕುಮಾರಸ್ವಾಮಿಯೇ, ಶಿವಭಕ್ತನಾದ ನಂದಿಕೇಶನ ಚರಿತ್ರೆಯನ್ನು ನಿನ್ನಿಂದ ಕೇಳಿ ನಾನು ಕೃತ್ಯಕೃತ್ಯನಾದೆನು. ॥೧॥

ಷಣ್ಮುಖದೇವನೇ, ಶಿವನ ಅನುಗ್ರಹದಿಂದ ಬೆರೆತಿರುವ, ಶಿವನಿಗೆ ಪ್ರಿಯವಾದ ಶಿವಭಕ್ತರ ಚರಿತವನ್ನು ನಿನ್ನ ಮುಖದಿಂದ ಕೇಳಿದಷ್ಟೂ ನನಗೆ ತೃಪ್ತಿಯಾಗಲೊಲ್ಲದು, ಇನ್ನೂ ಕೇಳಬೇಕೆಂದಿಸುತ್ತದೆ. ॥೨-೩॥

ಈಗ ಮಹಾಯೋಗಿಯೂ ಶಿವಗಣನಾಯಕನೂ ಆಗಿರುವ ಚಂಡೀಶನು ಹಿಂದೆ ತನ್ನ ತಂದೆಯನ್ನು ಕೊಂದು ಮಹಾಪಾಪಿಯಾಗಿದ್ದನಲ್ಲವೆ? ಅಂತಹವನು ಶಿವನ ಅನುಗ್ರಹದಿಂದ ಹೇಗೆ ಗಣೇಂದ್ರನಾದನು! ಹೇಳು. ॥೪-೫॥

॥ ಸೂತ ಉವಾಚ ॥

ಇತಿ ತಸ್ಯ ಮುನೇರ್ವಾಚಂ ಶ್ರುತ್ವಾ ಪಂಚಾಸ್ಯಸಂಭವಃ ।
ಷಡ್ವಕ್ತ್ರಶ್ಚಾವದತ್ತಂ ಚ ಜೈಗೀಷವ್ಯಂ ಶಿವಾರ್ಚಕಂ ॥೬॥

॥ ಸ್ಕಂದ ಉವಾಚ ॥

ಪುರಾ ಗರ್ಗಕುಲೋತ್ಪನ್ನಃ ಕಣಭದ್ರೋಽಭವದ್ದ್ವಿಜಃ ।
ಮಾಲ್ಯವಚ್ಛಿಖರೇ ವಿಪ್ರೋ ವರ್ಣಾಶ್ರಮರತೋ ಯುವಾ ॥೭॥

ಸುನೀತೀ ನಾಮ ತದ್ಭಾರ್ಯಾ ಛಾಯೇವಾದಿತ್ಯಮನ್ವಯಾತ್ ।
ಶೀಲೇನ ಭರ್ತೃನಿರತಾ ಶುಶ್ರೂಷಂತೀ ಪತಿಂ ಸದಾ ॥೮॥

ದೇವಾಗ್ನಿಗುರುವಿಪ್ರೇಷು ಅತಿಥೌ ಭಕ್ತಿತತ್ಪರಾ ।
ಕಾಲೇ ಪುಷ್ಪಂ ಫಲಂ ಭಿನ್ನಂ ನಿವೇದ್ಯ ಧವತತ್ಪರಾ ॥೯॥

ಸ್ವಾಧ್ಯಾಯಶೀಲಿನಂ ವಿಪ್ರಂ ಸೇವಂತೀ ಭಕ್ತಿತತ್ಪರಾ ।
ಮಾಲ್ಯವಚ್ಛಿಖರೇ ರಮ್ಯೇ ವನನಿರ್ಝರಕಂದರೇ ॥೧೦॥

ಎಂದ ಜೈಗೀಷವ್ಯನ ಈ ಮಾತನ್ನು ಕೇಳಿ ಶಿವನ ಪುತ್ರನಾದ ಷಣ್ಮುಖನು ಅವನನ್ನು ಕುರಿತು ಹೀಗೆ ಹೇಳಿದನು. ॥೬॥

"ಹಿಂದೆ ಗರ್ಗಗೋತ್ರದವನಾದ ಕಣಭದ್ರನೆಂಬ ಬ್ರಾಹ್ಮಣನಿದ್ದನು. ಕರುಣಾಶಾಲಿಯಾದ ಅವನು ಮಾಲ್ಯವತ್ಪರ್ವತದ ತಪ್ಪಲಲ್ಲಿ ತನ್ನ ವರ್ಣಾಶ್ರಮಗಳಿಗೆ ಯೋಗ್ಯವಾಗಿ ಆಚರಿಸುತ್ತಾ ವಾಸವಾಗಿದ್ದನು. ॥೭॥

ಅವನಿಗೆ ಸುನೀತಿಯೆಂಬ ಹೆಂಡತಿಯಿದ್ದಳು. ಛಾಯೆಯು ಸೂರ್ಯನನ್ನು ಬಿಡದಿರುವಂತೆ ಅವಳು ಪತಿಯನ್ನು ಬಿಡದೇ ಸೇವಿಸುತ್ತಿದ್ದಳು. ॥೮॥

ದೇವತೆಗಳು, ಅಗ್ನಿ, ಗುರುಹಿರಿಯರು, ಬ್ರಾಹ್ಮಣರು, ಅತಿಥಿಗಳು, ಇವರನ್ನು ಅವಳು ಭಕ್ತಿಯಿಂದ ಸತ್ಕರಿಸುತ್ತಿದ್ದಳು. ಶಿವಾರ್ಚನೆಯಲ್ಲಿ ನಿರತನಾದ ತನ್ನ ಪತಿಗೆ ತಕ್ಕಕಾಲದಲ್ಲಿ ಹೂವು ಹಣ್ಣು ಆಹಾರಗಳನ್ನೊದಗಿಸುತ್ತಾ ಭಕ್ತಿಯಿಂದ ಸೇವಿಸುತ್ತಿದ್ದಳು. ॥೯॥

ಆ ಕಣಭದ್ರನು ವಾಸವಾಗಿದ್ದ ಬೆಟ್ಟದ ತಪ್ಪಲು ಬಹು ಮನೋಹರವಾಗಿತ್ತು. ನಿರ್ಮಲವಾದ ಗಿರಿನದಿಗಳು ಅಲ್ಲಿ ಹರಿಯುತ್ತಿದ್ದುವು. ಜಿಂಕೆಯಂತಹ

ನಾನಾಪಕ್ಷಿಮುಖಾಪಾರನದೀನಿರ್ಝರಶೋಭಿತೇ ।
ಮೃಗಸಾರಸಸಂಘುಷ್ಟಸರೋಽಬ್ಜೃಂದೋತ್ಪಲಾವೃತೇ ॥೧೧॥

ನವಶಾದ್ವಲಸಂಯುಕ್ತಗೋಪ್ರಚಾರವನಸ್ಥಲೇ
ನಿನಾಯ ದಿವಸಾನ್ ವಿಪ್ರೋ ಭಾರ್ಯಯಾ ತಪಸಿ ಸ್ಥಿತಃ ॥೧೨॥

ಕದಾಚಿತ್ತಪಸಿ ಸ್ವೈರಂ ವರ್ತಮಾನೇ ಮಹಾಮುನೌ ।
ಆಜಗಾಮಾನಮಿತ್ರೋ ವೈ ವೈದರ್ಭೋ ನೃಪಸತ್ತಮಃ ॥೧೩॥

ರಥೇನ ತಂ ಮುನಿಂ ಯಾಜ್ಯೋ ಯಾಜಕಂ ಮುನಿಸತ್ತಮಂ ।
ಮಾಲ್ಯವಚ್ಛಿಖರೇ ತತ್ರ ದೃಷ್ಟ್ವಾ ರಾಜಾನಮತ್ರಿಜ ॥೧೪॥

ಸ್ವಾಗತೇನಾಭಿನಂದ್ಯಾಥ ವಿಷ್ಟರೇಣೋಪಮಂತ್ರ್ಯ ತಂ ।
ಸೋಽನಮಿತ್ರೋಽಥ ವೈದರ್ಭೋ ಗಾರ್ಗ್ಯಂ ತಂ ಪ್ರಣಿಪತ್ಯ ಹಿ ॥೧೫॥

ಉವಾಚ ಕುಶಲಂ ವಿಪ್ರಂ ತಪೋಽಗ್ನಿಷು ವನೇ ತಥಾ ।
ಮೃಗಪಕ್ಷಿಗಣೇ ಪುತ್ರೇ ತಪಸ್ವಿಷು ನೃಪಸ್ತಥಾ ॥೧೬॥

ಸಾಧುಮೃಗಗಳು ಹೇರಳವಾಗಿದ್ದುವು. ಸದಾ ಅರಳಿರುವ ಕಮಲವುಳ್ಳ ಸರೋವರಗಳು ತುಂಬಿದ್ದುವು. ಅವುಗಳ ದಡದಲ್ಲಿ ಬೆಳ್ಳಕ್ಕಿಗಳು ಸಾಲಾಗಿ ಕುಳಿತು ಬಿಳಿಯ ತೋರಣವನ್ನು ಕಟ್ಟುತ್ತಿದ್ದುವು. ಹಸುರಾದ ಚಿಗುರು ಹುಲ್ಲುಗಳ ಮೈದಾನದಲ್ಲಿ ಹಸುಗಳು ಮೇಯುತ್ತಿದ್ದುವು. ಇಂತಹ ಪ್ರಕೃತಿ ಸುಂದರವಾದ ಸ್ಥಳದಲ್ಲಿ ಆ ಕಣಭದ್ರನು ಸದಾ ಪತ್ನಿಯೊಡನಿರುತ್ತಾ ತಪಸ್ಸನ್ನಾಚರಿಸುತ್ತಿದ್ದನು. ||೧೦-೧೧-೧೨||

ಹೀಗೆ ಆ ಮಹಾಮುನಿಯು ತಪಸ್ಸಿನಲ್ಲಿ ನಿರತನಾಗಿರಲು ಒಂದು ದಿನ ವಿದರ್ಭ ದೇಶದ ರಾಜನಾದ ಅನಮಿತ್ರನೆಂಬುವನು ಅಲ್ಲಿಗೆ ಬಂದನು. ||೧೩||

ಆ ರಾಜನು ಯಾಗಮಾಡುವವನಾಗಿ ಯಾಗ ಮಾಡಿಸುವ ಆ ಮುನಿಯನ್ನು ಕರೆಯಲೋಸುಗ ಬಂದಿದ್ದನು. ಅಂತಹ ಅನಮಿತ್ರ ರಾಜನನ್ನು ನೋಡಿ ಕಣಭದ್ರನು ಸುಖಾಗಮನವನ್ನು ಕೇಳಿ ಆಸನವನ್ನು ಕೊಟ್ಟು ಉಪಚರಿಸಿದನು. ||೧೪||

ಆಗ ಅನಮಿತ್ರರಾಜನು ಆ ಮುನಿಗೆ ನಮಸ್ಕರಿಸುತ್ತಾ ಅವನ ತಪಸ್ಸು ಅಗ್ನಿ, ತಪೋವನ, ಮಕ್ಕಳು, ತಪಸ್ವಿಗಳು ಇವರ ವಿಷಯದಲ್ಲಿ ಕುಶಲ ಪ್ರಶ್ನೆಯನ್ನು ಮಾಡಿ ಹೀಗೆ ಕೇಳಿದನು. ||೧೫-೧೬||

॥ರಾಜೋವಾಚ॥

ಭಗರ್ವ ತವ ಪಾದಾಬ್ಜಂ ದ್ರಷ್ಟುಮಭ್ಯಾಗತಃ ಪುರಾತ್ ।
ಸನಾಥಂ ಕುರು ಮಾಂ ಗಾರ್ಗ್ಯ ತ್ವದಾಗಮನತೋ ಮುನೇ ॥೧೭॥

ಇಯಕ್ಷುರಸ್ಮಿ ಭಗರ್ವ ಹಯಮೇಧೇನ ಶಂಕರಂ ।
ತತ್ರ ಹೋತಾ ಭವಾನ್ಮೇಽದ್ಯ ಸಮಾಯಾತು ರಥೇನ ಮೇ ॥೧೮॥

ಇತಿ ವೈದರ್ಭವಚಸಾ ಹೃಷ್ಟೋ ವಿಪ್ರೋಽಭ್ಯುವಾಚ ತಂ ॥೧೯॥

॥ ವಿಪ್ರ ಉವಾಚ ॥

ಯಾಜ್ಯೋ ಭವಾಂಶ್ಚ ನೃಪತಿರ್ದಾಕ್ಷಿಣೋಽಪಾಕ್ಷಿಣೋ ನೃಪಃ ।
ತ್ವಮುದ್ಯೋಚೋ ಮಹಾಭರ್ಗಂ ಭದ್ರಂ ತೇ ನೃಪಸತ್ತಮ ॥೨೦॥

ರಾಜ್ಯಾಂಗೇಷು ಸಮಸ್ತೇಷು ಭವತಃ ಕುಶಲಂ ನೃಪ ।
ಶಂಕರಸ್ಯ ಪ್ರಸಾದೇನ ಆರೋಗ್ಯಂ ವಿಗ್ರಹೇ ತವ ॥೨೧॥

ಓ ಮುನಿಯೇ, ನಿನ್ನ ಅಡಿದಾವರೆಯ ದರ್ಶನವನ್ನು ಮಾಡಲೋಸುಗವೇ ಬಂದಿರುವೆನು. ನನ್ನೊಡನೆ ನಮ್ಮೂರಿಗೆ ಬಂದು ನನ್ನನ್ನು ಕೃತಾರ್ಥನನ್ನಾಗಿ ಮಾಡು. ॥೧೭॥

ಪರಮೇಶ್ವರನನ್ನುದ್ದೇಶಿಸಿ ಅಶ್ವಮೇಧಯಾಗವನ್ನು ಮಾಡಬೇಕೆಂದಿರುವೆನು. ಆ ಯಾಗದಲ್ಲಿ ಹೋತೃವಾಗಲು ನೀನು ನನ್ನ ರಥದ ಮೇಲೆಯೇ ಹೊರಡಬೇಕು. ॥೧೮॥

ವೈದರ್ಭರಾಜನ ಆ ಮಾತಿನಿಂದ ಸಂತುಷ್ಟನಾಗಿ ಕಣಭದ್ರಮುನಿಯು ಹೀಗೆ ಹೇಳಿದನು. ॥೧೯॥

“ಎಲೈ ರಾಜನೇ, ಯಾಗಮಾಡುವ ನೀನು ಉದಾರನೂ ಸಮರ್ಥನೂ ಆಗಿರುವೆ. ಮೇಲಾಗಿ ಪರಮೇಶ್ವರನನ್ನುದ್ದೇಶಿಸಿ ಯಾಗಮಾಡಬೇಕೆಂದಿರುವೆ. ಬಹು ಯುಕ್ತವಾದುದು. ನಿನಗೆ ಮಂಗಳವಾಗಲಿ. ॥೨೦॥

ಶಿವನ ಅನುಗ್ರಹದಿಂದ ನಿನ್ನ ರಾಜ್ಯಾಂಗಗಳಲ್ಲೂ ಶರೀರದಲ್ಲೂ ಕ್ಷೇಮವಿರುವುದಷ್ಟೆ! ಪ್ರಜೆಗಳೆಲ್ಲರೂ ಕುಶಲಿಗಳು ತಾನೆ. ॥೨೧॥

ತದಾ ಮುನಿವಚಃ ಶ್ರುತ್ವಾ ಪ್ರಾಂಜಲಿಃ ಪ್ರಾಹ ತಂ ನೃಪಃ ॥೨೨॥

॥ ರಾಜೋವಾಚ ॥

ಅನುಧ್ಯಾತಸ್ತ್ವಯಾ ಸ್ನೇಹೈಃ ಕಿಂ ಮಮಾವದ್ಯತಾಂ ವ್ರಜೇತ್ ।
ಇತ್ಯುಕ್ತ್ವಾ ತೌ ತದಾ ತತ್ರ ನೃಪಗಾರ್ಗ್ಯೌ ಮಹಾಮತೀ ॥೨೩॥

ತಂ ಭೋಜಯನ್ನೃಪಂ ವಿಪ್ರೋ ಸ್ವಾದ್ವನ್ನೈಃ ಪರಮೈಸ್ತದಾ ।
ಕಥಾಭಿರನುರೂಪಾಭಿರ್ದೇವೈಃ ಪಿತ್ರೈರ್ನೃಪೋತ್ತಮಂ ॥೨೪॥

ಏವಂ ವಿಪ್ರೇಣ ನೃಪತಿರಭ್ಯಗಾತ್ಪರಮೋಜಸಾ ।
ರಥೇನ ಜವನಾಶ್ವೇನ ಯಜ್ಞವಾಟಂ ಮಹದ್ಧಿಮತ್ ॥೨೫॥

ದೀಕ್ಷಿತಸ್ಸ ನೃಪಸ್ತತ್ರ ಋಷಿಭಿರ್ವೇದಪಾರಗೈಃ ।
ವಿಸಸರ್ಜಾಶ್ವಮತುಲಂ ಪುನಃ ಪ್ರಾಪ್ತೇ ತುರಂಗಮೇ ॥೨೬॥

ಆ ಮುನಿವಚನವನ್ನು ಕೇಳಿ ರಾಜನು ಕೈಮುಗಿದು ವಿನಯದಿಂದ ಹೀಗೆ ಹೇಳಿದನು. ॥೨೨॥

ಓ ಮುನಿಯೇ, ನೀನು ಸದಾ ನನಗೆ ಶುಭವನ್ನೇ ಚಿಂತಿಸುತ್ತಿರಲು ಅಕುಶಲವು ಬರುವುದೆಂತು? ಎಂದು ಆ ರಾಜ ಮತ್ತು ಮುನಿಗಳು ಪರಸ್ಪರ ಕುಶಲ ಪ್ರಶ್ನೆಗಳಿಂದ ತೃಪ್ತರಾದರು. ॥೨೩॥

ಆ ಮೇಲೆ ಮುನಿಯು ರಾಜನಿಗೆ ಮೃಷ್ಟಾನ್ನವನ್ನು ಬಡಿಸಿ ಉಪಚರಿಸಿದನು. ಮತ್ತು ದೇವತೆಗಳ, ಗುರುಹಿರಿಯರ, ಕಥೆಗಳಿಂದ ಅವನ ಮನಸ್ಸನ್ನು ರಂಜಿಸಿದನು. ॥೨೪॥

ಅನಂತರ ಅನಮಿತ್ರರಾಜನು ಆ ಮುನಿಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ವೇಗವಾಗಿ ಹೊರಟು ಸಕಲ ಸಾಮಗ್ರಿಗಳಿಂದ ತುಂಬಿದ ತನ್ನ ಯಾಗಶಾಲೆಗೆ ಕರೆತಂದನು. ॥೨೫॥

ಅಲ್ಲಿ ರಾಜನು ವೇದಪಾರಂಗತರಾದ ಋಷಿಗಳೊಡನೆ ಯಜ್ಞದೀಕ್ಷಿತನಾದನು. ದಿಗ್ವಿಜಯಕ್ಕಾಗಿ ಉತ್ತಮವಾದೊಂದು ಕುದುರೆಯನ್ನು ಬಿಟ್ಟನು. ಶೀಘ್ರವಾಗಿ ಅದು ದೇಶವೆಲ್ಲವನ್ನೂ ಸಂಚರಿಸಿ ಬಂದಿತು. ಆ ರಾಜನು ಶಾಸ್ತ್ರವಿಧಿಯಂತೆ ಅಶ್ವಮೇಧಯಾಗವನ್ನು ಮಾಡಿದನು. ॥೨೬॥

ಅಜಯಿದ್ಧಯಮೇಧೇನ ಶಾಸ್ತ್ರದೃಷ್ಟೇನ ಕರ್ಮಣಾ ॥೨೭॥

ನಿಯುತಂ ಪ್ರಯುತಂ ಚೈವ ದದೌ ಸ ನೃಪಸತ್ತಮಃ ।
ಋತ್ವಿಗ್ಭ್ಯಶ್ಚಾಥ ವಿಪ್ರೇಭ್ಯಸ್ಸಂಪೂಜ್ಯಾನ್ನೈಸ್ತದಾ ನೃಪಃ ॥೨೮॥

ವಿಸರ್ಜಯಾಮಾಸ ಚ ಮುನೀನ್ ಗಾರ್ಗ್ಯಶ್ಚಾನುಮಂತ್ರ್ಯ ತಂ ನೃಪಂ ।
ಗೋಭಿರ್ಹಿರಣ್ಯಭಾರೈಶ್ಚ ಮಾಲ್ಯವಚ್ಛಿಖರಂ ಯಯೌ ॥೨೯॥

ತತ್ರ ಗಾಶ್ಚಾರಯಾಮಾಸ ವನಭೂಮಿಷು ಸರ್ವತಃ ।
ಶಿಷ್ಯೈಃ ಪುತ್ರೈರ್ಮಹಾಭಾಗೋ ಧರ್ಮಾಯ ದುದುಹೇಽಥ ತಾಃ ॥೩೦॥

ತಸ್ಯ ಪುತ್ರೋಽಭವತ್ತತ್ರ ಚಂಡೀಶಾಖ್ಯೋಽಥ ವರ್ಣಿಕಃ ।
ಸ ಪಿತುರ್ವಾಕ್ಯತಸ್ತತ್ರ ಸ್ವಸಹಾಧ್ಯಾಯಿಭಿಸ್ತದಾ ॥೩೧॥

ಚಾರಯಾಮಾಸ ತಾ ಗಾವೋ ದಂಡಹಸ್ತಃ ಶ್ರುತೀಃ ಪಠನ್
ಮೇಖಲೀ ಚ ತಥಾ ದಂಡೀ ಆಷಾಢೀ ಭಸ್ಮಭೂಷಣಃ ॥೩೨॥

ಋತ್ವಿಜರಿಗೂ, ಬಡವರಾದ ಬ್ರಾಹ್ಮಣರಿಗೆ, ದಕ್ಷಿಣೆಗಳನ್ನೂ, ಹಸುಗಳನ್ನೂ ಭೂದಾನ, ಸುವರ್ಣದಾನ, ಮೊದಲಾದುದನ್ನು ಹೇರಳವಾಗಿ ದಾನ ಮಾಡಿಸಿದನು. ಲಕ್ಷಾಂತರ ಜನಗಳಿಗೆ ಅನ್ನಸಂತರ್ಪಣೆಮಾಡಿದನು. ॥೨೭-೨೮॥

ಹೀಗೆ ಮುನಿಗಳಿಗೆ ದಾನಮಾಡಿ ಅವರೆಲ್ಲರನ್ನೂ ಬೀಳ್ಕೊಟ್ಟನು. ಆಗ ಕಣಭದ್ರಮುನಿಯೂ ರಾಜನ ಅಪ್ಪಣೆಯನ್ನು ಪಡೆದು ಹಸು ಮತ್ತು ಧನಗಳೊಡನೆ ಮಾಲ್ಯವತ್ಪರ್ವಕ್ಕೆ ತೆರಳಿದನು. ॥೨೯॥

ಅಲ್ಲಿ ಆ ಮುನಿಯ ಮಕ್ಕಳೂ ಶಿಷ್ಯರೂ ರಾಜನು ದಾನಮಾಡಿದ ಹಸುಗಳನ್ನು ಕಾಡುಗಳಲ್ಲಿ ಮೇಯಿಸುತ್ತಿದ್ದರು. ಅವುಗಳಿಂದ ಲಭಿಸಿದ ಹಾಲು, ಮೊಸರು, ತುಪ್ಪಗಳನ್ನು ಧರ್ಮಕಾರ್ಯಗಳಿಗೆ ಉಪಯೋಗಿಸುತ್ತಿದ್ದರು. ॥೩೦॥

ಆ ಮುನಿಗೆ ಚಂಡೀಶನೆಂಬ ಮಗನಿದ್ದನು. ಬ್ರಹ್ಮಚಾರಿಯಾದ ಅವನು ಸಹಪಾಠಿಗಳೊಡನೆ ತಂದೆಯುಮಾತಿನಂತೆ ಹಸುಗಳನ್ನು ಕೋಲುಹಿಡಿದು ವೇದವನ್ನು ಹೇಳುತ್ತಾ ಮೇಯಿಸುತ್ತಿದ್ದನು. ॥೩೧॥

ಬ್ರಹ್ಮಚರ್ಯದ ಚಿಹ್ನೆಯಾದ ಮೇಖಲೆ, ದಂಡ, ಅಜಿನಗಳನ್ನು ಧರಿಸುತ್ತಿದ್ದು ಭಸ್ಮರುದ್ರಾಕ್ಷಿಗಳನ್ನುಳ್ಳವನಾಗಿ ಹಸು ಮೇಯಿಸುವಾಗ ಕಾಡಿನಲ್ಲಿ ಸಿಕ್ಕಿದ ಶಿವಲಿಂಗಗಳನ್ನು ಪೂಜಿಸುತ್ತಿದ್ದನು. ॥೩೨॥

ರುದ್ರಾಕ್ಷಭೂಷಣೋ ನಿತ್ಯಂ ವನಲಿಂಗೇಷ್ವಪೂಜಯತ್ ।
ಪ್ರದುಗ್ಧಗಾವಸ್ತತ್ರೈವ ಚಂಡೀಶಾಖ್ಯೋ ವಟುಸ್ತದಾ ॥೩೩॥

ಅಲಾಬುದಾರುಪಾತ್ರೇ ಚ ಅಭಿಷಿಚ್ಯ ಮಹೇಶ್ವರಂ ।
ವನಲಿಂಗೇ ಚ ಸ ತದಾ ಸ ಗವಾಂ ಪಯಸಾ ತದಾ ॥೩೪॥

ರುದ್ರಸೂಕ್ತೈಸ್ತಥಾರ್ಕೈಶ್ಚ ದ್ರೋಣಪುಷ್ಪೈರ್ವನೋದ್ಭವೈಃ ।
ವನ್ಯೈಃ ಫಲೈರ್ನಿವೇದ್ಯೇಶಂ ತುಷ್ಟಾವ ನಿತ್ಯಮೀಶ್ವರಂ ॥೩೫॥

|| ಚಂಡೀಶ ಉವಾಚ ||

ತ್ವಂ ಧರ್ಮಭೃದ್ಧರ್ಮವಹೋऽಸಿ ನಿತ್ಯಂ
ಸಾರಂಗಧೃಕ್ತದ್ಭವಚರ್ಮವಸ್ತ್ರಃ ।
ತ್ವಂ ಶಂಬರಾರಿಹುತಭುಗ್ಧೃತಶಂಬರಾಂಕಃ
ತ್ರಿಯಂಬಕಾಬ್ಜಾಂಬಕಪೂಜ್ಯ ಪಾಹಿ ॥೩೬॥

|| ಸ್ಕಂದ ಉವಾಚ ||

ಸ ಸಹಾಧ್ಯಾಯಿಭಿಸ್ಸರ್ವೈಸ್ಸಾಯಮಾಯಾತಿ ವೈ ಗೃಹಂ ।
ಸ ಪಿತುಶ್ಚ ತಥಾ ಗೋಭಿಃ ಪಿತುಃ ಪಾದಾವುಪಸ್ಪೃಶನ್ ॥೩೭॥

ಅವನು ಪೂಜೆಗಾಗಿ ಹಸುಗಳ ಹಾಲನ್ನು ಸೋರೆಬುರಡೆಯಲ್ಲಿ ಕರೆಯುವನು. ಆ ಹಾಲಿನಿಂದ ರುದ್ರಸೂಕ್ತವನ್ನು ಹೇಳುತ್ತಾ ಅವನು ಕಾಡಿನಲ್ಲಿದ್ದ ಶಿವಲಿಂಗಕ್ಕೆ ಅಭಿಷೇಕಮಾಡುವನು. ಕಾಡಿನಲ್ಲಿ ಸಿಕ್ಕುವ ಅರ್ಕದ್ರೋಣಪುಷ್ಪಗಳಿಂದ ಅರ್ಚಿಸುವನು. ಹಣ್ಣುಗಳನ್ನು ನಿವೇದಿಸುವನು. ಆಮೇಲೆ ಹೀಗೆ ಭಕ್ತಿಯಿಂದ ಸ್ತುತಿಸುವನು: ||೩೩-೩೪-೩೫||

ಓ ದೇವನೇ, ನೀನು ಧರ್ಮಸ್ವರೂಪನು, ಧರ್ಮಪಾಲಕನು, ಜಿಂಕೆಯನ್ನು ಹಿಡಿದಿರುವೆ. ಅದರ ಚರ್ಮವನ್ನು ಧರಿಸಿರುವೆ. ಮನ್ಮಥನನ್ನು ಭಸ್ಮಮಾಡಿದ ಮಹಾವಿರಕ್ತನು ನೀನು. ವೃಷಭಧ್ವಜನು ನೀನು. ನೀನು ಮುಕ್ಕಣ್ಣನು. ನಾರಾಯಣನು ನಿನ್ನನ್ನು ಪೂಜಿಸಿರುವನು. ಇಂತಹ ದೇವನೇ, ನನ್ನನ್ನು ಕೃಪೆಯಿಂದ ಪಾಲಿಸು. ||೩೬||

ಹೀಗೆ ಸ್ತುತಿಸಿ ಆ ಚಂಡೀಶನು ಸಹಪಾಠಿಗಳೊಡನೆ ಸಾಯಂಕಾಲ ಮನೆಗೆ ಬರುವನು. ಬಂದು ತಂದೆಯ ಅಡಿದಾವರೆಗೆ ನಮಸ್ಕರಿಸುವನು. ||೩೭||

ಪ್ರದುಹ್ಯಾಥ ಪುನರ್ಗಾವೋ ನಿವೇದ್ಯ ಪಯಸಾ ಘಟೀಃ ।
ಅಗ್ನಿಹೋತ್ರಾರ್ಥಮುದ್ಯುಕ್ತಃ ಸಸಮಿದ್ಭಿಃ ಪಿತುರ್ಮುದೇ ॥೪೮॥

ಏವಂ ನಿವಸತಸ್ತತ್ರ ಕಾಶ್ಚಿದ್ದೋಹವಿವರ್ಜಿತಾಃ ।
ಗಾವೋ ದೃಷ್ಟ್ವಾ ತದಾ ಗಾರ್ಗ್ಯಶ್ಚುಕ್ರುಧೇ ಪುತ್ರಮೋಜಸಾ ॥೪೯॥

ನ ದುಹಂತಿ ಕಥಂ ಗಾವೋ ಕಾಶ್ಚಿತ್ಪುತ್ರ ಕಿಮದ್ಯ ತೇ ।
ಚರಿತ್ರಂ ಮೇ ವಿಚಿತ್ರಂ ಚ ಸದಾ ಚಾರಯತೋ ವನೇ ॥೫೦॥

ಸ ಪಿತುರ್ವಚನಂ ಶ್ರುತ್ವಾ ಚಂಡೀಶಃ ಪಿತರಂ ತದಾ ।
ಪ್ರಾಹ ತಂ ವಿನಯೋಪೇತಃ ಪ್ರಾಂಜಲಿರ್ಭೀತಭೀತವತ್ ॥೫೧॥

ನ ಜಾನೇಽಹಂ ಪಿತಃ ಕಿಂಚಿತ್ ಪ್ರೌಢವತ್ಸಾ ದುಹಂತಿ ನ ।
ಇತಿ ತದ್ವಚನಂ ಶ್ರುತ್ವಾ ಕಿಂಚಿತ್ಕಾಲೇ ಗತೇ ಮುನಿಃ ॥೫೨॥

ಸ ಸಹಾಧ್ಯಾಯಿಭಿಸ್ತಸ್ಯ ಜ್ಞಾಪಿತೋ ವನಮಭ್ಯಗಃ ।
ನಿಲೀಯ ವೃಕ್ಷಷಂಡಸ್ಥಃ ತಚ್ಚೇಷ್ಟಾಂ ದದೃಶೇ ತದಾ ॥೫೩॥

ಆಮೇಲೆ ಹಸುಗಳನ್ನು ಕರೆದು ಗಡಿಗೆಗಟ್ಟಲೆ ಹಾಲನ್ನು ಕೊಟ್ಟು ಅಗ್ನಿಕಾರ್ಯವನ್ನು ಮಾಡುವನು. ||೪೮||

ಹೀಗಿರಲು ಒಂದುದಿನ ಹಸುಗಳು ಮನೆಗೆ ಬಂದಾಗ ಕೆಲವು ಹಸುಗಳಲ್ಲಿ ಹಾಲಿಲ್ಲದುದನ್ನು ನೋಡಿ ಕಣಭದ್ರಮುನಿಯು, ಚಂಡೀಶನ ಮೇಲೆ ಕೋಪಗೊಂಡನು. ||೪೯||

ಎಲೈ ಮಗನೇ, ಕೆಲವು ಕರೆಯುವ ಹಸುಗಳಲ್ಲಿ ಹಾಲಿಲ್ಲ. ಇದಕ್ಕೆ ಕಾರಣವೇನು? ನೀನೇ ಮುಖ್ಯವಾಗಿ ಈ ಹಸುಗಳನ್ನು ಮೇಯಿಸುವೆ? ಏಕೋ ನನಗೆ ನಿನ್ನ ನಡತೆಯು ವಿಚಿತ್ರವಾಗಿ ತೋರುವುದು ಎಂದನು. ||೫೦||

ತಂದೆಯು ಆ ಮಾತನ್ನು ಕೇಳಿ ಚಂಡೀಶನು ವಿನಯದಿಂದ ಕೈಜೋಡಿಸಿ ಹೆದರಿ ಹೆದರಿ ಹೀಗೆ ಹೇಳಿದನು. ||೫೧||

ಓ ತಂದೆಯೇ, ನನಗೇನೂ ಈ ವಿಷಯವು ತಿಳಿಯದು. ಕರುಹಾಕಿ ಬಹು ದಿನಗಳಾದುವು. ಕರು ದೊಡ್ಡದಾಗಿದೆ. ಅದಕ್ಕೋಸ್ಕರವೇ ಬಹುಶಃ ಹಾಲನ್ನು ಕೊಡುತ್ತಿಲ್ಲ. ಎಂದ ಮಗನ ಮಾತನ್ನು ಕೇಳಿ ಮುನಿಯು ಆಗ ಸುಮ್ಮನಾದನು.

ಸ ದುದೋಹ ತದಾ ಗಾವಸ್ತತ್ಪಯೋಭಿರ್ಮಹೇಶ್ವರಂ ।
ಅಭಿಷಿಚ್ಯ ಮಹಾದೇವಂ ಪುಷ್ಪೈರ್ವನ್ಯೈಃ ಫಲೈಸ್ತಥಾ ॥೪೪॥

ಸಂಪೂಜ್ಯ ಪರಯಾ ಭಕ್ತ್ಯಾ ಭಸ್ಮರುದ್ರಾಕ್ಷಧಾರಣಃ ।
ನಿಮೀಲ್ಯ ಸ್ತೌತಿ ದೇವೇಶಂ ಪ್ರಣಾಮಪ್ರಕ್ರಮಾದಿಭಿಃ ॥೪೫॥

ತಂ ತಾದೃಶಂ ವಿಲೋಕ್ಯೈವ ಕ್ರೋಧಾಂಧೀಕೃತಲೋಚನಃ ।
ಪೂಜಾ ಯತ್ರ ಕೃತಾ ಲಿಂಗೇ ನಾಶಯಾಮಾಸ ಪಾದತಃ ॥೪೬॥

ವಿಲೋಕ್ಯ ಪಿತರಂ ತತ್ರ ವರಿವಸ್ಯಾವಿನಾಶಕಂ ।
ಸಮಿದಾಹರಣಾರ್ಥಾಯ ಕುಠಾರಂ ಸ್ವಪುರಃ ಸ್ಥಿತಂ ॥೪೭॥

ಆಮೇಲೆ ಕೆಲವು ದಿನಗಳಲ್ಲಿ ಚಂಡೀಶನ ಸಹಪಾಠಿಗಳಿಂದ ರಹಸ್ಯವು ತಿಳಿಯಿತು. ಅದನ್ನು ಪರೀಕ್ಷಿಸಲೋಸುಗ ಒಂದು ದಿನ ತಾನೂ ಕಾಡಿಗೆ ಗುಟ್ಟಾಗಿ ಹೊರಟು ಒಂದು ಪೊದರಿನ ಮರೆಯಲ್ಲಿ ಕುಳಿತು ನೋಡುತ್ತಿದ್ದನು. ॥೪೨-೪೩॥

ಆಗ ಅಲ್ಲಿ ಚಂಡೀಶನು ಹಸುಗಳ ಹಾಲನ್ನು ಕರೆದು ಅದರಿಂದ ಮಹಾದೇವನನ್ನು ಅಭಿಷೇಚಿಸಿದನು. ಮತ್ತು ಕಾಡುಹೂಗಳಿಂದ ಪೂಜಿಸಿ ಹಣ್ಣುಗಳನ್ನು ನಿವೇದಿಸಿದನು. ಹೀಗೆ ಭಕ್ತಿಯಿಂದ ಪೂಜಿಸಿ ಪ್ರದಕ್ಷಿಣೆ ನಮಸ್ಕಾರಮಾಡುತ್ತಾ ಕಣ್ಣು ಮುಚ್ಚಿಕೊಂಡು ಸ್ತೋತ್ರಮಾಡತೊಡಗಿದನು. ॥೪೪-೪೫॥

ಹೀಗೆ ಹಾಲು ಕರೆದು ಚಂಡಿಯು ಶಿವಪೂಜೆಮಾಡುತ್ತಿರುವುದನ್ನು ನೋಡಿ ಆ ಮುನಿಯು ಕೋಪದಿಂದ ಕುರುಡನಾಗಿ, ಮಗನು ಪೂಜಿಸಿದ ಶಿವಲಿಂಗವನ್ನೊದ್ದು ಪೂಜೆಯೆಲ್ಲವನ್ನೂ ಹಾಳುಮಾಡಿದನು. ॥೪೬॥

ತಂದೆಯು ಹಾಗೆ ಈಶ್ವರನ ಪೂಜೆಯನ್ನು ಹಾಳುಮಾಡಿದುದನ್ನು ನೋಡಿ ಶಿವನನ್ನು ದ್ವೇಷಿಸಿದ (ಒದೆದ) ಆವನ ಕಾಲುಗಳನ್ನು ಸಮಿತ್ತು ಕಡಿಯಲು ತಂದಿದ್ದ ಕೊಡಲಿಯಿಂದ ಕಡಿದುಹಾಕಿದನು. ॥೪೭॥

ಗೃಹೀತ್ವೋಚ್ಛೇದಯಾಮಾಸ ಪಿತುಃ ಪಾದೌ ಶಿವದ್ರುಹೌ ।
ವಿಲುಠಂತಂ ತದಾ ಭೂಮೌ ಪಿತರಂ ಸಾಶ್ರುಲೋಚನಂ ॥೪೮॥

ಭಗ್ನಸಕ್ಥಿಂ ಚ ರಕ್ತಾಂಗಂ ಭಯಾದ್ಧೃಕ್ತ್ವಾ ಮಹೇಶ್ವರಂ ।
ಸ ತದಾ ದೇವದೇವೇಶಂ ವಾಚಾ ಸಂಸಜ್ಯಮಾನಯಾ ॥೪೯॥

ತುಷ್ಟಾವ ದೇವಂ ಭಕ್ತ್ಯೈವ ತಲ್ಲಿಂಗಾಗ್ರೇ ಮಹೇಶ್ವರಂ ॥೫೦॥

॥ಸ್ಕಂದ ಉವಾಚ॥

ಸ ಕಠೋರಕುಠಾರಧಾರಯಾ
ನಿಜಘಾನಾಶು ತದೂರುಮೂಲಭಾಗೇ ।
ಶಿವಲಿಂಗೇ ನಿಹಿತೌ ತದೇವ ಪಾದೌ
ಕಥಮಿತ್ಯೇವ ಪಿತುಶ್ಚುಕೋಪ ಚಂಡೀ ॥೫೧॥

ಸಾಲಂ ಯಥಾ ಭುವಿಗತಂ ಪರಿಕೃತ್ತಶಾಖಂ
ಕಾಷ್ಠಾಶಯಾ ವರಕುಠಾರಕರೇಣ ದೀನಂ ।
ಭೂಮೌ ತದಾ ವಿಲುಲಿತಂ ಪಿತರಂ ಸ ದೃಷ್ಟ್ವಾ
ಸಂಜಾತವೇಪಥುರಸೃಕ್ಸ್ನತಲೋಲನೇತ್ರಂ ॥೫೨॥

ಆದರಿಂದ ಕಣಭದ್ರಮುನಿಯು ಕಾಲು ಮುರಿದು ನೆಲಕ್ಕೆ ಬಿದ್ದು ರೋದಿಸ ತೊಡಗಿದನು. ಕಾಲುಗಂಟುಗಳೂ ಮುರಿದುವು, ಮೈಯಲ್ಲೆಲ್ಲಾ ರಕ್ತವು ಒಸರುತ್ತಿದ್ದಿತು. ॥೪೮॥

ತಂದೆಯ ಆದುರವಸ್ಥೆಯನ್ನು ನೋಡಿ ಚಂಡಿಯು ಭಯಗೊಂಡು ಅಲ್ಲಿಯೇ ಶಿವಲಿಂಗಕ್ಕೆ ಕೈಮುಗಿದು ತೊದಲುತೊದಲಾಗಿ ಭಕ್ತಿಯಿಂದ ಶಿವನನ್ನು ಸುತ್ತಿಸಿದನು. ॥೪೯-೫೦॥

ಕುಮಾರನು, ಹೀಗೆ ತನ್ನ ತಂದೆಯು ಶಿವಲಿಂಗವನ್ನು ಒದೆದುದರಿಂದ ಅತಿಯಾಗಿ ಕೋಪಗೊಂಡು ಶಿವದ್ವೇಷಿಗಳಾದ ಅವನ ಕಾಲುಗಳನ್ನು ಹರಿತವಾದ ಕೊಡಲಿಯ ಧಾರೆಯಿಂದ ಕತ್ತರಿಸಿದನು. ಮತ್ತು ತಂದೆಯ ವಿಷಯದಲ್ಲಿ ಮತ್ತೂ ಕೋಪಗೊಂಡನು. ॥೫೧॥

ಹಾಗೆ ಕತ್ತರಿಸಿದೊಡನೆ ಆ ಮುನಿಯು ಕತ್ತರಿಸಿದ ಆಲದ ಮರದಂತೆ ನೆಲಕ್ಕುರುಳಿದನು. ಹಾಗೆ ಬಿದ್ದು ರಕ್ತದಿಂದ ಒದ್ದೆಯಾಗಿ ನೆಲದಲ್ಲಿ ಒದ್ದಾಡುತ್ತಿರುವ

ಸಂತುಷ್ಟುವೇ ಚ ಜಗತಾಂ ಪಿತರಂ ಮಹೇಶಂ
ವಾಚಾತಿಸನ್ನಹೃದಯೋ ಭಯಭಾವಯುಕ್ತಃ ॥೫೩॥

ಇತಿ ಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ಶಿವಾಪರಾಧಕೃತ
ಚಂಡೀಶಪಿತೃಪಾದಚ್ಛೇದನವಿವರಣಂ ನಾಮ ಸಪ್ತಮೋಽಧ್ಯಾಯಃ

ತಂದೆಯನ್ನು ನೋಡಿ ಚಂಡೀಶನು ಭಯದಿಂದ ನಡುಗುತ್ತಾ ತೊದಲು ನುಡಿಯಿಂದ ಪರಮೇಶ್ವರನನ್ನು ಹೀಗೆ ಸುತ್ತಿಸಿದನು. ತಂದೆಯನ್ನು ಆರೀತಿ ಶಿಕ್ಷಿಸಿದರೂ ಚಂಡಿಯು ಭಯಭಕ್ತಿಯುತವಾದ ಸ್ತುತಿವಚನಗಳಿಂದ ಪ್ರಪಂಚಕ್ಕೆ ತಂದೆಯಾದ ಪರಶಿವನನ್ನು ಸಂತೋಷಪಡಿಸಿದನು. ॥೫೨-೫೩॥

ಇಲ್ಲಿಗೆ ಶ್ರೀಶಿವರಹಸ್ಯದ ಚತುರ್ಥಾಂಶದಲ್ಲಿ ಏಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಅಷ್ಟಮೋಽಧ್ಯಾಯಃ

॥ ಚಂಡೀಶ ಉವಾಚ ॥

ಜಗಜ್ಜನಕಶಂಕರ ಪ್ರಮಥನಾಥ ವಿಶ್ವಾಧಿಕ
ಪ್ರಸೀದ ಸದಯಾಧುನಾ ಭವಹರಾವ್ಯಯೇಶ ಪ್ರಭೋ ।
ಮಹೀರಥ ಗರಾಶನ ತ್ರಿನಯನಾರವಿಂದಾನನ
ತುರಂಗನಿಗಮಾಧಿಕಂ ಮಯಿ ಮಹಾಘಮೇತದ್ಧರ ॥೧॥

ದ್ವಿರದರದನಿಕಾಶದೇಹ ಶಂಭೋ
ಉರಗಾಧೀಶಮಹೋರುಹಾರ ಪಾಹಿ ।
ಕರಿಚರ್ಮಾಂಬರ ಶೂಲಪಿಣಹಸ್ತ ಶಂಭೋ
ತಟಿನೀಚಾರುಕಲಾಧರೋರುಮೌಲೇ ॥೨॥

ಎಂಟನೆಯ ಅಧ್ಯಾಯ

" ಓ ಜಗತ್ತಿಗೆ ತಂದೆಯಾಗಿರುವ ಪರಮೇಶ್ವರನೇ, ದಯಾಮಯನೇ, ಸಂಸಾರ ಕಷ್ಟಗಳನ್ನು ಪರಿಹರಿಸುವ ದೇವನೇ, ಪ್ರಸನ್ನನಾಗು. ಓ ನಿತ್ಯಸ್ವರೂಪನೇ, (ತ್ರಿಪುರಸಂಹಾರದಲ್ಲಿ) ಭೂಮಿಯೇ ರಥವಾಗುಳ್ಳ ತ್ರಿಪುರಸಂಹಾರಕನೆ, ಮುಕ್ಕಣ್ಣನೇ, ವೇದಗಳಿಂದ ಹೊಗಳಿಸಿಕೊಳ್ಳುವ ಪರಮಾತ್ಮನೇ, ನನ್ನ ಈ ಮಹಾಪಾಪವನ್ನು ಹೋಗಲಾಡಿಸು. ॥೧॥

ಆನೆಯ ದಂತದಂತೆ ಶುದ್ಧವಾಗಿ ಬೆಳ್ಳಗಿರುವ ದೇಹವುಳ್ಳವನಾಗಿಯೂ ಸರ್ಪರಾಜನನ್ನು ಹಾರವನ್ನಾಗಿ ಧರಿಸಿದವನೂ, ಗಜಚರ್ಮವನ್ನು ಉಡುವವನೂ,

ಉಕ್ಷಾಧೀಶ್ವರಚಾರುಕೇತನ ಮಹಾವಿಶ್ವಾಧಿಕೇಶಾನ ತೇ
ಪಾದದ್ವಂದ್ವಪಯೋಜಸೇವನಪರಂ ಲೋಕೇ ಪಿತೃಘ್ನಂ ಹಿ ಮಾಂ ।
ವೀಕ್ಷ್ಯ ತ್ರ್ಯಕ್ಷ ದಯಾರಸಾರ್ದ್ರಸುದೃಶಾ ಪಾಹೀಂದುಮೌಳೀ ಹರ
ವಾಮಾಂಗಾಂಬ ಮಹೇಶ್ವರ ಪ್ರಥಯ ಮಾಂ ಪುಣ್ಯೈಶ್ಚ ಪಾಪೈರ್ವಿನಾ॥೩॥

ಕಕ್ಷಾಣಾಂ ಚ ಪತೇ ರಮಾಪತಿಲಸನ್ನೇತ್ರಾಂಘ್ರಿಪಂಕೇರುಹ
ತ್ವದ್ಧ್ಯಾನಾಮೃತಧಾರಯಾ ಜಗದಿದಂ ಸಂಪ್ಲಾವಯಾಮಿ ದ್ರುತಂ ।
ತ್ವನ್ನಾಮೋಚ್ಚರಣೇನ ಭರ್ಜಿತಭವಃ ಪಾಪೌಘತಾಪೈರ್ವಿನಾ
ತ್ವತ್ಪಾದಾಂಬುರುಹಾರ್ಚನೇನ ಭಗವನ್ ಮುಕ್ತೋ ಭವೇಯಂ ತ್ವಹ್ಯೈಃ ॥೪॥

ಹರಹರ ಭಗವನ್ ಪುರಪ್ರಹರ್ತಃ
ಕುರು ಕರುಣಾಂ ಶಶಿಧಾಮಚೂಡಶಂಭೋ ।
ಗರಧರ ಹರಿಶರ ಗಿರಿವಾಸ
ಪರಿಪಾಹೀಶ್ವರ ದೇವಸಾರ್ವಭೌಮ ॥೫॥

ತ್ರಿಶೂಲ ಮತ್ತು ಜಿಂಕೆಗಳನ್ನು ಕೈಗಳಲ್ಲಿ ಹಿಡಿದಿರುವವನೂ, ತಲೆಯಲ್ಲಿ ದೇವಗಂಗೆ ಚಂದ್ರಕಲೆಗಳನ್ನು ಧರಿಸಿದವನೂ ಆದ ಓ ದೇವ, ಪಾಲಿಸು. ॥೨॥

ವೃಷಭಧ್ವಜನಾದ, ಸರ್ವೋತ್ಕೃಷ್ಟನಾದ, ಓ ದೇವನೇ, ನಿನ್ನ ಅಡಿದಾವರೆಯ ಸೇವೆಯಲ್ಲಿ ನಿರತನಾದ ಪಿತೃಹಂತಕನಾದ ನನ್ನನ್ನು ಕರುಣಾದೃಷ್ಟಿಯಿಂದ ನೋಡು. ಚಂದ್ರಶೇಖರನಾದ ಮತ್ತು ಅರ್ಧನಾರೀಶ್ವರನಾದ ಓ ಪರಮೇಶ್ವರ, ನನ್ನ ಪಾಪವನ್ನು ಹೋಗಲಾಡಿಸಿ ಪುಣ್ಯಶಾಲಿಯನ್ನಾಗಿ ಮಾಡು. ॥೩॥

ಮರ ಗಿಡ ಬಳ್ಳಿಗಳಿಗೆ ಒಡೆಯನಾಗಿ, ನಾರಾಯಣನಿಂದ ವಂದಿಸಲ್ಪಡುವ ಓ ದೇವ, ನಿನ್ನ ಧ್ಯಾನದ ಅಮೃತಧಾರೆಯಿಂದ ಜಗತ್ತೆಲ್ಲವನ್ನೂ ಮುಳುಗಿಸುವೆನು. ನಿನ್ನ ನಾಮಗಳ ಉಚ್ಚಾರಣೆಯಿಂದ ಪಾಪಗಳೆಲ್ಲವನ್ನೂ ಕಳೆದುಕೊಂಡು ವಿರಕ್ತನಾಗುವೆನು. ನಿನ್ನ ಆಡಿದಾವರೆಗಳನ್ನರ್ಚಿಸಿ ಮುಕ್ತನಾಗುವೆನು. ॥೪॥

ಓ ಹರ, ಭಗವಂತನೇ, ತ್ರಿಪುರಸಂಹಾರಿಯೆ, ಚಂದ್ರಶೇಖರನೇ, ದಯೆ ಮಾಡು. ನಂಜುಂಡನೇ, ನಾರಾಯಣನನ್ನು ಬಾಣವನ್ನಾಗಿ ಧರಿಸಿದವನೇ, ಕೈಲಾಸ ವಾಸನೇ, ದೇವದೇವನೇ, ಪರಮೇಶ್ವರನೇ ನನ್ನನ್ನು ಪಾಲಿಸು. ॥೫॥

ಭವ ಭರ್ಗ ಮಹೇಶ ಭೀಮ ಶಂಕರ
ತ್ರಿದಶಾಧೀಶ್ವರ ಸರ್ಪಜಾಲಮಾಲ ।
ಭವ ಭಯ ಸದಯಾರಸಾರ್ದ್ರಲೋಕೈಃ
ಪರಿಮುಕ್ತೋಽಸ್ಮ್ಯಘತಸ್ತವೇಶ ಶಂಭೋ ॥೬॥

ಸಂಕ್ರಂದನಭುಜಖಂಡನ ವರತರಕರುಣಾರುಣಾಕ್ಷ
ದೇವ ಪ್ರಥಿತಾಮೋದಪದಾಬ್ಜ ದೇವ ಶಂಭೋ ।
ಯಮಭಟಪಟಲೀವಿದೂರಿತಾಘ
ಜ್ವಲಧೀರಾಮರ ದೇವಸಾರ್ವಭೌಮ ॥೭॥

ಮಂದಾರವೃಂದಮುನಿವೇದಕದಂಬಗೀತ
ಗೋವಿಂದಪೂಜ್ಯಪದಪದ್ಮ ಸನಂದವಂದ್ಯ ।
ಮಂದಾರಸುಂದರಸದಂಬುರುಹೋರುಮಾಲ
ದೇವ ತ್ವಮೇವ ನಿಖಿಲೇಂದುಕಲಾಲಲಾಮ ॥೮॥

ಪಾಪಹರನೂ, ಪಾಪಿಗಳಿಗೆ ಭಯಂಕರನೂ, ಸುಖಕರನೂ, ದೇವದೇವನೂ, ಸರ್ಪಭೂಷಣನೂ, ಪ್ರಪಂಚಸ್ವರೂಪನೂ, ಆದ ಓ ಮಹಾದೇವನೇ, ಈ ನಿನ್ನ ಈ ಕರುಣಾರಸದಿಂದ ತುಂಬಿದ ದೃಷ್ಟಿಯಿಂದಲೇ ನನ್ನ ಪಾಪವೆಲ್ಲವೂ ನಾಶವಾಗುವುದು. ॥೬॥

ಮದೋನ್ಮತ್ತನಾದ ದೇವೇಂದ್ರನ ಭುಜಗಳನ್ನು ಬಂಧಿಸಿದವನೂ, ಅಪಾರ ಕರುಣಾಮೂರ್ತಿಯೂ, ದೇವವಂದ್ಯನೂ, ದೇವತೆಗಳಿಗೆ ಚಕ್ರವರ್ತಿಯೂ, ಯಮದೂತರ ಭಯವನ್ನು ಪೂರ್ಣವಾಗಿಹೋಗಲಾಡಿಸುವವನೂ ಆದ ನಿನಗೆ ನಮಸ್ಕಾರ. ॥೭॥

ಭಕ್ತರಿಗೆ ಕಲ್ಪವೃಕ್ಷದಂತಿರುವವನೂ, ಮುನಿಗಳಿಂದ ವೇದಗಳಲ್ಲಿ ಸ್ತುತಿಸಲ್ಪಡುವವನೂ, ನಾರಾಯಣನಿಂದ ಪೂಜಿಸಲ್ಪಡುವವನೂ, ಸನಂದನಾದಿಯೋಗಿಗಳಿಂದ ಸೇವಿಸಲ್ಪಡುವವನೂ, ಮಂದಾರ ಕಮಲ ಮೊದಲಾದ ಹೂವುಗಳ ಸುಂದರ ಮಾಲೆಯನ್ನು ಧರಿಸುವವನೂ, ಚಂದ್ರಶೇಖರನೂ ಆದ ಓ ದೇವ, ನೀನೇ ನನ್ನ ಸ್ವಾಮಿಯು. ॥೮॥

ಅಹೀಶಮಣಿಕುಂಡಲಂ ರವಿಜಮಂಡಲಾಂತರ್ಗತಂ
ಗಣೇಂದ್ರಕೃತತಾಂಡವಪ್ರಿಯಮಪಾರಪಿಂಡೋಜ್ವಲಂ ।
ಭಜಾಮಿ ಕನಕಾಚಲೋಲ್ಲಸಿತಪಾಣಿಪದ್ಮಾಂಬುಜಂ
ಮುರಾರಿಶರಕಾಂಡತೋಜ್ಜ್ವಲಸುದಕ್ಷಪಾಣಿಂ ಭಜೇ ॥೯॥

ಉರಗತುರಗಹೇಷಹಾರಪ್ರತುಷ್ಟಂ
ಘನವಾಹಾಮರವೃಂದಸಾರ್ವಭೌಮಂ ।
ಅಜಗಜನಿಧನಂ ಪ್ರಕೃಷ್ಟನೃತ್ತಂ
ಭಜ ಫಾಲಸ್ಫುರದುಜ್ವಲತ್ರಿಪುಂಡ್ರಂ ॥೧೦॥

ಕರುಣಾವರುಣಾಲಯಂ ಮಹೇಶಂ
ಶರಣಂ ಯಾಮಿ ಶರಣ್ಯಮೀಶ್ವರಂ ।
ಅರುಣಾಧಿಪಕಾರಣಂ ಮಹೇಶಂ
ಧರಣೀಧೃಗ್ವರಹಾರಮೀಶಿತಾರಂ ॥೧೧॥

ಸರ್ಪರಾಜನನ್ನೇ ಕುಂಡಲವಾಗುಳ್ಳವನೂ, ಸೂರ್ಯಮಂಡಲದಲ್ಲಿ ಆರಾಧ್ಯ ದೇವನಾಗಿರುವವನೂ, ಪ್ರಮಥಗಣಗಳು ಮಾಡುವ ತಾಂಡವನೃತ್ಯದಿಂದ ಸಂತೋಷಿಸುವವನೂ, ಮಹಾ ತೇಜಸ್ವಿಯೂ, ಮೇರುಗಿರಿಯನ್ನೇ ಧನುಸ್ಸನ್ನಾಗಿ ಹಿಡಿದು, ಆದರಲ್ಲಿ ಹರಿಯನ್ನು ಬಾಣವನ್ನಾಗಿ ಜೋಡಿಸಿ ತ್ರಿಪುರಾಸುರರನ್ನು ಸಂಹರಿಸಿದವನೂ ಆದ ಮಹಾದೇವನನ್ನು ಭಜಿಸುವೆನು. ॥೯॥

ಸರ್ಪಗಳ ಭಯಂಕರವಾದ ಶಬ್ದದಿಂದಕುದುರೆಯ ಹೇಷಾರವದ ಧ್ವನಿಯಿಂದ ಸಂತುಷ್ಟನೂ, ಇಂದ್ರನೇ ಮೊದಲಾದ ದೇವತೆಗಳಿಗೆ ಒಡೆಯನೂ, ಅಜಾಸುರಗಜಾಸುರರನ್ನು ಸಂಹರಿಸಿದವನೂ, ಮಹಾತಾಂಡವವನ್ನಾಡುವ ನಟರಾಜನೂ, ಹಣೆಯಲ್ಲಿ ಬೆಳಗುತ್ತಿರುವ ವಿಭೂತಿಪಟ್ಟೆಗಳುಳ್ಳವನೂ ಆದ ಮಹಾದೇವನನ್ನು ಸ್ತುತಿಸುವೆನು. ॥೧೦॥

ಕರುಣಾಸಾಗರನೂ, ರಕ್ಷಕನೂ, ಭಾಸ್ಕರನಿಗೆ ಮೂಲಕಾರಣನೂ, ಪ್ರಪಂಚವನ್ನು ಧರಿಸುವವನೂ, ಆದಿಶೇಷನೆಂಬ ಮಾಲಾಧಾರಿಯೂ ಆದ ಪರಮೇಶ್ವರನನ್ನು ಭಜಿಸುವೆನು. ॥೧೧॥

ಕುಮುದಕಮಲಗಂಧವಾಹಮಿತ್ರನೇತ್ರಂ
ದಹರಾಕಾಶಗತಂ ಭಜಾಮಿ ಶಂಭುಂ ।
ಶ್ರುತಿಶತವಿನುತಾಪದಾನಮೀಶಂ
ಹರಿಪದ್ಮಾಸನಮಾರ್ಗಿತಾಂಘ್ರಿಮೌಳಿಂ ॥೧೨॥

॥ ಸೂತ ಉವಾಚ ॥

ತತ್ಸ್ತುತ್ಯಾ ತೋಷಿತಶ್ಶಂಭುರ್ಭಗವಾನಗಜಾಪತಿಃ
ವೃಷಾರೂಢೋಽಂಬಿಕಾಯುಕ್ತಃ ಶ್ವೇತಾದ್ರಿಶಿಖರೋಪಮಃ ॥೧೩॥

ಗಣವೃಂದೈಃ ಪರಿವೃತೋ ಬ್ರಹ್ಮವಿಷ್ಣ್ವಾದಿಭಿಸ್ಸುರೈಃ ।
ತ್ರಿನೇತ್ರೋ ನೀಲಕಂಠಶ್ಚ ಜಟಾಬದ್ಧೇಂದುಖಂಡಧೃಕ್ ॥೧೪॥

ಕುಂಡಲೀಶಮಹಾಹಾರಕುಂಡಲದ್ವಯಮಂಡಿತಃ ।
ಚಂಡತಾಂಡವಸನ್ನಾಹನಟನ್ ಭೃಂಗಿರಿಟಿಃ ಪುರಃ ॥೧೫॥

ಚಂದ್ರಸೂರ್ಯಾಗ್ನಿಲೋಚನನೂ, ಸರ್ವರ ಹೃದಯದಲ್ಲಿ ಅಂತರ್ಯಾಮಿಯಾಗಿರುವವನೂ, ವೇದಗಳಿಂದ ಹೊಗಳಲ್ಪಟ್ಟ ಮಹಿಮೆಯುಳ್ಳವನೂ, ಹರಿಬ್ರಹ್ಮರಿಂದ ಹುಡುಕಲ್ಪಟ್ಟರೂ ಸಿಕ್ಕದಿರುವ ಅಂತ್ಯ ಆದಿಭಾಗವುಳ್ಳ ಮಹಾಲಿಂಗಸ್ವರೂಪನೂ ಆದ ಪರಶಿವನನ್ನು ಭಕ್ತಿಯಿಂದ ಭಜಿಸುವೆನು, ಮೊರೆಹೊಗುವೆನು." ||೧೨||

ಈರೀತಿಯ ಚಂಡೀಶನ ಸ್ತುತಿಯಿಂದ ಸಂತುಷ್ಟನಾಗಿ ಶಿವನು ಗಿರಿಜೆಯೊಡನೆ ವೃಷಭವನ್ನೇರಿ ಬಂದನು. ಕೈಲಾಸಗಿರಿಯ ಶಿಖರದಂತೆ ಉನ್ನತನೂ ಶುಭ್ರನೂ ಆದ ಆ ಶಿವನೊಡನೆ ಬ್ರಹ್ಮ-ವಿಷ್ಣು ಮೊದಲಾದ ದೇವತೆಗಳೂ ದೇವಗಣಗಳೂ ಬಂದುವು. ||೧೩||

ಪರಶಿವನು ಮುಕ್ಕಣ್ಣನೂ, ವಿಷದಿಂದ ಕಪ್ಪಾದ ಕಂಠವುಳ್ಳವನೂ, ಚಂದ್ರಶೇಖರನೂ, ಸರ್ಪಗಳನ್ನೇ ಹಾರದಂತೆಯೂ, ಕರ್ಣಕುಂಡಲದಂತೆಯೂ ಧರಿಸಿದವನೂ ಆಗಿದ್ದನು. ಅವನೆದುರಿನಲ್ಲಿ ಭೃಂಗಿ ಮತ್ತು ರಿಟಿಗಳೆಂಬ ಗಣಗಳು ನರ್ತನವನ್ನಾಡುತ್ತಿದ್ದರು. ||೧೪-೧೫||

ಸ್ತುವತೋ ದೇವಸಂಘಾನಾಂ ಜಯೇಶೇತಿ ಮುಹುರ್ಮುಹುಃ
ನಾರದೋದ್ಗೀತಸುಭಗವೀಣಾನಿಕ್ವಣಸಂಸ್ತವೈಃ ॥೧೬॥

ಛತ್ರಚಾಮರಪಂಕ್ತಿಭಿಃ ಪತಾಕಾಭಿರಲಂಕೃತಃ
ಚಂಡಿಕೇಶಮಥಾದ್ರಾಕ್ಷೀತ್ತದಾ ನೇತ್ರೇಣ ಶಂಕರಃ ॥೧೭॥

ಉತಂತಂ ಪಿತರಂ ತಸ್ಯ ಭಗಸಕ್ಥಿಮಸೃಗ್ಭೃತಂ ।
ಅಸೃಗಾಕ್ತಂ ತದಾ ವೀಕ್ಷ್ಯ ಕರುಣಾಭರಿತಃ ಶಿವಃ ॥೧೯॥

ತದ್ದೇವ್ಯೈ ದರ್ಶಯಾಮಾಸ ಭಕ್ತಿಂ ತಾಂ ಚಂಡಿಕೇಶಜಾಂ ॥೨೦॥

॥ ಶ್ರೀಶಿವ ಉವಾಚ ॥

ಪಶ್ಯ ತ್ವಂ ಚಂಡಿಕೇಶಾನಂ ಕರುಣಾರಸಲೋಚನೈಃ ।
ಮದ್ಭಕ್ತ್ಯಾ ಪಿತರಂ ಚಾಪಿ ಹತವಾನಯಮುತ್ತಮಃ ॥೨೧॥

ದೇವತೆಗಳು 'ಪರಮೇಶ್ವರನಿಗೆ ಜಯವಾಗಲಿ' ಎಂದು ಸ್ತುತಿಸುತ್ತಿದ್ದರು. ನಾರದಮುನಿಯು ಮಧುರವಾದ ವೀಣೆಯಿಂದ ಅವನ ಗುಣಗಾನವನ್ನು ಮಾಡುತ್ತಿದ್ದನು. ಗಣಗಳೂ ದೇವತೆಗಳೂ ಆ ದೇವನಿಗೆ ಛತ್ರಿಗಳನ್ನು ಹಿಡಿದಿದ್ದರು. ಚಾಮರಗಳನ್ನು ಬೀಸುತ್ತಿದ್ದರು. ಹೀಗೆ ಬಂದು ಶಿವನು ಪ್ರತ್ಯಕ್ಷನಾಗಿ ಚಂಡೀಶನನ್ನು ನೋಡಿದನು. ॥೧೬-೧೭-೧೮॥

ಮತ್ತು ಚಂಡೀಶನ ಬಳಿಯಲ್ಲಿ ಅವನ ತಂದೆಯಾದ ಕಣಭದ್ರಮುನಿಯು ಕಾಲುಕತ್ತರಿಸಲ್ಪಟ್ಟು ರಕ್ತದಿಂದ ನೆನೆದು, ಒದೆದಾಡುತ್ತಿರುವುದನ್ನೂ ನೋಡಿ ಶಿವನು ಕರುಣೆಯಿಂದ ಗಿರಿಜೆಗೆ ಚಂಡೀಶನ ಆ ಮಹಾಭಕ್ತಿಯನ್ನು ವಿವರಿಸುತ್ತಾ ಹೀಗೆ ಹೇಳಿದನು. ॥೧೯-೨೦॥

ಎಲೌ ಗಿರಿಜೆ, ನೋಡು, ಈ ಚಂಡೀಶನ ಭಕ್ತಿಯೆಂತಹುದೆಂದು. ನನ್ನ ಮೇಲಿನ ಭಕ್ತಿಯಿಂದ ಈ ಮಹಾತ್ಮನು ತನ್ನ ತಂದೆಯನ್ನೂ ಕತ್ತರಿಸಿರುವನು! ॥೨೧॥

ಮದ್ಭಕ್ತಸ್ಯಾಯಮಧುನಾ ರಕ್ಷಣೀಯಸ್ತ್ವಯಾ ಶಿವೇ ।
ತವಾಮೃತಾಲೋಕನೇನ ಸಮುಜ್ಜೀವೇತ್ಪಿತಾಽಸ್ಯ ತು ॥೨೨॥

ಭಗ್ನಸಕ್ಥಿರಯಂ ವಿಪ್ರೋ ಕಣಭದ್ರೋ ಮಹಾಮುನಿಃ ।
ಗಾಣಾಪತ್ಯಂ ದಿಶಾಮ್ಯಸ್ಮೈ ಚಂಡಿಕೇಶಾಯ ಸಾಂಪ್ರತಂ ॥೨೩॥

ಇತ್ಯುಕ್ತಮಾತ್ರೇ ದೇವೇನ ಪ್ರಾಂಜಲಿಃ ಪರಮೇಶ್ವರಂ ।
ತ್ವಂ ಪಿತಾಽಸ್ಯಥವಾ ಮಾತಾ ಬಂಧುರ್ಭ್ರಾತಾ ತ್ವಮೇವ ಹಿ ॥೨೪॥

ನಾಸ್ಯ ಭಕ್ತ್ಯಾ ಸಮಃ ಕೋಽಪಿ ನ ದೃಷ್ಟೋ ನೈವ ವಿಶ್ರುತಃ ।
ಕೃಪಾವಲೋಕನಾಚ್ಛಂಭೋರುತ್ಥಿತಸ್ತತ್ಪಿತಾ ಮುನಿಃ ॥೨೫॥

ಪಸ್ಪರ್ಶ ಚಂಡಿಕೇಶಾನಂ ಶಂತಮೇನಾಥ ಪಾಣಿನಾ ।
ಪ್ರಮಥಾಧಿಪತೇಸ್ತಸ್ಯ ಪಾಣಿಸ್ಪರ್ಶೇನ ಸತ್ವರಂ ॥೨೬॥

ಶಿವಸಂಸ್ಪರ್ಶನಾದೇವ ಸ ಬಭೂವ ಗಣೋತ್ತಮಃ ।
ಗಂಗಾತರಂಗಮಾಲಾಢ್ಯೋ ಜಟಾಮಂಡಲಮಂಡನಃ ॥೨೭॥

ಎಲೌ ಪಾರ್ವತಿ, ನಿನ್ನ ಕರುಣಾದೃಷ್ಟಿಯಿಂದ ನನ್ನ ಭಕ್ತನಾದ ಇವನ ತಂದೆಯೂ ಬದುಕಬೇಕು. ॥೨೨॥

ಕಾಲುಮುರಿದ ಈ ಕಣಭದ್ರಮುನಿಯನ್ನು ನೀನು ರಕ್ಷಿಸು. ಚಂಡಿಕೇಶನಿಗೆ ನಾನು ನನ್ನ ಗಣನಾಯಕರ ಪದವಿಯನ್ನು ಕರುಣಿಸುವೆನು ಎಂದನು. ॥೨೩॥

ಆಗ ಗಿರಿಜೆಯು ಕೈಮುಗಿದು—ನಾಥನೇ, ನೀನೇ ಇವನಿಗೆ ತಂದೆಯು. ತಾಯಿ, ಬಂಧುವು, ಸಹೋದರನು. ಭಕ್ತಿಯಲ್ಲಿ ಇವನಿಗೆ ಸಮನಾದವನನ್ನು ಇದುವರೆಗೆ ನೋಡಿಯೂ ಇಲ್ಲ, ಕೇಳಿಯೂ ಇಲ್ಲ ಎಂದನು. ॥೨೪॥

ಆಮೇಲೆ ಶಿವನ ಕರುಣಾಪೂರ್ಣವಾದ ನೋಟದಿಂದಲೇ ಚಂಡೀಶನ ತಂದೆಯು ಕಾಲು ಬಂದವನಾಗಿ ಮೇಲಕ್ಕೆದ್ದನು. ಆಮೇಲೆ ಶಿವನು ಚಂಡೀಶನನ್ನು ತನ್ನ ಅಭಯಪ್ರದವಾದ ಕೈಯಿಂದ ಸ್ಪರ್ಶಮಾಡಿದನು. ॥೨೫॥

ಪ್ರಮಥಗಣಗಳಿಗೆ ಒಡೆಯನಾದ ಆ ಶಿವನ ಕೈಯ ಸ್ಪರ್ಶದಿಂದಲೇ ಆ ಚಂಡೀಶನು ಗಣನಾಯಕನಾದನು. ಶಿವನಂತೆ ರೂಪವುಳ್ಳವನೂ ಆದನು. ॥೨೬॥

ಆಗ ಆ ಚಂಡಿಕೇಶನ ತಲೆಯಲ್ಲಿ ಶಿವನಂತೆ ಗಂಗೆಯುದ್ಭವಿಸಿತು. ಜಟೆಯಲ್ಲಿ ಚಂದ್ರಕಲೆಯುಳ್ಳವನಾದನು. ಮುಕ್ಕಣ್ಣನಾದನು. ನೀಲಕಂಠನೆನಿಸಿದನು.

ತ್ರಿನೇತ್ರೋ ನೀಲಕಂಠಶ್ಚ ತಥಾ ಬಾಹುಚತುಷ್ಟಯಃ
ಮಹಾಹೀಂದ್ರಮಹಾಹಾರಃ ಸೋಮಖಂಡೈಕಭೂಷಣಃ ॥೨೮॥

ಭಸ್ಮತ್ರಿಪುಂಡ್ರರುದ್ರಾಕ್ಷಪುಂಡರೀಕಾಜಿನೋಜ್ವಲಃ ।
ಸಾರೂಪ್ಯಂ ದೇವದೇವಸ್ಯ ಪ್ರಾಪಾಯುಂ ಚಂಡಿಕೇಶ್ವರಃ ॥೨೯॥

ಶಿವಂ ನತ್ವಾಽವತಸ್ಥೇ ಸ ಪಿತ್ರಾ ಸ ವಿನಯಾಂಜಲಿಃ ।
ಪುರಃ ಸ್ಥಿತಂ ಚ ಪಿತ್ರಾ ತಂ ಮಹಾದೇವ ಉವಾಚ ಹ ॥೩೦॥

॥ ಶ್ರೀಶಿವ ಉವಾಚ ॥

ಚಂಡಕ್ರೋಧೋಽಸಿ ಚಂಡೀಶ ಪಿತರಂ ಹತವಾನಸಿ ।
ಚಂಡಿಕೇಶೇತಿ ತೇ ನಾಮ ಭವಿಷ್ಯತಿ ಗಣೋತ್ತಮ ॥೩೧॥

ಅಗಣಯ್ಯ ಪಿತೃಸ್ನೇಹಂ ಪಿತೃತ್ವಂ ಶ್ರುತಿಸಮ್ಮತಂ ।
ಮದ್ಭಕ್ತ್ಯೈವ ಹತೋ ಯಸ್ಮಾತ್ಸಮುತ್ತೀರ್ಣೋಽಸಿ ಪಾಪತಃ॥೩೨॥

ಸರ್ಪಭೂಷಣನಾದನು. ಹುಲಿಯ ಚರ್ಮದ ಬಟ್ಟೆಯುಳ್ಳವನಾದನು. ಭಸ್ಮರುದ್ರಾಕ್ಷಿಗಳ ಅಲಂಕಾರವುಳ್ಳವನಾದನು. ಶಿವನ ಅನುಗ್ರಹದಿಂದ ಅವನು ಹೀಗೆ ಆ ದೇವನ ಸಾರೂಪ್ಯವನ್ನು ಹೊಂದಿದನು. ॥೨೭-೨೮-೨೯॥

ಅನಂತರ ಆ ಚಂಡೀಶನು ವಿನಯದಿಂದ ಶಿವನನ್ನು ವಂದಿಸಿ ತಂದೆಯೊಡನೆ ನಿಂತನು. ಆಗ ಶಿವನು ಹೀಗೆ ಹೇಳಿದನು. ॥೩೦॥

"ಎಲೈ ಚಂಡೀಶ, ನೀನು ಪ್ರಚಂಡವಾದ ಕೋಪವುಳ್ಳವನಾಗಿರುವೆ. ಹಿಂದು ಮುಂದು ನೋಡದೆ ತಂದೆಯ ಕಾಲನ್ನು ಕಡಿದಿರುವೆ. ಆದುದರಿಂದ ನಿನಗೆ ಮುಂದೆ ಚಂಡಿಕೇಶನೆಂದೇ ಹೆಸರಾಗುವುದು. ॥೩೧॥

"ಪಿತೃದೇವೋ ಭವ" ಎಂದು ವೇದದಲ್ಲಿ ಹೇಳಿದ ಪಿತೃತ್ವವನ್ನೂ ತಂದೆಯ ಮೇಲಿನ ಲೌಕಿಕವಾದ ಸ್ನೇಹವನ್ನೂ ಬಿಟ್ಟು, ಕೇವಲ ಶಿವಭಕ್ತಿಯಿಂದಲೇ ವೈಮರೆತು ತಂದೆಯನ್ನು ಹಿಂಸಿಸಿರುವೆ. ಆ ಭಕ್ತಿಯ ದೆಸೆಯಿಂದ ನೀನು ಪಿತೃಹತ್ಯೆಯ ದೋಷವಿಲ್ಲದವನಾದೆ. ॥೩೨॥

ಮಾತಾಪಿತೃಗುರುದ್ರೋಹೈಃ ಪಂಚಪಾಪೋಪಪಾತಕೈಃ ।
ಮದ್ಭಕ್ತಿಭಾವಯುಕ್ತಶ್ಚೇನ್ಮುಚ್ಯತೇ ನಾತ್ರ ಸಂಶಯಃ ॥೩೩॥

ಭಕ್ತಾನಾಂ ಮಮ ಪಾಪೈಶ್ಚ ನ ಲೇಪೋ ವಿದ್ಯತೇ ಗಣ ।
ಇತ್ಯುಕ್ತಸ್ತಚ್ಛಿವೇನೋಕ್ತಂ ಶ್ರುತ್ವಾ ತೌ ದಂಪತೀ ತದಾ ॥೩೪॥

ಪ್ರಣಮ್ಯ ಪರಮೇಶಾನಮನುಜ್ಞಾಪ್ಯಾನ್ಯಮುತ್ತಮಂ ।
ಯಯಾಚೇಽನ್ಯಂ ಸುತಂ ಸ್ವಸ್ಯ ವಂಶಕರ್ತಾರಮೀಶ್ವರಾತ್ ॥೩೫॥

ತಮಾಲಿಂಗ್ಯಾಥ ಚಂಡೀಶಂ ನತೌ ತತ್ರಾಭಿಜಗ್ಮತುಃ ।
ತತೋ ದೇವೇನ ತೌ ಚಾಪಿ ಪ್ರೀತ್ಯಾ ತತ್ರಾನುಮೋದಿತೌ ॥೩೬॥

ಯಾವತ್ಕಾಲಂ ವಿಹೃತ್ಯೈವ ಯಾತಂ ಕೈಲಾಸಮೇವ ಮೇ ।
ಯತ್ರ ಶೈವಪಿತಾ ವಾ ಸ್ಯಾಜ್ಜನನೀ ವಾ ತದುದ್ಭವಾಃ ॥೩೭॥

ಸರ್ವೇಷಾಂ ಮಮ ಕೈಲಾಸೇ ವಾಸ ಇಷ್ಟಫಲಪ್ರದಃ ।
ಪುತ್ರೋ ಯುವಾಂ ಚಂಡಿಕೇಶೋ ಗಣಪೋಽಸ್ತು ಸದಾ ಮಮ॥೩೮॥

ಮಾತೃದ್ರೋಹ, ಪಿತೃದ್ರೋಹ ಮೊದಲಾದ ಮಹಾಪಾಪ ಉಪಪಾಪಗಳು ನನ್ನ ಭಕ್ತಿಭಾವನೆಯೊಂದರಿಂದಲೇ ನಾಶವಾಗುವುವು. ॥೩೩॥

ನನ್ನ ಭಕ್ತರಿಗೆ ಆ ಪಾಪದಿಂದ ಯಾವ ಸಂಬಂಧವೂ ಇರುವುದಿಲ್ಲ. ಪರಮೇಶ್ವರನ ಆ ಮಾತನ್ನು ಕೇಳಿ ಚಂಡೀಶನ ತಂದೆಯಾದ ಕಣಭದ್ರ ಮುನಿಯು ಆ ದೇವನನ್ನು ಭಕ್ತಿಯಿಂದ ನಮಿಸಿ, ತನ್ನ ವಂಶವನ್ನು ಬೆಳೆಯಿಸು ವಂತಹ ಬೇರೊಬ್ಬ ಮಗನನ್ನು ಕರುಣಿಸಬೇಕೆಂದು ಬೇಡಿಕೊಂಡನು. ॥೩೪-೩೫॥

ಆ ಮೇಲೆ ಮುನಿಯು ಪುತ್ರನಾದ ಚಂಡೀಶನನ್ನಾಲಿಂಗಿಸಿ ಶಿವನನ್ನು ನಮಸ್ಕರಿಸಿ, ಅನುಮತಿಯನ್ನು ಪಡೆದು ತಮ್ಮ ಆಶ್ರಮಕ್ಕೆ ತೆರಳಲನುವಾದನು.॥೩೬॥

ಆಗ ಶಿವನು ಆ ಮುನಿಯನ್ನು ಕುರಿತು "ಎಲೈ ಮುನಿ, ನೀನೂ ನಿನ್ನ ಪತ್ನಿಯೂ ಕೆಲವು ಕಾಲ ಈ ಲೋಕದಲ್ಲಿ ವಿಹರಿಸುತ್ತಿದ್ದು ಕೊನೆಗೆ ನನ್ನ ಲೋಕಕ್ಕೆ ಬನ್ನಿರಿ. ಶಿವಭಕ್ತನನ್ನು ಹಡೆದ ತಂದೆತಾಯಿಗಳೂ ಉತ್ತಮವಾದ ಕೈಲಾಸವನ್ನೇ ಪಡೆಯು ವರು. ॥೩೭॥

ನಿಮ್ಮ ಮಗನಾದ ಚಂಡೀಶನು ನನ್ನ ಗಣನಾಯಕನಾಗಿ ಸದಾ ನನ್ನ ಸನ್ನಿಧಿಯಲ್ಲೇ ಇರುವನು. ಬ್ರಹ್ಮ ವಿಷ್ಣು ಮೊದಲಾದವರೂ ಇವನನ್ನು ಸೇವಿಸು

ಬ್ರಹ್ಮವಿಷ್ಣುಪ್ರಭೃತಿಭಿಃ ಪೂಜಿತಸ್ಸನ್ನಿಧೌ ಮಮ ।
ಯತ್ರ ಕುತ್ರಾಲಯೋ ಮೇದ್ಯ ಕೈಲಾಸೇ ನಿತ್ಯಮೇವ ಹಿ ॥೩೯॥

ಏತಸ್ಯ ದರ್ಶನೇನ್ನೈವ ಫಲದಂ ದರ್ಶನಂ ಮಮ ।
ಇತಿ ದೇವವಚಃ ಶ್ರುತ್ವಾ ತಾವೂಚತುರತಂದ್ರಿತೌ ॥೪೦॥

॥ ಮುನಿಮುನಿಪತ್ನ್ಯಾವೂಚತುಃ ॥

ದೇವದೇವ ಕರುಣಾವರುಣಾಬ್ಧೇ
ಪಾಹಿ ಪಾಹಿ ದಯಯಾ ತವ ಸೂನುಂ ।
ಪಾಹಿ ನೌ ತವ ಪದಾಂಬುಜಾರ್ಚಕೌ
ದೇಹಿ ಪುತ್ರಮಪಿ ಮೇ ಕುಮಾರಕಂ ॥೪೧॥

ತಥೇತಿ ವಿನಯಾನತಾವನುಸುಗೃಹ್ಯ ದೇವೋಽಪಿ ತೌ
ತಮಾಹ ವಿನಯಾನತಂ ನಿಖಿಲದೇವಮೌಳಿಶ್ಶಿವಃ ।
ದಯಾಘನದೃಶಾ ತಯಾ ಮುನಿವರಾತ್ಮಜಂ ಸುಸ್ಥಿತಂ
ಸುಮೇಧ ಇವ ಶಾಂಭವಂ ಭವದವಾರ್ತಿನಾಶೋ ಹರಃ ॥೪೨॥

ವರು. ನನ್ನ ದೇವಾಲಯದಲ್ಲಿ ನನಗೆ ಉತ್ತರದಲ್ಲಿ ನೆಲಸಿರುವ ಈ ಚಂಡೀಶನನ್ನು ದರ್ಶನಮಾಡಿದರೇ ನನ್ನನ್ನು ದರ್ಶನಮಾಡಿದುದು ಸಫಲವಾಗುವುದು. ಇಲ್ಲದಿದ್ದರೆ ವ್ಯರ್ಥವೆನಿಸುವುದು." ಎಂದನು. ॥೩೮-೩೯॥

ಪರಮೇಶ್ವರನ ಈ ಮಾತನ್ನು ಕೇಳಿ ಕಣಭದ್ರಮುನಿದಂಪತಿಗಳು ಹೀಗೆ ಹೇಳಿದರು. ॥೪೦॥

"ಕರುಣಾಸಾಗರನಾದ ಓ ದೇವನೇ, ದಯೆಯಿಂದ ನಿನ್ನ ಈ ಕುಮಾರನನ್ನು ಸಲಹು. ಮತ್ತು ನಿನ್ನ ಭಕ್ತನಾದ ನನಗೆ ಮತ್ತೊಬ್ಬ ಪುತ್ರನನ್ನು ಕರುಣಿಸು," ಎಂದರು. ॥೪೧॥

ಮುನಿಯ ಕೋರಿಕೆಯಂತೆಯೇ ಅವನನ್ನನುಗ್ರಹಿಸಿ ದೇವದೇವನಾದ ಮತ್ತು ಸಂಸಾರತಾಪತ್ರಯಗಳನ್ನು ಹೋಗಲಾಡಿಸುವ ಶಿವನು ಆ ಮೇಲೆ ವಿನಯದಿಂದ ಬಗ್ಗಿನಿಂತಿರುವ ಚಂಡೀಶನನ್ನು ಕುರಿತು ಹೀಗೆ ಹೇಳಿದನು. ॥೪೨॥

॥ ಈಶ್ವರ ಉವಾಚ ॥

ಧನ್ಯಶ್ಚೈವ ಪಿತಾ ಪಿತಾಮಹಪಿತಾ ಮಾತಾ ತಥಾ ಭ್ರಾತರಃ
ತನ್ಮಾತಾಮಹಪಂಕ್ತಿರಪ್ಯತುಲಿತಾಸ್ತದ್ಬಾಂಧವಸ್ತತ್ಸುತಾಃ ।
ಏತನ್ಮೇ ಕ್ಷಣಮಾತ್ರಮಪ್ಯಗಸುತಾಕಾಂತಾಂಘ್ರಿಪಂಕೇರುಹಂ
ಧ್ಯಾತಂ ಪೂಜಿತಮನ್ವಹಂ ತ್ರಿಜಗತಾಂ ಮುಕ್ತಿಂ ದದಾತಿ ಧ್ರುವಂ ॥೪೩॥

ಗೋಘ್ನೋ ವಾಪಿ ಕೃತಘ್ನತಸ್ಕರವರೋ ಮಾತಾಪಿತೃಘ್ನೋಽಪಿ ವಾ
ನಿತ್ಯಂ ಶಂಕರಲಿಂಗಪೂಜನಮತಿರ್ಧನ್ಯಸ್ತದನ್ಯೋ ನ ಹಿ ।
ತಸ್ಮೈ ತಾಂ ವಿತರಾಮಿ ಮುಕ್ತಿಮಖಿಲಾಂ ವೇದಾಂತಸಂಘುಸ್ತುತಾಂ
ಭುಕ್ತಿಂ ಚಾಪಿ ಸುರೇಂದ್ರವಂದಿವಿನುತಾಂ ಭಕ್ತಿಪ್ರಭಾವಾನ್ಮಯಿ ॥೪೪॥

ಮದ್ಭಕ್ತಃ ಶ್ವಪಚೋಽಪಿ ವಾ ಯತಿವರೋ ಲಿಂಗಾರ್ಚಕಶ್ಚೇದ್ವರೋ
ರುದ್ರಾಕ್ಷಾಮಲಪುಂಡ್ರಭಸ್ಮನಿಟಿಲೋ ಮಾನ್ಯೋ ದ್ವಿಜಾನಾಮಸೌ ।
ವಿಪ್ರೋಽಪ್ಯುಜ್ಝಿತಭಕ್ತಿಸಾರಹೃದಯೋ ಜ್ಞೇಯೋ ಭುವೋ ಭಾರವತ್
ವಿದ್ವಾನ್ ವೇದಚತುಷ್ಟಯೋತ್ತಮಮತಿಃ ಪಾಪೀ ಪರಂ ರಾಸಭಃ ॥೪೫॥

ಎಲೈ ಚಂಡೀಶನೇ, ನಿನ್ನಂತೆ ಯಾರು ಪಾರ್ವತೀಪತಿಯಾದ ನನ್ನನ್ನು ಬಿಡದೇ ಧ್ಯಾನಿಸುತ್ತಾ ಪೂಜಿಸುವರೋ ಅವರು ಧನ್ಯರು. ಅಂತಹವರಿಂದ ಅವರ ತಂದೆಯೂ, ತಾತನೂ, ಮುತ್ತಾತನೂ, ತಾಯಿಯೂ, ಸಹೋದರರೂ ಪವಿತ್ರರಾಗುವರು. ಅದರಂತೆ ಅವನ ಮಾತೃವಂಶದವರೆಲ್ಲರೂ ಬಂಧುಗಳೂ ಶುದ್ಧರಾಗುವರು. ಕೊನೆಗೆ ಮುಕ್ತಿಯನ್ನೂ ಪಡೆಯುವರು. ॥೪೩॥

ಗೋಹತ್ಯೆಯನ್ನು ಮಾಡಿದವನಾದರೂ, ಕೃತಘ್ನನಾದರೂ, ಕಡುಗಳ್ಳನಾದರೂ, ಮಾತಾಪಿತೃಗಳನ್ನು ಸಂಹರಿಸಿದ ಮಹಾಪಾಪಿಯಾದರೂ, ಅಂತಹವನು ನಿತ್ಯವೂ ಶಿವಲಿಂಗವನ್ನು ಭಕ್ತಿಯಿಂದ ಅರ್ಚಿಸುವವನಾದರೆ ಅವನಿಗೆ ದೇವೇಂದ್ರಭೋಗವನ್ನೂ ಕೊನೆಗೆ ವೇದಾಂತಗಳಲ್ಲಿ ಹೇಳುವಂತಹ ಮುಕ್ತಿಯನ್ನೂ ಕರುಣಿಸುವೆನು. ॥೪೪॥

ನನ್ನ ಭಕ್ತನಾದವನು ಹೊಲೆಯನಾಗಿದ್ದರೂ ರುದ್ರಾಕ್ಷಭಸ್ಮಗಳಿಂದ ಅಲಂಕೃತನಾಗಿ ಶಿವಭಕ್ತನೆನಿಸಿದರೆ ಅವನು ಬ್ರಾಹ್ಮಣರಿಗೂ ಮಾನ್ಯನು. ನಾಲ್ಕು ವೇದ

ಧನ್ಯೋ ಮಾನ್ಯೋಽಸಿ ಭೂಮೌ ದಿವಿ ವರಗಣಪಸ್ತ್ವೀಶಪಾದಾನುರಕ್ತೋ
ಮತ್ಪಾದಾಬ್ಜಂ ಪ್ರಪನ್ನೋ ಮಮ ನಿಜಮಹಿಮಾಧಾಮಸಂಸ್ಥಃ ಸದಾ ತ್ವಂ।
ಮಲ್ಲಿಂಗೋತ್ತಮದರ್ಶನೇಽಪಿ ಫಲದಸ್ತ್ವಂ ಚಂಡಪಾಪಾಪಹಃ
ಚಂಡೀಶಾನ ಭವಾದ್ಯ ಸರ್ವಜಗತಾಂ ಮಾನ್ಯಸ್ಸದಾ ತ್ವಂ ನೃಣಾಂ ॥೪೬॥

ಇತಿ ಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ಚಂಡೀಶಸ್ತುತಿ ಚಂಡೀಶ
ಸಾರೂಪ್ಯಗಾಣಾಪತ್ಯಶಿವಮಂದಿರವಾಸಶಿವದರ್ಶನ ಫಲಪ್ರದತ್ವಾದಿ
ವರಪ್ರಸಾದವರ್ಣನಂ ನಾಮಾಷ್ಟಮೋಽಧ್ಯಾಯಃ

ಗಳನ್ನೂ ಸಾಂಗವಾಗಿ ಓದಿ ವಿದ್ವಾಂಸನಾಗಿದ್ದವನು ಬ್ರಾಹ್ಮಣನಾಗಿದ್ದರೂ ಅವನು ನನ್ನಲ್ಲಿ ಭಕ್ತಿಯಿಲ್ಲದವನಾದರೆ ಕತ್ತೆಯಂತೆ ಭೂಮಿಗೆ ಕೇವಲ ಭಾರವೇ ಆಗುವನು. ಅವನಿಂದ ಏನೂ ಪ್ರಯೋಜನವಿಲ್ಲ. ॥೪೫॥

ಎಲೈ ಚಂಡೀಶನೇ, ನನ್ನಲ್ಲಿನ ಅಚಲವಾದ ಭಕ್ತಿಯಿಂದ ನೀನು ಗಣನಾಯಕನಾದುದಲ್ಲದೇ ಧನ್ಯನೂ ಮಾನ್ಯನೂ ಆಗಿರುವೆ. ನನ್ನ ದೇವಾಲಯಗಳಲ್ಲಿ ಇದ್ದು ನೀನು ನನ್ನ ಭಕ್ತರಿಗೆ ನನ್ನ ದರ್ಶನವನ್ನು ಸಫಲವನ್ನಾಗಿ ಮಾಡಿಕೊಡುವೆ. ಸಕಲ ಪಾಪಗಳನ್ನೂ ಹೋಗಲಾಡಿಸುವೆ. ಇದರಿಂದ ನೀನು ಎಲ್ಲ ಜನರಿಗೂ ಮಾನ್ಯನಾಗು ” ಎಂದು ಶಿವನು ಚಂಡೀಶನನ್ನು ಹರಸಿದನು. ॥೪೬॥

ಇಲ್ಲಿಗೆ ಶ್ರೀಶಿವರಹಸ್ಯದ ಚತುರ್ಥಾಂಶದಲ್ಲಿ ಎಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ನವಮೋಽಧ್ಯಾಯಃ

॥ ಶ್ರೀ ಸ್ಕಂದ ಉವಾಚ ॥

ಪುರಾ ಮಂದರಶೈಲೇಂದ್ರಶಿಖರೇ ರಮ್ಯಕಂದರೇ ।
ನಾನಾಪ್ರಸ್ರವಣೋಪೇತೇ ಮೃಗಪಕ್ಷಿಸಮಾಕುಲೇ ॥೧॥

ರಮ್ಯೇ ಮಂದರಶೈಲಾಗ್ರೇ ಭೃಂಗೀ ನಾಮ ಮಹಾಮುನಿಃ ।
ಯತ್ಕಿಂಚಿತ್ಕಾಮಮಾಲಂಬ್ಯ ಮನಸಿ ದ್ವಿಜಪುಂಗವಃ ॥೨॥

ದಿವ್ಯಂ ವರ್ಷಸಹಸ್ರಂ ತು ತಪಸ್ತೇಪೇ ಸುದಾರುಣಂ ।
ಗ್ರೀಷ್ಮೇ ಪಂಚಾಗ್ನಿಮಧ್ಯಸ್ಥೋ ಜಿತಕ್ರೋಧೋ ಜಿತೇಂದ್ರಿಯಃ॥೩॥

ಹೇಮಂತೇ ಜಲಮಧ್ಯಸ್ಥೋ ವರ್ಷಾಸ್ವಾಕಾಶಸಂವೃತಃ ।
ಏವಂ ಸ ತಪಸಾ ವಿಪ್ರೋ ಹ್ಯನೈಷೀದ್ವತ್ಸರಾಯುತಂ ॥೪॥

ಒಂಬತ್ತನೆಯ ಅಧ್ಯಾಯ

ಹಿಂದೆ ಮನೋಹರವಾದ ಗುಹೆಗಳಿಂದಲೂ, ಅನೇಕ ಬಗೆಯ ಸರೋವರ ಮತ್ತು ನದಿಗಳಿಂದಲೂ, ಮೃಗಪಕ್ಷಿಗಳಿಂದಲೂ, ರಂಜಿಸುವ ಮಂದರ ಪರ್ವತದ ಶಿಖರದ ತಪ್ಪಲಲ್ಲಿ ಭೃಂಗಿಯೆಂಬ ಮಹಾ ಮುನಿಯು ಯಾವುದೋ ಒಂದು ಧ್ಯೇಯವನ್ನಿಟ್ಟುಕೊಂಡು ಸಾವಿರ ವರ್ಷಗಳವರೆಗೆ ಘೋರತಪಸ್ಸನ್ನಾಚರಿಸಿದನು. ॥೧-೨॥

ಉರಿಬೇಸಿಗೆಯಲ್ಲಿ ಐದು ಅಗ್ನಿಗಳ ಮಧ್ಯದಲ್ಲಿ ಕುಳಿತು, ಚಳಿಗಾಲದಲ್ಲಿ ಜಲದಲ್ಲಿ ಕುಳಿತು, ಮಳೆಗಾಲದಲ್ಲಿ ಬತ್ತಲೆಯಾಗಿ ಬಯಲಿನಲ್ಲಿ ಕುಳಿತು, ಸಾವಿರಾರು ವರ್ಷಗಳ ವರೆಗೆ ಆ ಭೃಂಗಿಯು ತಪವನ್ನಾಚರಿಸಿದನು. ॥೩-೪॥

ನೈವಾಸೌ ದೃಷ್ಟವಾನ್ ಶಂಭುಂ ತೇನಾತಪ್ಯತ ದುರ್ಮನಾಃ ।
ತತ್ರಾಂತರೇಽಭವದ್ವಾಣೀ ಶಂಭೋರಾಕಾಶಮಧ್ಯತಃ ॥೫॥

॥ ವಾಣ್ಯುವಾಚ ॥

ವದಾಮ್ಯಹಮುಪಾಯಂ ತೇ ಶುದ್ಧಚಿತ್ತಸ್ಯ ಸಾಂಪ್ರತಂ ।
ಯಥಾ ಶೀಘ್ರಂ ಪ್ರಸನ್ನಃ ಸ್ಯಾದ್ದೇವದೇವೋ ಮಹೇಶ್ವರಃ ॥೬॥

ಭಕ್ತೋಽಸಿ ತ್ವಂ ಮಹೇಶಾನೇ ಪಾತ್ರಭೂತೋಽಸಿ ಚಾನಘ
ಬ್ರಹ್ಮಚರ್ಯೇಣ ವಾ ಕಿಂ ತೇ ಗುರುಶುಶ್ರೂಷಯಾಽಪಿ ವಾ ॥೭॥

ಸಮಸ್ತದೇವಾನ್ ಧರ್ಮಾಂಶ್ಚ ಉತ್ಸೃಜ್ಯ ನಿಯಮಾದಿಕಂ ।
ಭಕ್ತ್ಯಾಽಽರಾಧಯ ದೇವೇಶಂ ಕರುಣಾಮೃತವಾರಿಧಿಂ ॥೮॥

ಭಕ್ತ್ಯೈವ ಪರಯಾ ದೇವಸ್ತೋಷಂ ಯಾತಿ ಮಹೇಶ್ವರಃ ।
ರಹಸ್ಯಂ ತೇ ವದಾಮ್ಯದ್ಯ ತಸ್ಯೈವಾರಾಧನಕ್ರಮಂ ॥೯॥

ಆದರೂ ಆ ಭೃಂಗಿಗೆ ಶಿವನು ಪ್ರತ್ಯಕ್ಷನಾಗಲಿಲ್ಲ. ಆದರಿಂದ ದುಃಖಿತನಾದ ಆವನಿಗೆ ಪರಮೇಶ್ವರನ ಆಕಾಶವಾಣಿಯು ಹೀಗೆ ಕೇಳಿಸಿತು. ||೫||

"ಎಲೈ ಮುನಿಯೇ, ತಪಸ್ಸಿನಿಂದ ನೀನು ಈಗ ಪರಿಶುದ್ಧನಾಗಿರುವೆ. ಈಗ ನಿನಗೆ ದೇವದೇವನಾದ ಮಹೇಶ್ವರನು ಹೇಗೆ ಪ್ರಸನ್ನನಾಗುವನು ಎಂಬ ಉಪಾಯ ವನ್ನು ಹೇಳುವೆನು. ||೬||

ನೀನು ಉತ್ತಮಶಿವಭಕ್ತನಾಗಿರುವೆ. ಶಿವನ ಕೃಪೆಗೆ ಯೋಗ್ಯನಾಗಿರುವೆ. ಬ್ರಹ್ಮಚರ್ಯದಿಂದಲಾಗಲೀ ಗುರುಶುಶ್ರೂಷೆಯಿಂದಲಾಗಲೀ ನಿನಗೆ ಪ್ರಯೋಜನ ವೇನು ? ಮಿಕ್ಕ ದೇವತೆಗಳನ್ನೂ, ಧರ್ಮಗಳನ್ನೂ, ನಿಯಮಗಳನ್ನೂ ಬಿಟ್ಟು ದಯಾಮಯನಾದ ಮಹಾದೇವನನ್ನು ಭಕ್ತಿಯಿಂದ ಆರಾಧಿಸು. ||೭-೮||

ಭಕ್ತಿಯಿಂದಲೇ ಮಹೇಶ್ವರನು ಸಂತುಷ್ಟನಾಗುವನು. ಎಂತಹ ಆರಾಧನೆ ಯಿಂದ ಶಿವನು ಜಾಗ್ರತೆ ಪ್ರಸನ್ನನಾಗುವನೋ ಅಂತಹ ಆರಾಧನಾಕ್ರಮವನ್ನು ಹೇಳುವೆನು; ಅದು ತುಂಬಾ ರಹಸ್ಯವಾದುದು. ||೯||

ಯೇನ ಶೀಘ್ರಂ ಸಂತುಷ್ಟಃ ಸ್ಯಾನ್ಮಹೇಶಃ ಪಾರ್ವತೀಪತಿಃ ।
ಪ್ರದಕ್ಷಿಣಂ ಹಿ ಪರಮಾ ಪೂಜಾ ಶಂಭೋರ್ಮಹಾತ್ಮನಃ ॥೧೦॥

ಕುರು ಪ್ರದಕ್ಷಿಣಾಂ ಶಂಭೋರ್ನಿತ್ಯಂ ಭಕ್ತ್ಯಾ ದ್ವಿಜೋತ್ತಮ ।
ಪ್ರಸನ್ನಸ್ತ್ವಯಿ ದೇವೇಶಸ್ಸರ್ವಾನ್ ಕಾಮಾನ್ ಪ್ರಯಚ್ಛತಿ ॥೧೧॥

ಇತ್ಯುಕ್ತ್ವಾ ವಿರರಾಮಾಥ ಶಂಭೋರಾಕಾಶವಾಕ್ತದಾ ।
ತದಾ ಪ್ರಭೃತಿ ಭೃಂಗೀಶೋ ಭೃಂಗವತ್ಪುಷ್ಪಲಿಪ್ಸಯಾ ॥೧೨॥

ಬಭ್ರಾಮ ಲಿಂಗಾಗಾರೇ ಸ ಭಸ್ಮರುದ್ರಾಕ್ಷಧೃಕ್ಸದಾ ।
ಅಹೋರಾತ್ರಮವಿಶ್ರಾಂತೋ ಯಥಾ ಮೇರುಂ ಹಿ ಭಾಸ್ಕರಃ ॥೧೩॥

ಸಂಸ್ತುವನ್ ದೇವದೇವೇಶಂ ಶಿವಮೇವ ನಿರಂತರಂ ।
ರುದ್ರಮಾವರ್ತಯಂಸ್ತತ್ರ ಚಕಾರಾಸೌ ಪ್ರದಕ್ಷಿಣಂ ॥೧೪॥

ಹಿತ್ವಾ ಚ ದೇವೀಂ ಸ್ಕಂದಂ ಚ ಗಣಪಂ ಚಂಡಿಕೇಶ್ವರಂ ।
ಪ್ರದಕ್ಷಿಣೈಕಪರಮೋ ಭೃಂಗೀ ಭೃಂಗವದಾಸ ಹಿ ॥೧೫॥

ಶಿವನಿಗೆ ಪ್ರದಕ್ಷಿಣನಮಸ್ಕಾರವು ಮುಖ್ಯವಾದ ಪೂಜೆಯು. ಆದುದರಿಂದ ನಿತ್ಯವೂ ನೀನು ಭಕ್ತಿಯಿಂದ ಶಿವನಿಗೆ ಪ್ರದಕ್ಷಿಣನಮಸ್ಕಾರವನ್ನು ಮಾಡು. ಅದರಿಂದ ಶಿವನು ಶೀಘ್ರವಾಗಿ ಪ್ರಸನ್ನನಾಗಿ ನಿನ್ನ ಇಷ್ಟಾರ್ಥವನ್ನೀಡೇರಿಸುವನು." ||೧೦-೧೧||

ಹೀಗೆ ಆಕಾಶವಾಣಿಯು ಕೇಳಿಸಿದ ಆ ಮೊದಲ್ಗೊಂಡು ಭೃಂಗಿಯು ಹೂವಿಗಾಗಿ ಸುತ್ತುವ ದುಂಬಿಯಂತೆಯೂ, ಮೇರುವನ್ನು ಬಿಡದೇ ಸುತ್ತುವ ಸೂರ್ಯನಂತೆಯೂ, ಶಿವದೇವಾಲಯದಲ್ಲಿ ಭಸ್ಮರುದ್ರಾಕ್ಷಗಳನ್ನು ಧರಿಸಿದ್ದು ಬಿಡದೇ ಶಿವಲಿಂಗಕ್ಕೆ ಪ್ರದಕ್ಷಿಣೆಮಾಡುತ್ತಿದ್ದನು. ||೧೨-೧೩||

ಶಿವನನ್ನೇ ರಾತ್ರಿಹಗಲು ಧ್ಯಾನಿಸುತ್ತಾ ಸ್ತುತಿಸುತ್ತಾ ರುದ್ರಸೂಕ್ತವನ್ನು ಪಠಿಸುತ್ತಾ ನಿರಂತರವಾಗಿ ಶಿವಲಿಂಗಕ್ಕೆ ಪ್ರದಕ್ಷಿಣ ನಮಸ್ಕಾರವನ್ನು ಮಾಡುತ್ತಿದ್ದನು. ||೧೪||

ಪಾರ್ವತೀದೇವಿಯನ್ನೂ ಸ್ಕಂದನನ್ನೂ ಗಣೇಶನನ್ನೂ ಚಂಡೀಶನನ್ನೂ ಬಿಟ್ಟು ಆ ಭೃಂಗಿಯು ಶಿವನನ್ನೇ ಧ್ಯಾನಿಸುತ್ತಾ ದುಂಬಿಯಂತೆ ಶಿವಲಿಂಗಕ್ಕೆ ಪ್ರದಕ್ಷಿಣೆಯಾಗಿ ಬರುತ್ತಿದ್ದನು. ||೧೫||

ಸಂಸ್ತುವನ್ನೇವಮೀಶಾನಂ ಸಂಸ್ತುತಿಂ ಶೃಣು ಸತ್ತಮ ॥೧೬॥

॥ ಭೃಂಗ್ಯುವಾಚ ॥

ಶಂಭೋ ಸಂಗತಕಾಮಿನೀನವಸುಧಾಧೃಗ್ಧುರ್ಯಮೌರ್ವೀಧನೋ
ಧೇನೂನಾಂ ಪತಿವಾಹನ ಪ್ರಮಥಪಾಧೀಶಾನ ವಿಶ್ವಾರ್ಚಿತ ।
ವೈಕುಂಠಾತ್ಮಜಕುಂಠಿತೋರುಸುಶರಾಪಾರವ್ಯಥಾಂ ಸಂಹರ
ಶಂಭೋ ದೇವದಯಾನಿಧೇ ಕರುಣಯಾ ಮಾಂ ಪಾಹಿ ವಿಶ್ವೇಶ್ವರ ॥೧೭॥

ಪೌಲಸ್ತ್ಯಾತ್ಮಜಬಾಹುತೋಲಿತಮಹಾಕೈಲಾಸಮೂಲಸ್ಥಿತಾ
ಪಾರೋದ್ವಾಹಪರಿಶ್ರಮಾರ್ತಭುಜಭುಗ್ನಾರ್ತಿಸ್ತವಾಮ್ರೇಡಿತಂ ।
ಸ್ವರ್ಗಂಗಾಯತನೋರುಗರ್ವಕುಲಿಶಾಖರ್ವಾಕಪರ್ದೋಲ್ಲಸ
ಲ್ಲೀಕ್ಷೇವಾಶು ಧೃತಾ ತ್ವಯೇಶ್ವರ ಮಹಾದೇವಾದ್ಯ ಮಾಂ ಪಾಲಯ ॥೧೮॥

ಆಗ ಆ ಭೃಂಗಿಯು ಶಿವನನ್ನು ಹೀಗೆ ಸ್ತುತಿಸುತ್ತಿದ್ದನು. ಅದನ್ನು ಕೇಳು. ||೧೬||

" ಸುಂದರಿಯಾದ ಗಿರಿಜೆಯನ್ನರ್ಧಶರೀರದಲ್ಲಿ ಧರಿಸಿದವನೂ, ಸೌಮ್ಯವಾದ ಚಂದ್ರಕಲೆಯನ್ನು ಶಿರಸ್ಸಿನಲ್ಲಿಟ್ಟಿರುವವನೂ, ನಾರಾಯಣನ ಪುತ್ರನಾದ ಕುಸುಮ ಬಾಣನೆನಿಸಿದ ಮನ್ಮಥನನ್ನು ಭಸ್ಮಮಾಡಿದವನೂ, ಕರುಣಾಸಾಗರನೂ, ಪರಮೇಶ್ವರನೂ, ಆದ ಓ ಶಂಭುವೇ, ದಯೆಯಿಂದ ನನ್ನನ್ನು ಪಾಲಿಸು, ಸಂಸಾರತಾಪತ್ರಯಗಳನ್ನು ಪರಿಹರಿಸಿ ಕಾಪಾಡು. ||೧೭||

ಹಿಂದೊಮ್ಮೆ ಲಂಕಾಧಿಪತಿಯಾದ ರಾವಣನು ಬಲದ ಕೊಬ್ಬಿನಿಂದ ನಿನ್ನ ವಾಸಸ್ಥಾನವಾದ ಕೈಲಾಸಗಿರಿಯನ್ನು ತೋಳುಗಳಿಂದೆತ್ತತೊಡಗಿದನು. ಆಗ ನೀನು ಎಡಗಾಲಿನ ಹೆಬ್ಬೆಟ್ಟಿನಿಂದ ಸ್ವಲ್ಪ ಆ ಗಿರಿಯನ್ನು ಒತ್ತಿದೆ. ಆಗ ಆ ಭಾರವನ್ನು ಹೊರಲಾರದೆ ಲಂಕೇಶ್ವರನು ತೋಳುಗಳನ್ನು ಆ ಬೆಟ್ಟದ ಸಂದಿನಲ್ಲಿ ಸಿಕ್ಕಿಸಿಕೊಂಡು ನರಳಿ ನರಳಿ ಸಾಮವೇದದಿಂದ ನಿನ್ನನ್ನು ಸ್ತುತಿಸಿ ಮೊರೆಯಿಟ್ಟನು. ಮತ್ತೊಮ್ಮೆ ದೇವೇಂದ್ರನು ಕೊಬ್ಬಿನಿಂದ ತನ್ನ ವಜ್ರಾಯುಧವನ್ನು ನಿನ್ನ ಮೇಲೆ ಪ್ರಯೋಗಿಸಲುದ್ಯುಕ್ತನಾದನು. ಆಗ ನೀನು ಅವನನ್ನೊಂದುಬಾರಿ ದುರುಗುಟ್ಟಿ ನೋಡಿದೆ. ಅಷ್ಟರಿಂದಲೇ ಆ ಇಂದ್ರನ ಕೈಕಟ್ಟಿ ಬಲವುಡುಗಿತು. ಗರ್ವವು ಇಳಿಯಿತು. ಇಂತಹ ಮಹಾಮಹಿಮನಾದ ಓ ಶಂಭುವೆ ನನ್ನನ್ನು ಪಾಲಿಸು. ||೧೮||

ಭೂಮಿಸ್ಸ್ಯಂದನವಾಹನೇ ಸುವಿದಿತಾ ವೇದಾಶ್ಚ ತೇ ವಾಜಿನೋ
ಮೌರ್ವೀ ತೇ ಧನುರ್ಕುರ್ಧ್ರುಕೋ ಶರವರೋ ಭೂಮೇಸ್ಸುತಾನಾಯುಕಃ ।
ಸೂರ್ಯೇಂದೂ ರಥಕರ್ಷಣಾಂಗಯುಗಕೌ ಯಂತಾ ಸ್ವಯಂ ತೇ ವಿಧಿಃ
ಲಕ್ಷ್ಯಂ ತೇ ತ್ರಿಪುರಂ ತಥಾಽಪಿ ಯಮಿನಾಂ ಚಿತ್ತೇ ಹ್ಯಲಕ್ಷ್ಯೋ ಭವಾನ್ ॥೧೯॥

ತವ ಶಂಕರ ಕಿಂಕರಾರ್ಹತಾ
ಹರಿಪದ್ಮಾಸನನೇತ್ರಸಂಭವಾಃ ।
ವೃಷವಾಹಾಧ್ವರದಕ್ಷಶಿಕ್ಷಶಂಭೋ
ಕರಟಿತ್ವಗ್ಧೃಗಹೀಶ್ವರೋರುಮಾಲ ॥೨೦॥

ಗಿರಿಪರಿವರ್ತನಸಾಗರೋದ್ಯದುದ್ಯ
ದ್ಗರಲೀಲಾನಿಹತಾಃ ಸುರಾಸ್ಸುರಾದ್ಯಾಃ ।
ಭವತಾ ಭವತಾಪಹಾರಿಣಾ ಗರ
ಭುಕ್ತ್ವಾ ಸುಖಿನಃ ಸುರಾಸ್ಸುರಾಃ ॥೨೧॥

ಓ ದೇವ, ತ್ರಿಪುರಸಂಹಾರಕಾಲದಲ್ಲಿ ಭೂಮಿಯೇ ನಿನಗೆ ರಥವಾಗಿತ್ತು, ವೇದಗಳೇ ಕುದುರೆಗಳಾಗಿದ್ದುವು. ಮೇರುಗಿರಿಯೇ ಧನುಸ್ಸಾಗಿತ್ತು. ಆದಿಶೇಷನು ಮೌರ್ವಿ (ಧನುಸ್ಸಿನಹುರಿ)ಯಾಗಿದ್ದನು. ಶ್ರೀಮನ್ನಾರಾಯಣನೇ ಬಾಣವಾಗಿದ್ದನು, ಸೂರ್ಯಚಂದ್ರರು ರಥಚಕ್ರಗಳಾಗಿದ್ದರು. ಬ್ರಹ್ಮನು ಸಾರಥಿಯಾಗಿದ್ದನು, ತ್ರಿಪುರವು ನಿನಗೆ ಗುರಿಯಾಗಿತ್ತು, ಇಷ್ಟೆಲ್ಲ ಸಲಕರಣೆಗಳಿದ್ದೂ ನೀನು ಅವಾವುದನ್ನೂ ಲಕ್ಷಿಸದೆ ಒಂದು ಹುಂಕಾರದಿಂದಲೇ ತ್ರಿಪುರವನ್ನು ಭಸ್ಮಮಾಡಿರುವೆ, ಇಂತಹ ಮಹಾಮಹಿಮನಾದ ಮಹಾಮಹಾಯತಿಗಳಿಗೂ ಅಗೋಚರನಾದ ನಿನಗೆ ನಮಸ್ಕಾರವು. ॥೧೯॥

ಗರ್ವಿಷ್ಠನಾದ ದಕ್ಷಬ್ರಹ್ಮನ ಯಾಗವನ್ನು ಧ್ವಂಸಮಾಡಿ ಅವನನ್ನು ಶಿಕ್ಷಿಸಿದ ಗಜಚರ್ಮಾಂಬರಧಾರಿಯಾದ, ಸರ್ಪಭೂಷಣನಾದ, ವೃಷಭವಾಹನನಾದ, ಓ ಶಂಭುವೇ, ನಾರಾಯಣ ಬ್ರಹ್ಮ ಮೊದಲಾದ ದೇವತೆಗಳೂ ನಿನ್ನ ಸೇವಕರು.॥೨೦॥

ದೇವಾಸುರರು ಸಾಗರದಲ್ಲಿ ಮಂದರಗಿರಿಯನ್ನು ಇರಿಸಿ ಕಡೆಯತೊಡಗಿದರು. ಆಗ ಅಮೃತಕ್ಕೆ ಬದಲಾಗಿ ಮಹಾವಿಷವು ಉದಯಿಸಿತು. ನಾರಾಯಣ ಮೊದಲಾದ ದೇವತೆಗಳೂ ಅಸುರರೂ ಅದರಿಂದ ನಾಶವಾಗತೊಡಗಿದರು. ಆಗ ನೀನು ಆ ಕಾಲಕೂಟ ವಿಷವನ್ನು ಕುಡಿದು ದೇವಾಸುರರನ್ನು ರಕ್ಷಿಸಿರುವೆ. ॥೨೧॥

ಏವಂ ಸಂಸ್ತೂಯಮಾನಶ್ಚ ಭೃಂಗಿನಃ ಪುರತಶ್ಶಿವಃ ।
ಪ್ರಾದುರಾಸೀದ್ವೃಷಾರೂಢೋ ನೀಲಕಂಠಸ್ತ್ರಿಲೋಚನಃ ॥೨೨॥

ದೇವ್ಯಾಲಿಂಗಿತವಾಮಾಂಗೋ ಗಣಬೃಂದನಿಷೇವಿತಃ ।
ದೃಷ್ಟ್ವಾ ಪ್ರಣಮ್ಯ ದೇವೇಶಂ ಶಶಧಾಮಕಲಾಧರಂ ॥೨೩॥

ದೃಷ್ಟ್ವಾ ತತ್ಪಾರ್ಶ್ವಗಾಂಸ್ತತ್ರ ಗಣೇಂದ್ರಾನ್ ವಾರಣಪ್ರಭಾನ್ ।
ತ್ರಿನೇತ್ರಾನ್ ನೀಲಕಂಠಾಂಶ್ಚ ಭಸ್ಮಪುಂಡ್ರತ್ರಿಪುಂಡ್ರಕಾನ್ ॥೨೪॥

ನಂದಿಕೇಶಶ್ಚಂಡಿಕೇಶೋ ಮಹಾಕಾಲೋಽಥ ಬಾಣಕಃ ।
ಕಾಲಾಮುಖಶ್ಶಂಕುಕರ್ಣೋ ವೀರಭದ್ರೋ ಮಯೂರಕಃ ॥೨೫॥

ಗಜಕರ್ಣಸ್ತಾಮ್ರವಕ್ತ್ರೋ ಬೃಹತ್ಸೇನೋ ವಿಡೂರಥಃ ।
ಸೋಮನಂದೀ ಮಹಾನಂದೀ ತುಹುಂಡಶ್ಚೈವ ಕುಂಡಕಃ ॥೨೬॥

ಹೀಗೆ ಭೃಂಗಿಯು ಸ್ತುತಿಸಲು ಶಿವನು ಮೆಚ್ಚಿ ವೃಷಭವನ್ನೇರಿ ನೀಲಕಂಠನಾಗಿ ಮುಕ್ಕಣ್ಣನಾಗಿ ಭೃಂಗಿಯ ಎದುರಿಗೆ ಪ್ರತ್ಯಕ್ಷನಾದನು. ||೨೨||

ಎಡಶರೀರದಲ್ಲಿ ಪಾರ್ವತೀದೇವಿಯನ್ನು ಹೊಂದಿ ಅರ್ಧನಾರೀಶ್ವರನಾದ ಮತ್ತು ಪ್ರಮಥಗಣಗಳಿಂದ ಕೂಡಿದ ಆ ಚಂದ್ರಶೇಖರನನ್ನು ನೋಡಿ ಭೃಂಗಿಯು ನಮಸ್ಕರಿಸಿದನು. ||೨೩||

ಆ ಶಿವನ ಅಕ್ಕಪಕ್ಕಗಳಲ್ಲಿ ಆನೆಗಳಂತೆ ಮಹೋನ್ನತರಾಗಿ ಭಸ್ಮರುದ್ರಾಕ್ಷಿಗಳನ್ನು ಧರಿಸಿ ಶಿವನಂತೆ ಮೂರು ಕಣ್ಣುಗಳುಳ್ಳ ನೀಲಕಂಠರಾದ ಪ್ರಮಥ ಗಣನಾಯಕರು ಅನೇಕ ಮಂದಿ ಇದ್ದರು. ||೨೪||

ನಂದಿಕೇಶ್ವರ, ಚಂಡೀಶ, ಮಹಾಕಾಲ, ಬಾಣ, ಕಾಲಾಮುಖ ಶಂಕುಕರ್ಣ, ವೀರಭದ್ರ, ಮಯೂರ, ಗಜಕರ್ಣ, ತಾಮ್ರವಕ್ತ್ರ, ಬೃಹತ್ಸೇನ, ವಿಡೂರಥ, ಸೋಮನಂದಿ, ಮಹಾನಂದಿ, ತುಹುಂಡ, ಕುಂಡಕ ಮೊದಲಾದ ಗಣನಾಯಕರೂ ಅಲ್ಲಿಗೆ ಬಂದಿದ್ದರು. ||೨೫-೨೬||

ಛತ್ರಚಾಮರಕೋಟೀಭಿರ್ವ್ಯಜನೈಶ್ಚ ಪತಾಕಕೈಃ ।
ಗಣಾನಾಂ ಶತಸಾಹಸ್ರೈರಯುತೈರ್ನಿಯುತೈಃ ಪುನಃ ॥೨೭॥

ಕೋಟಿಕೋಟಿಭಿರನ್ಯೈಶ್ಚ ವಿವಿಧಾಯುಧಭೂಷಣೈಃ ।
ವೃತಂ ಮಹೇಶಂ ತುಷ್ಟಾವ ಭೃಂಗೀ ಚಂದ್ರಕಲಾಧರಂ ॥೨೮॥

॥ ಭೃಂಗ್ಯುವಾಚ ॥

ಶಂಭೋ ಖಾಟಿತಟಿದ್ರಯೋರುತಟನೀಗರ್ವಾದಿನಿರ್ವಾಪಣೇ
ವೀರ್ಯೋತ್ತೇಜಿಜಟಾನಿಟಾಲನಯನ ತ್ವಂ ಧೂರ್ಜಟಿಃ ಪಾಟಕಃ ।
ಘೋಟಾಕೃತ್ರಿಮಗೋಸಹಾಯುತಮಹಾಕಂಠೀರವೋದ್ಯತ್ಪ್ರಭಾ
ಕಟ್ಯಾಂ ತ್ವತ್ಕರಟೀಭವಂ ವರಶಯೋ ಶೂಲಾನಲೇನಾಹಿತಃ ॥೨೯॥

ತ್ವಂ ಖಂಡಪರಶುಶ್ಶಿಖಂಡಚೂಡಖಟ್ವಾಂಗ
ಖಡ್ಗಶರಹೇತಿಮಹೋರುಬಾಹೋ ।
ಆಖಂಡಲಾದಿಸುರವಂದಿತಪುಂಡರೀಕ
ಚರ್ಮಾಂಬರಾಂಬುಜಾಹೀಶವರೋರುಹಾರ ॥೩೦॥

ಹತ್ತುಸಾವಿರ, ಐವತ್ತುಸಾವಿರ, ಲಕ್ಷ ಕೋಟಿ–ಗಣಗಳು ಸಾಲುಸಾಲಾಗಿ ನಿಂತು ಛತ್ರಿಚಾಮರ ಧ್ವಜಗಳನ್ನೂ, ಬೀಸಣಿಗೆಗಳನ್ನೂ, ಹಿಡಿದು ಆ ಪರಶಿವನನ್ನು ಸೇವಿಸುತ್ತಿದ್ದರು. ಇಂತಹ ಶಿವನನ್ನು ನೋಡಿ ಭೃಂಗಿಯು ಭಕ್ತಿಯಿಂದ ಹೀಗೆ ಸ್ತುತಿಸಿದನು. ॥೨೭-೨೮॥

"ಓ ಪರಮೇಶ್ವರ, ನೀನು ದೇವಗಂಗೆಯ ವೇಗವನ್ನು ತಡೆದು ಆವಳನ್ನು ಜಟೆಯಲ್ಲಿ ಬಂಧಿಸಿ ಆವಳ ಗರ್ವವನ್ನು ಮುರಿದವನು, ವೃಷಭವಾಹನನು, ಉನ್ನತವಾದ ವೃಷಭವನ್ನೇರಲು ಸಿಂಹವು ನಿನಗೆ ಮೆಟ್ಟಲಾಗುವುದು. ಗಜಚರ್ಮವನ್ನು ಉಟ್ಟಿರುವವನು. ಕೈಯಲ್ಲಿ ತ್ರಿಶೂಲವನ್ನು ಧರಿಸಿರುವವನು. ಹಣೆಯಲ್ಲಿ ಉರಿಗಣ್ಣುಳ್ಳವನು. ॥೨೯॥

ಗಂಡುಗೊಡಲಿಯನ್ನು ಹಿಡಿದ ಮಹಾವೀರನು ನೀನು. ಚಂದ್ರಶೇಖರನು ನೀನು. ಖಟ್ವಾಂಗ ಖಡ್ಗತ್ರಿಶೂಲಗಳನ್ನು ಧರಿಸಿರುವವನು ನೀನು. ದೇವೇಂದ್ರಾದಿಗಳಿಂದ ವಂದಿಸಲ್ಪಡುವವನು ನೀನೇ. ನೀನು ಹುಲಿಯ ಚರ್ಮವನ್ನುಡುವವನು ಕಮಲ ಮತ್ತು ಸರ್ಪಹಾರನು. ॥೩೦॥

ಕುಂಡಲೀಶಕೃತಕುಂಡಲಗಂಡ
ಸ್ಥಾಲನೀಲ ನಲಿನಾಮಲಮಾಲ ।
ಶೂಲಮೂಲವರಹಸ್ತಕಪಾಲ
ದ್ಯೋತಿತಾಮಲರ್ಝುಲಜ್ಝಲಪಾದ ॥೩೧॥

॥ ಸೂತ ಉವಾಚ ॥

ತತ್ಸ್ತುತಿಂ ಶಂಕರಃ ಶ್ರುತ್ವಾ ಪ್ರಾಹ ತಂ ಭೃಂಗಿನಂ ಮುನಿಂ
ತ್ರೈಲೋಕ್ಯಜನನೀಂ ದೃಷ್ಟ್ವಾ ತಾಮೂಚೇ ಭಕ್ತವತ್ಸಲಃ ॥೩೨॥

॥ ಈಶ್ವರ ಉವಾಚ ॥

ದೇವಿ ತ್ವದ್ದರ್ಶನೇನಾಯಂ ಗಣಪೋ ಭವತಾಂ ಮಮ ।
ಮಮ ಸಾರೂಪ್ಯಭಾಙ್ನಿತ್ಯಂ ಏಷ ಭೃಂಗೀ ಮಹಾಮತಿಃ ॥೩೩॥

ಸದಾಶಿವವಚಃ ಶ್ರುತ್ವಾ ದೇವೀ ಪ್ರಾಹ ಮಹೇಶ್ವರಂ ॥೩೪॥

॥ ದೇವ್ಯುವಾಚ ॥

ದೇವದೇವ ಮಹೇಶಾನ ಸರ್ವಜ್ಞ ಕರುಣಾನಿಧೇ ।
ತ್ವಯಾ ವರೋ ನ ದಾತವ್ಯೋ ಮುನಯೇ ಚಂದ್ರಶೇಖರ ॥೩೫॥

ಸರ್ಪವೇ ಕರ್ಣಾಭರಣವಾಗುಳ್ಳವನು. ನೀಲಕಂಠನು ನೀನು. ತಾವರೆಯ ಸರವನ್ನುಳ್ಳವನು. ಕೈಗಳಲ್ಲಿ ತ್ರಿಶೂಲ, ಕಪಾಲ, ಅಭಯಮುದ್ರೆಗಳನ್ನು ಧರಿಸಿರುವೆ.'' ॥೩೧॥

ಭೃಂಗಿಯ ಆ ಸ್ತುತಿಯನ್ನು ಕೇಳಿ ಪರಶಿವನು ಪ್ರಸನ್ನನಾಗಿ ಜಗನ್ಮಾತೆಯಾದ ಗೌರಿಯನ್ನು ಕುರಿತು ಹೀಗೆ ಹೇಳಿದನು. ॥೩೨॥

"ಎಲೌ ದೇವಿ, ನಿನ್ನ ಕೃಪಾದೃಷ್ಟಿಯಿಂದ ಈ ಭಕ್ತಶಿರೋಮಣಿಯಾದ ಭೃಂಗಿಯು ನನ್ನ ಗಣನಾಯಕನಾಗಲಿ. ಮತ್ತು ನನ್ನಂತೆ ರೂಪವುಳ್ಳವನೂ ಆಗಲಿ.'' ॥೩೩॥

ಶಿವನ ಈ ಮಾತನ್ನು ಕೇಳಿ ದೇವಿಯು ಹೀಗೆ ಹೇಳಿದಳು. ॥೩೪॥

ದೇವದೇವನಾದ ಮತ್ತು ಸರ್ವಜ್ಞನಾದ ಕರುಣಾಸಾಗರನಾದ ಓ ಮಹೇಶ್ವರ, ಈ ಭೃಂಗಿಮುನಿಗೆ ವರವನ್ನು ಖಂಡಿತವಾಗಿ ಕೊಡಲಾಗದು. ॥೩೫॥

ವದಾಮಿ ಕಾರಣಂ ಚಾಸ್ಯ ಭೃಂಗೀ ನಾಮ್ನೈಷ ದುರ್ಮತಿಃ ।
ಪ್ರದಕ್ಷಿಣಂ ತೇ ಪ್ರಚರನ್ ಮಾಂ ಚಾದ್ಯ ಕುರುತೇ ಬಹಿಃ ॥೩೬॥

ಶ್ರುತ್ವಾ ದೇವ್ಯಾಸ್ತದಾ ವಾಕ್ಯಂ ದೇವದೇವೋ ಮಹೇಶ್ವರಃ ।
ತಾಂ ದೃಷ್ಟ್ವಾ ಕುಪಿತಾಂ ಶಂಭುಃ ಪ್ರತ್ಯುಚೇ ಹಿಮಶೈಲಜಾಂ ॥೩೭॥

॥ ಈಶ್ವರ ಉವಾಚ ॥

ಶೃಣು ದೇವಿ ಮಯೈವಾಸ್ಯ ಕುರುತೇಽದ್ಯಪ್ರದಕ್ಷಿಣಂ ।
ಮಾಮೇವ ಶರಣಂ ಯಾತಸ್ತಸ್ಮಾನ್ನೋ ಮನ್ಯುಮರ್ಹತಿ ॥೩೮॥

ಪ್ರಸಾದಂ ಕುರು ಭಕ್ತಸ್ಯ ಶರಣಂ ಚಾಗತಸ್ಯ ಮಾಂ ।
ದೃಷ್ಟ್ವಾ ಚಾಪಿ ಮುನಿಂ ತತ್ರ ಪ್ರಾಂಜಲಿಂ ವಿನಯಾನತಂ ॥೩೯॥

ಇತಿ ದೇವ್ಯಾ ವಚಃ ಶ್ರುತ್ವಾ ಸರ್ವಜ್ಞೋ ಭಗವಾನ್ ಹರಃ ।
ಪ್ರಸಾದಯನ್ ಪುನರ್ದೇವೀಂ ಪ್ರೋವಾಚ ಹಿಮಶೈಲಜಾಂ ॥೪೦॥

ಇದಕ್ಕೆ ಕಾರಣವನ್ನು ಹೇಳುವೆನು. ಈ ದುಷ್ಟನಾದ ಭೃಂಗಿಯು ನಿನಗೆ ಪ್ರದಕ್ಷಿಣೆ ಮಾಡುವಾಗ ನನ್ನನ್ನು ಹೊರಗೆ ಹಾಕುವನು. ಅಂದರೆ ನನ್ನನ್ನು ಬಿಟ್ಟು ನಿನಗೊಬ್ಬನಿಗೇ ಪ್ರದಕ್ಷಿಣೆಮಾಡುವನು. ಆದುದರಿಂದ ಇವನಿಗೆ ಖಂಡಿತವಾಗಿ ನೀನು ವರವನ್ನು ಕೊಡಲಾಗದು. ॥೩೬॥

ಹೀಗೆ ದೇವಿಯು ಕೋಪದಿಂದ ಆಡಿದ ಮಾತನ್ನು ಕೇಳಿ ಶಿವನು ನಕ್ಕು ಅವಳನ್ನು ಕುರಿತು ಹೀಗೆ ಸಮಾಧಾನ ಹೇಳಿದನು. ॥೩೭॥

"ಎಲೌ ದೇವಿಯೇ, ನನ್ನ ಮಾತಿನಿಂದಲೇ ಇವನು ಎಲ್ಲರನ್ನೂ ಬಿಟ್ಟು ನನಗೇ ಮಾತ್ರ ಪ್ರದಕ್ಷಿಣೆಮಾಡುತ್ತಿದ್ದನು. ಆದುದರಿಂದ ಇವನಲ್ಲಿ ನೀನು ಕೋಪ ಗೊಳ್ಳುವುದು ಸರಿಯಲ್ಲ. ನನ್ನ ಮರೆಹೊಕ್ಕ ಈ ಭಕ್ತನಿಗೆ ಅನುಗ್ರಹಮಾಡು. ನೋಡು. ಅಂಜಲಿಯನ್ನು ಧರಿಸಿ ವಿನಯದಿಂದ ನಮ್ರನಾಗಿ ನಿಂತಿರುವ ಈ ಭೃಂಗಿ ಮುನಿಯನ್ನು ಅನುಗ್ರಹಿಸು." ॥೩೮-೩೯॥

ಹೀಗೆ ಕುಪಿತಳಾದ ದೇವಿಯನ್ನು ಸಮಾಧಾನಗೊಳಿಸುತ್ತಾ ಸರ್ವಜ್ಞನಾದ ಶಂಕರನು ಪುನಃ ಹೀಗೆಂದನು. ॥೪೦॥

॥ ಈಶ್ವರ ಉವಾಚ ॥

ಅಹಂ ವಿಶ್ವಾಧೀಶೋ ಭುವನಮಖಿಲಂ ಶೈಲತನಯಾ
ಅಹಂ ವಹ್ನಿಃ ಸೋಮೋ ಗಿರಿಶತನಯಾ ಭೂತನಿವಹಃ ।
ಅಹಂ ಪಂಚಾರ್ಣಸ್ಥಃ ಶೃಣು ದ್ವಿಜ ಸಮಾಪ್ತಾ ಭಗವತೀ
ನ ಚಾವಾಂ ವೈ ಭೇದೋ ಜಗದಖಿಲಮಾಭ್ಯಾಂ ಸುವಿಹಿತಂ ॥೪೦॥

ಯಶ್ಚೋದುಂಬರಡಂಬರಃ ಫಲಭರೈರೇವಂ ಮಹೇಶಾಂಗಜಾ
ದ್ರೋಮಾಗ್ರೇಷು ಅನಂತಕೋಟಿಗಣನಾಹೀನಾಂಗಕೋಟ್ಯೋ ಮುನೇ ।
ಭಿನ್ನಾ ಲೋಕಪರಂಪರಾ ಹರಿಹರಬ್ರಹ್ಮಾದಯೋ ವೈ ಸುರಾಃ
ವಿಶ್ವಾಭೂತಮಿದಂ ವಿಚಿತ್ರಜನಕಂ ವಿಶ್ವೇಶಮಾಹ ಶ್ರುತಿಃ ॥೪೨॥

ಪ್ರಾಲೇಯಾಚಲಕನ್ಯಕೇ ತವ ಮನಃ ಸದ್ಯೋತ್ಪಲಾಭಂ ಕಥಂ
ಅಸ್ಮಿನ್ ಭೃಂಗಿಮುನೌ ಮಮಾಂತರತನೌ ಕೋಪಃ ಕಥಂ ತೇ ವದ ।
ಸಂಪ್ರಾಪ್ನೋತು ಪತನ್ನಪಿ ತ್ರಿಪದತಾಂ ತ್ವದ್ದೃಕ್ಕೃಪಯೋಜಾಂಚಿತಃ
ಸರ್ವೇಷಾಂ ಗಣಮೌಳಿರೇಷ ಇತಿ ಮೇ ವಾಂಛಾ ಪರಂ ಜಾಯತೇ ॥೪೩॥

ನಾನು ಜಗತ್ತಿಗೆ ಒಡೆಯನು ನೀನು ಸಮಸ್ತ ಜಗದ್ರೂಪಳು, ನಾನು ಅಗ್ನಿ ಚಂದ್ರಸ್ವರೂಪನು. ನೀನೂ ನನ್ನಂತೆ ಪಂಚಭೂತಸ್ವರೂಪಳು, ನಾನು ಸಕಲ ಸಮುದ್ರ ಹೃದಯದಲ್ಲೂ ವಾಸಿಸಿರುವೆನು. ನೀನೂ ಸಮುದ್ರಗಳೇ ಆಗಿರುವೆ. ಆದುದರಿಂದ ನಮ್ಮಿಬ್ಬರಿಗೆ ಭೇದವಿಲ್ಲ. ಜಗತ್ತೆಲ್ಲವೂ ನಮ್ಮಿರ್ವರಿಂದಲೇ ತುಂಬಿ ರುವುದು. ॥೪೦॥

ಅತ್ತಿಮರದಲ್ಲಿ ಕೊಂಬೆ, ಎಲೆ, ಹೂವು, ಹಣ್ಣು ಮುಂತಾದುವುಗಳು ಅಡಕವಾಗಿರುವಂತೆ ಪರಮೇಶ್ವರನ ವಿರಾಟ್‌ಶರೀರದಲ್ಲಿ ಹರಿಹರಬ್ರಹ್ಮ ಮೊದಲಾದ ಎಲ್ಲಾ ಪ್ರಾಣಿಗಳೂ, ಪ್ರಪಂಚವೂ ಕೋಟಿಕೋಟಿರೂಪವಾಗಿ ಅಡಗಿರುವುವು. ಎಂದು ವೇದವು ಸಾರುತ್ತಲಿರುವುದು. ॥೪೨॥

ಎಲೌ ಗಿರಿಜೆ, ತತ್ವವು ಹೀಗಿರಲು ತಾವರೆಯಂತೆ ಮೃದುವಾದ ನಿನ್ನ ಮನವು ನನ್ನ ಪರಮಭಕ್ತನಾದ ಈ ಭೃಂಗಿಮುನಿಯಲ್ಲಿ ಕಠಿಣವೇಕಾಯಿತು ? ಕೋಪವನ್ನು ಬಿಡು. ನಿನ್ನ ಕೃಪಾದೃಷ್ಟಿಯಿಂದ ಈ ಭೃಂಗಿಯು ಪ್ರಮಥಗಣ ನಾಯಕನು ಆಗಲಿ ಎಂದು ನನ್ನ ಅಭಿಲಾಷೆಯಿದೆ.'' ॥೪೩॥

ಇತ್ಯುಕ್ತಂ ಗಿರಿಜಾ ಶಿವಸ್ಯ ವಚನಂ ಶ್ರುತ್ವಾ ಪ್ರಹೃಷ್ಟಾ ಮುನಿಂ
ವತ್ಸೋತ್ತಿಷ್ಠ ಗಿರಾಧುನಾ ಪ್ರಪತ ಮಾ ಭೂಮಾವಿತಿ ಪ್ರಾಹ ತಂ ।
ತ್ವಂ ಮೇ ಪುತ್ರವರೋಽಸಿ ಮಾಂ ಚ ಶಿವತೋ ಭಿನ್ನಾಂ ನ ಸಂಪಶ್ಯ ಭೋಃ
ಕಿಂಚ ದ್ರೋಣಮರೀಚಿಕಾವಿರಹಿತಾ ಸೂರ್ಯಪ್ರಭಾ ಸೂರ್ಯತಃ ॥೪೪॥

ಮಾಯಾಽಹಂ ಪ್ರಕೃತಿಃ ಪರಸ್ಸ ಭಗವಾನ್ ಮಾಯೀ ಮಹೇಶಶ್ಶಿವಃ ।
ವಿದ್ಯಾಧೀಶ್ವರ ಏವ ವಿಶ್ವಜನಕೋ ಲೋಕಾತಿಗಶ್ಶಂಕರಃ ।
ಮುಕ್ತಃ ಕಾಲಕಲಾವಿಲಾಸಕಲಿತಾ ಬ್ರಹ್ಮೇಂದ್ರನಾರಾಯಣಾಃ
ಶ್ರೀಮೃತ್ಯುಂಜಯ ಏವ ಕಾಲಕಲನಾತೀತೋ ಮಹೇಶಃ ಪರಃ ॥೪೫॥

ಶಿವನ ಈ ಮಾತನ್ನು ಕೇಳಿ ಗಿರಿಜೆಯು ಸಂತುಷ್ಟಳಾಗಿ ಭೃಂಗಿಮುನಿಗೆ ಹೀಗೆ ವರವಿತ್ತಳು—"ಎಲೈ ವತ್ಸ, ಏಳು ಭೂಮಿಯಲ್ಲಿ ಬೀಳಬೇಡ, ನೀನು ನನ್ನ ಪುತ್ರಶ್ರೇಷ್ಠನು. ಇನ್ನುಮೇಲಾದರೂ ನಾನು ಶಿವನಿಗಿಂತ ಬೇರೆಯಾದವಳೆಂದು ತಿಳಿಯಬೇಡ. ಸೂರ್ಯಪ್ರಭೆಯು ಸೂರ್ಯನಿಂದ ಹೇಗೆ ಬೇರೆಯಲ್ಲವೊ ಹಾಗೆ ನಾನೂ ಶಿವನಿಂದ ಬೇರೆಯಲ್ಲ. ॥೪೪॥

ನಾನು ಮಾಯೆಯು, ಜಗತ್ತಿಗೆ ಕಾರಣಳಾದ ನನ್ನನ್ನು ಪ್ರಕೃತಿಯೆಂದೂ ಕರೆಯುವರು. ಆ ಪ್ರಕೃತಿಯಾದ ನನ್ನನ್ನು ಅಧೀನದಲ್ಲಿಟ್ಟುಕೊಂಡು ಪ್ರೇರಿಸುವವನು ಭಗವಾನ್ ಈಶ್ವರನು. ಆದುದರಿಂದ ಅವನನ್ನು ಮಾಯಿ (ಮಾಯೆಯನ್ನಧೀನದಲ್ಲಿಟ್ಟುಕೊಂಡವನು) ಎಂದು ಕರೆಯುವರು. "ಮಾಯಾಂತು ಪ್ರಕೃತಿಂ ವಿಂದ್ಯಾತ್ ಮಾಯಿನಂ ತು ಮಹೇಶ್ವರಂ" ಎಂಬ ಶ್ರುತಿಯೂ ಇದನ್ನೇ ಹೇಳುವುದು. ಲೋಕದಲ್ಲಿ ಮಾಟಗಾರರು ತಾವು ಕಲಿತ ಮಾಯೆಯಿಂದ ಜನರಿಗೆ ಸುಳ್ಳಾದ ಇಂದ್ರಜಾಲವನ್ನು ಪ್ರದರ್ಶಿಸುವರು. ಶಿವನು ಮಾಯೆಗೊಡೆಯನಾಗಿರುವಂತೆ ವಿದ್ಯೆಗೂ ಒಡೆಯನು. ಜ್ಞಾನಸ್ವರೂಪನು. ಅವನು ಲೋಕ ಮತ್ತು ಕಾಲಗಳ ನಿಯಮಕ್ಕೊಳಪಟ್ಟವನಲ್ಲ. ಅವನ ಹೊರತು ಉಳಿದ ಹರಿ-ಬ್ರಹ್ಮ-ಇಂದ್ರ ಮೊದಲಾದವರೆಲ್ಲರೂ ಲೋಕಕಾಲನಿಯಮಗಳಿಗೊಳಪಟ್ಟವರು. ಅದಕ್ಕನುಸಾರವಾಗಿ ಅವರಿಗೆ ಜನನಮರಣಗಳುಂಟು. ಆದರೆ ಶಿವನು ಆ ನಿಯಮಗಳಿಗೊಳಪಡದೇ ಮೃತ್ಯುಂಜಯನಾಗಿರುವನು. ಹುಟ್ಟೂ ಇಲ್ಲದ ಸಾವೂ ಇಲ್ಲದ ಪರಮಾತ್ಮನು ಅವನು. ॥೪೫॥

ಲೋಕಾನುಗ್ರಹರೂಪತೋ ಹಿ ಸ ಮಯಾ ಕೈಲಾಸಮೌಲೌ ಸ್ಥಿತಃ ॥೪೬॥

ನ ವೇದ ವೇದೋಽಪಿ ಶಿವಪ್ರಭಾವಂ
ಸ್ವಾತ್ಮಾನಮೇವಾದ್ವಯಮಿಶಿತಾರಂ ।
ಸರ್ವೇಂದ್ರಿಯಾಣಾಂ ಪುರುಷಂ ಪರಾಯಣಂ
ಕೋ ವೇದ ಯೋ ವೇದ ಶಿವಸ್ಸನಾತನಃ ॥೪೭॥

ಇತಿ ಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ಭೃಂಗಿಪ್ರಸಾದಾರ್ಥಂ
ದೇವೀಸಾಂತ್ವನಂ ನಾಮ ನವಮೋಽಧ್ಯಾಯಃ.

ನಿತ್ಯತೃಪ್ತನಾದ ಪರಮೇಶ್ವರನು ಕೇವಲ ಲೋಕಾನುಗ್ರಹಕ್ಕಾಗಿಯೇ ನನ್ನೊಡನೆ ಕೈಲಾಸಗಿರಿಯಲ್ಲಿ ನೆಲಸಿರುವನು. ॥೪೬॥

ಯಾವ ವಿಧವಾದ ಭೇದವೂ ಇಲ್ಲದ ಅದ್ವಿತೀಯಸ್ವರೂಪನೂ, ಸಗುಣ ಪರಮೇಶ್ವರನೂ, ನಿರ್ಗುಣಬ್ರಹ್ಮನೂ, ಮಾನವರ ಇಂದ್ರಿಯಗಳನ್ನು ಪ್ರೇರಿಸುವವನೂ, ಆದ ಪರಶಿವನನ್ನು ವೇದವೂ ತಿಳಿಯದಾಗಿದೆ. ಅವನ ಸ್ವರೂಪವನ್ನು ಅವನೇ ತಿಳಿಯಬಲ್ಲನು ಹೊರತು ಇನ್ನಾರೂ ತಿಳಿಯಲಾರರು. ಅಂದರೆ ಅಭೇದದೃಷ್ಟಿಯಿಂದ ಹೊರಟರೆ ಆಗ ಆ ಪರಮಾತ್ಮನೇ ತಾನಾಗಿ ಸ್ವಸ್ವರೂಪವು ತಿಳಿಯುವುದು. ಅದೇ ಮುಕ್ತಿ. ಅದೇ ಆನಂದ. ಅದೇ ಜ್ಞಾನ. ಅದೇ ಸತ್ಯ. ಇದು ವೇದಾಂತ ತತ್ವ. ಎಂದು ಗಿರಿಜೆಯು ಭೃಂಗಿಗೆ ಉಪದೇಶಿಸಿದಳು. ॥೪೭॥

ಇಲ್ಲಿಗೆ ಶ್ರೀಶಿವರಹಸ್ಯದ ಚತುರ್ಥಾಂಶದಲ್ಲಿ ಒಂಬತ್ತನೆಯ ಅಧ್ಯಾಯವು
ಮುಗಿದುದು.

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ದಶಮೋಽಧ್ಯಾಯಃ

॥ ಸ್ಕಂದ ಉವಾಚ ॥

ಹೃಷ್ಟಾಂ ದೇವೀಂ ತದಾ ವೀಕ್ಷ್ಯ ಭೃಂಗೀ ಸಾಂಬಂ ಮಹೇಶ್ವರಂ ।
ತುಷ್ಟಾವ ದೇವ್ಯಾ ದೇವೇಶಂ ಸ ಭೃಂಗೀ ವಿನಯಾತ್ತದಾ ॥೧॥

॥ ಭೃಂಗೀ ಉವಾಚ ॥

ಕ್ರೂರಂ ದುಷ್ಟತಮಂ ವಿನಷ್ಟಮನಸಂ ಭ್ರಷ್ಟಂ ಶಠಂ ನಿಷ್ಠುರಂ
ನಿರ್ಲಜ್ಜಂ ಕೃಪಣಂ ಕೃತಘ್ನಮಶುಚಿಂ ಬಹ್ವಾಶನಂ ಹಿಂಸಕಂ ।
ಆಶಾಪಾಶಶತಪ್ರಬದ್ಧಮನಸಂ ದುಷ್ಕೀರ್ತಿಭಾಜಂ ಜಡಂ
ಕಾರುಣ್ಯಾಕರ ಭೋಃ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೨॥

ಹತ್ತನೆಯ ಅಧ್ಯಾಯ

ಹೀಗೆ ಗಿರಿಜೆಯು ಪ್ರಸನ್ನಳಾದುದನ್ನು ನೋಡಿ ಭೃಂಗಿಯು ಆಗ ಪರಮೇಶ್ವರನನ್ನು ಪಾರ್ವತಿಯೊಡನೆ ವಿನಯದಿಂದ ಭಕ್ತಿಪೂರ್ವಕವಾಗಿ ಹೀಗೆ ಸ್ತುತಿಸಿದನು. ॥೧॥

" ಓ ತಂದೆ ಪಶುಪತಿಯೇ, ನಾನು ಕ್ರೂರನು, ದುಷ್ಟನು, ಬುದ್ಧಿಯಿಲ್ಲದವನು, ಸದಾಚಾರವನ್ನು ಬಿಟ್ಟವನು, ಮೂರ್ಖನು, ಕಠಿಣನು, ಲಜ್ಜೆಯಿಲ್ಲದವನು, ಜಿಪುಣನು, ಕೃತಘ್ನನು, ಅಶುದ್ಧನು (ಕೊಳಕನು), ಮಿತಿಮೀರಿ ತಿನ್ನುವ ಆ ದಟ್ಟ ದರಿದ್ರನು, ನೂರೆಂಟು ಆಸೆಗಳಿಂದ ಕಟ್ಟಲ್ಪಟ್ಟವನು, ಅಪಕೀರ್ತಿಗೆ ಪಾತ್ರನು, ಮೂಢನು, ಹಿಂಸೆಯನ್ನು ಮಾಡತಕ್ಕವನು, ಇಷ್ಟೆಲ್ಲಾ ದೋಷವುಳ್ಳ ನನ್ನನ್ನು ಓ ದಯಾನಿಧಿಯಾದ ದೇವನೇ ಪಾಲಿಸು. ॥೨॥

ಕ್ಷುದ್ರಂ ದುರ್ಭಗಮಲ್ಪಸತ್ವಮಧಮಂ ಭಗ್ನವ್ರತಂ ರಾಗಿಣಂ
ಭೀರುಂ ಡಾಂಭಿಕಮುಕ್ಷಯವ್ಯಸನಿನಂ ಪಾಪಾತ್ಮಕಂ ಸೂಚಕಂ ।
ಆಧಿವ್ಯಾಧಿನಿಪೀಡಿತಂ ಜಡಧಿಯಂ ಸದ್ಭಿಸ್ಸದಾ ನಿಂದಿತಂ
ಕಾರುಣ್ಯಾಕಾರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೩॥

ಮೂರ್ಖಂ ಬಾಲಮತಿಂ ಸಧರ್ಮರಹಿತಂ ಧರ್ಮಾರ್ಥಹೀನಂ ಖಲಂ
ಕಾಮಾಂಧಂ ಕ್ಷಣಿಕಂ ಕದರ್ಥನಪರಂ ದೌಶ್ಶೀಲ್ಯಜನ್ಮಸ್ಥಲಂ ।
ಗರ್ವಂ ಲುಬ್ಧಮಸತ್ಯನಿಷ್ಠಮಘಿನಂ ಪ್ರಜ್ಞಾಯಶೋವರ್ಜಿತಂ
ಕಾರುಣ್ಯಾಕರಭೋ ಪಿತಃ ಪಶುಪತೇ ದೋಷಾಕರಂ ಪಾಹಿಮಾಂ ॥೪॥

ಆಕಾಂಕ್ಷಾಶ್ರಯಮಾರ್ಯವೃತ್ತಿವಿಮುಖಂ ಕ್ಷೀಣಂ ಗುರುದ್ವೇಷಿಣಂ
ಧೂರ್ತಂ ದುರ್ಗುಣಮತ್ಯಶುದ್ಧಹೃದಯಂ ಸರ್ವತ್ರ ಸಂದೇಹಿನಂ ।
ಹೀನಂ ಪಾಪರತಂ ಸಮಸ್ತವಿಷಯೇಷ್ವಾಸಕ್ತಮನ್ಯಾಯಿನಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೫॥

ನಾನು ನೀಚನು, ದುರದೃಷ್ಟಶಾಲಿಯು, ಶಕ್ತಿಹೀನನು, ಪಾಪಿಯು, ಸದಾಚಾರವನ್ನು ಮೀರಿದವನು, ಕಾಮುಕನು, ಅಂಜುಬುರುಕನು (ಹೇಡಿಯು), ಒಣಜಂಭದವನು, ಮಹಾವ್ಯಸನಿಯು, ಚಾಡಿಕೋರನು, ರೋಗ ಮತ್ತು ಮನೋವ್ಯಥೆಗಳಿಂದ ತುಂಬಿದವನು, ಸಜ್ಜನರಿಂದ ನಿಂದಿಸಲ್ಪಟ್ಟವನು, ಇಷ್ಟು ದೋಷಗಳುಳ್ಳ ನನ್ನನ್ನು ಓ ತಂದೆಯೇ ಪಾಲಿಸು. ॥೩॥

ನಾನು ಮೂರ್ಖನು, ಹುಡುಗಬುದ್ಧಿಯವನು, ಧರ್ಮರಹಿತನು, ಧರ್ಮ ಮತ್ತು ಅರ್ಥಗಳನ್ನು ಬಿಟ್ಟವನು, ದುಷ್ಟನು, ದುರಹಂಕಾರಿಯು, ಕೃಪಣನು, ಸಟೆಗಾರನು, ಪಾಪಿಯು, ಜ್ಞಾನಯಶಸ್ಸುಗಳಿಲ್ಲದವನು, ಕಾಮುಕನು, ಚಂಚಲನು, ಪರರನ್ನು ನಿಂದಿಸುವವನು, ದುಸ್ಸ್ವಭಾವಕ್ಕೆ ಮನೆಯಾದವನು. ಇಂತಹ ನನ್ನನ್ನು ಓ ತಂದೆಯೇ, ಪಶುಪತಿಯೇ, ದಯೆಯಿಂದ ಪಾಲಿಸು. ॥೪॥

ನಾನು ನೂರಾರು ಆಸೆಗಳುಳ್ಳವನು, ಸದಾಚಾರವಿಲ್ಲದವನು, ನೀಚವೃತ್ತಿಯುಳ್ಳವನು, ಗುರುದ್ರೋಹಿಯು, ಮೋಸಗಾರನು, ಅಶುದ್ಧನು, ಎಲ್ಲೆಡೆಯಲ್ಲೂ ಸಂದೇಹವುಳ್ಳ ನಾಸ್ತಿಕನು, ಪಾಪಿಯು, ಅನಿತ್ಯವಾದ ಸುಖವಸ್ತುಗಳಲ್ಲಿ ಆಸಕ್ತನು,

ಸ್ವಪ್ನೇಽಪ್ಯುತ್ತಮಗಂಧಪುಷ್ಪನಿಕರೈರೀಶಾರ್ಚನಾವರ್ಜಿತಂ
ಧ್ಯಾನಧ್ಯೇಯವಿಚಾರಣಾವಿರಹಿತಂ ತುಚ್ಛಂ ಸದಾಽಶೃಂಖಲಂ ।
ದಾರಿದ್ರ್ಯಾಸ್ಪದಮಾತ್ಮವೈರಿವಶಗಂ ತಾಪತ್ರಯಸ್ಯಾಸ್ಪದಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೬॥

ಮಾಯಾಗ್ರಸ್ತಸಮಸ್ತವೃತ್ತಿಕುಶಲಂ ಸತ್ಸಂಗವಿದ್ವೇಷಿಣಂ
ದುಸ್ಸಂಗಪ್ರಿಯಮಪ್ರತಿಷ್ಠಿವಚನಂ ಕಾಮಾತುರಂ ತಸ್ಕರಂ ।
ಶೈವಜ್ಞಾನಪರಾಙ್ಮುಖಂ ಖಲಜನವ್ಯಾಪಾರಪಾರಂಗತಂ
ಕಾರುಣ್ಯಾಕರ ಭೋಽಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೭॥

ದುರ್ಮರ್ಯಾದಮತಿಪ್ರವೃದ್ಧರಜಸಂ ಸದ್ವೃತ್ತಿಸೇವಾರಿಪುಂ
ಸದ್ಧರ್ಮಾದಿಸಮುತ್ಸುಕೈರ್ಗುರುಜನೈರ್ಮಾನ್ಯೇಷು ಚಾಪ್ಯುದ್ಧತಂ ।

ಅನ್ಯಾಯಗಾರನು—ಇಂತಹ ನನ್ನನ್ನು ಓ ತಂದೆಯೇ, ಪಶುಪತಿಯೇ, ದಯೆಯಿಂದ ಕಾಪಾಡು. ॥೫॥

ಸ್ವಪ್ನದಲ್ಲಿಯೂ ನಾನು ಉತ್ತಮವಾದ ಗಂಧಪುಷ್ಪಗಳಿಂದ ಶಿವನನ್ನು ಸರಿಯಾಗಿ ಅರ್ಚಿಸಲಿಲ್ಲ, ಶಿವಧ್ಯಾನವೆಂದರೇನೋ ನನಗೆ ತಿಳಿಯದು. ಯಾರ ಮಾತನ್ನೂ ಕೇಳದೆ ನೀಚಮಾರ್ಗದಲ್ಲಿ ನಡೆಯುವವನು ನಾನು. ದರಿದ್ರನು, ಕಾಮಕ್ರೋಧಲೋಭಮೋಹಮದಮಾತ್ಸರ್ಯಗಳೆಂಬಾರು ಶತ್ರುಗಳಿಗೆ ಅಧೀನನಾಗಿರುವೆನು. ಆಧ್ಯಾತ್ಮಿಕ ಆಧಿದೈವಿಕ, ಆಧಿಭೌತಿಕಗಳೆಂಬ ಮೂರು ದುಃಖಗಳಿಗೆ ಈಡಾಗಿರುವೆನು. ಇಂತಹ ನನ್ನನ್ನು ಓ ತಂದೆಯಾದ ಪಶುಪತಿಯೇ, ಕರುಣೆಯಿಂದ ಸಲಹು. ॥೬॥

ನನ್ನ ಭಾವನೆಯೆಲ್ಲವೂ ಮಾಯೆಯಿಂದ ತುಂಬಿದೆ. ಅಂದರೆ ಅಸತ್ಯವಾದ ವಿಷಯದಲ್ಲೇ ಮನಸ್ಸು ಆಸಕ್ತವಾಗಿದೆ. ಸಜ್ಜನಸಹವಾಸಕ್ಕೆ ನಾನು ವಿರೋಧಿಯು. ದುಸ್ಸಹವಾಸದಲ್ಲಿ ಆದರವುಳ್ಳವನು. ಸಟೆಯಾಡುವ ಕಳ್ಳನಾಗಿರುವೆನು. ಶಿವಭಕ್ತಿಯು ನನ್ನಲ್ಲಿ ಲೇಶವೂ ಇಲ್ಲ. ದುಷ್ಟವ್ಯಾಪಾರದಲ್ಲಿ ಪಂಡಿತನಾಗಿರುವೆನು. ಇಂತಹ ನನ್ನನ್ನು ದಯಾನಿಧಿಯಾದ ಓ ಪಶುಪತಿಯೇ ಕಾಪಾಡು. ॥೭॥

ನಾನು ಮರ್ಯಾದೆ ಇಲ್ಲದವನು. ಮಿತಿಮೀರಿ ನಡೆಯತಕ್ಕವನು. ಸದಾಚಾರಗಳಿಗೆ ವೈರಿಯು. ಸಜ್ಜನರು ಗುರುಹಿರಿಯರು— ಇವರಿಗೆ ಅವಿಧೇಯನು.

ಶಿಷ್ಟಾನಿಷ್ಟಕರಂ ಕ್ರಿಯಾಪರಿಚಿತಂ ದುಷ್ಟಪ್ರತುಷ್ಟಿಪ್ರದಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೮॥

ಕರ್ಮಾದಿಸ್ತುತಿಕಾರಣಂ ಪರಮಹಂ ನಿಂದಾಕರಂ ನಿಂದಿತಂ
ತುಂಡಾಕಂ ಪತಿತಂ ವಿಪರ್ಯಯಗತಸ್ವಾಂತಂ ಸದಾ ಯಾಚಕಂ ।
ನೈಕಲ್ಯಾಪಗತಾಶುಕಾರ್ಯನಿಚಯಂ ಸರ್ವಾಪದಾಂ ಸಂಚಯಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೯॥

ಕೃತ್ಯಾಕೃತ್ಯವಿಚಾರವರ್ಜಿತಮತಿಂ ವ್ರಾತ್ಯಂ ಮಹಾಕಾತರಂ
ದುರ್ಬುದ್ಧಿಂ ಮದಮಾನಮತ್ಸರಧಿಯಂ ದುರ್ವೃತ್ತವೃತ್ತ್ಯಾಶ್ರಯಂ ।
ಮಿಥ್ಯಾಜ್ಞಾನಿನಮಾತ್ಮಕಂಠಕಮಲಂ ಲೋಕತ್ರಯೇ ನಿಂದಿತಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೧೦॥

ದುಷ್ಕರ್ಮಪ್ರಚಯಪ್ರಭಿನ್ನಹೃದಯಂ ಕ್ಲೇಶೈಶ್ಚ ಸಂಪೀಡಿತಂ
ಚಾರ್ವಾಕಂ ಕುಮತಿಂ ಕುಶೀಲಮನಸಂ ಕಾರ್ಪಣ್ಯಜನ್ಮಸ್ಥಳಂ ।

ಸಜ್ಜನರನ್ನು ಹಿಂಸಿಸುವವನು. ದುಷ್ಟರನ್ನು ಸಂತಸಗೊಳಿಸುವವನು—ಇಂತಹ ದೋಷಸಾಗರನಾದ ನನ್ನನ್ನು ಕರುಣಾಸಾಗರನಾದ ನೀನು ಪಾಲಿಸು. ||೮||

ನೀನು ಸತ್ಕರ್ಮದಿಂದ ಅರ್ಚಿಸಲ್ಪಡತಕ್ಕವನು. ಆದರೆ ನಾನು ನಿಂದನೀಯವಾದ ಕರ್ಮವನ್ನಾಚರಿಸುವವನು. ನನ್ನ ಬುದ್ಧಿಯು ವಿಪರೀತವಾಗಿ ಎಲ್ಲವನ್ನೂ ವಿಪರೀತವಾಗಿಯೇ ಆಚರಿಸುತ್ತಲಿರುವೆನು. ಈ ಅಸತ್ಕರ್ಮದಿಂದ ತಿರುಕನಾಗಿ ನಾನು ಅನೇಕ ಬಗೆಯ ಕಷ್ಟಗಳನ್ನು ಅನುಭವಿಸುತ್ತಲಿರುವೆನು. ಓ ದೇವ, ಇಂತಹ ನನ್ನನ್ನು ದಯೆಯಿಂದ ಪರಿಪಾಲಿಸು. ||೯||

ನಾನು ವಿವೇಕವಿಲ್ಲದವನು, ಮಹಾನೀಚನು, ಹೇಡಿಯು, ದುಷ್ಟನು, ದುರಹಂಕಾರಿಯು, ಅಸೂಯೆಯುಳ್ಳವನು, ದುರಾಚಾರಿಯು, ಭ್ರಾಂತನು, ಲೋಕನಿಂದಿತನು. ಇಂತಹ ನನ್ನನ್ನು ಓ ದಯಾಶಾಲಿಯಾದ ಪರಮೇಶ್ವರ ಪಾಲಿಸು. ||೧೦||

ನನ್ನ ಮನಸ್ಸು ನಾನಾಬಗೆಯ ದುಷ್ಕಾರ್ಯಗಳಲ್ಲಿ ಆಸಕ್ತವಾಗಿದೆ. ತುಂಬಾ ಕ್ಲೇಶದಿಂದ ಕೂಡಿರುವೆನು. ನಾಸ್ತಿಕನಾಗಿರುವೆನು. ದುರ್ಬುದ್ಧಿಯುಳ್ಳವನು. ನಾನು

ಭಾರ್ಯಾಪುತ್ರಗೃಹಾದಿಸಕ್ತಮನಸಂ ಗಾಂಭೀರ್ಯಧೈರ್ಯದ್ವಿಷಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೧೧॥

ಆತ್ಮಧ್ಯಾನವಿಹೀನಮಾತ್ಮವಿಮುಖಂ ಸರ್ವಾತ್ಮಭಾವದ್ವಿಷಂ
ಸಂಕಲ್ಪೈರ್ಬಹುಭಿರ್ವಿಭಿನ್ನಹೃದಯಂ ದ್ವೈತಪ್ರಸಕ್ತಂ ಸದಾ ।
ಮರ್ಮಚ್ಛಿದ್ವಚನಂ ಕಠೋರಹೃದಯಂ ಮಿತ್ರದ್ರುಹಂ ಕ್ಷುದ್ರಕಂ
ಕಾರುಣ್ಯಾಕರ ಭೋಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೧೨॥

ಚಿತ್ತಕ್ಷೋಭಕರಂ ಕಳತ್ರಹೃದಯಂ ಶಂಕಾಪದಂ ಲೋಲುಪಂ
ಸಾರಾಸಾರವಿಚಾರಹೀನಮನಸಂ ನೀಚಕ್ರಿಯಂ ನೀರಸಂ ।
ಮತ್ತೋನ್ಮತ್ತನಿಕೃಷ್ಟದುಷ್ಟಚರಿತಂ ಶೋಚ್ಯಂ ವೃಥಾಲಾಪಿತಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೧೩॥

ಸತ್ಯತ್ಯಾಗದಯಾಕ್ಷಮಾಶಮದಯಾದ್ಯರ್ಥಾನಭಿಜ್ಞಾನಕಂ
ದೇವಬ್ರಾಹ್ಮಣಗೋಪ್ರಜಾತಿಥಿಪಿತೃಜ್ಞಾನಾತ್ಮಕಾಪೂಜಕಂ ।

ದುಸ್ವಭಾವವುಳ್ಳವನು, ಅತಿ ಕೃಪಣನು, ಹೆಂಡತಿ ಮಕ್ಕಳು ಮನೆಗಳಲ್ಲಿ ಅತ್ಯಾಸಕ್ತನು. ಗಾಂಭೀರ್ಯಧೈರ್ಯಗಳು ನನ್ನಲ್ಲಿ ಇಲ್ಲ. ಇಂತಹ ನನ್ನನ್ನು ಓ ದೇವ ಕರುಣೆಯಿಂದ ಸಲಹು. ||೧೧||

ಆತ್ಮಜ್ಞಾನವಿಲ್ಲದ ಮೂಢನು ನಾನು. ಸರ್ವಸಮತೆಯು ನನ್ನಲ್ಲಿಲ್ಲ. ನೂರೆಂಟು ಆಸೆಗಳಿಂದ ನನ್ನ ಮನಸ್ಸು ಚೂರುಚೂರಾಗಿದೆ. ಭೇದಬುದ್ಧಿಯುವನು ನಾನು. ಕ್ರೂರವಾಗಿ ಮಾತನಾಡುವ ಸ್ವಭಾವದವನು, ಮಿತ್ರದ್ರೋಹಿಯು. ಓ ದೇವ, ಇಂತಹ ಪಾಪಿಯಾದ ನನ್ನನ್ನು ದಯಾಶಾಲಿಯಾದ ನೀನು ಸಲಹು. ||೧೨||

ಹೆಂಗರುಳಿನಂತೆ ಚಂಚಲತೆಯುಳ್ಳವನೂ, ಸಂದೇಹವುಳ್ಳವನೂ, ಸಂಸಾರದಲ್ಲಿ ಅತ್ಯಾಸಕ್ತಿಯುಳ್ಳವನೂ ಆಗಿರುವೆನು. ಸಾರವಾದುದಾವುದು? ಅಸಾರವು ಯಾವುದು? ಎಂಬ ತಿಳಿವಳಿಕೆಯೇ ಇಲ್ಲದ ನೀಚನು ನಾನು. ಒಣಜೀವನವು ನನ್ನದು, ಹುಚ್ಚನಂತಹ ಜೀವನವು ನನ್ನದು, ವ್ಯರ್ಥವಾಗಿ ಮಾತನಾಡುವೆನು. ಇಂತಹ ದೋಷಗಳಿಂದ ಕೂಡಿದ ನನ್ನನ್ನು ಓ ತಂದೆ ಪರಿಪಾಲಿಸು. ||೧೩||

ನನಗೆ ಸತ್ಯ, ತ್ಯಾಗ, ದಯೆ ಮೊದಲಾದ ಸದ್ಗುಣಗಳ ಅರಿವೇ ಇಲ್ಲ. ದೇವತೆಗಳು ಬ್ರಾಹ್ಮಣರು, ಗೋವುಗಳು, ಅತಿಥಿಗಳು, ಪಿತೃಗಳು ಇವರನ್ನರ್ಚಿಸಲು

ವಿಶ್ವಸ್ತೇಷ್ವಪಕಾರವಂಚನಪದಂ ಮಂತ್ರೇಪರಂ ದುರ್ಜಯಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿಮಾಂ ॥೧೪॥

ಮತ್ವಾಽಧರ್ಮಮತಿಂ ಕದರ್ಥನಪರಂ ಕೋ ಮತ್ಸಮೋಽಸ್ಮಿನ್ ಭವೇ
ದಿತ್ಯೇವಂ ಬಹುಜಲ್ಪಿನಂ ಕುವಪುಷಂ ಪಾಪಾಶ್ರಿತಂ ರಾಕ್ಷಸಂ ।
ದೃಷ್ಟಾದೃಷ್ಟಸುಖೈಷಿಣಂ ತವ ಮುದಾ ತ್ಯಕ್ತ್ವಾ ಶಿವಾರಾಧನಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ॥೧೫॥

ದುಷ್ಪೂರಸ್ವಕಕುಕ್ಷಿಪೂರಣಪರಂ ಭಾರಂ ಭುವಃ ಕೇವಲಂ
ದಾಸೀಮೇಷಖರಸ್ವಭಾವಮಪಟುಂ ಸಮ್ಮಾನನಾಭಾಜನಂ ।
ರಿಕ್ತಂ ಬಾಲಮದೀರ್ಘಸೂತ್ರಿಣಮಮುಂ ಹೃಚ್ಛಲ್ಯಭೂತಂ ಸತಾಂ
ಕಾರುಣ್ಯಾಕರ ಭೋಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೧೬॥

ಅರಿಯೆನು. ನಂಬಿದವರಿಗೆ ಅಪಕಾರ ಮೋಸಗಳನ್ನು ಮಾಡುವವನು. ಇನ್ನೊಬ್ಬರ ಹಿಡಿತಕ್ಕೆ ಸಿಕ್ಕದಂತಹ ದುಷ್ಟನಾಗಿರುವೆನು. ಇಂತಹ ನನ್ನನ್ನು, ಓ ಪರಮೇಶ್ವರ ಪಾಲಿಸು. ||೧೪||

ಓ ಜಗತ್ತಿಗೆ ತಂದೆಯಾದ ಪರಮೇಶ್ವರನೇ, ಅಧರ್ಮಿಯೆನಿಸಿ, ನನ್ನ ಸಮರು ಇಲ್ಲ ಎಂದು ತಿಳಿದು, ಪಾಪಿಯಾದ ರಾಕ್ಷಸ (ದುಷ್ಟ)ನಾದ ಕಣ್ಣಿಗೆ ಕಾಣುವ ಮತ್ತು ಕಾಣದ ಸಂಸಾರಸುಖದಲ್ಲೇ ಆಸಕ್ತನಾದ, ನಿನ್ನನ್ನು ಆರಾಧಿಸದ ಮಹಾಪಾಪಿ, ನನ್ನನ್ನು ದಯೆಯಿಂದ ಪರಿಪಾಲಿಸು. ||೧೫||

ತುಂಬಲಾರದ ನನ್ನ ಹೊಟ್ಟೆಯನ್ನು ಮಾತ್ರ ತುಂಬಿಸಲು ಪ್ರಯತ್ನಿಸುತ್ತಿರುವೆನು. ಹೀಗೆ ಸ್ವಾರ್ಥಿಯಾಗಿದ್ದು ನಾನು, ಯಾವ ಪ್ರಯೋಜನವೂ ಇಲ್ಲದೆ ಭೂಮಿಗೆ ಭಾರವಾಗಿರುವೆನು. ಸೂಳೆ, ಮೇಕೆ, ಕತ್ತೆ ಇವುಗಳಂತಹ ಸ್ವಭಾವವು ನನ್ನದು. ಅಸಮರ್ಥನು. ಗೌರವಕ್ಕೆ ಅಯೋಗ್ಯನು, ದರಿದ್ರನು, ಉದಾಸೀನಸ್ವಭಾವದವನು ಸಜ್ಜನರಿಗೆ ಮುಳ್ಳಿನಂತಾಗಿರುವೆನು. ಇಂತಹ ದೋಷಗಳುಳ್ಳ ನನ್ನನ್ನು ಓ ದೇವ ಪರಿಪಾಲಿಸು. ||೧೬||

ಮಾರ್ಜಾರಾಖುವೃಕಶ್ವಕುಕ್ಕುಟಕಪಿಕ್ರೋಡಾಭಿವೃತ್ತಿಂ ಸದಾ
ತೀರ್ಥಧ್ವಾಂಕ್ಷಮನರ್ಥಕಂಪಿನಿ ಹಿತೇ ಸಂತಾಪಿನಂ ದುಸ್ಸಹಂ ।
ತ್ಯಕ್ತ್ವೋಪಾಯಮಪಾಯಕಾಂಕ್ಷಿಣಮಹೋ ಶುದ್ಧಾಂ ಪ್ರಿಯಂ ಚಾಪಲಂ
ಕಾರುಣ್ಯಾಕರ ಭೋಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೧೭॥

ಅಸ್ಪೃಶ್ಯಂ ವಿಕಲಂ ಕದರ್ಯಮಖಿಲೈರ್ದೋಷೈಃ ಸ್ವಕೀಯೈರ್ಯುತಂ
ಪಾಪಿಷ್ಠಂ ವಿಷಯೇಷು ಸಕ್ತಮನಸಂ ತ್ಯಾಜ್ಯಂ ವಿಪಾದಾಸ್ಪದಂ ।
ಚಿಂತಾಶೋಕಪರೀತಚೇತಸಮಲಂ ಸರ್ವಾಶುಭಾನಾಂ ಪದಂ
ಕಾರುಣ್ಯಾಕರ ಭೋಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೧೮॥

ಅತ್ಯಾವೇಶನಮುತ್ತಮಸ್ಥಿತಿಮತಾಂ ಸತ್ಯಾಗ್ನಿನಾಂ ನಾಸ್ತಿಕಂ
ರಂಧ್ರಾನ್ವೇಷಿಣಮಂಧಮೂಕಬಧಿರಂ ಶಂಭೋಸ್ತು ವಿಶ್ವಾತ್ಮನಃ ।
ಮಾಹಾತ್ಮ್ಯಶ್ರವಣಸ್ತುತೀಕ್ಷಣವಿಧೌ ಮಾಹೇಶ್ವರಾವತ್ಸಲಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿಮಾಂ ॥೧೯॥

ಬೆಕ್ಕು, ಇಲಿ, ತೋಳ, ನಾಯಿ, ಕೋಳಿ, ಕಪಿ, ಹಂದಿ, ಕಾಗೆ—ಗಳಂತಹ ನೀಚ ಜೀವನವು ನನ್ನದು. ನನಗೆ ಹಿತವನ್ನು ಬಯಸುವವನನ್ನೇ ನಾನು ದುಃಖ ಪಡಿಸುವೆನು. ಏಳಿಗೆಗೆ ಬರುವ ಉಪಾಯಗಳೆಲ್ಲವನ್ನೂ ಬಿಟ್ಟು ನಾನು ಹಾಳಾಗುವ ಮಾರ್ಗವನ್ನೇ ಹಿಡಿದಿರುವೆನು. ಚಪಲನಾದ ನನಗೆ ಶುದ್ಧತೆಯಲ್ಲಿ ಪ್ರೀತಿಯೇ ಇಲ್ಲವು—ಇಂತಹ ದೋಷಗಳುಳ್ಳ ನನ್ನನ್ನು ಓ ತಂದೆಯೇ ಪಶುಪತಿಯೇ ದಯೆಯಿಂದ ಸಲಹು. ॥೧೭॥

ಸಜ್ಜನರ ಸಹವಾಸಕ್ಕೆ ನಾನು ಅಯೋಗ್ಯನು, ಕೃಪಣನು, ದೀನನು, ಪಾಪಿಯು ಕಾಮಾತುರನು, ಒಣಚರ್ಚೆಯಲ್ಲಾಸಕ್ತನು, ಚಿಂತೆಶೋಕಗಳಿಂದ ತುಂಬಿದವನು. ಅಶುಭಗಳಿಗೆ ಸ್ಥಾನವಾಗಿರುವೆನು—ಇಂತಹ ದೋಷಗಳುಳ್ಳ ನನ್ನನ್ನು ಓ ತಂದೆಯೇ ಪಶುಪತಿಯೇ ದಯಾನಿಧಿಯಾದ ನೀನು ಸಲಹು. ॥೧೮॥

ಮಿತಿಮೀರಿದ ಆಸಕ್ತಿಗಳುಳ್ಳವನು, ಸತ್ಯನಿಷ್ಠರನ್ನು ಕಂಡರೆ ದ್ವೇಷಿಸುವ ನಾಸ್ತಿಕನು, ಸಜ್ಜನರನ್ನು ಹಿಂಸಿಸಲು ಸಮಯವನ್ನು ನಿರೀಕ್ಷಿಸುತ್ತಿರುವೆನು, ಪರಮೇಶ್ವರನ ಮಾಹಾತ್ಮ್ಯವನ್ನು ಕೇಳುವುದರಲ್ಲಿ ಕಿವುಡನು, ಸ್ತುತಿಸುವುದರಲ್ಲಿ

ಭ್ರಷ್ಟಂ ಸರ್ವಜುಗುಪ್ಸಿತಂ ಪರಹಿತವ್ಯಾಘಾತಿನಂ ತಾಮಸಂ
ಸಂಭ್ರಾಂತಂ ಚಪಲಂ ವಿಚಾರವಿಹಿತವ್ಯಾಪಾರವಿದ್ವೇಷಿಣಂ ।
ಶಂಭೋ ತ್ವತ್ಪದಭಕ್ತಿಹೀನಮನಸಂ ಮೂಢಂ ಸಮಾತ್ಮದ್ವಿಷಂ
ಕಾರುಣ್ಯಾಕರ ಭೋಃಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೨೦॥

ಕಿಂ ವಾಚಾ ಬಹುವಿಸ್ತರೇಣ ಭಗವನ್ ಮತ್ಸನ್ನಿಭೋ ಭೂತಲೇ
ಭೂತೋ ನಾಸ್ತಿ ವಿಭೋ ಭವಿಷ್ಯತಿ ಪುನರ್ನಾ ನಿರ್ಭಾಗ್ಯಚೂಡಾಮಣಿಃ ।
ತಸ್ಮಾದೀದೃಶಮಾತ್ಮವಂಚನಪರಂ ತ್ರೈಲೋಕ್ಯರಕ್ಷಾಮಣೇ
ಕಾರುಣ್ಯಾಕರ ಭೋಃಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೨೧॥

ದೋಷಾವಾಸಮತಿಂ ಪ್ರಮಾದಿತಮತಿಂ ಕ್ಷುತ್ತೃಟ್‌ಜ್ವರಾಭ್ಯರ್ದಿತಂ
ಸ್ವಪ್ನೇಽಪ್ಯತ್ರ ಪರೋಪಕಾರರಹಿತಂ ಸರ್ವಾಹಿತಂ ದುರ್ಬಲಂ ।
ಲೋಕೇ ಸತ್ಪರಿಹಾರ್ಯನಿಂದಿತಮಹಾದುಃಖಪ್ರದೈಕೇಂದ್ರಿಯಂ
ಕಾರುಣ್ಯಾಕರ ಭೋಃಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೨೨॥

ಮೂಗ, ದರ್ಶನದಲ್ಲಿ ಕುರುಡನು, ಇಂತಹ ದೋಷಗಳಿಗೆ ಮನೆಯಾದ ನನ್ನನ್ನು ದಯಾಘನನಾದ ಓ ತಂದೆಯೇ ಪಶುಪತಿಯೇ ದಯೆಯಿಂದ ಸಲಹು. ॥೧೯॥

ಸದಾಚಾರದಿಂದ ಭ್ರಷ್ಟನು, ಎಲ್ಲರಿಗೂ ಬೇಸರವನ್ನುಂಟುಮಾಡುವವನು, ಪರರ ಹಿತವನ್ನು ನಾಶಮಾಡುವ ನೀಚನು, ಭ್ರಮೆಯಿಂದ ತುಂಬಿದ ಚಪಲನು, ವಿವೇಕವಿಲ್ಲದವನು ನಿನ್ನಲ್ಲಿ ಭಕ್ತಿಹೀನನು—ಇಂತಹ ದೋಷಗಳುಳ್ಳ ನನ್ನನ್ನು ಓ ತಂದೆಯೇ, ಪಶುಪತಿಯೇ ದಯೆಯಿಂದ ರಕ್ಷಿಸು. ॥೨೦॥

ಓ ಭಗವಂತನೇ, ಹೆಚ್ಚು ಮಾತಿನಿಂದೇನು ? ಭೂಮಿಯಲ್ಲಿ ನನ್ನಂತಹ ದುರದೃಷ್ಟಶಾಲಿಯು ಹಿಂದೆ ಹುಟ್ಟಿಲ್ಲ, ಈಗಲೂ ಇಲ್ಲ, ಮುಂದೂ ಜನಿಸಲಾರನು. ಆದುದರಿಂದ ಪ್ರಪಂಚವನ್ನೇ ಸಲಹುವ ನೀನು ಇಂತಹ ನಿರ್ಭಾಗ್ಯಶಾಲಿಯಾದ ಆತ್ಮವಂಚನೆಯನ್ನು ಮಾಡಿಕೊಳ್ಳುತ್ತಿರುವ ನನ್ನನ್ನು ದಯೆಯಿಂದ ಪರಿಪಾಲಿಸು. ॥೨೧॥

ದೋಷಗಳೆಲ್ಲ ನನ್ನ ಮನಸ್ಸಿನಲ್ಲಿ ನೆಲಸಿರುವುವು, ದುರಹಂಕಾರಿಯಾಗಿರುವೆನು. ಹಸಿವು ನೀರಡಿಕೆ ಜ್ವರಗಳಿಂದ ಬಳಲುತ್ತಿರುವೆನು, ಸ್ವಪ್ನದಲ್ಲಿಯೂ ನಾನು

ಸರ್ವಶ್ರೇಷ್ಠಗುಣೈಕಭಾಜನಮಹೋ ಸರ್ವೋತ್ತಮೋತ್ತಮಂ
ಸಂಖ್ಯೇಯಾರ್ಘಗುಣೈಕಭಾಜನಮಲಂ ಕಷ್ಟಾತಿಕಷ್ಟಪ್ರಿಯಂ ।
ಶ್ರೀಕಾಶ್ರೀಕಮತೇಂದ್ರಿಯಸ್ಯ ವಶಗಂ ನಿಸ್ಸಂಶಯಂ ಸಂಗಿನಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೨೩॥

ವಿಣ್ಮೂತ್ರಕ್ರಿಮಿಮಾಂಸಶೋಣಿತಮಯಂ ಮೇದೋಸ್ಥಿಮಜ್ಜಾತ್ಮಕಂ
ದುರ್ಗಂಧೈಕನಿಧಿಂ ಜರಾಪರಿಗತಂ ವಾತಾದಿದೋಷಾಸ್ಪದಂ ।
ದೃಷ್ಟ್ವಾಽಪಿ ಸ್ವಕಲೇವರಂ ಕೃಶಮಯಂ ತತ್ರಾತಿರಕ್ತಂ ಪಶುಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೨೪॥

ವಿಷ್ಟ್ಯಂ ವಿಷ್ಟಕುಜಂತುನಿಷ್ಠಮಶುಚಿಂ ಸ್ವಾಭಾವ್ಯತೋ ನಶ್ವರಂ
ಕುಷ್ಠಕ್ಷೈಣ್ಯವಿಷೂಚಿಕಾಜ್ವರಶಿರಶ್ಶೂಲಾದಿರೋಗಾಸ್ಪದಂ ।
ಜ್ಞಾತ್ವಾಽಪಿ ಸ್ವಶರೀರಮತ್ರ ತು ಸದಾ ಸುಪ್ರೀತಿಯುಕ್ತಂ ಪಶುಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೨೫॥

ಪರೋಪಕಾರವನ್ನು ಮಾಡಿದವನಲ್ಲ, ಎಲ್ಲರಿಗೂ ಶತ್ರುವಾಗಿರುವೆನು, ಸಜ್ಜನರಿಂದ ದೂರವಿರಿಸಲ್ಪಟ್ಟಿರುವೆನು, ದುಃಖವೇ ನನ್ನ ಜೀವನಸಾರವಾಗಿದೆ,—ಇಂತಹ ನನ್ನನ್ನು ಓ ಕರುಣಾ ನಿಧಿಯಾದ ದೇವನೇ ಪಾಲಿಸು. ॥೨೨॥

ಓ ಪರಮೇಶ್ವರ, ಹೀಗೆ ಅತಿ ಪಾಪಿಯಾದ ನನ್ನನ್ನುದ್ಧರಿಸಿ ಸದ್ಗುಣಿಯನ್ನಾಗಿ ಮಾಡು. ಉತ್ತಮನನ್ನಾಗಿ ಮಾಡು. ಕಷ್ಟಗಳನ್ನು ಸಹಿಸುವ ಶಕ್ತಿಯನ್ನು ನನಗೆ ಕೊಡು, ಜಿತೇಂದ್ರಿಯನನ್ನಾಗಿ ಮಾಡು, ಮನಸ್ಸಂಶಯವನ್ನು ನೀಗಿಸು. ಸತ್ಸಹ ವಾಸವು ನನಗೆ ಲಭಿಸುವಂತೆ ಕರುಣಿಸು, ಕಾಪಾಡು. ॥೨೩॥

ಈ ಶರೀರವು ಮಲಮೂತ್ರಕ್ರಿಮಿಮಾಂಸರಕ್ತಮಯವಾದುದು, ಮೇದಸ್ಸು ಮೂಳೆಮಜ್ಜೆಗಳಿಂದ ತುಂಬಿದುದು, ದುರ್ವಾಸನೆಯಿಂದ ತುಂಬಿವೆ. ಮುಪ್ಪಿನಿಂದ ಅಶಕ್ತವಾಗಿದೆ, ವಾತಪಿತ್ಥಕಫವೆಂಬ ದೋಷಗಳು ತುಂಬಿವೆ, ಇಂತಹ ಹೊಲಸು ಶರೀರವನ್ನು ನೋಡಿಯೂ ನಾನು ಅದರಲ್ಲಿ ಅನುರಕ್ತನಾಗಿರುವೆನು,—ಇಂತಹ ನನ್ನನ್ನು ಉದ್ಧರಿಸು. ॥೨೪॥

ಕ್ರಿಮಿಮಯವಾದೀ ಶರೀರವು ಅಶುಚಿಯಾದುದು, ಸ್ವಭಾವತಃ ಇದು ಅಸ್ಥಿರವು. ತೊನ್ನು, ಕ್ಷಯ, ಸಿಡಬು, ವಿಷಮಜ್ವರ, ತಲೆನೋವು—ಮೊದಲಾದ

ಸ್ವಾತ್ಮಾಧಾರತಯಾ ಸ್ಥಿತಂ ನಿಜತನುಂ ಬಾಲ್ಯೇ ತಥಾ ಯೌವನೇ
ವೃದ್ಧತ್ವೇಽಪಿ ಬಹುಪ್ರಕಾರವಿಕೃತಿಂ ಪ್ರಾಪ್ತಾಂ ಸಮೀಕ್ಷ್ಯಾಪಿ ಚ ।
ತತ್ರಾತ್ಮನ್ಯತಿರಾಗಿಣಂ ತ್ವಯಿ ಕೃತೇ ಸ್ವಾಸ್ಥ್ಯಾನುರಕ್ತಂ ಪಶುಂ
ಕಾರುಣ್ಯಾಕರ ಭೋಃ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೨೬॥

ದೇಹಂ ಕ್ಷಾಲನಲೇಪನಾದಿವಿಧಿನಾ ಸಂಸ್ಪೃಶ್ಯ ಯೋಗ್ಯಾರ್ಥವತ್
ಛಿನ್ನಂ ಕ್ಲಿನ್ನಮಹಾವ್ರಣಂ ನವ ಮುಖಂ ನಿತ್ಯಂ ಸ್ರವಂತಂ ಮಲಂ ।
ತಂ ದೃಷ್ಟ್ವಾಪ್ಯತಿರಾಗಿಣಶ್ಚ ನರಕೇ ನೂನಂ ಸರಾಗಂ ಪಶುಂ
ಕಾರುಣ್ಯಾಕರ ಭೋಃ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೨೭॥

ಲೋಕೇಽತ್ಯಂತಪವಿತ್ರತಾಮುಪಗತಂ ಯತ್ಪಂಚಗವ್ಯಾದಿಕಂ
ತದ್ದೇಹೋತ್ಥಕಫಾಸ್ಥಿರೋಮರುಧಿರಸ್ನಾಯ್ವಾದಿಸಂಸ್ಪರ್ಶತಃ ।

ರೋಗಗಳು ಈ ಶರೀರಕ್ಕೆ ಬರುವುವು. ಇದನ್ನು ತಿಳಿದೂ ನಾನು ಈ ಶರೀರದಲ್ಲಿ ಅತ್ಯಾಸಕ್ತಿಯುಳ್ಳವನಾಗಿರುವೆನು,—ಓ ದಯಾನಿಧಿಯಾದ ದೇವನೇ, ಇಂತಹ ನನ್ನನ್ನು ಪಾಲಿಸು. ||೨೫||

ಆತ್ಮನಿಗೆ ಆಶ್ರಯವಾಗಿದ್ದರೂ ಈ ದೇಹವು ಬಾಲ್ಯ, ಯೌವನ, ವಾರ್ಧಕ್ಯಗಳಲ್ಲಿ ತುಂಬಾ ಬದಲಾವಣೆಯನ್ನು ಹೊಂದುವುದು. ಇಷ್ಟು ಅಸ್ಥಿರವಾಗಿರುವುದನ್ನು ನೋಡಿಯೂ ನಾನು ಈ ಶರೀರದಲ್ಲಿ ಅತ್ಯಾಸಕ್ತನಾಗಿರುವೆನು. ಶಿವನಲ್ಲಿ ಆಸಕ್ತಿಯಿಲ್ಲದವನಾಗಿರುವೆನು—ಇಂತಹ ನನ್ನನ್ನು ತಂದೆಯಾದ ಪಶುಪತಿಯೇ ಪರಿಪಾಲಿಸು. ||೨೬||

ಸ್ನಾನಾದಿಗಳಿಂದ ಶುದ್ಧವಾದರೂ ದೇಹವು ಕತ್ತರಿಸಲ್ಪಟ್ಟದ್ದಾದರೆ ಅದರಲ್ಲಿ ಗಾಯವಾಗಿ ಅಸಹ್ಯವಾದ ರಕ್ತವು ಸುರಿಯುವುದು, "ದೇಹವು ಕೊಳಕೆಂ"ಬುದಕ್ಕೆ ಇದೇ ಸಾಕ್ಷಿ, ಮತ್ತು ಈ ದೇಹದಿಂದ ನಿತ್ಯವೂ ಹೊಲಸಾದ ಮಲಮೂತ್ರಗಳು ಹೊರಡುತ್ತಿರುವುವು, ಇಂತಹ ನರಕರೂಪವಾದ ದೇಹದಲ್ಲಿ ನನಗೆ ಇನ್ನೂ ಮಮತೆಯು ತಪ್ಪಿಲ್ಲ—ಇಂತಹ ಪಶುವಾದ ನನ್ನನ್ನು ಓ ಪಶುಪತಿಯೇ ಸಲಹು. ||೨೭||

ಹಾಲು, ಮೊಸರು, ತುಪ್ಪ, ಗೋಮೂತ್ರ, ಗೋಮಯುಗಳೆಂಬ ಪಂಚಗವ್ಯವು ಬಹು ಪವಿತ್ರವಾದುದು. ಆದೂ ಸಹ ಈ ನರದೇಹದೊಳಗೆ ಸೇರಿದರೆ ಅಶುಚಿಯಾದ

ಸ್ಯಾದೇವಾಶುಚಿ ತದ್ವಿಬುಧ್ಯ ಚ ಸದಾ ತದ್ದೇಹಸಕ್ತಂ ಪಶುಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೨೮॥

ಸ್ವಸ್ಯಾಯುರ್ನಿಚಯಸ್ಯ ಮಧ್ಯತ ಇಮೌ ನಿತ್ಯಂ ನಿಶಾವಾಸರೌ
ಜಾಗ್ರತ್ಸ್ವಪ್ನಸುಷುಪ್ತಿಷು ಸ್ಥಿತಮತಿಃ ಸ್ವಲ್ಪಾಯುಷಃ ಖಂಡಕಂ ।
ಗಚ್ಛತ್ತಾವದಬುಧ್ಯ ಚ ಸ್ವಹಿತಸತ್ಕರ್ಮಣ್ಯರಕ್ತಂ ಪಶುಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೨೯॥

ಸರ್ಪಿಃ ಖಂಡಪಯೋಮಧುಪ್ರಭೃತಿಕಂ ತತ್ರಾತೃಣಾನ್ಯತ್ತಿ ಗೌಃ
ಯದ್ವಚ್ಛಾಶ್ವತಶಾಂಭವೋಕ್ತಮಹಿಮಾನಂದಾನಪೇಕ್ಷಂ ತಥಾ ।
ಶಂಭೋ ವೈಷಯಿಕೇ ಸುಖೇಽತಿವಿರಸೇ ತುಚ್ಛೇಽತಿಸಕ್ತಂ ಪಶುಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೩೦॥

ಮಲಮೂತ್ರವಾಗುವುದು. ಹೀಗೆ ದೇಹವು ಪವಿತ್ರವಸ್ತುವನ್ನೂ ಅಶುಚಿಯಾಗಿ ಮಾಡುವುದು—ಎಂಬುದನ್ನು ತಿಳಿಯದೇ ನಾನು ಆ ದೇಹದಲ್ಲಿ ಮಮತೆಯುಳ್ಳವನಾಗಿರುವೆನು,— ಓ ದೇವ ಇಂತಹ ನನ್ನನ್ನು ಪರಿಪಾಲಿಸು. ॥೨೮॥

ಮನುಷ್ಯನ ಆಯುಸ್ಸಿನಲ್ಲಿ ನಿತ್ಯವೂ ರಾತ್ರಿಹಗಲುಗಳು ಬಂದುಹೋಗುವುವು. ಅದರ ಮಧ್ಯದಲ್ಲಿ ನಿದ್ದೆ ಎಚ್ಚರಿಕೆಗಳಿಂದ ಮಾನವನು, ಸ್ವಲ್ಪಸ್ವಲ್ಪ ಕಾಲವನ್ನು ಕಳೆದಂತೆಯೇ ಆಯುಸ್ಸು ಸ್ವಲ್ಪಸ್ವಲ್ಪವಾಗಿ ಕಳೆದುಹೋಗುವುದು, — ಇದನ್ನು ತಿಳಿಯದೇ ನಾನು ಲಭಿಸಿದ ಸ್ವಲ್ಪಕಾಲದಲ್ಲೇ ಹಿತವಾದ ಸತ್ಕರ್ಮವನ್ನಾಚರಿಸದೆ ಹಾಳಾಗುತ್ತಿರುವೆನು, ಓ ದೇವ ಇಂತಹ ನನ್ನನ್ನು ಪಾಲಿಸು. ॥೨೯॥

ರಸವತ್ತಾದ ತುಪ್ಪ, ಹಾಲು, ಜೇನುತುಪ್ಪ ಮೊದಲಾದುದನ್ನು ಬಿಟ್ಟು ಹಸುವು ಅಪಾರವಾದ ಹುಲ್ಲನ್ನೇ ಮೇಯುವಂತೆ ನಾನು ನಿತ್ಯವಾದ ಮುಕ್ತ್ಯಾನಂದವನ್ನು ಬಿಟ್ಟು ಕೇವಲ ಅಸಾರವಾದ ಸಂಸಾರ ವಿಷಯ ಸುಖದಲ್ಲೇ ಆಸಕ್ತನಾಗಿರುವೆನು. ಓ ಪಶುಪತಿಯೇ, ಇಂತಹ ಮೂಢನಾದ ನನ್ನನ್ನು ಪರಿಪಾಲಿಸು. ॥೩೦॥

ಕೂಪೇ ಕುಂಕುಮಗಂಧಕಾಂಕ್ಷಿಣಮಹೋ ತೋಯಾರ್ಥಿನಂ ವಾ ಮರೌ
ತೈಲಾನ್ವೇಷಿಣಮಶ್ಮಚೂರ್ಣನಿಚಯೇ ಮೈತ್ರ್ಯರ್ಥಿನಂ ದುರ್ಜಯೇ ।
ದುರ್ಬುದ್ಧಿಂ ತ್ರಿಗುಣಾತ್ಮಕೇ ಮಲನಿಧೌ ಕ್ಷೇತ್ರೇ ಸುಖೇಪ್ಸುಂ ಪಶುಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೩೦॥

ದೇವಾನಾಮಪಿ ಮಾರುತಸ್ಯ ಚ ವಿಭೋ ಗಮ್ಯಂ ನ ಯತ್ತತ್ರ ತು
ಸ್ವೈರಂ ಗಚ್ಛತಿ ಮೇ ಮನೋ ನಹಿ ತಪಾ ಚಿತ್ತಂ ತವಾಂಘ್ರಿದ್ವಯೇ ।
ಧರ್ತುಸ್ತ್ವಚ್ಚ ನಿಯಂತುಮುಚ್ಚಸುಖದೋ ನೈವಾಸಮರ್ಥಂ ಪಶುಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೩೨॥

ವೇದ್ಯೈರಪ್ಯಖಿಲೈರ್ಮಹೇಶ ಬಹುಶೋ ವೇದಾಂತಶಾಸ್ತ್ರಾದಿಭಿಃ
ವ್ಯಾಪೀ ಚಿನ್ಮಯ ಏಕ ಈಶ್ವರ ಇತಿ ಪ್ರೋಕ್ತಸ್ತ್ವಯಿ ತ್ವತ್ಪದೇ ।
ಚಿತ್ತಂ ಧರ್ತುಮಶಕ್ತಮಾತ್ಮವಚನೈರ್ವ್ಯಾಪಾರಹೀನಂ ಪಶುಂ
ಕಾರುಣ್ಯಾಕರ ಭೋಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೩೩॥

ಹಾಳುಬಾವಿಯಲ್ಲಿ ಸುಗಂಧವಾಸನೆಯನ್ನರಸುವಂತೆ, ಮರುಭೂಮಿಯಲ್ಲಿ ನೀರನ್ನರಸುವಂತೆ, ಮರಳಿನಲ್ಲಿ ಎಣ್ಣೆಯನ್ನು ಹಿಂಡಲು ಪ್ರಯತ್ನಿಸುವವನಂತೆ, ಜಯಿಸಲಸಾಧ್ಯನಾದ ವೈರಿಯಲ್ಲಿ ಸ್ನೇಹವನ್ನು ಸಂಪಾದಿಸಲು ಪ್ರಯತ್ನಿಸುವ ರಾಜನಂತೆ, ನಾನು ಮಲಮೂತ್ರಗಳಿಗೆ ಮನೆಯಾದ ಶರೀರದಲ್ಲಿ ಸುಖವನ್ನು ಅಪೇಕ್ಷಿಸುತ್ತಿರುವೆನು. ಓ ದೇವ ಇಂತಹ ನನ್ನನ್ನು ಪಾಲಿಸು. ॥೩೦॥

ದೇವತೆಗಳೂ ಗಾಳಿಯೂ ಸಂಚರಿಸದಂತಹ ಸೂಕ್ಷ್ಮವಾದ ಕಡೆಗೂ ನನ್ನ ಮನಸ್ಸು ಓಡುವುದು, ಅಂದರೆ ಗಾಳಿಯ ವೇಗಕ್ಕಿಂತಲೂ ಅದರ ವೇಗವು ಜಾಸ್ತಿ, ಮತ್ತು ಅಷ್ಟು ಚಪಲವು, ಇಂತಹ ಚಪಲವಾದ ಮನಸ್ಸನ್ನು ನಿಗ್ರಹಿಸಲು ಅಸಮರ್ಥನಾಗಿರುವೆನು. ಅಷ್ಟಾದರೂ ಅದನ್ನು ನಿನ್ನ ಪಾದದಲ್ಲಿ ನಿಲ್ಲಿಸಲಾರೆನು. ಓ ದೇವ ಇಂತಹ ನನ್ನನ್ನು ಪರಿಪಾಲಿಸು. ॥೩೨॥

ಓ ಮಹೇಶ, ವೇದಗಳೂ, ವೇದಾಂತ ಮೊದಲಾದ ಶಾಸ್ತ್ರಗಳೂ ಸಹ ನೀನು 'ಜಗತ್ತನ್ನು ವ್ಯಾಪಿಸಿರುವವನು, ಆನಂದಮಯನು, ಜ್ಞಾನಸ್ವರೂಪನು, ಅದ್ವಿತೀಯನು' ಎಂದು ಸಾರುತ್ತಲಿರುವುವು, ಆದರೆ ನನ್ನ ಮನಸ್ಸು ಅಂತಹ ನಿನ್ನನ್ನು ಧ್ಯಾನಿಸಲು ಅಸಮರ್ಥವಾಗಿರುವುದು, ಓ ಪಶುಪತಿಯೇ ಇಂತಹ ಪಶುವಾದ ನನ್ನನ್ನು ದಯೆಯಿಂದ ಪಾಲಿಸು. ॥೩೩॥

ಜ್ಞಾತಾಜ್ಞಾತದಯಾದಯಾಶಮದಮಾಸನ್ಮೋಹಮೋಹಾನತಿ
ಖ್ಯಾತ್ಯಖ್ಯಾತ್ಯಭಯಾಸುಖಸುಖಾಹಿಂಸಾಮನಸ್ತುಷ್ಟಯಃ ।
ಭೂತಾನಾಂ ಭವದಾಜ್ಞಯೈವ ವಿಧಿನಾ ನಿತ್ಯಂ ಭವಂತಿ ಧ್ರುವಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೩೪॥

ಭಾವಾಭಾವಭವಾಭವಾಮೃತವಿಷಾಸತ್ಸತ್ಸಮಸ್ತಾ ಕ್ರಿಯಾ
ದಿವ್ಯತ್ವಂ ನಿತರಾಮಯತ್ನನಿಖಿಲಾಭೀಷ್ಟಾರ್ಥಸಂಪತ್ತಯಃ ।
ಭೂತಾನಾಂ ಭವದಿಚ್ಛಯೈವ ಭಗರ್ವ ಜಾಯಂತ ಏವಾನಿಶಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೩೫॥

ಯೋಗೈಶ್ವರ್ಯಸಮಸ್ತದಾನಪರತಾ ಶ್ರದ್ಧಾತ್ಮಭಕ್ತಿರ್ದೃಢಾ
ವೈರಾಗ್ಯಂ ಪರಮಂ ಮಹೇಶ ಪರಮೋ ಧರ್ಮೇ ಮತಿಶ್ಚಾರುತಾ ।
ಭೂತಾನಾಂ ಭವತಃ ಪ್ರಸಾದತ ಇಹಾಜಾಯಂತ ಏವ ಧ್ರುವಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೩೬॥

ನಾಲಂ ಚಾಲಯಿತುಂ ತೃಣಂ ಚ ಪವನಃ ಶಂಭೋ ತ್ವದಾಜ್ಞಾಂ ವಿನಾ
ದಗ್ಧುಂ ತಂ ನ ಸಮರ್ಥ ಏವ ಹುತಭುಕ್ ಶಕ್ರೋಽಪಿ ನೋ ವಜ್ರತಃ ।

ಜ್ಞಾನ, ಅಜ್ಞಾನ, ದಯೆ, ಕ್ರೌರ್ಯ, ಜಿತೇಂದ್ರಿಯತೆ, ಚಪಲತೆ, ಭ್ರಾಂತಿ, ಪ್ರಸಿದ್ಧಿ, ಧೈರ್ಯ, ಭಯ, ಸುಖ, ದುಃಖ, ಅಹಿಂಸೆ, ಹಿಂಸೆ, ಇವೆಲ್ಲವೂ ಪ್ರಾಣಿಗಳಿಗೆ ನಿನ್ನ ಆಜ್ಞೆಯಿಂದಲೇ ಕ್ರಮವಾಗಿ ಬರುವುವು. ಓ ದೇವ, ಇಂತಹ ನೀನು ನನ್ನನ್ನು ಪಾಲಿಸು. ॥೩೪॥

ಓ ಪರಮೇಶ್ವರ, ನಿನ್ನಿಚ್ಛೆಯಿಂದಲೇ ಪ್ರಾಣಿಗಳಿಗೆ 'ಉತ್ಪತ್ತಿ, ನಾಶ, ಸಂಸಾರ, ಮುಕ್ತಿ, ಅಮೃತ, ವಿಷ, ಸತ್ಯ, ಅಸತ್ಯ, ದೇವತ್ವ, ಮನುಷ್ಯತ್ವಗಳೂ ಎಲ್ಲ ಇಷ್ಟಾರ್ಥಗಳೂ ಲಭಿಸುವುವು. ಓ ಭಗವಂತ, ಇಂತಹ ನೀನು ನನ್ನನ್ನು ಪರಿಪಾಲಿಸು. ॥೩೫॥

ಯೋಗ, ಐಶ್ವರ್ಯ, ದಾನಶೀಲತೆ, ಶ್ರದ್ಧೆ, ಆತ್ಮಜ್ಞಾನ, ವೈರಾಗ್ಯ, ಧರ್ಮನಿಷ್ಠತೆ ಇವೆಲ್ಲವೂ ಮಾನವರಿಗೆ ನಿನ್ನ ಅನುಗ್ರಹದಿಂದಲೇ ಲಭಿಸುವುವು. ಇಂತಹ ಪರಶಿವನೇ, ಮಹಾಪಾಪಿಯಾದ ನನ್ನನ್ನು ಪಾಲಿಸು. ॥೩೬॥

ಓ ಪರಮೇಶ್ವರ, ನಿನ್ನ ಆಜ್ಞೆಯಿಲ್ಲದೇ ಮಾರುತನು ಒಂದು ಹುಲ್ಲುಕಡ್ಡಿಯನ್ನೂ ಅಲುಗಿಸಲಾರನು. ಅಗ್ನಿಯು ಸುಡಲಾರನು. ಇಂದ್ರನು ವಜ್ರಾಯುಧ

ಶಕ್ತೋ ನೇಚ್ಛೇತ್ತ್ವಮಪಿ ಪ್ರಭೋ ಜಗದಿದಂ ಸರ್ವಂ ತ್ವದಾಜ್ಞಾವಶಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೩೭॥

ಚಿತ್ತಂ ಚೇತಯತೇ ಮನಶ್ಚ ಸಕಲಂ ಸಂಕಲ್ಪಯತ್ಯಾಜ್ಞಯಾ
ಸರ್ವಾರ್ಥಾನಭಿಮನ್ಯತೇ ನನು ಮಹಾದೇವಾಜ್ಞಯಾಹಂಕೃತಿಃ ।
ಸ್ವೇ ಸ್ವೇ ಸ್ವಿಂದ್ರಿಯವರ್ಗ ಏವ ವಿಷಯೇಚ್ಛಾಸ್ತೇ ತವೈವಾಜ್ಞಯಾ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೩೮॥

ಬ್ರಹ್ಮಾ ಸೃಷ್ಟಿಕರೋ ಹರಿಃ ಸ್ಥಿತಿಕರೋ ರುದ್ರಸ್ತು ಕಾಲಾತ್ಮಕಃ
ಸಂಹರ್ತಾ ಜಗತಾಂ ಶ್ರಿಯಂ ಚ ನಯತಿ ಶ್ರೀಯುಗ್ಮವಿದ್ಯಾಂ ಪುಮಾನ್ ।
ಗಾಯತ್ರೀ ಚ ತವಾಜ್ಞಯೈವ ನರಕಾತ್ಸಂತಾರಯತ್ಯಾಶ್ರಿತಾನ್
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೩೯॥

ವಾಯುರ್ವಾತಿ ತವಾಜ್ಞಯಾ ಶಶಿರವೀ ನಿತ್ಯಂ ಜಗದ್ಭಾಸಕೌ
ಆಹಾರಂ ಪಚತೇ ಚ ಕುಕ್ಷಿಸದನೇ ವಹ್ನಿಃ ಸದಾ ಪ್ರಾಣಿನಾಂ ।

ದಿಂದಲೂ ಆ ಕಡ್ಡಿಯನ್ನು ಕತ್ತರಿಸಲಾರನು. ಹೀಗೆ ಪ್ರಪಂಚವೆಲ್ಲವೂ ನಿನ್ನ ಆಜ್ಞೆಗೆ ಅಧೀನವಾಗಿರುವುದು. ಓ ದೇವ ನನ್ನನ್ನು ಪಾಲಿಸು. ॥೩೭॥

ಓ ಮಹಾದೇವ, ನಿನ್ನಾಜ್ಞೆಯಿಂದಲೇ ಬುದ್ಧಿಯು ವ್ಯಾಪಾರಮಾಡುವುದು. ಮನಸ್ಸು ಸಂಕಲ್ಪಿಸುವುದು. ಅಹಂಕಾರವು ಎಲ್ಲ ವಸ್ತುವೂ ನನ್ನದೆಂದು ಅಭಿಮಾನ ಪಡುವುದು. ಆಯಾಯಾ ಇಂದ್ರಿಯಗಳು ವಿಷಯವಸ್ತುಗಳನ್ನು ಗ್ರಹಿಸುವುದಕ್ಕೆ ಪ್ರಯತ್ನಿಸುವುವು. ಇಂತಹ ಮಹಾಮಹಿಮನಾದ ಓ ದೇವನೇ, ನನ್ನನ್ನು ಪರಿಪಾಲಿಸು. ॥೩೮॥

ಪರಮೇಶ್ವರ, ನಿನ್ನ ಆಜ್ಞೆಯಿಂದಲೇ ಬ್ರಹ್ಮನು ಸೃಷ್ಟಿಸುವನು. ಹರಿಯು ಪಾಲಿಸುವನು. ರುದ್ರನು ಪ್ರಳಯಕಾಲಸ್ವರೂಪನಾಗಿ ಜಗತ್ತನ್ನು ಸಂಹರಿಸುವನು. ಲಕ್ಷ್ಮಿಯು ಜನರಿಗೆ ಐಶ್ವರ್ಯವನ್ನುಂಟುಮಾಡುವಳು. ಗಾಯತ್ರಿಯು ತನ್ನ ಉಪಾಸಕರನ್ನು ನರಕದಿಂದ ಉದ್ಧರಿಸುವಳು. ಪುರುಷನು ಸೃಷ್ಟಿಯ ಬೆಳವಣಿಗೆಗಾಗಿ ಪ್ರಜೋತ್ಪಾದನ ಮಾಡುವನು. ಇಂತಹ ಅಮೋಘಾಜ್ಞೆಯುಳ್ಳ ಓ ದೇವ, ಪಾಪಿಯಾದ ನನ್ನನ್ನು ಉದ್ಧರಿಸು. ॥೩೯॥

ದೇವನೇ, ನಿನ್ನ ಆಜ್ಞೆಯಿಂದಲೇ ಗಾಳಿಯು ಬೀಸುವುದು. ಸೂರ್ಯಚಂದ್ರರು ಪ್ರಕಾಶಿಸುವರು. ಅಗ್ನಿಯು ಪ್ರಾಣಿಗಳ ಹೊಟ್ಟೆಯಲ್ಲಿಯೂ ಮನೆಯಲ್ಲಿಯೂ

ದೇವಾನಾಂ ವಹತೀವ ಹವ್ಯಮಪಿ ಯಃ ಪಾಕಂ ಕರೋತ್ಯತ್ತಿ ಯಃ
ಕಾರುಣ್ಯಾಕರ ಭೋಃ ಪಿತಃ ಪಶುಪತೇ ದೋಃಷಾಕರಂ ಪಾಹಿ ಮಾಂ ॥೪೦॥

ಭೂತಾನ್ಯಾಪ ಇಹಾಜ್ಞಯೈವ ಭವತಃ ಸಂಜೀವಯಂತಿ ಪ್ರಭೋ
ವಾಚಾ ವಾಗ್ವಿಪುಲಂ ದದಾತಿ ಜಗತಾಂ ಯತ್ತೇಽಖಿಲಂ ಪುನ್ನಭಃ ।
ಭೂತಾನಾಮವಕಾಶದಂ ತ್ರಿಜಗತಾಂ ಶೀತೋಷ್ಣಶಂಕಾಸ್ಪದಃ
ಕಾರುಣ್ಯಾಕರ ಭೋಃ ಪಿತಃ ಪಶುಪತೇ ದೋಃಷಾಕರಂ ಪಾಹಿ ಮಾಂ ॥೪೧॥

ಸೇಂದ್ರಾಸ್ಸರ್ವಸುರಾದಯಸ್ತ್ವಿಹ ಸದಾ ತ್ವಚ್ಛಾಸನೇ ಸಂಸ್ಥಿತಾಃ
ಬ್ರಹ್ಮಾಂಡಾನಿ ಇಹಾತ್ಮವಸ್ತೂನಿ ಪರೈಸ್ಸಂಧಾರಕಾಸ್ಸಂತತಂ ।
ತ್ರೈಲೋಕ್ಯಾನುಗತಾನಪೀಹ ಸುಬಹೂನ್ಯಾಜ್ಞಾವಶಾನ್ಯೇವ ತೇ
ಕಾರುಣ್ಯಾಕರ ಭೋಃ ಪಿತಃ ಪಶುಪತೇ ದೋಃಷಾಕರಂ ಪಾಹಿ ಮಾಂ ॥೪೨॥

ಹರ್ತಾಸೌ ಮಹದಾದಿಕಂ ಪ್ರಕೃತಿರಪ್ಯಾಜ್ಞಾವಶಾತ್ತೇ ವಿಭೋ
ಕಾಲಶ್ಚ ಪ್ರಕೃತಿಃ ಪರಃ ಪುರುಷ ಇತ್ಯೇತಚ್ಚ ಸರ್ವಂ ಸದಾ ।

ಅಡಿಗೆ ಬೇಯಿಸುವನು. ಯಾಗದಲ್ಲಿನ ಹವಿಸ್ಸನ್ನು ದೇವತೆಗಳಿಗೆ ಒಯ್ಯುವನು. ಸಮಯಾಂತರದಲ್ಲಿ ಉತ್ತಮ ವಸ್ತುಗಳನ್ನು ಹವಿಸ್ಸನ್ನೂ ಸ್ವಯಂ ದಹಿಸಿಯೂ ಬಿಡುವನು. ಇಂತಹ ಓ ದೇವನೇ, ನನ್ನನ್ನು ರಕ್ಷಿಸು. ॥೪೦॥

ಓ ದೇವ, ನಿನ್ನ ಆಜ್ಞೆಯಿಂದಲೇ ನೀರು ಪ್ರಾಣಿಗಳನ್ನು ಬದುಕಿಸುತ್ತಿರುವುದು. ಸರಸ್ವತಿಯು ಜನರಿಗೆ ವಾಕ್ಕನ್ನು ಕೊಡುವಳು. ಆಕಾಶವು ಅವಕಾಶವನ್ನು ಕೊಡುವುದು. ಸ್ವಾಮಿಯೇ, ಇಂತಹ ಆಜ್ಞೆಯುಳ್ಳ ನೀನು ನನ್ನನ್ನು ಪರಿಪಾಲಿಸು. ॥೪೧॥

ಓ ದೇವ, ಇಂದ್ರನೇ ಮೊದಲಾದ ದೇವತೆಗಳು ನಿನ್ನಾಜ್ಞೆಯಂತೆಯೇ ನಡೆಯುತ್ತಿರುವರು. ಅದರಲ್ಲಿ ಕೆಲವರು ಪ್ರಪಂಚವನ್ನು ಪಾಲಿಸುವರು. ಕೆಲವರು ಧರಿಸುವರು. ಕೆಲವರು ಸಂಹರಿಸುವರು. ಇಂತಹ ಆಜ್ಞೆಯುಳ್ಳ ಓ ಪ್ರಭುವೇ ನನ್ನನ್ನು ಪಾಲಿಸು. ॥೪೨॥

ಓ ಪರಮೇಶ್ವರ, ನಿನ್ನಾಜ್ಞೆಯಿಂದಲೇ ಪ್ರಕೃತಿಯು ಮಹಾತತ್ತ್ವಾದಿಗಳನ್ನು ಸೃಷ್ಟಿಸುವುದು. ಕಾಲ ಪ್ರಕೃತಿ ಪುರುಷ—ಇದೆಲ್ಲವೂ ನಿನ್ನಪ್ಪಣೆಯಂತೆಯೇ ನಡೆಯು

ಶಂಭೋ ದೇವ ಭವ ತ್ವಮೇವ ಚ ತಥಾ ಭೂತಂ ಭವಿಷ್ಯಂ ಭವಂ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೪೩॥

ತ್ವಯೋಪರಿ ತಮೋವೃತಂ ತವ ಮಹರ್ದ್ಧಿಲೀಲಾರ್ಥಮೇವ
ತ್ವಯೋನ್ನತಿಪ್ರೇರಣಯೈವ ತೇತಚ್ಚ ವಿಷಯೇಷ್ವತ್ರ ಪ್ರವೃತ್ತಂ ಜಗತ್।(?)
ತಾಪಶ್ಚಾಪಿರವೇಃ ಸಮಸ್ತ ಜಗತಾಂ ದುಃಖಾರ್ತಿಹಾರೀ ಪ್ರಭೋ
ಕಾರುಣ್ಯಾಕರ ಭೋ ಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೪೪॥

ಬಂಧಚ್ಛೇದವಿಧೌ ತ್ವಮೇವ ಭುವನೇಽಪ್ಯೇಕಸ್ಸಮರ್ಥೋಽರ್ಥವತ್
ತ್ವಂ ಪಾಶೈರ್ಭವಬಂಧಮೇತದಖಿಲಂ ಕರ್ಮಚ್ಛಲೇನಾಪಿ ಚ ।
ಶಂಭೋ ತ್ವಾಂ ಶರಣಾಗತಂ ಕರುಣಯಾ ತ್ವಂ ಶಂಕರೋ ಯೇನ ವಾ
ಕಾರುಣ್ಯಾಕರ ಭೋಪಿತಃ ಪಶುಪತೇ ದೋಷಾಕರಂ ಪಾಹಿ ಮಾಂ ॥೪೫॥

ಮಹಾಮೂರ್ತೇ ಮಹಾದೇವ ತ್ವನ್ಮೂರ್ತೌ ಸರ್ವದೇವತಾಃ ।
ಯಥಾ ಬೀಜೇಂಕುರೋತ್ಪತ್ತಿಸ್ತಥೇದಂ ತ್ವಯ್ಯವಸ್ಥಿತಂ ॥೪೬॥

ವುವು. ನೀನೇ ಭೂತಭವಿಷ್ಯದ್ವರ್ತಮಾನಸ್ವರೂಪನು — ಇಂತಹ ಮಹಾಮಹಿಮನಾದ ನೀನು ನನ್ನನ್ನು ಕರುಣೆಯಿಂದ ಸಲಹು. ॥೪೩॥

ಓ ಪರಮೇಶ್ವರ, ಅಪಾರ ಲೀಲೆಯನ್ನು ಪ್ರದರ್ಶಿಸುವ ನಿನ್ನನ್ನು ಯಾರೂ ತಿಳಿಯಲಾರರು. ನಿನ್ನ ಪ್ರೇರಣೆಯಿಂದಲೇ ಜಗತ್ತು ಸಂಸಾರಸುಖದಲ್ಲಾಸಕ್ತವಾಗಿರುವುದು. ದುಃಖವನ್ನು ಅನುಭವಿಸುವುದು. ಆದರೆ ದುಃಖವನ್ನು ಪರಿಹರಿಸ ಬಲ್ಲವನು ನೀನೇ. ಇಂತಹ ಓ ಪಶುಪತಿಯೇ, ಕರುಣಾನಿಧಿಯೇ ಪಾಪಿಯಾದ ನನ್ನನ್ನು ಪಾಲಿಸು. ॥೪೪॥

ಓ ಪರಮೇಶ್ವರ, ಈ ಸಂಸಾರಬಂಧವನ್ನು ಹರಿಯಬಲ್ಲವನು ನೀನೊರ್ವನೇ. ಕರ್ಮದ ನೆವದಿಂದ ಈ ಜಗತ್ತನ್ನು ಬಂಧನದಲ್ಲಿ ಕೆಡಹುವೆ. ನೀನು ಸುಖವನ್ನು ಕರುಣಿಸುವ ಶಂಕರನು ನಿಜವಾಗಿದ್ದಲ್ಲಿ ಮಹಾದುಃಖದಲ್ಲಿ ಮುಳುಗಿ ತೇಲುತ್ತಲಿರುವ ಈ ಪಾಪಿಯಾದ ನನ್ನನ್ನು ದಯೆಯಿಂದ ಪಾಲಿಸು. ನಾನು ಪಾಪಗಳ ಗಣಿಯಾಗಿದ್ದಂತೆ ನೀನು ಕರುಣೆಯ ನಿಧಿಯಲ್ಲವೆ? ॥೪೫॥

ಜಗನ್ಮಯನಾದ ಓ ದೇವನೇ, ಬೀಜದಲ್ಲಿ ಮೊಳಕೆಯು ಅಡಗಿರುವಂತೆ ಮಹಾವಸ್ತುವಾದ ನಿನ್ನಲ್ಲಿ ದೇವತೆಗಳೆಲ್ಲರೂ ಅಡಕವಾಗಿರುವರು. ಜಗತ್ತೆಲ್ಲವೂ ನಿನ್ನಲ್ಲಿಯೇ ಇರುವುದು. ॥೪೬॥

ಜಗಜ್ಜಾಲಮಿದಂ ಶಂಭೋ ಸಸುರಾಸುರಮಾನುಷಂ ।
ನಿತ್ಯನಿರ್ಮಾಯನೀರೂಪಂ ಧುರಂಧರ ಸುನಿರ್ಮಲಂ ॥೪೭॥

ಮನೋವಾಚಾಂ ಸುದೂರಾತ್ಮನ್ ಪರಮೇಶ ನಮೋಸ್ತುತೇ ।
ತ್ವತ್ತಸ್ತ್ವನಿಶಃ ಸರ್ವಂ ತ್ವಂ ಸರ್ವಜ್ಞಸ್ಸರ್ವಗೋಽಸಿ ಚ ॥೪೮॥

ನಮಸ್ತೇ ದೇವದೇವೇಶ ಸರ್ವಕಾರಣಕಾರಣ ।
ಕರ್ತವ್ಯಾ ಚ ದಯಾದೀನೇ ಕರುಣಾಕರ ಶಂಕರ ॥೪೯॥

ಸರ್ವಾಪರಾಧಂ ಮೇ ದೇವ ಕ್ಷಮಸ್ವ ಜಗತಾಂ ಪತೇ ।
ತವ ರೂಪಂ ಜಗಚ್ಛಂಭೋ ಅಷ್ಟಮೂರ್ತಿರನೀಶ್ವರಃ ॥೫೦॥

ಪಿತಾ ತ್ವಮೇವ ಭಗವನ್ ಮಾತಾ ಸಾಕ್ಷಾದುಮಾ ಯತಃ ।
ಕ್ಷಮಸ್ವಾಗೋ ಮಮೇದಾನೀಂ ಬಹುನೋಕ್ತೇನ ಕಿಂ ಪ್ರಭೋ॥೫೧॥

ಓ ದೇವ, ನಿನ್ನ ಸ್ವರೂಪವು ನಿತ್ಯವಾದುದು. ಪ್ರಕಾಶಸ್ವರೂಪವಾದುದು. ನಿರ್ಗುಣವಾದುದು. ಶುದ್ಧವಾದುದು. ಇಂತಹ ನಿನ್ನ ರೂಪದಲ್ಲಿ ದೇವತೆಗಳು ರಾಕ್ಷಸರು ಮಾನವರು ಮೊದಲಾದ ಜಗತ್ತೆಲ್ಲವೂ ಐಕ್ಯವಾಗಿರುವುದು. ||೪೭||

ಮನಸ್ಸು ವಾಕ್ಕುಗಳಿಗೆ ಅಗೋಚರನಾದ ಓ ಪರಮೇಶ್ವರ ನಿನಗೆ ನಮಸ್ಕಾರವು. ||೪೮||

ಎಲ್ಲಕ್ಕೂ ಕಾರಣವಾದ ಪ್ರಕೃತಿಗೂ ನೀನು ಕಾರಣನು. ಇಂತಹ ನಿನಗೆ ನಮಸ್ಕಾರವು. ಕರುಣಾನಿಧಿಯಾದ ನೀನು ದೀನನಾದ ನನ್ನಲ್ಲಿ ದಯೆಯುಳ್ಳವನಾಗು. ||೯||

ಜಗದೀಶ್ವರನಾದ ಓ ದೇವ, ನನ್ನ ತಪ್ಪುಗಳೆಲ್ಲವನ್ನೂ ಕ್ಷಮಿಸು. ಈ ಜಗತ್ತು ಅಷ್ಟಮೂರ್ತಿಯಾದ ನಿನ್ನ ಸ್ವರೂಪವೇ ಆಗಿರುವುದು. ನಿನಗೆ ಈಶ್ವರನಿಲ್ಲವು. ||೫೦||

ಓ ಸ್ವಾಮಿಯೇ, ಹೆಚ್ಚುಮಾತಿನಿಂದೇನು? ನೀನೇ ನನಗೆ ತಂದೆಯು, ಪಾರ್ವತೀದೇವಿಯೇ ತಾಯಿಯು, ನೀವೀರ್ವರೂ ನನ್ನ ತಪ್ಪನ್ನು ಕ್ಷಮಿಸಿ. ||೫೧||

ತ್ವಯಿ ಭಕ್ತಿಂ ಮಹಾದೇವ ದೃಢಾಂ ದೇಹಿ ಮೃಡಾವ್ಯಯ ॥೫೨॥

॥ ಸ್ಕಂದ ಉವಾಚ ॥

ಇತ್ಯುಕ್ತಂ ಮುನಿವಚನಸ್ತುತಿಂ ಮಹೇಶಃ
ಶ್ರುತ್ವಾಚಾಗಕುಮಾರಿಕಾಯುತೋ ಹರಸ್ತಂ ।
ದತ್ವಾ ರೂಪಮುಸಾರದಿವ್ಯಗಣಪಸ್ಯೇಂದ್ರಾಧಿಪತ್ಯಂ ದದೌ
ತೇನೈವೋತ್ತಮಸದ್ದ್ವಿಜೇನ ವಿಹರತ್ಕೈಲಾಸಮೌಲೌ ಶಿವಃ ॥೫೩॥

ಯಸ್ತ್ವೇತಚ್ಛೃಣುಯಾತ್ ಪಠೇತ ಶಂಭೋಃ
ಸ್ತವ್ಯಾನಾಂ ಪರಮಸ್ತವೋಽಯಮೀಶತುಷ್ಟ್ಯೈ ।
ಸೋಽಂತೇ ಚಾಪ್ಯಚಿರೇಣ ಭೃಂಗಿತುಲ್ಯಃ
ಪಾದಾಬ್ಜೇ ಪರಮೇಶ್ವರಸ್ಯ ಯುಕ್ತಭೃಂಗಃ ॥೫೪॥

ಇತಿ ಶಿವರಹಸ್ಯೇ ಶಿವಚತುರ್ಥಾಂಶೇ ಭೃಂಗಿಕೃತಶಿವಸ್ತೋತ್ರ
ನಿರೂಪಣಂ ನಾಮ ದಶಮೋಽಧ್ಯಾಯಃ

ಓ, ನಾಶರಹಿತನಾದ ಮಹಾದೇವ, ನಿನ್ನಲ್ಲಿ ನನಗೆ ದೃಢವಾದ ಭಕ್ತಿಯನ್ನು ಕರುಣಿಸು." ॥೫೨॥

ಭೃಂಗಿಮುನಿಯ ಈ ಸ್ತೋತ್ರವನ್ನು ಗಿರಿಜೆಯೊಡನೆ ಕೇಳಿ ಶಿವನು ಸಂತುಷ್ಟನಾಗಿ ಆ ಮುನಿಗೆ ತನ್ನ ಸಾರೂಪ್ಯವನ್ನು ಕೊಟ್ಟನು. ಇಂದ್ರನ ಮೇಲೂ ಅಧಿಕಾರಮಾಡುವಂತಹ ಗಣೇಂದ್ರಪದವಿಯನ್ನು ಅನುಗ್ರಹಿಸಿದನು. ಆ ಮೇಲೆ ಆ ಮುನಿಯೊಡನೆ ಶಿವನು ಕೈಲಾಸಗಿರಿಗೆ ತೆರಳಿದನು. ॥೫೩॥

ಈ ಭೃಂಗಿಚರಿತವನ್ನು ಕೇಳುವವನೂ ಓದುವವನೂ ಮತ್ತು ಈ ಉತ್ತಮ ಸ್ತುತಿಯನ್ನು ಕೇಳುವವನು ಶಿವಭಕ್ತನಾಗಿ ಭೃಂಗಿಯಂತೆ ಶಿವನ ಅನುಗ್ರಹವನ್ನು ಪಡೆದು ಕೊನೆಯಲ್ಲಿ ಶಿವಸಾರೂಪ್ಯವನ್ನು ಹೊಂದುವನು. ॥೫೪॥

ಇಲ್ಲಿಗೆ ಶ್ರೀಶಿವರಹಸ್ಯದಲ್ಲಿ ಚತುರ್ಥಾಂಶದಲ್ಲಿ ಹತ್ತನೆಯ ಅಧ್ಯಾಯವು
ಮುಗಿದುದು.

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಏಕಾದಶೋಽಧ್ಯಾಯಃ

॥ ಸ್ಕಂದ ಉವಾಚ ॥

ಶೃಣು ಪುಣ್ಯಂ ಚರಿತ್ರಂ ಚ ಉಪಮನ್ಯೋರ್ಮಹಾತ್ಮನಃ ।
ಮುನೌ ಕಾರುಣಿಕಃ ಪ್ರೀತೋ ಮಹಾದೇವೋ ಮಹೇಶ್ವರಃ ॥೧॥

ತತ್ರೇದ್ಯ ಕಥಯಿಷ್ಯಾಮಿ ಚರಿತಂ ಪಾಪನಾಶನಂ ।
ಧೌಮ್ಯಾಗ್ರಜಸ್ಯೈವ ಮುನೇಃ ಶೃಣ್ವತಾಮಘನಾಶನಂ ॥೨॥

ಪುರೋ ಹುಮನ್ಯುರಭವದಭಿಮನ್ಯೋಸ್ಸುತೋ ಮಹಾ‌ನ್ ।
ಬಹ್ವೃಚೋ ನಿಯತೋ ಮೌನೀ ಶಿವಧ್ಯಾನಪರಾಯಣಃ ॥೩॥

ಹನ್ನೊಂದನೆಯ ಅಧ್ಯಾಯ

ಎಲೈ ಜೈಗೀಷವ್ಯಮುನಿಯೇ, ಮಹಾತ್ಮನಾದ ಉಪಮನ್ಯುವಿನ ಪುಣ್ಯಚರಿತ್ರೆಯನ್ನು ಹೇಳುವೆನು ಕೇಳು. ಆ ಮುನಿಗೂ ಮಹಾದೇವನಾದ ಮಹೇಶ್ವರನು ದಯೆಯಿಂದ ಪ್ರಸನ್ನನಾಗಿರುವನು. ॥೧॥

ಧೌಮ್ಯಮುನಿಯ ಅಣ್ಣನಾದ ಉಪಮನ್ಯುವಿನ ಪವಿತ್ರವಾದ ಈ ಚರಿತವನ್ನು ಕೇಳಿದರೆ ಸಕಲ ಪಾಪಗಳೂ ನಾಶವಾಗುವುವು. ॥೨॥

ಹಿಂದೆ ಅಭಿಮನ್ಯುಮುನಿಯ ಮಗನಾದ ಹುಮನ್ಯುವೆಂಬ ಋಷಿಯಿದ್ದನು. ಅವನು ಋಗ್ವೇದಿಯಾಗಿದ್ದು ನಿತ್ಯವೂ ನಿಯಮದಿಂದ ಶಿವನನ್ನು ವೇದಮಾರ್ಗದಿಂದ ಧ್ಯಾನಿಸಿ ಸ್ತುತಿಸುತ್ತಿದ್ದನು. ॥೩॥

ಅವರ್ತತ ಮುದಾ ಯುಕ್ತೋ ಉಂಛವೃತ್ತಿರ್ದ್ವಿಜೋತ್ತಮಃ ।
ತಪಸಾ ಶೋಷಯನ್ ಗಾತ್ರಂ ತ್ರಿನೇತ್ರಾರಾಧನೇ ರತಃ ॥೪॥

ತಸ್ಯಾಭೂದ್ಗೃಹಿಣೀ ಸಾಧ್ವೀ ವಸಿಷ್ಠಸ್ಯಾನುಜಾ ಸತೀ ।
ಹುಮನ್ಯುಂ ಪೂಜಯಾಮಾಸ ಉಂಛಸಂಸ್ಥಮಪಿ ದ್ವಿಜಂ ॥೫॥

ವಾಕ್ಯೈಶ್ಶೌಚೋಪಕರಣೈಃ ಪಾಕಸಂಸಹನೈಸ್ತದಾ ।
ತಸ್ಯೈವಂ ವರ್ತಮಾನಸ್ಯ ತದ್ಭಾರ್ಯಾ ಪತಿದೇವತಾ ॥೬॥

ಅಸೂತ ತನಯಂ ಕಾಲೇ ಕುಮಾರಮಿವ ಪಾರ್ವತೀ ।
ಶುಭರ್ಕ್ಷೇ ಸುಮುಹೂರ್ತೇ ಸಾ ಸರ್ವಸಂಪತ್ಪ್ರದಾಯಕಂ ॥೭॥

ತಂ ದೃಷ್ಟ್ವಾ ಸ ಸುತಂ ವಿಪ್ರೋ ಹ್ಯುಮನ್ಯುರ್ಹರ್ಷನಿರ್ಭರಃ ।
ಪುತ್ರಜನ್ಮಪ್ರಹೃಷ್ಟಾತ್ಮಾ ಧಾನಾಮುಷ್ಟಿಂ ದದೌ ತದಾ ॥೮॥

ಉಪಮನ್ಯುಸ್ತತೋಽಸ್ಯೈವ ಚಕ್ರೇ ಬಾಲಸ್ಯ ನಾಮ ಸಃ ।
ಸೋಽವರ್ಧತ ದಿನೈಸ್ತತ್ರ ತದಾ ಪಿತೃಗೃಹೇ ಸುಖಂ ॥೯॥

ವನದಲ್ಲಿ ಸಿಕ್ಕುವ ಗೆಡ್ಡೆಗೆಣಸುಗಳನ್ನು ಸೇವಿಸುತ್ತಾ ಆ ಹುಮನ್ಯುವು ಘೋರತಪಸ್ಸಿನಿಂದ ಶಿವನನ್ನು ಆರಾಧಿಸುತ್ತಿದ್ದನು. ||೪||

ಆ ಹುಮನ್ಯುಮುನಿಗೆ ಓರ್ವ ಪತಿವ್ರತೆಯಾದ ಹೆಂಡತಿಯಿದ್ದಳು. ಅವಳು ವಸಿಷ್ಠಮುನಿಯ ತಂಗಿಯು. ಆ ಸತಿಯು ಗೆಡ್ಡೆಗೆಣಸು ತಿನ್ನುವಂತಹ ದರಿದ್ರ ನಾದರೂ ಹುಮನ್ಯುವನ್ನು ಮೃದುವಾಕ್ಯಗಳಿಂದಲೂ ಶೌಚಸಾಮಗ್ರಿಗಳಿಂದಲೂ ಅಡಿಗೆ ಬೇಯಿಸುವುದರಿಂದಲೂ ಪ್ರೀತಿಯಿಂದ ಸೇವಿಸುತ್ತಿದ್ದಳು. ||೫||

ಆ ದಂಪತಿಗಳು ಹೀಗೆ ಇರುತ್ತಿರಲು ಪತಿವ್ರತೆಯಾದ ಆ ಹುಮನ್ಯುಪತ್ನಿಯು ಒಳ್ಳೆಯ ನಕ್ಷತ್ರಗ್ರಹಬಲವುಳ್ಳ ಸುಮುಹೂರ್ತದಲ್ಲಿ ಓರ್ವ ಸದ್ಗುಣಮಂಡಿತನಾದ ಕುಮಾರನನ್ನು ಗಿರಿಜೆಯು ಸ್ಕಂದನನ್ನು ಹಡೆದಂತೆ ಪಡೆದಳು. ||೬-೭||

ಜನಿಸಿದ ಆ ಪುತ್ರನನ್ನು ನೋಡಿ ಹುಮನ್ಯುವು ಹರ್ಷಗೊಂಡು ವಿಪ್ರರಿಗೆ ಕಾಡುಧಾನ್ಯಗಳನ್ನು ದಾನಮಾಡಿ ಜಾತಕರ್ಮಮಾಡಿದನು. ||೮||

ಆ ಪುತ್ರನಿಗೆ ಉಪಮನ್ಯುವೆಂದು ನಾಮಕರಣಮಾಡಿದನು. ಆ ಬಾಲಕನು ತಂದೆಯ ಆಶ್ರಮದಲ್ಲಿ ದಿನದಿನವೂ ಬೆಳೆಯತೊಡಗಿದನು. ||೯||

ಸ ಪಾಂಚವರ್ಷಿಕೋ ಜಾತೋ ಯದಾ ಮಾತ್ರಾ ಸಹಾಗಮತ್ ।
ತಂ ಮಾತಾ ಸುವಸತ್ಯತ್ರ ಸ್ವಗೃಹೇ ನಿತ್ಯಮೌರಸಂ ॥೧೦॥

ಜಗೌ ಸ ನಿಯಮೇನ್ನೈವ ಪಿಷ್ಟೇನಾಲೋಡಿತಂ ಪಯಃ ।
ಕ್ಷೀರಂ ಪಿಬೇತಿ ಮಾತಾ ತಂ ನಿತ್ಯಮೇವ ಮನೋರಮಾ ॥೧೧॥

ಮನ್ವಾನಸ್ಸ ಪಿಬನ್ ಕ್ಷೀರಂ ಮಾತ್ರಾ ದತ್ತಂ ದಿನೇ ದಿನೇ ।
ಸ ಮಾತುಲಗೃಹಂ ಪ್ರಾಪ ಮಾತ್ರಾ ಮಾಸಂ ತ ದೋಕ್ಷಿತಃ ॥೧೨॥

ಮಾತುಲಾನ್ಯಾಪ್ಯರುಂಧತ್ಯಾ ಹೋಮಶೇಷಂ ಪಿಬತ್ಪಯಃ ।
ದತ್ತಂ ತನ್ಮಾತುಲೇನಾಪಿ ದತ್ತಂ ಸುಸ್ವಾದು ತತ್ಪಯಃ ॥೧೩॥

ತತ್ಕ್ಷೀರವಾಸನಾಯೋಗಾತ್ ಪುನಃ ಪ್ರಾಪ ಗೃಹಂ ಸ್ವಕಂ ।
ಸಮಾತರಂ ಯಯಾಚೇಥ ಸ್ವಾದು ತತ್ಸದೃಶಂ ಪಯಃ ॥೧೪॥

ಹೀಗೆ ಬೆಳೆಯುತ್ತಾ ಉಪಮನ್ಯುವು ಐದು ವರ್ಷದವನಾದನು. ಅವನ ತಾಯಿಯು ಅವನನ್ನು ನಿತ್ಯವೂ ವಾತ್ಸಲ್ಯದಿಂದ ಸಲಹುತ್ತಿದ್ದಳು. ||೧೦||

ಹುಮನ್ಯುವು ದಟ್ಟದರಿದ್ರನು. ಅವನಾಶ್ರಮದಲ್ಲಿ ಒಂದು ಹಸುವೂ ಇರಲಿಲ್ಲ. ಬಾಲಕನಾದ ಉಪಮನ್ಯುವಿಗೆ ಅವನ ತಾಯಿಯು ಹಿಟ್ಟನ್ನು ಕದರಿ "ಹಾಲನ್ನು ಕುಡಿ" ಎಂದು ಕೊಡುತ್ತಿದ್ದಳು. ಹಿಟ್ಟಿನ ನೀರೇ ಅವನಿಗೆ ಹಾಲಾಗಿತ್ತು. ||೧೧||

ಆ ಹಿಟ್ಟಿನ ನೀರನ್ನೇ ಹಾಲೆಂದು ತಿಳಿದು ಉಪಮನ್ಯುವು ದಿನವೂ ಕುಡಿಯುತ್ತಿದ್ದನು. ಹೀಗಿರಲೊಂದುದಿನ ಆ ಕುಮಾರನು ತಾಯಿಯೊಡನೆ ಸೋದರಮಾವನಾದ ವಸಿಷ್ಠಮುನಿಯ ಮನೆಗೆ ಹೋದನು. ಅಲ್ಲಿ ಕೆಲವು ದಿನಗಳಿದ್ದನು. ||೧೨||

ಮಾವನ ಮನೆಯಲ್ಲಿ ಅತ್ತೆಯಾದ ಅರುಂಧತಿಯೂ ಮಾವನಾದ ವಸಿಷ್ಠನೂ ಸಹ ಹೋಮಮಾಡಿ ಮಿಕ್ಕ ನಿಜವಾದ ಸಿಹಿಯಾದ ಹಾಲನ್ನು ಉಪಮನ್ಯುವಿಗೆ ಕುಡಿಯಲು ಕೊಡುತ್ತಿದ್ದರು. ಅದನ್ನು ಅವನು ಕುಡಿಯುತ್ತಿದ್ದನು. ||೧೩||

ಆ ಹಾಲಿನ ರುಚಿಯು ಉಪಮನ್ಯುವಿಗೆ ಹಿಡಿಯಿತು. ಕೆಲ ದಿನಗಳ ಮೇಲೆ ತಮ್ಮ ಮನೆಗೆ ಬಂದನು. ಆಗ ಪುನಃ ಹಿಟ್ಟಿನ ಹಾಲು ಸಿಕ್ಕಿತು. ಅದು ಬೇಡವೆಂದೂ ಮಾವನ ಮನೆಯಲ್ಲಿ ಕೊಡುತ್ತಿದ್ದಂತಹ ಹಾಲು ಬೇಕೆಂದೂ ಕೇಳಿದನು. ||೧೪||

ದೇಹೀತ್ಯೇವ ಲುಠನ್ ಭೂಮೌ ರುದನ್ ಪುತ್ರಃಕರೌ ಶಿರಃ ।
ಪ್ರಹೃತ್ಯ ಮೌಖ್ರ್ಯಾದ್ಬಾಲ್ಯೇನ ಮಾತರಂ ಪಿತರಂ ತದಾ ॥೧೫॥

ಸಾ ಮಾತಾ ದುಃಖಿತಾ ತಂ ವೈ ಪ್ರಾಹ ಶೋಕಾತುರಂ ಸುತಂ ॥೧೬॥

॥ ಮಾತಾ ಉವಾಚ ॥

ತ್ವಂ ಬಾಲ ಕುರುಷೇ ದುಃಖಂ ಮೌಖ್ರ್ಯಾದಜ್ಞಾನತೋ ಮುನೇಃ ।
ಭಾರ್ಯಾ ದಾರಿದ್ರ್ಯವಿವಶಾ ನೈವ ಗೌರ್ಮೇ ಗೃಹೇ ಸುತ ॥೧೭॥

ಅಪೂಜಿತಮಹೇಶಾನಾಂ ಕ್ವ ಧನಾನಿ ಗೃಹಾಣಿ ಚ ।
ಗಾವೋ ಧಾನ್ಯಾನಿ ವಾಸಾಂಸಿ ದಾರಿದ್ರ್ಯಾರ್ಣವಮಧ್ಯಗಾ ॥೧೮॥

ಪಿಬೇದಮಧುನಾ ಪುತ್ರ ಕ್ಷೀರಂ ಪಿಷ್ಟವಿಮಿಶ್ರಿತಂ ।
ಇತ್ಯುಕ್ತೋಽಪಿ ರುದನ್ ಮೌಖ್ರ್ಯಾದ್ಯಯಾಚೇ ಕ್ಷೀರಮೇವ ಹಿ॥೧೯॥

ಮಾತುಲಾನ್ಯಾ ಪುರಾದತ್ತಂ ಕ್ಷೀರಂ ತತ್ಸದೃಶಂ ಮುಧಾ ।
ಸಾ ಪುನರ್ದುಃಖಿತಾ ದೇವೀ ಪುತ್ರಂ ವೀಕ್ಷ್ಯ ತದಾತುರಾ ॥೨೦॥

"ನನಗೀ ಹಾಲು ಬೇಡ, ಅದೇ ಬೇಕು" ಎಂದು ಹಠಹಿಡಿದು ಕೈಯಿಂದ ತಲೆ ಚಚ್ಚಿಕೊಳ್ಳುತ್ತಾ ತಂದೆತಾಯಿಗಳಿಗೂ ಹೊಡೆಯು ತೊಡಗಿದನು. ಹುಡುಗರು ಸ್ವಭಾವದಿಂದ ಹಠಮಾರಿಗಳಲ್ಲವೆ? ||೧೫||

ಆಗ ತಾಯಿಯು ದುಃಖಗೊಂಡು ಹಾಲಿಗಾಗಿ ಅಳುತ್ತಲಿರುವ ಮಗನನ್ನು ಕುರಿತು, ||೧೬||

"ಎಲೈ ಮಗು, ಹುಡುಗತನದಿಂದ ನೀನು ಹಠಹಿಡಿದಿರುವೆ. ನಾವು ಕಡು ಬಡವರು. ನಮ್ಮ ಮನೆಯಲ್ಲಿ ಹಸುವಿಲ್ಲ. ಹಾಲೂ ಇಲ್ಲ. ||೧೭||

ಪರಮೇಶ್ವರನನ್ನಾರಾಧಿಸದವರಿಗೆ ಧನವೆಲ್ಲಿ? ಮನೆಮಠಗಳೆಲ್ಲಿ? ಧಾನ್ಯವೆಲ್ಲಿ? ಬಟ್ಟೆಯುಲ್ಲಿ? ಅಂತಹವರು ಬಡತನದಲ್ಲಿಯೇ ಮುಳುಗಿರಬೇಕು. ||೧೮||

ಆದುದರಿಂದ ಎಲೈ ಮಗುವೇ, ಹಠವನ್ನು ಬಿಟ್ಟು ಈ ಹಿಟ್ಟಿನ ಹಾಲನ್ನು ಕುಡಿ" ಎಂದಳು. ಹೀಗೆ ಹೇಳಿದರೂ ಕೇಳದೆ ಉಪಮನ್ಯುವು ಹಠಹಿಡಿದು ಹಿಂದೆ ಸೋದರತ್ತೆಯು ಕೊಟ್ಟಂತಹ ಹಾಲನ್ನೇ ಕೊಡು ಎಂದು ವ್ಯರ್ಥವಾಗಿ ಅಳತೊಡಗಿದನು. ಆಗ ಅವನ ತಾಯಿಯು ದುಃಖಗೊಂಡು ಹೀಗೆ ನುಡಿದಳು. ||೧೯-೨೦||

ಕ್ವಾಸ್ಮಾಕಂ ವನಸಂಸ್ಥಾನಾಮುಂಛವೃತ್ತ್ಯುಪಜೀವಿನಾಂ ।
ಅನರ್ಚಿತಮಹೇಶಾನಾಂ ಕ್ವಾದ್ಯಾನ್ನಂ ಕ್ಷೀರಸಂಯುತಂ ॥೨೧॥

ಇತ್ಯುಕ್ತಮಾತ್ರೇ ಮಾತ್ರಾ ಸ ಪ್ರಾಹಾಥೋ ಮಾತರಂ ತದಾ ॥೨೨॥

॥ ಉಪಮನ್ಯುರುವಾಚ ॥

ಕೋಽಸೌ ಮಹೇಶೋ ಜನನಿ ಕ್ವಾದ್ಯ ಸಂಪ್ರತಿವರ್ತತೇ ।
ತಮಾರಾಧ್ಯಾಹಮಮಲಕ್ಷೀರಾನ್ನಂ ಚ ಲಭೇ ಸದಾ ॥೨೩॥

ಸಾ ಮಾತಾ ವಿಸ್ಮಿತಾ ಪುತ್ರಂ ಪ್ರಾಹ ಬಾಲಂ ತದಾ ಮುದಾ ॥೨೪॥

॥ ಮಾತಾ ಉವಾಚ ॥

ಯಂ ವೇದಾ ಬ್ರಹ್ಮವಿಷ್ಣ್ವಾದ್ಯಾ ನೈವ ಜಾನಂತಿ ತಂ ಶಿವಂ ।
ಯಸ್ಯ ರೂಪಪರಿಜ್ಞಾನಂ ವೇದಾಂತೈರಪಿ ದುರ್ಲಭಂ ॥೨೫॥

ಭಕ್ತ್ಯೈವ ಲಭ್ಯೋ ಯೋ ದೇವೋ ಪೂಜಿತಸ್ಸರ್ವಕಾಮದಃ ।
ತಮಾರಾಧ್ಯೈವ ದೇವಾಶ್ಚ ಮುನಯೋಽಪಿ ಮಹೇಶ್ವರಂ ॥೨೬॥

ಮಗು, ಗೆಡ್ಡೆಗೆಣಸುಗಳನ್ನು ತಿಂದು ಜೀವಿಸುತ್ತಿರುವ, ಶಿವನನ್ನರ್ಚಿಸದೇ ಕಡುಬಡವರಾಗಿರುವ ನಮಗೆ ಹಾಲೆಲ್ಲಿ ಸಿಗುವುದು ? ಮೃಷ್ಟಾನ್ನವೆಲ್ಲಿ ದೊರೆತೀತು ? ಎಂದ ತಾಯಿಯ ಮಾತನ್ನು ಕೇಳಿ ಉಪಮನ್ಯುವು, ॥೨೧॥

ಓ ಮಾತೆ, ಆ ಮಹೇಶನಾರು ? ಅವನೆಲ್ಲಿರುವನು ? ಅವನನ್ನಾರಾಧಿಸಿ ನಾನು ಕ್ಷೀರಾನ್ನವನ್ನು(ಹಾಲನ್ನವನ್ನು) ಸ್ಥಿರವಾಗಿ ಪಡೆಯುವೆನು. ಎನ್ನಲು, ॥೨೩॥

ಮಗನ ಈ ಮಾತನ್ನು ಕೇಳಿ ಆ ಮಾತೆಯು ತುಂಬಾ ಅಚ್ಚರಿಗೊಂಡು ಹೀಗೆ ಹೇಳಿದಳು. ॥೨೪॥

" ಎಲೈ ಮಗುವೇ, ಆ ಶಿವನನ್ನು ತತ್ವತಃ ವೇದಗಳೂ ಬ್ರಹ್ಮ ವಿಷ್ಣು ಮೊದಲಾದವರೂ ತಿಳಿಯಲಾರರು. ವೇದಾಂತವಚನಗಳೂ ಸಹ ಆ ದೇವನನ್ನು ನಿಶ್ಚಯವಾಗಿ ತಿಳಿಸಲಾರವು. ॥೨೫॥

ಭಕ್ತಿಯಿಂದ ಪೂಜಿಸಿದರೆ ಮಾತ್ರ ಅವನು ಸಕಲೇಷ್ಟಾರ್ಥಗಳನ್ನೂ ಕರುಣಿಸುವನು. ಅವನನ್ನಾರಾಧಿಸಿಯೇ ದೇವತೆಗಳೂ ಮುನಿಗಳೂ ತಮ್ಮ ತಮ್ಮ

ಲೇಭಿರೇ ವಾಂಛಿತಾನ್ಯೇವ ಮಹಾದೇವಾನ್ಮಹೇಶ್ವರಾತ್ ।
ತಸ್ಮಿನ್ ಪ್ರಸನ್ನೇ ದೇವೇಶೇ ಕಿಮಲಭ್ಯಂ ಶರೀರಿಣಾಂ ॥೨೭॥

ಇತ್ಯುಕ್ತಸ್ಸ ತದಾ ಮಾತ್ರಾ ಪಿತರಂ ಪ್ರಾಹ ಬಾಲಕಃ ॥೨೮॥

॥ ಉಪಮನ್ಯುರುವಾಚ ॥

ಅಹಮಾರಾಧಯಿಷ್ಯಾಮಿ ದೇವದೇವಮುಮಾಪತಿಂ ।
ತ್ವತ್ತೋಽನುಜ್ಞಾತುಮಿಚ್ಛಾಮಿ ತಪಸೇಽಹಂ ಧೃತವ್ರತಃ ॥೨೯॥

ಇತಿ ಪುತ್ರವಚಃ ಶ್ರುತ್ವಾ ತಂ ಪಿತಾ ಪ್ರಾಹ ಬಾಲಕಂ ।
ದೀಕ್ಷಯಿತ್ವಾ ವಿಧಾನೇನ ದದೌ ಪಂಚಾಕ್ಷರಂ ಮನುಂ ॥೩೦॥

ಪೂಜಾಕ್ರಮಮುಪಾದಿಶ್ಯ ತಪಸೇ ಪ್ರೈಷಯದ್ವನಂ ।
ಸೋಽಪಿ ನತ್ವಾ ಪಿತುಃ ಪಾದೌ ಮಾತರಂ ಸ ಗತೋ ವನಂ ॥೩೧॥

ಅಶಾಸತ ತದಾ ಮಾತಾ ತಸ್ಯೈವಾಶಿಷಮುತ್ತಮಂ ॥೩೨॥

ಇಷ್ಟಾರ್ಥಗಳನ್ನು ಪಡೆದರು. ಆ ಪರಮೇಶ್ವರನು ಪ್ರಸನ್ನನಾದರೆ ಮಾನವರಿಗೆ ದುರ್ಲಭವಾದುದಾವುದು ? ” ॥೨೬-೨೭॥

ಮಾತೆಯ ಈ ಮಾತನ್ನು ಕೇಳಿ ಉಪಮನ್ಯುವು ತಂದೆಯನ್ನು ಕುರಿತು ವಿನಯದಿಂದ, ॥೨೮॥

“ಓ ತಂದೆಯೇ, ತಪಸ್ಸಿನಿಂದ ನಾನು ಗಿರಿಜಾಪತಿಯಾದ ಶಿವನನ್ನು ಆರಾಧಿಸುವೆನು, ಅನುಮತಿಯನ್ನು ದಯಪಾಲಿಸು” ಎಂದನು. ॥೨೯॥

ಪುತ್ರನ ಈ ಮಾತನ್ನು ಕೇಳಿ ಹ್ಯುಮನ್ಯುವು ಸಂತಸಪಟ್ಟು ತಪೋದೀಕ್ಷೆಯನ್ನವನಿಗೆ ಕೊಟ್ಟು ವಿಧಿವತ್ತಾಗಿ ಅವನಿಗೆ ಶಿವಪಂಚಾಕ್ಷರೀಮಂತ್ರವನ್ನುಪದೇಶಿಸಿದನು. ॥೩೦॥

ಆಮೇಲೆ ಶಿವನನ್ನು ಪೂಜಿಸುವ ಕ್ರಮವನ್ನುಪದೇಶಿಸಿ ಉಪಮನ್ಯುವನ್ನು ತಪಸ್ಸಿಗಾಗಿ ವನಕ್ಕೆ ಕಳುಹಿಸಿದನು. ಆಗ ಅವನು ಮಾತಾಪಿತೃಗಳಿಗೆ ವಂದಿಸಿ ಕಾಡಿಗೆ ಹೊರಟನು. ॥೩೧॥

ಅವನ ಮಾತೆಯು ಅವನಿಗೆ ಹೀಗೆ ಉತ್ತಮವಾದ ಆಶೀರ್ವಾದವನ್ನು ಮಾಡಿದಳು. ॥೩೨॥

॥ ಮಾತಾ ಉವಾಚ ॥

ಪೂರ್ವತಃ ಪಾತು ತೇ ಶಂಭುರ್ದಕ್ಷಿಣೇ ನೀಲಲೋಹಿತಃ ।
ಪಶ್ಚಿಮೇ ವಾಮದೇವೋಽವ್ಯಾದುತ್ತರಸ್ಯಾಂ ಪಿನಾಕಧೃಕ್ ॥೩೩॥

ದಿವಿ ಈಶಾನಕೃತ್ಪಾತು ಭೂಮ್ಯಾಂ ಭೂಧರಧೃಕ್ಸ್ವಯಂ ।
ವಿಷ್ಣುರ್ಬ್ರಹ್ಮಾ ಚ ರುದ್ರಶ್ಚ ವಸವೋ ಮರುತಸ್ತಥಾ ॥೩೪॥

ಆದಿತ್ಯಾಶ್ಚಾಶ್ವಿನೌ ರುದ್ರಾ ಮಯಸ್ಸೂರ್ಯಾನಲೇಂದವಃ ।
ಗಂಧರ್ವಾಗರುಡಾ ಯಕ್ಷಾ ವಿದ್ಯಾಧರವರಾಪ್ಸರಾಃ ॥೩೫॥

ನಾಗಾಃ ಕಿಂಪುರುಷಾ ಗಾವೋ ಮಾತರೋ ಮರುದೀಶ್ವರಃ ।
ಮೃಗಾಶ್ಚ ಪಕ್ಷಿಣೋ ಯೇ ಚ ಹಿಂಸಕಾ ಭೂತಜಾತಯಃ ॥೩೬॥

ವ್ಯಾಘ್ರಾದಯೋ ದುಷ್ಟಸತ್ವಾಃ ಪಾಂತು ತ್ವಾಂ ವನಮಧ್ಯಗಂ ।
ತಪಸ್ಯಭಿರತಂ ಶಂಭುಸ್ಸರ್ವತಃ ಪಾತು ಶಂಕರಃ ॥೩೭॥

'ಎಲೈ ಮಗುವೇ, ಪೂರ್ವಭಾಗದಲ್ಲಿ ನಿನ್ನನ್ನು ಶಂಭುವು ರಕ್ಷಿಸಲಿ, ದಕ್ಷಿಣದಲ್ಲಿ ನೀಲಲೋಹಿತನು ರಕ್ಷಿಸಲಿ. ಪಶ್ಚಿಮದಲ್ಲಿ ವಾಮದೇವನು ಸಲಹಲಿ, ಉತ್ತರದಲ್ಲಿ ಪಿನಾಕಪಾಣಿಯು ಕಾಪಾಡಲಿ. ||೩೩||

ಗಗನದಲ್ಲಿ ಈಶಾನನು ರಕ್ಷಿಸಲಿ, ಭೂಮಿಯಲ್ಲಿ ಭೂಧರಧಾರಿಯು ಸಲಹಲಿ, ವಿಷ್ಣು, ಬ್ರಹ್ಮ, ರುದ್ರ, ವಸು, ಮರುತ್ತುಗಳೂ ನಿನ್ನನ್ನು ಕಾಪಾಡಲಿ. ||೩೪||

ದ್ವಾದಶಾದಿತ್ಯರು, ಅಶ್ವಿನೀದೇವತೆಗಳು, ಏಕಾದಶರುದ್ರರು, ಮಯ, ಸೂರ್ಯ, ಚಂದ್ರರು, ಅಗ್ನಿ, ಗಂಧರ್ವಗರುಡರು, ಯಕ್ಷರು, ವಿದ್ಯಾಧರರು, ಅಪ್ಸರೆಯರು ಇವರೆಲ್ಲರೂ ನಿನ್ನನ್ನು ರಕ್ಷಿಸಲಿ. ||೩೫||

ಸರ್ಪಗಳು, ಕಿನ್ನರರು, ಗೋವುಗಳು, ಮಾತೃಕೆಯರು, ದೇವೇಂದ್ರ, ಮೃಗಪಕ್ಷಿಗಳು, ಕ್ರೂರಪ್ರಾಣಿಗಳು ಇವೆಲ್ಲವೂ ನಿನ್ನನ್ನು ಪಾಲಿಸಲಿ. ||೩೬||

ವನಮಧ್ಯದಲ್ಲಿ ಹುಲಿ ಮೊದಲಾದ ಕ್ರೂರಪ್ರಾಣಿಗಳು ನಿನ್ನನ್ನು ರಕ್ಷಿಸಲಿ ತಪಸ್ಸಿನಲ್ಲಿ ಮಗ್ನನಾದ ನಿನ್ನನ್ನು ಶಂಕರನು ಎಲ್ಲ ರೀತಿಯಿಂದಲೂ ಸಲಹಲಿ.'||೩೭||

ಇತ್ಯಾಲಿಂಗ್ಯ ಮುದಾ ಪುತ್ರಂ ಮೂರ್ಧ್ನಿ ಜಿಘ್ರೇಭಿನಂದತೀ ।
ಪ್ರಸ್ನುತೌ ಸ್ವಸ್ತನೌ ಮಾತಾ ತನಯಂ ಪಾಯಯತ್ತದಾ ॥೩೮॥

ಆನಂದಾಶ್ರೂಣಿ ಮುಂಚಂತೀ ಉಪಮನ್ಯೋಸ್ತದಾನನಂ ।
ಪಶ್ಯಂತೀ ಚಂದ್ರಸಂಕಾಶಂ ಚಂದ್ರಚೂಡಾರ್ಚಕಸ್ಯ ಚ ॥೩೯॥

ಉಪಮನ್ಯುರ್ಮಹಾಧೀರಃ ಕ್ಷಯದ್ವೀರಪದಾರ್ಚಕಃ ।
ವನಂ ಜಗಾಮ ಮುದಿತೋ ಮುನೀನ್ ವಿಸ್ಮಾಪಯಂಸ್ತದಾ ॥೪೦॥

ತಂ ಪಿತಾ ಪ್ರಾಹ ಹರ್ಷೇಣ ಹ್ಯುಮನ್ಯುರ್ಭೂರಿದಕ್ಷಿಣಃ ।
ವಕ್ಷ್ಯೇ ಹಿತಂ ತವಾತ್ಯಂತಂ ಶೃಣು ಮದ್ವಚನಂ ಸುತ ॥೪೧॥

ಭಾವಲಭ್ಯೋ ಮಹಾದೇವೋ ಬ್ರಹ್ಮಾದೀನಾಂ ಚ ದುರ್ಲಭಃ ।
ಸುಲಭೋ ಭಕ್ತಿಭಾಜಾಂ ಚ ಸರ್ವೇಷಾಂ ಸರ್ವದೇಹಿನಾಂ ॥೪೨॥

ಹೀಗೆ ಆಶೀರ್ವದಿಸಿ ಆ ಆದರ್ಶಮಾತೆಯುಪುತ್ರನನ್ನು ಆಲಿಂಗಿಸಿ ಮುಂದಲೆಯನ್ನು ಮೂಸಿದಳು. ಕ್ಷೀರಪೂರಿತವಾದ ಸ್ತನಗಳನ್ನು ವಾತ್ಸಲ್ಯದಿಂದ ಉಣಿಸಿದಳು. ||೩೮||

ಮುದ್ದುಬಾಲನಾದ ಕುಮಾರನನ್ನು ನೋಡುತ್ತಾ, ಬಾಲ್ಯದಲ್ಲಿಯೇ ಚಂದ್ರಶೇಖರನನ್ನು ಅರ್ಚಿಸಹೊರಟಿರುವ ಅವನ ಚಂದ್ರನಂತಹ ಮುಖವನ್ನು ಕಾಣುತ್ತಾ ಆ ಮಾತೆಯು ಆನಂದಪರವಶಳಾದಳು. ||೩೯||

ಐದು ವಯಸ್ಸಿನ ಧೀರಬಾಲನಾದಾ ಉಪಮನ್ಯುವು ಆಮೇಲೆ ಶಿವನನ್ನಾರಾಧಿಸಲೋಸುಗ ವನಕ್ಕೆ ಹೊರಟನು. ಆ ಚಿಕ್ಕಬಾಲಕನ ಉದ್ಯಮವನ್ನು ನೋಡಿ ಮಹಾಮಹಾಮುನಿಗಳೂ ಆಶ್ಚರ್ಯಗೊಂಡರು. ||೪೦||

ಆಗ ಅವನ ತಂದೆಯಾದ ಹ್ಯುಮನ್ಯುವು ಹೀಗೆ ಹೇಳಿದನು. “ಎಲೈ ಮಗು, ನಿನಗೆ ಹಿತವಾದೊಂದು ಮಾತನ್ನು ಹೇಳುವೆನು ಕೇಳು. ||೪೧||

ಭಕ್ತಿಯೊಂದರಿಂದಲೇ ಶಿವನು ಪ್ರತ್ಯಕ್ಷನಾಗುವನು. ಭಕ್ತಿಯಿಲ್ಲದಿದ್ದರೆ ಬ್ರಹ್ಮಾದಿಗಳಿಗೂ ಪ್ರತ್ಯಕ್ಷನಾಗನು. ಭಕ್ತಿಯುಳ್ಳವರೆಲ್ಲರಿಗೂ ಸುಲಭನಾಗುವನು.

ಆ ದೇವನ ಆರಾಧನೆಗಾಗಿ ನಿನಗೀಗ ಪಂಚಾಕ್ಷರ ಮಂತ್ರವನ್ನುಪದೇಶಿಸುವೆನು. ||೪೨||

ತವಾದ್ಯೋಪದಿಶಾಮ್ಯದ್ಯ ಮಂತ್ರಂ ಪಂಚಾಕ್ಷರಂ ಪರಂ ।
ಇತ್ಯುಕ್ತ್ವಾಥ ತದಾ ಪುತ್ರಮುಪನೀತಂ ತದಾ ಪಿತಾ ॥೪೩॥

ಭಸ್ಮರುದ್ರಾಕ್ಷಸಂಪನ್ನಮಗ್ನಿರಿತ್ಯಾದಿಮಂತ್ರತಃ ।
ಲಿಂಗಾರ್ಚನಮುಪಾದಿಶ್ಯ ಸ್ತೋತ್ರಮೇತದುಪಾದಿಶತ್ ॥೪೪॥

॥ ಹ್ಯುಮನ್ಯುರುವಾಚ ॥

ಸ್ತೋತ್ರೇಣಾನೇನ ದೇವೇಶಂ ಸ್ತುಹಿ ನಿತ್ಯಂ ಮಹೇಶ್ವರಂ ॥೪೫॥

ಕುರಂಗಸಂಗಾರ್ಧಧರಂ ದೃಗಂಚಲ
ಸ್ಫುಲಿಂಗಲೇಶೈರ್ಮದನೋಽಪ್ಯನಂಗಿತಃ ।
ಸಾರಂಗಮಾತಂಗಹರಂ ಧರ ತ್ವಾಂ
ಪತಂಗಸಂಸ್ಥಂ ಪ್ರಣಮಾಮ್ಯಕಂಗಂ ॥೪೬॥

ಶಿಖಿಮುಖ ಸುಖಭೂನಿದಾನ ಶಂಭೋ
ಮಖಮುಖಸುದಕ್ಷಶಿಕ್ಷಿತಾಂಗ ।
ವರಗಂಗಾಜಟೆಶೋಭಿತೋತ್ತಮಾಂಗ
ಧೃತರುದ್ರಾಕ್ಷಮಹೋಕ್ಷನಾಹ ಪಾಹಿ ॥೪೭॥

ಎಂದು ಹೇಳಿ ಹ್ಯುಮನ್ಯುವು ಮಗನಿಗೆ ಉಪನಯನಮಾಡಿ "ಅಗ್ನಿರಿತಿ ಭಸ್ಮ"ಯೆಂದು ಮೊದಲಾದ ಮಂತ್ರದಿಂದ ಭಸ್ಮರುದ್ರಾಕ್ಷಿಧಾರಣೆಮಾಡಿಸಿ, ಶಿವಲಿಂಗಾರ್ಚನೆಯನ್ನುಪದೇಶಿಸಿ ಈ ಸ್ತೋತ್ರವನ್ನು ಬಾಯಿಂದ ಹೇಳಿ, ||೪೩-೪೪||

ಈ ಸ್ತೋತ್ರದಿಂದ ನಿತ್ಯವೂ ಶಿವನನ್ನು ಸ್ತುತಿಸು ಎಂದು ಬೋಧಿಸಿದನು. ||೪೫||

"ಚಂದ್ರಕಲೆಯನ್ನು ಜಟೆಯಲ್ಲಿ ಧರಿಸಿದವನೂ, ಮೂರನೆಯ ಕಣ್ಣಿನಿಂದ ಮನ್ಮಥನನ್ನು ಭಸ್ಮಮಾಡಿದವನೂ, ಮೃಗಧಾರಿಯೂ, ಗಜಚರ್ಮವನ್ನು ಹೊದೆದಿರುವವನೂ, ಪಕ್ಷಿಯಂತೆ ಚಂಚಲವಾದ ಮಾನವಹೃದಯದಲ್ಲಿ ವಾಸಿಸುವವನೂ, ಶುದ್ಧನೂ ಆದ ಮಹಾದೇವನಿಗೆ ನಮಸ್ಕರಿಸುವೆನು. ||೪೬||

ಅಗ್ನಿಯೇ ಮುಖವಾಗುಳ್ಳ ದೇವತೆಗಳಿಗೆ ಸುಖವನ್ನು ಕರುಣಿಸುವವನೂ, ದುಷ್ಟನಾದ ದಕ್ಷಬ್ರಹ್ಮನ ಯಾಗವನ್ನು ಹಾಳುಮಾಡಿದವನೂ, ಜಟೆಯಲ್ಲಿ

ಮಾತಂಗತುಂಗೋತ್ತಮಕೃತ್ತಿವಾಸ
ಭುಜಂಗಭಸ್ಮಾಂಗ ಜನಾರತರಂಗ ।
ತ್ವಲ್ಲಿಂಗಸಂಗೇ ವಿಹಿತಾಂತರಂಗೇ
ಹರೌ ರಥಾಂಗಪ್ರದ ದೇವ ಪಾಹಿ ॥೪೮॥

ದಗ್ಧಾಂಧಕ ತ್ರಿಪುರಸೂದನ ಕಾಲಕಾಲ
ವ್ಯಾಲೇಂದ್ರನೀಲಗಲಧೃಕ್ ಧೃತಹಾಲಹಾಲ ।
ಶೂಲಾನಲಾನಿಲಧರಾವ್ಯಯ ವ್ಯೋಮಕೇಶ
ಕೋಶಾತಿಗಾಶಿತಭವ್ಯೈಕಸಮೂಹ ಪಾಹಿ ॥೪೯॥

ಜಟಾತಟಿತಟನೀವಟೋರುಮೂಲ
ಸ್ಥಿತಕಟ್ಯಾಮೃತಲಂಪಟೈಶ್ಚ ದೇವೈಃ ।
ಖಪಟಿಸ್ತುತಭೂತಗಣೌಘಸಂಘೈಃ
ನಟಚೂಡ ಕಪಟಂ ವಿಹಾಯ ಪಾಹಿ ॥೫೦॥

ಪವಿತ್ರವಾದ ಗಂಗೆಯನ್ನು ಧರಿಸಿದವನೂ, ರುದ್ರಾಕ್ಷಧಾರಿಯೂ, ವೃಷಭವಾಹನನೂ ಆದ ಓ ಪರಮೇಶ್ವರ, ನನ್ನನ್ನು ಪಾಲಿಸು. ॥೪೭॥

ಗಜಚರ್ಮವನ್ನು ಧರಿಸಿದವನೂ, ನಾಗಭೂಷಣನೂ, ಭಸ್ಮಧಾರಿಗಳಾದ ಜನಗಳ ಮನದಲ್ಲಿ ನೆಲಸಿರುವವನೂ, ನಿನ್ನ ಲಿಂಗವನ್ನು ಭಕ್ತಿಯಿಂದ ಅರ್ಚಿಸಿದ ನಾರಾಯಣನಿಗೆ ಸುದರ್ಶನಚಕ್ರವನ್ನು ಕರುಣಿಸಿದವನೂ ಆದ ಓ ದೇವನೇ, ಪಾಲಿಸು. ॥೪೮॥

ಅಂಧಕಾಸುರ ತ್ರಿಪುರಾಸುರರನ್ನು ಸಂಹರಿಸಿದವನೂ ಕಾಲ (ಯಮ)ನನ್ನೂ ಸಂಹರಿಸುವ ಮಹಾಕಾಲನೂ, ಸರ್ಪಹಾರನೂ, ವಿಷನೀಲಕಂಠನೂ, ತ್ರಿಶೂಲ ಧಾರಿಯೂ, ದಿಗಂಬರನೂ, ಜಗತ್ತೆಲ್ಲವನ್ನೂ ವ್ಯಾಪಿಸಿರುವವನೂ, ಶುದ್ಧಸ್ಫಟಿಕದಂ ತಿರುವವನೂ ಆದ ಓ ದೇವ ಸಲಹು. ॥೪೯॥

ಗಂಗಾಧರನೂ, ಪ್ರಪಂಚವೆಂಬ ಆಲದ ಮರಕ್ಕೆ ಬೀಜವಾದವನೂ, ಅಮೃತಾಶನರಾದ ದೇವತೆಗಳಿಂದಲೂ ಭೂತಗಣಗಳಿಂದಲೂ ಸ್ತುತಿಸಲ್ಪಡುವವನೂ, ನಟರಾಜನೂ, ದಿಗಂಬರನೂ ಆದ ಓ ದೇವ, ಮಾಯೆಯನ್ನು ಪರಿಹರಿಸಿ ನನ್ನನ್ನು ರಕ್ಷಿಸು.” ॥೫೦॥

॥ ಸ್ಕಂದ ಉವಾಚ ॥

ಇತ್ಯುಕ್ತಸ್ಸ ತದಾ ಸುತೋ ಗುರುವರಾಲ್ಲಬ್ಧ್ವಾ ಸ್ತುತಿಂ ತದ್ವನಂ ।
ಯಾತೋ ಬಿಲ್ವನವಾರುಣೈರ್ದಲಭರೈಸ್ಸಂಫುಲ್ಲಪುಷ್ಪೈಸ್ತದಾ ॥೫೧॥

ಸ್ನಾತ್ವಾ ಸುರುದ್ರವಪುಷಾ ಧೃತಭಸ್ಮಭಾಲೋ
ರುದ್ರಾಕ್ಷಹಾರವಲಯಃ ಶಿವಲಿಂಗದೃಷ್ಟಿಃ ।
ಬಾಲಸ್ತದಾ ಗಿರಿವರಂ ಪ್ರಜಗಾಮ ಹರ್ಷಾತ್
ರಮ್ಯಂ ನವಾರುಣದಲೈರ್ವಿಪಿನೈಶ್ಚ ಬಿಲ್ವೈಃ ॥೫೨॥

ಯುಕ್ತಂ ತ್ರಿಕೂಟಶಿಖರಂ ತದತೀವಮೋದ
ಪ್ರೇಮಾಸ್ಪದಂ ಮುನಿಜನಪ್ರಿಯಮಿಷ್ಟಮೈಶಂ ।
ಸಂಪೂಜಯನ್ ಗಿರಿಶಲಿಂಗಮನೋಜ್ಞಮಿಷ್ಟಂ
ರುದ್ರಾಕ್ಷಭಸ್ಮನಿರತೋ ವಿಷಯೇಷು ಬಾಲಃ ॥೫೩॥

ಇತಿ ಶ್ರೀ ಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ಉಪಮನ್ಯು
ತಪೋವನಪ್ರವೇಶವರ್ಣನಂ ನಾಮ ಏಕಾದಶೋಽಧ್ಯಾಯಃ

ತಂದೆಯು ಹೇಳಿದ ಈ ಸ್ತೋತ್ರವನ್ನು ಕಲಿತುಕೊಂಡು ಉಪಮನ್ಯುವು ಬಿಲ್ವಪತ್ರೆಗಳನ್ನೂ, ಅರಳಿದ ಹೂಗಳನ್ನೂ ತೆಗೆದುಕೊಂಡು ತಪಸ್ಸಿಗಾಗಿ ಕಾಡಿಗೆ ಜಾಗ್ರತೆ ತೆರಳಿದನು. ॥೫೧॥

ಹೀಗೆ ಬಿಲ್ವಪತ್ರಪುಷ್ಪಗಳೊಡನೆ ಕಾಡಿಗೆ ಹೋಗಿ ಅಲ್ಲಿ ನದಿಯಲ್ಲಿ ಸ್ನಾನ ಮಾಡಿ ಭಸ್ಮವನ್ನೂ ರುದ್ರಾಕ್ಷಿಯನ್ನೂ ಧರಿಸಿ ಶಿವಲಿಂಗವನ್ನೇ ನೆಟ್ಟದೃಷ್ಟಿಯಿಂದ ನೋಡುತ್ತಾ, ॥೫೨॥

ಶಿವನಿಗೆ ಪ್ರಿಯವಾದ ಮನೋಹರವಾದ ತ್ರಿಕೂಟಶಿಖರಕ್ಕೆ ಹೋಗಿ ಉಪಮನ್ಯುವು ಮಹಾಮಹಾಮುನಿಗಳು ನೆಲಸಿದ್ದ ಆ ಶಿಖರದಲ್ಲಿ ಭಸ್ಮರುದ್ರಾಕ್ಷಧಾರಿಯಾಗಿ, ಜಿತೇಂದ್ರಿಯನಾಗಿ, ಶಿವಲಿಂಗವನ್ನು ಭಕ್ತಿಯಿಂದ ಅರ್ಚಿಸುತ್ತಾ ತಪಸ್ಸುಮಾಡತೊಡಗಿದನು. ॥೫೩॥

ಇಲ್ಲಿಗೆ ಶ್ರೀಶಿವರಹಸ್ಯದಲ್ಲಿ ಚತುರ್ಥಾಂಶದಲ್ಲಿ ಹನ್ನೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ದ್ವಾದಶೋಽಧ್ಯಾಯಃ

॥ ಶ್ರೀ ಸ್ಕಂದ ಉವಾಚ ॥

ಪಂಚವರ್ಷಾಣಿ ಬಾಲೋಽಸಾವುಪಮನ್ಯುರ್ಮಹಾದ್ಯುತಿಃ ।
ಚಕಾರ ನಿಯಮಂ ಘೋರಂ ಶೋಣಾಕೂಲೇ ಜಪಸ್ತದಾ ॥೧॥

ಭಸ್ಮತ್ರಿಪುಂಡ್ರರುದ್ರಾಕ್ಷಧಾರಕೋ ಮುನಿಸತ್ತಮಃ ।
ವರ್ಷಂ ಪರ್ಣಾಶನೋ ಲಿಂಗಮುಪಮನ್ಯೇಶ್ವರಾಭಿಧಂ ॥೨॥

ಪ್ರತಿಷ್ಠಾಪ್ಯರ್ಚಯತ್ತತ್ರ ತ್ರಿಕಾಲಂ ಬಿಲ್ವಪಲ್ಲವೈಃ ।
ನಿವೇದ್ಯ ಫಲಮೂಲಾನಿ ವನ್ಯಪುಷ್ಪೈರ್ಮಹೇಶ್ವರಂ ॥೩॥

ಹನ್ನೆರಡನೆಯ ಅಧ್ಯಾಯ

ಜೈಗೀಷವ್ಯಮುನಿಯೇ, ಬಾಲಕನಾದಾ ಉಪಮನ್ಯುವು ಮುಂದೆ ಐದು ವರ್ಷಗಳು ಪೂರ್ತಿಯಾಗಿ ಶೋಣಾನದಿಯ ತೀರದಲ್ಲಿ ಶಿವನನ್ನು ಧ್ಯಾನಿಸುತ್ತಾ ಘೋರತಪಸ್ಸನ್ನಾಚರಿಸಿದನು. ॥೧॥

ಭಸ್ಮರುದ್ರಾಕ್ಷಿಗಳನ್ನು ಧರಿಸಿದ್ದು ಆ ಉಪಮನ್ಯುವು ಶೋಣಾತೀರದಲ್ಲಿ ಉಪಮನ್ಯೇಶ್ವರವೆಂಬ ಲಿಂಗವನ್ನು ಪ್ರತಿಷ್ಠಿಸಿ, ಅದನ್ನು ತ್ರಿಕಾಲಗಳಲ್ಲೂ ಬಿಲ್ವಪತ್ರೆ ವನಪುಷ್ಪಗಳಿಂದರ್ಚಿಸುತ್ತಾ ಕಾಡಿನ ಹಣ್ಣುಗೆಡ್ಡೆಗೆಣಸುಗಳನ್ನು ನಿವೇದಿಸುತ್ತಿದ್ದನು. ಆಗ ಬರಿಯ ಎಲೆಗಳನ್ನು ತಿಂದು ಜೀವಿಸುತ್ತಾ ಒಂದು ವರ್ಷದ ವರೆಗೆ ತಪವನ್ನಾಚರಿಸಿದನು. ॥೨-೩॥

ಫಲಾಶನೋ ವರ್ಷಂ ತಸ್ಥೌ ವರ್ಷಂ ವಾತಾಶನೋಽಭವತ್ ।
ರುದ್ರಮಾವರ್ತಯಂಸ್ತತ್ರ ಮುನಿರ್ನಿಶ್ಚಲಮಾನಸಃ ॥೪॥

ತತಾಪ ಪರಮಂ ಘೋರಂ ತಪಃ ಪರಮದುಶ್ಚರಂ ।
ಸುರವಿತ್ರಾಸನಕರಂ ತ್ರಿನೇತ್ರಪದಪೂಜಕಃ ॥೫॥

ತತೋ ವರ್ಷಾಂತಿಮೇ ವರ್ಷೇ ಬಾಲಂ ದೃಷ್ಟ್ವಾ ಮುನೀಶ್ವರಾಃ ।
ಯತಯಶ್ಚ ತದಾ ತೇ ವೈ ವಿಸ್ಮಿತಾಸ್ತತ್ರ ತತ್ಕ್ರಿಯಾಂ ॥೬॥

ಬಾಲಂ ಚಾ ಬಾಲಸಂಕಾಶಂ ತಪಂತಮನಲಂ ಯಥಾ ।
ದೇವಾ ಬ್ರಹ್ಮಾದಯಶ್ಚೈವ ನಾರದಾದ್ಯಾ ಮಹರ್ಷಯಃ ॥೭॥

ಧನ್ಯೋಽಯಮಿತ್ಯವೋಚಂಸ್ತೇ ಮಹಾಮನ್ಯುಪದಾರ್ಚಕಃ ।
ನಾನ್ಯಸ್ಯಾಸ್ಯ ಚಲಂ ಚೇತೋ ಮಹೇಶಪದಪೂಜನೇ ॥೮॥

ಮತ್ತೊಂದುವರ್ಷ ಹಣ್ಣನ್ನು ತಿನ್ನುತ್ತಿದ್ದನು. ಮಗುದೊಂದು ವರ್ಷ ಬರಿಯ ಗಾಳಿಯನ್ನು ಸೇವಿಸುತ್ತಾ ರುದ್ರಸೂಕ್ತವನ್ನು ಜಪಿಸುತ್ತಾ ಸ್ಥಿರಚಿತ್ತತೆಯಿಂದ ತಪಸ್ಸುಮಾಡುತ್ತಿದ್ದನು. ॥೪॥

ಹೀಗೆ ಮಹಾದೇವನನ್ನರ್ಚಿಸುತ್ತಾ ಆ ಉಪಮನ್ಯುವು ದೇವತೆಗಳಿಗೂ ಭಯವನ್ನುಂಟುಮಾಡುವಂತಹ ಘೋರತಪಸ್ಸನ್ನಾಚರಿಸಿದನು. ॥೫॥

ಆಮೇಲೆ ಐದನೆಯ ವರ್ಷದಲ್ಲಿ ಮುನಿಶ್ರೇಷ್ಠರೂ ಯತಿಗಳೂ ಬಂದು ಉಪಮನ್ಯುವಿನ ತೇಜಸ್ಸನ್ನೂ ಘೋರತಪಸ್ಸನ್ನೂ ನೋಡಿ ತುಂಬಾ ಆಶ್ಚರ್ಯಗೊಂಡರು. ॥೬॥

ಬಾಲಕನಾದರೂ ತರುಣನಂತೆ ತಪವನ್ನಾಚರಿಸುತ್ತಲಿರುವ, ಅಗ್ನಿಯಂತೆ ಪ್ರಕಾಶಿಸುತ್ತಲಿರುವ ಆ ಉಪಮನ್ಯುವನ್ನು ನೋಡಿ ಬ್ರಹ್ಮನೇ ಮೊದಲಾದ ದೇವತೆಗಳೂ, ನಾರದನೇ ಮೊದಲಾದ ಮಹರ್ಷಿಗಳೂ, ಆಶ್ಚರ್ಯದಿಂದ ಹೀಗೆ ಆಡಿಕೊಂಡರು. ॥೭॥

ಇಷ್ಟು ಚಿಕ್ಕವಯಸ್ಸಿನಲ್ಲಿಯೇ ಹೀಗೆ ಮಹಾದೇವನನ್ನು ಅರ್ಚಿಸುತ್ತಲಿರುವ ಈತನು ಧನ್ಯನು. ಶಿವಪೂಜೆಯನ್ನು ಬಿಟ್ಟು ಇವನ ಮನಸ್ಸು ಬೇರೆಡೆಯಲ್ಲಿ ಚಲಿಸದಾಗಿದೆ. ॥೮॥

ಭಕ್ತಿರಸ್ಯ ವಿರೂಪಾಕ್ಷೇ ಬಹುಜನ್ಮತಪಃಫಲಂ ।
ಶಿವಭಕ್ತೋಽಯಮಧುನಾ ಸರ್ವದೇವಾಧಿಕಸ್ತ್ವಯಂ ॥೯॥

ಮುನೀನಾಮಪಿ ಮಾನ್ಯೋಽಯಂ ಬಾಲಭಾನುಪ್ರಭೋಽರ್ಭಕಃ ।
ಅರ್ಭಕೋಽಪಿ ಸದಾಽಸ್ಮಾಕಂ ಮಾನ್ಯೋ ಭರ್ಗಪದಾರ್ಚಕಃ ॥೧೦॥

ಸಂಸಾರಭರ್ಜಕೋಽತ್ಯಂತಂ ಪಾಪಸಂಘೈಕಭರ್ಜಕಃ ।
ಏತಸ್ಯ ದರ್ಶನೇನಾಪಿ ಮಹಾಪಾತಕರಾಶಯಃ ॥೧೧॥

ವಿನಾಶಮುಪಗಚ್ಛಂತಿ ಶಾಂಗಸಂಗಾವಲೋಕನೇ ।
ಇತ್ಥಂ ತೇ ಮನ್ವತೇ ದೇವಾ ಉಪಮನ್ಯುಂ ಮಹಾದ್ಯುತಿಂ ॥೧೨॥

ಮುನಯೋ ಮುನಿಪತ್ನ್ಯಶ್ಚ ಸರ್ವೇ ವಿಸ್ಮಾಯಿತಾಂತರಾಃ ।
ತಸ್ಮಿನ್ ತದಾ ತಪ್ಯಮಾನೇ ಉಪಮನ್ಯೌ ಮುನೇಸ್ಸುತೇ ॥೧೩॥

ಅನೇಕ ಜನ್ಮಗಳ ಪುಣ್ಯದಿಂದ ಶಿವನಲ್ಲಿ ಭಕ್ತಿಯುದಯಿಸುವುದು. ಅಂತಹ ಭಕ್ತಿಯು ಈ ಬಾಲಕನಲ್ಲಿ ದೃಢವಾಗಿದೆ. ಪರಮಶಿವಭಕ್ತನಾದೀತನು ಎಲ್ಲ ದೇವತೆಗಳಿಗಿಂತಲೂ ಉತ್ತಮನು, ಇವನ ಸಮರಾರೂ ಇಲ್ಲ. ॥೯॥

ಬಾಲಸೂರ್ಯನಂತಿರುವ ಈ ಬಾಲಕನು ಮುನಿಗಳ ಗೌರವಕ್ಕೂ ಅರ್ಹನಾಗಿರುವನು. ಹುಡುಗನಾಗಿದ್ದರೂ ಈತನು ಶಿವಭಕ್ತನಾದುದರಿಂದ ಸದಾ ನಮ್ಮೆಲ್ಲರ ಗೌರವಕ್ಕೆ ಪಾತ್ರನಾಗಿರುವನು. ಇವನನ್ನು ನಾವೆಲ್ಲರೂ ಗೌರವಿಸಬೇಕು. ॥೧೦॥

ಪರಮೇಶ್ವರನು ಸಂಸಾರಬಂಧನವನ್ನು ಹೋಗಲಾಡಿಸುವನು. ಪಾಪಗಳೆಲ್ಲವನ್ನೂ ನಾಶಮಾಡುವನು. ಅಂತಹ ಪರಮೇಶ್ವರನ ಭಕ್ತನಾದೀತನನ್ನು ದರ್ಶನ ಮಾಡಿದರೆ ಮಹಾಪಾಪಗಳೆಲ್ಲವೂ ನಾಶವಾಗುವುವು. ॥೧೧॥

ಹೀಗೆ ದೇವತೆಗಳು ಆ ಉಪಮನ್ಯುವನ್ನು ಹೊಗಳಿದರು. ಮುನಿಗಳೂ ಮುನಿಪತ್ನಿಯರೂ ಅವನನ್ನು ನೋಡಿ ತುಂಬಾ ಆಶ್ಚರ್ಯಗೊಂಡರು. ॥೧೨॥

ತದ್ಧ್ಯಾನಧಾರಾಸಂಕ್ರಾಂತೋ ಮಹಾದೇವೋ ಮಹೇಶ್ವರಃ ।
ಜಗಾಮ ದರ್ಶನಂ ತಸ್ಯ ಉಮಾಯುಕ್ತೋ ವೃಷಾಧಿಪಃ ॥೧೪॥

ತ್ರಿನೇತ್ರೋ ನೀಲಕಂಠಶ್ಚ ಸರ್ವಾಭರಣಭೂಷಿತಃ ।
ಪೂರ್ಣೇಂದುದ್ಯುತಿಸರ್ವಾಂಗೋ ಗಣಬೃಂದನಿಷೇವಿತಃ ॥೧೫॥

ಸಂಸ್ತುತೋ ದೇವಸಂಘೈಶ್ಚ ಮುನಿಭಿಸ್ತತ್ರ ಶಂಕರಃ ।
ಆಲೋಕ್ಯ ಸ ಮಹಾದೇವಂ ವವಂದೇ ಬಾಲಕೋ ಮುನಿಃ ॥೧೬॥

ಉತ್ಥಾಪ್ಯ ತಂ ಮುನಿವರಂ ಬಾಲಂ ಶೀತಾಂಶುಭೂಷಣಃ ।
ಪಸ್ಪರ್ಶ ಪಾಣಿನಾ ವಕ್ತ್ರಂ ಶಂತಮೇನ ಮಹೇಶ್ವರಃ ॥೧೭॥

ಉಪಮನ್ಯುಃ ಕರಸ್ಪರ್ಶಾನ್ಮಹೇಶಸ್ಯಾಮಿತಾತ್ಮನಃ ।
ಪ್ರಣಮ್ಯ ದೇವಂ ತುಷ್ಟಾತ್ಮಾ ಭಕ್ತ್ಯಾನಮ್ರಶಿರೋಧರಃ ॥೧೮॥

ಪ್ರಬದ್ಧಾಂಜಲಿಹಸ್ತಾಗ್ರೋ ಉಗ್ರದೇವಂ ಕಪರ್ದಿನಂ ॥೧೯॥

ಹೀಗೆ ಆ ಉಪಮನ್ಯುವು ತಪಸ್ಸುಮಾಡುತ್ತಿರಲು ಮಹಾದೇವನು ಪ್ರಸನ್ನನಾಗಿ ಗಿರಿಜೆಯೊಡನೆ ವೃಷಭವನ್ನೇರಿ ಅವನಿಗೆ ಕೂಡಲೆ ಪ್ರತ್ಯಕ್ಷನಾದನು. ॥೧೩-೧೪॥

ಆಗ ಆ ಶಿವನು ಮುಕ್ಕಣ್ಣನೂ ಕಪ್ಪಾದ ಕಂಠವುಳ್ಳವನೂ ಸರ್ವಾಲಂಕಾರಗಳಿಂದ ಶೋಭಿಸುವವನೂ ಆಗಿದ್ದನು. ಅವನ ಶರೀರಕಾಂತಿಯು ಪೂರ್ಣಚಂದ್ರನಂತಿತ್ತು. ಪ್ರಮಥಗಣಗಳೂ ದೇವತೆಗಳೂ ಮುನಿಗಳೂ ಅವನನ್ನು ಸೇವಿಸುತ್ತಿದ್ದರು. ॥೧೫॥

ಇಂತಹ ಮಹಾದೇವನನ್ನು ನೋಡಿ ಉಪಮನ್ಯುವು ಭಕ್ತಿಭಾವದಿಂದ ದೀರ್ಘದಂಡದಂತೆ ನಮಸ್ಕರಿಸಿದನು. ॥೧೬॥

ಚಂದ್ರಶೇಖರನು ಆ ಬಾಲತಪಸ್ವಿಯನ್ನು ಹಿಡಿದೆತ್ತಿ ತನ್ನ ಶೀತಲವಾದ ಕೈಯಿಂದ ಆತನ ಮುಖವನ್ನು ನೇವರಿಸಿ ಆದರಿಸಿದನು. ॥೧೭॥

ಪರಮಾತ್ಮನಾದ ಶಿವನ ಆ ಕರಸ್ಪರ್ಶದಿಂದ ಸ್ಫೂರ್ತಿಗೊಂಡು ಉಪಮನ್ಯುವು ಭಕ್ತಿಯಿಂದ ತಲೆಯನ್ನು ಬಗ್ಗಿಸಿ ನಮಸ್ಕರಿಸಿ, ಸಂತುಷ್ಟಾಂತರಂಗನಾಗಿ, ॥೧೮॥

ಕೈಗಳನ್ನು ಅಂಜಲಿಯಾಗಿ ಜೋಡಿಸಿ ಆ ಮಹಾದೇವನನ್ನು ಹೀಗೆ ಸ್ತುತಿಸಿದನು. ॥೧೯॥

ಜಯ ಶಂಕರ ಪಾರ್ವತೀಪತೇ
ಮೃಡ ಶಂಭೋ ಶಶಿಖಂಡಮಂಡನ ।
ಮದನಾಂತಕ ಭಕ್ತವತ್ಸಲ
ಪ್ರಿಯಕೈಲಾಸ ದಯಾಸುಧಾಂಬುಧೇ ॥೨೦॥

ಸದುಪಾಯಕಥಾಸ್ವಪಂಡಿತೋ
ಹೃದಯೇ ದುಃಖಶರೇಣ ಖಂಡಿತಃ ।
ಶಶಿಖಂಡಶಿಖಂಡಮಂಡನಂ
ಶರಣಂ ಯಾಮಿ ಶರಣ್ಯಮೀಶ್ವರಂ ॥೨೧॥

ಮಹತಃ ಪರಿತಃ ಪ್ರಸರ್ಪತಃ
ತಮಸೋ ದರ್ಶನಭೇದಿನೋ ಭಿದೇ ।
ದಿನನಾಥ ಇವ ಸ್ವತೇಜಸಾ
ಹೃದಯವ್ಯೋಮ್ನಿ ಮನಾಗುದೇಹಿ ನಃ ॥೨೨॥

‘ ಗಿರಿಜೆಯ ಪ್ರಿಯಪತಿಯಾದ, ಚಂದ್ರಕಲೆಯನ್ನು ಶಿರಸ್ಸಿನಲ್ಲಿ ಆಭರಣವಾಗಿ ಧರಿಸಿರುವ, ಸುಖಕರನಾದ, ಮದನನಾಶಕನಾದ, ಭಕ್ತವತ್ಸಲನಾದ, ಕೈಲಾಸ ಗಿರಿಯಲ್ಲಿ ನೆಲಸಿರುವ, ದಯಾಸಾಗರನಾದ ಓ ದೇವನೇ, ಜಯಿಸು. ॥೨೦॥

ಸ್ವಾಮಿ, ಸುಖವನ್ನು ಪಡೆಯುವ ಉಪಾಯವನ್ನು ನಾನು ತಿಳಿಯೆನು. ಹೃದಯದಲ್ಲಿ ದುಃಖವೆಂಬ ಬಾಣವು ಕೊರೆಯುತ್ತಲಿದೆ. ಸಂಸಾರತಾಪವು ಮಿತಿ ಮೀರಿದೆ. ಅದಕ್ಕಾಗಿಯೇ ಶೀತಲನಾದ ಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿರುವ ಪರಶಿವನನ್ನು ಶರಣುಹೊಂದುವೆನು. ॥೨೧॥

ಜ್ಞಾನವೆಲ್ಲವನ್ನೂ ಮುಚ್ಚಿ ಸುತ್ತ ಆವರಿಸುತ್ತಲಿರುವ ಅಜ್ಞಾನವೆಂಬ ಕತ್ತಲೆಯನ್ನು ಸೂರ್ಯನಂತೆ ತನ್ನ ತೇಜಸ್ಸಿನಿಂದ ಕತ್ತರಿಸುವ ಓ ದೇವನೇ, ನನ್ನ ಹೃದಯದಲ್ಲಿ ಸದಾ ಪ್ರಕಾಶದಿಂದ ಬೆಳಗುವವನಾಗು. ॥೨೨॥

ನ ವಯಂ ತವ ಚರ್ಮಚಕ್ಷುಷಾ
ಪದವೀಮಪ್ಯಭಿವೀಕ್ಷಿತುಂ ಕ್ಷಮಾಃ ।
ಕೃಪಯಾಭಯದೇನ ಚಕ್ಷುಷಾ
ಸಕಲೇನೇಶ ವಿಲೋಕಯಾಶು ಮಾಂ ॥೨೩॥

ತ್ವದನುಸ್ಮೃತಿರೇವ ಪಾವನೀ
ಸ್ತುತಿಯುಕ್ತಾ ನ ಹಿ ವಕ್ತುಮೀಶ ಸಾ ।
ಮಧುರಂ ಹಿ ಪಯಃ ಸ್ವಭಾವತೋ
ನನು ಕೀದೃಕ್ ಘೃತಶರ್ಕರಾನ್ವಿತಂ ॥೨೪॥

ಸವಿಷೋಽಪ್ಯಮೃತಾಯತೇ ಭವಾನ್
ಶವಮುಂಡಾಭರಣೋಽಪಿ ಪಾವನಃ ।
ಭವ ಏವ ಭವಾಂತಕಸ್ಸತಾಂ
ಸಮದೃಷ್ಟಿರ್ವಿಷಮೇಕ್ಷಣೋಽಪಿ ಸನ್ ॥೨೫॥

ಓ ಪರಮೇಶ್ವರನೇ, ನಾವು ನಿನ್ನ ಹೆಜ್ಜೆಯನ್ನೂ ಸ್ಥಾನವನ್ನೂ ನಮ್ಮ ಚರ್ಮಚಕ್ಷುಸ್ಸಿನಿಂದ ನೋಡಲಾರೆವು. ಅಭಯಪ್ರದವಾದ ನಿನ್ನ ದೃಷ್ಟಿಯಿಂದ ದಯಾಪೂರ್ವಕವಾಗಿ ನನ್ನನ್ನು ನೋಡು, ಅನುಗ್ರಹಿಸು. ॥೨೩॥

ಓ ದೇವ, ನಿನ್ನ ಸ್ಮರಣವೇ ಪವಿತ್ರವಾದುದು. ಅದು ನಿನ್ನ ಸ್ತುತಿರೂಪವಾದರೆ ಪರಮೋತ್ತಮವೆನಿಸುವುದು. ಸ್ವಭಾವದಿಂದ ಸಿಹಿಯಾದ ಹಾಲು, ತುಪ್ಪ ಸಕ್ಕರೆಗಳೊಡನೆ ಬೆರೆತರೆ ಮತ್ತಷ್ಟು ಮಧುರವಾಗುವುದಲ್ಲವೆ? ॥೨೪॥

ನೀನು (ಕಂಠದಲ್ಲಿ) ವಿಷವುಳ್ಳವನಾದರೂ ಅಮೃತಪ್ರಾಯ (ಸಾವಿಲ್ಲದವ) ನಾಗಿರುವೆ. ಅಶುಚಿಯಾದ ರುಂಡಮಾಲೆಯುಳ್ಳವನಾದರೂ ಅತಿ ಪವಿತ್ರನಾಗಿರುವೆ, ಸಂಸಾರಸ್ವರೂಪನಾಗಿದ್ದೂ ಭಕ್ತರ ಸಂಸಾರಬಂಧನವನ್ನು ಹೋಗಲಾಡಿಸುವೆ. ವಿಷಮ (ಭೇದವುಳ್ಳ ಮತ್ತು ಬೆಸಸಂಖ್ಯೆಯ) ದೃಷ್ಟಿಯುಳ್ಳವನಾದರೂ ಎಲ್ಲರನ್ನೂ ಸಮದೃಷ್ಟಿಯಿಂದ ನೋಡುವೆ. ಅಂದರೆ ವಿಷಮಸಂಖ್ಯೆಯ ಮೂರು ಕಣ್ಣುಗಳುಳ್ಳವನಾಗಿದ್ದು ಸಮದೃಷ್ಟಿಯಿಂದ ನೋಡುತ್ತಿರುವೆ. ॥೨೫॥

ಅಪಿ ಶೂಲಧರೋ ನಿರಾಮಯೋ
ದೃಢವೈರಾಗ್ಯರತೋಽಪಿ ರಾಗವಾನ್ ।
ಅಪಿ ಭೈಕ್ಷ್ಯಚರೋ ಮಹೇಶ್ವರ
ಶ್ಚರಿತಂ ಚಿತ್ರಮಿದಂ ಹಿ ತೇ ಪ್ರಭೋ ॥೨೬॥

ವಿತರತ್ಯಭಿವಾಂಛಿತಂ ನೃಣಾಂ
ಪರಿದೃಷ್ಟಃ ಕಿಲ ಕಲ್ಪಪಾದಪಃ ।
ಹೃದಯೇ ಸ್ಮೃತ ಏಷ ಧೀಮತೇ
ನನು ನೋಽಭೀಷ್ಟಫಲಪ್ರದೋ ಭವಾನ್ ॥೨೭॥

ಸಹಸೈವ ಭುಜಂಗಪಾಶವಾನ್
ವಿನಿಗೃಹ್ಣಾತಿ ನ ಯಾವದಂತಕಃ ।
ಅಭಯಂ ಕುರು ತಾವದಾಶು ಮೇ
ಗತಜೀವಸ್ಯ ಕಿಮೌಷಧೈಃ ಫಲಂ ॥೨೮॥

ಸವಿಷೈರಿವ ಭೀಮಪನ್ನಗೈಃ
ವಿಷಯೈರೇಭಿರಲಂ ಪರಿಕ್ಷತಂ ।
ಅಮೃತೈರಿವ ಸಂಭ್ರಮೇಣ ಮಾ
ಮಭಿಷಿಂಚಾಶು ಕೃಪಾವಲೋಕನೈಃ ॥೨೯॥

ಶೂಲ (ನೋವು)ವುಳ್ಳವನಾದರೂ ರೋಗವಿಲ್ಲದವನಾಗಿರುವೆ. ದೃಢವಾದ ವೈರಾಗ್ಯವುಳ್ಳವನಾದರೂ ರಾಗ(ಭಕ್ತರಲ್ಲಿ ಪ್ರೀತಿ)ವುಳ್ಳವನಾಗಿರುವೆ. ಭಿಕ್ಷೆಯನ್ನೆತ್ತುವ (ತಿರುಕ)ನಾದರೂ ಜಗದೀಶ್ವರನಾಗಿರುವೆ. ನಿನ್ನ ಚರಿತ್ರವು ಆಶ್ಚರ್ಯಕರವು. ||೨೬||

ಕಲ್ಪವೃಕ್ಷವಾದರೂ ತನ್ನನ್ನು ನೋಡಿ ಕೇಳಿದವರಿಗೆ ಮಾತ್ರ ಬೇಕಾದುದನ್ನು ಕೊಡುವುದು ; ಆದರೆ ಹೃದಯದಲ್ಲಿ ಧ್ಯಾನಮಾಡಿದ ಮಾತ್ರದಿಂದಲೇ ನೀನು ಭಕ್ತರಿಗೆ ಇಷ್ಟಾರ್ಥಗಳೆಲ್ಲವನ್ನೂ ಕೊಡುವೆ. ||೨೭||

ಯಮನು ತನ್ನ ಪಾಶದಿಂದ ನನ್ನನ್ನು ಸೆಳೆದೊಯ್ಯುವುದರೊಳಗೆ ಜಾಗ್ರತೆಯಾಗಿ ನೀನು ನನಗಭಯವನ್ನು ಅನುಗ್ರಹಿಸು. ಪ್ರಾಣಹೋದಮೇಲೆ ಔಷಧಗಳಿಂದ ಪ್ರಯೋಜನವೇನು ? ||೨೮||

ಮಹಾವಿಷವುಳ್ಳ ಸರ್ಪಗಳಂತಿರುವ ವಿಷಯ(ಇಂದ್ರಿಯಸುಖ) ವಸ್ತುಗಳಿಂದ

ಮುನಯೋ ಬಹವೋಽಪಿ ಧನ್ಯತಾಂ
ಗಮಿತಾಃ ಸ್ವಾಭಿಮತಾರ್ಥಲಾಭತಃ ।
ಕರುಣಾಕರ ಯೇನ ತೇನ ಮಾ
ಮುಪಸನ್ನಂ ನನು ಪಶ್ಯ ಚಕ್ಷುಷಾ ॥೩೦॥

ಪ್ರಣಮಾಮ್ಯಥ ಯಾಮಿ ಚಾಪರಂ
ಶರಣಂ ಕಂ ಕೃಪಣಾಭಯಪ್ರದಂ ।
ವಿರಹೀವ ವಿಭೋ ಪ್ರಿಯಾಮಯಂ
ಪರಿಪಶ್ಯಾಮಿ ಭವನ್ಮಯಂ ಜಗತ್ ॥೩೧॥

ಭವತಾ ಬಹವೋಽನುಕಂಪಿತಾಃ
ಕಿಮಿತೀಶಾನ ನ ಮಾನುಕಂಪಸೇ ।
ದಧತಾ ಕಿಮು ಮಂದರಾಚಲಂ
ಪರಮಾಣುಃ ಕಮಠೇನ ದುರ್ಧರಃ ॥೩೨॥

ನಾನು ಕಚ್ಚಲ್ಪಟ್ಟು ಸಾಯುತ್ತಿರುವೆನು. ಇಂತಹ ನನ್ನನ್ನು ನಿನ್ನ ಅಮೃತ ದೃಷ್ಟಿಯಿಂದ ಜಾಗ್ರತೆಯಾಗಿ ಬದುಕಿಸು. ||೨೯||

ಯಾವುದರಿಂದ ಅನೇಕ ಮುನಿಗಳು ತಮ್ಮ ಇಷ್ಟಾರ್ಥಗಳನ್ನು ಪಡೆದು ಧನ್ಯರಾದರೋ ಅಂತಹ ನಿನ್ನ ಕರುಣಾದೃಷ್ಟಿಯಿಂದ ನನ್ನನ್ನು ನೋಡು. ||೩೦||

ಓ ದೇವ, ನಿನ್ನನ್ನು ಬಿಟ್ಟು ಇನ್ನಾರನ್ನು ನಮಸ್ಕರಿಸಲಿ? ಯಾರ ಮರೆಹೊಗಲಿ, ಯಾರು ನಿನ್ನ ಹೊರತು ದೀನರಕ್ಷಕರು? ಯಾರೂ ಇಲ್ಲ, ವಿರಹಿಗೆ ಜಗತ್ತೆಲ್ಲವೂ ತನ್ನ ಪ್ರಿಯಾಮಯವಾಗಿ (ಕಾಂತೆಯ ಸ್ವರೂಪವಾಗಿ) ತೋರುವಂತೆ ನನಗೆ ಜಗತ್ತೆಲ್ಲವೂ ನಿನ್ನ ಸ್ವರೂಪವಾಗಿಯೇ ಕಾಣಿಸುತ್ತಿರುವುದು. ನನಗೆ ಎಲ್ಲೆಲ್ಲಿಯೂ ನೀನೇ ಕಾಣುತ್ತಿರುವೆ. ನಿನ್ನ ಹೊರತು ಇನ್ನಾರೂ ಕಾಣಿಸುತ್ತಿಲ್ಲ. ||೩೧||

ಅನೇಕ ಜನರನ್ನು ನೀನು ರಕ್ಷಿಸಿರುವೆ, ನನ್ನೊಬ್ಬನನ್ನುದ್ಧರಿಸಲಾರೆಯಾ? ಮಂದರ ಗಿರಿಯನ್ನೇ ಹೊತ್ತಿದ್ದ ಆದಿಕೂರ್ಮನಿಗೆ ಒಂದು ಪರಮಾಣುವನ್ನು (ಮಣ್ಣಿನಚಿಕ್ಕಭಾಗವನ್ನು) ಹೊರುವುದು ಕಷ್ಟವೆ? ||೩೨||

ಅಶುಚಿಂ ಯದಿ ಮಾನುಮನ್ಯಸೇ
ಕಿಮಿದಂ ಮೂರ್ಧ್ನಿ ಕಪಾಲದಾಮ ತೇ ।
ಅಥ ಶಾಠ್ಯಮಸಾಧುಸಂಗತಂ
ವಿಷಲಕ್ಷ್ಮಾಸಿ ನ ಕಿಂ ದ್ವಿಜಿಹ್ವಧೃಕ್ ॥೩೩॥

ವಿಲುಠಾಮ್ಯವನೌ ಕಿಮಾಕುಲಃ
ಕಿಮುರೋ ಹನ್ಮಿ ಶಿರೋಽಭಿಹನ್ಮಿ ವಾ ।
ಕಿಮು ರೋದಿಮಿ ರಾರಟೀಮಿ ವಾ
ಕೃಪಣಂ ಮಾಂ ನ ಯದೀಕ್ಷಸೇ ಪ್ರಭೋ ॥೩೪॥

ಶಿವ ಸರ್ವಗ ಶರ್ವ ಸರ್ವತಃ
ಪ್ರಣತೋ ದೇವ ದಯಾಂ ಕುರುಷ್ವ ಮೇ ।
ನಮ ಈಶ್ವರ ನಾಥ ದಿಕ್ಪತೇ
ಪುನರೇವೇಶ ನಮೋ ನಮೋಽಸ್ತು ತೇ ॥೩೫॥

ಅಪವಿತ್ರನೆಂದು ನನ್ನನ್ನು ನೀನು ಮನ್ನಿಸುವುದಿಲ್ಲವೆ? ಆದರೆ ಇದೇನು? ಅಶುಚಿಯಾದ ಕಪಾಲಮಾಲೆಯೇ ನಿನ್ನ ಕೊರಳಲ್ಲಿರುವುದಲ್ಲ! ಅಥವಾ ದುಷ್ಟ ಅಸಜ್ಜನರೊಡನೆ ಸೇರಿದವನೆಂದು ದೃಷ್ಟಿಸುವುದಿಲ್ಲವೆ? ನನ್ನಂತೆ ನೀನೂ ವಿಷವುಳ್ಳ ದುಷ್ಟನು, ಎರಡುನಾಲಗೆಯ ಸರ್ಪದ ದುಷ್ಟಸಹವಾಸವುಳ್ಳವನು. ||೩೩||

ದೀನನಾದ ನನ್ನನ್ನು ನೀನು ದಯೆಯಿಂದ ನೋಡದಿದ್ದರೆ ನಾನೇನು ಮಾಡಲಿ? ನೆಲದಲ್ಲಿ ಬಿದ್ದು ಹೊರಳಾಡಲೆ? ಎದೆಯನ್ನು ತಿವಿದುಕೊಳ್ಳಲೆ? ತಲೆಯನ್ನು ಚಚ್ಚಿಕೊಳ್ಳಲೆ? ಅಳಲೆ? ಪ್ರಲಾಪಿಸಲೇ? ಹೇಳು. ||೩೪||

ಸರ್ವಾಂತರ್ಯಾಮಿಯಾದ ಮಂಗಳರೂಪನಾದ ಓ ಪರಮೇಶ್ವರನೇ, ನಿನಗೆ ಸರ್ವವಿಧದಿಂದಲೂ ನಮಸ್ಕಾರವು. ನನ್ನಲ್ಲಿ ದಯೆಯುಳ್ಳವನಾಗು. ಓ ಈಶ್ವರ, ಸ್ವಾಮಿ, ದೇವ, ನಿನಗೆ ನಮಸ್ಕಾರವು, ಪುನಃ ಪುನಃ ನಮಸ್ಕಾರವು. ||೩೫||

ಕ್ವ ದೃಶಂ ವಿದಧಾಮಿ ಕಿಂ ಕರೋ
ಮ್ಯಧಿತಿಷ್ಠಾಮಿ ಕಥಂ ಭಯಾಕುಲಃ ।
ಕ್ವನು ತಿಷ್ಠಸಿ ರಕ್ಷ ರಕ್ಷ ಮಾಂ
ಅಯಿಶಂಭೋ ಶರಣಾಗತೋಽಸ್ಮಿ ತೇ ॥೩೬॥

ಶರಣಂ ತರುಣೇಂದುಶೇಖರಃ
ಶರಣಂ ಮೇ ಗಿರಿರಾಜಕನ್ಯಕಾ ।
ಶರಣಂ ಪುನರೇವ ತಾವುಭೌ
ಶರಣಂ ನಾನ್ಯದುಪೈಮಿ ದೈವತಂ ॥೩೭॥

ಪರಲೋಕಭಯಾತ್ ಪ್ರತಿಕ್ಷಣಂ ಮೇ
ಹೃದಯಂ ಮುಹ್ಯತಿ ಮುಗ್ಧಚಂದ್ರಮೌಳೇ ।
ಸದಯಂ ಪರಿಗೃಹ್ಯ ಸಾಧುಬಂಧೋ
ಕುರು ಮಾಂ ನಿರ್ಭಯಮರ್ಭಕಂ ತ್ವದೀಯಂ ॥೩೮॥

ಹರಹರ ಭವ ಭೀಮ ಭರ್ಗ ಶಂಭೋ
ತ್ರಿನಯನ ರುದ್ರ ಮಹೇಶ ವಿಶ್ವನಾಥ ।
ಹರಹರ ದುರಿತಂ ತ್ರಿಶೂಲಪಾಣೇ
ಶಿವಶಿವ ಶಂಕರ ಕಿಂಕರಸ್ತವಾಹಂ ॥೩೯॥

ಎಲ್ಲಿ ನೋಡಲಿ? ಏನುಮಾಡಲಿ? ಭಯಗೊಂಡ ನಾನೆಲ್ಲಿ ಇರಲಿ? ಓ ದೇವ ಎಲ್ಲಿರುವೆ? ಶರಣಾಗತನಾದ ನನ್ನನ್ನು ರಕ್ಷಿಸು, ಕಾಪಾಡು. ॥೩೬॥

ಬಾಲಚಂದ್ರನನ್ನು ಧರಿಸಿದ ಶಿವನೇ, ಬಾಲಕನಾದ ನನಗೆ ನೀನೇ ರಕ್ಷಕನು, ಪಾರ್ವತೀದೇವಿಯು ರಕ್ಷಕಳು, ಪುನಃ ಆ ಪಾರ್ವತೀಪರಮೇಶ್ವರರೇ ನನಗೆ ಶರಣು, ಇನ್ನಾವ ದೇವರನ್ನೂ ನಾನು ಮೊರೆಹೋಗಲಾರೆನು. ॥೩೭॥

ಪರಲೋಕ (ನರಕ)ದ ಭಯದಿಂದ ನನ್ನ ಮನವು ಪ್ರತಿಕ್ಷಣವೂ ಮೂಢವಾಗುತ್ತಲಿರುವುದು. ಓ ಚಂದ್ರಶೇಖರ, ಸಜ್ಜನರ ಬಂಧುವಾದ ನೀನು ನನ್ನನ್ನು ದಯೆಯಿಂದ ಪರಿಗ್ರಹಿಸಿ ಭಯರಹಿತನನ್ನಾಗಿ ಮಾಡು. ॥೩೮॥

ಪಾಪನಾಶಕನೂ, ಜಗನ್ಮಯನೂ, ಪಾಪಿಗಳಿಗೆ ಭಯಂಕರನೂ, ಆದ ಓ ಶಂಭು, ಓ ಮುಕ್ಕಣ್ಣ, ಓ ಪ್ರಳಯರುದ್ರ, ಓ ಮಹೇಶ್ವರ, ಓ ವಿಶ್ವನಾಥ,

ಯಥಾ ಮೃಕಂಡೋಸ್ತನಯಂ ಯಮಾರೇ
ಯಥೈವ ಪಾಂಡೋಸ್ತನಯಂ ಮಖಾರೇ ।
ಯಥಾ ಶಿಲಾದಸ್ಯ ಸುತಂ ಕೃಪಾಬ್ಧೇ
ತಥೈವ ಮಾಂ ಪಾಹಿ ಪಿನಾಕಪಾಣೇ ॥೪೦॥

ಉಪಮನ್ಯುಕೃತಂ ಸ್ತೋತ್ರಂ ಯಃ ಪಠೇಚ್ಛಿವಸನ್ನಿಧೌ ।
ಶಿವಲೋಕಮವಾಪ್ನೋತಿ ಶಿವೇನ ಸಹ ಮೋದತೇ ॥೪೧॥

ತತ್ಸ್ತುತ್ಯಾ ತೋಷಿತಶ್ಶಂಭುಸ್ತಂ ಪ್ರಾಹ ವಿನಯಾನತಂ ।
ದೇವ್ಯಾಃ ಪಶ್ಯನ್ ಮುಖಾಂಭೋಜಂ ಗಣಾನಾಂ ಪಶ್ಯತಾಂ ತದಾ ॥೪೨॥

॥ ಶಿವ ಉವಾಚ ॥

ವತ್ಸೋಪಮನ್ಯೋ ಕಾಮಂ ತೇ ವೃಣು ತಂ ಪೂರಯಾಮ್ಯಹಂ ।
ಗಾಣಾಪತ್ಯಂ ಪ್ರದತ್ತಂ ತೇ ವಿದ್ಯಾಸ್ತತ್ರ ಚತುರ್ದಶ ॥೪೩॥

ಓ ತ್ರಿಶೂಲಧಾರಿ, ಓ ಶಂಕರ, ನಾನು ನಿನ್ನ ಕಿಂಕರ (ಸೇವಕ)ನು, ನನ್ನ ಪಾಪವನ್ನು ಹೋಗಲಾಡಿಸು. ॥೩೯॥

ಮೃಕಂಡುವಿನ ಮಗನಾದ ಮಾರ್ಕಂಡೇಯನನ್ನು ರಕ್ಷಿಸಿದಂತೆಯೂ, ಪಾಂಡುವಿನ ಮಗನಾದ ಭೃಂಗಿಯನ್ನು ಸಲಹಿದಂತೆಯೂ, ಶಿಲಾದನ ಮಗನಾದ ನಂದಿಯನ್ನು ಅನುಗ್ರಹಿಸಿದಂತೆಯೂ ಓ ದೇವ, ನನ್ನನ್ನು ರಕ್ಷಿಸು.'' ॥೪೦॥

ಹೀಗೆ ಉಪಮನ್ಯುವು ಮಾಡಿದ ಈ ಶಿವಸ್ತೋತ್ರವನ್ನು ಶಿವಲಿಂಗದ ಎದುರಿಗೆ ಭಕ್ತಿಯಿಂದ ಹೇಳುವವನು ಶಿವಲೋಕವನ್ನು ಪಡೆಯುವನು, ಮತ್ತು ಶಿವನೊಡನೆ ವಿಹರಿಸುವನು. ॥೪೧॥

ಉಪಮನ್ಯುವಿನ ಈ ಸ್ತುತಿಗೆ ಮೆಚ್ಚಿ ಶಿವನು ಪಾರ್ವತೀದೇವಿಯ ಮುಖವನ್ನು ನೋಡುತ್ತಾ ಗಣಗಳೆಲ್ಲವೂ ನೋಡುತ್ತಿರಲು ಹೀಗೆ ನುಡಿದನು. ॥೪೨॥

'' ಎಲೈ ವತ್ಸ, ಉಪಮನ್ಯು, ಬೇಕಾದ ವರವನ್ನು ಕೇಳು, ಕೊಡುವೆನು. ಈ ಮೊದಲೇ ನಿನಗೆ ನನ್ನ ಗಣಗಳ ನಾಯಕತ್ವವನ್ನು ಕೊಟ್ಟಿರುವೆನು, ಹದಿನಾಲ್ಕು ವಿದ್ಯೆಗಳೂ ನಿನಗೆ ತಾವಾಗಿ ಸ್ಫುರಿಸಲಿ. ॥೪೩॥

ಪ್ರತಿಭಾಂತ್ವದ್ಯ ತೇ ವೇದಾ ಸಾಂಗೋಪಾಂಗಾಃ ಶಿವಾಗಮಾಃ ।
ಶೈವಾಚಾರ್ಯೋ ಭವಾನಸ್ತು ಪಾರ್ವತ್ಯಾಸ್ತನಯೋಽಪ್ಯಸಿ ॥೪೪॥

ಇತ್ಯುಕ್ತಶ್ಶಂಭುನಾ ತತ್ರ ವಿಪ್ರೋವಾಚ ಮಹೇಶ್ವರಂ ॥೪೫॥

॥ ಉಪಮನ್ಯುರುವಾಚ ॥

ಮಾತ್ರಾ ಪಿತ್ರಾ ಮಹಾದೇವ ಇಹ ಭೋಕ್ತುಂ ಸದಾಶಿವ ।
ಕ್ಷೀರಾನ್ನಂ ಪರಮಂ ಮೇದ್ಯ ಭಕ್ತಿಂ ತ್ವತ್ಪಾದಯೋರ್ದೃಢಾಂ ॥೪೬॥

ಯಾಚೇಽಹಂ ದೇವದೇವೇಶ ಇತ್ಯುಕ್ತಂ ತಸ್ಯ ಶಂಕರಃ ।
ದೇವೀಂ ವೀಕ್ಷ್ಯ ತಥೇತ್ಯಾಹ ಮಹಾದೇವೋಽಂಬಿಕಾಯುತಃ ॥೪೭॥

ತಂ ಪ್ರಾಹ ಪಶ್ಯತಾಂ ತತ್ರ ಮುನೀನಾಂ ಭಾವಿತಾತ್ಮನಾಂ ॥೪೮॥

॥ ಈಶ್ವರ ಉವಾಚ ॥

ಕ್ಷೀರೋದಾರ್ಣವ ಏಷ ತೇ ಸುವಿಹಿತಸ್ತ್ವಂ ಶೈವವರ್ಯಾಗ್ರಣೀ
ತ್ವಂ ವಿಷ್ಣ್ವಾದಿಗುರುರ್ಭವಸ್ಯಭಿಹಿತೋ ಮಲ್ಲಿಂಗಪೂಜಾದರಃ ।

ವೇದಗಳೂ ವೇದಾಂಗಗಳೂ ಶೈವಾಗಮಗಳೂ ನಿನಗೆ ತಾವಾಗಿ ಸ್ಫುರಿಸಲಿ. ನೀನು ಶಾಂಭವರಿಗೆ ಗುರುವಾಗು, ಪಾರ್ವತಿಯು ಪ್ರೀತಿಯ ಪುತ್ರನಂತೆ ನೀನಾಗುವೆ." ॥೪೪॥

ಶಿವನ ಈ ಮಾತನ್ನು ಕೇಳಿ ಉಪಮನ್ಯುವು ಹೀಗೆಂದನು. ॥೪೫॥

"ಓ ದೇವ, ಈ ಲೋಕದಲ್ಲಿ ನಾನೂ ನನ್ನ ತಂದೆತಾಯಿಗಳೂ ಉತ್ತಮವಾದ ಕ್ಷೀರಾನ್ನವನ್ನು ತಿನ್ನುವಂತೆ ಅನುಗ್ರಹಿಸು ಮತ್ತು ನಮಗೆ ನಿನ್ನಲ್ಲಿ ದೃಢವಾದ ಭಕ್ತಿಯು ಇರುವಂತೆ ಅನುಗ್ರಹಿಸು." ॥೪೬॥

ಉಪಮನ್ಯುವಿನ ಈ ಮಾತನ್ನು ಕೇಳಿ ಶಿವನು ದೇವಿಯ ಮುಖವನ್ನು ನೋಡಿ ಹಾಗೆಯೇ ಆಗಲೆಂದು ಅನುಗ್ರಹಿಸಿದನು ಮತ್ತು ಮಹಾತ್ಮರಾದ ಮುನಿಗಳ ಎದುರಿನಲ್ಲಿ ಆ ಬಾಲಮುನಿಯನ್ನು ಕುರಿತು ಹೀಗೆ ಹೇಳಿದನು. ॥೪೭-೪೮॥

"ಎಲೈ ಮಗು, ಹಾಲುಕುಡಿಯಲೋಸುಗ ಕ್ಷೀರಸಮುದ್ರವನ್ನೇ ನಿನಗೆ ಕೊಡುವೆನು. ನನ್ನ ಲಿಂಗವನ್ನು ಭಕ್ತಿಯಿಂದ ಅರ್ಚಿಸುವ ನೀನು ವಿಷ್ಣು ಮೊದ

ತ್ವಂ ನಿತ್ಯೋಽಸಿ ಸದಾ ಮಮಾತ್ಮಜವರೋಽಪರ್ಣಾಪ್ರಿಯಃ ಸ್ಕಂದವತ್
ತ್ವತ್ಸ್ತುತ್ಯಾ ನಿತರಾಮಭೀಷ್ಟಫಲದೋ ಯಃಸ್ತೌತಿ ಮಾಂ ಲಿಂಗಗಂ ॥೪೯॥

ತಸ್ಮೈ ತಾಂ ನಿತರಾಮಿ ಮುಕ್ತಿಮಖಿಲಾಂ ಭುಕ್ತಿಂ ಸದಾ ಮಾನುಷಾ ।
ನಂದಾನ್ ಮೋದಪರಂಪರಾಭಿರಿಹ ಸೋ ವರ್ಧೇತ ಮತ್ಪೂಜಕಃ ॥೫೦॥

ಪ್ರಾಲೇಯಾಚಲಸನ್ನಿಭಾನ್ನಗಿರಯೋ ಭಕ್ಷ್ಯೈಶ್ಚ ಭೋಜ್ಯೈರ್ಯುತಾಃ
ಪ್ರಾಜ್ಯಾಜ್ಯಾದಿಪರಿಪ್ಲುತಾಃ ಸುಮಧುರಂ ಕ್ಷೀರೋದಧಿಂ ತ್ವಂ ಪಿಬ ।
ಪಶ್ಯಾನ್ನಾಧಿಪಪೂಜನೇನ ವಿಹಿತಾ ವಾಂಛಾಧಿಕಾಸ್ತ್ವತ್ಪುರೋ
ಭಕ್ತೈರ್ನಿರ್ಮಿತೈಸ್ತು ಸುಜಗ್ಧಿರಪ್ಯನುದಿನಂ ನೈವೇದ್ಯಶೇಷೇಣ ಮೇ ॥೫೧॥

ಇತ್ಯುಕ್ತ್ವಾ ಪುರಸೂದನಃ ಪ್ರಮಥಪಸ್ತತ್ರಾಗಮಚ್ಚಾಂಬಯಾ
ಕೈಲಾಸಂ ಮುನಿನಂದನೋಽಪಿ ಸಹಸಾ ದೇವೈಸ್ತದಾ ಪೂಜಿತಃ ।
ಪಿತ್ರಾ ಮಾತ್ರನುಮೋದಿತಃ ಸ ಚ ಗಿರಂ ದೇವಪ್ರಸಾದೋದ್ಭವಂ
ಜ್ಞಾನಂ ಸರ್ವಸುಪೂಜ್ಯತಾನ್ನಕಲಿತಕ್ಷೀರಾಂಬುಧಿಂ ಚಾಪಿಬತ್ ॥೫೨॥

ಲಾದವರಿಗೆ ಗುರುವಾಗುವೆ. ನನ್ನ ಭಕ್ತರಲ್ಲಿ ನೀನು ಉತ್ತಮನು. ನೀನು ಮರಣವಿಲ್ಲದವನೂ, ನನಗೆ ಮತ್ತು ಪಾರ್ವತಿಗೆ ಸ್ಕಂದನಂತೆ ಪ್ರಿಯಪುತ್ರನೂ ಆಗುವೆ. ನೀನು ಮಾಡಿದ ಈ ಸ್ತುತಿಯಿಂದ ನನ್ನನ್ನು ಯಾರು ಸ್ತುತಿಸುವರೋ ಅವರಿಗೂ ಇಹದಲ್ಲಿ ಉತ್ತಮವಾದ ಭೋಗಗಳನ್ನೂ ಪರದಲ್ಲಿ ಮುಕ್ತಿಯನ್ನೂ ಅನುಗ್ರಹಿಸುವೆನು. ॥೪೯-೫೦॥

ಹಿಮಾಲಯದಂತಿರುವ ಅನ್ನದ ಬೆಟ್ಟಗಳು ನಾನಾಭಕ್ಷ್ಯಭೋಜ್ಯಗಳೊಡಗೂಡಿ ತುಪ್ಪದೊಡನೆ ನಿನಗೆ ಲಭಿಸುವುವು. ಮಧುರವಾದ ಕ್ಷೀರಸಮುದ್ರವನ್ನು ಕುಡಿ. ನೋಡು, ಅನ್ನಾಧಿಪನಾದ ನನ್ನನ್ನು ಪೂಜಿಸಿದುದರಿಂದ ನಿನಗೆ ಎಂತಹ ಇಷ್ಟಾರ್ಥವು ಲಭಿಸಿತು. ಇನ್ನುಮುಂದೆ ನನ್ನ ಭಕ್ತರು ನಿವೇದನಮಾಡಿದ ಅನ್ನದಿಂದ ನಾನೂ ಭೋಜನವನ್ನು ಮಾಡುವೆನು. ॥೫೧॥

ಹೀಗೆ ವರಗಳನ್ನು ಕೊಟ್ಟು ಪರಮೇಶ್ವರನು ಪಾರ್ವತಿಯೊಡನೆ ಕೈಲಾಸಕ್ಕೆ ತೆರಳಿದನು. ಉಪಮನ್ಯುವೂ ಸಹ ದೇವತೆಗಳ ಸ್ತುತಿಗೆ ಪಾತ್ರನಾಗಿ ಮನೆಗೆ ಬಂದು

ಇತಿ ಶ್ರೀಶಿವರಹಸ್ಯೆ ಶಿವಚತುರ್ಥಾಂಶೇ ಉಪಮನ್ಯುತಪೋವರ್ಣನಂ ತತ್ಕೃತಸ್ತೋತ್ರಶಿವಪ್ರಸಾದಗಾಣಾಪತ್ಯಕ್ಷೀರಾರ್ಣವಾದಿಪ್ರಾಪ್ತಿವರ್ಣನಂ ನಾಮ ದ್ವಾದಶೋಽಧ್ಯಾಯಃ

ತಂದೆತಾಯಿಗಳಿಗೆರಗಿದನು. ಮಹಾದೇವನ ವರದಿಂದ ಅವನಿಗೆ ಉತ್ತಮವಾಕ್ಯೂ ಜ್ಞಾನವೂ, ಪೂಜ್ಯತೆಯೂ, ಕುಡಿಯುವುದಕ್ಕೆ ಕ್ಷೀರಸಾಗರವೂ ಲಭಿಸಿದುವು. ಎಂದು ಷಣ್ಮುಖನು ಜೈಗೀಷವ್ಯನಿಗೆ ಉಪಮನ್ಯುವಿನ ಇತಿಹಾಸವನ್ನು ಸುರಿದನು. ||೫೨||

ಇಲ್ಲಿಗೆ ಶ್ರೀಶಿವರಹಸ್ಯದಲ್ಲಿ ಚತುರ್ಥಾಂಶದಲ್ಲಿ ಹನ್ನೆರಡನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ತ್ರಯೋದಶೋಽಧ್ಯಾಯಃ

|| ಜೈಗೀಷವ್ಯ ಉವಾಚ ||

ಮೃಕಂಡುತನಯಃ ಸ್ಕಂದ ಕಥಂ ಜಿಗ್ಯೇಂತಕಂ ಪುರಾ ।
ಮಹಾದೇವಪ್ರಸಾದೇನ ತನ್ಮೇ ಕಥಯ ಸಾಂಪ್ರತಂ ॥೧॥

ನ ತೃಪ್ತಿರ್ಭಗವದ್ಭಕ್ತಚರಿತಂ ಶೃಣ್ವತೋ ಮಮ ।
ಭಾವಾ ಏವ ಮಹೋದಾರಾ ಭವಪಾದಾರ್ಚನೇ ರತಾಃ ॥೨॥

ಅಪಾರಂ ಸಂತರಂತ್ಯೇವ ಭವಂ ಭಾವೇನ ಶಾಂಕರಾಃ ॥೩॥

|| ಸೂತ ಉವಾಚ ||

ಜೈಗೀಷವ್ಯವಚಃ ಶ್ರುತ್ವಾ ಷಣ್ಮುಖಸ್ತಾರಕಾಂತಕಃ ।
ಸಂಸಾರತಾರಕಂ ಭಕ್ತಚರಿತಂ ಪ್ರಾವದತ್ತದಾ ॥೪॥

ಹದಿಮೂರನೆಯ ಅಧ್ಯಾಯ

ಓ ಸ್ಕಂದಸ್ವಾಮಿ, ಮಾರ್ಕಂಡೇಯನು ಹಿಂದೆ ಶಿವನ ಅನುಗ್ರಹದಿಂದ ಯಮನನ್ನು ಜಯಿಸಿ ಹೇಗೆ ಚಿರಂಜೀವಿಯಾದನು ? ಈ ಕಥೆಯನ್ನು ಹೇಳು. ||೧||

ಶಿವಭಕ್ತರ ಚರಿತ್ರೆಯನ್ನು ಕೇಳಿದಷ್ಟೂ ನನಗೆ ತೃಪ್ತಿಯಿಲ್ಲ. ಶಿವನನ್ನರ್ಚಿಸುವ ಭಕ್ತರು ಶಿವನ ಸ್ವರೂಪರೇ ಅಲ್ಲವೆ! ಭಕ್ತಿಯಿಂದ ಶಿವನನ್ನರ್ಚಿಸುವ ಆ ಭಕ್ತರು ದಾಟಲಸಾಧ್ಯವಾದ ಸಂಸಾರವನ್ನು ದಾಟುವರು. ||೨-೩||

ಎಂದ ಜೈಗೀಷವ್ಯನ ಈ ಮಾತನ್ನು ಕೇಳಿ ತಾರಕಾಸುರರ ವೈರಿಯಾದ ಷಣ್ಮುಖನು ಸಂಸಾರ ದುಃಖವನ್ನು ಹೋಗಲಾಡಿಸುವ ಶಿವಭಕ್ತರ ಚರಿತವನ್ನು ಮತ್ತೆ ಹೀಗೆ ಹೇಳಿದನು. ||೪||

॥ ಸ್ಕಂದ ಉವಾಚ ॥

ಶೃಣು ತ್ವಂ ಶಾಂಭವಶ್ರೇಷ್ಠ ಶಿಪಿವಿಷ್ಟಾರ್ಚಕಸ್ಯ ಚ ।
ಮೃಕಂಡುತನಯಸ್ಯೇದಂ ಚರಿತಂ ಪಾಪನಾಶನಂ ॥೫॥

ಆಸೀತ್ಪ್ರಜಾಪತಿಸುತೋ ಮೃಕಂಡುರ್ಮಾನಸೋ ಮುನಿಃ ।
ಕಲಂಜರೇ ಗಿರೌ ತತ್ರ ನಾನಾಮುನಿಜನಾಶ್ರಯೇ ॥೬॥

ವನಸ್ಪತಿಮಹಾವಲ್ಲೀವೇಷ್ಟಿತದ್ರುಮಸಂಕುಲೇ ।
ವಸಂತಪ್ರಮುಖಾನೇಕೈಃ ಋತುಭಿಃ ಪರಿಸೇವಿತೇ ॥೭॥

ಉತ್ಫುಲ್ಲಹಲ್ಲಕಲಸತ್ಕುಮುದೋತ್ಪಲಸಂಯುತೇ ।
ನವವೃಕ್ಷೇ ತಥಾ ಸಾಲತಮಾಲಾಮಲಕಾವೃತೇ ॥೮॥

ಮಯೂರಹಂಸಚಕ್ರಾಂಗಯುತಕಾಸಾರಸಂಯುತೇ ।
ಮೃಗೇಂದ್ರೈರ್ವಾರಣೇಂದ್ರೈಶ್ಚ ಸೃಮರೈಶ್ಚಮರೈಸ್ತಥಾ ॥೯॥

ರಸಾಲಕೃತಮಾಲಾದ್ಯೈರ್ಭಲ್ಲಭಲ್ಲಾತಕೈರ್ಯುತೇ ।
ನೀಪಕೇತಕಸಿಂದೂರಕದಂಬ ಬಕುಲಾವೃತೇ ॥೧೦॥

"ಎಲೈ ಶಿವಭಕ್ತಾಗ್ರೇಸರನಾದ ಜೈಗೀಷವ್ಯನೇ, ಶಿವಭಕ್ತನಾದ ಮಾರ್ಕಂಡೇಯನ ಪಾಪನಾಶಕವಾದ ಚರಿತವನ್ನು ಹೇಳು. ||೫||

ಬ್ರಹ್ಮನ ಮಾನಸಪುತ್ರನಾದ ಮೃಕಂಡುವೆಂಬ ಮುನಿಯು ಹಿಂದೆ ಮುನಿಗಳಿಗೆ ಆಶ್ರಯವಾದ ಕಾಲಂಜರಗಿರಿಯಲ್ಲಿ ವಾಸವಾಗಿದ್ದನು. ||೬||

ಆ ಗಿರಿಯಲ್ಲಿ ಮನೋಹರವಾದ ಎಳಲತೆಗಳಿಂದ ಕೂಡಿದ ಆಲ, ಹೊಂಗೆ, ನೆಲ್ಲಿ ಮುಂತಾದ ಅನೇಕ ವೃಕ್ಷಗಳು ಸದಾ ಚಿಗುರಿರುತ್ತಿದ್ದುವು. ವಸಂತ ಮೊದಲಾದ ಋತುಗಳು ಅಲ್ಲಿ ಸದಾ ನೆಲಸಿರುತ್ತಿದ್ದುವು. ಬಿಳಿನೈದಿಲೆ, ತಾವರೆಗಳು ಅಲ್ಲಿ ಸದಾ ಅರಳಿ ಶೋಭಿಸುತ್ತಿದ್ದುವು. ||೭-೮||

ಮನೋಹರವಾದ ಸರೋವರಗಳಲ್ಲಿದ್ದು ಅವುಗಳ ದಡದಲ್ಲಿ ನವಿಲು, ಹಂಸ, ಚಕ್ರವಾಕ ಮೊದಲಾದ ಪಕ್ಷಿಗಳು ವಿಹರಿಸುತ್ತಿದ್ದುವು. ||೯||

ಮಾವು, ಕೃತಮಾಲ, ಭಲ್ಲ, ಭಲ್ಲಾತಕ ಮೊದಲಾದ ವೃಕ್ಷಗಳೂ ಸರ್ಜವೃಕ್ಷ, ಕೇದಗೆ, ಸಿಂದೂರ, ಕದಂಬ, ಬಕುಲ ಮೊದಲಾದ ಮರಗಳೂ

ಶಾಲ್ಮಲೀಶ್ರೀಫಲೋಪೇತೇ ನಾನಾವಲ್ಲೀವಿರಾಜಿತೇ ।
ಗೋದಾವರೀಪರಿಸರೇ ಕೃತೋಟಜವರೋ ಮುನಿಃ ॥೧೧॥

ವಿಶಾಲನಾಮ್ನ್ಯಾ ಪತ್ನ್ಯಾ ಸ ಅಧ್ಯುವಾಸ ಕೃತಾಶ್ರಮಃ ।
ಸ ತಪೋಽತಪ್ಯದತ್ಯುಗ್ರಂ ಉಗ್ರಪಾದಾರ್ಚನೇ ರತಃ ॥೧೨॥

ತ್ರಿಕಾಲಂ ಭಸ್ಮರುದ್ರಾಕ್ಷತ್ರಿಪುಂಡ್ರಪರಿಶೋಭಿತಃ ।
ರುದ್ರಾಧ್ಯಾಯಜಪಾಸಕ್ತಃ ಪಂಚಾಕ್ಷರಪರಾಯಣಃ ॥೧೩॥

ಚಂದ್ರಚೂಡಮಹಾಲಿಂಗಪೂಜಾಚಂಚುರಮಾನಸಃ ।
ಏವಂ ಲಿಂಗಂ ಸಮಭ್ಯರ್ಚ್ಯ ನಿತ್ಯಂ ಸ್ತೌತಿ ಮಹೇಶ್ವರಂ ॥೧೪॥

ಫಾಲಾಕ್ಷಾಧ್ವರಶಿಕ್ಷ ಕಕ್ಷವಸತೇ ಉಕ್ಷೇಂದ್ರಕೇತೋ ಹರ
ತ್ರಕ್ಷಾ ಕ್ಷಯ್ಯಫಲಪ್ರದಾಕ್ಷವಿಹೃತೇ ಮಾಂ ವೀಕ್ಷ್ಯ ರಕ್ಷಾಂ ಕುರು ।

॥ ಮೃಕಂಡುರುವಾಚ ॥

ಭಕ್ಷ್ಯಪ್ರಾಯಗರಾದಿಪಾನಸಮುದೃಗ್ಲಕ್ಷ್ಯೇಽಪ್ಯಲಕ್ಷೋ ಭವಾನ್
ವೀಕ್ಷಾಶಿಕ್ಷಿತಮನ್ಮಥಾಂಧಕರಿಪೋ ಲೀಲಾಯಿತಾಸ್ತೇ ಸುರಾ ॥೧೫॥

ಬೂರುಗ, ಬಿಲ್ವಗಳೂ, ಆ ಬೆಟ್ಟದಲ್ಲಿ ವಿಶೇಷವಾಗಿದ್ದುವು. ಗೋದಾವರೀನದಿಯ ಆ ತೀರದಲ್ಲಿ ಆಶ್ರಮವನ್ನು ಕಟ್ಟಿಕೊಂಡು ಮೃಕಂಡುವು ವಾಸವಾಗಿದ್ದನು. ॥೧೦-೧೧॥

ವಿಶಾಲೆಯೆಂಬ ಪತ್ನಿಯೊಡನೆ ಆ ಆಶ್ರಮದಲ್ಲಿ ವಾಸಿಸುತ್ತಾ ಮೃಕಂಡು ಮುನಿಯು ಶಿವನನ್ನು ಆರಾಧಿಸುತ್ತಾ ತಪಸ್ಸನ್ನಾಚರಿಸುತ್ತಲಿದ್ದನು. ॥೧೨॥

ಆ ಮೃಕಂಡುವು ತ್ರಿಕಾಲವೂ ಭಸ್ಮರುದ್ರಾಕ್ಷಿಗಳನ್ನು ಧರಿಸಿದ್ದು, ರುದ್ರ ಸೂಕ್ತವನ್ನು ಹೇಳುತ್ತಾ, ಶಿವಪಂಚಾಕ್ಷರಮಂತ್ರವನ್ನು ಜಪಿಸುತ್ತಾ ಭಕ್ತಿಯಿಂದ ಶಿವಲಿಂಗವನ್ನು ಆರ್ಚಿಸುತ್ತಿದ್ದನು. ಆಗಾಗ ಅವನು ಶಿವನನ್ನು ಹೀಗೆ ಸ್ತುತಿಸುತ್ತಿದ್ದನು. ॥೧೩-೧೪॥

‘ ಓ ಮುಕ್ಕಣ್ಣನಾದ ಪರಮೇಶ್ವರ, ಗಿರಿವಾಸಿಯೂ, ವೃಷಭಧ್ವಜನೂ, ಮುಕ್ತಿಯನ್ನು ಕರುಣಿಸುವವನೂ, ಜನಗಳ ಹೃದಯದಲ್ಲಿ ನೆಲಸಿರುವವನೂ ಆದ ನೀನು ನನ್ನನ್ನು ರಕ್ಷಿಸು. ಕಾಲಕೂಟವಿಷವನ್ನು ನೀರಿನಂತೆ ಕುಡಿದವನು,

ಅಸುರಸುರವರ್ಯೈರ್ನಿಮಥ್ಯಮಾನ
ಗಿರಿವರಕರ್ಷಣತೋ ಹಿ ಸಾಗರಾತ್ ।
ಗರಗುರುಭೀತಿಪರಾಹತೌಜಸೋ
ಹರಿವಿಧಿಬಲಭಿತ್ಪ್ರಸನ್ನ ಪಾಹಿ ॥೧೬॥

ಮುರಹರಶರಕರ ಹೇಮನಗೋತ್ತಮ
ಧಾರಕಶಂಕರ ಪರಿಪಾಹಿ ।
ತುರಗಾಯಿತನಿಗಮಾಂತಕಭೀತಿದ
ಉರಗೋತ್ತಮಭೂಷಣ ಶಂಭೋ ॥೧೭॥

ಮಧುಮಥನಾಕ್ಷಿ ಪದಾಂಬುಜಪೂಜಿತ
ಭಗಣಾಧಿಪಧಾಕೃತಮೌಳೇ ।
ಸಜಲಜಲಪ್ರದನಿಭಗಲ
ಪುರಹರ ಭವತಾರಕ ಪರಿಪಾಹಿ ॥೧೮॥

ನೋಟದಿಂದಲೇ ಮನ್ಮಥನನ್ನು ದಹಿಸಿದವನು ನೀನು, ದೇವತೆಗಳೂ ನಿನ್ನ ಲೀಲಾಸೃಷ್ಟಿಯಲ್ಲಿ ಸೇರಿದವರು. ॥೧೫॥

ದೇವತೆಗಳೂ ದಾನವರೂ ಸೇರಿ ಅಮೃತಕ್ಕಾಗಿ ಮಂದರವನ್ನು ಸಮುದ್ರದಲ್ಲಿ ಹಾಕಿ ಕಡೆದರು ; ಆದರೆ ಮೊದಲು ಕಾಲಕೂಟವಿಷವು ಉದಯಿಸಿತು. ಆಗ ಭಯಗೊಂಡು ನಾರಾಯಣ, ಬ್ರಹ್ಮ, ಇಂದ್ರ ಮೊದಲಾದವರು ನಿನ್ನನ್ನು ಸ್ತುತಿಸಿದರು, ನೀನು ಪ್ರಸನ್ನನಾಗಿ ಆ ವಿಷವನ್ನು ಕುಡಿದು ಅವರೆಲ್ಲರನ್ನೂ ಪಾಲಿಸಿರುವೆ. ಇಂತಹ ಮಹಾಮಹಿಮನಾದ ನೀನು ನನ್ನನ್ನು ರಕ್ಷಿಸು. ॥೧೬॥

ತ್ರಿಪುರಸಂಹಾರಕಾಲದಲ್ಲಿ ಹರಿಯನ್ನೇ ಬಾಣವನ್ನಾಗಿ ಹಿಡಿದು, ಮೇರುವನ್ನು ಧನುಸ್ಸನ್ನಾಗಿ ಮಾಡಿ ವೇದಗಳನ್ನೇ ಕುದುರೆಗಳನ್ನಾಗಿ ನಡೆಸಿಕೊಂಡು ತ್ರಿಪುರರನ್ನು ಸಂಹರಿಸಿದ, ಓ ದೇವ, ಯಮನಿಗೆ ಭಯವನ್ನುಂಟುಮಾಡಿದ ಓ ಈಶ್ವರ, ಓ ಸರ್ಪಭೂಷಣ, ನನ್ನನ್ನು ಪರಿಪಾಲಿಸು. ॥೧೭॥

ತನ್ನ ಕಣ್ಣನ್ನೇ ಕಮಲವನ್ನಾಗಿ ಮಾಡಿದ ನಾರಾಯಣನಿಂದ ಸಾವಿರಕಮಲಗಳಿಂದ ಪೂಜಿಸಲ್ಪಟ್ಟವನೂ, ತಾರಾಪತಿಯಾದ ಚಂದ್ರನನ್ನು ತಲೆಯಲ್ಲಿ ಧರಿಸಿ

ಇಂದುಕಲಾಧರ ಮಂದರವಾಸ ಹರ ಕುಂದಸುಮೋತ್ತಮನಿಭದೇಹ
ಬಿಂದುಕಲಾರ್ಣವಪರವರವಿಹೃತೇ ಕರ್ಣದೃಗಂತಧರಾವ್ಯಯ ಪಾಹಿ ॥೧೯॥

॥ ಸೂತ ಉವಾಚ ॥

ಏವಂ ಸಂಸ್ತುತ್ಯ ದೇವೇಶಂ ನಿನಾಯ ಹಾಯನಂ ತದಾ ।
ತಸ್ಯೈವಂ ವರ್ತಮಾನಸ್ಯ ನಾರದೋಭ್ಯಾಗಮದ್ಗೃಹಾತ್ ॥೨೦॥

ತಂ ವಿಷ್ಟರೇಣಾನುಮಾನ್ಯ ಸ್ವಾಗತೇನಾಭ್ಯನಂದಯತ್ ।
ಕೃತಾತಿಥ್ಯಂ ಚ ವಿಶ್ರಾಂತಂ ವಿಷ್ಟರಶ್ರವಸಃ ಸುತಂ ॥೨೧॥

ಉಪಾಮಂತ್ರ್ಯೇತಿ ಹೋವಾಚ ಮೃಕಂಡುಃ ಪ್ರಶ್ರಯಾನ್ಮುನಿಂ ॥೨೨॥

॥ ಮೃಕಂಡುರುವಾಚ ॥

ಕುತಃ ಸಮಾಗತಂ ಬ್ರಹ್ಮನ್ ಕ್ವ ವಾ ಗಂತುಂ ಮನಸ್ತವ ।
ಕೌತುಕೇನಾದ್ಯ ಪೃಚ್ಛಾಮಿ ಸ್ನಿಗ್ಧಭಾವತಯಾ ಮುನೇ ॥೨೩॥

ದವನೂ, ಕಾರುಮೋಡದಂತೆ ಕಪ್ಪಾದ ಕಂಠವುಳ್ಳವನೂ, ಪುರವೈರಿಯೂ, ಸಂಸಾರ ಬಂಧನವನ್ನು ಬಿಡಿಸುವವನೂ ಆದ ಓ ಪರಮೇಶ್ವರ ಪಾಲಿಸು. ॥೧೮॥

ಮಂದರಗಿರಿಯಲ್ಲಿ ವಾಸಿಸುವನೂ, ಗಿರಿಮಲ್ಲಿಗೆಯಂತೆ ಬಿಳುಪಾದ ದೇಹವುಳ್ಳವನೂ, ಓಂಕಾರಸ್ವರೂಪನೂ, ಕರ್ಣಾಂತವಾಗಿ ವಿಶಾಲವಾದ ಕಣ್ಣುಗಳುಳ್ಳವನೂ, ನಾಶರಹಿತನೂ ಆದ ಓ ಚಂದ್ರಶೇಖರನೇ, ಪಾಲಿಸು.'' ॥೧೯॥

ಹೀಗೆ ಸ್ತುತಿಸುತ್ತಾ ಅನೇಕ ವರ್ಷಗಳನ್ನು ಮೃಕಂಡುವು ಕಳೆದನು. ಹೀಗಿರಲೊಂದುದಿನ ದೇವಮುನಿಯಾದ ನಾರದನು ಅವನಾಶ್ರಮಕ್ಕೆ ಬಂದನು. ॥೨೦॥

ನಾರದಮುನಿಗೆ ಮೃಕಂಡುವು ಆಸನವನ್ನು ಕೊಟ್ಟು ಸುಖಾಗಮನವನ್ನು ಬಯಸಿ, ಅತಿಥಿಸತ್ಕಾರಮಾಡಿದನು. ಆ ಮೇಲೆ ವಿಶ್ರಾಂತನಾದ ಆ ನಾರದನನ್ನು ಕುರಿತು ವಿನಯದಿಂದ ಹೀಗೆ ಪ್ರಶ್ನಿಸಿದನು. ॥೨೧-೨೨॥

ದೇವಮುನಿಯೇ, ಯಾವೆಡೆಯಿಂದ ಬರೋಣವಾಯಿತು ? ಮುಂದೆ ಎಲ್ಲಿಗೆ ಹೊರಟಿರುವೆ ? ಆದರದಿಂದ ಕೇಳುತ್ತಿರುವೆನು. ಮುನಿಗಳಲ್ಲಿ ನೀನು ಉತ್ತಮನಾದ ಸರ್ವಜ್ಞನು. ನಿನಗೆ ತಿಳಿಯದುದು ಯಾವುದೂ ಇಲ್ಲ. ॥೨೩॥

ತ್ವಂ ಸರ್ವದರ್ಶೀ ಮುನಿಷು ನ ತವಾವಿದಿತಂ ಕ್ವಚಿತ್ ।
ಇತ್ಯುಕ್ತೋ ಮುನಿನಾ ತತ್ರ ನಾರದೋ ದಿವ್ಯದರ್ಶನಃ ॥೨೪॥

ಕಥಾಶ್ಚಾಕಥಯದ್ಬ್ರಹ್ಮವೈಷ್ಣವೀಶ್ಚೇಂದ್ರಸದ್ಮಗಾಃ ।
ಮುನೀನಾಂ ಚ ನೃಪಾಣಾಂ ಚ ದೈತ್ಯಾಸುರಸಮುದ್ಭವಾಃ ॥೨೫॥

|| ನಾರದ ಉವಾಚ ||

ಕಿಂ ತ್ವೇಕಂ ತವ ವಕ್ಷ್ಯಾಮಿ ಸ್ನಿಗ್ಧತ್ವೇನಾಧುನಾ ಮುನೇ ।
ನೈವ ಶೋಕೇ ಮನಃ ಕಾರ್ಯಂ ಶ್ರೋತವ್ಯಂ ಮೇ ಹಿತಂ ವಚಃ ॥೨೬॥

ತವ ಭಾರ್ಯಾ ವಿಶಾಲಾಕ್ಷೀ ಜನಯಿಷ್ಯತಿ ಸತ್ಸುತಂ ।
ಮುನಿಶ್ರೇಷ್ಠಂ ಮಹಾಭಾಗ ಶಿವಪಾದಾರ್ಚನೇ ರತಂ ॥೨೭॥

ಅದ್ಯಾದಿನವಮೇ ಮಾಸಿ ಷೋಡಶಾಬ್ದೇಷು ಜೀವತಿ ।
ತೇನ ಪೂಜಯ ದೇವೇಶಂ ಮಹೇಶಂ ಭಕ್ತಿಭಾವತಃ ॥೨೮॥

ಮೃಕಂಡುವಿನ ಆ ಮಾತನ್ನು ಕೇಳಿ ಮಹಾಜ್ಞಾನಿಯಾದ ನಾರದನು ಬ್ರಹ್ಮ, ವಿಷ್ಣು, ಇಂದ್ರಲೋಕಗಳ ಸಮಾಚಾರವನ್ನೂ, ಮುನಿಗಳ, ರಾಜರ, ದೈತ್ಯರ, ಅಸುರರ ವಿಚಾರವನ್ನೂ ಹೇಳಿ ಹೀಗೆಂದನು. ||೨೪-೨೫||

ಎಲೈ ಮುನಿಯೇ, ನಿನ್ನಮೇಲಿನ ಸ್ನೇಹದಿಂದ ನಿನಗೆ ಸಂಬಂಧಪಟ್ಟ ಒಂದು ಮಾತನ್ನು ಹೇಳುವೆನು. ಅದನ್ನು ಕೇಳಿ ವ್ಯಥೆಪಡಬಾರದು. ಹಿತವಾದ ನನ್ನ ಮಾತಿನಂತೆ ನಡೆಯಬೇಕು. ||೨೬||

ನಿನ್ನ ಪತ್ನಿಯಾದ ವಿಶಾಲಾಕ್ಷಿಯು ಮುನಿಶ್ರೇಷ್ಠನಾಗಬಲ್ಲ ಅದೃಷ್ಟಶಾಲಿಯಾದ ಶಿವಭಕ್ತನಾಗುವಂತಹ ಓರ್ವ ಸತ್ಪುತ್ರನನ್ನು ಇಂದಿಗೆ ಒಂಬತ್ತನೇ ತಿಂಗಳಲ್ಲಿ ಹಡೆಯುವಳು. ಆದರೆ ಆ ಕುಮಾರನು ಹದಿನಾರು ವರ್ಷಗಳ ವರೆಗೆ ಮಾತ್ರ ಬದುಕುವನು. ||೨೭||

ಆದುದರಿಂದ ಈಗಿನಿಂದಲೇ ನೀನು ದೇವದೇವನಾದ ಮಹಾದೇವನನ್ನು ಭಕ್ತಿಯಿಂದ ಪೂಜಿಸು. ನಿನ್ನ ಮಗನಿಂದಲೂ ಪೂಜಿಸತೊಡಗಿಸು. ಮಹಾದೇವನೇ ಆಯುಸ್ಸನ್ನು ಕೊಡುವವನು ಎಂದು ಎಲ್ಲ ವೇದಗಳೂ ಸಾರುತ್ತಿರುವುವು. ||೨೮||

ಆಯುರ್ದಾತಾ ಮಹಾದೇವಃ ಸರ್ವಶ್ರುತಿಷು ಕೀರ್ತಿತಃ ।
ತಮಾರಾಧಯತೋ ಪುತ್ರಸ್ತಸ್ಯ ಮೃತ್ಯುಹರೋ ಹರಃ ॥೨೯॥

ನೈತತ್ರ ಕಥನೀಯಂ ತೇ ವಿಶ್ರಮೇಣಾಪಿ ಕೇನಚಿತ್ ।
ಇತ್ಯುಕ್ತ್ವಾ ಸಗತಃ ಸ್ವೈರಂ ನಾರದೋ ಬ್ರಹ್ಮನಂದನಃ ॥೩೦॥

ತತೋಥ ನವಮೇ ಮಾಸಿ ತತ್ಪತ್ನ್ಯಂತರ್ವರ್ತೀ ತದಾ ।
ಸುಷಾವ ಕಾಲೇನ ಸುತಂ ಕುಮಾರಂ ಕೃತ್ತಿಕಾ ಇವ ॥೩೧॥

ಸರ್ವಲಕ್ಷಣಸಂಪನ್ನಂ ಪಿತ್ರೋರಾನಂದದಾಯಕಂ ।
ಶ್ರುತ್ವಾ ದೃಷ್ಟ್ವಾ ಮುನಿಃ ಪುತ್ರಂ ದತ್ವಾ ದಾನಾನಿ ಶಕ್ತಿತಃ ॥೩೨॥

ತಂ ಪುತ್ರಂ ಭಸ್ಮನಾಽಽಲಿಪ್ಯ ತ್ರಿಪುಂಡ್ರಾಣ್ಯಾಚರತ್ತದಾ ।
ತತಶ್ಚ ಸೂತಿಕಾಗೇಹೇ ತೇನಾರಾಧಯದೀಶ್ವರಂ ॥೩೩॥

ಹಾಗೆ ಭಕ್ತಿಯಿಂದ ಆರಾಧಿಸಿದರೆ ಶಿವನು ನಿನ್ನ ಪುತ್ರನ ಆಯುಸ್ಸನ್ನು ಹೆಚ್ಚಿಸುವನು. ಮೃತ್ಯುವನ್ನು ಹೋಗಲಾಡಿಸುವನು. ಈ ವಿಷಯದಲ್ಲಿ ತಿಳಿದಿರುವ ನಿನಗೆ ಹೆಚ್ಚು ಹೇಳಬೇಕಾಗಿಲ್ಲ. ನಾವೂ ಇಲ್ಲಿ ಹೆಚ್ಚುಹೊತ್ತು ನಿಲ್ಲುವಂತಿಲ್ಲ. ||೨೯||

ಹೀಗೆ ಹೇಳಿ ಬ್ರಹ್ಮ ಪುತ್ರನಾದ ನಾರದನು ತ್ವರೆಯಿಂದ ಹೊರಟುಹೋದನು. ಆ ಮೇಲೆ ಮುನಿವಚನದಂತೆ ಮೃಕಂಡುವಿನ ಹೆಂಡತಿಯು ಗರ್ಭಿಣಿಯಾಗಿ ಒಂಭತ್ತನೆಯ ತಿಂಗಳಲ್ಲಿ ಸುಮುಹೂರ್ತದಲ್ಲಿ, ಕೃತ್ತಿಕೆಯರ ಕುಮಾರ ಕುಮಾರಸ್ವಾಮಿಯಂತಿರುವ ಪುತ್ರನನ್ನು ಹಡೆದಳು. ||೩೦-೩೧||

ಆ ಶಿಶುವು ಸಕಲ ಲಕ್ಷಣಗಳಿಂದ ಕೂಡಿದ್ದು ತಂದೆತಾಯಿಗಳಿಗೆ ಆನಂದವನ್ನುಂಟುಮಾಡುವಂತಹುದಾಗಿತ್ತು. ಪುತ್ರಜನನವಾದುದನ್ನು ಕೇಳಿ ಮೃಕಂಡುವು ಅನೇಕ ದಾನಗಳನ್ನು ಹರ್ಷದಿಂದ ಕೊಟ್ಟು ಆ ಪುತ್ರನ ಮೈಗೆಲ್ಲಾ ಭಸ್ಮವನ್ನು ಲೇಪಿಸಿದನು. ಭಸ್ಮತ್ರಿಪುಂಡ್ರಗಳನ್ನಿಟ್ಟನು. ||೩೨||

ಲಿಂಗೇ ಜಲಂ ಬಿಲ್ವಪತ್ರಂ ತೇನ ಸಂಪಾತಯತ್ತದಾ ।
ನಾರದಸ್ಯ ವಚಃ ಶ್ರುತ್ವಾ ತೇನ ಪುತ್ರೇಣ ವೈ ಮುನಿಃ ॥೩೪॥

ಚಕ್ರೇ ನಾಮಾಸ್ಯ ಸ ತದಾ ಮಾರ್ಕಂಡೇಯೇತಿ ಸಾದರಂ ।
ತಸ್ಮಿಂಸ್ತದಾ ವರ್ಧಮಾನೇ ಬಾಲಚಂದ್ರಮಸೀವ ಹಿ ॥೩೫॥

ಉಪನೀನ್ಯೇ ಸುತಂ ತಸ್ಮಿನ್ ಪಂಚಾಕ್ಷರಮುಪಾದಿಶತ್ ।
ಪಂಚಾಸ್ಯಪ್ರೀತಯೇ ತಸ್ಮೈ ಪಂಚತ್ವವಿನಿವಾರಕಂ ॥೩೬॥

ಅಗ್ನಿರಿತ್ಯಾದಿಮಂತ್ರೈಶ್ಚ ತ್ರಿಕಾಲಂ ಧೂಲನೇ ರತಂ ।
ತ್ರಿಯಾಯುಷೈಸ್ತ್ರಿಪುಂಡ್ರಾಂಕಂ ಫಾಲೇ ಬಾಹ್ವೋಶ್ಚ ವಕ್ಷಸಿ ॥೩೭॥

ರುದ್ರಾಕ್ಷಧಾರಿಣಂ ಪುತ್ರಂ ರುದ್ರಾಧ್ಯಾಯಜಪಾದರಂ ।
ಚಕಾರ ನಿಯಮೇನಾಸೌ ಸ ಪುತ್ರೇಣ ಮುನಿಸ್ತದಾ ॥೩೮॥

ಆ ಸೂತಕದ ಮನೆಯಲ್ಲಿಯೇ ಆ ಶಿಶುವಿನ ಕೈಯಿಂದ ಶಿವಲಿಂಗಕ್ಕೆ ನೀರಿನಿಂದ ಅಭಿಷೇಕಮಾಡಿಸಿದನು. ಬಿಲ್ವಪತ್ರವನ್ನು ಹಾಕಿಸಿದನು. ನಾರದನ ಮಾತಿನಂತೆ ಹೀಗೆ ಆಗಲೇ ಆ ಶಿಶುವಿನಿಂದ ಶಿವಪೂಜೆಯನ್ನು ಮಾಡಿಸಿದನು. ||೩೩-೩೪||

ಆ ಪುತ್ರನಿಗೆ ಮಾರ್ಕಂಡೇಯನೆಂದು ಹೆಸರಿಟ್ಟನು. ಆ ಕುಮಾರನು ಬಾಲಚಂದ್ರನಂತೆ ದಿನದಿನಕ್ಕೂ ಬೆಳೆಯ ತೊಡಗಿದನು. ||೩೫||

ಆ ಮೇಲೆ ತಕ್ಕ ವಯಸ್ಸಿನಲ್ಲಿ ಮೃಕಂಡುವು ಆ ಕುಮಾರನಿಗೆ ಉಪನಯನ ಮಾಡಿ, ಶಿವಪಂಚಾಕ್ಷರೀ ಮಂತ್ರವನ್ನು, ಶಿವನ ಅನುಗ್ರಹದಿಂದ ಮೃತ್ಯುವನ್ನು ಜಯಿಸುವುದಕ್ಕೋಸ್ಕರ ಉಪದೇಶಿಸಿದನು. ||೩೬||

"ಅಗ್ನಿಃ" "ತ್ರಿಯಾಯುಷಂ" ಎಂಬ ಮಂತ್ರಗಳಿಂದ ಮೂರುಹೊತ್ತು ಹಣೆ, ತೋಳು, ಎದೆಗಳಲ್ಲಿ ಭಸ್ಮವನ್ನು ಮೂರುಪಟ್ಟೆಗಳಾಗಿ ಹಚ್ಚಿಕೊಳ್ಳುವುದನ್ನು ಪದೇಶಿಸಿದನು. ||೩೭||

ಮತ್ತು ತನ್ನ ಮಗನು ಸದಾ ರುದ್ರಾಕ್ಷಿಧಾರಿಯೂ ರುದ್ರಸೂಕ್ತವನ್ನು ಪಠಿಸುವವನೂ ಆಗಿರುವಂತೆ ನಿಯಮಿಸಿದನು. ||೩೮||

ವೇದಾನಧ್ಯಜಿಗೀಷ್ಟೇ ಸ ವರ್ಣೇ ವರ್ಣಾಶ್ರಮೋಚಿತಾಃ ।
ತ್ರಿಕಾಲಮರ್ಚಯನ್ ಸಾಂಬಂ ಶಿವಲಿಂಗೇ ಮನೋಹರೇ ॥೩೯॥

ಕ್ರಿಯಾಶ್ಚಾಕಾರಯತ್ತಸ್ಮಾತ್ ಸ್ವಗೃಹೇ ನ್ಯವಸನ್ ಮುನಿಃ ।
ಮಾರ್ಕಂಡೇಯೋಽಪಿ ನಿಯತಶ್ಚಕಾರ ಗುರುಶಾಸನಂ ॥೪೦॥

ಭಸ್ಮರುದ್ರಾಕ್ಷಸಂಪನ್ನೋ ಬಿಲ್ವಪತ್ರೈಃ ಸದೈವ ಹಿ ।
ಸಂಪೂಜ್ಯ ಲಿಂಗಂ ಸಂಸ್ತೌತಿ ಮಾರ್ಕಂಡೇಯಃ ಶಿವಂ ಸ್ಮರನ್ ॥೪೧॥

॥ ಮಾರ್ಕಂಡೇಯ ಉವಾಚ ॥

ಶ್ರೀಕಾಲಕಾಲಾಯ ವೃಷಧ್ವಜಾಯ
ಸ್ಕಂದಾರ್ಚಿತಾಯ ಕರಿಚರ್ಮಧರಾಯ ತುಭ್ಯಂ ।
ವೇದಾಂತಬೋಧಿತಪದಾಯ ಸನಾತನಾಯ
ದೇವೋತ್ತಮಾಯ ಸತತಂ ಭಗವನ್ನಮಸ್ತೇ ॥೪೨॥

ಬ್ರಹ್ಮಚಾರಿಯಾದಾ ಮಾರ್ಕಂಡೇಯನು ತನ್ನ ವರ್ಣಾಶ್ರಮಗಳಿಗೆ ಯೋಗ್ಯವಾದ ವೇದಗಳನ್ನು ಅಧ್ಯಯನಮಾಡಿದನು. ಮನೋಹರವಾದ ಶಿವಲಿಂಗದಲ್ಲಿ ಶಿವನನ್ನು ಮೂರು ಹೊತ್ತೂ ಬಿಡದೇ ಅರ್ಚಿಸುತ್ತಿದ್ದನು. ॥೩೯॥

ಮೃಕಂಡುವು ಪುತ್ರನಿಂದ ಶಿವಪ್ರೀತಿಕರವಾದ ನಿಯಮಗಳನ್ನು ಮಾಡಿಸುತ್ತಿದ್ದನು. ಮಾರ್ಕಂಡೇಯನೂ ಸಹ ತಪ್ಪದೇ ತಂದೆಯ ಅಪ್ಪಣೆಯನ್ನು ಪಾಲಿಸುತ್ತಿದ್ದನು. ॥೪೦॥

ಭಸ್ಮರುದ್ರಾಕ್ಷಿಗಳನ್ನು ಧರಿಸುತ್ತಾ ಮಾರ್ಕಂಡೇಯನು ಬಿಲ್ವಪತ್ರೆಗಳಿಂದ ಶಿವಲಿಂಗವನ್ನು ಅರ್ಚಿಸುತ್ತಾ ಶಿವನನ್ನು ಧ್ಯಾನಿಸುತ್ತಾ ನಿತ್ಯವೂ ಭಕ್ತಿಯಿಂದ ಹೀಗೆ ಸ್ತುತಿಸುತ್ತಿದ್ದನು. ॥೪೧॥

"ಮೃತ್ಯುವಿಗೆ ಮೃತ್ಯುವೂ, ವೃಷಭಧ್ವಜನೂ, ಸ್ಕಂದಸ್ವಾಮಿಯಿಂದ ಸೇವಿಸಲ್ಪಡುವವನೂ, ಗಜಚರ್ಮಧಾರಿಯೂ, ವೇದಾಂತಗಳಲ್ಲಿ ಬೋಧಿತವಾದ ಸ್ವರೂಪವುಳ್ಳವನೂ, ಅನಾದಿಪುರುಷನೂ, ದೇವಶ್ರೇಷ್ಠನೂ, ಆದ ಓ ಭಗವಂತ, ನಿನಗೆ ನಮಸ್ಕಾರವು. ॥೪೨॥

ಈಶಾಯ ಕೋಶನಿವಹಾಕೃತಿದೂರಗಾಯ
ಭೀಮಾಯ ಉಗ್ರಶರಕಾರ್ಮುಕಧಾರಿಣೇ ತೇ ।
ಭಸ್ಮಾಂಗರಾಗತನವೇ ನಯನಾಗ್ನಿಲೇಶ
ದಗ್ಧಾಂಧಕತ್ರಿಪುರಕಾಮಹರಾಯ ತುಭ್ಯಂ ॥೪೩॥

ಉಮಾಸಹಾಯ ಉರಗಾಯ ಭವೋದ್ಭವಾಯ
ಮಾರೋರುಕಾಯದಹನಾಮಲಲೋಚನಾಯ ।
ವ್ಯಾಲೇಂದ್ರಮಾಲ ಗರನಿಲಗಲಾಯ ತುಭ್ಯಂ
ವಿಶ್ವಾಧಿಕಾಯ ಚ ಶಿವಾಯ ಸದಾ ನಮಸ್ತೇ ॥೪೪॥

ಯಮದಲದಲನಾಯ ವಿಶಾಲದೇಹಜಾ
ಲಾಯ ಭೂಧರಶಯಾಯ ಪಿನಾಕಿನೇ ತೇ ।
ವಾಲಾಗ್ರಮಾತ್ರಹೃದಯಾಂತರದೀಪಕಾಶ
ಶುದ್ಧಾಯ ಜ್ಞಾನತನವೇ ಭಗವನ್ನಮಸ್ತೇ ॥೪೫॥

ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯವೆಂಬ ಐದು ಕೋಶಗಳಿಂದ ಭಿನ್ನನಾದವನೂ, ಆಕಾರವಿಲ್ಲದವನೂ, ಪಾಪಿಗಳಿಗೆ ಭಯಂಕರನೂ, ಭಯಂಕರವಾದ ಬಾಣ ಧನುಸ್ಸುಗಳುಳ್ಳವನೂ, ಭಸ್ಮವನ್ನು ಲೇಪಿಸಿಕೊಳ್ಳುವವನೂ, ತೃತೀಯನೇತ್ರದ ಉರಿಯಿಂದ ಅಂಧಕಾಸುರ, ತ್ರಿಪುರ, ಮನ್ಮಥರನ್ನು ದಹಿಸಿದವನೂ ಆದ ಪರಮೇಶ್ವರನಿಗೆ ನಮಸ್ಕಾರವು. ॥೪೩॥

ಪಾರ್ವತೀಸಹಿತನೂ, ಸಂಸಾರಕಾರಣನೂ, ಮನ್ಮಥವೈರಿಯೂ, ನಾಗಭೂಷಣನೂ, ನೀಲಕಂಠನೂ, ಸರ್ವೋತ್ತಮನೂ, ಮಂಗಳಸ್ವರೂಪನೂ ಆದ ಪರಮೇಶ್ವರನಿಗೆ ನಮಸ್ಕಾರವು. ॥೪೪॥

ಯಮದೂತರನ್ನು ಶಿಕ್ಷಿಸುವವನೂ, ಸರ್ವವ್ಯಾಪಿಯೂ, ಗಿರಿವಾಸನೂ, ಅಂಗುಷ್ಠದಷ್ಟಿರುವ ಹೃದಯದಲ್ಲಿ ದೀಪದಂತೆ ಬೆಳುಗುತ್ತಿರುವವನೂ, ಶುದ್ಧನೂ, ಜ್ಞಾನಸ್ವರೂಪನೂ ಆದ ಓ ಭಗವಂತ, ನಿನಗೆ ನಮಸ್ಕಾರ. ॥೪೫॥

ಏವಂ ಸ ಸಂಸ್ತುವನ್ ದೇವಂ ಮಾರ್ಕಂಡೇಯೋ ಮಹೇಶ್ವರಂ ।
ಕಲಾಸ್ಸರ್ವಾಸ್ಸ ಜಗ್ರಾಹ ನಿಯತೋ ಮುನಿಶಾಸನಾತ್ ॥೪೬॥

ಈಶಾನಾರ್ಚಾಪರೋ ನಿತ್ಯಂ ಕುಶಲಸ್ಸರ್ವಕರ್ಮಣಿ ।
ಊನಷೋಡಶವರ್ಷಂ ತಂ ಪುತ್ರಂ ವೀಕ್ಷ್ಯ ಸುದುಃಖಿತೌ ॥೪೭॥

ಪಿತರೌ ತಸ್ಯ ತಚ್ಚಾರುಗುಣಂ ವೀಕ್ಷ್ಯ ದಿನೇ ದಿನೇ ।
ಸಾಶ್ರುಪಾತಂ ತದೇಕಾಂತೇ ಪಶ್ಯತಸ್ತಸ್ಯ ತನ್ಮುಖಂ ॥೪೮॥

ತ್ರಿಪುಂಡ್ರವಿಲಸತ್ಫಲಂ ರುದ್ರಾಕ್ಷಕೃತಕಂಕಣಂ ।
ಯುವಾನಂ ಚಾರುಸರ್ವಾಂಗಂ ದಂಡಾಷಾಢವಿರಾಜಿತಂ ॥೪೯॥

ಆಷಾಢಾರ್ಚನಸಂಸಕ್ತಂ ತುರಾಷಾಟ್ಪದಭೀತಿದಂ ।
ತೌ ಪ್ರಣಮ್ಯ ತದಾ ಪ್ರಾಹ ಖೇದಕಾರಣಮೇತಯೋಃ ॥೫೦॥

ಹೀಗೆ ನಿತ್ಯವೂ ಮಹಾದೇವನನ್ನು ಸ್ತುತಿಸುತ್ತಾ ಮಾರ್ಕಂಡೇಯನು ತಂದೆಯ ಅಪ್ಪಣೆಯಂತೆ ಕಲೆಗಳೆಲ್ಲವನ್ನೂ ಕಲಿತನು. ॥೪೬॥

ನಿತ್ಯವೂ ತನ್ನ ಕೆಲಸಗಳನ್ನು ಮಾಡಿಕೊಳ್ಳುತ್ತಾ ಮಾರ್ಕಂಡೇಯನು ಶಿವನನ್ನಾರಾಧಿಸುತ್ತಿದ್ದನು. ಹೀಗಿರಲವನಿಗೆ ಹದಿನೈದು ವರ್ಷಗಳು ತುಂಬಿ ಹದಿನಾರನೆಯದು ಬಂದಿತು. ಪುತ್ರನ ಸದ್ಗುಣಗಳನ್ನೂ ಮುದ್ದುಮೊಗವನ್ನೂ ನೋಡುತ್ತಾ ಅವನ ತಾಯಿತಂದೆಗಳು ದುಃಖಿತರಾಗುತ್ತಿದ್ದರು, ಮತ್ತು ಅವನು ಇನ್ನು ಮೃತನಾಗುವನೆಂದಳುತ್ತಿದ್ದರು. ॥೪೭-೪೮॥

ಸುಂದರವಾದ ಶರೀರವುಳ್ಳವನಾಗಿ ಯುವಕನಾಗಿರುವ, ಹಣೆಗೆ ಭಸ್ಮವನ್ನು ಲೇಪಿಸಿ, ಕೈಗೆ ರುದ್ರಾಕ್ಷಸರವನ್ನು ಹಾಕಿಕೊಂಡು, ದಂಡ ಅಜಿನಗಳನ್ನು ಧರಿಸಿ ಶಿವನನ್ನರ್ಚಿಸುವ, ತನ್ನ ತಪಸ್ಸಿನಿಂದ ಇಂದ್ರನ ಪದವಿಗೆ ಭೀತಿಯನ್ನುಂಟುಮಾಡುವ (ಅಂದರೆ ಮಹಾತಪಸ್ಸನ್ನಾಚರಿಸುವವನು ಇಂದ್ರನಾಗುವನೆಂದರ್ಥವು) ಕುಮಾರನನ್ನು ನೋಡಿ ಮೃಕಂಡುದಂಪತಿಗಳು ದುಃಖಿಸುತ್ತಿದ್ದರು. ॥೪೯॥

ಬಳಿಕ ತಂದೆತಾಯಿಗಳು ದುಃಖಿಸುವುದನ್ನು ನೋಡಿ ಮಾರ್ಕಂಡೇಯನು ಹೀಗೆ ಕೇಳಿದನು. ॥೫೦॥

ವಿದ್ಯಮಾನೇ ಮಯಿ ಬ್ರಹ್ಮನ್ ಮಾತಾ ಚೇಯಂ ತಪಸ್ವಿನೀ ।
ಸಾಶ್ರುಪಾತಂ ಚ ಮಾಂ ವೀಕ್ಷ್ಯ ಕಿಮರ್ಥಂ ದುಃಖಿತೌ ಯುವಾಂ ॥೫೧॥

ಬ್ರೂತ ತತ್ಕಾರಣಂ ಮೇದ್ಯಾಪನೇಷ್ಯಾಮಿ ತದ್ಧ್ರುವಂ ॥೫೨॥

॥ ಸೂತ ಉವಾಚ ॥

ಇತ್ಯುಕ್ತಂ ತದ್ವಚಃ ಶ್ರುತ್ವಾ ನಾರದೋಕ್ತಂ ತದಾ ಮುನಿಃ ।
ಪುತ್ರಾಯ ಕಥಯಾಮಾಸ ತಸ್ಯ ತನ್ಮೃತ್ಯುಕಾರಣಂ ॥೫೩॥

॥ ಮೃಕಂಡುರುವಾಚ ॥

ಕದಾಚಿನ್ನಾರದೋಽಭ್ಯಾಗಾದ್ಗೃಹಂ ಮೇ ದಿವ್ಯದರ್ಶನಃ ।
ಊನಷೋಡಶವರ್ಷೇ ತು ಪುತ್ರೇ ತೇ ಚಾಂತಕಾದ್ಭಯಂ ॥೫೪॥

ಇತ್ಯುಕ್ತ್ವಾ ನಿರ್ಜಗಾಮಾಥ ದೇವಲೋಕಂ ಯಥಾಗತಂ ।
ಜಾತಂ ಪಂಚದಶಂ ವರ್ಷಂ ತೇನ ತಪ್ತೋಽಸ್ಮಿ ಮಾ ಶುಚಃ ॥೫೫॥

ಇತ್ಯುಕ್ತಂ ಪಿತೃವಚನಂ ನಿಶಮ್ಯ ಹೃಷ್ಟಃ
ಪದ್ಮೋತ್ಥಾಮಲಸಂಭವಸ್ಯ ಸೂನುಸೂನುಃ ।

ಓ ತಂದೆಯೇ, ನಾನು ಎದುರಿಗೆ ಬಂದೊಡನೆ ನೀನೂ ನನ್ನ ತಾಯಿಯೂ ಕಣ್ಣೀರುಸುರಿಸುತ್ತಾ ದುಃಖಿಸುವಿರಿ, ಇದಕ್ಕೆ ಕಾರಣವೇನು? ಹೇಳಿ. ನಿಮ್ಮ ದುಃಖವನ್ನು ಹೋಗಲಾಡಿಸುವೆನು. ಎನ್ನಲು, ॥೫೨॥

ಮಗನ ಈ ಮಾತನ್ನು ಕೇಳಿ ಮೃಕಂಡುವು ಹಿಂದೆ ನಾರದನು ಹೇಳಿದ ಸಮಾಚಾರವನ್ನೆಲ್ಲ ಹೇಳಿದನು. ॥೫೩॥

ಎಲೈ ಮಗು, ಹಿಂದೊಂದುದಿನ ದೇವಮುನಿಯಾದ ನಾರದನು ನಮ್ಮ ಮನೆಗೆ ಬಂದಿದ್ದನು. ಅವನು "ನಿನ್ನ ಮಗನಿಗೆ ಹದಿನಾರನೆಯ ವರ್ಷದಲ್ಲಿ ಯಮನಿಂದ ಭಯವು (ಮರಣವು) ಒದಗುವುದು" ಎಂದು ಹೇಳಿ ಹೊರಟು ಹೋದನು. ಈಗ ನಿನಗೆ ಹದಿನೈದುವರ್ಷಗಳು ತುಂಬಿದುವು, ಇದಕ್ಕಾಗಿ ನಾವು ದುಃಖಿಸುತ್ತಿರುವೆವು. ॥೫೪-೫೫॥

ಎಂದ ತಂದೆಯ ಮಾತನ್ನು ಕೇಳಿ ಮಾರ್ಕಂಡೇಯನು ಮಹಾದೇವನ ಅರ್ಚನೆಯಿಂದ ಅಪಾರವಾದ ಉತ್ಸಾಹವುಳ್ಳವನಾಗಿ ತಂದೆತಾಯಿಗಳಿಗೆ ಹೀಗೆ

ತೌ ಪ್ರಾಹೇತ್ಥಮುಪಾರಶಂಕರಾಚಾರ್ಯ
ಪ್ರಭವೋತ್ಥಾಮುಲಹರ್ಷಿತೋ ಮಹಾತ್ಮಾ ||೫೬||

ಇತಿ ಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ಮಾರ್ಕಂಡೇಯಚರಿತ್ರೇ ಮಾರ್ಕಂಡೇಯೋತ್ಪತ್ತಿಃ ನಾರದವಾಕ್ಯಕಥನಂ ನಾಮ ತ್ರಯೋದಶೋಽಧ್ಯಾಯಃ

ಧೈರ್ಯ ಹೇಳಿದನು ಎಂದು ಸೂತಮಹರ್ಷಿಗಳು ವಾಜಶ್ರವಸಾದಿ ಸಕಲ ಮುನಿಗಳಿಗೂ ತಿಳಿಸಿದರು. ||೫೬||

ಇಲ್ಲಿಗೆ ಶ್ರೀ ಶಿವರಹಸ್ಯದಲ್ಲಿ ಚತುರ್ಥಾಂಶದಲ್ಲಿ ಹದಿಮೂರನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಚತುರ್ದಶೋಽಧ್ಯಾಯಃ

|| ಮಾರ್ಕಂಡೇಯ ಉವಾಚ ||

ಸಂಸ್ಥಿತೇ ಶಂಕರೇ ಸಾಂಬೇ ಕಾ ಚಿಂತಾ ಚಾಂತಕಾನ್ಮಮ ।
ಯಸ್ಯ ಸಂಸ್ಮರಣಾದೇವ ಜನ್ಮಮೃತ್ಯುಭಯಂ ನಹಿ ॥೧॥

ತಲ್ಲಿಂಗಾರ್ಚಾಪ್ರಭಾವೇನ ಮೃತ್ಯೋಃಶ್ಚಾಹಂ ಮೃತಿಪ್ರದಃ ।
ಯಸ್ಯಾರ್ಚನೇನ ಭಗವಾನ್ ವಿಷ್ಣುತ್ವಂ ಪ್ರಾಪ ವೈ ಹರಃ ॥೨॥

ಪದ್ಮಾಸನೋಽಪಿ ಯಸ್ಯಾರ್ಚಾಪ್ರಭಾವಾತ್ಸರ್ಗಮಾಪ್ತವಾನ್ ।
ರುದ್ರೋಽಪಿ ಚಾಂತೇ ಸಂಹಾರಂ ಕರೋತಿ ಜಗತೀತಲೇ ॥೩॥

ಹದಿನಾಲ್ಕನೆಯ ಅಧ್ಯಾಯವು

ಓ ತಂದೆಯೇ, ಗೌರೀ ಶಂಕರರಿರಲು ನನಗೆ ಯಾವ ಚಿಂತೆಯೂ ಇಲ್ಲ. ಆ ಶಿವನನ್ನು ಸ್ಮರಣೆ ಮಾಡಿದವರಿಗೆ ಜನನ ಮರಣಗಳ ಭಯವೇ ಇಲ್ಲ, ಎಂದು ಮಾರ್ಕಂಡೇಯನು ತಂದೆಯೊಡನೆ ವಿನಯದಿಂದ ಹೀಗೆ ಮಾತನಾಡಿದನು. ||೧||

" ಆ ಪರಮೇಶ್ವರನ ಲಿಂಗಾರ್ಚನೆಯ ಪ್ರಭಾವದಿಂದ ನಾನು ಮೃತ್ಯುವಿಗೂ ಮೃತ್ಯುವಾಗಬಲ್ಲೆನು. ಆ ದೇವನನ್ನರ್ಚಿಸಿ ಭಗವಂತನಾದ ಹರಿಯೂ ವಿಷ್ಣುತ್ವವನ್ನು ಪಡೆದು, ಜಗತ್ಪಾಲನ ಶಕ್ತಿಯನ್ನು ಹೊಂದಿದನು. ||೨||

ಬ್ರಹ್ಮನೂ ಸಹ ಶಿವನನ್ನಾರಾಧಿಸಿ ಲೋಕವನ್ನು ಸೃಷ್ಟಿಸುವ ಶಕ್ತಿಯನ್ನೂ, ರುದ್ರನೂ ಸಹ ಜಗತ್ತನ್ನು ಸಂಹರಿಸುವ ಶಕ್ತಿಯನ್ನೂ ಪಡೆದರು. ||೩||

ಇಂದ್ರೋಽಪೀಂದ್ರತ್ವಮಾಪನ್ನಸ್ತಥಾಽನ್ಯೇ ದೇವದಾನವಾಃ ।
ತ್ರಿಯಂಬಕಂ ವಿರೂಪಾಕ್ಷಂ ಸುಗಂಧಿಂ ಪುಷ್ಟಿವರ್ಧನಂ ॥೪॥

ಅಮೃತತ್ವಂ ಪ್ರಯಾಮ್ಯೇವ ಮೃತ್ಯೋರ್ಮುಂಚೇಯ ಏವ ಹಿ ।
ಇತ್ಯುಕ್ತ್ವಾ ಸಂಪ್ರಣಮ್ಯಾಂಬಾಂ ಪಿತರಂ ಬಾಷ್ಪವಿಕ್ಲವಂ ॥೫॥

ಮಾಶುಚಸ್ತ್ವಮಿತಿ ಪ್ರೋಚ್ಯ ಜಗಾಮ ತಪಸೇ ವನಂ ।
ಕಾಲಂಜರಂ ತತಃ ಪ್ರಾಪ್ಯ ತ್ರಿಕಾಲಸ್ನಾನತತ್ಪರಃ ॥೬॥

ಭಸ್ಮತ್ರಿಪುಂಡ್ರರುದ್ರಾಕ್ಷಮಾಲಾಕವಚಿತಾಂಗಕಃ ।
ಬಿಲ್ವಪತ್ರೈಸ್ಸದಾ ಶಂಭುಮಹರ್ನಿಶಮತೋಷಯತ್ ॥೭॥

ರುದ್ರಸೂಕ್ತೈಃ ಪಂಚವರ್ಣೈಃ ಪಂಚಬ್ರಹ್ಮಭಿರೀಶ್ವರಂ ।
ತುಷ್ಟಾವ ಕಷ್ಟನಾಶಾಯ ಶಿಪಿವಿಷ್ಟಮುಮಾಸಖಂ ॥೮॥

ಇಂದ್ರನು ಇಂದ್ರಪದವಿಯನ್ನು ಹೊಂದಿದನು. ಹೀಗೆ ಮಿಕ್ಕ ದೇವದಾನವರೂ ಶಿವನನ್ನಾರಾಧಿಸಿ ತಮ್ಮ ಪದವಿಗಳನ್ನು ಪಡೆದುಕೊಂಡರು. ನಾನೂ ಕೂಡ ಮುಕ್ಕಣ್ಣನೂ, ಜಗನ್ಮಯನೂ ಜಗತ್ತನ್ನು ಪಾಲಿಸುವವನೂ ಆದ ಶಿವನನ್ನರ್ಚಿಸಿ ಮೃತ್ಯುವನ್ನು ಜಯಿಸುವೆನು, ಚಿರಂಜೀವಿಯಾಗುವೆನು.” ||೪||

ಹೀಗೆ ಹೇಳಿ ಮಾರ್ಕಂಡೇಯನು ತಂದೆತಾಯಿಗಳಿಗೆ ನಮಸ್ಕರಿಸಿ ದುಃಖಿಸುತ್ತಲಿರುವ ಅವರನ್ನು ಸಮಾಧಾನಗೊಳಿಸಿ ತಪಸ್ಸಿಗಾಗಿ ಕಾಡಿಗೆ ಹೋದನು. ||೫||

ಕಾಲಂಜರಗಿರಿಗೆ ಬಂದು ಆ ಮಾರ್ಕಂಡೇಯನು ನಿತ್ಯವೂ ತ್ರಿಕಾಲಗಳಲ್ಲಿ ಸ್ನಾನ ಮಾಡುತ್ತಾ ಭಸ್ಮರುದ್ರಾಕ್ಷಿಗಳನ್ನು ಧರಿಸುತ್ತಾ ಬಿಲ್ವಪತ್ರೆಗಳಿಂದ ಶಿವನನ್ನು ಆರಾಧಿಸ ತೊಡಗಿದನು. ||೬-೭||

ರುದ್ರಸೂಕ್ತಗಳಿಂದಲೂ ಶಿವಪಂಚಾಕ್ಷರ ಮಂತ್ರದಿಂದಲೂ, ಪಂಚಬ್ರಹ್ಮ ಸೂಕ್ತಗಳಿಂದಲೂ ಶಿವನನ್ನಾರಾಧಿಸುತ್ತಾ ಮಾರ್ಕಂಡೇಯನು ಆ ಗಿರಿಜಾಪತಿಯನ್ನು ಹೀಗೆ ಸ್ತುತಿಸಿದನು. ||೮||

ಕಾಲಕಾಲ ಕರುಣಾಲವಾಲ ತೇ ನೀಲಲೋಹಿತ ದೃಶಾಜಿತಕಾಲ ।
ವ್ಯಾಲಮಾಲಗಲಹಸ್ತ ಶೂಲಧೃಕ್ ವ್ಯೋಮಜಾಲ ಅನಲಾಮಲಫಾಲ ॥೯॥

ತಸ್ಯೈವಂ ವರ್ತಮಾನಸ್ಯ ತದಂತಿಮದಿನೇ ದ್ವಿಜಂ ।
ಸಮಾನೇತುಮಥಾಭ್ಯಾಗಾತ್ ಕ್ರೂರಃ ಪಾಶಕರಾಂತಕಃ ॥೧೦॥

ಮಹಾಲುಲಾಯಮಾಸ್ಥಾಯ ಘನವರ್ಣಂ ದುರಾಸದಂ ।
ಮೃತ್ಯುಜ್ವರಪರೀವಾರೋ ದಂಷ್ಟ್ರಾಭ್ರುಕುಟಿಲಾನನಃ ॥೧೧॥

ಜಿಹ್ವಯಾ ಸೃಕ್ವಿಣೀಶ್ಚಾಪಿ ಲೇಲಿಹಾನೋಂತಕಸ್ತದಾ ।
ಕೃಷ್ಣಾಂಗೈರ್ವಿಕೃತೈರ್ಘೋರೈಃ ಪಾಶಮುದ್ಗರಪಾಣಿಭಿಃ ॥೧೨॥

ಊರ್ಧ್ವಕೇಶೈಃ ಕರಾಲಾಸ್ಯೈರ್ವಿವೃತ್ತನಯನಾರುಣೈಃ ।
ಭಯಸ್ಯ ಚಾಪಿ ಭಯದೈಸ್ಸದೂತೈಸ್ಸಂವೃತೋ ಯಯೌ ॥೧೩॥

"ಮೃತ್ಯುವಿಗೆ ಮೃತ್ಯುವೂ, ಕರುಣಾಸಾಗರನೂ, ಕಣ್ಣಿನಿಂದ ಕಾಲನನ್ನು ಜಯಿಸಿದವನೂ, ನಾಗಭೂಷಣನೂ, ಶೂಲಧಾರಿಯೂ, ದಿಗಂಬರನೂ, ಹಣೆಯಲ್ಲಿ ಉರಿಗಣ್ಣುಳ್ಳವನೂ ಆದ ಓ ಪರಮೇಶ್ವರ ನಿನಗೆ ನಮಸ್ಕಾರವು." ॥೯॥

ಹೀಗೆ ಮಾರ್ಕಂಡೇಯನು ಶಿವನನ್ನಾರಾಧಿಸುತ್ತಲಿರಲು ಮರಣ ದಿನವು ಸಮೀಪಿಸಿತು. ಅಂದು ಕ್ರೂರನಾದ ಯಮನು ಮೃತ್ಯುಪಾಶವನ್ನು ಹಿಡಿದುಕೊಂಡು ಅವನನ್ನೊಯ್ಯಲು ಬಂದನು. ॥೧೦॥

ಆ ಯಮನು ಕರಿಯ ಬಣ್ಣದ ದೊಡ್ಡ ಕೋಣವನ್ನೇರಿದ್ದನು. ಕೋರೆದಾಡೆಗಳುಳ್ಳವನಾಗಿ ಮಹಾಕೋಪದಿಂದಿದ್ದನು. ಅವನ ಜೊತೆಯಲ್ಲಿ ಮೃತ್ಯು, ಜ್ವರ ಮೊದಲಾದ ಅವನ ಪರಿವಾರದವರಿದ್ದರು. ಅವನು ಸದಾ ಹುಬ್ಬುಗಂಟಿಕ್ಕಿಕೊಂಡಿದ್ದನು. ॥೧೧॥

ಆ ಯಮನು ನಾಲಿಗೆಯಿಂದ ತನ್ನ ತುಟಿ ದಾಡೆಗಳನ್ನು ಸವರಿಕೊಳ್ಳುತ್ತಿದ್ದನು. ಅವನ ಜೊತೆಯಲ್ಲಿ ಕರಿಯ ಬಣ್ಣದ ಭಯಂಕರರಾದ ಪಾಶಮುದ್ಗರಗಳನ್ನು ಹಿಡಿದಿರುವ ಮೇಲುಮುಖವಾದ ತಲೆಗೂದಲುಳ್ಳ ಯಮದೂತರು ಅನೇಕ ಮಂದಿ ಇದ್ದರು. ॥೧೨-೧೩॥

ಮಾರ್ಕಂಡೇಯಂ ಮೀಲಿತಾಕ್ಷಮಾಜುಹಾವ ಯಮಸ್ತದಾ ॥೧೪॥

॥ ಯಮ ಉವಾಚ ॥

ಕಿಂ ಮಾಂ ಭೀಷಯಸೇ ಬಾಲ ನಾಹಂ ಭೀತಃ ಪ್ರತಾರಣೈಃ ।
ಮತ್ಪಾಶಪಾಶಿತಾನಾಂ ಚ ಕ್ವಚಿದಸ್ತಿ ಪರಾಯಣಂ ॥೧೫॥

ಕಿಮನೇನ ವಿಚಾರೇಣ ನಿವರ್ತಸ್ವೋದ್ಯಮಾನ್ಮೃಥಾ ।
ತಪಸ್ವಿನಾಂ ಚ ಕೋದ್ಯೋತ್ರ ನೃಪಾಣಾಮಯುತಾಷ್ಟಕಂ ॥೧೬॥

ಚರಾಚರಜಗಚ್ಚಾತ್ರ ಸ್ಥಿತಂ ಮಚ್ಛಾಸನೇಽದ್ಯ ಹಿ ।
ಮದ್ದೂತದರ್ಶನೇನಾಪಿ ಭೀತಂ ಸರ್ವಂ ಚರಾಚರಂ ॥೧೭॥

ಕಸ್ತೇ ಕಾಮೋ ವೃಥಾಬಾಲ ಯಾಹಿ ಮತ್ಸದನಂ ಧ್ರುವಂ ।
ನ ಮತ್ತಃ ಕಶ್ಚಿದಸ್ತ್ಯೇವ ತವ ಪ್ರಾಣಾಪಹಾರಕೃತ್ ॥೧೮॥

ಕಣ್ಣುಮುಚ್ಚಿ ಶಿವನನ್ನು ಧ್ಯಾನಿಸುತ್ತಲಿರುವ ಮಾರ್ಕಂಡೇಯನನ್ನು ಆ ಯಮನು ತನ್ನೊಡನೆ ಬರುವಂತೆ ಹೀಗೆ ಹೇಳಿ ಕರೆದನು. ॥೧೪॥

"ಎಲೈ ಹುಡುಗ, ಈ ತರಹದ ಮೋಸದ ವೇಷದಿಂದ ನನ್ನನ್ನು ಹೆದರಿಸುವೆಯೇನು? ನಾನು ಹೆದರುವವನಲ್ಲ. ನನ್ನ ಪಾಶಕ್ಕೆ ಬದ್ಧರಾಗುವ ಪ್ರಾಣಿಗಳನ್ನು ಯಾರೂ ರಕ್ಷಿಸಲಾರರು. ॥೧೫॥

ಈ ವ್ಯರ್ಥವಾದ ಉದ್ಯೋಗವನ್ನು ಬಿಟ್ಟು ನನ್ನೊಡನೆ ಬಾ, ತಪಸ್ವಿಯಾದ ನೀನು ನನ್ನನ್ನೇನುಮಾಡಬಲ್ಲೆ? ಕೋಟಿಮಂದಿ ಪರಾಕ್ರಮಿಗಳಾದ ರಾಜರನ್ನೂ ಮುನಿಗಳನ್ನೂ ನಾನು ಎಳದೊಯ್ಯುವೆನು, ತಿಳಿಯಿತೆ! ॥೧೬॥

ಚೇತನಾಚೇತನರೂಪವಾದ ಜಗತ್ತೆಲ್ಲವೂ ನನ್ನಧೀನದಲ್ಲಿರುವುದು. ನನ್ನ ದೂತರನ್ನು ನೋಡಿದರೂ ಸಾಕು, ಪ್ರಾಣಿಗಳೆಲ್ಲರೂ ಹೆದರುವರು. ॥೧೭॥

ಎಲೆ ಬಾಲಕ, ಸುಮ್ಮನೆ ಏಕೆ ಕಷ್ಟಪಡುವೆ? ಬಾ ನನ್ನ ಮನೆಗೆ, ನನ್ನಿಂದ ನಿನ್ನ ಪ್ರಾಣಗಳನ್ನು ಬಿಡಿಸುವವರು ಯಾರೂ ಇಲ್ಲ, ತಿಳಿಯಿತೆ? ನೀನಾಗಿ ಬರದಿದ್ದರೆ ನಾನೇ ಎಳದೊಯ್ಯುವೆನು, ಯಾರು ನಿನ್ನನ್ನು ರಕ್ಷಿಸುವರೋ ನೋಡೋಣ." ॥೧೮॥

ಕಸ್ತೇ ತ್ರಾತಾಽದ್ಯ ಪಶ್ಯಾಮಿ ಇತ್ಯುಕ್ತ್ವಾಽನೋಚಯತ್ಸ್ವಕಾನ್ ।
ಪಾಶಾನ್ ತದಾ ಯಮಶ್ಶೋಘ್ರಾನಾಶೀವಿಷಸಮುದ್ಭವಾನ್ ॥೧೯॥

ತಮಾಸನ್ನಂ ಗತಂ ವೀಕ್ಷ್ಯ ಚಾಂತಕಂ ಗಣಸಂವೃತಂ ।
ವಿವೃತ್ತನಯನಂ ಕ್ರೂರಂ ಲಿಂಗಮಾಲಿಂಗ್ಯ ಸಂಸ್ಥಿವಾನ್ ॥೨೦॥

ತದಾ ತುಷ್ಟಾವ ಭೀತೋಽಥ ಮಾರ್ಕಂಡೇಯೋ ಮಹೇಶ್ವರಂ॥೨೧॥

॥ ಮಾರ್ಕಂಡೇಯ ಉವಾಚ ॥

ರತ್ನಸಾನುಶರಾಸನಂ ರಜತಾದ್ರಿಶೃಂಗನಿಕೇತನಂ
ಶಿಂಜಿನೀಕೃತಪನ್ನಗೇಶ್ವರಮಚ್ಯುತಾನಲಸಾಯಕಂ ।
ಕ್ಷಿಪ್ರದಗ್ಧಪುರತ್ರಯಂ ತ್ರಿದಶಾಲಯೈರಭಿವಂದಿತಂ
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ॥೨೨॥

ಚಂದ್ರಶೇಖರ ಚಂದ್ರಶೇಖರ ಚಂದ್ರಶೇಖರ ಪಾಹಿ ಮಾಂ ।
ಚಂದ್ರಶೇಖರ ಚಂದ್ರಶೇಖರ ಚಂದ್ರಶೇಖರ ರಕ್ಷಮಾಂ ॥೨೩॥

ಹೀಗೆ ಹೇಳಿ ಯಮನು ತನ್ನ ಭಯಂಕರವಾದ ಸರ್ವಪಾಶಗಳನ್ನು ಮಾರ್ಕಂಡೇಯನ ಮೇಲೆ ಪ್ರಯೋಗಿಸಿದನು. ॥೧೯॥

ಹಾಗೆ ತನ್ನ ದೂತರೊಡನೆ ಬಂದಿರುವ ಭಯಂಕರನಾದ ಯಮನನ್ನೂ ಅವನು ಪಾಶಪ್ರಯೋಗಮಾಡಿದುದನ್ನೂ ನೋಡಿ ಮಾರ್ಕಂಡೇಯನು, ಗಟ್ಟಿಯಾಗಿ ಶಿವಲಿಂಗವನ್ನಪ್ಪಿಕೊಂಡು ಪರಮೇಶ್ವರನನ್ನು ಹೀಗೆ ಸ್ತುತಿಸಿದನು. ॥೨೦-೨೧॥

“ತ್ರಿಪುರಸಂಹಾರದಲ್ಲಿ ಮೇರುಪರ್ವತವನ್ನು ಧನುಸ್ಸನ್ನಾಗಿ ಹಿಡಿದವನೂ, ಆದಿಶೇಷನನ್ನು ಧನುಸ್ಸಿನ ಹುರಿಯನ್ನಾಗಿ ಮಾಡಿಕೊಂಡವನೂ, ನಾರಾಯಣನನ್ನು ಬಾಣವನ್ನಾಗಿ ಧರಿಸಿದವನೂ ಆಗಿ ತ್ರಿಪುರಾಸುರರನ್ನು ಕ್ಷಣಮಾತ್ರದಲ್ಲಿ ಸಂಹರಿಸಿದ ಕೈಲಾಸೇಶ್ವರನೇ, ನಿನ್ನನ್ನು ಆಶ್ರಯಿಸಿರುವೆನು, ಇಂತಹ ನನ್ನನ್ನು ಯಮನು ಏನುಮಾಡುವನು? ॥೨೨॥

ಓ ಚಂದ್ರಶೇಖರ, ಓ ಚಂದ್ರಶೇಖರ ನನ್ನನ್ನು ಪಾಲಿಸು, ಓ ಚಂದ್ರಶೇಖರ, ಓ ಚಂದ್ರಶೇಖರ, ಓ ಚಂದ್ರಶೇಖರ ನನ್ನನ್ನು ರಕ್ಷಿಸು. ॥೨೩॥

ಪಂಚಪಾದಪಪುಷ್ಪಗಂಧಿಪದಾಂಬುಜದ್ವಯಶೋಭಿತಂ
ಫಾಲಲೋಚನಜಾತಪಾವಕದಗ್ಧಮನ್ಮಥವಿಗ್ರಹಂ ।
ಭಸ್ಮದಿಗ್ಧಕಲೇವರಂ ಭವನಾಶನಂ ಭವಮವ್ಯಯಂ
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ॥೨೪॥

ಮತ್ತವಾರಣಮುಖ್ಯಚರ್ಮಕೃತೋತ್ತರೀಯಮನೋಹರಂ
ಪದ್ಮಜಾಸನಪದ್ಮಲೋಚನಪೂಜಿತಾಂಘ್ರಿಸರೋರುಹಂ ।
ದೇವಸಿಂಧುತರಂಗಶೀಕರಸಿಕ್ತಶೀತಜಟಾಧರಂ
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ॥೨೫॥

ಕುಂಡಲೀಕೃತಕುಂಡಲೀಶ್ವರಕುಂಡಲಂ ವೃಷವಾಹನಂ
ನಾರದಾದಿಮುನೀಶ್ವರಸ್ತುತವೈಭವಂ ಭುವನೇಶ್ವರಂ ।
ಅಂಧಕಾಂತಕಮಾಶ್ರಿತಾಮರಪಾದಪಂ ಶಮನಾಂತಕಂ
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ॥೨೬॥

ಕಲ್ಪವೃಕ್ಷಗಳಂತೆ ಇಷ್ಟಾರ್ಥಗಳೆಲ್ಲವನ್ನೂ ಕೊಡುವ ಸುಗಂಧವಾದ ಅಡಿದಾವರೆಗಳುಳ್ಳವನೂ, ಹಣೆಗಣ್ಣಿನ ಉರಿಯಿಂದ ಕಾಮನ ದೇಹವನ್ನು ದಹಿಸಿದವನೂ, ಭಸ್ಮವನ್ನು ಲೇಪಿಸಿಕೊಂಡವನೂ, ಸಂಸಾರ ಬಂಧನವನ್ನು ಹೋಗಲಾಡಿಸುವವನೂ, ನಾಶರಹಿತನೂ, ಆದ ಚಂದ್ರಶೇಖರನನ್ನು ಆಶ್ರಯಿಸುವೆನು. ಇಂತಹ ನನ್ನನ್ನು ಯಮನು ಏನುಮಾಡಿಯಾನು? ॥೨೪॥

ಕೊಬ್ಬಿದ ಆನೆಯ ಚರ್ಮವನ್ನು ಹೊದೆಯುವವನೂ, ಹರಿಬ್ರಹ್ಮರಿಂದ ಪೂಜಿಸಲ್ಪಡುವವನೂ, ದೇವಗಂಗೆಯಿಂದ ಶೀತಲವಾದ ಜಟೆಯುಳ್ಳವನೂ ಆದ ಚಂದ್ರಶೇಖರನನ್ನು ಶರಣುಹೊಂದುವೆನು, ಈಗ ನನ್ನನ್ನು ಯಮನು ಏನು ಮಾಡಿಯಾನು? ॥೨೫॥

ಕುಂಡಲಾಕಾರವಾಗಿರುವ ಸರ್ಪವನ್ನು ಆಭರಣವನ್ನಾಗಿ ಕಿವಿಯಲ್ಲಿ ಧರಿಸಿದವನೂ, ಜಗದೀಶ್ವರನೂ, ಅಂಧಕಾಸುರರನ್ನು ಸಂಹರಿಸಿದವನೂ, ಆಶ್ರಿತರಿಗೆ ಕಲ್ಪವೃಕ್ಷಪ್ರಾಯನೂ, ಮೃತ್ಯುಂಜಯನೂ, ನಾರದಾದಿ ಮುನಿಪೂಜಿತನೂ ಆದ ಚಂದ್ರಶೇಖರನನ್ನು ಆಶ್ರಯಿಸುವೆನು, ಇಂತಹ ನನಗೆ ಯಮನು ಏನು ಮಾಡುವನು? ॥೨೬॥

ಯಕ್ಷರಾಜಸಖಂ ಭಗಾಕ್ಷಹರಂ ಭುಜಂಗವಿಭೂಷಣಂ
ಶೈಲರಾಜಸುತಾಪರಿಷ್ಕೃತಚಾರುವಾಮಕಲೇವರಂ ।
ಕ್ಷ್ವೇಲನೀಲಗಲಂ ಪರಶ್ವಥಧಾರಿಣಂ ಮೃಗಧಾರಿಣಂ
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ॥೨೭॥

ಭೇಷಜಂ ಭವರೋಗಿಣಾಮಖಿಲಾಪದಾಮಪಹಾರಿಣಂ
ದಕ್ಷಯಜ್ಞವಿನಾಶನಂ ತ್ರಿಗುಣಾತ್ಮಕಂ ತ್ರಿವಿಲೋಚನಂ ।
ಭುಕ್ತಿಮುಕ್ತಿಫಲಪ್ರದಂ ಸಕಲಾಘಸಂಘನಿಬರ್ಹಣಂ
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ॥೨೮॥

ಭಕ್ತವತ್ಸಲಮರ್ಚತಾಂ ನಿಧಿಮಕ್ಷಯಂ ಹರಿದಂಬರಂ
ಸರ್ವಭೂತಪತಿಂ ಪರಾತ್ಪರಮಪ್ರಮೇಯಮನೂಪಮಂ ।
ಸೋಮವಾರಿನಭೋಹುತಾಶನಸೋಮಪಾನಿಲಖಾಕೃತಿಂ
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ॥೨೯॥

ಕುಬೇರನ ಸ್ನೇಹಿತನೂ, ಭಗನೆಂಬ ಸೂರ್ಯನ ಕಣ್ಣುಗಳನ್ನು ಕಿತ್ತವನೂ, ನಾಗಭೂಷಣನೂ, ಶರೀರದ ಎಡ ಅರ್ಧಭಾಗದಲ್ಲಿ ಸುಂದರಿಯಾದ ಗಿರಿಜೆಯನ್ನು ಧರಿಸಿರುವ ಅರ್ಧನಾರೀಶ್ವರನೂ, ವಿಷದಿಂದ ಕಪ್ಪಾದ ಕಂಠವುಳ್ಳವನೂ, ಕೊಡಲಿಯನ್ನು ಹಿಡಿದವನೂ, ಮೃಗಧಾರಿಯೂ ಆದ ಚಂದ್ರಶೇಖರನನ್ನು ಶರಣುಹೊಂದುವೆನು. ನನ್ನನ್ನು ಯಮನು ಏನು ಮಾಡಿಯಾನು? ॥೨೭॥

ಸಂಸಾರವೆಂಬ ರೋಗಗಳಿಗೆ ಔಷಧ ಸ್ವರೂಪನೂ, ಆಪತ್ತುಗಳೆಲ್ಲವನ್ನೂ ಪರಿಹರಿಸುವವನೂ, ದಕ್ಷಯಾಗವನ್ನು ಧ್ವಂಸಮಾಡಿದವನೂ, ಸತ್ವರಜಸ್ತಮೋಗುಣಸ್ವರೂಪನೂ, ಮುಕ್ಕಣ್ಣನೂ, ಭಕ್ತರಿಗೆ ಭೋಗಮೋಕ್ಷಗಳೆರಡನ್ನೂ ಕರುಣಿಸುವವನೂ, ಪಾಪಗಳೆಲ್ಲವನ್ನೂ ಪರಿಹರಿಸುವವನೂ ಆದ ಚಂದ್ರಶೇಖರನನ್ನಾಶ್ರಯಿಸಿರುವ ನನ್ನನ್ನು ಯಮನು ಏನು ಮಾಡಿಯಾನು? ॥೨೮॥

ತನ್ನನ್ನರ್ಚಿಸುವ ಭಕ್ತರಿಗೆ ಸ್ಥಿರವಾದ ಮುಕ್ತಿಯನ್ನು ಕರುಣಿಸುವವನೂ, ದಿಗಂಬರನೂ, ಭೂತಗಳಿಗೆ ಒಡೆಯನೂ, ಸರ್ವೋತ್ತಮನೂ, ಇಂದ್ರಿಯಗಳಿಗೆ ಅಗೋಚರನೂ, ಅಸಾಧಾರಣನೂ, ಚಂದ್ರ, ಜಲ, ಸೂರ್ಯ, ಭೂಮಿ, ಅಗ್ನಿ, ಹೋತೃ, ವಾಯು, ಆಕಾಶಗಳೆಂಬ ಎಂಟು ಮೂರ್ತಿಗಳುಳ್ಳವನೂ ಆದ

ವಿಶ್ವಸೃಷ್ಟಿವಿಧಾಯಿನಂ ಪುನರೇವ ಪಾಲನತತ್ಪರಂ
ಸಂಹರಂತಮಥ ಪ್ರಪಂಚಮಶೇಷಲೋಕನಿವಾಸಿನಂ ।
ಕ್ರೀಡಯಂತಮಹರ್ನಿಶಂ ಗಣನಾಥಯೂಥಸಮಾಕುಲಂ
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ॥೩೦॥

ಮಾರ್ಕಂಡೇಯಸ್ತುತಿಂ ಶ್ರುತ್ವಾ ಲಿಂಗಾನ್ನಿರ್ಗತ್ಯ ಶಂಕರಃ ।
ನೀಲಕಂಠೋ ವಿರೂಪಾಕ್ಷಃ ಕಪರ್ದಧೃತಚಂದ್ರಕಃ ॥೩೧॥

ಶೂಲಹಸ್ತೋ ಮಹಾದೇವ ಉಚ್ಚೈರ್ಘೋರಘೋಷೇಣ ವೇಗಿತಃ ।
ಶಂಪಾಕೋಟಿಮಹಾರಾವೈರ್ಭೀಷಯನ್ ತಂ ಯಮಂ ತದಾ ॥೩೨॥

ಪದಾಂಬುಜಾಗ್ರಘಾತೇನ ಮಕುಟೀತಾಡಯದ್ಯಮಂ ।
ಶೂಲೇನ ತೀಕ್ಷ್ಣಧಾರೇಣ ತಂ ಯಮಂ ವ್ಯಸುಮಾತನೋತ್ ॥೩೩॥

ಚಂದ್ರಶೇಖರನನ್ನು ಶರಣುಹೊಂದಿರುವೆನು. ಇಂತಹ ನನ್ನನ್ನು ಯಮನು ಏನು ಮಾಡಬಲ್ಲನು? ॥೨೯॥

ಬ್ರಹ್ಮನಾಗಿ ಜಗತ್ತನ್ನು ಸೃಷ್ಟಿಸುವವನೂ, ಹರಿಯಾಗಿ ಪಾಲಿಸುವವನೂ, ರುದ್ರನಾಗಿ ಸಂಹರಿಸುವವನೂ, ಜಗತ್ತಿನಲ್ಲೆಲ್ಲಾ ಅಂತರ್ಯಾಮಿಯಾಗಿ ವ್ಯಾಪಿಸಿರುವವನೂ, ರಾತ್ರಿ ಹಗಲು, ಪ್ರಪಂಚದ ನಿಖಿಲಪ್ರಾಣಿಗಳನ್ನು ಸುಖದುಃಖಗಳ ಓಲಾಟದಲ್ಲಿ ಆಡಿಸುವವನೂ, ಗಣಗಳೊಡನೆ ತಾಂಡವನರ್ತನವನ್ನಾಡುವ ನಟರಾಜನೂ ಆದ ಚಂದ್ರಶೇಖರನನ್ನು ಶರಣುಹೊಂದುವೆನು. ಇಂತಹ ನನ್ನನ್ನು ಯಮನು ಏನು ಮಾಡಿಯಾನು?" ॥೩೦॥

ಮಾರ್ಕಂಡೇಯನ ಈ ಸ್ತೋತ್ರವನ್ನು ಕೇಳಿ ಪರಮೇಶ್ವರನು ಮನಕರಗಿ ನೀಲಕಂಠನೂ, ಮುಕ್ಕಣ್ಣನೂ, ಚಂದ್ರಾರ್ಧಶೇಖರನೂ, ಶೂಲಧಾರಿಯೂ ಆಗಿ ಆ ಲಿಂಗದಿಂದ ಹೊರಹೊರಟನು. ಆಗ ಅಲ್ಲಿ ಭಯಂಕರವಾದ ಗರ್ಜನೆಯು ಕೇಳಿಬಂದಿತು. ಅದನ್ನು ಕೇಳಿ ಯಮನೂ ಯಮದೂತರೂ ತುಂಬಾ ಹೆದರಿದರು. ॥೩೧-೩೨॥

ಹೊರಬಂದವನೇ ಶಿವನು ಕೋಪದಿಂದ ತನ್ನ ಕಾಲಿನ ತುದಿಯಿಂದ ಯಮನ ಕಿರೀಟಕ್ಕೊದ್ದನು. ಮತ್ತು ಶೂಲವನ್ನಿರಿದು ಯಮನ ಪ್ರಾಣವನ್ನೇ ತೆಗೆದುಬಿಟ್ಟನು. ॥೩೩॥

ವಿಸೃಜ್ಯ ಪಾಶಂ ಸುಷ್ವಾಪ ಮಹಿಷೇ ಪರ್ವತೋಪಮೇ ।
ನಿವೃತ್ಯ ನಯನೇ ಕಾಲಃ ಕಾಲಕಾಲೇನ ಪಾತಿತಃ ॥೩೪॥

ಪತಿತಂ ತಂ ಸಮಾಲೋಕ್ಯ ತದ್ಗಣಾಃ ಕಾಂದಿಶಂಗತಾಃ ।
ವಿಸಂತ್ಯಕ್ತಾಯುಧಾಜಾಲಾಸ್ತೇ ದಿಶಂ ನಾವಲೋಕಯನ್ ॥೩೫॥

ಪತಿತೇ ಚ ತದಾ ಕಾಲೇ ಅಭೂತ್ಕೋಲಾಹಲೋ ಧ್ವನಿಃ ।
ದೇವಾನಾಂ ಚಾಸುರಾಣಾಂ ಚ ಪುಷ್ಪವೃಷ್ಟಿಂ ವಿಮುಂಚತಾಂ ॥೩೬॥

ಮಹೇಶಮೌಲಿಮಾಲಾಭಾಮಾಪತಂತೀಂ ನಭಃಸ್ಥಲಾತ್ ।
ಸಂಪ್ರತಿ ಪ್ರಸಭಂ ದೇವಾಸ್ತುಷ್ಟುವುರ್ನೀಲಲೋಹಿತಂ ॥೩೭॥

॥ ದೇವಾ ಊಚುಃ ॥

ಶ್ರೀವಾಮದೇವ ಜಿತಕಾಮ ಸಹಸ್ರಧಾಮ
ಸ್ತೋಮೈಕಸೀಮ ನಿಖಿಲಾಗಮಸಂಸ್ತುತಾಂಘ್ರೇ ।
ಭೂಮಾ ತ್ವಮೇವ ಶಶಿಧಾಮಕಲಾಲಲಾಮ
ಹೃದ್ವ್ಯೋಮಭೂಮ ಭಗವನ್ ಸತತಂ ನಮಸ್ತೇ ॥೩೮॥

ಮೃತ್ಯುವಿಗೆ ಮೃತ್ಯುವಾದ ಈಶ್ವರನ ಹೊಡೆತದಿಂದ ಯಮನು ಪ್ರಾಣವನ್ನು ನೀಗಿದನು. ಅವನ ಕೈಯಿಂದ ಪಾಶವು ಕಳಚಿಬಿದ್ದಿತು; ಬೆಟ್ಟದಂತಿರುವ ತನ್ನ ಕೋಣನಮೇಲೆ ಅವನು ಹಾಗೆಯೇ ಒರಗಿದನು. ॥೩೪॥

ಯಮನು ಹೀಗೆ ಮೃತನಾದುದನ್ನು ನೋಡಿ ಯಮದೂತರು ಭಯದಿಂದ ತಮ್ಮ ಆಯುಧಗಳನ್ನಲ್ಲಲ್ಲೇ ಬಿಸುಟು ಹಿಂದಿರುಗಿ ನೋಡದೆ ದಿಕ್ಕಾಪಾಲಾಗಿ ಓಡಿಹೋದರು. ॥೩೫॥

ಯಮನು ಬಿದ್ದೊಡನೇ ದೇವತೆಗಳೂ ದಾನವರೂ ಕೋಲಾಹಲವನ್ನು ಮಾಡಿ ಸಂತಸದಿಂದ ಹೂಮಳೆಗರೆದರು. ॥೩೬॥

ಆ ಹೂಮಳೆಯು ಶಿವನ ತಲೆಯ ಮೇಲೆ ಮಾಲೆಯಂತೆ ಬಿದ್ದಿತು. ಆಮೇಲೆ ದೇವತೆಗಳು ಮಹಾದೇವನನ್ನು ಹೀಗೆ ಸ್ತುತಿಸಿದರು. ॥೩೭॥

" ಮನ್ಮಥವೈರಿಯೂ, ಸಾವಿರ ಸಾಮಗಾನಗಳಿಂದ ಸ್ತುತಿಸಲ್ಪಡುವವನೂ, ವೇದಗಳಿಂದ ಹೊಗಳಲ್ಪಡುವವನೂ, ಚಂದ್ರಶೇಖರನೂ, ಪರಮಾತ್ಮನೂ, ಜನಗಳ ಹೃದಯದಲ್ಲಿ ನೆಲಸಿರುವವನೂ ಆದ ಓ ಭಗವಂತ, ನಿನಗೆ ಸದಾ ನಮಸ್ಕಾರ. ॥೩೮॥

ಅಂತಕಾಂತಕ ಸದೈವ ದಾಂತಹೃತ್ಪ
ದ್ಮಸದ್ಮಗ ಮಹೇಶ ಕೃಪಾಬ್ಧೇ ।
ಕಾಂತಶಾಂತಗಿರಿಜಾವರಕಾಂತ
ವೇದಾಂತವೇದ್ಯ ಭವತಾಂತಮವಾಪ್ಯ ॥೩೯॥

ತಸ್ಮಿನ್ನುಪರತೇ ಶಬ್ದೇ ಸಲುಲಾಯೇಂತಕೇ ಹತೇ ।
ಮುನಿಬಾಲಂ ಸಮಾಲೋಕ್ಯ ಬಾಲಚಂದ್ರಾವತಂಸಕಃ ॥೪೦॥

ದಂಡವತ್ಪ್ರಣತಂ ಭೂಮೌ ಮಾಭೈಷೀರಿತಿ ತಂ ವದನ್ ॥೪೧॥

॥ ಶ್ರೀ ಈಶ್ವರ ಉವಾಚ ॥

ದತ್ತಂ ಗಾಣಾಧಿಪತ್ಯಂ ತೇ ಮಾರ್ಕಂಡೇಯ ಮಹಾಮತೇ ।
ತ್ವಂ ಭಕ್ತೋಽತೀವ ಮತ್ಪಾದಯುಗ್ಮಾಂಬುಜಸಮರ್ಚಕಃ ॥೪೨॥

ನೀರುಜೋ ಜೀವವರ್ಷಾಣಾಂ ಷೋಡಶಾತ್ಮಾಽಜರಾಮರಃ ।
ಭವ ತ್ವಂ ವಿಗತಾಪಾಯಃ ಸದಾ ಲಿಂಗಾರ್ಚಕೋ ಮಮ ॥೪೩॥

ಮೃತ್ಯುವನ್ನು ಸಂಹರಿಸಿದ ಮೃತ್ಯುಂಜಯನೆ? ಜಿತೇಂದ್ರಿಯರ ಮನಸ್ಸಿನಲ್ಲಿ ನೆಲಸಿರುವ ಪರಮಾತ್ಮನೇ, ಕರುಣಾಸಾಗರನೇ, ಶಾಂತನೇ, ಮನೋಹರನೇ, ಗಿರಿಜಾಪತಿಯೇ, ವೇದಾಂತಗಳಲ್ಲಿ ತಿಳಿಯಲ್ಪಡುವವನೇ ನಿನಗೆ ನಮಸ್ಕಾರವು." ಎಂದು ದೇವತೆಗಳು ಬಹುವಾಗಿ ಹೊಗಳಿದರು. ॥೩೯॥

ಹೀಗೆ ಯಮನೂ ಅವನ ಕೋಣವೂ ಸಂಹೃತವಾಗಲು ಬಾಲಚಂದ್ರಶೇಖರನಾದ ಶಿವನ ಮುಂದೆ ನಮ್ರನಾಗಿ ನಿಂತಿರುವ ಮುನಿಬಾಲ ಮಾರ್ಕಂಡೇಯನನ್ನು ನೋಡಿ 'ಹೆದರಬೇಡ' ಎಂದು ಹೇಳುತ್ತಾ ಶಿವನು, ॥೪೦॥

ಎಲೈ ಮಗು, ಮಾರ್ಕಂಡೇಯ, ನನ್ನ ಪರಮಭಕ್ತನಾದ ನಿನಗೆ ನನ್ನ ಪ್ರಮಥಗಣಗಳ ನಾಯಕತ್ವವನ್ನು ಕೊಟ್ಟಿರುವೆನು, ನೀನು ಮಹಾತ್ಮನು. ॥೪೨॥

ಬೃಹಸ್ಪತಿಯ ಚಲನೆಯ ಗಣನೆಯಂತೆ ನೀನು ಹದಿನಾರುವರ್ಷಗಳು ಪೂರ್ತಿಯಾಗಿ ಅಂದರೆ ಏಳುಕಲ್ಪಪರ್ಯಂತ ಚಿರಂಜೀವಿಯಾಗಿ ಯಾವ ಆಪತ್ತೂ ಇಲ್ಲದೇ ಆರೋಗ್ಯವಂತನಾಗಿಬಾಳು, ಸದಾ ನನ್ನ ಲಿಂಗವನ್ನು ಅರ್ಚಿಸುತ್ತಲಿರು. ॥೪೩॥

ಮಲ್ಲಿಂಗಾರ್ಚನತತ್ಪರೇ ಮುನಿವರೇ ಕೋವಾಂತಕೋ ವಾ ಸುರಾಃ
ನ ಬ್ರಹ್ಮೇಂದ್ರಮರುದ್ಗಣಾ ಹರಿಹರಾಃ ಪಾಪಾದ್ರಿಸಂಘೇನ ಕಿಂ ।
ತದ್ಭೀತಿಂ ಜನಿಮೃತ್ಯುರೋಗನಿಕರಂ ಚೋನ್ಮುಚ್ಯ ಮುಕ್ತಿಪ್ರಭಾ
ಕಾಂತಂ ತಂ ಪ್ರಕರೋಮಿ ತುಷ್ಟಹೃದಯಃ ಶೃಣ್ವಂತು ದೇವಾಸ್ಸದಾ ॥೪೪॥

ಮಾರ್ಕಂಡೇಯ ತವಾಸ್ತು ನಿತ್ಯಮಮರಾಧೀಶಾಶ್ಚ ಬ್ರಹ್ಮಾದಯಃ
ವಿಷ್ಣ್ವಾದ್ಯಾಃ ಪ್ರತಿಕಲ್ಪನಾಶವಪುಷಃ ಕಲ್ಪಾಂತಮೇತತ್ಪರಂ ।
ನಾಸೀಸ್ತ್ವಂ ತ್ವವಿನಾಶಿ ದಿವ್ಯವಪುಷಾ ನಿತ್ಯೋ ಜರಾವರ್ಜಿತಃ
ಯೌವನ್ಮತ್ಸದನೇ ಚಿರಾಯು ಮಮ ಭಕ್ತ್ಯಾ ಪ್ರಮೋದಶ್ಚಿರಂ ॥೪೫॥

॥ ಮಾರ್ಕಂಡೇಯ ಉವಾಚ ॥

ಇಂದುಕುಂದಧವಳಾಂಗಮಹೋಕ್ಷಾಪಾಂಗಸಂಗಚರಣಾಂಬುಜ ಪಾಹಿ ।
ಶಾಂಗಲಿಂಗಕೃತಸಂಗಮಹಾಂಗಸ್ಯಾಸ್ಯಲೋಕನ ಹರಾವ್ಯಯಪಾಹಿ ॥೪೬॥

ಶಿವಲಿಂಗವನ್ನು ಭಕ್ತಿಯಿಂದ ಅರ್ಚಿಸುವ ಮುನಿಶ್ರೇಷ್ಠನಾದ ನಿನ್ನನ್ನು ಯಮನಾಗಲೀ ದೇವತೆಗಳಾಗಲೀ, ಬ್ರಹ್ಮ, ಹರಿ, ರುದ್ರ ಇಂದ್ರ ಮರುತ್ತುಗಳಾಗಲೀ ಏನುಮಾಡಿಯಾರು ? ಪಾಪಗಳೇನು ಮಾಡಿಯಾವು ? ಆದುದರಿಂದ ನೀನು ಜನನ ಮರಣ ರೋಗಗಳ ಭಯವನ್ನು ಬಿಡು. ದೇವತೆಗಳೆಲ್ಲರೂ ಕೇಳುವಂತೆ ಹೇಳುವೆನು. ಮುಂದೆ ನಿನ್ನನ್ನು ಮುಕ್ತಿತರುಣಿಗೆ ಯೋಗ್ಯವರನನ್ನಾಗಿ ಮಾಡುವೆನು. ॥೪೪॥

ಎಲೈ ಮಾರ್ಕಂಡೇಯ, ಹರಿ, ಬ್ರಹ್ಮ ಮೊದಲಾದ ದೇವನಾಯಕರೂ ಸಹ ಒಂದು ಕಲ್ಪ ಮುಗಿದೊಡನೆಯೇ ಮರಣವನ್ನೈದುವರು. ಆದರೆ ನೀನು ನನ್ನ ಭಕ್ತಿಯ ಮಹಿಮೆಯಿಂದ ದಿವ್ಯಶರೀರವುಳ್ಳವನಾಗಿ ಮುಪ್ಪುಖಾಯಿಲೆಗಳಿಲ್ಲದೇ ನನ್ನ ಲೋಕದಲ್ಲಿ ಅನೇಕ ಕಲ್ಪಗಳವರೆಗೆ ಜೀವಿಸಿ ಚಿರಂಜೀವಿಯೆಂದು ಪ್ರಸಿದ್ಧನಾಗುವೆ. ಎಂದು ಶಂಕರನು ವರವನ್ನೀಯಲು, ಮಾರ್ಕಂಡೇಯನು, ॥೪೫॥

ಚಂದ್ರ, ಗಿರಿಮಲ್ಲಿಗೆಗಳಂತೆ ಶುಭ್ರವಾದ ದೇಹವುಳ್ಳವನೂ, ನಿಜಸ್ವರೂಪಕ್ಕೂ ಲಿಂಗಕ್ಕೂ ಭೇದವಿಲ್ಲದಿರುವುದನ್ನು ತೋರಿಸಲೋಸುಗ ಲಿಂಗದಿಂದ ಹೊರ ಹೊರಟವನೂ, ವೃಷಭವಾಹನನೂ, ನಾಶರಹಿತನೂ ಆದ ಓ ದೇವನೇ, ಪಾಲಿಸು. ॥೪೬॥

ಗಂಗಾತುಂಗತರಂಗರಂಜಿತಜಟಾಜೂಟೇಂದುಖಂಡೋಜ್ಜ್ವಲ
ಜ್ವಾಲಾಜಾಲವಿಲೋಚನೋತ್ತಮ ಮಹಾಕಾಕೋದರಾಕಲ್ಪಕ ।
ಲೀಲಾಚಾಲಿತರಂಜಿತತ್ರಿಭುವನಾಪಾರಾರ್ಣವಾಂತಸ್ಥಿತ
ಘೋರಾಶೀವಿಷನಾಥರಂಜಿತಮಹಾಪಾದಾಂಬುಜಾಪಾದ್ಯ ಮಾಂ ॥೪೭॥

ಮುಕುಂದನಯನಾರ್ಚಿತಂ ಪದಯುಗಂ ಪ್ರಪನ್ನೋಽಸ್ಮಿ ತೇ
ಸನಂದನಸನಾತನೈಃ ಕಲಿತವಂದನಂ ನಂದನಂ ।
ಹೃದಂಬುಧಿತರಂಗಕೈರ್ನಿಖಿಲವೇದವೇದ್ಯಂ ಸದಾ
ಪದಾಂಬುಜಮರಂದಪೋ ಭವತು ಮಾನಸಃ ಷಟ್ಪದಃ ॥೪೮॥

ಕುಲಾಚಲಕುಮಾರಿಕಾಕುಚತಟೇ ವಿಹೃತ್ಯಾದರಂ
ತ್ವದೀಯಮಧುನಾ ಪ್ರಭೋ ಮಯಿ ಮಹಾಘದುಃಖೈರ್ಯುತೇ ।
ನಿಧೇಹಿ ಯದಿ ಮಾನಸಂ ತದಿಹಮುಕ್ತಿಕಾಂತಾಪತಿ
ರ್ಭವಾಮಿ ಭುವನೇಽಪಿ ಸನ್ ಕುರು ದಯಾಂ ತ್ವದೀಯೇ ಶಿಶೌ ॥೪೯॥

ಜಟೆಯಲ್ಲಿ ದೇವಗಂಗೆಯನ್ನೂ ಚಂದ್ರಕಲೆಯನ್ನೂ ಧರಿಸಿದ ಓ ದೇವನೇ, ಹಣೆಯಲ್ಲಿ ಉರಿಗಣ್ಣುಳ್ಳವನೇ, ನಾಗಭೂಷಣನೇ, ಲೀಲೆಯಿಂದ ಪ್ರಪಂಚವನ್ನು ಸೃಷ್ಟಿಸಿ ಅದರಲ್ಲಿ ಅಂತರ್ಯಾಮಿಯಾಗಿರುವ ಓ ಪರಮಾತ್ಮನೇ, ನನ್ನನ್ನು ದಯೆಯಿಂದ ಪಾಲಿಸು. ॥೪೭॥

ಓ ದೇವ, ನಾರಾಯಣನ ನಯನ ಕಮಲದಿಂದ ಪೂಜಿತನಾದವನೇ, ಸನಂದನ, ಸನಾತನ ಮೊದಲಾದ ಯೋಗಿಗಳು ವಂದಿಸುವ, ಮತ್ತು ವೇದಗಳಲ್ಲಿ ತಿಳಿಯಬಹುದಾದಂತಹ ನಿನ್ನನ್ನು ಮೊರೆಹೊಕ್ಕಿರುವೆನು. ನನ್ನ ಮನವೆಂಬ ದುಂಬಿಯು ಸದಾ ನಿನ್ನ ಅಡಿದಾವರೆಯ ಮಕರಂದವನ್ನು ಕುಡಿಯುವಂತಾಗಲಿ. ॥೪೮॥

ಹಿಮಾಲಯನ ಮಗಳಾದ ಉಮಾಸುಂದರಿಯ ಸುಂದರಸ್ತನಗಳಲ್ಲಿ ವಿಹರಿಸುವ ನಿನ್ನ ಮನಸ್ಸು, ಮಹಾಪಾಪಿಯಾದ ನನ್ನಲ್ಲಿ ಕರುಣೆಯುಳ್ಳದ್ದಾದರೆ ನಾನು ಮುಕ್ತಿಯೆಂಬ ತರುಣಿಯನ್ನು ಖಂಡಿತವಾಗಿ ವಶಪಡಿಸಿಕೊಳ್ಳುವೆನು. ಓ ಮಹಾದೇವ, ನಿನ್ನ ಶಿಶುವಾದ ನನ್ನಲ್ಲಿ ದಯೆದೋರು. ॥೪೯॥

ವಿಶ್ರಾಣಯ ಶ್ರಮಹರಾಮನವದ್ಯದೃಷ್ಟಿಂ
ಕಷ್ಟೌಘಭೇದನವಿಧೌ ವಿಧಿವಿಷ್ಣುವಂದ್ಯ ।
ಅದ್ಯೋತ್ತಮೋತ್ತಮಭಿಷಗ್ವರ ಚಂದ್ರಚೂಡ
ಸಂಸಾರರೋಗಹರ ರುದ್ರ ರುಜಂ ವಿನಾಶ್ಯ ॥೫೦॥

ಇತಿ ಶ್ರೀಶಿವರಹಸ್ಯೇ ಶಿವಚತುರ್ಥಾಂಶೇ ಮಾರ್ಕಂಡೇಯತಪೋವರ್ಣನಂ ಯಮಪಾಶಬಂಧನಂ ಮಾರ್ಕಂಡೇಯಸ್ತೋತ್ರಂ ಶಿವಾಗಮನಂ ಯಮಾಸುನಿಗ್ರಹಣಂ ವರಪ್ರದಾನಂ ಮಾರ್ಕಂಡೇಯ ಪ್ರಾರ್ಥನಾದಿ ವರ್ಣನಂ ನಾಮ ಚತುರ್ದಶೋಽಧ್ಯಾಯಃ

ಸಂಸಾರವೆಂಬ ರೋಗವನ್ನು ಹೋಗಲಾಡಿಸುವುದರಲ್ಲಿ ಅತ್ಯುತ್ತಮ ವೈದ್ಯನಾದ ಓ ಚಂದ್ರಶೇಖರನೇ, ತಾಪತ್ರಯಗಳನ್ನು ನೀಗುವಂತಹ ಉತ್ತಮವಾದ ಜ್ಞಾನದೃಷ್ಟಿಯನ್ನು ನನಗೆ ಕೊಡು, ಸಂಸಾರರೋಗವನ್ನು ಹೋಗಲಾಡಿಸಿ ಕಾಪಾಡು ನಿನಗೆ ನಮಸ್ಕಾರವು." ಎಂದು ಮಾರ್ಕಂಡೇಯನು ಪ್ರಾರ್ಥಿಸಿದನು. ॥೫೦॥

ಇಲ್ಲಿಗೆ ಶ್ರೀಶಿವರಹಸ್ಯದಲ್ಲಿ ಚತುರ್ಥಾಂಶದಲ್ಲಿ ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಪಂಚದಶೋಽಧ್ಯಾಯಃ

|| ಸ್ಕಂದ ಉವಾಚ ||

ಹರಪಾದಹತೇ ಕಾಲೇ ಪ್ರಾರ್ಥಯಂತಿ ಮಹೇಶ್ವರಂ ।
ತತೋ ಬ್ರಹ್ಮಾದಯೋ ದೇವಾ ವಿಷ್ಣ್ವಾದ್ಯಾಸ್ಸುರಪುಂಗವಾಃ ॥೧॥

ಪ್ರಣಮ್ಯ ದೇವದೇವೇಶಂ ಸ್ತುವಂತೀಶಂ ಸನಾತನಂ ।
ಕಾಲಸ್ಯೋಜ್ಜೀವನಾರ್ಥಾಯ ಸದಾ ಪ್ರಾಂಜಲಯಸ್ತದಾ ॥೨॥

ಕೃತಾನಲೋಜ್ಜ್ವಲನ್ನೇತ್ರಂ ಕರಾಲಂ ಶೂಲಧಾರಿಣಂ ।
ಕಾಲಾಂತಕಂ ಮಹಾದೇವಂ ಘನಘೋಷಂ ಸದಾಶಿವಂ ॥೩॥

ತದಗ್ರೇ ಚ ಸ್ಥಿತಂ ಬಾಲಂ ಮಾರ್ಕಂಡೇಯಂ ಚ ಸಾಂಜಲಿಂ ।
ಮುಕುಟೇನಾಪವಿದ್ಧೇನ ಪತಿತಂ ಮಹಿಷೋಪರಿ ॥೪॥

ಹದಿನೈದನೆಯ ಅಧ್ಯಾಯ

ಜೈಗೀಷವ್ಯಮುನಿಯೇ, ಹಿಂದೆ ಹೇಳಿದಂತೆ ಯಮನು ಶಿವನಿಂದ ಹತನಾಗಲು ಅವನನ್ನು ಬದುಕಿಸಲೋಸುಗ ವಿಷ್ಣುಬ್ರಹ್ಮ-ಮೊದಲಾದ ದೇವತೆಗಳು ಪುರಾಣಪುರುಷನಾದ ಮಹಾದೇವನನ್ನು ಕುರಿತು ಕೈಜೋಡಿಸಿ ಹೀಗೆ ವಿನಯದಿಂದ ಪ್ರಾರ್ಥಿಸುವ ಸಂಕಲ್ಪವುಳ್ಳವರಾದರು. ||೧-೨||

ಆಗ ಮಹಾದೇವನು ಕಣ್ಣಿನಿಂದ ಕೋಪದುರಿಯನ್ನು (ಯಮನ ವಿಷಯದಲ್ಲಿ) ಕಾರುತ್ತಾ, ತ್ರಿಶೂಲಧಾರಿಯಾಗಿ ಗಂಭೀರನಾದವುಳ್ಳವನಾಗಿ ಭಯಂಕರನಾಗಿದ್ದನು. ||೩||

ಆ ದೇವನೆದುರಿಗೆ ಬಾಲನಾದ ಮಾರ್ಕಂಡೇಯನು ಕೈಜೋಡಿಸಿ ನಿಂತಿದ್ದನು. ಯಮನು ಮೃತನಾಗಿ ತನ್ನ ಕೋಣದ ಮೇಲೆ ಕರಿಬೆಟ್ಟದಂತೆ ಉರುಳಿ

ನಿರ್ಯಜ್ಜಿಹ್ವಂ ವಿವೃತ್ತಾಕ್ಷಂ ಮುಕ್ತಕೇಶಂ ಭಯಾನಕಂ ।
ಶಮನಂ ಶಮಿತೈಃ ಪ್ರಾಣೈಃ ಮಹಿಷೇಣಾಪಿ ಪಾತಿತಂ ॥೫॥

ನೀಲಾದ್ರಿಶಿಖರಾಕಾರಂ ದೃಷ್ಟ್ವೇಶಂ ತುಷ್ಟುವುಃ ಸುರಾಃ ॥೬॥

॥ ದೇವಾ ಊಚುಃ ॥

ಮಲಮಲಿನಜನಾಂತರಂಗಸಂಗೇ
ತವ ಸಂಗೋ ನ ಹಿ ವಿಶ್ವವಂದಿತ ।
ತವ ಶಾಂಗಾಮಲಹೃತ್ಸಾಥೋಜಗೇ
ಪದಪದ್ಮೇ ಪ್ರಕಟಪ್ರಭಾವಯುಗ್ಮೇ ॥೭॥

ಗರುಡಾಶನಮೌಳಿರತ್ನಮಾಲ
ಮದಹಸ್ತಿಪ್ರಕಟೋರುಚರ್ಮಶೋಭ ।
ಮಧುಮಾರೋತ್ತಮನೇತ್ರಪೂಜಿತಾಂಘ್ರೇ
ಶರಣಂ ಯಾಮ ಭವಂತಮೇಕಮೇವ ॥೮॥

ಬಿದ್ದಿದ್ದನು. ಅವನ ಕಿರೀಟವು ಕಳಚಿ ಕೆಳಬಿದ್ದಿತ್ತು. ನಾಲಿಗೆ ಹೊರಬಂದಿತ್ತು. ತಲೆಗೂದಲು ಬಿಚ್ಚಿಹೋಗಿತ್ತು. ಕಣ್ಣುಗಳು ತಿರುಗಿಹೋಗಿದ್ದುವು. ಮೊದಲೇ ಭಯಂಕರನಾದ ಯಮನು ಆ ಮೃತದಶೆಯಲ್ಲಿ ಇನ್ನೂ ಹೆಚ್ಚು ಭಯಂಕರನಾಗಿದ್ದನು. ಆಗ ದೇವತೆಗಳು ಶಿವನನ್ನು ಹೀಗೆ ಸ್ತುತಿಸಿದರು. ॥೪-೫-೬॥

" ಮಹಾಪಾಪಿಗಳಾದ ಜನಗಳ ಅಂತರಂಗದಲ್ಲಿದ್ದರೂ ನೀನು ಅವರ ಪಾಪ ಸಂಬಂಧವಿಲ್ಲದವನು. ಮಹಾಮಹಿಮೆಯುಳ್ಳ ನಿನ್ನ ಅಡಿದಾವರೆಯಲ್ಲಿ ಯಾರ ಮನಸ್ಸು ನೆಲಸಿರುವುದೋ ಅವರಲ್ಲಿ ನೀನು ಸದಾ ಕರುಣೆಯುಳ್ಳವನು. ॥೭॥

ಓ ನಾಗಭೂಷಣ, ಓ ಗಜಚರ್ಮಧಾರಿ, ಓ ದೇವದೇವ, ನಾರಾಯಣನ ನೇತ್ರಕಮಲದಿಂದ ಪೂಜಿತನಾದ ಓ ಸ್ವಾಮಿ, ನಿನ್ನೊಬ್ಬನನ್ನೇ ನಾವು ಸದಾ ಶರಣು ಹೊಂದಿರುವೆವು. ॥೮॥

ಯಾಮಿನೀರಮಣಮೌಲಿಜಾಲಭೃತ್
ಕಾಮಿನೀನಶಿವಸಾಮಿವಿಗ್ರಹ ।
ಮೇದಿನೀರಮಣತಾಪಿ ಭಾತಿ ಸೌ
ದಾಮಿನೀವ ತರಲಾ ಭುವಿ ಲಕ್ಷ್ಮೀಃ ॥೯॥

ಸಾಮಸ್ತೋಮೈಕಭೂಮಾ ತದುದಿತಮನಸಾಂ ರಾಶಿಭಿಃ ಸ್ತೋಭಸಂಘೈಃ
ಭೂಮಾನಂದಸ್ತ್ವಮಾತ್ಮಾ ಹೃದಿ ಸುಧಿಯುಜನೇ ಭಾಸಿ ಭಾನಾತ್ಮಕಸ್ತ್ವಂ ।
ಸಾಮಾಸ್ಯಾದಿಷಡಾಸ್ಯಪುತ್ರವಿನತಸ್ತ್ವಂ ಸೋಮಧಾಮಾನನೋ
ಮೀಮಾಂಸ್ಯೋಽಖಿಲವೇದಮೌಳಿನಿವಹೈಃ ಕಸ್ತೇ ಸಮಃ ಶಂಕರ ॥೧೦॥

ವೇದಾಂತೇ ವಿಹಿತೋರುಭಾವಕಲನೈಸ್ತ್ವಾಂ ದಾಂತವರ್ಯಾ ದ್ವಿಜಾಃ
ತ್ವಾಮೇಕಂ ಹೃದಿ ಸರ್ವಗಂ ಭುವನಪಂ ಜಾನಂತಿ ನಾನ್ಯಂ ಜಗತ್ ।
ಯತ್ತಸ್ತ್ವಂ ತದಿತಿ ಪ್ರಬೋಧವಚನೈರಸ್ಮೀತಿ ವಾಕ್ಯಾಧಿಕಂ
ಶಬ್ದೋದ್ಬೋಧಮಯಂ ಭವಂತಮಗಜಾಕಾಂತಂ ನಿತಾಂತಂ ಸದಾ ॥೧೧॥

ಚಂದ್ರನನ್ನು ತಲೆಯಲ್ಲಿ ಧರಿಸಿದವನೂ, ಅರ್ಧಶರೀರದಲ್ಲಿ ಗಿರಿಜೆಯನ್ನುಳ್ಳವನೂ ಆದ ಓ ಪರಮೇಶ್ವರಾ, ಭೂಮಿಯಲ್ಲಿ ಎಂತೆಂತಹ ಚಕ್ರವರ್ತಿಪದವಿಯೂ ಸಹ ಮಿಂಚಿನಂತೆ ಅಸ್ಥಿರವಾದುದು. ಈಗ ಕಂಡು ಇನ್ನೊಂದು ಕ್ಷಣದಲ್ಲಿ ನಾಶವಾಗುವುದು. ಆದರೆ ನೀನು ಮಾತ್ರ ನಿತ್ಯನಾದವನು, ನಾಶವಿಲ್ಲದವನು. ॥೯॥

ಸಾಮವೇದದ ಸ್ತೋಭಗಳೆಂಬ ಗಾನಕ್ರಮದಿಂದ ಸ್ತುತಿಸಲ್ಪಡುವವನೂ, ಆನಂದಮಯನೂ, ಜ್ಞಾನಿಗಳ ಹೃದಯದಲ್ಲಿ ಪ್ರಕಾಶಸ್ವರೂಪನಾಗಿರುವವನೂ, ವಿನಾಯಕ ಷಣ್ಮುಖ ಮೊದಲಾದ ಮಕ್ಕಳಿಂದ ಓಲೈಸಿಕೊಳ್ಳುವವನೂ, ಚಂದ್ರಶೇಖರನೂ, ವೇದಾಂತಗಳಲ್ಲಿ ವಿಮರ್ಶಿಸಲ್ಪಡುವವನೂ ಆದ ಓ ಶಂಕರ, ನಿನಗೆ ಸಮರಾರು ? ॥೧೦॥

ಓ ದೇವ, ವೇದಾಂತಿಗಳು ನಿನ್ನನ್ನು ಓರ್ವನೂ (ಅದ್ವಿತೀಯನೂ) ಅಂದರೆ ಎರಡನೆಯ ವಸ್ತುವಿಲ್ಲದವನೂ ಪ್ರಾಣಿಗಳ ಹೃದಯದಲ್ಲಿ ಜೀವರೂಪದಿಂದ ನೆಲಸಿರುವವನೂ ಎಂದು “ ತತ್ತ್ವಮಸಿ ” ಎಂಬ ವೇದವಾಕ್ಯಾನುಸಾರವಾಗಿ ಅನುಭವದಿಂದ ಹೇಳುವರು. ಇಂತಹ ಪರವಸ್ತುವಾದ ನಿನ್ನನ್ನು ಶಬ್ದಗಳಿಂದ ಮಾತ್ರ ತಿಳಿಯಬಹುದು.

ತ್ವತ್ಫಾಲಾನಲಕೀಲಿತೋ ವಿನಿಹತೋ ಜ್ವಾಲಾವಲೀಭಸ್ಮಸಾತ್
ತೂಲೋತ್ಥಾಮುಲಶೈಲವಚ್ಚ ನಿಹತೇ ಕಾಲೇ ಕುತಃ ಶೂಲಭೃತ್ ।
ಹೀನೇ ಕಾಲೇನುಲೋಕೇ ಜಗದಿದಮುಖಿಲಂ ಧರ್ಮಲೇಶೈಕಹೀನಂ
ಕಾ ವಾರ್ತಾ ಕಲಿತುಂ ಮಹೇಶ್ವರ ಮಹಾದೇವೇಶ ರಕ್ಷಾಧುನಾ ॥೧೨॥

ಸಹಮಾನಸಹಸ್ರಮಂತುಮೇನಂ
ತವ ಭಕ್ತೇ ಚ ಕೃತಂ ಹಿ ಕಾಲಜನ್ಯಂ ।
ಜನಿನಾಶಪ್ರಥನಾಯ ಕಾಲಮೇನಂ
ಜಗತೋಜ್ಜೀವಯ ಪಾಹಿ ಚಂದ್ರಮೌಳೇ ॥೧೩॥

॥ ಸೂತ ಉವಾಚ ॥

ಇತಿ ವೈಧಸವಾಕ್ಯತೋರುಮನ್ಯೋಃ
ಪ್ರಶಶಾಮೈವ ತದಾಶುಶುಕ್ಷಣಿಃ ।
ಶತಮನ್ಯುಪ್ರಭೃತೀನವೇಕ್ಷ್ಯ ದೃಷ್ಟ್ಯಾ
ಮುನಿಬಾಲಂ ಚ ಹತಂ ತದಾಂತಕಂ ಚ ॥೧೪॥

ಆ ಶಬ್ದಜ್ಞಾನವಾದರೂ "ತತ್ ತ್ವಂ ಅಸಿ" ಎಂಬಂತೆ ಆ ಪರವಸ್ತುವು ನೀನೇ ಅಂದರೆ ಜೀವನೇ ಆಗಿರುವೆ, ಎಂಬ ತಿಳಿವಳಿಕೆಯಾಗಿರುವುದು. ಆದರಿಂದ ನಾನೇ ಬ್ರಹ್ಮ (ಸೋಽಹಂ ಬ್ರಹ್ಮ) ಎಂಬ ಅನುಭವವು ಅಭೇದದಿಂದ ತಾನೇತಾನಾಗಿ ಉದಯಿಸುವುದು. ಆ ಪರಬ್ರಹ್ಮಸ್ವರೂಪನಾದ ನಿನಗೆ ನಮಸ್ಕಾರವು. ॥೧೧॥

ಎಲ್ಲರಿಗೂ ಅಜೇಯನಾದ ಮನ್ಮಥನೇ ನಿನ್ನ ಉರಿಗಣ್ಣಿನಿಂದ ಭಸ್ಮವಾದನು. ಅಂದಮೇಲೆ ಯಮನು ನಿನ್ನೆದುರಿಗೆ ನಿಲ್ಲಬಲ್ಲನೆ? ಆದರೆ ಅಧರ್ಮಿಗಳನ್ನು ಶಿಕ್ಷಿಸುವ ಯಮನು ಮೃತನಾದರೆ ಮುಂದೆ ಲೋಕದಲ್ಲಿ ಅಧರ್ಮವೇ ಹೆಚ್ಚಾಗುವುದು. ಆದುದರಿಂದ ಯಮನನ್ನು ಬದುಕಿಸು. ॥೧೨॥

ಓ ಚಂದ್ರಶೇಖರ, ನಿನ್ನ ಭಕ್ತರಲ್ಲಿ ಸಾವಿರಾರು ಅಪರಾಧಗಳನ್ನು ಯಮನು ಮಾಡಿರುವನು. ಆದರೂ ಜಗತ್ತಿನಲ್ಲಿ ಕ್ರಮವರಿತು ಜನನಮರಣಗಳು ನಡೆಯಲೋಸುಗ ಈ ಯಮನನ್ನು ಬದುಕಿಸು." ॥೧೩॥

ಬ್ರಹ್ಮನೇ ಮೊದಲಾದ ದೇವತೆಗಳ ಈ ಪ್ರಾರ್ಥನೆಯನ್ನು ಕೇಳಿ ಪರಮೇಶ್ವರನ ಕೋಪಾಗ್ನಿಯು ಕೂಡಲೇ ಇಳಿಯಿತು. ಆಗ ಶಿವನು ಇಂದ್ರ

ಪುನರುಜ್ಜೀವಯದಾಶು ದೇವಃ
ಕರುಣಾವಾರಿನಿಧಿಃ ಸುರಾದಿವಾಕ್ಯೈಃ ॥೧೫॥

ತಥೋತ್ಥಿತಃ ಪ್ರಣಮ್ಯೇಶಂ ಕಾಲೋ ದೇವಸ್ಯ ಪಶ್ಯತಃ।
ಮಾರ್ಕಂಡೇಯಸ್ಯ ಹಿ ಪುರೋ ವ್ರೀಡಾವನತಕಂಧರಃ ॥೧೬॥

ತುಷ್ಟಾವ ದೇವಮಿಷ್ಟಾಭಿರ್ವಾಕ್ಯೋತ್ಕೃಷ್ಟೈಸ್ತ್ವಖಿನ್ನಧೀಃ।
ಕೃತಾಂಜಲಿಪುಟೋ ಭೂತ್ವಾ ವಿಶ್ವೇಶಂ ಶಾಂತಮಾನಸಃ ॥೧೭॥

॥ ಕಾಲ ಉವಾಚ ॥

ಕಾಲಕಾಲ ಸುರವಂದ್ಯ ಶಂಕರ
ವ್ಯಾಲಮಾಲ ಗರನೀಲ ಮಹೇಶ।
ವ್ಯೋಮಕೇಶ ಶಶಿಚೂಡ ರಕ್ಷ ಮಾಂ
ಪಕ್ಷಪಾತಜದೃಶಾ ಪರಿಪಾಹಿ ॥೧೮॥

ದಕ್ಷಮನ್ಯುಕೃತಶಿಕ್ಷ ವೀಕ್ಷ್ಯಮಾಂ
ಕುಕ್ಷಿಗಾಖಿಲಜಗತ್ತ್ರಿಪುರಾರೇ।
ಪಾಹಿ ಮಾಮತಿದಯಾವಲೋಕನೈಃ
ಶಾಧಿ ಮಾಮತಿಭಯಾತ್ತ್ವ ಶಂಭೋ ॥೧೯॥

ಮಾರ್ಕಂಡೇಯ ಮೊದಲಾದವರನ್ನು ನೋಡಿ ಕರುಣೆಯಿಂದ ಯಮನನ್ನು ಬದುಕಿಸಿದನು. ॥೧೪-೧೫॥

ಆಗ ಯಮನು ಎಚ್ಚರಗೊಂಡೆದ್ದನು. ಎದುರಿನಲ್ಲಿ ಮಹಾದೇವನನ್ನೂ ಮಾರ್ಕಂಡೇಯನನ್ನೂ ನೋಡಿ ಅವನಿಗೆ ತುಂಬಾ ಲಜ್ಜೆಯಾಯಿತು. ಆಗ ಅವನು ಭಕ್ತಿಯಿಂದ ಕೈಜೋಡಿಸಿ ಮಹಾದೇವನನ್ನು ಹೀಗೆ ಸ್ತುತಿಸಿದನು. ॥೧೬-೧೭॥

"ಮೃತ್ಯುವಿಗೆ ಮೃತ್ಯುವೂ, ದೇವವಂದ್ಯನೂ, ನಾಗಭೂಷಣನೂ, ನೀಲ ಕಂಠನೂ, ಜಗದ್ವ್ಯಾಪಿಯೂ, ಚಂದ್ರಶೇಖರನೂ ಆದ ಓ ಮಹಾದೇವ, ನನ್ನನ್ನು ನಿನ್ನವನೆಂದು ತಿಳಿದು ಪರಿಪಾಲಿಸು. ॥೧೮॥

ದಕ್ಷಯಾಗವನ್ನು ಧ್ವಂಸಮಾಡಿದವನೂ, ಹೊಟ್ಟೆಯಲ್ಲಿ ಜಗತ್ತೆಲ್ಲವನ್ನಿಟ್ಟು ಕೊಂಡವನೂ ಆದ ಓ ಮಹಾದೇವ, ಕರುಣೆಯಿಂದ ನನ್ನನ್ನು ನೋಡಿ ಸಲಹು. ನನ್ನ ಭಯವನ್ನು ಹೋಗಲಾಡಿಸು. ॥೧೯॥

ಕುಂಡಲೀಶಕೃತಕುಂಡಲ ಶಂಭೋ
ಚಂಡಪಾಪಹರಣಂ ತವ ನಾಮ ।
ಅಂಡಜಾಂಡಜಗತೀ ಮೃಗಯಂತೌ
ಮೌಲಿಮೂಲಮಥ ತೇ ಸುರನಾಥ ॥೨೦॥

ಮದನಮಥಿತಕಾಯ ಭೀಮ ಶಂಭೋ
ಮಧುಮಥನಾಂಬುರುಹಾಕ್ಷಿ ಪೂಜ್ಯಪಾದ ।
ಧೃತಗಂಗಾಸುತರಂಗಮೌಳಿಭಾಗಾಂ
ಧಕಶತ್ರೋ ಪರಿಪಾಹಿ ಮಾಂ ದೃಶಾದ್ಯ ॥೨೧॥

ಉಕ್ಷಾಧೀಶ್ವರ ಕೇತನೋರುರುಚಿರಾಪಾಂಗಾವಲೋಕೇನ ಮಾಂ
ಪಾಹೀಶಾನ ದಯಾನಿಧಾನ ಭಗವನ್ ಕಾರುಣ್ಯವಾರಾಂನಿಧೇ ।
ಶಾಧೀಶಾನ ತವಾಜ್ಞಯೈವ ಸಹಸಾ ಲೋಕಂ ಚ ರಾಗಾತ್ಮಕಂ
ಪುಣ್ಯೈಃ ಪಾಪವರೈರ್ನಿಯುಕ್ತಭವಕಂ ಕುರ್ವೇ ಜಗತ್ಸ್ವಾಮಿತಃ ॥೨೨॥

ಸರ್ಪವನ್ನು ಕುಂಡಲವನ್ನಾಗಿ ಧರಿಸಿದವನಾದ ಓ ಶಿವನೇ, ಹರನೆಂಬ ನಿನ್ನ ನಾಮವೇ ನಮ್ಮ ಪಾಪವೆಲ್ಲವನ್ನೂ ಹೋಗಲಾಡಿಸುವುದು. ಹರಿಬ್ರಹ್ಮರು ಮಹಾಲಿಂಗ ರೂಪನಾದ ನಿನ್ನ ಬುಡಮೇಲುಗಳನ್ನು ನೋಡಲು ಹೊರಟು ಇಂದಿಗೂ ಕಾಣದೇ ಇರುವರು. ಇಂತಹ ಮಹಾಮಹಿಮನಾದ ದೇವದೇವನೇ, ನನ್ನನ್ನು ಸಲಹು.॥೨೦॥

ಮನ್ಮಥನನ್ನು ಉರಿಗಣ್ಣಿನಿಂದ ದಹಿಸಿದವನೂ, ಜಟೆಯಲ್ಲಿ ಗಂಗೆಯನ್ನು ಬಂಧಿಸಿಟ್ಟವನೂ, ಅಂಧಕಾಸುರವೈರಿಯೂ ನಾರಾಯಣನ ನೇತ್ರಕಮಲದಿಂದ ಅರ್ಚಿಸಲ್ಪಟ್ಟವನೂ ಆದ ಓ ಮಹಾದೇವ, ನನ್ನನ್ನು ಕರುಣಾದೃಷ್ಟಿಯಿಂದ ನೋಡು. ॥೨೧॥

ಓ ನಂದಿವಾಹನನೇ, ನನ್ನನ್ನು ಕೃಪಾದೃಷ್ಟಿಯಿಂದ ನೋಡಿ ಸಲಹು. ಕರುಣಾಸಾಗರನಾದ ಓ ಭಗವಂತ, ನನ್ನನ್ನು ರಕ್ಷಿಸು. ನಿನ್ನ ಅಪ್ಪಣೆಯಂತೆಯೇ ನಾನು ನಾನಾ ಆಸೆಗಳಿಗೊಳಪಟ್ಟು ಪಾಪಪುಣ್ಯಗಳನ್ನು ಮಾಡುವ ಜನರನ್ನು ನನ್ನ ಲೋಕಕ್ಕೆ ಒಯ್ಯುತ್ತಿರುವೆನು. ॥೨೨॥

ದೇವಾಜ್ಞಾಪಯ ದೇವದೇವ ಭಗವನ್ ಸರ್ವಜ್ಞ ಸಾಂಬಪ್ರಭೋ
ಕೇ ವಾ ತ್ವತ್ಪದಪೂಜಕಾಃ ಪ್ರತಿಭವಂ ಕ್ಷೇತ್ರಾಣಿ ಕಾನ್ಯೇವ ತೇ ।
ಕೇ ಶೈವಾಸ್ತ್ವಮುಸಂಮತಾಃ ಶಿವರತಾಸ್ತೇಷಾಂ ವದ ತ್ವಂ ಪ್ರಭೋ
ತತ್ಸೇವಾಂ ಕರವಾಣಿ ಶೂಲವರಧೃಕ್ಪಾಣೇ ಪ್ರಿಯಾಃ ಶಂಕರ ॥೨೩॥

ನಾತಸ್ತೇ ಪ್ರಪದಾಂಬುಜಾರ್ಚನರತಾಃ ಸ್ವಪ್ನೇಽಪಿಮನ್ಯೇ ಸದಾ ॥೨೪॥

॥ ಸೂತ ಉವಾಚ ॥

ಇತಿ ತಸ್ಯ ಗಿರಂ ಶ್ರುತ್ವಾ ಪ್ರಾಹ ದೇವೋ ಮಹೇಶ್ವರಃ ।
ಪಶ್ಯತಾಂ ದೇವಸಂಘಾನಾಂ ತಂ ಶಾಸದ್ಯಮಶಾಸನಃ ॥೨೫॥

॥ ಈಶ್ವರ ಉವಾಚ ॥

ಯೇ ಪೂಜಯಂತಿ ಶಶಿಖಂಡಶಿಖಂಡಲಿಂಗಂ
ಬಿಲ್ವೀದಳೈಶ್ಚ ನಿಯಮಾನ್ಮಪತಿ ಪ್ರದೋಷೇ ।
ನಿತ್ಯಂ ತ್ರಿಕಾಲಮಪಿ ಕೇವಲಮೇಕಕಾಲಂ
ಕಾಲಾಂತಕಂ ತವ ಯಮಾನ್ನಹಮರ್ಚನೀಯಾಃ ॥೨೬॥

ಓ ಭಗವಂತ, ಓ ಸರ್ವಜ್ಞನಾದ ಪಾರ್ವತೀಪತೆ, ನಿನ್ನನ್ನು ಭಕ್ತಿಯಿಂದ ಪೂಜಿಸುವ ಉತ್ತಮಶಿವಭಕ್ತರು ಯಾರು ಯಾರು? ನಿನ್ನ ಕ್ಷೇತ್ರಗಳು ಯಾವುವು? ನಿನಗೆ ಅತಿ ಪ್ರಿಯರಾದವರು ಯಾರು? ಆಜ್ಞಾಪಿಸು. ನಾನು ಅಂತಹವರ ಸೇವೆಯನ್ನು ಸದಾ ಮಾಡುವೆನು. ॥೨೩॥

ಇದು ಮೊದಲುಗೊಂಡು ನಿನ್ನ ಪಾದಸೇವಕರಾದ ಪರಮಭಕ್ತರನ್ನು ನಾನು ಕನಸಿನಲ್ಲಿಯೂ ಪೀಡಿಸಲಾರೆನು. ॥೨೪॥

ಮಹಾದೇವನು ಯಮನ ಈ ಮಾತನ್ನು ಕೇಳಿ ದೇವತೆಗಳೆದುರಿಗೆ ಹೀಗೆ ಆಜ್ಞಾಪಿಸಿದನು. ॥೨೫॥

“ಎಲೈ ಯಮನೇ, ಪುಣ್ಯಪ್ರದವಾದ ಪ್ರದೋಷಕಾಲದಲ್ಲಿ ಶಿವಲಿಂಗವನ್ನು ಬಿಲ್ವದಳಗಳಿಂದ ಭಕ್ತಿಪೂರ್ವಕವಾಗಿ ಪೂಜಿಸುವವರನ್ನೂ, ದಿನವೂ ಮೂರು ಕಾಲಗಳಲ್ಲಾಗಲೀ ಒಂದು ಹೊತ್ತಾಗಲೀ ನನ್ನನ್ನು ಅರ್ಚಿಸುವವರನ್ನೂ ನೀನು ಸೇವಿಸಬೇಕು. ಪೀಡಿಸಬಾರದು. ॥೨೬॥

ಯೇ ಭಸ್ಮಪುಂಡ್ರನಿಟಿಲಾಃ ಕುಟಿಲಾಽಪಿ ಪಾಪ್ಯೈಃ
ರುದ್ರಾಕ್ಷವಕ್ಷಸುಗಳಾಕರಕರ್ಣಯುಗ್ಮಾಃ ।
ಪಂಚಾಕ್ಷರೈಕನಿರತಾಃ ಶತರುದ್ರಮಂತ್ರ
ಜಪ್ಯಾನುರಕ್ತಹೃದಯಾಸ್ತವ ಪೂಜನೀಯಾಃ ॥೨೭॥

ಯೇ ತುಂಗಲಿಂಗದೃಗಪಾಂಗಿತಸಂಗಿಸಂಗಾಃ
ಶಾಂಗಾಃ ಕೃತಾರ್ಥತನವಸ್ತವ ಲೋಕಸಂಗಂ ।
ನೋ ಯಾಂತಿ ಯಾಂತಿ ಸದನಂ ಮಮ ರಾಜತಾದ್ರಿಂ
ಪಾಪಾದ್ರಿಭಂಗಕುಲಿಶಾಃ ಕುಶಲಾ ನರೇಷು ॥೨೮॥

ಮದ್ಭಕ್ತಪೂಜನಪರಾ ಮಮ ಸರ್ವವರ್ಣೇ
ವರ್ಣಾಶ್ರಮಾದಿರಹಿತಾ ಅಪಿ ತೇ ಸುಪೂಜ್ಯಾಃ ।
ವರ್ಣಾಶ್ರಮೇಷು ನಿರತಾ ಮಮ ಭಕ್ತಿಹೀನಾಃ
ತೇ ನೈ ಭ್ರಮಂತಿ ವಿವಿಧಾಗಮಧರ್ಮಭಾಷ್ಯೈಃ ॥೨೯॥

ತೇಷಾಂ ತ್ವಮೇವ ಫಲದೋಸಿ ಸುಧರ್ಮವರ್ತ್ಮ ।
ಪಾಪೇಷು ದುರ್ಮುಖತಯಾ ಪರಿಪಾಚಕೋಽಸಿ ॥೩೦॥

ಪಾಪದ ವಿಷಯದಲ್ಲಿ ಕುಟಿಲರೂ (ಪಾಪವಿಲ್ಲದವರೂ) ಎದೆ ಕೈಕಿವಿಗಳಲ್ಲಿ ರುದ್ರಾಕ್ಷಿಯನ್ನು ಧರಿಸಿ ಭಸ್ಮವನ್ನು ಹಚ್ಚಿಕೊಂಡು ಶಿವಪಂಚಾಕ್ಷರಮಂತ್ರವನ್ನೂ ಶತರುದ್ರಸೂಕ್ತಜಪವನ್ನೂ ನಿಷ್ಠೆಯಿಂದ ಯಾರು ಮಾಡುವರೋ, ಅಂತಹ ನನ್ನ ಭಕ್ತರನ್ನು ನೀನು ಸೇವಿಸಬೇಕು. ॥೨೭॥

ಯಾರು ನನ್ನ ಭವ್ಯಲಿಂಗವನ್ನು ಭಕ್ತಿಯಿಂದ ಅರ್ಚಿಸುತ್ತಾ ಪಾಪಗಳಿಗೆ ವಜ್ರಾಯುಧದಂತಿದ್ದು ನಿಷ್ಠರಾಗಿರುವರೋ, ಕೃತಕೃತ್ಯರಾಗಿರುವರೋ, ಅಂತಹವರು ನಿನ್ನ ಲೋಕಕ್ಕೆ ಬರುವವರಲ್ಲ; ನನ್ನ ಕೈಲಾಸಕ್ಕೆ ಸೇರತಕ್ಕವರು. ॥೨೮॥

ನನ್ನ ಭಕ್ತರನ್ನು ನಿಷ್ಠೆಯಿಂದ ಸೇವಿಸುತ್ತಾ ಇದ್ದು ಅಂತಹವರಿಗೆ ಜಾತಿಕುಲ ಗೋತ್ರಆಶ್ರಮಗಳಿಲ್ಲದಿದ್ದರೂ ನಿನಗೆ ವಂದನೀಯರು. ಜಾತಿಕುಲಾಶ್ರಮಗಳಿದ್ದೂ ಯಾರು ನನ್ನಲ್ಲಿ ಭಕ್ತಿಯಿಲ್ಲದವರಾಗಿರುವರೋ, ಅವರೆಷ್ಟೇ ವಿದ್ಯಾವಂತರಾಗಿದ್ದರೂ ವ್ಯರ್ಥವು. ಅವರು ನಿನ್ನ ಶಾಸನಕ್ಕೊಳಪಡುವರು. ॥೨೯-೩೦॥

ಯೇ ಚಂದ್ರಚೂಡ ಶರಣಾಗತದೀನಬಂಧೋ
ವಿಶ್ವೇಶ ಶಂಕರ ಮೃಡಾವ್ಯಯ ಪಾಹಿ ಶಂಭೋ ।
ಯೇ ಕೀರ್ತಯಂತಿ ಸತತಂ ಹಿಮಧಾಮಚೂಡಂ
ತೇ ಶಾಂಕರಾಸ್ತವ ಯಮಾನ್ಸಹಮರ್ಚನೀಯಾಃ ॥೩೧॥

ಯೇ ದಕ್ಷಶಿಕ್ಷ ಗಜಕಾಲಹರಾಂತಕಾರೇ
ಶ್ರೀವ್ಯೋಮಕೇಶ ಪರಮೇಶ್ವರ ಪಂಚವಕ್ತ್ರ ।
ಯೇ ಕೀರ್ತಯಂತಿ ಸತತಂ ಹಿಮಧಾಮಚೂಡಂ
ತೇ ಶಾಂಕರಾಸ್ತವ ಯಮಾನ್ಸಹಮರ್ಚನೀಯಾಃ ॥೩೨॥

ಯೇ ದೇವದೇವ ಜಗತಾಂ ಜನಕಾವ ಮಾಂ ತ್ವಂ
ವಿಶ್ವಾಧಿಕ ತ್ರಿದಶನಾಯಕ ಕಾಮವೈರಿನ್ ।
ಯೇ ಕೀರ್ತಯಂತಿ ಸತತಂ ಹಿಮಧಾಮಚೂಡಂ
ತೇ ಶಾಂಕರಾಸ್ತವ ಯಮಾನ್ಸಹಮರ್ಚನೀಯಾಃ ॥೩೩॥

ಎಲೈ ಯಮನೇ, ಯಾರು "ಓ ಚಂದ್ರಶೇಖರ, ಶರಣಾಗತರಕ್ಷಕ, ಓ ಪರಮೇಶ್ವರ, ಓ ಸುಖದಾತ, ಓ ನಾಶರಹಿತನಾದ ಪರಮಾತ್ಮ" ಎಂದು ಮೊದಲಾಗಿ ನನ್ನನ್ನು ಸದಾ ಸ್ತುತಿಸುವರೋ ಅಂತಹವರನ್ನೂ ನೀನು ಗೌರವಿಸಬೇಕು. ॥೩೧॥

ಮತ್ತು ಯಾರು "ದಕ್ಷಯಾಗವನ್ನು ಧ್ವಂಸಮಾಡಿದವನೇ ? ಗಜಾಸುರ ಯಮರನ್ನು ಸಂಹರಿಸಿದವನೇ, ಆಕಾಶವೇ ತಲೆಗೂದಲಾಗುಳ್ಳ ವಿರಾಟ್ಪುರುಷನೇ, ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಈಶಾನ ಎಂಬ ಐದು ಮುಖಗಳುಳ್ಳವನೇ" ಎಂದು ನನ್ನನ್ನು ಸ್ತುತಿಸುವರೋ ಅವರನ್ನು ನೀನು ಸೇವಿಸಬೇಕು. ॥೩೨॥

ಮತ್ತು ಯಾರು "ಜಗತ್ತನ್ನು ಸೃಷ್ಟಿಸುವವನೂ, ದೇವದೇವನೂ, ಕಾಮನನ್ನು ದಹಿಸಿದವನೂ ಸರ್ವೋತ್ತಮನೂ ಆದ ಓ ಸ್ವಾಮಿ, ನನ್ನನ್ನು ರಕ್ಷಿಸು" ಎಂದು ಭಜಿಸುವರೋ ಅಂತಹವರನ್ನೂ ನೀನು ಅರ್ಚಿಸಬೇಕು. ॥೩೩॥

ಯೇ ಖಂಡಪರಶೋ ವರಕುಂಡಲಕುಂಡಲೀಶ
ವೇತಂಡತುಂಡಜನಕೋತ್ತಮವೇದಗೀತ ।
ಯೇ ಕೀರ್ತಯಂತಿ ಸತತಂ ಹಿಮಧಾಮಚೂಡಂ
ತೇ ಶಾಂಕರಾಸ್ತವ ಯಮಾನ್ಸಹಮರ್ಚನೀಯಾಃ ॥೩೪॥

ಯೇ ಶೂಲಪಾಣಿಕಮಲಾಂಧಕದೈತ್ಯಶತ್ರೋ
ಭರ್ಗ ತ್ರಿಯಂಬಕ ಸದಾಶಿವ ಕಾಲಕಾಲ ।
ಯೇ ಕೀರ್ತಯಂತಿ ಸತತಂ ಹಿಮಧಾಮಚೂಡಂ
ತೇ ಶಾಂಕರಾಸ್ತವ ಯಮಾನ್ಸಹಮರ್ಚನೀಯಾಃ ॥೩೫॥

ಯೇ ದೇವದೇವ ಹರ ರುದ್ರ ಉಮಾಸಹಾಯ
ಬ್ರಹ್ಮೋತ್ತಮಾಂಗಕಲಿತಾಮಲಸ್ರಗ್ಧರೇತಿ ।
ಯೇ ಕೀರ್ತಯಂತಿ ಸತತಂ ಹಿಮಧಾಮಚೂಡಂ
ತೇ ಶಾಂಕರಾಸ್ತವ ಯಮಾನ್ಸಹಮರ್ಚನೀಯಾಃ ॥೩೬॥

ಎಲೈ ಯಮ, ಯಾರು "ಹರಿತವಾದ ಕೊಡಲಿಯನ್ನು ಧರಿಸಿದ ಸ್ವಾಮಿಯೇ, ಹಾವನ್ನು ಕಿವಿಯಾಭರಣವಾಗಿರಿಸಿಕೊಂಡ ದೇವನೆ? ಓ ವಿನಾಯಕನ ಜನಕನೇ? ವೇದಾಂತಗಳಲ್ಲಿ ಸ್ತುತಿಸಲ್ಪಡುವ ಸ್ವರೂಪವುಳ್ಳ ಪರಮಾತ್ಮನೇ" ಎಂದು ಸ್ತುತಿಸುವರೋ ಅಂತಹವರನ್ನೂ ನೀನು ಭಜಿಸಬೇಕು. ॥೩೪॥

ಮತ್ತು ಯಾರು "ಓ ಶೂಲಧಾರಿ, ಓ ಅಂಧಕಾಸುರಸಂಹಾರಿ, ಓ ಪಾಪಹಾರಿ, ಓ ಮೂರು ಕಣ್ಣುಗಳುಳ್ಳ ಮಹಾಜ್ಞಾನಿ, ಓ ಮಂಗಳಸ್ವರೂಪ, ಓ ಯಮನನ್ನು ಸಂಹರಿಸುವ ಮೃತ್ಯುಂಜಯ" ಎಂದು ನನ್ನನ್ನು ಸ್ತುತಿಸುವರೋ ಅವರನ್ನೂ ನೀನು ಅರ್ಚಿಸಬೇಕು. ॥೩೫॥

ಮತ್ತು ಯಾರು "ಓ ದೇವದೇವ, ಓ ಜಗತ್ತನ್ನು ಸಂಹರಿಸುವ ರುದ್ರನೇ, ಓ ಸದಾ ಗಿರಿಜೆಯೊಡಗೂಡಿರುವ ಅರ್ಧನಾರೀಶ್ವರ, ಓ ಬ್ರಹ್ಮನಿಗೂ ವಂದ್ಯನಾದ ಸ್ವಾಮಿ" ಎಂದು ಹೊಗಳುವರೋ ಅಂತಹವರನ್ನೂ ನೀನು ಸೇವಿಸಬೇಕು. ॥೩೬॥

ಯೇ ಮನ್ಮಥಾಂತಕ ಮಹೇಶ ಪಿನಾಕಪಾಣೇ
ಜ್ವಾಲಾವಲೀನಯನ ವೇದಕುಲಾವತಂಸ ।
ಯೇ ಕೀರ್ತಯಂತಿ ಸತತಂ ಹಿಮಧಾಮಚೂಡಂ
ತೇ ಶಾಂಕರಾಸ್ತವ ಯಮಾನ್ಸಹಮರ್ಚನೀಯಾಃ ॥೩೭॥

ಯೇ ವಿಶ್ವಸರ್ಜನವಿಧಾನವಿನಾಶಕೇಶ
ಆಶಾವಸಾನ ಪರಮೇತಿ ಶಿವೇತಿ ನಿತ್ಯಂ ।
ಯೇ ಕೀರ್ತಯಂತಿ ಸತತಂ ಹಿಮಧಾಮಚೂಡಂ
ತೇ ಶಾಂಕರಾಸ್ತವ ಯಮಾನ್ಸಹಮರ್ಚನೀಯಾಃ ॥೩೮॥

ವೈಕುಂಠನೇತ್ರಸರಸೀಭವಪೂಜ್ಯಪಾದ
ಮಾತಂಗಸಂಗಿಕಟಿಚರ್ಮವಸೇಶ್ವರೇತಿ ।
ಯೇ ಕೀರ್ತಯತಿ ಸತತಂ ಹಿಮಧಾಮಚೂಡಂ
ತೇ ಶಾಂಕರಾಸ್ತವ ಯಮಾನ್ಸಹಮರ್ಚನೀಯಾಃ ॥೩೯॥

ಎಲೈ ಯಮ, ಯಾರು "ಓ ಮನ್ಮಥವೈರಿ, ಓ ಪರಮೇಶ್ವರ, ಓ ಪಿನಾಕಧಾರಿ, ಓ ಅಗ್ನಿಯ ಜ್ವಾಲೆಗಳನ್ನುಗುಳುವ ಮೂರನೆಯ ಕಣ್ಣುಳ್ಳ ಸ್ವಾಮಿ, ಓ ವೇದಗಳಿಂದ ಸ್ತುತಿಸಲ್ಪಡುವವನೇ" ಎಂದು ಶ್ಲಾಘಿಸುವರೋ ಅವರೂ ನಿನಗೆ ವಂದ್ಯರು. ॥೩೭॥

ಮತ್ತು ಯಾರು "ಓ ಜಗತ್ತನ್ನು ಸೃಷ್ಟಿಸುವ, ಪಾಲಿಸುವ, ಸಂಹರಿಸುವ ಪರಮೇಶ್ವರ, ಓ ದಿಗಂಬರ" ಎಂದು ನನ್ನನ್ನು ಭಜಿಸುವರೋ ಅವರೂ ನಿನಗೆ ಪೂಜ್ಯರು. ॥೩೮॥

ಎಲೈ ಯಮ, ಯಾರು "ಓ ನಾರಾಯಣನ ನೇತ್ರಕಮಲದಿಂದ ಅರ್ಚಿತನಾದ ಸ್ವಾಮಿ, ಓ ಗಜಚರ್ಮಾಂಬರಧಾರಿ" ಎಂದು ಸ್ತುತಿಸುವರೋ ಅಂತಹವರನ್ನೂ ನೀನು ಅರ್ಚಿಸಬೇಕು. ॥೩೯॥

ಲುಂಪಂತಿ ಧಾತೃವಿಹಿತಾನಿ ಲಲಾಟಭಾಗೇ
ಯಾನ್ಯಕ್ಷರಾಣಿ ಸುಕೃತೇತರಪಾಕದಾನಿ ।
ತಾನಿ ತ್ರಿಪುಂಡ್ರರಚನೇನ ಸಮೂಲಜಾಲ
ಲೂನಾನಿ ಶಂಕರಕೃಪಾವಶತೋ ಭವಂತಿ ॥೪೦॥

ಇತಿ ಶ್ರೀಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ಯಮಾನುಶಾಸನಂ ನಾಮ ಪಂಚದಶೋಽಧ್ಯಾಯಃ

ಯಮನೇ, ಬ್ರಹ್ಮನು ಹಣೆಯಮೇಲೆ ದುಃಖಪರಂಪರೆಯನ್ನೇ ಬರೆದಿದ್ದರೂ ಮಾನವರು ಅದರ ಮೇಲೆ ಭಸ್ಮತ್ರಿಪುಂಡ್ರವನ್ನು ಲೇಪಿಸಿಕೊಂಡ ಮಾತ್ರಕ್ಕೆ ಆ ಕಷ್ಟಗಳೆಲ್ಲವೂ ಶಂಕರನ ದಯೆಯಿಂದ ನಾಶವಾಗುವುವು. ಇದನ್ನು ನೀನು ನಂಬು" ಎಂದು ಶಂಕರನು ಯಮನಿಗೆ ಆಜ್ಞಾಪಿಸಿದನು." ಎಂದು ಕುಮಾರಸ್ವಾಮಿಯು ಜೈಗೀಷವ್ಯಮುನಿಗೆ ತಿಳಿಯಪಡಿಸಿದನು. ॥೪೦॥

ಇಲ್ಲಿಗೆ ಶ್ರೀ ಶಿವರಹಸ್ಯದಲ್ಲಿ ಹದಿನೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಷೋಡಶೋಽಧ್ಯಾಯಃ

॥ ಸ್ಕಂದ ಉವಾಚ ॥

ಕ್ಷೇತ್ರವಾಸಾನಪಿ ಮುನೇಽಕಥಯತ್ಪರಮೇಶ್ವರಃ ।
ಯಮಾಂತಕೋ ಯಮಾಯಾಹ ಕ್ಷೇತ್ರಾಣಾಂ ಪತಿರೀಶ್ವರಃ ॥೧॥

ಕ್ಷೇತ್ರೇಷು ವಾಸನಿರತಾನ್ ಧೃತಭಸ್ಮಪುಂಡ್ರಾನ್
ಸಮ್ಮಾನಯಸ್ವ ಗಣವರ್ಯಯುತೋಽಪ್ಯಜಸ್ರಂ ।
ಆನಂದಕಾನನಪುರಾದನುರುದ್ರಕೋಟಿ
ಓಂಕಾರಪುಷ್ಪಕತ್ರಿಯಂಬಕದೇವಕೋಟೌ ॥೨॥

ಕೇದಾರವೃಂದಾವನವಾಸನಿಷ್ಠಾನ್
ಶ್ರೀಶೈಲಸಪ್ತಪುರಿಷು ಕ್ರಮಣಾನ್ ವಿವರ್ಜಯ ।

ಹದಿನಾರನೆಯ ಅಧ್ಯಾಯ

ಎಲೈ ಜೈಗೀಷವ್ಯ, ಆಮೇಲೆ ಕ್ಷೇತ್ರಗಳಿಗೆ ಪತಿಯಾದ ಪರಮೇಶ್ವರನು ಕ್ಷೇತ್ರವಾಸಿಗಳ ವಿಷಯವನ್ನೂ ಹೀಗೆ ಹೇಳಿದನು. ॥೧॥

ಎಲೈ ಯಮ, ಆನಂದಕಾನನಪುರ, ರುದ್ರಕೋಟಿ, ಓಂಕಾರಕ್ಷೇತ್ರ, ಪುಷ್ಪಕ ಕ್ಷೇತ್ರ, ತ್ರಿಯಂಬಕಕ್ಷೇತ್ರ, ದೇವಕ್ಷೇತ್ರ ಮೊದಲಾದ ಕ್ಷೇತ್ರಗಳಲ್ಲಿ ಭಸ್ಮರುದ್ರಾಕ್ಷಿ ಧಾರಿಗಳಾಗಿ ನನ್ನನ್ನು ಅರ್ಚಿಸುವವರನ್ನು ನೀನೂ ನಿನ್ನ ದೂತರೂ ಗೌರವಿಸ ಬೇಕು. ॥೨॥

ಕೇದಾರಕ್ಷೇತ್ರ, ವೃಂದಾವನ, ಶ್ರೀಶೈಲ, ಸಪ್ತಪುರಿ, ದಕ್ಷಿಣಸಮುದ್ರತೀರದಲ್ಲಿ ರುವ ಗೋಕರ್ಣ ಮೊದಲಾದ ಕ್ಷೇತ್ರಗಳು, ಪೂರ್ವದಲ್ಲಿ ಹರಿಯುವ ಗಂಗಾತೀರದಲ್ಲಿ

ಗೋಕರ್ಣದಕ್ಷಿಣಭವಾಂಬುಧಿಕೋಟಿಪೂರ್ವ
ಗಂಗೋರುಸಾಗರಗಯಾಪ್ರಥಿತಃ ಪ್ರಯಾಗಃ ॥೩॥

ಪುಣ್ಯೋ ಮಹಾಕಾಲಸುನರ್ಮದಾದಿ
ತೀರಸ್ಥಲಿಂಗನಿಲಯೇ ವಿಹಿತೋರುವಾಸಾಃ ।
ನಾಗೇಶ್ವರೇ ಭವಹರೇ ವರಹಸ್ತಿಶೈಲ
ಶ್ರೀಕಾಲಹಸ್ತಿನಗರೇ ಪರಿವರ್ಜಯಾಶು ॥೪॥

ಶ್ರೀಶೂಲಪಾಣಿಚರಣಸ್ಮರಣಾನುರಕ್ತಾನ್
ಪುಣ್ಯಾರುಣಾಚಲವರ್ಸಾ ಪರಿವರ್ಜಯಾಶು ।
ಏಕಾಮ್ರಧಾಮಾಭ್ರಸಭಾವಿಭಾಸಿ
ಮತ್ತಾಂಡವಪ್ರಿಯಮಿಲೋಕನಜಾಗರೂಕಾನ್ ॥೫॥

ವೃಂದಾದಿಗೋಪರ್ವತನೀಲಕಂಠ
ಸಹ್ಯಾದ್ರಿಜಾತಟಯುಗೋತ್ತಮವಾಸಹೃಷ್ಟಾನ್ ।
ಶ್ರೀಕಂಠಗಾಯತ್ರಿಶಿಲಾತೃಣೇಶರತ್ನೇಶ
ಮಾತೃಶಿಖರಸ್ಥಿತವಿಮಾಶಲಿಂಗಂ ॥೬॥

ರುವ ಗಯೆ, ಪ್ರಯಾಗ, ಮುಂತಾದ ಕ್ಷೇತ್ರದಲ್ಲಿ ವಾಸಿಸುವ ನನ್ನ ಭಕ್ತರ ಗೊಡವೆಗೆ ಹೋಗಕೂಡದು. ॥೩॥

ಪವಿತ್ರವಾದ ಮಹಾಕಾಲಕ್ಷೇತ್ರ, ನರ್ಮದಾತೀರದಲ್ಲಿರುವ ಶಿವಕ್ಷೇತ್ರಗಳು, ನಾಗೇಶ್ವರಕ್ಷೇತ್ರ, ಹಸ್ತಿಶೈಲ, ಕಾಲಹಸ್ತಿ ಮೊದಲಾದ ಶಿವಕ್ಷೇತ್ರಗಳಲ್ಲಿ ನೀನು ಪ್ರವೇಶಿಸಕೂಡದು. ॥೪॥

ಅರುಣಾಚಲಕ್ಷೇತ್ರದಲ್ಲಿ ಶೂಲಪಾಣಿಯಾದ ನನ್ನನ್ನು ಸದಾ ಸೇವಿಸುವವರನ್ನೂ, ಏಕಾಮ್ರ ಕ್ಷೇತ್ರದಲ್ಲಿ, ಅಭ್ರಸಭೆಯಲ್ಲಿ ನನ್ನ (ನಟರಾಜನ) ತಾಂಡವನೃತ್ಯವನ್ನು ನೋಡಲು ತವಕಿಸುವಂತಹ ಶಿವಭಕ್ತರನ್ನೂ ನೀನು ಸೇವಿಸಬೇಕು, ಪೀಡಿಸಬಾರದು. ॥೫॥

ವೃಂದಾವನ ಗೋಪರ್ವತಗಳಲ್ಲೂ, ಸಹ್ಯಾದ್ರಿಯ ತಪ್ಪಲುಗಳನ್ನೂ, ವಾಸ ಮಾಡುವ ನನ್ನ ಭಕ್ತರನ್ನೂ ಸೇವಿಸಬೇಕು. ಮತ್ತು ಶ್ರೀಕಂಠೇಶ್ವರ, ಗಾಯತ್ರೀ

ಸ್ತಂಬೇರಮಾಖ್ಯವಿಪಿನೇ ಧೃತಿನಾಥಪುಣ್ಯ
ಪಂಚಾಪಗೇಶಮಿನಾಯಕ ಕುಂಭಕೋಣೇ ।
ಮಧ್ಯಾರ್ಜುನೇ ವಿಧಿವನೇ ವಟಭೂಧರಬಿಲ್ವಕೇ ಚ
ಶ್ವೇತಾಖ್ಯಕಾನನಮಹಾಬ್ಧಿಜಸಂಗಮೇಷು ॥೭॥

ವಲ್ಮೀಕವೇದನಸೇತುಜಮೂಲಭಾಗೇ
ಕನ್ಯಾಶುಚೀಂದ್ರವರರೇಣುಜದ್ವಾದಶಾಂತೇ ।
ಅನ್ಯೇಷು ಪುಣ್ಯವಿಪಿನೇಷು ಮಹೇಂದ್ರಮೌಳೌ
ಸದ್ಯೋದ್ಭವಾತಟಯುಗೇ ಶಿವಲಿಂಗಸಂಘೇ ॥೮॥

ಮಾ ಯಾಹಿ ಶಾಂಭವಗೃಹೇಷು ಚ ವಿಪ್ರವರ್ಗೇ
ಭಸ್ಮಾಗ್ರಪುಂಡ್ರವಿಹಿತೋರುಲಲಾಟಿಕೇಷು ।
ವರ್ಣೀ ಯತಿರ್ಗೃಹಿವನೀ ಚ ತಥೈವ ನೀಚಾಃ
ಜಾತ್ಯಂತರಾ ಅಪಿ ಸದಾ ಯಮ ವರ್ಜನೀಯಾಃ ॥೯॥

ಶ್ವರ, ಶಿಲೇಶ್ವರ, ತೃಣೇಶ್ವರ, ರತ್ನೇಶ್ವರ ಮೊದಲಾದ ಹಿಮಾಲಯದ ಮಾತೃಶಿಖರದಲ್ಲಿರುವ ಶಿವಲಿಂಗಗಳನ್ನರ್ಚಿಸುವವರನ್ನೂ ನೀನು ಅರ್ಚಿಸಬೇಕು. ॥೬॥

ಸ್ತಂಬೇರಮವನಕ್ಷೇತ್ರ, ಧೃತಿನಾಥಕ್ಷೇತ್ರ, ಪಂಚಾಪಗೇಶ್ವರಕ್ಷೇತ್ರ, ಶಮಿನಾಯಕಕ್ಷೇತ್ರ, ಕುಂಭಕೋಣ, ಮಧ್ಯಾರ್ಜುನಕ್ಷೇತ್ರ, ವಿದುರಾಶ್ವತ್ಥಕ್ಷೇತ್ರ, ಬಿಲ್ವಕ್ಷೇತ್ರ, ಶ್ವೇತವನಕ್ಷೇತ್ರ, ಗಂಗಾಸಾಗರಸಂಗಮ ಈ ಸ್ಥಳಗಳಲ್ಲಿ ವಾಸಿಸುವ ನನ್ನ ಭಕ್ತರನ್ನು ನೀನು ನಿನ್ನ ಪಾಶಕ್ಕೊಳಪಡಿಸದೇ ರಕ್ಷಿಸಬೇಕು. ॥೭॥

ವಲ್ಮೀಕವೇದನಕ್ಷೇತ್ರ, ರಾಮೇಶ್ವರ, ಕನ್ಯಾಪರಿಶುದ್ಧಿಕ್ಷೇತ್ರ, ಇಂದ್ರಕ್ಷೇತ್ರ, ಪರಶುರಾಮಕ್ಷೇತ್ರ, ಮಹೇಂದ್ರಗಿರಿಯಲ್ಲಿರುವ ಪುಣ್ಯಕ್ಷೇತ್ರಗಳು, ಸದ್ಯೋದ್ಭವಾ ನದಿಯ ತೀರದ ಕ್ಷೇತ್ರಗಳು, ಸಾಲಗ್ರಾಮ ಇವೇ ಮೊದಲಾದ ಕ್ಷೇತ್ರಗಳಲ್ಲಿ ವಾಸಿಸುವ ಶಿವಭಕ್ತರನ್ನು ನೀನು ಪರಿವರ್ಜಿಸಬೇಕು, ಅವರ ಗೊಡವೆಗೆ ಹೋಗಕೂಡದು. ॥೮॥

ಎಲೈ ಯಮನೇ, ಭಸ್ಮರುದ್ರಾಕ್ಷಿಗಳನ್ನು ಧರಿಸಿ, ನನ್ನನ್ನು ಸೇವಿಸುವ ಶಿವಭಕ್ತರಾದ ನನ್ನ ಬ್ರಾಹ್ಮಣರ ಮನೆಯೊಳಗೆ ನಿನಗೆ ಪ್ರವೇಶವಿಲ್ಲ, ಶಿವಭಕ್ತನಾದ ಬ್ರಹ್ಮಚಾರಿ, ಯತಿ, ಗೃಹಸ್ಥ-ವಾನಪ್ರಸ್ಥ ಅಥವಾ ನೀಚಜಾತಿ ಕರ್ಮಗಳುಳ್ಳವನಾದರೂ ಸಹ ನೀನು ಅಂತಹವರ ಗೊಡವೆಗೆ ಹೋಗಕೂಡದು. ॥೯॥

ಏಷು ಕ್ಷೇತ್ರವರೇಷು ಶಾಂಕರಕೃಪಾಪೀಯೂಷವಾರಾಂನಿಧಾ
ವಾರಾಧ್ಯಾ ಹಿ ಸ್ವದೂತವರ್ಗನಿಕರೈರ್ಮಾ ಭೀಷಯೇಥಾ ಹಿತಾನ್ ।
ದತ್ವೈತೇಷು ಚ ಗಾಂ ಹಿರಣ್ಯರಜತಂ ಧಾನ್ಯಂ ಧನಂ ಯೋಗಿನೇ
ಶೈವಾಯಾಶು ಭುವಂ ಸಮೇತಿ ಚ ಸದಾ ಲಿಂಗಾರ್ಚಕೋ ಮಾಂ ಸದಾ
॥೧೦॥

ಮಲ್ಲಿಂಗಾಲಯಪಾಲಕೋ ಯದಿ ನೃಪಃ ಸಹ್ಯಾಪಗಾರೋಧಸಿ
ದೀಪೋದ್ದಾಮಸುಧೂಪದೋನ್ನನಿಕರೈರ್ನೀರಾಜನೈರ್ನರ್ತನೈಃ ।
ವೀಣಾವೇಣುಮೃದಂಗಕಾಹಲಮಹಾಜೀರ್ಣೋದ್ಧತೈಸ್ಸುಂದರೈಃ
ಛತ್ರೈಶ್ಚಾಮರದರ್ಪಣಾದಿನಿಕರೈರ್ಭೇರೀರಥಾದ್ಯುತ್ಸವೈಃ ॥೧೧॥

ಗೋಕ್ಷೀರಂ ಘೃತಶರ್ಕರಾಮಧುರಸಂ ರಂಭಾಫಲಂ ಚೂತಜಂ
ಇಕ್ಷೂನಿಂಬದಧಿಪ್ರಕೀರ್ಣಕುಸುಮಂ ಗಂಧಂ ಚ ಸ್ರಕ್ ನಾರಲಂ ।
ಯೋ ದದ್ಯಾಚ್ಛಿವಲಿಂಗಮೂರ್ಧ್ನಿ ಸ ತದಾ ತೈಲಂ ಚ ಶುದ್ಧೋದಕಂ
ವಸ್ತ್ರಂ ಚಾಸಿತನೀರಪಾನಸಫಲಂ ತಸ್ಮೈ ಚ ಮುಕ್ತಿಂ ದದೇ ॥೧೨॥

ಹಿಂದೆ ನಾನು ಹೇಳಿದ ಕ್ಷೇತ್ರಗಳಲ್ಲಿ ಶಿವನನ್ನಾರಾಧಿಸಿ ಅಲ್ಲಿರುವ ಶಿವಭಕ್ತರಿಗೆ ಗೋವು, ಸುವರ್ಣ, ಬೆಳ್ಳಿ, ಧನ, ಧಾನ್ಯ ಮೊದಲಾದುವನ್ನು ದಾನಮಾಡಿದರೆ ಅಂತಹವನು ನನ್ನ ಸ್ಥಾನವನ್ನು ಪಡೆಯುವನು. ಎಲೈ ಯಮ, ಈ ಕ್ಷೇತ್ರಗಳಲ್ಲಿ ವಾಸಮಾಡುವ ನನ್ನ ಭಕ್ತರನ್ನು ನಿನ್ನ ದೂತರಿಂದ ಪೀಡಿಸಬೇಡ, ಸೇವಿಸು.॥೧೦॥

ನನ್ನ ದೇವಾಲಯವನ್ನು ಧನಧಾನ್ಯ ಸಹಾಯಗಳಿಂದ ರಕ್ಷಿಸುವವನು ರಾಜನಾದರೂ ಅವನಿಗೆ ಮುಕ್ತಿಯನ್ನು ಕರುಣಿಸುವೆನು, ಮತ್ತು ಸಹ್ಯಾದ್ರಿಯಿಂದ ಜನಿಸುವ ನದಿಗಳ ತೀರದಲ್ಲಿ ನನ್ನನ್ನು ದೀಪಧೂಪಗಳಿಂದಲೂ, ಬಾಳೆಹಣ್ಣು ತೆಂಗಿನಕಾಯಿ ಹಲಸಿನಹಣ್ಣು ಮೊದಲಾದ ನೈವೇದ್ಯಗಳಿಂದಲೂ, ಮಂಗಳ ನೀರಾಜನದಿಂದಲೂ, ನರ್ತನದಿಂದಲೂ, ವೀಣೆ, ಕೊಳಲು, ಮದ್ದಳೆ, ಕಹಳೆ, ಭೇರಿ ಮೊದಲಾದ ವಾದ್ಯಗಳಿಂದಲೂ, ಛತ್ರಿ, ಚಾಮರ, ದರ್ಪಣ (ಕನ್ನಡಿ) ಗಳಿಂದಲೂ, ರಥೋತ್ಸವಗಳಿಂದಲೂ, ಕಬ್ಬಿನ ಹಾಲು, ಮೊಸರು, ಗಂಧ, ಹೂವು ಗಳಿಂದಲೂ, ಮಹಾಭಿಷೇಕದಿಂದಲೂ, ತೈಲಾಭ್ಯಂಗದಿಂದಲೂ, ನೀಲವಸ್ತ್ರದಿಂದಲೂ

ಯೋ ಬಿಲ್ವೋತ್ತಮಪುಷ್ಪವರ್ಷನಿಕರಂ ಕೃತ್ವಾ ಚ ಸಂಪೂಜಯೇತ್ ।
ತತ್ಪುಷ್ಪೈಸ್ಸ ತು ವಂಶಕೋಟಿಸಹಿತಃ ಕೈಲಾಸಮೌಳೌ ವಸೇತ್ ॥೧೩॥

ಯೇ ಬಿಲ್ವಮೂಲಶಿವಲಿಂಗಕೃತಪ್ರಣಾಮಾಃ
ಸಂಪೂಜಕಾಃ ಶ್ರುತಿಶತೋದಿತಮಂತ್ರಜಪ್ಯಾಃ ।
ಬಿಲ್ವಾರ್ಚಕಾಃ ಶಿವಮಹೇಶ್ವರನಾಮಮಾತ್ರ
ಸಂಕೀರ್ತನೈಕರಸನಾಸ್ತವ ವಂದನೀಯಾಃ ॥೧೪॥

ಯುಕ್ತಾನಾಲಯಸಂಘಕಾನ್ಮದಿ ನೃಪಃ ಕುರ್ಯಾತ್ಸದಾ ಪೋಷಕೃತ್
ತಸ್ಮೈವಾಶು ವಿಮುಕ್ತಿಭಾಗ್ಯಮಖಿಲಂ ದಾತುಂ ಪ್ರವೃತ್ತಂ ಮನಃ ।
ಶೈವಾನಾಂ ಯತಿನಾಂ ಮಹೋಪಕರಣಂ ಗ್ರಾಮಂ ಪುರಂ ವಾ ದ್ವಿಜೈಃ
ಸ್ವಾದ್ವನ್ನಂ ಜಲದಾನಪಾನಕವರಂ ವಿಶ್ರಾಮರಮ್ಯಂ ಸ್ಥಲಂ ॥೧೫॥

ಯೋ ದದ್ಯಾತ್ಸುಕೃತೀ ಶಿವಾರ್ಪಣಧಿಯಾ ತಂ ಪೂಜಯಾಂತೇ ಯಮ
ಯೋ ಮೇ ಲಿಂಗಸದೋರ್ಧ್ವದೃಷ್ಟಿರಸಕೃಚ್ಛಂಭೋ ಶಿವೇತ್ಯುತ್ಸುಕಃ
ಕುರ್ವನ್ನರ್ತನಹಸ್ತತಾಲನಿಕರೈಃ ಪಾಹೀಶ ಶಂಭೋ ಸದಾ ।
ಇತ್ಯುಚ್ಚಾರಪರಶ್ಚ ಭಸ್ಮವರಧೃಕ್ ರುದ್ರಾಕ್ಷಮಾಲಾಂ ದಧತ್
ತಸ್ಮೈ ವೇದಶಿರಸ್ಸು ವಿಹಿತಾಂ ಮುಕ್ತಿಂ ದದಾಮಿ ಧ್ರುವಂ ॥೧೬॥

ಯಾರು ನನ್ನನ್ನು ಅರ್ಚಿಸುವರೋ ಅಂತಹವರಿಗೂ ನಾನು ಮುಕ್ತಿಯನ್ನು ಕರುಣಿಸುವೆನು. ||೧೧-೧೨||

ನನ್ನನ್ನು ಬಿಲ್ವಪತ್ರಗಳಿಂದಲೂ ದಿವ್ಯಪುಷ್ಪಗಳಿಂದಲೂ ಅರ್ಚಿಸುವವನು ತನ್ನ ವಂಶದ ಕೋಟಿ ಪಿತೃಗಳೊಡನೆ ಕೈಲಾಸದಲ್ಲಿ ವಿಹರಿಸುತ್ತಾ ಅಲ್ಲಿ ವಾಸಿಸುವನು. ||೧೩||

ಶಿವಲಿಂಗವನ್ನು ಬಿಲ್ವಪತ್ರಗಳಿಂದ ಅರ್ಚಿಸಿ ನಮಸ್ಕರಿಸುತ್ತಾ, ರುದ್ರಸೂಕ್ತವನ್ನು ಜಪಿಸುತ್ತಾ " ಶಿವಮಹೇಶ್ವರ, ಗಂಗಾಧರ " ಎಂದು ಮೊದಲಾದ ಶಿವನಾಮಗಳನ್ನು ಬಿಡದೇ ಯಾರು ಕೀರ್ತನಮಾಡುವರೋ ಅವರೂ ನಿನಗೆ ವಂದ್ಯರು.||೧೪||

ರಾಜನಾದವನು ಶಿವದೇವಾಲಯವನ್ನು ಕಟ್ಟಿಸಿ ಅದನ್ನು ಪೂಜಾದಿಗಳಿಂದ ಪೋಷಿಸುತ್ತಾ, ನನ್ನ ಭಕ್ತರಾದ ಯತಿಗಳಿಗೆ ಉಪಕಾರಮಾಡುವುದು, ಬ್ರಾಹ್ಮಣರಿಗೆ ಅಗ್ರಹಾರ ನಗರಗಳನ್ನು ವಾಸಕ್ಕಾಗಿ ದಾನಮಾಡುವುದು, ಅನ್ನದಾನಮಾಡುವುದು,

ಚರಮಜನುಷಿ ನಿಷ್ಠಾ ತಸ್ಯ ಸಿಧ್ಯೇತ ದೈವಾತ್
ಮಮ ಸದಯುದಯಾಬ್ಧೇಃ ಶೀಕರಾಸಾರಪಾತ್ರಂ ।
ಭವತಿ ಹಿ ವರಪಾಪೈರ್ವಿರ್ಗತಶೋಕೋ ವಿಮುಕ್ತೋ
ಭವತಿ ವಿಬುಧಮಾನ್ಯೋ ಮುಕ್ತಿಕಾಂತಾರಸಜ್ಞಃ ॥೧೭॥

ತುರಂಗಮಾತಂಗಭುಜಂಗಭಕ್ಷವಾಹಪ್ರಿಯಾದಾಸಕೃತಾಂಬರೋಽಪಿ ।
ಶತಾಂಗಸದ್ಧಂಸವಿಹಂಗವಾಹಪ್ರಿಯಾದಿದಾಸೈರಪಿ ಸಾ ನ ಲಕ್ಷ್ಯಾ ॥೧೮॥

ಕುರಂಗಪಾಣೇರ್ಮಮ ಚಾರುಗಂಗಾ
ತರಂಗಮೌಲೌನ ಭವೇತ ಭಕ್ತಿಃ ।
ಯಸ್ಮಿನ್ನನುಗ್ರಾಹ್ಯತಯಾತ್ಮಿಕಾ ಮೇ
ಬುದ್ಧಿಸ್ಸಮುಕ್ತೇಃ ಪರಮಂ ಹಿ ಪಾತ್ರಂ ॥೧೯॥

ಅರವಟ್ಟಿಗೆಗಳನ್ನಿಡಿಸುವುದು, ವಿಶ್ರಾಂತಿಗಾಗಿ ರಮ್ಯವಾದ ಉಪವನಗಳನ್ನು ನಿರ್ಮಿಸುವುದು ಇವುಗಳನ್ನು ನಡೆಸಿದರೆ ಅವನಿಗೆ ಸಕಲೈಶ್ವರ್ಯಗಳನ್ನೂ ಕೊನೆಗೆ ಮುಕ್ತಿಯನ್ನೂ ಕರುಣಿಸುವೆನು, ಮತ್ತು ಸದಾ ಶಿವಲಿಂಗದಲ್ಲಿ ನಟ್ಟದೃಷ್ಟಿಯುಳ್ಳವನಾಗಿ ಯಾವನು 'ಓ ಶಂಭು, ಓ ಶಿವ' ಎಂದು ಕೀರ್ತನಮಾಡುತ್ತಾ ತಾಲಗತಿಗಳಿಂದ ನರ್ತನಮಾಡುತ್ತಾ ಭಸ್ಮರುದ್ರಾಕ್ಷಿಧಾರಿಯಾಗಿದ್ದು ನನ್ನನ್ನರ್ಚಿಸುವನೋ ಅಂತಹವನೂ ನಿನಗೆ ಸಂದಾ ವಂದ್ಯನು, ಅವನಿಗೆ ನಾನು ವೇದಾಂತಗಳಲ್ಲಿ ಹೇಳುವ ಶಾಶ್ವತ ಮುಕ್ತಿಯನ್ನು ಕರುಣಿಸುವೆನು. ॥೧೫-೧೬॥

ನೀಚ ಜಾತಿಯಲ್ಲಿ ಜನಿಸಿದವನಾದರೂ ನನ್ನಲ್ಲಿ ಪರಮಭಕ್ತಿಯುಳ್ಳವನಾದರೆ ನನ್ನ ಅನುಗ್ರಹಕ್ಕೆ ಪಾತ್ರನಾಗುವನು, ಅಂತಹವನ ಪಾಪಗಳೆಲ್ಲವನ್ನೂ ಕಳೆದು ನಾನು ಅವನಿಗೆ ವಿದ್ವದ್ಗೌರವವನ್ನೂ ಮುಕ್ತಿತರುಣಿಯ ಸಂಗವನ್ನೂ ದೊರಕಿಸಿ ಕೊಡುವೆನು. ॥೧೭॥

ನಾನು ಕರುಣಿಸುವ ಮುಕ್ತಿಯು ದೇವೇಂದ್ರ, ಗರುಡವಾಹನನಾದ ವಿಷ್ಣು, ಹಂಸವಾಹನನಾದ ಬ್ರಹ್ಮ-ಇವರಿಂದಲೂ ದೊರಕದು, ಅಂತಹ ಮುಕ್ತಿಯನ್ನವರು ಕೊಡಲಾರರು. ಅವರ ಪ್ರೀತಿಸಂಪಾದನೆಯು ಅಷ್ಟು ಕಾರ್ಯಕಾರಿಯಲ್ಲ. ॥೧೮॥

ಮೃಗಧಾರಿಯಾದ ಗಂಗಾಧರನಾದ ಚಂದ್ರಶೇಖರನಾದ ನನ್ನಲ್ಲಿ ದೃಢವಾದ ಭಕ್ತಿಯುಳ್ಳವನಾದರೆ ಅಂತಹವನೇ ನನ್ನ ಅನುಗ್ರಹಕ್ಕೂ, ಮುಕ್ತಿಗೂ ಪಾತ್ರನಾಗುವನು. ॥೧೯॥

ಯಸ್ತ್ವೇತ್ಪರಿವರ್ಜಿತೋ ನರಪತಿರ್ದೇವೋ ದ್ವಿಜೋ ವಾ ಯತಿಃ
ಮದ್ದ್ರವ್ಯಾಹರಣೇ ದ್ವಿಜಾತಿಹನನೇ ತದ್ದ್ರವ್ಯಭಾಗಾಶನೇ ।
ತಸ್ಮೈ ತಂ ನರಕಂ ಅನಂತಫಲದಂ ದುಃಖಸ್ಯ ಕಿಂ ವಚ್ಮಿ ತತ್
ಸಂಪ್ರಾಪ್ನೋತು ಮಮೈವ ಶಾಸನಮಹೋ ಸಂಶ್ರೂಯತಾಂ ಕೇವಲಂ
॥೨೦॥

ಇತಿ ಶ್ರೀ ಶಿವರಹಸ್ಯೇ ಚತುರ್ಥಾಂಶೇ ಪುಣ್ಯಕ್ಷೇತ್ರಾದಿ
ಶಿವಧರ್ಮಾಚರಣಾನ್ ಪ್ರತಿಯಮಾನುಶಾಸನಂ ನಾಮ
ಷೋಡಶೋಽಧ್ಯಾಯಃ

ಈಗ ನಾನು ಹೇಳಿದಂತೆ ಯಾವನು ನಡೆಯದೇ ದುರಾಚಾರಿಯಾಗಿರುವನೋ, ಅವನನ್ನು ದೇವಧನವನ್ನಪಹರಿಸಿದರೆ ಉಂಟಾಗುವಂತಹ, ಬ್ರಾಹ್ಮಣರನ್ನು ಕೊಂದರೆ ಉಂಟಾಗುವಂತಹ, ಬ್ರಾಹ್ಮಣರ ದ್ರವ್ಯವನ್ನಪಹರಿಸಿದರೆ ಉಂಟಾಗುವಂತಹ ಘೋರ ನರಕಕ್ಕೆ ತಳ್ಳುವೆನು. ಇದು ನನ್ನಾಜ್ಞೆ" ಎಂದು ಶಂಕರನು ಯಮನಿಗೆ ಶಿವಧರ್ಮಾನುಯಾಯಿಗಳ ವಿಷಯದಲ್ಲಿ ಉಪದೇಶಿಸಿದ ವಿಚಾರವನ್ನು ಸ್ಕಂದಸ್ವಾಮಿಯು ಜೈಗೀಷವ್ಯನಿಗೆ ತಿಳಿಸಿದನು. ॥೨೦॥

ಇಲ್ಲಿಗೆ ಶ್ರೀಶಿವರಹಸ್ಯದಲ್ಲಿ ಚತುರ್ಥಾಂಶದಲ್ಲಿ ಹದಿನಾರನೆಯ ಅಧ್ಯಾಯವು
ಮುಗಿದುದು.

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಸಪ್ತದಶೋಽಧ್ಯಾಯಃ

|| ಈಶ್ವರ ಉವಾಚ ||

ಕುಂಭೀಪಾಕಾಸಿಪತ್ರೇ ಕ್ರಕಚಕಿಣತನುಃ ಪೂಯಜಾಲೇ ಮಲಾಶೇ
ಭೂಯಾತ್ಸೋಽಪಿ ಕ್ರಿಮಿಶ್ಚ ಕಲ್ಪನಿಯುತಂ ಸಂತಪ್ತಧೂಲೀಶಯಃ ।
ಯೋ ರುದ್ರಾಕ್ಷವಿಭೂತಿವರ್ಜಿತಶಿರಃಫಾಲಾದಿವಕ್ಷಸ್ಥಲಃ
ಶ್ರುತ್ಯುಕ್ತಾಮಲಕರ್ಮಧರ್ಮರಹಿತೋ ಲಿಂಗಾರ್ಚನೇನೋಜ್ಝಿತಃ ॥೧॥

ತ್ಯಕ್ತ್ವಾ ರುದ್ರಮಪಾರಪಾಪಹರಣಂ ಪಂಚಾಕ್ಷರಂ ಪಾವನಂ
ಯಸ್ತ್ವೂರ್ಧ್ವಂ ವಿದಧಾತಿ ಪುಂಡ್ರಮಫಲಂ ಸಂತಪ್ತಚಕ್ರಾಂಕಿತಃ ।
ಕಿಂ ವಕ್ಷ್ಯಾಮಿ ಮಹೈನಸಾಂ ಪ್ರತಿದಿನಂ ರಾಶಿಂ ಸಮಾಪ್ನೋತು ಸಃ
ಲಾಲಾಜಾಲವಿಷಾಗ್ನಿವೃಶ್ಚಿಕಕುಲೇ ಸಂಪಾತ್ಯತಾಂ ತರ್ಜ್ಯತಾಂ ॥೨॥

ಹದಿನೇಳನೆಯ ಅಧ್ಯಾಯ

ಎಲೈ ಯಮನೇ, ಯಾವನು ಭಸ್ಮರುದ್ರಾಕ್ಷಿಗಳನ್ನು ಧರಿಸದೇ, ವೇದೋಕ್ತವಾದ ಸತ್ಕರ್ಮಗಳನ್ನಾಚರಿಸದೇ, ಲಿಂಗಾರ್ಚನೆಯನ್ನು ಮಾಡದೇ, ಧರ್ಮಬಾಹಿರನಾಗಿರುವನೋ, ಅವನು ಕುಂಭೀಪಾಕ, ಅಸಿಪತ್ರ, ಕ್ರಕಚನರಕ, ಕೀವುಗಳಿಂದ ತುಂಬಿದ ನರಕಗಳಲ್ಲಿ ದುಃಖವನ್ನು ಅನುಭವಿಸಿ, ಆಮೇಲೆ ಸೂರ್ಯನ ಕಿರಣಗಳಿಂದ ಉರಿಬಿಸಿಯಾದ ಧೂಳಿನಲ್ಲಿ ವಾಸಿಸುವ ಕ್ರಿಮಿಯಾಗಿ ಅನೇಕ ಕಲ್ಪಗಳವರೆಗೆ ದುಃಖಪಡುವನು. ||೧||

ಯಾವನು ಪಾಪನಾಶಕವಾದ ರುದ್ರಸೂಕ್ತವನ್ನೂ, ಶಿವಪಂಚಾಕ್ಷರ ಮಂತ್ರವನ್ನೂ ಬಿಟ್ಟು ಮೇಲುನಾಮುಗಳನ್ನು ಹಣೆಗೆ ಎಳೆದು ತಪ್ತಮುದ್ರೆಯನ್ನು ಧರಿಸಿ

ಮಾಮೀಶಂ ಹರಿತುಲ್ಯತಾಂ ವದತಿ ಯಸ್ತಂ
ಭ್ರಾಷ್ಟ್ರಮಧ್ಯೇ ಕ್ಷಿಪ ಚಕ್ರಿಗ್ರಾವಾದಿತುಲ್ಯಂ ಮಮ ।
ಜನಿಮವರಂ ಪೂಜಯೇದ್ಯೋಽಯುತಾಧೀಃ ।
ಪಾಪೈಸ್ತಸ್ಯ ನನಿಷ್ಕೃತಿಶ್ಚ ವಿಹಿತಾ ಕಲ್ಪಾಯುತೈಃ ಪೀಡಿತಃ ॥೩॥

ಕಾಕಾಕ್ಷಿವಧ್ಭ್ರಮಪರಂ ಪರಯಾನಬಂಧಾತ್
ಪುಂಡ್ರೈಸ್ತ್ರಿಪುಂಡ್ರಶಿವಭಕ್ತಿವಿವರ್ಜಿತಾಶ್ಚ ।
ಕಿಂಚಿತ್ಕೃಪಾಧಿಕಮಹೇಶ್ವರವೀಕ್ಷಿತಾಶ್ಚ
ಬೈಡಾಲವೃತ್ತಯ ಹರಿಂ ಸಮತೋಽರ್ಚಯಂತಿ ॥೪॥

ಧ್ವಾಂಕ್ಷಾಕ್ಷಿವದ್ಭ್ರಮಜುಷೋ ಮುನಯೋಽಪಿ ಮಂದಾಃ
ಕುಂದೇಂದುಸನ್ನಿಭಶರೀರವರಂ ಮಹೇಶಂ ।
ಖದ್ಯೋತವದ್ದ್ಯುತಿಜುಷೋ ಹರಿವೇಧಸಾದಿ
ಸಾಮ್ಯೇನ ಚಂಡತರಣಿಂ ಭ್ರಮತೋ ವದಂತಿ ॥೫॥

ನನ್ನನ್ನೂ ನನ್ನ ಭಕ್ತರನ್ನೂ ನಿಂದಿಸುವನೋ, ಅವನನ್ನು ಮಹಾ ಪಾಪಿಯೆಂದು ತಿಳಿದು ಜೊಲ್ಲುಗಳಿಂದ ತುಂಬಿದ, ವಿಷಮಯವಾದ ಅಗ್ನಿಮಯವಾದ, ಚೇಳುಗಳಿಂದ ತುಂಬಿದ ನರಕಗಳಲ್ಲಿ ಬೀಳಿಸು, ಹೆದರಿಸು, ಶಿಕ್ಷಿಸು. ॥೨॥

ಪರಮೇಶ್ವರನಾದ ನನಗೆ ಹರಿಯು ಸಮನೆಂದು ಯಾವನು ಹೇಳುವನೋ, ನನ್ನಿಂದ ಜನಿಸಿದ ಕಲ್ಲುಮಣ್ಣುಗಳಿಗೆ ಸಮನಾದ ಆ ಹರಿಯನ್ನು ಯಾವನು ಅರ್ಚಿಸುವನೋ, ಅವನನ್ನು ಕಾದ ಕೊಪ್ಪರಿಗೆಯಲ್ಲಿ ಹಾಕಿ ಕರಿಯಬೇಕು, ಅಂತಹವನಿಗೆ ಕೋಟಿ ಜನ್ಮಗಳಾದರೂ ಪಾಪನಾಶವಾಗಲಾರದು, ಮುಕ್ತಿಯೂ ದೊರೆಯಲಾರದು. ॥೩॥

ಕಾಗೆಯ ಕಣ್ಣಿನಂತೆ ಚಂಚಲತೆಯಿಂದ ಕೂಡಿ ಸ್ಥಿರವಾದ ನ್ಯಾಯವಾದ ಮಾರ್ಗವನ್ನು ಬಿಟ್ಟು, ಭೇದವಾದಿಗಳಾಗಿ ಭಸ್ಮಧಾರಣೆ ಶಿವಭಕ್ತಿಗಳಿಲ್ಲದವರಾಗಿ ಯಾವುದೋ ಒಂದು ನನ್ನ ಅನುಗ್ರಹದಿಂದ ಲಭಿಸಿದ ಮಹಿಮೆಯನ್ನು ಹರಿಯಲ್ಲಿ ನೋಡಿದವರಾಗಿ, ಅವನನ್ನೇ ಯಾರು ಅರ್ಚಿಸುವರೋ ಅವರು ಬೆಕ್ಕಿನಂತಹ ಜೀವನದವರು. ಅವರ ಜೀವನವೇ ವ್ಯರ್ಥವಾದುದು. ॥೪॥

ಹಾಗೆ ಚಂಚಲತೆಯಿಂದ ಮೂಢರಾಗಿ ಕೆಲವು ಮುನಿಗಳೂ ಸಹ ಗಿರಿಮಲ್ಲಿಗೆ, ಚಂದ್ರರಂತೆ, ಬಿಳುಪಾಗಿ ಶುಭ್ರವಾದ ಪ್ರಕಾಶಮಾನವಾದ ಶರೀರವುಳ್ಳ ನನ್ನನ್ನು

ಮಲ್ಲಿಂಗಾಲಯನಾಶಕೋಽಪ್ಯನುದಿನಂ ಮದ್ದೀಪತೈಲಾಪಹಃ
ಸಂತಪ್ತಾಯಸವಾಯಸೋರುಚರಣೈಃ ಖಡ್ಗೈಶ್ಚ ಖಂಡಂ ಕುರು ।
ತಂ ಪಾಪಿಷ್ಠವರಿಷ್ಠನಿಷ್ಠುರವಚೋವೀಚೀಷು ಸೂಚೀಮುಖೇ
ನೇತ್ರೇ ಚಾಂಗುಲಿಪಂಕ್ತಿವಕ್ರನಖರೈಃ ಸರ್ವಾಂಗಸಂಧಾವಪಿ ॥೬॥

ನಾನಾಶಸ್ತ್ರಭುಶುಂಡಿಕಾರ್ಮುಕಶರೈರಾವಿಧ್ಯತಾಂ ಭಸ್ಮಸಾತ್ ।
ಕೃತ್ವಾ ಸ್ವಸ್ಥತರೋ ಭವಾಶು ಸತತಂ ತ್ವೇಷಾಂ ಪ್ರತಿಜ್ಞಾ ಮಮ॥೭॥

ಸರ್ವಂ ಸಹಾಮಿ ಸಹಸಾ ನ ತಯಾ ಯಮಾಹಂ
ತ್ವಘ್ನಾಕ್ಯಹನಂ ವರಕೃತಘ್ನಸುವರ್ಣಹಾರಂ ।
ತಂ ಭೂಸುರಘ್ನಸುಸುರಾದನಸಂಗಿಸಂಗಂ
ವಿಶ್ವಂಭರಾಹರಣಕಾರಣಕಂ ನೃಪಂ ಚ ॥೮॥

ಭ್ರಾಂತಿಯಿಂದ ಹರಿಗೆ ಸಮನೆಂದು ಹೇಳುತ್ತಾ ಸೂರ್ಯನನ್ನು ದೀಪದ ಹುಳುವಿಗೆ ಸಮನೆಂದು ಹೇಳುವವರಂತೆಯೇ ಹಾಸ್ಯಾಸ್ಪದರಾಗುವರು. ||೫||

ನನ್ನ ದೇವಾಲಯವನ್ನು ಹಾಳುಮಾಡುವವನು, ನನ್ನ ದೀಪದ ಎಣ್ಣೆಯನ್ನು ಕದಿಯುವವನು ಇಂತಹ ಪಾಪಿಯನ್ನು ಬೆಂಕಿಯಲ್ಲಿ ಕೆಂಪಾಗಿ ಕಾಸಿದ ಕಾಗೆಯಿಂದಲೂ ಕತ್ತಿಯಿಂದಲೂ ಚೂರುಚೂರು ಮಾಡು. ಕಾದಸೂಜಿಯಿಂದ ಅವನ ಕಣ್ಣನ್ನಿರಿಯಬೇಕು. ಉಗುರುಹಲ್ಲುಗಳಿಂದ ಅವನ ಶರೀರ ಸಂಧಿಭಾಗಗಳೆಲ್ಲವನ್ನೂ ಕಡಿದು ಪೀಡಿಸಬೇಕು. ||೬||

ಮತ್ತು ಅಂತಹ ಪಾಪಿಯನ್ನು ಅನೇಕ ಆಯುಧಗಳು, ಬಾಣಗಳು ಇವುಗಳಿಂದ ಇರಿದು ಬೆಂಕಿಯಿಂದ ಸುಟ್ಟು ಶಾಂತನಾಗು, ಇದು ನನ್ನ ಆಜ್ಞೆಯು ||೭||

ಎಲೈ ಯಮ, ನಾನು ಎಂತೆಂತಹ ಅಪರಾಧಗಳನ್ನಾದರೂ ಸಹಿಸುವೆನು, ಯಜ್ಞವನ್ನು ನಾಶಮಾಡುವುದು, ಕೃತಘ್ನತೆ, ಚಿನ್ನವನ್ನು ಕುದಿಯುವುದು, ಬ್ರಾಹ್ಮಣರನ್ನು ಕೊಲ್ಲುವುದು, ದುಸ್ಸಹವಾಸ, ರಾಜನು ರಾಜ್ಯವನ್ನಪಹರಿಸುವುದು, ಬ್ರಾಹ್ಮಣಪತ್ನಿಯನ್ನಪಹರಿಸುವುದು, ಮೊದಲಾದ ಪಾಪವೆಲ್ಲವನ್ನೂ ಸಹಿಸೆಯೇನು, ಆದರೆ ನನ್ನ ಭಕ್ತರನ್ನು ಮೋಸಗೊಳಿಸುವವನ್ನು ಎಂದೆಂದಿಗೂ ಸಹಿಸುವುದಿಲ್ಲ. ಅಂತಹವನು ಕಾಸಿದ ಎಣ್ಣೆಯ ಕೊಪ್ಪರಿಗೆಯಲ್ಲಿ ಕಲ್ಪಾಂತರದ ವರೆಗೆ ಕುದಿಯುತ್ತಾ

ಸದ್ವಿಪ್ರತಲ್ಪಹರಣೇಽಪ್ಯತಿಶಿಲ್ಪಯುಕ್ತಂ
ಕಲ್ಪಾಸು ತಪ್ತತಿಲತೈಲಯುತಾಸ್ವಜಸ್ರಂ।
ದಾಹಾತ್ಪ್ರದೀಪ್ತವಪುಷಃ ಪರಿತೋಽ ಭ್ರಮಂತು
ಮದ್ಭಕ್ತವಂಚಕಪರಾನ್ ನ ಸಹಾಮಿ ಸಾಮಿ ॥೯॥

ಸೋಽಮಾರ್ಧಶೇಖರಶಿವಾಲಯನಾಶಕಂ ಚ ॥೧೦॥

ಯೋ ವೈ ಮದಾಲಯಪರಿಭ್ರಮಣಪ್ರಣಾಮ
ಯುಕ್ತೋಪಿ ಹೀನಕುಲಜಾ ಪರಿಶೂಲಕಾಶ್ಚೇತ್।
ಸೋಽಯಂ ಕೃತೀ ನರವರಃ ಸುರಪೂಜಿತಶ್ಚ
ತಸ್ಯೋತ್ತಮೌ ಹಿ ಜನಕೌ ಸ ತು ಪುಣ್ಯಶೀಲಃ ॥೧೧॥

ಯೇ ನಿಂದಂತಿ ಶಿವಾಶ್ರಮೇಷು ನಿರತಾನ್ ಭಕ್ತಾಂಸ್ತಥಾ ಪಾಪಿನೋ
ಮಾಯಾಚಾರಪರಾಯಣಾಃ ಶ್ರುತಿಹಿತಂ ಜ್ಞಾನಂ ಚ ವೇದಾಂತಜಂ।
ವೇದಾನ್ ವೇದವಿದೋ ದ್ವಿಜಾತಿನಿವಹಾನ್ ಭಸ್ಮತ್ರಿಪುಂಡ್ರಂ ಮಮ
ಶ್ರೀರುದ್ರಂ ವರಪಂಚಪಾತಕಹರಂ ಪಂಚಾಕ್ಷರಂ ಪಾವನಂ ॥೧೨॥

ಮತ್ಪ್ರೇಮಪ್ರಕಟೈಃ ಪುರಾಣಸುಕಥಾಸಾರಂ ವಿನಿಂದಂತಿ ಯೇ
ರುದ್ರಾಕ್ಷಾನಮಲಾಂಭಿವಕ್ಷತಿತಲಂ ಕ್ಷೇತ್ರಂ ಹಿ ಲಿಂಗಾತ್ಮಕಂ।
ಮನ್ನಾಮಾನ್ಯಘನಾಶಕಂ ಗುರುಜನಂ ಯೋ ವೈ ವಿನಿಂದತಿ ತಾನ್ ॥೧೩॥

ಇರುವನು, ನನ್ನ ದೇವಾಲಯವನ್ನು ಹಾಳುಮಾಡಿದವನೂ ಇದೇ ಗತಿಯನ್ನೈದು ವನು. ||೮-೯-೧೦||

ನನ್ನ ದೇವಾಲಯಕ್ಕೆ ಸುತ್ತು ಬಂದು ನನಗೆ ಯಾವನು ನಮಸ್ಕರಿಸುವನೋ, ಅವನು ಹೀನಕುಲದವನಾದರೂ ಪವಿತ್ರನಾಗುವನು, ಕೃತಾರ್ಥನಾಗುವನು. ದೇವತೆಗಳಿಂದ ಪೂಜಿಸಲ್ಪಡುವನು, ಅವನಿಂದ ಅವನ ತಂದೆತಾಯಿಗಳಿಗೂ ಸದ್ಗತಿಯಾಗುವುದು. ||೧೧||

ಪಾಪಿಗಳಾಗಿ ಯಾರು ಡಂಭಾಚಾರವನ್ನು ಮಾಡುತ್ತಾ, ಶಿವಾಶ್ರಮಗಳಲ್ಲಿ ವಾಸಿಸುವ ಭಕ್ತರನ್ನೂ, ವೇದದಲ್ಲಿ ಹೇಳುವ ವೇದಾಂತಜ್ಞಾನವನ್ನೂ, ವೇದ ವಿದ್ವಾಂಸರಾದ ಬ್ರಾಹ್ಮಣರನ್ನೂ, ಭಸ್ಮಧಾರಣೆಯನ್ನೂ, ಶೈವಪುರಾಣಗಳನ್ನೂ, ಶಿವಕ್ಷೇತ್ರಗಳನ್ನೂ, ರುದ್ರಾಕ್ಷಿಗಳನ್ನೂ, ಪಾಪನಾಶಕವಾದ ನನ್ನ ನಾಮಗಳನ್ನೂ,

ತೇಷಾಮಾಮೂಲಲೂನಾಂ ಕುರು ಕುರು ರಸನಾಂ ಕ್ಷಾರಸಾರೈಃ ಕ್ಷುರಾಗ್ರೈಃ
ಮಾಂ ನಿಂದಂತ್ಯಪಿ ಯೇ ಸುತೈಲವಿಹಿತೈಃ ಕಾರ್ಪಾಸಶಾಣೋದ್ಭವೈಃ ।
ಲಾಕ್ಷಾದಗ್ಧವರಾಂಗಸರ್ವವಪುಷಃ ಸಂಪೂರ್ಣವಿಷ್ಠಾಮುಖಾನ್
ತಾನ್ ಕೃತ್ವಾ ನರಕಾರ್ಣವೇ ಶುನಶತೈರಾಶೀವಿಷೈರ್ದಂಶಿತಾನ್ ॥೧೪॥

ಕೃತ್ವಾ ಪಾತಯ ಕಲ್ಪಕೋಟಿಷು ಚಿರಂ ದುಃಖಂ ಹಿ ಭುಂಜಂತು ತೇ
ಮನ್ನೈವೇದ್ಯಸುಧಾಶನಾದಿರಹಿತಂ ರುದ್ರಾಕ್ಷಭಸ್ಮೋಜ್ಝಿತಂ ।
ಲಿಂಗಾರ್ಚಾವಿಮುಖಂ ನಿಪೀಡಯ ಚಿರಂ ಯಂತ್ರೈಸ್ಶಿಲಾಘರ್ಷಕೈಃ
ತಜ್ಜಿಹ್ವಾಂ ಸುರಯಾ ಪ್ರಪೂರ್ಯ ಸಿಕತೈಸ್ಸೂಚೀಮುಖೈಃ ಪೂರಯ ॥೧೫॥

ಯೇ ಲಿಂಗಾಲಯಲಿಂಗಸಂಗಸುದೃಶಾಪಾಂಗೋಜ್ಝಿತಾಃ ಕೇವಲಂ
ಮತ್ಸ್ತುತ್ಯಾ ಪ್ರಣತಿಪ್ರದಕ್ಷಿಣಮಹಾಪೂಜಾರಥಾಲೋಕನೈಃ ।
ತತ್ಪಾಷಂಡಕುಲೈಕಮುಂಡಸುಮಹಾಷಂಡಾನಿ ಖಡ್ಗೈರ್ದ್ರುತಂ
ಧಾವನ್ಮಂಡಲವೇಗತಸ್ತ್ವನುದಿನಂ ದಂಡೈಶ್ಚ ಖಂಡಾನ್ ಕುರು ॥೧೬॥

ಗುರುಹಿರಿಯರನ್ನೂ ನಿಂದಿಸುವರೋ, ಅವರನ್ನು ಮುಂದೆ ಹೇಳುವಂತೆ ಶಿಕ್ಷಿಸು, ರುದ್ರಸೂಕ್ತವನ್ನೂ ಶಿವಪಂಚಾಕ್ಷರವನ್ನೂ ನಿಂದಿಸುವ ಮಹಾ ಪಾಪಿಗಳನ್ನೂ ಹಾಗೆಯೇ ಹಿಂಸಿಸು. ||೧೨-೧೩||

ಅಂತಹ ಪಾಪಿಗಳ ನಾಲಗೆಗೆ ಉಪ್ಪುಹಾಕಿ ಹರಿತವಾದ ಚಾಕುವಿನಿಂದ ಕತ್ತರಿಸು, ನನ್ನನ್ನು ನಿಂದಿಸುವ ಆ ಪಾಪಿಗಳ ಶರೀರವನ್ನು ಕಾದ ಎಣ್ಣೆಯಲ್ಲಿ ತರಿದು, ಕರಗಿದ ಉರಿಯಾದ ಅರಗನ್ನು ಅವರ ಮೈಗೆ ಬಳಿದು, ಬಾಯಿಗೆ ಮಲವನ್ನು ತುಂಬಿ, ನಾಯಿ ಹಾವುಗಳಿಂದ ಅವರನ್ನು ಕಚ್ಚಿಸು. ||೧೪||

ನನ್ನ ನೈವೇದ್ಯವನ್ನು ಭುಂಜಿಸದೇ, ಭಸ್ಮರುದ್ರಾಕ್ಷಿಗಳನ್ನು ಧರಿಸಿದೇ ಲಿಂಗಾರ್ಚನೆಯನ್ನು ಮಾಡದೇ, ನನ್ನನ್ನು ನಿಂದಿಸುವ ಮಹಾಪಾಪಿಗಳನ್ನು ಕೋಟಿ ಕಲ್ಪಗಳ ವರೆಗೆ ನರಕದಲ್ಲಿ ಕೆಡಹು. ಕಲ್ಲುಗಾಣಗಳಿಂದ ಅರೆಸು. ಅವರ ನಾಲಿಗೆಯನ್ನು ಸೂಜಿಯಿಂದ ಚುಚ್ಚಿಸು, ಬಾಯಿಗೆ ಕಾದ ಹೆಂಡವನ್ನೂ ಮರಳನ್ನೂ ತುಂಬಿಸು. ||೧೫||

ಎಲೈ ಯಮ, ನನ್ನ ದೇವಾಲಯಕ್ಕೆ ಬರದೆ, ಪ್ರದಕ್ಷಿಣೆಮಾಡದೇ ಪೂಜೆ ಮಾಡದೆ, ರಥಾರೋಹಣವನ್ನು ನೋಡದೆ ನನ್ನನ್ನು ಸ್ತುತಿಸದೇ ನಿಂದಿಸುವ

ಯೋ ಮತ್ಕ್ಷೇತ್ರಕಥಾಸುಧಾವಿಮುಖಧೀಃ ಪಾಪಾತ್ಮನಾಂ ಪಾಪಕೃತ್
ಸಂತಪ್ತಾಯಸಸೂಚಿಪೂರಿತಮಹಾಶಂಕೂಪಮಶ್ರೋತ್ರಕೃತ್ ।
ದುರ್ಗಂಧಾಮಲಮಾನಮೋಹಿತಧಿಯಾ ರುದ್ರಾಕ್ಷಭಸ್ಮೋಜ್ಝಿತಃ
ಮಲ್ಲಿಂಗಾಲಯದರ್ಶನಸ್ತುತಿನಮಸ್ಕ್ರಾಮಣೈರ್ವರ್ಜಿತಃ ॥೧೭॥

ಸಂಕೀರ್ಣಃ ಶ್ವಪಚೋಽಪಿ ತಚ್ಛ್ರುತಿಹಿತಂ ಭಸ್ಮಾಕ್ಷಧೃಕ್ ಪುಂಡ್ರಯುಕ್
ಮಲ್ಲಿಂಗಾಲಯಕುಂಭದರ್ಶನಫಲೈಃ ಪುಣ್ಯೈರಥಾಕರ್ಷಣೈಃ ।
ತೇಽಪಿ ತ್ವದ್ಭುವನಂ ನ ಯಾಂತಿ ಸಹಸಾ ದೇವಾದಿಭಿಃ ಪೂಜಿತಾಃ
ಇತ್ಯೇತನ್ಮಮ ಶಾಸನಂ ಯಮ ಸದಾ ಸಂಪಾಲ್ಯತಾಂ ಭೀತಿತಃ ॥೧೮॥

ಹಿಮಧಾಮಕಲಾವಿಲಾಸಮೌಳೌ
ಮಯಿ ಕಶ್ಚಿದ್ಭವತಿ ಪ್ರರೂಢಭಾವಃ ।
ಸುಕೃತೈರ್ಬಹುಜನ್ಮಸಂಚಿತೈಃ
ಕೃತಕೃಚ್ಛ್ರಾಚರಣೈಸ್ತಪೈಕವೃಂದೈಃ ॥೧೯॥

ಮಹಾ ಪಾಪಿಗಳನ್ನು ನೀನು ನಿನ್ನ ದಂಡದಿಂದಲೂ ಝಳಪಿಸುವ ಖಡ್ಗದಿಂದಲೂ ತುಂಡುತುಂಡಾಗಿ ಮಾಡು. ॥೧೬॥

ದ್ವೇಷಬುದ್ಧಿಯಿಂದ ನನ್ನ ಕ್ಷೇತ್ರಗಳ ಕಥೆಗಳನ್ನು ಕೇಳದೇ, ನನ್ನ ದೇವಾಲಯ ದರ್ಶನವನ್ನು ಮಾಡದೇ, ಸ್ತುತಿಸದೇ, ನಮಸ್ಕರಿಸದೇ, ರುದ್ರಾಕ್ಷಿಭಸ್ಮಗಳನ್ನು ಧರಿಸದೇ ಇರುವ ಮಹಾ ಪಾಪಿಯನ್ನು ಕಿವಿಗೆ ಕಾಸಿದ ಸೂಜಿಗಳಿಂದ ಚುಚ್ಚಿ ಪೀಡಿಸಬೇಕು. ॥೧೭॥

ಹೊಲೆಯನಾದರೂ ಜಾತಿಹೀನನಾದರೂ ಸಹ ವೇದೋಕ್ತವಾದ ಭಸ್ಮರುದ್ರಾಕ್ಷಿಧಾರಣವನ್ನು ಮಾಡಿ ಯಾವನು, ನನ್ನ ದೇವಾಲಯದ ಶಿಖರವನ್ನು ದರ್ಶನ ಮಾಡುವುದು, ರಥವನ್ನು ಎಳೆಯುವುದು-ಇವುಗಳನ್ನು ನಡೆಸುವನೋ ಅವನು ನಿನ್ನ ಲೋಕಕ್ಕೆ ಬರಲಾರನು. ಎಲೈ ಯಮ, ಇದು ನನ್ನಾಜ್ಞೆ, ಇದನ್ನು ಎಚ್ಚರಿಕೆಯಿಂದ ಪರಿಪಾಲಿಸು. ॥೧೮॥

ನನ್ನಲ್ಲಿ ಮಾನವರಿಗೆ ಭಕ್ತಿಯುದಯಿಸುವುದು ಅಪೂರ್ವ. ಅನೇಕ ಜನ್ಮಗಳ ಪುಣ್ಯದಿಂದಲೂ ಪ್ರಾಯಶ್ಚಿತ್ತಾಚರಣೆಯಿಂದಲೂ, ತಪಸ್ಸುಗಳಿಂದಲೂ ಫಲವುದಯಿಸಿ ನನ್ನಲ್ಲಿ ಭಕ್ತಿಭಾವವು ನರರಿಗೆ ಆವಿರ್ಭವಿಸುವುದು. ॥೧೯॥

॥ ಸೂತ ಉವಾಚ ॥

ಇತಿ ಶಿವವಚಸಾ ಯಮೋಽಪಿ ನತ್ವಾ
ಸುರಸಂಘೈರ್ಭಗವಂತಮೀಶ್ವರಂ ।
ಪರಿತುಷ್ಟಾವ ಮಹೇಂದುಚೂಡಮೀಶಂ
ತ್ವತಿಭಕ್ತ್ಯಾ ಪ್ರಣತೋಽಭ್ಯುವಾಚ ದೇವಂ ॥೨೦॥

॥ ಯಮ ಉವಾಚ ॥

ಸೋಮ ಸೋಮಜಕಲಾವರಕೃತ್ತಿಧೃಕ್
ಭೂಧರೋರುಶಿಖರಾಶ್ರಯ ಶಂಭೋ ।
ಪಾರದೋತ್ತಮಸುಬೀಜಸದಾರಾ
ಪಾರಭಾರಕಲಿತಾನ್ ಪರಿಪಾಹಿ ॥೨೧॥

ಸರ್ಗರಕ್ಷಣವಿಧಾನದೀಕ್ಷಿತ
ಧ್ವಾಂತಶಿಕ್ಷಕಗದಾರ್ತಿವಿನಾಶ ।
ದೇಹಿ ಮೋಕ್ಷಪದವೀಮುದವೀಯೋ
ವೇದಮೌಳಿವಿಹಿತೇ ಮೃಗಯೇಽಹಂ ॥೨೨॥

ಮಹಾದೇವನ ಈ ಮಾತನ್ನು ಕೇಳಿ ಯಮನು ಭಕ್ತಿಯಿಂದ ನಮಸ್ಕರಿಸಿ ಭಗವಂತನಾದ ಆ ಪರಶಿವನನ್ನು ದೇವತೆಗಳೊಡನೆ ಹೀಗೆ ಸ್ತುತಿಸಿದನು. ||೨೦||

ಪಾರ್ವತೀಸಹಿತನಾದ ಓ ದೇವನೇ, ಓ ಚಂದ್ರಶೇಖರ, ಓ ಗಜಚರ್ಮಧಾರಿ, ಸಂಸಾರತಾಪತ್ರಯಗಳನ್ನು ಹೋಗಲಾಡಿಸುವ ನೀನು, ಮಾಯಾಪಾಶದಲ್ಲಿ ಸಿಲುಕಿ ದುಃಖಕಾರಣವಾದ ದಾರಾದಿಗಳಲ್ಲಿ ಮೋಹಗೊಂಡಿರುವ ನಮ್ಮನ್ನು ಪಾಲಿಸು.||೨೧||

ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ಮಾಡುವ, ಅಜ್ಞಾನವನ್ನು ಹೋಗಲಾಡಿಸುವ ಓ ದೇವನೇ, ವೇದಾಂತದಲ್ಲಿ ಹೇಳುವಂತಹ, ದಿವ್ಯಮುಕ್ತಿಯನ್ನು ನನಗೆ ಕರುಣಿಸು. ||೨೨||

ಪರಿಹರ ಪುರಹರ ಶಂಭೋ ಮುರಹರಸಾಯಕ ಪರಿಹಾಸ ।
ಗುರುಭರರುಗ್ಣರಘೋರಭವಾರ್ಣವದುಃಖಮಪಾಕುರು ಶಶಿಚೂಡ ॥೨೩॥

ಸುಮುಕರಶರವರದೂಷಿತಹೃತ್ತ್ರಟಂ ಖಪಟವರೋತ್ತಮ ಶಿವಪಾಹಿ ।
ಅಕಪಟವಚಸಾಂ ಶಿಖಾಸಖಂ ತೇ ಪದಯುಗಮಾಶು ಭಜಾಮಿ ಸಾಂಬ
ಶಂಭೋ ॥೨೪॥

ತಾರಾರಾಜಕಲಾಧರಂ ಪುರಹರಂ ಶ್ರೀರಾಜರಾಜಾರ್ಚಿತಂ
ವೈರಾಜಧ್ವನಿತೋಷಿತಂ ಭಜ ಶಿವಂ ಶ್ರೀಶಾಹಿರಾಜಾರ್ಚಿತಂ ।
ಭೂಭೃದ್ರಾಜಕುಮಾರಿಕಾಸಹಚರಂ ತಂ ದೇವರಾಜಾರ್ಚಿತಂ
ರಾಜದ್ರಾಜನಹಿಂಕೃತಿಪ್ರಿಯತರಂ ರಾಜಾನಮಿಾಶಂ ಮಖೇ ॥೨೫॥

ಸ್ವಾರಾಜ್ಯಂ ಸುಲಭಂ ಲಭೇತ ಸುಕೃತೈಸ್ತ್ವತ್ಪಾದಪದ್ಮಾರ್ಚಕೇ ।
ಸ್ತ್ವಾನೇವಾಶು ಭಜಾಮಿ ಸಾಂಬ ಮನಸಾ ಮಂತುಂ ಸಹಸ್ವಾದ್ಯ ಮೇ॥೨೬॥

ತ್ರಿಪುರಾಸುರರನ್ನು ಸಂಹರಿಸಿದ, ಮುರಾರಿಯನ್ನು ಬಾಣವಾಗಿ ಧರಿಸಿದ, ಮಂದಹಾಸವನ್ನು ಬೀರುವ ಓ ಚಂದ್ರಶೇಖರ, ದಾಟಲಸಾಧ್ಯವಾದ ಈ ಸಂಸಾರ ಸಾಗರವನ್ನು ದಾಟಿಸು. ॥೨೩॥

ದಿಗಂಬರನಾಗಿ ಮಹಾವಿರಕ್ತನಾದ ಓ ದೇವನೇ, ಮನ್ಮಥಬಾಣದಿಂದ ದೂಷಿತನಾದ ನನ್ನನ್ನು ಪಾಲಿಸು. ವೇದಾಂತಗಳಲ್ಲಿ ವರ್ಣಿಸುವ ನಿನ್ನ ಪಾದಸ್ವರೂಪವನ್ನು ಸದಾ ಭಜಿಸುವೆನು. ॥೨೪॥

ಎಲೈ ಮನವೇ, ತಾರಾಧಿಪತಿಯನ್ನು ತಲೆಯ ಜಟೆಯಲ್ಲಿ ಧರಿಸಿದವನೂ, ತ್ರಿಪುರಾಸುರರನ್ನು ಸಂಹರಿಸಿದವನೂ, ಕುಬೇರನಿಂದ ಸೇವಿಸಲ್ಪಡುವವನೂ 'ವೈರಾಜ' ಎಂಬ ಸಾಮಗಾನದಿಂದ ಸಂತೋಷಿಸುವವನೂ, ಸುಬ್ರಹ್ಮಣ್ಯ ನಾರಾಯಣರಿಂದ ಅರ್ಚಿಸಲ್ಪಡುವವನೂ, ಗಿರಿಜೆಯೊಡನೆ ಸೇರಿದವನೂ, ದೇವೇಂದ್ರನಿಗೆ ವಂದ್ಯನೂ "ಹೀಂಕಾರ" ವೆಂಬ ಸಾಮಗಾನದಿಂದ ಸಂತೋಷಿಸುವವನೂ, ಯಜ್ಞಾಧಿಪತಿಯೂ ಆದ ಶಿವನನ್ನು ಭಜಿಸು. ॥೨೫॥

ಪುಣ್ಯಗಳಿಂದ ಸುಲಭವಾಗಿ ಅಸ್ಥಿರವಾದ ಸ್ವರ್ಗರಾಜ್ಯವು ಲಭಿಸುವುದು, ಅದು ನನಗೆ ಬೇಡ. ಓ ಪರಮೇಶ್ವರ ನಿನ್ನ ಅಡಿದಾವರೆಯನ್ನು ಭಜಿಸುತ್ತಾ ನಾನು ನಿನ್ನನ್ನೇ ಪಡೆಯುವೆನು. ನನ್ನ ಅಪರಾಧವನ್ನು ಮನ್ನಿಸು." ॥೨೬॥

|| ಸ್ಕಂದ ಉವಾಚ ||

ಇತ್ಥಂ ತತ್ಸ್ತುತಿತೋ ಜಗಾಮ ಗಿರಿಶೋ ಗೌರ್ಯಾ ವೃಷೇಂದ್ರೇಣ ವೈ
ಸ್ಕಂದಾದ್ಯೈರ್ಗಣಪೈರ್ವೃತಸ್ಸ ತು ಯಮೋ ಯಾತಃ ಶಿವಾಜ್ಞೈವ ಹಿ ।
ನತ್ವಾ ವಿಷ್ಣುವಿಧೀಂದ್ರದೇವನಿಕರಾಃ ಸ್ಥಾನಂ ಯಯುಸ್ತೇ ಪರಾಂ
ಆಶೀರ್ಭಿಃ ಪ್ರತಿನಂದ್ಯತಾಂ ದ್ವಿಜವರಂ ಚಂಡಾಂಶುಪುತ್ರೇಣ ತೇ ॥೨೭॥

ಯಾಮ್ಯೈಃ ಸ್ವೈರ್ಗಣಪೈರ್ವೃತಃ ಪ್ರತಿದಿನಂ ಚಕ್ರುಃ ಶಿವಾಜ್ಞಾಂ ಹಿತಾಂ ॥೨೮॥

ಶಾಂತ್ಯೇವಾಶು ಜಗತ್ತ್ರಯೀಸುವಿಹಿತಾಂ ಲೋಕಾನ್ ಸುಪುಣ್ಯೈಸ್ತಥಾ ।
ಪಾಪೇನಾಪಿ ಸುದುಃಖಭೋಗನಿಕರೈಃ ಪುಷ್ಯಾತಿಶರ್ವಾಜ್ಞಯಾ ॥೨೯॥

ಮಾರ್ಕಂಡೇಯಮುನಿಸ್ತದಾ ಪರವಶೋ ಹರ್ಷೇಣ ನತ್ವಾ ಶಿವಂ
ಗತ್ವಾ ಸ್ವಂ ಭವನಂ ಪ್ರಣಮ್ಯ ಪಿತರಾವುದ್ವಾಹ್ಯ ಕನ್ಯಾಂ ಶುಭಾಂ ।
ಇಷ್ಟ್ವಾ ಯಜ್ಞವರೈಃ ಶಿವಾರ್ಚನರತೋ ಲೋಕೇಷು ಸಂಚಾರ್ಯಭೂತ್
ದೇವಾನಾಂ ಕುಶಲಾನುರಕ್ತಹೃದಯಃ ಶೈವೋ ಮುನಿಃ ಸಂವಸನ್ ॥೩೦॥

ಹೀಗೆ ಯಮನಿಂದ ಸ್ತುತಿಸಲ್ಪಟ್ಟ ಪರಮೇಶ್ವರನು ಗೌರಿಯೊಡನೆ ನಂದಿಯು ನ್ನೇರಿ ಸ್ಕಂದ ಮೊದಲಾದ ಗಣನಾಯಕರೊಡನೆ ಹೊರಟುಹೋದನು. ಯಮನೂ ಶಿವನಾಜ್ಞೆಯನ್ನು ಪಡೆದು ಸ್ವಸ್ಥಾನಕ್ಕೆ ಹೊರಟನು. ನಾರಾಯಣ ಮೊದಲಾದವರು ಮಾರ್ಕಂಡೇಯನನ್ನು ಹರಸಿ ಪರಮೇಶ್ವರನಿಗೆ ನಮಸ್ಕರಿಸಿ ತಮ್ಮ ತಮ್ಮ ಸ್ಥಾನ ಗಳಿಗೆ ತೆರಳಿದರು. ||೨೭||

ಅಂದಿನಿಂದ ಯಮನೂ ಯಮದೂತರೂ ಸಹ ಶಿವನ ಆ ಆಜ್ಞೆಯನ್ನು ತಪ್ಪದೇ ನಡೆಸುತ್ತಿರುವರು. ||೨೮||

ಅವರು ಪುಣ್ಯವಂತರಿಗೆ ಸುಖವನ್ನುಂಟುಮಾಡುತ್ತಲೂ ಪಾಪಿಗಳಿಗೆ ಶಿಕ್ಷೆಯನ್ನು ವಿಧಿಸುತ್ತಲೂ ಲೋಕರೀತಿಯನ್ನೂ ಶಿವಾಜ್ಞೆಯನ್ನೂ ನಡೆಯಿಸುತ್ತಿದ್ದರು. ||೨೯||

ಅತ್ತ ಮಾರ್ಕಂಡೇಯನು ವರಪ್ರಾಪ್ತಿಯಿಂದ ತುಂಬಾ ಸಂತಸಗೊಂಡು ಶಿವನಿಗೆ ನಮಸ್ಕರಿಸಿ ಮನೆಗೆ ಹೊರಟುಹೋಗಿ ತಂದೆತಾಯಿಗಳಿಗೆ ನಮಸ್ಕರಿಸಿದನು. ಆ ಮೇಲೆ ಕೆಲವು ದಿನಗಳಲ್ಲಿ ಕುಲಕನ್ಯೆಯೋರ್ವಳನ್ನು ಮದುವೆಯಾದನು.

ಲಿಂಗಾಲಿಂಗನತತ್ಪರಂ ದ್ವಿಜಸುತಂ ಮೃತ್ಯೋೕರರಕ್ಷಚ್ಛಿವೋ
ಭಕ್ತ್ಯಾ ಭಾವಿತಭಾವನಾಹೃತಭವಂ ಭಾವಂ ಭವಾನೀಪತಿಃ ।
ಯಸ್ತ್ವೇತಾಂ ಶೃಣುಯಾದಸಾರವಿಭವೈರ್ಭಕ್ತ್ಯೈವ ಭುಕ್ತ್ವಾ ಸುಖಂ
ಯಾತ್ಯಂತೇ ಶಿವಧಾಮ ವಂಶನಿಯುತೈಃ ಪುತ್ರೈಶ್ಚ ಪೌತ್ರೈರಪಿ ॥೩೧॥

ಇತಿ ಶ್ರೀಶಿವರಹಸ್ಯೇ ಚತುರ್ಥಾಂಶೇ ಮಾರ್ಕಂಡೇಯ ಚರಿತ್ರವರ್ಣನಂ ನಾಮ ಸಪ್ತದಶೋಽಧ್ಯಾಯಃ

ಅನೇಕ ಯಜ್ಞಗಳನ್ನು ಮಾಡಿದನು, ಶಿವನನ್ನರ್ಚಿಸುತ್ತಾ ಲೋಕಸಂಚಾರಿಯಾಗಿ ಜನರನ್ನುದ್ಧರಿಸಿದನು. ದೇವತೆಗಳಿಗೆ ಕ್ಷೇಮವನ್ನು ಕಲ್ಪಿಸಿದನು. ||೩೦||

ಯಮನ ಭಯದಿಂದ ಶಿವಲಿಂಗವನ್ನಪ್ಪಿಹಿಡಿದು ಪ್ರಾರ್ಥಿಸುತ್ತಲಿರುವ ಮಾರ್ಕಂಡೇಯನನ್ನು ಮೃತ್ಯುಂಜಯನಾದ ಶಿವನು ಯಮನನ್ನು ಶಿಕ್ಷಿಸಿ ರಕ್ಷಿಸಿದ ಈ ಕಥೆಯನ್ನು ಭಕ್ತಿಯಿಂದ ಯಾವನು ಕೇಳುವನೋ, ಅವನು ಈ ಲೋಕದಲ್ಲಿ ಬೇಕಾದಂತಹ ಐಶ್ವರ್ಯವನ್ನನುಭವಿಸಿ ಕೊನೆಯಲ್ಲಿ ತನ್ನ ಪಿತೃಪುತ್ರಪೌತ್ರರೊಡನೆ ಶಿವಲೋಕವನ್ನು ಪಡೆಯುವನು. ಎಂದು ಕುಮಾರಸ್ವಾಮಿಯು ಜೈಗೀಷವ್ಯ ಮುನಿಗೆ ಅರುಹಿದನು. ||೩೧||

ಇಲ್ಲಿಗೆ ಶ್ರೀಶಿವರಹಸ್ಯದಲ್ಲಿ ಹದಿನೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಅಷ್ಟಾದಶೋಽಧ್ಯಾಯಃ

॥ ಸ್ಕಂದ ಉವಾಚ ॥

ಜೈಗೀಷವ್ಯಮಹಾಯೋಗಿನ್ ಶಾಂಕರೋ ಗೌತಮೋ ಮುನಿಃ ।
ಚಕಾರ ತಪಸಾ ದೇವಾನ್ ಹರಪಾದಾರ್ಚನೇ ರತಃ ॥೧॥

ಸಭಾರ್ಯೋ ಭೀಮಪಾದಾಬ್ಜಸ್ಮರಣೇನ ಮುನಿಃ ಪರಂ ।
ಭಸ್ಮರುದ್ರಾಕ್ಷಸಂಪನ್ನಃ ಕುಶಾವರ್ತೇಽವಸನ್ಮುನಿಃ ॥೨॥

ತಸ್ಯ ರೂಪವತೀ ಭಾರ್ಯಾ ಅಹಲ್ಯಾ ಶಕ್ರಧರ್ಷಿತಾ ।
ತಂ ದೃಷ್ಟ್ವಾ ಸ ಮುನಿಃ ಕ್ರೋಧಾಚ್ಛಾಪಾಸ್ತ್ರೈಸ್ತಂ ವ್ಯತಾಡಯತ್ ॥೩॥

ಹದಿನೆಂಟನೆಯ ಅಧ್ಯಾಯ

ಎಲೈ ಮಹಾಯೋಗಿಯಾದ ಜೈಗೀಷವ್ಯಮುನಿಯೇ, ಕೇಳು. ಶಿವಭಕ್ತಾಗ್ರೇಸರನಾದ ಗೌತಮನೆಂಬ ಮುನಿಯು ಹಿಂದೆ ಶಿವನನ್ನಾರಾಧಿಸುತ್ತಾ ದೇವತೆಗಳಿಗೂ ಅಸಾಧ್ಯವಾದಂತಹ ಘೋರತಪಸ್ಸನ್ನಾಚರಿಸುತ್ತಿದ್ದನು. ॥೧॥

ಆ ಗೌತಮನು ಕುಶಾವರ್ತದಲ್ಲಿ ಪತ್ನಿಯೊಡನೆ ವಾಸಿಸುತ್ತಾ ಭಸ್ಮರುದ್ರಾಕ್ಷಿಧಾರಿಯಾಗಿದ್ದು ಶಿವನನ್ನಾರಾಧಿಸುತ್ತಿದ್ದನು. ॥೨॥

ಆ ಮುನಿಯ ಸುಂದರಿಯಾದ ಹೆಂಡತಿ ಅಹಲ್ಯೆಯನ್ನು ಇಂದ್ರನು ಮೋಸದಿಂದ ಕೆಡಿಸಿದನು. ಅದನ್ನು ನೋಡಿ ಕೋಪದಿಂದ ಗೌತಮನು ದೇವೇಂದ್ರನನ್ನು ಶಪಿಸಿದನು. ॥೩॥

ತಾಂ ತ್ಯಕ್ತ್ವಾ ಸ ಮುನಿರ್ಧೀರಸ್ತ್ರ್ಯಂಬಕೇ ಭೂಧರೇಽವಸತ್ ।
ತತ್ಪಾಪಶಮನಾರ್ಥಾಯ ತಪಸಾಽಸಾಧಯಚ್ಛಿವಂ ॥೪॥

ರುದ್ರಪಂಚಾಕ್ಷರಾಸಕ್ತೋ ಭಸ್ಮರುದ್ರಾಕ್ಷಧಾರಕಃ ।
ತುಷ್ಟಾವ ದೇವಂ ಹೃಷ್ಟಾತ್ಮಾ ಸ್ವಕಷ್ಟನಿವಾರಕಂ ॥೫॥

॥ ಗೌತಮ ಉವಾಚ ॥

ಇಂದುವಾಹಮರವಿಂದಲೋಚನೇನಾರ್ಚ್ಯ
ಪಾದಯುಗಳೇಂದುಸುಚೂಡಂ ।
ವೇದಬೃಂದಸನಂದನಸ್ತುತಂ
ನಂದಿವಕ್ತ್ರಕಮಲೇಕ್ಷಣಂ ಸದಾ ॥೬॥

ಸ್ಕಂದತಾತಮಖಿಲಾರ್ಥದಾಯಕಂ
ಸುಂದರಾಂಗಮಖಿಲಾತ್ಮಕಮೋಕಂ ।
ಮಂದಾರಮಂದರನತಪ್ರಿಯವಾಮದೇವ
ಸಾಮಾಂಗಸಂಸ್ತುತ ಉಮಾಧವ ದೇವದೇವ ॥೭॥

ಹೆಂಡತಿಯಾದ ಅಹಲ್ಯೆಯನ್ನೂ ಬಿಟ್ಟು ಆ ಗೌತಮನು ಹಿಮಾಲಯಕ್ಕೆ ತೆರಳಿ, ಅಲ್ಲಿ ಹೆಂಡತಿಯ ಪಾಪಶಾಂತಿಗೋಸ್ಕರ ಶಿವನನ್ನಾರಾಧಿಸಿದನು. ॥೪॥

ಆ ಮುನಿಯು ಆ ಗಿರಿಯಲ್ಲಿ ಭಸ್ಮರುದ್ರಾಕ್ಷಿಧಾರಿಯಾಗಿ ಶಿವಪಂಚಾಕ್ಷರ ಮಂತ್ರವನ್ನು ಜಪಿಸುತ್ತಾ ಭಕ್ತಿಯಿಂದ ಶಿವನನ್ನು ಹೀಗೆ ಸ್ತುತಿಸಿದನು. ॥೫॥

" ಚಂದ್ರಶೇಖರನೂ, ನಾರಾಯಣನಿಂದ ಅರ್ಚಿಸಲ್ಪಟ್ಟವನೂ, ವೇದಗಳಿಂದ ಸ್ತುತಿಸಲ್ಪಡುವವನೂ, ಸದಾ ಮಂದಹಾಸದಿಂದ ಕೂಡಿದವನೂ, ಸನಂದನ ಮೊದಲಾದ ಮಹಾಮುನಿಗಳಿಂದ ಸ್ತುತಿಸಲ್ಪಡುವವನೂ ಆದ ಮಹಾದೇವನನ್ನು ಸದಾ ಭಜಿಸುವೆನು. ॥೬॥

ಭಕ್ತರಿಗೆ ಇಷ್ಟಾರ್ಥಗಳೆಲ್ಲವನ್ನೂ ಕರುಣಿಸುವ, ವಾಮದೇವವೆಂಬ ಸಾಮಗಾನದಿಂದ ಸ್ತುತಿಸಲ್ಪಡುವ ಓ ಪಾರ್ವತೀಪತೆ, ಸ್ಕಂದನ ಪಿತನೂ, ಸುಂದರಸ್ವರೂಪನೂ ಜಗನ್ಮಯನೂ ಪರಮಾತ್ಮನೂ ಆದ ನಿನಗೆ ನಮಸ್ಕರಿಸುವೆನು. ॥೭॥

ಕಾಮದಾಹದ ಸುರಾರ್ಚಿತ ಶಂಭೋ
ವ್ಯೋಮಕೇಶ ಪರಿಪಾಲಯಾಧುನಾ ।
ಪದ್ಮನಂದನಸನಂದನವಂದಿತ
ಮಿಂದುಕುಂದಧವಳಾಂಗಕಿರೀಟಂ ॥೮॥

ಬಿಂದುನಾದರಹಿತಂ ಪ್ರಣವಾಚ್ಛಛಂದಸಾಂ ಚ ನಿಲಯಂ ಭಜ ಶಂಭುಂ ।
ಇಭನಿಭವದನಾರವಿಂದ ಲೋಭಂ ಭಸಿತೋದ್ಭವಭಾಸಭಾಸಿತಾಂಗಂ ॥೯॥

ಭವಭಯಹರಣಂ ಭವೋದ್ಭವಂ ತಂ
ಪ್ರಸಭಂ ಸ್ತೌಮಿ ಭವಂ ಭವಾನಿನಾಥಂ(?) ।
ಭವಭವದೀಯಕಟಾಕ್ಷಸಂಗೈ
ರ್ಮಮಹೃತ್ಸಂಗತರಂಗಿತೋ ಭವಾಬ್ಧಿಃ ॥೧೦॥

ತತ್ಸ್ತುತ್ಯಾ ತು ತದಾ ಪ್ರೀತಸ್ತಮಾಹೂಯ ಮಹೇಶ್ವರಃ ॥೧೧॥

ದೇವವಂದ್ಯನಾದ ಕಾಮವೈರಿಯಾದ ಮತ್ತು ಆಕಾಶವೇ ತಲೆಗೂದಲಾಗುಳ್ಳ ವಿರಾಟ್ಪುರುಷನಾದ ಓ ದೇವ, ನನ್ನನ್ನು ಪಾಲಿಸು. ಬ್ರಹ್ಮಾದಿಗಳಿಂದ ವಂದಿತನೂ ಗಿರಿಮಲ್ಲಿಗೆ ಮತ್ತು ಚಂದ್ರರಂತೆ ಶುಭ್ರವಾದ ಶರೀರವುಳ್ಳವನೂ ಆದ ನಿನಗೆ ನಮಸ್ಕಾರವು. ॥೮॥

ಬಿಂದುನಾದಗಳಿಲ್ಲದ ಓಂಕಾರಸ್ವರೂಪನೂ, ವೇದಗಳಿಗೆ ನಿಧಿಯೂ, ವಿನಾಯಕನ ತಂದೆಯೂ ಭಸ್ಮಧಾರಿಯೂ ಆದ ಶಿವನನ್ನು ಸದಾ ಭಜಿಸುವೆನು.॥೯॥

ಸಂಸಾರ ಭಯವನ್ನು ಹೋಗಲಾಡಿಸುವವನೂ, ಜಗತ್ಕಾರಣನೂ, ಗಿರಿಜಾಪತಿಯೂ ಆದ ನಿನ್ನನ್ನು ಸ್ತುತಿಸುವೆನು. ನಿನ್ನ ಕರುಣಾದೃಷ್ಟಿಯೆಂಬ ಚಂದ್ರಕಿರಣಗಳಿಂದ ನನ್ನ ಹೃದಯವೆಂಬ ಸಾಗರವು ಸದಾ ಉಕ್ಕೇರಲಿ." ॥೧೦॥

ಗೌತಮನ ಈ ಸ್ತುತಿಯಿಂದ ಸಂತುಷ್ಟನಾಗಿ ಈಶ್ವರನು ಹೀಗೆ ಹೇಳಿದನು. ॥೧೧॥

ವಿ. ಸೂ : ಮೂಲದಲ್ಲಿ ಕೆಲವು ಛಂದಸ್ಸುಗಳು ಅಸ್ತವ್ಯಸ್ತವಾಗಿವೆ. ಮೂಲದಲ್ಲಿದ್ದಂತೆಯೇ ಅವುಗಳನ್ನು ಬರೆಯಲಾಗಿದೆ.

|| ಈಶ್ವರ ಉವಾಚ ||

ಕಸ್ತೇ ಕಾಮೋ ಮುನಿಶ್ರೇಷ್ಠ ತಂ ತೇ ಸಂಪೂರಯಾಮ್ಯಹಂ ।
ತ್ವತ್ಸ್ತುತ್ಯಾ ತಪಸಾ ಭಕ್ತ್ಯಾ ತುಷ್ಟಸ್ತೇ ಕಷ್ಟನಾಶಕಃ ॥೧೨॥
ವೃಣು ಕಾಮಾನ್ ಮಹಾಭಾಗ ಗೌತಮೋತ್ತಮಮಾನಸ ॥೧೩॥

|| ಸೂತ ಉವಾಚ ||

ಇತ್ಥಂ ಶಂಭೋರ್ವಚಃ ಶ್ರುತ್ವಾ ನತ್ವೇಶಂ ಗೌತಮೋ ಮುನಿಃ ।
ಪ್ರಾರ್ಥಯಾಮಾಸ ಸ ಸ್ನಾತುಂ ಸ್ವಸ್ಯ ಭಾರ್ಯಾಯುತಸ್ಯ ಚ ॥೧೪॥

ಶುದ್ಧಯೇ ತಂ ಮಹಾದೇವಂ ಸದಾನ್ನಂ ಚ ಗಿರಿಪ್ರಭಂ ।
ಗೃಹೇ ಸಿದ್ಧಂ ಶಾಂಭವಾನಾಂ ಸದಾ ಭೋಜಯಿತುಂ ಪ್ರಿಯಂ ॥೧೫॥

ತದಾ ತತ್ಪ್ರಾರ್ಥನಾಯೋಗಾತ್ ಸ್ವಜಟಾಮೂಲತೋ ಹರಃ ।
ವಿಸಸರ್ಜ ತದಾ ಗಂಗಾಂ ಗೌತಮೀಂ ನಾಮ ನಾಮತಃ ॥೧೬॥

ಎಲೈ ಗೌತಮಮುನಿ, ನಿನಗೆ ಬೇಕಾದುದೇನು? ಹೇಳು, ನಿನ್ನ ಭಕ್ತಿ ಪೂರ್ವಕವಾದ ಸ್ತೋತ್ರದಿಂದಲೂ ತಪಸ್ಸಿನಿಂದಲೂ ಸಂತುಷ್ಟನಾದ ನಾನು ನಿನ್ನ ಕಷ್ಟವನ್ನು ಹೋಗಲಾಡಿಸುವೆನು. ಎನ್ನಲು ||೧೨-೧೩||

ಶಿವನ ಈ ಮಾತನ್ನು ಕೇಳಿ ಗೌತಮನು, ಪಾಪನಾಶಕ್ಕಾಗಿ ತಾನೂ ತನ್ನ ಹೆಂಡತಿಯೂ ಪವಿತ್ರವಾದ ನೀರಿನಲ್ಲಿ ಸ್ನಾನಮಾಡಲು ಅನುಕೂಲಿಸುವಂತೆ ಒಂದು ತೀರ್ಥವನ್ನು ಕೇಳಿಕೊಂಡನು. ||೧೪||

ಮತ್ತು ಶಿವಭಕ್ತರು ತನ್ನ ಮನೆಯಲ್ಲಿ ಅತಿಥಿಗಳಾಗಿ ಸದಾ ಮೃಷ್ಟಾನ್ನ ಭೋಜನ ಮಾಡುವಂತೆ ಯಾವಾಗಲೂ ಇರುವಂತಹ ಬೆಟ್ಟದಂತಹ ಅನ್ನದ ರಾಶಿಯನ್ನೂ ಪ್ರಾರ್ಥಿಸಿಕೊಂಡನು. ||೧೫||

ಗೌತಮನ ಪ್ರಾರ್ಥನೆಯಂತೆ ಶಿವನು ತನ್ನ ಜಟೆಯಲ್ಲಿದ್ದ ಗಂಗೆಯನ್ನು ಗೌತಮನಾಶ್ರಮದ ಬಳಿಯಲ್ಲಿ ಹರಿಯಿಸಿದನು. ಆ ನದಿಗೆ "ಗೌತಮೀ" ಯೆಂದು ಹೆಸರಾಯಿತು. ||೧೬||

ಸಾ ಪಾವಯಂತೀ ದೇವಾದ್ಯೈಸ್ಸಂಸ್ತುತಾ ನಿರ್ಗತಾ ತತಃ ।
ಗೋದಾವರೀ ವರನದೀ ನಂದಾ ಸಪ್ತಮುಖಾಬ್ಧಿಗಾ ॥೧೭॥

ಸಿಂಹಸಂಸ್ಥೇ ಗುರೌ ಮಾಘೇ ತತ್ರ ಸ್ನಾತ್ವಾ ಮಹಾಮುನಿಃ ।
ಭಾರ್ಯಯಾ ಪಾಪನಿರ್ಮುಕ್ತೋ ಬಭೂವ ವಿಜಿತೇಂದ್ರಿಯಃ ॥೧೮॥

ದೇವಾಸ್ತಥಾಽನ್ಯೇ ಮುನಯಸ್ತತ್ಕಾಲಸ್ನಾನಮಾಸ್ಥಿತಾಃ ।
ಗೌತಮೋಽಪ್ಯವಸತ್ತತ್ರ ಭಸ್ಮರುದ್ರಾಕ್ಷಭೂಷಣಃ ॥೧೯॥

ಅರ್ಚಯಂಸ್ತ್ರ್ಯಂಬಕೇಶಾನಮಕ್ಷಯಾನ್ನಪ್ರದಸ್ಸದಾ ।
ವಿರೂಪಾಕ್ಷಪ್ರಸಾದೇನ ಕ್ಷಯದ್ವೀರಪರೇಷು ಚ ॥೨೦॥

ತದುದಂತಂ ದ್ವಿಜಾಃ ಶ್ರುತ್ವಾ ಸರ್ವೇ ದುರ್ಭಿಕ್ಷಪೀಡಿತಾಃ ।
ಸರ್ವದೇಶಸ್ಥಿತಾ ವಿಪ್ರಾಃ ಕಣ್ವಕಾತ್ಯಾಯನಾಸ್ತದಾ ॥೨೧॥

ಭಾರ್ಗವಾ ಕಾವದೇಯಾಶ್ಚ ತಥೈವಾಂಗಿರಸಾಸ್ತದಾ ।
ಸಾಗ್ನಯೋಽನಗ್ನಯಶ್ಚೈವ ವಿಧುರಾ ಸಧುರಾಸ್ತಥಾ ॥೨೨॥

ಆ ಗೌತಮೀ ನದಿಯು ದೇವತೆಗಳಿಂದ ಸ್ತುತಿಸಲ್ಪಡುತ್ತಾ ಜಗತ್ತನ್ನು ಪವಿತ್ರಗೊಳಿಸುತ್ತಾ ಗೋದಾವರೀ, ನಂದಾ ಮೊದಲಾದ ಏಳುಭಾಗಗಳಾಗಿ ಮುಂದೆ ಸಮುದ್ರವನ್ನು ಸೇರಿತು. ॥೧೭॥

ಜಿತೇಂದ್ರಿಯನಾದ ಗೌತಮನು ಆ ಗೌತಮೀ ನದಿಯಲ್ಲಿ ಮಾಘಮಾಸದಲ್ಲಿ ಗುರುವು ಸಿಂಹರಾಶಿಯಲ್ಲಿದ್ದಾಗ ಹೆಂಡತಿಯೊಡನೆ ಸ್ನಾನಮಾಡಿ ಪರಿಶುದ್ಧನಾದನು. ॥೧೮॥

ದೇವತೆಗಳೂ ಸಹ ಆ ಗೌತಮೀನದಿಯಲ್ಲಿ ಅದೇ ಪುಣ್ಯಕಾಲದಲ್ಲಿ ಸ್ನಾನ ಮಾಡಿದರು. ಆ ಮೇಲೆ ಗೌತಮನು ಆ ಗೌತಮೀತೀರದಲ್ಲಿಯೇ ಭಸ್ಮರುದ್ರಾಕ್ಷಿ ಧಾರಿಯಾಗಿ ತ್ರ್ಯಂಬಕೇಶ್ವರನನ್ನು ಅರ್ಚಿಸುತ್ತಿದ್ದನು. ಶಿವನ ಅನುಗ್ರಹದಿಂದ ಬಂದ ಮೃಷ್ಟಾನ್ನವನ್ನು ಅತಿಥಿಗಳೆಲ್ಲರಿಗೂ ಬಡಿಸಿ ಉಪಚರಿಸುತ್ತಿದ್ದನು.॥೧೯-೨೦॥

ಆಗ ದೇಶದಲ್ಲೆಲ್ಲಾ ಕ್ಷಾಮವು ಪ್ರಸರಿಸಿತ್ತು. ಇಲ್ಲಿ ಗೌತಮನಾಶ್ರಮದಲ್ಲಿ ಮೃಷ್ಟಾನ್ನಸಂತರ್ಪಣೆಯಾಗುತ್ತಿದ್ದುದು ಅನೇಕ ಮುನಿಗಳಿಗೆ ತಿಳಿಯಿತು. ಕಣ್ವ

ವಾಲಖಿಲ್ಯಾಸ್ತಥಾ ವಿಪ್ರಾ ವೈಖಾನಸಸಮುದ್ಭವಾಃ ।
ಭಾರದ್ವಾಜಾ ವೀತಹವ್ಯಾ ಧೌಮ್ಯಹುಂಡಾಶ್ಚ ಕಂಕತಾಃ ॥೨೩॥

ಗೃಹಸ್ಥಾಶ್ಚ ವನಸ್ಥಾಶ್ಚ ಯತಯೋ ವರ್ಣಿನಸ್ತಥಾ ।
ಸಹಸ್ರಾಣಾಂ ತದಾಽಽಜಗ್ಮುರ್ನಿಯುತಾ ಗೌತಮಂ ಮುನಿಂ ॥೨೪॥

ತ್ರ್ಯಂಬಕಂ ತೇಽಥ ಸಂಪ್ರಾಪ್ಯ ಸ್ನಾತ್ವಾ ಗೋದಾವರೀಜಲೇ ।
ಭಸ್ಮರುದ್ರಾಕ್ಷಸಂಪನ್ನಾ ಬಿಲ್ವಪಲ್ಲವಪಾಣಯಃ ॥೨೫॥

ಸಂಪೂಜ್ಯ ತ್ರ್ಯಂಬಕೇಶಾನಂ ನತ್ವೈವಂ ಸಂಸ್ತುವನ್ ಶಿವಂ । ॥೨೬॥

॥ ವಿಪ್ರಾ ಊಚುಃ ॥

ದ್ವಿಜರಾಜಕಲಾಧರಂ ಮಹೇಶಂ ದ್ವಿಜಕುಲಪೂಜ್ಯಮುಪಾಸ್ಮಹೇ ಶಿವಂ ತ್ವಾಂ
ದ್ವಿಜಪತಿವಾಹಸುಪೂಜಿತಾಂಘ್ರಿಪದ್ಮಂ ವರಹಾರೀಕೃತದ್ವಿಜಿಹ್ವನಾಥರಂ
॥೨೭॥

ಗೋತ್ರದವರು, ಕಾತ್ಯಾಯನಗೋತ್ರದವರು, ಭಾರ್ಗವಗೋತ್ರದವರು, ಕಾವದೇಯ ವಂಶಜರು ಮೊದಲಾದ ಬ್ರಾಹ್ಮಣರು ಗೌತಮನ ಆಶ್ರಮಕ್ಕೆ ಬಂದರು. ॥೨೧-೨೨॥

ವಾಲಖಿಲ್ಯರು, ವೈಖಾನಸರು, ಭಾರದ್ವಾಜರು, ವೀತಹವ್ಯವಂಶಜರು, ಧೌಮ್ಯವಂಶಜರು, ಹುಂಡರು, ಕಂಕತವಂಶಜರು ಮೊದಲಾದ ಮುನಿಗಳೂ ಅಲ್ಲಿಗೆ ಬಂದರು. ॥೨೩॥

ಅವರಲ್ಲಿ ಅಗ್ನಿಹೋತ್ರಿಗಳೂ, ಅಗ್ನಿಹೋತ್ರಿಗಳಲ್ಲದವರೂ, ಪತ್ನಿಯುಳ್ಳವರೂ, ವಿಧುರರೂ, ಗೃಹಸ್ಥರೂ, ವಾನಪ್ರಸ್ಥರೂ, ಯತಿಗಳೂ, ಬ್ರಹ್ಮಚಾರಿಗಳೂ ಇದ್ದರು. ಹೀಗೆ ಲಕ್ಷಾಂತರಮಂದಿ ಬ್ರಾಹ್ಮಣರು ಗೌತಮನಾಶ್ರಮಕ್ಕೆ ಬರುತ್ತಿದ್ದರು. ॥೨೪॥

ಅವರೆಲ್ಲರೂ ಅಲ್ಲಿ ಗೌತಮನು ಪ್ರತಿಷ್ಠಿಸಿದ್ದ ತ್ರ್ಯಂಬಕೇಶ್ವರನನ್ನು ದರ್ಶನ ಮಾಡಿ ಗೌತಮೀನದಿಯಲ್ಲಿ ಸ್ನಾನಮಾಡಿ ಭಸ್ಮರುದ್ರಾಕ್ಷಿಧಾರಿಗಳಾಗಿ ಬಿಲ್ವಪತ್ರೆಗಳಿಂದ ಮಹಾದೇವನನ್ನರ್ಚಿಸಿ ಹೀಗೆ ಸ್ತುತಿಸಿದರು. ॥೨೫-೨೬॥

"ಚಂದ್ರಕಲೆಯನ್ನು ಧರಿಸಿದವನೂ, ಬ್ರಾಹ್ಮಣರಿಂದ ಪೂಜಿಸಲ್ಪಡುವವನೂ, ಗರುಡವಾಹನನಾದ ಹರಿಯಿಂದ ಅರ್ಚಿಸಲ್ಪಡುವವನೂ, ನಾಗಹಾರಧಾರಿಯೂ ಆದ ಓ ಮಹೇಶ್ವರ, ನಿನ್ನನ್ನು ಧ್ಯಾನಿಸುವೆವು, ಸ್ತುತಿಸುವೆವು. ॥೨೭॥

ಸುಬ್ರಹ್ಮಣ್ಯಪಿತಾಽಸಿ ಶಂಕರ ವಿಭೋ ಬ್ರಹ್ಮಣ್ಯದೇವೋ ಭವಾನ್
ಕಿಂಚೋಕ್ತಃ ಶ್ರುತಿಷು ತ್ವಮೇವ ಭಗವನ್ ದೇವೇಷು ವಿಶ್ವಾಧಿಕಃ ।
ತ್ವಾಂ ಚೈವೋಪನಿವೀತಕಾಃ ಹೃದಿ ಕರಂ ನಾನ್ಯಂ ಹಿ ಧ್ಯಾಯಾಮಹೇ
ತಸ್ಮಾತ್ತ್ವಾಂ ದ್ವಿಜರಾಜಶೇಖರಧರಂ ತ್ವಾಮೇವ ವಿಪ್ರಾ ವಯಂ ॥೨೮॥

॥ ಸ್ಕಂದ ಉವಾಚ ॥

ಗೌತಮಂ ತೇ ಸಮಾಗತ್ಯ ಪ್ರಣಮ್ಯೋಪವಿಶಂಸ್ತದಾ ।
ಕೇಚಿದಾಲಿಂಗಿತಾಸ್ತೇನ ಕೇಚಿತ್ ಸ್ನೇಹೇನ ಭಾಷಣೈಃ ॥೨೯॥

ಪರಿಪ್ರಶ್ನೈಶ್ಚ ಕುಶಲೈಸ್ತಂ ಮುನಿಂ ತೇ ಸಮರ್ಚಯನ್ ॥೩೦॥

॥ ಗೌತಮ ಉವಾಚ ॥

ಭವತಾಂ ಭವಭಕ್ತಾನಾಂ ದರ್ಶನೇನ ಮನೋರಥಃ ।
ಪೂರ್ಣಸ್ತೂರ್ಣಂ ಸ್ವರ್ಣವರ್ಣಪರ್ಣಾದಾಃ ಕಣ್ವದಾ ದ್ವಿಜಾಃ ॥೩೧॥

ಬಹೂನಾಂ ಶಾಂಭವಾನಾಂ ಚ ಸಮವಾಯೋ ದುರತ್ಯಯಃ ।
ನಿತರಾಂ ಪರಿತೃಪ್ತೋಽಸ್ಮಿ ಯಥಾಸಂಭವಮದ್ಯ ಮೇ ॥೩೨॥

ಓ ಶಂಕರ, ಓ ಪರಮೇಶ್ವರ, ನೀನು ಷಣ್ಮುಖನ ತಂದೆಯು, ಬ್ರಾಹ್ಮಣ್ಯವನ್ನು ರಕ್ಷಿಸುವವನು. ವೇದಗಳು ನಿನ್ನನ್ನು ಸರ್ವೋತ್ತಮನೆಂದು ಹೊಗಳುವುವು. ನಾವು ಪರಶಿವನಾದ ನಿನ್ನನ್ನೇ ಹೃದಯದಲ್ಲಿ ಚಿಂತಿಸುವೆವು. ಇನ್ನಾರನ್ನೂ ಚಿಂತಿಸಲಾರೆವು. ಶರಣುಹೊಂದಲಾರೆವು. ನೀನೇ ನಮ್ಮನ್ನು ರಕ್ಷಿಸಬೇಕು." ॥೨೮॥

ಹೀಗೆ ಸ್ತುತಿಸಿ ಆ ಮೇಲೆ ವಿಪ್ರರೆಲ್ಲರೂ ಗೌತಮನ ಬಳಿಗೆ ಬಂದು ಕೆಲವರು ಅವನಿಗೆ ನಮಸ್ಕರಿಸಿ ಕುಳಿತರು. ಕೆಲವರನ್ನು ಗೌತಮನು ಆಲಿಂಗಿಸಿದನು. ಕೆಲವರನ್ನು ಸ್ನೇಹದಿಂದ ಮಾತಾಡಿಸಿದನು. ಪರಸ್ಪರ ಕುಶಲಪ್ರಶ್ನೆಗಳಾದಮೇಲೆ ಗೌತಮನು ಹೀಗೆ ಹೇಳಿದನು. ॥೨೯-೩೦॥

ಮರದೆಲೆಗಳನ್ನು ಆಹಾರವಾಗಿ ಸೇವಿಸಿ ಘೋರತಪಸ್ಸನ್ನು ಮಾಡಿದಂತಹ ಓ ಕಾಣ್ವ ಮೊದಲಾದ ಮುನಿವರ್ಯರೇ, ಶಿವಭಕ್ತರಾದ ನಿಮ್ಮ ದರ್ಶನದಿಂದ ನಾನು ಕೃತಾರ್ಥನಾದೆನು. ॥೩೧॥

ಬಹುಜನರು ಈಶ್ವರಭಕ್ತರು ಸೇರುವುದು ಅಪರೂಪವು. ಇಂತಹ ಸುಯೋಗ ಲಭಿಸಿದುದಕ್ಕಾಗಿ ನನಗೆ ತುಂಬ ಸಂತೋಷವುಂಟಾಗಿದೆ. ॥೩೨॥

ವಿಶ್ರಾಮ್ಯತಾಂ ಕಿಯತ್ಕಾಲಂ ನಿತ್ಯಂ ಸ್ವಾದ್ವನ್ನಭೋಜನೈಃ ।
ಸುವೃಷ್ಟ್ಯಾ ವರ್ಷಯತ್ಯೇವ ವರ್ಷೋರ್ಯೋ ವೇದೇ ಚ ಗೀಯತೇ ॥೩೩॥

ಭಗವಾಂಸ್ತ್ರ್ಯಂಬಕಸ್ಸಾಂಬೋ ಮಾಂ ಸ್ನೇಹೇನಾನುಪಶ್ಯತಃ ॥೩೪॥

॥ ಸೂತ ಉವಾಚ ॥

ಇತಿ ಗೌತಮವಾಕ್ಯೇನ ಪ್ರಹೃಷ್ಟಾ ಮುನಿಪುಂಗವಾಃ ।
ಊಚುಃ ಪ್ರಾಂಜಲಯಸ್ಸರ್ವೇ ಗೌತಮಂ ತ್ರ್ಯಂಬಕಾರ್ಚಕಂ ॥೩೫॥

॥ ಮುನಯ ಊಚುಃ ॥

ಭವಾಂಶ್ಚ ಭಗವನ್ನಾರ್ತಿವಿನಾಶನಪರಾಯಣಃ ।
ಭವಪಾದಾಂಬುಜಧ್ಯಾನೈರ್ಭವಾರ್ಚನಪರಾಯಣಃ ॥೩೬॥

ತ್ವಂ ಚಾನ್ನಮೂರ್ತಿಪಾದಾರ್ಚಾಪ್ರಭಾವಾನ್ನಾತ್ರ ಸಂಶಯಃ ।
ಅಕ್ಷಯ್ಯಾನ್ನಂ ವಿರೂಪಾಕ್ಷಪ್ರಸಾದೇನಾಪ್ತವಾನಸಿ ॥೩೭॥

ಕೆಲವುಕಾಲದವರೆಗೆ ನನ್ನ ಆಶ್ರಮದಲ್ಲಿಯೇ ರುಚಿಕರವಾದ ಭೋಜನ ಮಾಡುತ್ತಾ ವಿಶ್ರಾಂತರಾಗಿರಿ. ಮಳೆಯನ್ನು ಕರೆಯುವ ದೇವನೆಂದು ವೇದಗಳಲ್ಲಿ ಸ್ತುತಿಸಲ್ಪಟ್ಟ ತ್ರ್ಯಂಬಕನು ನನ್ನಲ್ಲಿ ದಯೆಯಿಂದ ಇಲ್ಲಿ ಚನ್ನಾಗಿ ಮಳೆಗರೆಯುತ್ತಿರುವನು. ಆದುದರಿಂದ ಇಲ್ಲಿ ಅನ್ನಪಾನಸಮೃದ್ಧಿಯಿರುವುದು. ॥೩೨-೩೩॥

ಹೀಗೆಂದ ಗೌತಮನ ಮಾತನ್ನು ಕೇಳಿ ಮುನಿಗಳೆಲ್ಲರೂ ಸಂತಸಗೊಂಡು ಕೈಜೋಡಿಸಿ ಹೀಗೆ ನುಡಿದರು. ॥೩೫॥

" ಓ ಭಗವನ್, ಶಿವನನ್ನು ಅನನ್ಯಭಕ್ತಿಯಿಂದ ಧ್ಯಾನಿಸುತ್ತಾ ಅರ್ಚಿಸುತ್ತಲಿರುವ ನೀನು ಮಾನವರೆಲ್ಲರ ತಾಪತ್ರಯಗಳನ್ನೂ ಹೋಗಲಾಡಿಸಲು ಸಮರ್ಥನಾಗಿರುವೆ. ॥೩೬॥

ಅನ್ನಪೂರ್ಣಾಪತಿಯಾದ ಶಿವನನ್ನು ಅರ್ಚಿಸಿ, ಅದರ ಪ್ರಭಾವದಿಂದ ಎಂದಿಗೂ ಕ್ಷಯಿಸದಂತಹ ಅನ್ನರಾಶಿಯನ್ನು ಪಡೆದಿರುವೆ. ॥೩೭॥

ಕ್ಷುತ್‌ಕ್ಷಾಮಪೀಡಿತಾಸ್ಸರ್ವೇ ವಯಂ ತ್ವಾಂ ವೀಕ್ಷ್ಯ ನಿರ್ವೃತಾಃ ।
ತ್ರ್ಯಕ್ಷಭುಕ್ತೋಪಭಕ್ಷ್ಯೇನ ಕ್ಷತಪಾಪಾ ವಸಾಮಹೇ ॥೩೮॥

ಅನಾವೃಷ್ಟಿಭಯಂ ಯಾವತ್ತಾವತ್ತೇ ವಶಗಾ ವಯಂ ।
ಇತ್ಯುಕ್ತಂ ಗೌತಮಃ ಶ್ರುತ್ವಾ ಮುನೀನಾಂ ಭಾವಿತಾತ್ಮನಾಂ ॥೩೯॥

ದುರ್ಭಿಕ್ಷಾಪೀಡಿತೇ ಕಾಲೇ ತೈರುವಾಸ ನಿಜಾಶ್ರಮೇ ।
ತೇಽಪಿ ಗೋದಾವರೀತೀರೇ ತತ್ರಾವಸಥಕಲ್ಪನೈಃ ॥೪೦॥

ಊಷುಸ್ತ್ರ್ಯಂಬಕಮಾಶ್ರಿತ್ಯ ಪೂಜಯಂತೋ ಮುನೀಶ್ವರಾಃ ॥೪೧॥

ದಕ್ಷಶಿಕ್ಷವಿಷಮಾಕ್ಷಭಕ್ಷಿತೇ
ಶೇಷಭಕ್ಷ್ಯನಿಕರಂ ಪರಿಭೂಯ ।
ಧ್ವಾಂಕ್ಷವದ್ಬಲಿಭುಜೋ ರಟಾಮಹೇ
ಪಾರ್ವಣಾರ್ಣವನಿಮಗ್ನಮಾನಸಾಃ ॥೪೨॥

ಹಸಿವಿನ ಬಾಧೆಯಿಂದ ನರಳುತ್ತಿದ್ದ ನಾವೆಲ್ಲರೂ ಅನ್ನಸಮೃದ್ಧನಾದ ನಿನ್ನನ್ನು ನೋಡಿಯೇ ತೃಪ್ತರಾದೆವು. ಶಿವನಿಗೆ ನೈವೇದ್ಯಮಾಡಿ ಉಳಿದುದನ್ನು ಭುಜಿಸಿ ಪಾಪವನ್ನು ಕಳೆದುಕೊಳ್ಳುತ್ತಾ ನಾವು ನಿನ್ನಾಶ್ರಮದಲ್ಲಿಯೇ ಇರುವೆವು. ॥೩೮॥

ಈ ಬರಗಾಲವು ಹೋಗುವವರೆಗೆ ನಿನ್ನ ಈ ಆಶ್ರಮದಲ್ಲಿರುವೆವು." ಮಹಾತ್ಮರಾದ ಮುನಿಗಳ ಆ ಮಾತನ್ನು ಕೇಳಿ ಗೌತಮನು ಸಂತಸಪಟ್ಟು, ಆ ಕ್ಷಾಮಕಾಲದಲ್ಲಿ ಮುನಿಗಳೊಡನೆ ಸುಖಿಯಾಗಿ ತನ್ನ ಆಶ್ರಮದಲ್ಲಿದ್ದನು. ಆಮೇಲೆ ಮುನಿಗಳು ಗೋದಾವರೀ ತೀರದಲ್ಲಿ ಆಶ್ರಮಗಳನ್ನು ಕಟ್ಟಿಕೊಂಡು ತ್ರ್ಯಂಬಕನನ್ನರ್ಚಿಸುತ್ತಾ ಗೌತಮನೊಡನೆ ವಾಸಿಸತೊಡಗಿದರು. ॥೩೯-೪೦-೪೧॥

ಜನರು ತಿಂದುಬಿಟ್ಟುದನ್ನು ಕಾಗೆಯು ಕೂಗುತ್ತಾ ತಿನ್ನುವಂತೆ ನಾವೂ ಸಹ ಶಿವನು ಭಕ್ಷಿಸಿಬಿಟ್ಟ ಅನ್ನವನ್ನು ಅವನನ್ನು ಕೀರ್ತಿಸುತ್ತಾ ಸಂತಸದಿಂದ ತಿಂದು ಜೀವಿಸುವೆವು. ಇದರಿಂದ ನಮ್ಮ ಮನಸ್ಸು ಮಾತ್ರ ಪೂರ್ಣಾನಂದದಲ್ಲಿ ಮುಳುಗಿರುವುದು." ॥೪೨॥

ಸಂತರ್ಪ್ಯ ಚ್ಛಿವಭಕ್ತಶೇಷನಿಕರೈರೇಷಾಂ ದ್ವಿಜಾನಾಂ ಮುದೇ
ಚಾಹಲ್ಯಾಸಹಿತಸ್ತತಾಪ ಶರದಾಂ ಷಣ್ಣಾಂ ದ್ವಯಂ ವೈ ಮುನಿಃ ।
ಇತ್ಥಂ ವಿಪ್ರಸಹಸ್ರಕೈಃ ಪ್ರತಿದಿನಂ ತ್ರ್ಯಕ್ಷಪ್ರಸಾದೋದ್ಭವಂ
ಅನ್ನಾನಾಂ ಪತಿಪೂಜನೇನ ಸುತರಾಂ ಸಧ್ಯಾಸಪ್ರೀತ್ಯಾದ್ವಿಜಾನ್ ॥೪೩॥

ಇತಿ ಶ್ರೀ ಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ಗೌತಮಚಾರಿತ್ರ ಗೌತಮ ತಪೋವರ್ಣನಗಂಗಾನಯನದ್ವಿಜಸಮೂಹಸಂತರ್ಪಣಾದಿವರ್ಣನಂ ನಾಮ ಅಷ್ಟಾದಶೋಽಧ್ಯಾಯಃ

ಹೀಗೆ ಗೌತಮನು ಶಿವನ ನೈವೇದ್ಯಾನ್ನದಿಂದ ಸಾವಿರಾರು ಮಂದಿಮುನಿಗಳನ್ನು ದಿನವೂ ತೃಪ್ತಿಪಡಿಸುತ್ತಿದ್ದನು. ಹಾಗೆ ಮಾಡುತ್ತಾ ಆ ಮುನಿಯು ಅಹಲ್ಯೆಯೊಡನೆ ಹನ್ನೆರಡು ವರ್ಷಗಳ ವರೆಗೆ ಅನ್ನಪತಿಯಾದ ಶಿವನನ್ನಾರಾಧಿಸುತ್ತಾ ತಪವನ್ನಾಚರಿಸುತ್ತಿದ್ದನು. ಗೌತಮನಂತೆಯೇ ಇತರರೂ ಶಿವಾರಾಧನತತ್ಪರರಾಗಿದ್ದರು. ॥೪೩॥

ಇಲ್ಲಿಗೆ ಶ್ರೀಶಿವರಹಸ್ಯದಲ್ಲಿ ಚತುರ್ಥಾಂಶದಲ್ಲಿ ಹದಿನೆಂಟನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಏಕೋನವಿಂಶೋಽಧ್ಯಾಯಃ

|| ಸ್ಕಂದ ಉವಾಚ ||

ತಥಾ ತೇ ಗೌತಮಮುನಿಂ ಪರಿವಾರ್ಯ ಸ್ಥಿತಾ ದ್ವಿಜಾಃ ।
ತ್ರ್ಯಂಬಕಾರ್ಚಾಪರಾ ನಿತ್ಯಂ ತದಾ ತೇ ದ್ವಿಜಸತ್ತಮಾಃ ॥೧॥

ರುದ್ರಪಂಚಾಕ್ಷರಾಸಕ್ತಾ ಭಸ್ಮರುದ್ರಾಕ್ಷಧಾರಿಣಃ ।
ಶಿವನೈವೇದ್ಯಪುಷ್ಟಾಂಗಾಃ ಶಿವವಿಷ್ಟಾರ್ಚನೇ ರತಾಃ ॥೨॥

ಕ್ಷಾಮಕಷ್ಟಾನಿ ಸಂತ್ಯಜ್ಯ ತುಷ್ಟಾವಂತಃ ಸದಾ ದ್ವಿಜಾಃ ।
ಭೂಸುರಾ ಭಾಸುರಾಚಾರಾ ದುರಾಚಾರವಿವರ್ಜಿತಾಃ ॥೩॥

ಹತ್ತೊಂಬತ್ತನೆಯ ಅಧ್ಯಾಯವು

ಸ್ಕಂದನು ಜೈಗೀಷವ್ಯನಿಗೆ ಮುಂದಿನ ಕಥೆಯನ್ನು ಹೀಗೆ ವಿವರಿಸಿದನು. ಎಲೈ ಜೈಗೀಷವ್ಯಮುನಿ, ಆ ಆಶ್ರಮದಲ್ಲಿ ಮುನಿಗಳು ಗೌತಮನೊಡನೆ ಸೇರಿ ನಿತ್ಯವೂ ಭಕ್ತಿಯಿಂದ ಶಿವನನ್ನರ್ಚಿಸುತ್ತಿದ್ದರು, ಎಂದು ಹೇಳಿದೆನಷ್ಟೆ. ||೧||

ಅವರು ಭಸ್ಮರುದ್ರಾಕ್ಷಗಳನ್ನು ಧರಿಸಿ ರುದ್ರಸೂಕ್ತವನ್ನೂ ಶಿವಪಂಚಾಕ್ಷರ ಮಂತ್ರಗಳನ್ನೂ ಪಠಿಸುತ್ತಾ ಶಿವನನ್ನರ್ಚಿಸುತ್ತಾ ಶಿವನೈವೇದ್ಯವನ್ನು ಸೇವಿಸುತ್ತಾ ಕ್ಷಾಮದ ಕಷ್ಟಗಳೆಲ್ಲವನ್ನೂ ಮರೆತರು. ||೨||

ದುರಾಚಾರಗಳಿಲ್ಲದೇ ಆ ವಿಪ್ರರು ಕರ್ಮನಿಷ್ಠರಾಗಿ ಅಕ್ಷಪಾದ-ಮೊದಲಾದವರ ಶಾಸ್ತ್ರಗಳನ್ನಭ್ಯಸಿಸುತ್ತಾ ಶಿವನ ಅನುಗ್ರಹದಿಂದ ಪೈರುತುಂಬಿದ ಗೌತಮನ

ಅಕ್ಷಪಾದಾಕ್ಷವೀಕ್ಷಾತಃ ಕಟಾಕ್ಷೇಣ ಮಹೇಶಿತುಃ ।
ಸದಾರಾಶ್ಚ ಸಪುತ್ರಾಶ್ಚ ಶಾಲಿಕೇದಾರರಕ್ಷಕಾಃ ॥೪॥

ಗೌತಮಸ್ಯಾನ್ನಪಾಕಾರ್ಥಂ ಶೂಲಿನಃ ಕೃಪಯಾ ಮುದಾ ।
ಗೋದಾವರ್ಯಾಸ್ತಟಕುಟೀನಿಕಟೇ ವಿಟವರ್ಜಿತಾಃ ॥೫॥

ಕರಟಿತ್ವಕ್ಪರೀಧಾನಪಾದಪಂಕಜಪೂಜಕಾಃ ।
ಧೂರ್ಜಟಿಪ್ರೇಮಸದನೇ ಗೌತಮಾನ್ನಭುಜಸ್ಸದಾ ॥೬॥

ಕ್ಷಾಮಕ್ಲೇಶಂ ವಿಹಾಯೈವ ತ್ರ್ಯಕ್ಷಭಕ್ಷಭುಜೋಽಮಲಾಃ ।
ದ್ವಾದಶಾಬ್ದಾವಧಿ ತದಾ ಸಾಗ್ನಯೋಽಥ ಕುಟುಂಬಿನಃ ॥೭॥

ಗೌತಮೇನಾಪಿ ವಿನಯೈಃ ಪರಿಪ್ರಶ್ನಾನ್ನಭೋಜನೈಃ ।
ಪೂಜಿತಾ ನ್ಯವಸನ್ವಿಪ್ರಾಸ್ತತ್ರ ಕಷ್ಟಂ ವಿಧೂಯ ಚ ॥೮॥

ಕದಾಚಿತ್ತತ್ರ ದೇವಸ್ಯ ಪ್ರಸಾದೇನ ಮಹೇಶಿತುಃ ।
ವವರ್ಷ ವರ್ಷ್ಮಕೃಪಯಾ ಪುರಶಾಸನಶಾಸನಾತ್ ॥೯॥

ಹೊಲಗದ್ದೆಗಳನ್ನು ರಕ್ಷಿಸುತ್ತಾ ಹೆಂಡತಿ ಮಕ್ಕಳುಮರಿಗಳಿಂದ ಕೂಡಿದವರಾಗಿ ಆಹಾರಾಭಾವವಿಲ್ಲದೇ ಸುಖವಾಗಿದ್ದರು. ||೩-೪||

ಹೀಗೆ ಗೋದಾವರೀನದಿಯ ತೀರದಲ್ಲಿ ಗೌತಮನ ಆಶ್ರಮದಲ್ಲಿ ವಾಸಿಸುತ್ತಾ ಅವನು ಬಡಿಸುವ ಶಿವನೈವೇದ್ಯವನ್ನು ಭುಜಿಸುತ್ತಾ, ಶಿವನನ್ನಾರಾಧಿಸುತ್ತಾ ದುರಾಚಾರಗಳಿಲ್ಲದೇ, ಕ್ಷಾಮಕಷ್ಟಗಳಿಲ್ಲದೇ ಸುಖವಾಗಿ ಹನ್ನೆರಡು ವರ್ಷಗಳು ಪೂರ್ತಿಯಾಗಿ ಇದ್ದರು. ಗೌತಮನೂ ಅವರಿಗೆ ಆದರದಿಂದ ಸತ್ಕಾರಮಾಡುತ್ತಿದ್ದನು. ||೫-೬-೭-೮||

ಹನ್ನೆರಡು ವರ್ಷಗಳ ನಂತರ ಮಹಾದೇವನ ಅನುಗ್ರಹದಿಂದ ಭೂಮಿಯಲ್ಲೆಲ್ಲಾ ಚನ್ನಾಗಿ ಮಳೆಬೆಳೆಯಾಯಿತು. ಕೆರೆಕಟ್ಟೆಗಳು ತುಂಬಿದುವು, ಗಿಡಮರಬಳ್ಳಿಗಳು ಚಿಗುರಿ ಹೂಬಿಟ್ಟುವು, ಪೈರುಪಚ್ಚೆಗಳು ಸಮೃದ್ಧಿಯಾದುವು. ಹುಲ್ಲುಗಳೂ ಬೆಳೆದುವು. ||೯||

ಭುವಂ ತೃಣೌಷಧಿಯುತಾಮುಕರೋತ್ಪಾಕಶಾಸನಃ ।
ತೃಣೌಷಧಿಯುತಾಮುರ್ವೀಂ ದೃಷ್ಟ್ವಾ ತೇ ಸ್ವಾಸ್ಥ್ಯಮಾಯಯುಃ ॥೧೦॥
ಪ್ರಯಾತುಂ ಗೌತಮಮುನಿಮಪೃಚ್ಛನ್ವಿನಯೋಜ್ವಲಾಃ ॥೧೧॥

ಭವತಾ ಭವಪಾದಾರ್ಚಾಪ್ರಭಾವೇನಾನುಮೋದಿತಾಃ ।
ಸ್ವಾದ್ವನ್ನೈರ್ಭಕ್ಷ್ಯಭೋಜ್ಯೈಶ್ಚ ಶಂಭೋರ್ನೈವೇದ್ಯವತ್ತರೈಃ ॥೧೨॥

ಧಿಕ್ಕೃತಾಮರರಸೈಃ ಪಾವನೈಃ ಪಾವಿತಾ ವಯಂ ।
ಸ್ವಾನ್ ದೇಶಾನ್ ಗಂತುಮಿಚ್ಛಾಮಸ್ತ್ವಮನುಜ್ಞಾತುಮರ್ಹಸಿ ॥೧೩॥

॥ ಸೂತ ಉವಾಚ ॥

ತದಾ ಮುನೀನಾಂ ವಚನಂ ಶ್ರುತ್ವಾ ವೈ ಗೌತಮೋ ಮುನಿಃ ।
ತಾನ್ ಪ್ರಣಮ್ಯ ತದಾ ಪ್ರಾಹ ವಿಶ್ಲೇಷಭಯಕಾತರಃ ॥೧೪॥

॥ ಗೌತಮ ಉವಾಚ ॥

ಯಾತ ಯೂಯಂ ಸ್ವದೇಶಾಂಶ್ಚ ಸ್ವಾಶ್ರಮಾಣಿ ಮುನೀಶ್ವರಾಃ ।
ಕಿಂಚಿತ್ಕಾಲಂ ವಿಹೃತ್ಯಾತ್ರ ಸುಖೇನ ಮುನಿಸತ್ತಮಾಃ ॥೧೫॥

ಭೂಮಿಯು ಪೈರುಪಚ್ಚೆಗಳಿಂದ ತುಂಬಿದುದನ್ನು ನೋಡಿ ಗೌತಮಾಶ್ರಮದಲ್ಲಿದ್ದ ಮುನಿಗಳು ತಮ್ಮಾಶ್ರಮಗಳಿಗೆ ಹಿಂತಿರುಗಲು ಗೌತಮನ ಅನುಮತಿಯನ್ನು ಬೇಡಿದರು. ॥೧೦-೧೧॥

"ಮುನಿಯೇ, ಶಿವನ ಅನುಗ್ರಹಕ್ಕೆ ಪಾತ್ರನಾದ ನೀನು ಕ್ಷಾಮಪೀಡಿತರಾದ ನಮಗೆ ಮೃಷ್ಟಾನ್ನಭಕ್ಷ್ಯಭೋಜ್ಯಗಳನ್ನಿಕ್ಕಿ ನಮ್ಮನ್ನು ಕಾಪಾಡಿರುವೆ. ನಾವು ತೃಪ್ತರಾದೆವು. ಬದುಕಿದೆವು. ॥೧೨॥

ಅಮೃತರಸವನ್ನು ಧಿಕ್ಕರಿಸುವ ಶಿವನೈವೇದ್ಯದಿಂದ ನಾವು ಪವಿತ್ರರಾದೆವು. ಇನ್ನು ನಾವು ನಮ್ಮಾಶ್ರಮಗಳಿಗೆ ತೆರಳುವೆವು, ಅನುಮತಿಯನ್ನು ಕೊಡು." ॥೧೩॥

ಮುನಿಗಳ ಆ ಮಾತನ್ನು ಕೇಳಿ ಗೌತಮಮುನಿಯು ಅವರನ್ನು ಬಿಟ್ಟು ಕಳುಹಿಸಲಾರದೆ ಹೀಗೆ ಹೇಳಿದನು. ॥೧೪॥

"ಓ ಮುನಿಗಳೇ ಇಷ್ಟು ಅವಸರಪಡಬೇಡಿ, ಇನ್ನೂ ಸ್ವಲ್ಪಕಾಲ ನನ್ನಾಶ್ರಮದಲ್ಲಿ ಸುಖವಾಗಿದ್ದು ಆಮೇಲೆ ನಿಮ್ಮಾಶ್ರಮಗಳಿಗೆ ತೆರಳಿರಿ. ॥೧೫॥

ಶಾಂಗಾನಾಂ ಭವತಾಂ ಸಂಗೋ ಭವಭಂಗಾಯ ಮೋಽಭನಾ ।
ಶಾಂಗಾಂಗಸಂಗವಾತೋಽಪಿ ಸುಖಸಂಗಾಯ ಕೇವಲಂ ॥೧೬॥

ಕಿಂಚಿತ್ಕೋಪಸಮಾಯುಕ್ತಾ ಗಮನೇ ವಿಘ್ನಕಾರಿಣಂ ।
ಗೌತಮಂ ತೇಽಬ್ರುವನ್ ವಿಪ್ರಾ ಗಂತುಮೇವ ದ್ವಿಜಂ ತದಾ ॥೧೭॥

ಭವತಾನ್ನಪ್ರದಾನೇನ ರಕ್ಷಿತಾಃ ಸ್ನೇಹಭಾವತಃ ।
ಬಹುಕಾಲಂ ನಿವಸತಾಮಸ್ಮಾಕಂ ಗೃಹದರ್ಶನೇ ॥೧೮॥

॥ ದ್ವಿಜಾ ಊಚುಃ ॥

ಪಶೂನಾಂ ಬಾಂಧವಾನಾಂ ಚ ಗೃಹಕ್ಷೇತ್ರಾದಿಬುದ್ಧಯಃ ।
ಗಂತುಮಿಚ್ಛಾಮ ಭದ್ರಂ ತೇ ಶಿವಪಾದಾರ್ಚನೇ ರತಾಃ ॥೧೯॥

॥ ಗೌತಮ ಉವಾಚ ॥

ಮಾಸಮೇಕಂ ವಸಂತ್ವದ್ಯ ಮಯಿ ಸ್ನೇಹೇನ ಸತ್ತಮಾಃ ।
ಧನುಸ್ಸಂಸ್ಥೋ ದಿನನಾಥೋ ಅತ್ರ ಪೂಜಾ ಮಹೇಶಿತುಃ ॥೨೦॥

ಶಿವಭಕ್ತರಾದ ನಿಮ್ಮ ಸಹವಾಸವು ನಮ್ಮ ಸಂಸಾರತಾಪತ್ರಯಗಳನ್ನು ಹೋಗಲಾಡಿಸುವುದು. ಶಿವಭಕ್ತರ ಶರೀರದ ಗಾಳಿಯೂ ಪರಿಶುದ್ಧತೆಯನ್ನುಂಟು ಮಾಡುವುದು.” ॥೧೬॥

ಹೀಗೆನ್ನುತ್ತಾ ತಮ್ಮ ಪ್ರಯಾಣಕ್ಕೆ ಅಡ್ಡಿಯನ್ನು ಮಾಡುವ ಗೌತಮನ ಈ ಮಾತಿನಿಂದ ಆ ಮುನಿಗಳಿಗೆ ಸ್ವಲ್ಪ ಕೋಪವುಂಟಾಯಿತು. ಆಗ ಅವರು ಪುನಃ ಗೌತಮಮುನಿಯನ್ನು ಕುರಿತು, ॥೧೭॥

ಗೌತಮಮುನಿಯೇ, ನೀನು ಸ್ನೇಹದಿಂದ ಅನ್ನವಿಕ್ಕಿ ನಮ್ಮನ್ನು ಇದುವರೆಗೆ ಸಲಹಿರುವೆ. ಸಾಕು, ನಮ್ಮ ಆಶ್ರಮಗಳನ್ನು ಬಿಟ್ಟುಬಂದು ಬಹುಕಾಲವು ಕಳೆಯಿತು. ನಮ್ಮ ಪಶುಗಳು, ಬಂಧುಗಳು, ಮನೆಗಳು, ಗದ್ದೆಹೊಲಗಳೇನಾದುವೋ ? ಅವನ್ನು ನೋಡಬೇಕು, ನಾವು ಹೊರಡುತ್ತೇವೆ. ಅನುಮತಿಯನ್ನು ಕೊಡು, ನಿನಗೆ ಒಳ್ಳೆಯದಾಗಲಿ ಎನ್ನಲು, ॥೧೯॥

ಓ ಮುನಿಗಳೇ ಇದೊಂದುಮಾಸವಾದರೂ ಇಲ್ಲಿಯೇ ವಾಸಮಾಡಿ, ಇದು ಧನುರ್ಮಾಸ, ಈ ಮಾಸದಲ್ಲಿ ಶಿವನನ್ನು ವಿಶೇಷವಾಗಿ ಅರ್ಚಿಸಬೇಕು. ॥೨೦॥

ಅಸ್ಮಿನ್ ಸಂಪೂಜಿತೋ ಮಾಸಿ ಉಷಃಕಾಲೇ ಮಹೇಶ್ವರಃ ।
ಸೇವಂತಿಕಾಭಿರ್ಬಿಲ್ವೈಶ್ಚ ಮುದ್ಗಾನ್ನಂ ವಿನಿವೇದ್ಯ ಚ ॥೨೦॥

ನೈವೇದ್ಯೈಶ್ಶಾಂಭವಾನ್ ಭೋಜ್ಯ ಯಥಾಸಂಭವಮುದ್ಯ ಮೇ ।
ವಿಭಜ್ಯ ಘೃತಮುದ್ಗಾನ್ನಂ ಭುಂಜಂತು ಸಗುಡಂ ದ್ವಿಜಾಃ ॥೨೨॥

ಏಕಸ್ಮಿನ್ ಭೋಜಿತೇ ಮಾಸಿ ಚಾಸ್ಮಿನ್ ಶಾಂಭವಪುಂಗವೇ ।
ಕೋಟಿಶೋ ಭೋಜಿತಾ ವಿಪ್ರಾಸ್ತಸ್ಮಾನ್ಮಯಿ ವಸಂತು ಚ ॥೨೩॥

ಇತ್ಯುಕ್ತವಂತಂ ತಂ ತತ್ರ ಗೌತಮಂ ವಿನಯೇನ ಹಿ ।
ಪಾಶ್ಚಾತ್ಯಬುದ್ಧಯೋ ವಿಪ್ರಾಸ್ತಪಸಾ ಗಾಂ ಕೃಶಾಂ ತದಾ ॥೨೪॥

ಗೌತಮಸ್ಯ ತದಾ ಶಾಲಿಕ್ಷೇತ್ರೇ ಸೃಷ್ಟ್ವಾಽಥ ಚಾರಯನ್ ।
ಗೌತಮೋ ಗಾಂ ತದಾ ದೃಷ್ಟ್ವಾ ಶಾಲಿಭಕ್ಷಣತತ್ಪರಾಂ ॥೨೫॥

ಉಪರೋಧಂ ಪ್ರಕುರ್ವಂತೀಂ ದ್ವಿಜಾನಾಂ ಮುನಿಸತ್ತಮಃ ।
ತೃಣಾಗ್ರೈರ್ವಾರಯಾಮಾಸ ಗಚ್ಛ ಗಚ್ಛೇತಿ ಗಾಂ ತದಾ ॥೨೬॥

ಧನುರ್ಮಾಸದಲ್ಲಿ ಉಷಃಕಾಲದಲ್ಲಿ ಶಿವನನ್ನರ್ಚಿಸಿ, ಬೆಲ್ಲಮಿಶ್ರವಾದ ಹೆಸರನ್ನ (ಹುಗ್ಗಿ) ವನ್ನು ನೈವೇದ್ಯಮಾಡಬೇಕು. ಸೇವಂತಿಗೆ ಬಿಲ್ವಗಳಿಂದ ಪೂಜಿಸಬೇಕು, ಶಿವನೈವೇದ್ಯವನ್ನು ಶಿವಭಕ್ತರಿಗೆ ಬಡಿಸಬೇಕು, ತುಪ್ಪದೊಡನೆ ಶಿವನೈವೇದ್ಯವಾದ ಆ ಹೆಸರನ್ನವನ್ನು ಭುಜಿಸಿ ನೀವು ತೃಪ್ತಿಪಡೆಯಿರಿ. ॥೨೦-೨೨॥

ಧನುರ್ಮಾಸದಲ್ಲಿ ಓರ್ವ ಶಾಂಭವನಿಗೆ ಭೋಜನಮಾಡಿಸಿದರೆ ಕೋಟಿ ಬ್ರಾಹ್ಮಣರಿಗೆ ಅನ್ನದಾನಮಾಡಿದ ಪುಣ್ಯವು ಲಭಿಸುವುದು. ॥೨೩॥

ಹೀಗೆ ವಿನಯವಾಗಿ ಗೌತಮನು ಹೇಳಿದ ಈ ಮಾತನ್ನು ಕೇಳಿ, ಕೆಟ್ಟದ್ದನ್ನು ಮಾಡಿ ಆಮೇಲೆ ಪಶ್ಚಾತ್ತಾಪಪಡುವ ಮೂಢಬುದ್ಧಿಗಳಾದ ಆ ಬ್ರಾಹ್ಮಣರು ತಮ್ಮ ತಪಶ್ಶಕ್ತಿಯಿಂದ ಈಗಲೋ ಆಗಲೋ ಸಾಯುವಂತಹ ಹಸುವೊಂದನ್ನು ನಿರ್ಮಿಸಿ ಗೌತಮಮುನಿಯ ಬತ್ತದ ಗದ್ದೆಯಲ್ಲಿ ಮೇಯಿಸಲು ಬಿಟ್ಟರು. ॥೨೪॥

ಬತ್ತದ ಪೈರನ್ನು ತಿನ್ನುವ ಆ ಹಸುವನ್ನು ನೋಡಿ ಗೌತಮನು ಅದನ್ನು ತಪ್ಪಿಸಲೋಸುಗ ಹುಲ್ಲಿನ ಸೂಡುಗಳಿಂದ ಆ ಹಸುವನ್ನು "ಹೋಗು ಹೋಗು" ಎಂದು ಮೆಲ್ಲಗೆ ಹೊಡೆದನು. ॥೨೫-೨೬॥

ಸಾ ತೃಣಸ್ಪರ್ಶಮಾತ್ರೇಣ ಗೌತಮಸ್ಯ ಕರಾಗ್ರತಃ।
ಪತಿತ್ವಾ ಶಾಲಿಕೇದಾರೇ ಸಾ ಗೌಃ ಪ್ರಾಣಾನ್ಮುಮೋಚ ಹ ॥೨೭॥

ಗೌತಮೇನ ಹತಾಂ ದೃಷ್ಟ್ವಾ ಗಾಂ ತದಾ ಮುನಿಪುಂಗವಾಃ ॥೨೮॥

ಗೌರ್ಹತಾ ಗೌತಮೇನೇತಿ ಗರ್ಹಯಂತೋ ದ್ವಿಜಾಸ್ತದಾ।
ಅಘ್ನ್ಯೇತ್ಯೇವ ಗವಾಂ ನಾಮ ವೇದೇಷು ಪ್ರಥಿತಂ ಸದಾ ॥೨೯॥

ನಾಸ್ಯಾನ್ನಂ ಭಕ್ಷಿತುಂ ಯೋಗ್ಯಮಿತಿ ವಿಪ್ರಾ ಯಯುಸ್ತದಾ।
ಸ್ವದೇಶಾನಾಶ್ರಮಾಣ್ಯೇವ ನಿಂದಂತೋ ಮುನಿಸತ್ತಮಂ ॥೩೦॥

ಗೌತಮೋಽಪಿ ತದಾ ದೃಷ್ಟ್ವಾ ದೃಷ್ಟ್ವಾ ದೌಷ್ಟ್ಯಂ ದ್ವಿಜೈಃ ಕೃತಂ।
ಕ್ರೋಧಾಚ್ಛಶಾಪ ತಾನ್ವಿಪ್ರಾನ್ ತಚ್ಛೃಣುಷ್ವ ಮುನೀಶ್ವರ ॥೩೧॥

॥ ಗೌತಮ ಉವಾಚ ॥

ದುರ್ಬುದ್ಧಯಸ್ಸದಾ ಯೂಯಂ ವಿಪ್ರಾಸೂಯಾಪರಾಯಣಾಃ।
ಅನ್ಯೋನ್ಯನಿಂದಕಾ ಯೂಯಂ ಭವಂತು ಬ್ರಾಹ್ಮಣಾಧಮಾಃ ॥೩೨॥

ಆ ಏಟಿನಿಂದಲೇ ಆ ಹಸುವು ಗದ್ದೆಯಲ್ಲುರುಳಿ ಪ್ರಾಣಗಳನ್ನೇ ಬಿಟ್ಟಿತು. ಹೀಗೆ ಗೌತಮನು ಹಸುವನ್ನು ಕೊಂದುದನ್ನು ನೋಡಿ ಮುನಿಗಳು ಹೀಗೆ ಹೇಳಿದರು. ||೨೭-೨೮||

"ಓಹೋ, ಈ ಗೌತಮನು ಪೂಜ್ಯವಾದ ಹಸುವನ್ನು ಕೊಂದನು. ವೇದಗಳಲ್ಲಿ ಹಸುವು ಪೂಜ್ಯವೆಂದು ಹೇಳಿರುವುದು. ಅದನ್ನು ತಿಳಿದೂ ಈ ಮುನಿಯು ಈ ಅಕಾರ್ಯವನ್ನು ಮಾಡಿರುವನು, ಇಂತಹ ಪಾಪಿಯ ಅನ್ನವನ್ನು ತಿನ್ನಬಾರದು" ಎಂದು ನಿಂದಿಸುತ್ತಾ ಮುನಿಗಳು ತಮ್ಮ ದೇಶಗಳಿಗೂ ಆಶ್ರಮಗಳಿಗೂ ತೆರಳಲುದ್ಯುಕ್ತರಾದರು. ||೨೯-೩೦||

ಆಗ ಗೌತಮನು ತಾನು ಇದೆಂತಹ ಕಾರ್ಯವನ್ನು ಮಾಡಿದೆನೆಂದು ಯೋಚಿಸಿ, ಜ್ಞಾನದೃಷ್ಟಿಯಿಂದ ಇದೆಲ್ಲವೂ ಆ ಬ್ರಾಹ್ಮಣರು ಮಾಡಿದ ಮೋಸವೆಂದು ತಿಳಿದು ಕೋಪಗೊಂಡು ಅವನು ಆ ಬ್ರಾಹ್ಮಣರನ್ನು ಹೀಗೆ ಶಪಿಸಿದನು. ||೩೧||

"ಎಲೈ ದುಷ್ಟಬ್ರಾಹ್ಮಣರೇ, ನೀವು ಸದಾ ಅಸೂಯೆಯಿಂದ ಕೂಡಿದವರಾಗಿ ಒಬ್ಬರನ್ನೊಬ್ಬರು ನಿಂದಿಸುವಂತಹ ನೀಚಸ್ವಭಾವದವರಾಗಿರಿ. ||೩೨||

ಪರಾನ್ನೇಷು ಸದಾ ತೃಪ್ತಾ ಅತೃಪ್ತಾಃ ಸ್ವಗೃಹೇ ಸದಾ ।
ಶೂದ್ರಪ್ರತಿಗ್ರಹರತಾಃ ವರ್ಣಾಶ್ರಮವಿವರ್ಜಿತಾಃ ॥೩೩॥

ನಷ್ಟವೇದಾ ದುರಾಚಾರಾ ಭವಂತು ಬ್ರಾಹ್ಮಣಾಧಮಾಃ ।
ವಿಷ್ಣುಭಕ್ತಿಚ್ಛಲೇನೈವ ಶಿವಸಂದೂಷಣೇ ರತಾಃ ॥೩೪॥

ತೇನೈವ ವಿಷ್ಣುರ್ವಿಮುಖೋ ಭವತ್ಸು ಭವತಾಂ ದ್ವಿಜಾಃ ।
ತಪ್ತಚಕ್ರಾಂಕಿತಾ ಯೂಯಂ ಭವತ ಬ್ರಾಹ್ಮಣಾಧಮಾಃ ॥೩೫॥

ಗೋಪೀಚಂದನಸಲಿಪ್ತಾಂಗಾಃ ಶ್ವೇತಮೃದ್ಧಾರಿಣಸ್ಸದಾ ।
ದುಷ್ಟಾಚಾರರತಾ ದುಷ್ಟಾ ಭವತ ಬ್ರಾಹ್ಮಣಾಧಮಾಃ ॥೩೬॥

ತ್ರಿಪುಂಡ್ರನಿಂದಕಾ ಯೂಯಂ ವೇದಪ್ರೋಕ್ತೇ ಸನಾತನೇ ।
ರುದ್ರಾಕ್ಷನಿಂದಕಾಶ್ಚೈವ ತದ್ಧಾರಣವಿವರ್ಜಿತಾಃ ॥೩೭॥

ತಮ್ಮ ಮನೆಯ ಊಟದಲ್ಲಿ ತೃಪ್ತಿಯಿಲ್ಲದವರಾಗಿ ಯಾವಾಗಲೂ ಪರಾನ್ನದಲ್ಲಿ ಆಸೆ ಹೊಂದಿ ಶೂದ್ರರಿಂದ ದಾನತೆಗೆದುಕೊಳ್ಳುವವರಾಗಿ, ವರ್ಣಾಶ್ರಮಧರ್ಮಗಳೆಲ್ಲವನ್ನೂ ಬಿಡುವವರಾಗಿ ಭ್ರಷ್ಟರೆನಿಸಿರಿ. ॥೩೩॥

ವೇದಾಧ್ಯಯನವನ್ನು ಬಿಟ್ಟು ದುರಾಚಾರಿಗಳಾಗುವಿರಿ, ವಿಷ್ಣುಭಕ್ತರೆಂಬ ನೆಪದಿಂದ ಶಿವನನ್ನು ನಿಂದಿಸುವವರಾಗುವಿರಿ. ॥೩೪॥

ಆ ಶಿವನಿಂದೆಯಿಂದಲೇ ವಿಷ್ಣುವು ನಿಮ್ಮಲ್ಲಿ ಅನುಗ್ರಹವಿಲ್ಲದವನಾಗುವನು. ಚಕ್ರಾಕಾರವಾದ ತಪ್ತಮುದ್ರೆಯನ್ನು ಧರಿಸುವ ಬ್ರಾಹ್ಮಣಾಧಮರಾಗಿರಿ. ॥೩೫॥

ಗೋಪೀಚಂದನವನ್ನು ಹಚ್ಚಿಕೊಳ್ಳುತ್ತಾ ಬಿಳಿಯ ಮಣ್ಣನ್ನು ಬಳಿದುಕೊಳ್ಳುತ್ತಾ ದುರಾಚಾರಿಗಳಾಗಿ ಬ್ರಾಹ್ಮಣಾಧಮರಾಗುವಿರಿ. ॥೩೬॥

ವೇದೋಕ್ತವಾದ ಪವಿತ್ರವಾದ ಭಸ್ಮಧಾರಣವನ್ನೂ ರುದ್ರಾಕ್ಷಿಯನ್ನೂ ನಿಂದಿಸುವ, ಮತ್ತು ಅವುಗಳನ್ನು ಧರಿಸದಂತಹ, ಈ ಮೂಲಕ ವೇದಗಳನ್ನು ನಿಂದಿಸುವಂತಹ ನೀಚಬ್ರಾಹ್ಮಣರಾಗಿರಿ. ॥೩೭॥

ವೇದನಿಂದಾಪರಾಶ್ಚೈವ ಭವತ ಬ್ರಾಹ್ಮಣಾಧಮಾಃ ।
ರುದ್ರೇ ಪಂಚಾಕ್ಷರೇ ಚಾಪಿ ತಜ್ಜಪ್ಯೇ ಶಿವಪೂಜನೇ ॥೩೮॥

ಲಿಂಗಸಂದರ್ಶನೇ ಚಾಪಿ ಶಿವಕ್ಷೇತ್ರಾನುವರ್ತನೇ ।
ಭವಂತು ವಿಮುಖಾ ಯೂಯಂ ಸರ್ವದಾ ಬ್ರಾಹ್ಮಣಾಧಮಾಃ ॥೩೯॥

ಶಿವನೈವೇದ್ಯಭುಕ್ತ್ಯಾ ಚ ಯೂಯಂ ವಿಪ್ರಾಃ ಪರಾಙ್ಮುಖಾಃ ।
ಪ್ರದೋಷಸೋಮವಾರೇಷು ಭೂತಕಾಲಾಷ್ಟಮೀಷು ಚ ॥೪೦॥

ಸಾಯಂ ಲಿಂಗಾರ್ಚನಾಹೀನಾ ದಿವಾಭುಕ್ತಿರತಾಃ ಸದಾ ।
ಭವಂತು ವಿಮುಖಾ ಯೂಯಂ ದ್ವಿಜಾಃ ಪಾಷಂಡಿನಸ್ಸದಾ ॥೪೧॥

ಶಿವಕ್ಷೇತ್ರೇ ಚಾವಿಮುಕ್ತೇ ಶಿವಯೋಗಿಜನೇಷು ಚ ।
ಶಿವಭಕ್ತಾರ್ಚನೇನಾಪಿ ಭವಂತು ವಿಮುಖಾಸ್ಸದಾ ॥೪೨॥

ಶಿವಾದ್ವೈತೇ ಚ ವೇದಾಂತೇ ಗುರಾವಪಿ ಮಹೇಶ್ವರೇ ।
ಭವಂತು ವಿಮುಖಾ ಯೂಯಂ ಸಾನ್ವಯಾಃ ಕಲಿಪೀಡಿತಾಃ ॥೪೩॥

ಶ್ರೇಯಸ್ಕರವಾದ ರುದ್ರಸೂಕ್ತ, ಶಿವಪಂಚಾಕ್ಷರಜಪ, ಶಿವಪೂಜೆ, ಶಿವಲಿಂಗ ದರ್ಶನ, ಶಿವಕ್ಷೇತ್ರದರ್ಶನ ಇವುಗಳಲ್ಲಿ ವಿಮುಖರಾಗಿ ಬ್ರಾಹ್ಮಣಾಧಮರಾಗುವಿರಿ. ||೩೮-೩೯||

ಶಿವನೈವೇದ್ಯಭೋಜನದಲ್ಲಿಯೂ ಪ್ರದೋಷಕಾಲ, ಸೋಮವಾರ, ಕೃಷ್ಣ ಚತುರ್ದಶೀ, ಕೃಷ್ಣಾಷ್ಟಮೀ, ಪ್ರದೋಷ, ಈ ಕಾಲದಲ್ಲಿ ಲಿಂಗಾರ್ಚನೆ ಮಾಡದೇ, ಹಗಲು ಶಯನಸ್ತ್ರೀಸಂಭೋಗಗಳನ್ನು ಮಾಡುವವರಾಗಿ ದುರಾಚಾರಪರರಾಗುವಿರಿ. ||೪೦-೪೧||

ಶಿವಯೋಗಿಗಳಲ್ಲೂ ಶಿವಭಕ್ತರಲ್ಲೂ ದ್ವೇಷಬುದ್ಧಿಯುಳ್ಳವರಾಗಿ ಹಾಳಾಗುವಿರಿ. ||೪೨||

ಪರಮೇಶ್ವರನಲ್ಲಿ ಒಂದಾಗಿಸುವಂತಹ ಅದ್ವೈತವೇದಾಂತದಲ್ಲಿಯೂ ಅದನ್ನುಪದೇಶಿಸುವ ಗುರುಗಳಲ್ಲೂ, ಪರಮೇಶ್ವರನಲ್ಲೂ ಆಸಕ್ತಿಯಿಲ್ಲದವರಾಗಿ ಭೇದಬುದ್ಧಿಗೊಳಗಾಗಿ ಕಲಿಮಹಿಮೆಯಿಂದ ಹಾಳಾಗುವಿರಿ. ||೪೩||

ಶಿವಪ್ರದಕ್ಷಿಣವಿಧೌ ಪ್ರಣಾಮಸ್ತೋತ್ರಕರ್ಮಣಿ ।
ಭವಂತು ವಿಮುಖಾ ಯೂಯಂ ದ್ವಿಜಾಃ ಪಾಷಂಡಿನಸ್ತಥಾ ॥೪೪॥

ಶಿವನಾಮ್ನಿ ಶಿವಧ್ಯಾನೇ ಶಿವತೀರ್ಥನಿಷೇವಣೇ ।
ಭವಂತು ವಿಮುಖಾ ಯೂಯಂ ದ್ವಿಜಾಃ ಪಾಷಂಡಿನಸ್ಸದಾ ॥೪೫॥

ಶಿವಲಿಂಗಾಗ್ರವಿಹಿತೇ ನರ್ತನೇ ಚ ಪರಾಙ್ಮುಖಾಃ ।
ಭವಂತು ವಿಮುಖಾ ಯೂಯಂ ದ್ವಿಜಾಃ ಪಾಷಂಡಿನಸ್ಸದಾ ॥೪೬॥

ಶಿವಲಿಂಗಸಮಂ ವಿಷ್ಣುಂ ಪೂಜಯಂತ್ವತಿಪಾಪಿನಃ ।
ಭವಂತು ವಿಮುಖಾ ಯೂಯಂ ದ್ವಿಜಾಃ ಪಾಷಂಡಿನಸ್ಸದಾ ॥೪೭॥

ಭವಭಾವಹೃತಾಸ್ಸರ್ವೇ ನರಕಂ ಯಾಂತು ಸಾನ್ವಯಂ ।
ಭವತ್ಸಂಗೈಃ ಕುಸಂಗಾಪಿ ನರಕಂ ಯಾಂತು ಸಾನ್ವಯಾಃ ॥೪೮॥

ಯೂಯಂ ಶಿರೋವ್ರತವಿಧೌ ಶಿವಭಸ್ಮಪುಂಡ್ರ
ವೇದಾಂತವೇದಗುರುಭಕ್ತಿವಿಹೀನವಂಶ್ಯಾಃ ।

ಶಿವಪ್ರದಕ್ಷಿಣೆ, ನಮಸ್ಕಾರ, ಸ್ತೋತ್ರಗಳಲ್ಲಿ ದ್ವೇಷವುಳ್ಳವರಾಗಿ "ಪರಮಾತ್ಮನು ಓರ್ವನೇ" ಎಂಬುದನ್ನಲ್ಲಗಳೆಯುವ ನಾಸ್ತಿಕರಾಗುವಿರಿ. ॥೪೪॥

ಶಿವನ ಧ್ಯಾನ, ಶಿವಕ್ಷೇತ್ರವಾಸ, ಶಿವನಾಮಸಂಕೀರ್ತನದಲ್ಲಿ ದ್ವೇಷವುಳ್ಳವರಾಗಿ ದುರಾಚಾರಪರರಾಗುವಿರಿ. ॥೪೫॥

ಶಿವಲಿಂಗದ ಎದುರಿನಲ್ಲಿ ನರ್ತನವಮಾಡದ ಪಾಪಿಗಳಾಗುವಿರಿ. ॥೪೬॥

ಶಿವನೇ ಸರ್ವೋತ್ತಮನೆಂಬುದನ್ನು ಒಪ್ಪದೇ ವಿಷ್ಣುವೇ ಸರ್ವೋತ್ತಮನೆಂದು ಪೂಜಿಸುವ ಶಿವದ್ವೇಷಿಗಳಾದ ಬ್ರಾಹ್ಮಣಾಧಮರಾಗುವಿರಿ. ॥೪೭॥

ಮೇಲೆ ಹೇಳಿದಂತೆ ದುರಾಚಾರಿಗಳಾಗಿ ಸಂಸಾರ ತಾಪತ್ರಯಗಳಿಗೆ ಸಿಲುಕಿ ಕಾಮಸುಖಗಳಿಗೆ ಬಲಿಯಾಗಿ ಕುಲಸಹಿತವಾಗಿ ನರಕಕ್ಕೆ ಹೋಗುವಿರಿ. ನಿಮ್ಮ ಸಹವಾಸವನ್ನು ಮಾಡಿದವರೂ ನರಕಭಾಗಿಗಳಾಗುವರು. ॥೪೮॥

ಶಿವಪೂಜೆ, ಭಸ್ಮರುದ್ರಾಕ್ಷಿಗಳು, ಅದ್ವೈತವೇದಾಂತ, ಗುರುಭಕ್ತಿ-ಇವುಗಳಲ್ಲಿ ದ್ವೇಷವುಳ್ಳವರಾಗಿ ನೀವು ಕಾಗೆಗಳಂತೆ ಚಪಲತೆಯಿಂದ ಸಿಕ್ಕಿದೆಡೆಯಲ್ಲಿ ಅಲೆಯು

ಕಾಕಾ ಇವಾತಿಚಪಲಾಃ ಪರಿತೋ ಭ್ರಮಂತು
ದಾರಿದ್ರ್ಯದುಃಖನಿಕರೈಸ್ಸಸುತಾಸ್ಸದಾರಾಃ ॥೪೯॥

ಉಕ್ಷಾಧೀಶ್ವರಕೇತನಂ ಪಶುಪತಿಂ ಲೀಕ್ಷಾಸಮಂ ನ್ವೈ ಹರಿಂ
ಮನ್ವಾನಾಃ ಶಿವಮಂಬಿಕಾಸಹಚರಂ ಪುಂಡ್ರಾಂತರೈಸ್ಸಂಯುತಾಃ ।
ಧ್ವಸ್ತಾಯಾತ ದಿವಾನಿಶಂ ಜಡಧಿಯಃ ಪಾಪೇನ ದುಃಖಾಧಿಕಾಃ
ಅಂತೇ ಯಾಂತು ಯಮಾಲಯಂ ಸುನಿಶಿತೈಶ್ಶಸ್ತ್ರೈರ್ಹತಾಃ ಪಾಪಿನಃ
॥೫೦॥

ದಾರಿದ್ರ್ಯೇಣ ನಿಪೀಡಿತಾಃ ಪ್ರತಿಭವಂ ರೋಗಾದಿದಗ್ಧಾಂಕಾಃ ।
ತೇವ್ವೈನಾಶು ವಿನಾಶ್ಯ ವಂಶಸಹಿತಾ ಘೋರಂ ಹಿ ದುಃಖಾರ್ಣವಂ ॥೫೧॥

ಯೇ ಭಸ್ಮರುದ್ರಾಕ್ಷವಿಹೀನಗಾತ್ರಾಃ
ತೇ ಭೂಸುರಾ ಅಪಿ ಸುರಾಸಭಸಂಭವಾಶ್ಚ ।
ಶೂದ್ರಾ ಅಪಿ ಪ್ರಮಥನಾಥಪದಾರ್ಚಕಾ ಯೇ
ತೇ ಭೂಸುರಾ ಭಸಿತಗಾತ್ರವರಾಕ್ಷಪೂತಾಃ ॥೫೨॥

ತ್ತಿದ್ದು ಕಡುಬಡವರಾಗುವಿರಿ, ನಿಮ್ಮ ಮಕ್ಕಳು ಮರಿಗಳೂ ಹೆಂಡಿರೂ ನಿಮ್ಮಂತೆಯೇ ದುರಾಚಾರಿಗಳಾಗುವರು. ॥೪೯॥

ವೃಷಭಧ್ವಜನಾದ ಪರಮೇಶ್ವರನಾದ ಶಿವನನ್ನು ದ್ವೇಷಿಸುತ್ತಾ ಹರಿಯೇ ಸರ್ವೋತ್ತಮನೆಂದು ತಪ್ಪಾಗಿ ತಿಳಿದು, ಮೇಲು ನಾಮಗಳನ್ನು ಧರಿಸುತ್ತಾ ದುರಾಚಾರಿಗಳಾಗಿ ಸದಾ ದುಃಖಭಾಗಿಗಳಾಗಿ ಕೊನೆಯಲ್ಲಿ ನರಕಕ್ಕೆ ಹೋಗುವಿರಿ. ಅಲ್ಲಿ ಯಮನ ನಾನಾ ಯಾತನೆಗಳಿಗೆ ಸಿಲುಕುವಿರಿ. ॥೫೦॥

ಪುನಃ ನೀಚಜನ್ಮವನ್ನೆತ್ತಿ, ಕಡುಬಡವರಾಗಿ ರೋಗಪೀಡಿತರಾಗಿ ವಂಶಸಹಿತವಾಗಿ ನಾಶವಾಗುವಿರಿ. ಘೋರದುಃಖಕ್ಕೆ ಪಾತ್ರರಾಗುವಿರಿ. ॥೫೧॥

ಬ್ರಾಹ್ಮಣರಾಗಿದ್ದರೂ ಭಸ್ಮರುದ್ರಾಕ್ಷಿಧಾರಿಗಳಾಗಿ ಶಿವನನ್ನರ್ಚಿಸದವರು, ಕತ್ತೆಗೆ ಸಮಾನರು. ಶೂದ್ರರಾದರೂ ಭಕ್ತಿಯಿಂದ ಶಿವನನ್ನರ್ಚಿಸಿದರೆ ಮುಂದಿನ ಜನ್ಮದಲ್ಲಿ ಶುದ್ಧ ಬ್ರಾಹ್ಮಣರಾಗಿ ಜನಿಸಿ ಮುಕ್ತಿಯನ್ನು ಪಡೆಯುವರು. ॥೫೨॥

॥ ಸ್ಕಂದ ಉವಾಚ ॥

ಇತ್ಥಂ ಗೌತಮವಾಕ್ಯತೋ ಮುನಿವರಾಃ ಶಾಪಾನ್ವಿತಾ ಲಾಂಛನೈಃ
ಯುಕ್ತಾಶ್ಶೋಂಛಪರಾಯಣಾಃ ಪತಿಭವಂ ದಾರಾಸುತಾನ್ನಾರ್ಥಿನಃ ।
ಭ್ರಾಂತಾಶ್ಶಾಂತಿವಿವರ್ಜಿತಾಶ್ಚ ನರಕಂ ಯಾಂತ್ಯದ್ಯ ತಸ್ತಾಂಗಕಾಃ
ರೋಗಾಕ್ರಾಂತಪಶುಪ್ರಭಾವವಿಹಿತಾ ಘೋರಾ ಹರದ್ವೇಷಿಣಃ ॥೫೩॥

ಇತಿ ಶಿವರಹಸ್ಯೇ ಗೌತಮದತ್ತಶಾಪವರ್ಣನಂ ನಾಮ
ಏಕೋನವಿಂಶೋಽಧ್ಯಾಯಃ

ಹೀಗೆ ಗೌತಮ ಶಾಪಕ್ಕೊಳಗಾಗಿ ಆ ಬ್ರಾಹ್ಮಣರು ಮುಂದೆ ಮುದ್ರಾನಾಮಧಾರಿಗಳಾಗಿ ಕಡುಬಡವರಾಗಿ, ಅಜ್ಞಾನಿಗಳಾಗಿ ಭೇದವಾದಿಗಳಾಗಿ ನರಕಕ್ಕೆ ಹೋಗುವರು. ಶಿವದ್ವೇಷಿಗಳಿಗೆ ಎಂದೆಂದಿಗೂ ಮುಕ್ತಿಯಿಲ್ಲ. ಪುನಃಪುನಃ ಜನ್ಮವೆತ್ತಿ ದುಃಖಪಡಬೇಕು. ರೋಗಾದಿಗಳಿಂದಲೂ, ಉಂಛವೃತ್ತಿಯಿಂದಲೂ ಅವರು ಬಹಳವಾಗಿ ನರಳುವರು. ಎಂದು ಸ್ಕಂದಸ್ವಾಮಿಯು ನುಡಿದನು. ॥೫೩॥

ಇಲ್ಲಿಗೆ ಶ್ರೀ ಶಿವರಹಸ್ಯದಲ್ಲಿ ಚತುರ್ಥಾಂಶದಲ್ಲಿ ಹತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ವಿಂಶೋಽಧ್ಯಾಯಃ

|| ಜೈಗೀಷವ್ಯ ಉವಾಚ ||

ಸ್ಕಂದಾನಂದಿತಮಂದಾರಮಂದಾರಪ್ರಿಯಹರ್ಷದಃ ।
ಘಟೋದ್ಭವೋ ಮಹಾಯೋಗೀ ಶಿವಭಕ್ತವರೋ ದ್ವಿಜಃ ॥೧॥

ತರಂಗಮಾಲಾಕಲಿತಮಪಿಬತ್ಸಾಗರಂ ಕಥಂ ।
ಕಥಂ ಗರ್ಭೇ ವಸನ್ಯೋಗೀ ಶಿವಜ್ಞಾನಮವಾಪ್ತವಾನ್ ॥೨॥

ವ್ಯಾಸಸ್ಯ ಪುತ್ರೋ ಮತಿಮಾನ್ ಶುಕಶ್ಚಾನುಗ್ರಹಿತೋ ವದ ।
ತದದ್ಯ ಸಂಪ್ರಧಾರ್ಯಾಶು ವದ ಮೇ ಶೂರಸಂಹರ ॥೩॥

ಇಪ್ಪತ್ತನೆಯ ಅಧ್ಯಾಯ

ಭಕ್ತವತ್ಸಲನಾದ ಪರಶಿವನ ಪ್ರಿಯಪುತ್ರನಾದ ಓ ಸ್ಕಂದದೇವನೇ, ಮಹಾಯೋಗಿಯೂ ಶಿವಭಕ್ತಾಗ್ರೇಸರನೂ ಆದ ಅಗಸ್ತ್ಯಮುನಿಯು ದೊಡ್ಡದೊಡ್ಡ ಅಲೆಗಳಿಂದ ಕೂಡಿದ ಭಯಂಕರವಾದ ಸಮುದ್ರವನ್ನು ಹೇಗೆ ಕುಡಿದನು? ಗರ್ಭದಲ್ಲಿಯೇ ಅವನಿಗೆ ಶಿವಭಕ್ತಿಯು ಹೇಗುಂಟಾಯಿತು? ||೧-೨||

ಮಹಾಜ್ಞಾನಿವ್ಯಾಸಪುತ್ರನಾದ ಶುಕನು ಹೇಗೆ ಸಂಸಾರವಿಮುಕ್ತನಾದನು? ಇದೆಲ್ಲವನ್ನೂ ನನಗೆ ವಿಶದವಾಗಿ ಹೇಳು. ಎಂದು ಜೈಗೀಷವ್ಯನು ಸ್ಕಂದದೇವನನ್ನು ಪ್ರಾರ್ಥಿಸಲು, ಆಗ ಕುಮಾರನು ಹೀಗೆಂದನು. ||೩||

॥ ಸ್ಕಂದ ಉವಾಚ ॥

ಅತ್ರತೇ ವರ್ಣಯಿಷ್ಯಾಮಿ ಶಾಂಭವಾನಾಂ ವಿಚೇಷ್ಟಿತಂ ।
ಶಂಭುಭಕ್ತಃ ಪುರಾ ಕುಂಭಸಂಭವೋಂಭೋಧಿಪಾನಕೃತ್ ॥೪॥

ಮಿತ್ರಾವರುಣಸಂಭೂತ ಸ್ತತ್ಪಿತುರ್ಮೇನಕಾಪ್ಸರಾ ।
ದೃಷ್ಟ್ವಾ ಚಸ್ಕಂದ ಕುಂಭೇ ವೈ ಋಷಿಸ್ತಸ್ಯ ಮಹಾತ್ಮನಃ ॥೫॥

ಘಟೋದ್ಭವೋಽಭವನ್ನಾಮ್ನಾ ಮಹರ್ಷಿಸ್ಸಶಿವವ್ರತಃ ।
ವಸಿಷ್ಠೋಽಪಿ ಮಹಾವಿಪ್ರಸ್ತಸ್ಮಾಜ್ಜಜ್ಞೇ ಮಹಾಮುನೇ ॥೬॥

ಕಲ್ಮಾಷಪಾದನಿಹತಸ್ತಸ್ಯ ಶಕ್ತಿಸ್ತನೂಭವಃ ।
ತಪಸಾ ಶಂಭುಭಕ್ತ್ಯಾ ಚ ವ್ಯಾಸಃ ಪೌತ್ರಾತ್ಮಜೋಽಸ್ಯ ಹಿ ॥೭॥

ವ್ಯಾಸೋ ಜಜ್ಞೇಽಮಿತಪ್ರಜ್ಞಸ್ತತ್ರ ವಿಪ್ರ ಪರಾಶರಾತ್ ।
ಸ ಬದರ್ಯಾಂ ತಪಸ್ತೇಪೇ ವರ್ಷಾಯುತಮನನ್ಯಧೀಃ ॥೮॥

ಎಲೈ ಜೈಗೀಷವ್ಯನೇ, ನಿನಗೆ ಶಿವಭಕ್ತರ ಚರಿತೆಯನ್ನು ಇನ್ನೂ ವಿಸ್ತರಿಸುವೆನು. ಕೇಳು ಶಿವಭಕ್ತನಾದ ಆಗಸ್ತ್ಯನು ಹಿಂದೆ ಸಮುದ್ರವನ್ನೇ ಪಾನಮಾಡಿದನು. ಹಿಂದೆ ಮಿತ್ರ ವರುಣರೆಂಬ ದೇವನಾಯಕರು ಸುಂದರಿಯಾದ ಮೇನಕೆಯನ್ನು ನೋಡಿ ಮೋಹಗೊಂಡರು. ಆಗ ಅವರ ರೇತಸ್ಸು ಒಂದು ಮಡಕೆಯಲ್ಲಿ ಬಿದ್ದಿತು. ಆ ರೇತಸ್ಸಿನಿಂದ ಅಗಸ್ತ್ಯಮಹಾಮುನಿಯು ಜನಿಸಿದನು. ॥೪-೫॥

ಮಡಕೆಯ ಒಳವಲಯದಲ್ಲಿ ಬಿದ್ದ ಮಿತ್ರಾವರುಣರ ರೇತಸ್ಸಿನಿಂದ ಮಹಾಮುನಿಯಾದ ವಸಿಷ್ಠನು ಜನಿಸಿದನು. ವಸಿಷ್ಠನಿಂದ ಶಕ್ತಿಮುನಿಯು ಹುಟ್ಟಿದನು. ಕಲ್ಮಾಷಪಾದನಿಗೆ ಶಾಪಕೊಟ್ಟವನು ವಸಿಷ್ಠನು. ॥೬॥

ಮಹಾತಪಸ್ವಿಯೂ ಶಿವಭಕ್ತನೂ ಮಹಾಜ್ಞಾನಿಯೂ ಆದ ವ್ಯಾಸಮುನಿಯು ವಸಿಷ್ಠನ ಮರಿಮಗನು (ಮೊಮ್ಮಗನ ಮಗನು) ಅವನ ತಂದೆಯು ಪರಾಶರ ಮುನಿಯು. ಆ ವ್ಯಾಸನು ಬದರಿಕಾಶ್ರಮದಲ್ಲಿ ಹತ್ತುಸಾವಿರ ವರ್ಷಗಳ ವರೆಗೆ ತಪಸ್ಸನ್ನಾಚರಿಸಿದನು. ॥೭-೮॥

ಭಸ್ಮರುದ್ರಾಕ್ಷಸಂಪನ್ನಃ ಶಿವಲಿಂಗಾರ್ಚನೇ ರತಃ ।
ಪಂಚಾಕ್ಷರಪರೋ ನಿತ್ಯಂ ರುದ್ರನಿದ್ರಾನಿಪಾತಕಃ ॥೯॥

ಸಂಸ್ತುವನ್ ಪರಮೇಶಾನಂ ಶುಕಂ ಪುತ್ರಮವಾಪ ಸಃ ।
ಗರ್ಭೇಽಪ್ಯುಪಾದಿಶಚ್ಛಂಭುರ್ಜ್ಞಾನಂ ತತ್ಪಾರಮೇಶ್ವರಂ ॥೧೦॥

॥ ವ್ಯಾಸ ಉವಾಚ ॥

ಉರ್ವೀ ಮೌರ್ವೀ ರಥೋಽಹಂ ಶಿಖಿಶಶಿಹರಯೋ ಬಾಣತೂಣಸ್ತಥಾಬ್ಧಿಃ
ಯಂತಾ ಧಾತಾ ವಿಧಾತಾ ತುರಗರಥಪದಾ ವೇದಸಂಘಾರ್ಕಚಂದ್ರಾಃ ।
ಲೀಲಾಂ ತೇಽದ್ಯಾನುಲೋಕೇ ಲಲಿತದೃಗುದಯೇ ಜ್ವಾಲಕೀಲಾವಲೀಢಂ
ಮುಗ್ಧಂ ಮುಗ್ಧೇಂದುಚೂಡ ತ್ರಿಪುರವರಪುರಂ ಸಂಭೃತೈಃ ಕಿಂ ತವಾನ್ಯೈಃ
॥೧೧॥

ಧರಾಧರಕುಮಾರಿಕಾವರ ಕಪಾಲಪಾಣೇ ಹರ
ಪ್ರಸೀದ ಪರಮೇಶ್ವರ ಸ್ಮರಹರಾದ್ಯ ಗಂಗಾಧರ ।

ವ್ಯಾಸಮುನಿಯು ಭಸ್ಮರುದ್ರಾಕ್ಷಧಾರಿಯಾಗಿ ಶಿವಪಂಚಾಕ್ಷರಮಂತ್ರವನ್ನು ಜಪಿಸುತ್ತಾ ರುದ್ರಸೂಕ್ತವನ್ನು ಪಠಿಸುತ್ತಾ ಶಿವಲಿಂಗವನ್ನು ಅರ್ಚಿಸಿ ಭಕ್ತಿಯಿಂದ ಶಿವನನ್ನು ಸ್ತುತಿಸುತ್ತಾ ಶಿವನ ಅನುಗ್ರಹದಿಂದ ಶುಕಮುನಿಯನ್ನು ಪುತ್ರನನ್ನಾಗಿ ಪಡೆದನು. ಆ ಶುಕಮುನಿಗೆ ಗರ್ಭದಲ್ಲಿಯೇ ಶಿವನು ಪಾರಮೇಶ್ವರಜ್ಞಾನವನ್ನು ಉಪದೇಶಿಸಿದನು. ॥೯-೧೦॥

" ಓ ದೇವ, ತ್ರಿಪುರಸಂಹಾರದಲ್ಲಿ ನಿನಗೆ ಭೂಮಿಯೇ ರಥವಾಗಿತ್ತು. ಮೇರುವೇ ಧನುಸ್ಸಾಗಿತ್ತು, ಆದಿಶೇಷನೇ ಧನುಸ್ಸಿನ ಹುರಿಯಾಗಿದ್ದನು. ಅಗ್ನಿ ಚಂದ್ರನಾರಾಯಣರು ಬಾಣಗಳಾಗಿದ್ದರು, ಸಮುದ್ರವು ಬತ್ತಳಿಕೆಯಾಗಿತ್ತು. ಇಷ್ಟೆಲ್ಲಾ ಸಾಧನಸಂಪತ್ತಿಯಿದ್ದರೂ ಉರಿಗಣ್ಣಿನ ಮಹಾವೀರನಾದ ನೀನು ಲೀಲಾಮಾತ್ರದಿಂದ ಕೇವಲ ಒಂದು ಹುಂಕಾರವನ್ನು ಮಾಡಿ ತ್ರಿಪುರಾಸುರರನ್ನು ಸಂಹರಿಸಿದೆ, ಇಂತಹ ಚಂದ್ರಶೇಖರನೇ, ನಿನಗೆ ಸಮರಾರು ? ॥೧೧॥

ಗಿರಿಜೆಯ ಪ್ರಿಯಪತಿಯೂ ಕಪಾಲಧಾರಿಯೂ, ಮನ್ಮಥವೈರಿಯೂ, ಗಂಗಾಧಾರಿಯೂ ಆದ ಓ ಪರಮೇಶ್ವರ ಪ್ರಸನ್ನನಾಗು. ಹರಿಯೇ ಬಾಣವಾಗುಳ್ಳ, ನೀಲ

ಪಯೋಧಿಶಯಬಾಣಧೃಗ್ಗರಥಧೃಗುರ್ವೀಧರ
ಧರಾಧರಣಧಾರಣ ಪ್ರಣತಹೃತ್ಪಥೋಽಜಾಂತಿಕೆ ॥೧೨॥

ಅನಾಥಜನನಾಥ ತೇ ದಿವಸನಾಥನೇತ್ರೇಣ ಮಾಂ
ವಿಲೋಕಯ ಸನಾಥಯ ಪ್ರಮಥನಾಥಲಿಂಗಾರ್ಚಕಂ ।
ಸುಮನ್ಮಥಶರಾಹತಿಪ್ರಮಥಿತಾಂತರಂಗಂ ಹಿ ಮಾ
ಮನಾಥಮಗಜಾಪತೇ ಅವ ಹಿ ವಿಶ್ವನಾಥಾಧುನಾ ॥೧೩॥

॥ ಸ್ಕಂದ ಉವಾಚ ॥

ತತ್ಸ್ತುತ್ಯಾ ತೋಷಿತಶ್ಶಂಭುಃ ತಸ್ಮೈ ಪುತ್ರಂ ದದೌ ಶುಕಂ ।
ಗರ್ಭಾನ್ನಿಸ್ಸೃಷ್ಟಮಾತ್ರಸ್ಸ ಸ್ತುವನ್ನೀಶಂ ವನಂ ಯಯೌ ॥೧೪॥

॥ ಶುಕ ಉವಾಚ ॥

ಪತಂಗದೃಗಪಾಂಗತೋ ಭವಭುಜಂಗಭಂಗೋ ಭವೇತ್
ಸಮುಲ್ಲಸಿತಪಲ್ಲವೈರ್ಭಜತಿ ಮುಕ್ತಿವಲ್ಲೀ ಹಿ ಮಾಂ ।
ಕುರಂಗಕಿಣಸಂಗದೃಕ್ಪ್ರಸರತೋಽದ್ಯ ಸಾಂಸಾರಿಕೀಂ
ರುಜಂ ಹರ ದಯಾಘನೈರ್ವಿತರ ದೃಷ್ಟಿವರ್ಷಂ ಮಯಿ ॥೧೫॥

ಕಂತನಾದ, ಭೂಮಿಯೇ ರಥವಾಗುಳ್ಳ, ಮೇರುವೇ ಧನುಸ್ಸಾಗುಳ್ಳ ಭಕ್ತರ ಹೃದಯದಲ್ಲಿ ನೆಲಸಿರುವ ಓ ದೇವನೇ, ನನ್ನಲ್ಲಿ ಅನುಗ್ರಹಿಸು. ॥೧೨॥

ದೀನರಕ್ಷನಾದ ಓ ಪರಮೇಶ್ವರ, ನಿನ್ನನ್ನರ್ಚಿಸುವ ನನ್ನನ್ನು ನಿನ್ನ ಸೂರ್ಯನೇತ್ರದಿಂದ ನೋಡು, ಓ ಗಿರಿಜಾಪತಿ, ಮನ್ಮಥ ಬಾಣಪೀಡಿತನಾದ ನನ್ನನ್ನು ಕಾಪಾಡು." ॥೧೩॥

ಹೀಗೆ ವ್ಯಾಸನು ಸ್ತುತಿಸಲು ಶಿವನು ಪ್ರಸನ್ನನಾಗಿ ಅವನಿಗೆ ಶುಕನನ್ನು ಮಗನನ್ನಾಗಿ ಕರುಣಿಸಿದನು. ಆ ಶುಕನು ಗರ್ಭದಿಂದ ಹೊರಬಿದ್ದೊಡನೆಯೇ ಶಿವನನ್ನು ಹೀಗೆ ಸ್ತುತಿಸುತ್ತಾ ಕಾಡಿಗೆ ಹೊರಟುಹೋದನು. ॥೧೪॥

ಪರಶಿವನ ಅನುಗ್ರಹದೃಷ್ಟಿಯೆಂಬ ಗರುಡದೃಷ್ಟಿಯಿಂದ ಸಂಸಾರ ಬಂಧನವೆಂಬ ಸರ್ಪಬಂಧನವು ಹೋಗುವುದು, ಮುಕ್ತಿಲತೆಯು ನನ್ನನ್ನು ಎಲೆಗಳಿಂದ ತುಂಬಿದ್ದು ಆವರಿಸುತ್ತಿರುವುದು. ಓ ಮೃಗಧಾರಿಯಾದ ಪರಮೇಶ್ವರ, ಸುತ್ತು

ನಿಶಾಪತಿಕಲಾಧರಂ ಕುಲಿಶಪಾಣಿಸಂಪೂಜಿತಂ
ಸುಶೋಭಿಜಟಿಜಹ್ನುಜಾಮೃಡಶಿಖಂಡಚೂಡಾಧುನಾ ।
ದೃಢಂ ತವ ಪದಾಂಬುಜಂ ಶಿವ ಭಜಾಮಿ ಹೃತ್ಪದ್ಮಕೇ
ಶಿವಾಸಖ ಸುಖಂ ಸದಾ ಶಿಖಿಸಖಾಕೃತೇ ಪಾಹಿ ಮಾಂ ॥೧೬॥

ಶಾಂತಂ ದಾಂತಹೃದಂತರೇ ಸುವಿಹಿತಂ ಯಾಂತಂ ವೃಷೇಂದ್ರೇಣ ತಂ
ಸ್ವಾಂತಸ್ಥಂ ಸಕಲೇಷು ಭಾಂತಮಖಿಲಂ ತಾಂತಂ ಸದಾ ಪೋಷಕಂ ।
ವಾಂತಪ್ರಾಯಭವೇಷು ತುಚ್ಛಿತಧಿಯಂ ತಂ ಮುಕ್ತಿಕಾಂತಾಪ್ರಿಯಂ
ದೇವಂ ದಾಂತಶಮಪ್ರಶಾಂತಮನಸಾ ಯಾಮೀಷಣಾವರ್ಜಿತಃ ॥೧೭॥

ಅಂಬರಕೇಶಸುಶಂಬರವೈರಿತ್ರಿಪುರಾಹರಾಂಬರ ಹೃದಿ ವಿಹರ ।
ಮುರಹರಶಂಕರ ದ್ವಿರದವರಾನನಶರವಣಭವನುತ ಪಾಹಿ ॥೧೮॥

ನಾಲ್ಕು ಕಡೆಗಳಿಂದ ಬರುತ್ತಲಿರುವ ಸಂಸಾರಪಾಶಗಳನ್ನು ಕರುಣಾದೃಷ್ಟಿಯೆಂಬ ಖಡ್ಗದಿಂದ ಕತ್ತರಿಸು, ನನಗೆ ಜ್ಞಾನದೃಷ್ಟಿಯನ್ನು ಕೊಡು. ||೧೫||

ಚಂದ್ರಕಲೆ ದೇವಗಂಗೆಗಳಿಂದ ಶೋಭಿಸುವ ಜಟೆಯುಳ್ಳವನೂ, ವಜ್ರಧರನಾದ ಇಂದ್ರನಿಂದ ಪೂಜಿಸಲ್ಪಡುವವನೂ ಆದ ಪರಮೇಶ್ವರನೇ, ಗಾಳಿಯಂತೆ ಸರ್ವವ್ಯಾಪಿಯಾದ ಓ ಶಿವನೇ, ಗಿರಿಜಾಪತಿಯಾದ ನಿನ್ನ ಅಡಿದಾವರೆಯನ್ನು ನನ್ನ ಹೃದಯ ಕಮಲದಲ್ಲಿ ದೃಢವಾಗಿ ಭಜಿಸುವೆನು. ||೧೬||

ಜಿತೇಂದ್ರಿಯರಾದ ಯೋಗಿಗಳ ಹೃದಯದಲ್ಲಿ ಶಾಂತನಾಗಿ ನೆಲಸಿರುವವನೂ, ನಂದಿಯನ್ನೇರಿ ಪ್ರಯಾಣಿಸುವವನೂ, ಜೀವರಾಶಿಗಳ ಹೃದಯದಲ್ಲಿ ಆತ್ಮರೂಪದಿಂದ ಬೆಳಗುವವನೂ, ಅಸ್ಥಿರವಾದ ಸಂಸಾರದಲ್ಲಿ ಹೇಯಬುದ್ಧಿಯುಳ್ಳವನಾಗಿ ದಿಗಂಬರನಾಗಿ ಮುಕ್ತಿಸುಖವನ್ನನುಭವಿಸುವವನೂ, ಆದಂತಹ ಶಿವನನ್ನು ಯಾವ ಆಸೆಯೂ ಇಲ್ಲದ ನಿಶ್ಚಲಮನಸ್ಸಿನಿಂದ ಧ್ಯಾನಿಸುವೆನು. ||೧೭||

ಆಕಾಶವೇ ತಲೆಗೂದಲಾಗುಳ್ಳ ವಿರಾಟ್ಪುರುಷನೂ, ಮನ್ಮಥ ತ್ರಿಪುರರನ್ನು ಸಂಹರಿಸಿದವನೂ ಆದ ಓ ದೇವ, ನನ್ನ ಹೃದಯದಲ್ಲಿ ನೆಲಸು. ನಾರಾಯಣನೇ ಬಾಣವಾಗುಳ್ಳ, ವಿನಾಯಕ ಷಣ್ಮುಖರ ಜನಕನಾದ ಓ ಶಂಕರನೇ ನನ್ನನ್ನು ಪಾಲಿಸು. ||೧೮||

ಏಕೈವಾಸ್ಮಿ ನಸಂಶಯಸ್ತ್ರಿಭುವನೇ ನೇಹಾಸ್ತಿ ನಾನಾಜಗತ್
ಮಿಥ್ಯೈವಾಹಿಭಯಂ ಯಥಾ ಮರುಮರೀಚ್ಯಾದ್ರೀಕೃತಾ ಭೂರ್ಭವೇತ್ ।
ಶುಕ್ತೌ ಯತ್ಕಲಧೌತವನ್ಮೃದಿ ಮಹಾಕುಂಭೋಪಮಾನಂ ತಥಾ
ವಾಚಾರಂಭಣಮೇವ ಯುಕ್ತಿಜನಕಂ ಕಾರ್ಯಂ ನ ವೈ ಕಾರಣಂ ॥೧೯॥

ಮದ್ಭಾಸಾ ಜಗದದ್ಯ ಭಾತಿ ನಿತರಾಂ ಸೂರ್ಯಾನಲೌ ವಾಯವೋ
ಭೀತ್ಯಾ ಭಾಂತಿ ಸ್ವತೇಜಸಾಮಪಿ ಪರಂ ಜಾನಂತಿ ನೋ ಮಾಂ ಸ್ಥಿತಂ
ಕೋ ಮೋಹೋ ಮಯಿ ಪಶ್ಯತಾಂ ಸ್ಥಿರಚರಂ ತ್ವೇಕತ್ವನಾನಾತ್ವಧೀಃ
ಭಿದ್ಯತ್ಯೇವ ವಿಭೇದಭಾವಜನಕಂ ತ್ವಜ್ಞಾನಮೇತತ್ಸ್ಫುಟಂ ॥೨೦॥

ನಾನು (ಆತ್ಮನು) ಓರ್ವನೇ ಇರುವವನು, ಸತ್ಯವಾದವನು, ಎದುರಿಗೆ ಕಾಣಿಸುವ ಜಗತ್ತೆಲ್ಲವೂ ಅಸತ್ಯವಾದುದು, ಹಗ್ಗವನ್ನು ನೋಡಿ ಹಾವೆಂದು ಹೆದರುವಂತೆ, ಬಿಸಿಲುಗೋಲನ್ನು ನೋಡಿ ನೀರೆಂದು ಭ್ರಾಂತಿಪಡುವಂತೆ, ಕಾಗೆಬಂಗಾರವನ್ನು ನೋಡಿ ಬೆಳ್ಳಿಯೆಂದು ತಿಳಿಯುವಂತೆ (ಪರಮಾತ್ಮನಲ್ಲಿ) ಪ್ರಪಂಚವೆಲ್ಲವನ್ನೂ ಇದೆಯೆಂದು ತಪ್ಪಾಗಿ ತಿಳಿದಿರುವೆವು. ವಸ್ತುತಃ ಪರಮಾತ್ಮನಾದ ನಿನ್ನನ್ನು ಹೊರತು ಕಾರ್ಯವೂ ಇಲ್ಲ ಕಾರಣವೂ ಇಲ್ಲ. ಮೊಲದ ಕೊಂಬಿನಂತೆ ಎಲ್ಲವೂ ಸತ್ಯವಲ್ಲದ ಮಾತಿನ ವಿಷಯಗಳು. ॥೧೯॥

ನನ್ನ ಪ್ರಕಾಶದಿಂದಲೇ ಜಗತ್ತು ಬೆಳಗುತ್ತಿರುವುದು. ನನ್ನ ಭಯದಿಂದಲೇ ಸೂರ್ಯಚಂದ್ರಾಗ್ನಿಗಳು ಹೊಳೆಯುತ್ತಿರುವರು. ಗಾಳಿಯು ಬೀಸುತ್ತಿರುವುದು. ಆ ಸೂರ್ಯಚಂದ್ರಾಗ್ನಿಗಳು ನನ್ನನ್ನು ಪ್ರಕಾಶಿಸಲಾರವು, ತೇಜಸ್ಸುಗಳೆಲ್ಲವಕ್ಕೂ ಮಿಗಿಲಾದವನು ನಾನು. ಇಂತಹ ಪ್ರಕಾಶಸ್ವರೂಪನಾದ ನನ್ನನ್ನು ಜನಗಳು ಅನೇಕ ಭೇದಗಳುಳ್ಳವನೆಂದೂ ಆಕಾರವುಳ್ಳವನೆಂದೂ ತಪ್ಪಾಗಿ ತಿಳಿಯುವರು. ಈ ಭೇದಬುದ್ಧಿಗೆ ಅಜ್ಞಾನವೇ ಕಾರಣವು. ಮಡಕೆಯು ಮಣ್ಣಿನಲ್ಲಿರುವಂತೆ ಜಗತ್ತೆಲ್ಲವೂ ನನ್ನಲ್ಲಿಯೇ ಇರುವುದು. ನನ್ನ ಹೊರತಾಗಿ ಬೇರೆಯಿಲ್ಲ, (ಇಲ್ಲಿ ನಾನು ನನ್ನ ಎಂಬ ಪದಗಳು ಪರಮಾತ್ಮಪರವಾದವುಗಳು, ಮಹಾಜ್ಞಾನಿಗಳಾದ ಶುಕಾಚಾರ್ಯರು ತಾನೇ ಪರಮಾತ್ಮನೆಂದು ಅನುಭವದಿಂದ ಹೇಳುತ್ತಿರುವರು.) ॥೨೦॥

"ಬ್ರಹ್ಮಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವನಾಪರಃ, ನೇಹನಾನಾಸ್ತಿಕಿಂಚನ" ಎಂಬ ಅದ್ವೈತಸಿದ್ಧಾಂತಗಳ ವೇದಾರ್ಥವು ಇಲ್ಲಿ ಪ್ರತಿಪಾದಿಸಲ್ಪಟ್ಟಿದೆ.

ಈಶಾವಾಸ್ಯಮಿದಂ ಜಗಚ್ಛ್ರುತಿಶತೈಃ ಪ್ರೋಕ್ತಂ ಚ ತದ್ಭೇದಧೀಃ
ನೋ ಕಶ್ಚಿದ್ವಿನಿವರ್ತತೇ ಚ ಯತನೇ ನೋಕ್ಸಾಶ್ರನ್ಯೈಶ್ಯಾಂತಿಯುಕ್ ।
ತ್ವದ್ಭಕ್ತ್ಯಾ ವಿಮುಖಃ ಸದೈವ ಹಿ ವೃಥಾ ಭೇದೋದ್ಭವೈರ್ಭ್ರಶ್ಯತೇ
ಬುದ್ಧ್ಯಾ ಬುದ್ಧಧಿಯೋ ಭವಂತಿ ಚ ವೃಥಾ ಕಿಂಚಾಯುಷೋಂತೇ ನರಾಃ
॥೨೧॥

ವಿದ್ಯಾ ಸುದ್ಯೋತತೇಂತರ್ಹೃದಿ ಜಟಿಲತನೋ ಭಿದ್ಯತೇ ವಿದ್ಯತೇಂತಃ
ಖದ್ಯೋತದ್ಯುತಿವತ್ಸವಿದ್ಯುತ ಇವಮಾ ನೋಭಾಂತಿ ಚಂದ್ರಾನಲಾಃ ।
ಯೂಕಾಶೂಕಸನೋ ಮಯೂಖಸಮುಹಾಮಾಲೀ ಚ ಲೀಲಾಹಿತೇ
ಘೂಕಾಸ್ತರ್ಕವಿತರ್ಕಜಾಲಜಟಿಲಾಃ ವಿಧ್ವಂಸಿತಾಸ್ತ್ವದ್ದೃಶಾ ॥೨೨॥

"ಜಗತ್ತೆಲ್ಲವೂ ಪರಮಾತ್ಮನಲ್ಲಿ ಐಕ್ಯವಾಗಿದೆ, ಪರಮಾತ್ಮನ ಹೊರತಾಗಿಲ್ಲ" ಎಂದು ತಿಳಿದು ಮುಕ್ತನಾಗಬೇಕು. ಹಾಗೆ ಮುಕ್ತನಾದವನಿಗೆ ಪುನಃ ಜನ್ಮವಿಲ್ಲ, ಎಂದು "ಈ ಶಾವಾಸ್ಯಮಿದಂ ಸರ್ವಂ, ನೇಹನಾನಾಸ್ತಿ ನಸಪುನರಾವರ್ತತೇ" ಮೊದಲಾದ ವೇದಾಂತ ವಾಕ್ಯಗಳು ಹೇಳುವುವು. ಈ ತತ್ವ ಜ್ಞಾನವನ್ನು ಮರೆತು ಜನಗಳು ವ್ಯರ್ಥವಾಗಿ ಭೇದಬುದ್ಧಿಯುಳ್ಳವರಾಗಿ ದ್ವೈತವಾದಿಗಳಾಗುವರು. ಮತ್ತೆ ಕೆಲವರು ಶೂನ್ಯವಾದಿಗಳು. ಜನನಮರಣಗಳನ್ನು ನೋಡಿ ಎಲ್ಲವೂ ಸುಳ್ಳು, ಏನೂ ಇಲ್ಲ ಎಂದು ತಮ್ಮ ಮೂಢಬುದ್ಧಿಗನುಸಾರವಾಗಿ ಕಲ್ಪಿಸಿರುವರು. ಇದು ತಪ್ಪು, ಇಲ್ಲ ಎನ್ನಬೇಕಾದರೆ ಇದೆ-ಎಂದೊಂದಾಗಿರಬೇಕು. ಯಾವುದೂ ಇಲ್ಲದೇ ಇಲ್ಲವೆನ್ನಲಾಗುವುದಿಲ್ಲ. ಮೊಲದ ಕೊಂಬು ಇಲ್ಲದ ವಸ್ತುವಾದ್ದರಿಂದ ಅದಿಲ್ಲ ಎನ್ನುವವನು ಹುಚ್ಚ. ಅಂತೆಯೇ ಇಲ್ಲ ಎನ್ನಬೇಕಾದರೆ ಇದೆಯೆಂದೊಂದು ವಸ್ತು ಇರಬೇಕು. ಆ ಇರುವುದೇ ಪರಮಾತ್ಮವಸ್ತುವಾದ ನೀನು. ॥೨೧॥

ಪರಮಾತ್ಮವಸ್ತುವಾದ ನೀನು ಮಾನವರ ಹೃದಯದಲ್ಲಿ ಜ್ಞಾನಪ್ರಭೆಯಿಂದ ಬೆಳಗುತ್ತಿರುವೆ, ಆ ಪ್ರಭೆಯ ಎದುರಿಗೆ ಈ ಚಂದ್ರಸೂರ್ಯಾದಿಗಳು ದೀಪದ ಹುಳುವಿನಂತೆ ಕಾಂತಿಯಿಲ್ಲದವರಾಗುವರು. ಇಂತಹ ನಿನ್ನನ್ನು ತಾರ್ಕಿಕರು ತಮ್ಮ ಭೇದಬುದ್ಧಿಯಿಂದ ಅನೇಕ ಬಗೆಯಾಗಿ ಕಲ್ಪಿಸುವರು, ಆ ತರ್ಕಗಳೆಲ್ಲವೂ ನಿನ್ನ ವಿಷಯದಲ್ಲಿ ವ್ಯರ್ಥವಾದವುಗಳು. ॥೨೨॥

"ತಮೇವಭಾಂತಮನುಭಾಂತಿ ಸರ್ವಂ ತಸ್ಯಭಾಸಾ ಸರ್ವಮಿದಂ ವಿಭಾತಿ ಭೀಷಾಸ್ಮಾ ದ್ವಾತಃ ಪವತೆ" ಮೊದಲಾದ ಶ್ರುತಿಗಳ ಅರ್ಥವು ಇಲ್ಲಿ ಪ್ರತಿಪಾದಿಸಲ್ಪಟ್ಟಿದೆ.

ಸೀಮಾ ಭೂಮಾ ತ್ವಮಿಾಶೋ ದೃಢತರಮಹಿಮಾ ತ್ವತ್ಪದಾಬ್ಜೇ ಕಿಲೈಕಃ
ಯಸ್ತ್ವಾಂ ಧ್ಯಾಯತಿ ಧ್ಯಾನಹೀನವಪುಷಾ ಸತ್ವಂ ತ್ವಮಾತ್ಮಾ ಪರಃ ।
ನೋ ತತ್ರತ್ರಿಪುಟೀಕುಟೀರಕುಟಿಲಂ ಚಿತ್ತಂ ನಿಟಾಲೇಕ್ಷಣ
ಲಕ್ಷ್ಯಾತ್ಮಾ ತ್ವಮಲಕ್ಷ್ಯಲಕ್ಷಿತಹೃದಾ ತ್ವಂ ವೇತ್ಸಿ ತಂ ತ್ವಾಮನು ॥೨೩॥

ಶಮಿತೋ ಮೃಗತೃಷ್ಣಿಕೇನ ಭೂಮೌ ಮೃಗದೃಷ್ಟ್ಯೈವ ಸ ಬಂಧಹೇತುಃ ।
ಸುಭವೋದ್ಭವಪಾದಸೇವಿನಾಂ ಸುಗಮಾವ್ಯೆ ನಿಗಮಾಗಮೋಕ್ಷಶೀರ್ಷ್ಣಃ ॥೨೪॥

ಪದಜಾತಪ್ರಕಟಪ್ರಭಾವಬೋಧೈರಹಮೇವ ತ್ವಮಸಿ ಕ್ವಭೇದಹೇತುಃ ॥೨೫॥

ತಂತ್ರಯಂತ್ರಕೃತಮಂತ್ರವಿಭಕ್ತೈರ್ಮಾಂತ್ರಿಕೋಽಹಮಿತಿಧೀರ್ನ ಹಿ ಮುಕ್ತ್ಯೈ
ಮುಕ್ತಿಮಾರ್ಗಕಲನೇ ಶ್ರುತಿಸೂಕ್ತ್ಯಾ ವಕ್ತಿ ತತ್ತ್ವಮಸಿ ವಾಕ್ಯತೋಽರ್ಥವತ್ ॥೨೬॥

ಎಲ್ಲ ವಿಚಾರಗಳಿಗೂ ಕೊನೆಯ ಅವಧಿಯು ನೀನು. ಗುರಿಯು ನೀನೇ. ಮಹಾಮಹಿಮನಾದ ನಿನ್ನನ್ನು ಕೆಲವರು ಧ್ಯಾನದೃಷ್ಟಿಯಿಂದಲೇ ಆರಾಧಿಸುವರು, ಆ ಧ್ಯಾನಕ್ಕಿಂತಲೂ ಮಿಗಿಲಾದ ನಾನೇ ನೀನೆಂಬ ಅಭೇದಜ್ಞಾನದೃಷ್ಟಿಯಿಂದ ಅನುಸಂಧಾನಮಾಡಿದರೆ ಮಾನವನು ನೀನೇ ಆಗುವನು. ಆಗ ಜ್ಞಾನವೂ ಇಲ್ಲ, ಜ್ಞೇಯವಸ್ತುವೂ ಇಲ್ಲ, ಜ್ಞಾತೃವೂ ಇಲ್ಲ, ಆಗ ಆತ್ಮಜ್ಞಾನವು ತಾನೇ ತಾನಾಗಿ ಬೆಳಗುವುದು. ॥೨೩॥

ಬಿಸಿಲ್ಗುದುರೆಯನ್ನು ನೋಡಿ ನೀರೆಂದು ತಿಳಿದು ಹಾತೊರೆದೋಡುವ ಜಿಂಕೆಗಳಂತೆ, ಅಸಾರವಾದ ಅಸತ್ಯವಾದ ಪ್ರಾಪಂಚಿಕ ಸುಖವಸ್ತುಗಳ ಕಡೆಗೆ ಜನರು ಧಾವಿಸುವರು. ಕಡೆಗೆ ಸಂಸಾರಬಂಧನದಲ್ಲಿ ಸಿಲುಕುವರು. ಪರಮೇಶ್ವರನಾದ ನಿನ್ನ ಭಕ್ತರಾದರೆ ಆಗ ಪ್ರಾಪಂಚಿಕ ಸುಖಗಳ ಗೊಡವೆಗೆ ಹೋಗದೆ ಸಂಸಾರ ಬಂಧನವನ್ನು ಹರಿದೊಗೆವರು. ॥೨೪॥

"ತತ್ತ್ವಮಸಿ" "ಅಹಂ ಬ್ರಹ್ಮಾಸ್ಮಿ" ಮೊದಲಾದ ವೇದಾಂತಾನುಭವದಿಂದ ನಾನೇ ನೀನು, ನೀನೇ ನಾನು, ಭೇದವೇ ಇಲ್ಲ. ಭೇದಕಾರಣವೂ ಇಲ್ಲ. ಎಂಬುದನ್ನು ಮೊದಲು ತಿಳಿಯಬೇಕು. ॥೨೫॥

ತಂತ್ರಯಂತ್ರಮಂತ್ರಗಳನ್ನು ಸಾಧಿಸಿ ಮಹಾಮಾಂತ್ರಿಕನಾದರೂ ಮುಕ್ತಿಯು

ಯುಕ್ತಿಯುಕ್ತಮಪಿ ಭುಕ್ತಮುಕ್ತಿದಂ ಭಕ್ತಮೇವ ನಿಗುಣಂ ನಸು ಮುಕ್ತ್ಯೈ
ಭೇದಭಾವಕಲನಾವಿಚಾರತಸ್ತ್ವಾಂ ನ ಜಾನತ ಇಮೇ ಪಶವಃ ಸ್ಯುಃ ॥೨೭॥

ಬಹುತ್ವೇ ಏಕತ್ವೇ ಭ್ರಮುಭವನತಾಂತಾಃ ಕಿಲ ನರಾಃ
ನಚೈಕಂ ದ್ವಿತ್ವಂ ವಾ ಶ್ರುತಿಶಿರಸಿ ವಾಕ್ಯಾರ್ಥಕಲನೇ ।
ನ ಬಂಧೋ ಮೋಕ್ಷೋ ವಾ ನಪರಮವರೋ ವಾಪಿ ಹಿ ನರಃ
ಚಕಾಸ್ತಿ ಬ್ರಹ್ಮೇದಂ ಪರಮಶಿವ ಏಕೋ ಧ್ರುವಸಖಃ ॥೨೮॥

ವಿತ್ತಪಿತ್ತಮಪನೀಯ ಚಿತ್ತತಃ ಹೃತ್ತಮೋರಸದೃಶಾ ಪರಿಧೂಯ ।
ಕರ್ತೃತಾಮಪಿ ನಿಜಾತ್ಮವಿದ್ಯಯಾ ಭೋಕ್ತೃತಾಮಪಿ ಸದಾತ್ಮದರ್ಶನಾತ್
॥೨೯॥

ದೊರೆಯಲಾರದು. "ತತ್ತ್ವಮಸಿ" ಆ ಪರಮಾತ್ಮನೇ ನಾನು ಎಂದು ಅಭೇದ ಜ್ಞಾನವನ್ನನುಭವದಲ್ಲಿ ತಂದುಕೊಂಡರೆ ಮಾತ್ರ ಮುಕ್ತನಾಗುವನು, ಇದು ವೇದಾಂತಸಿದ್ಧಾಂತವು. ॥೨೬॥

ಭಕ್ತನೂ ಸಹ ನಿನ್ನನ್ನು ಪರಮೇಶ್ವರನೆಂದಾರಾಧಿಸುತ್ತಾ ಕೊನೆಗೆ ಪರಮೇಶ್ವರನೇ ತಾನೆಂದು ಅಭೇದಜ್ಞಾನವುಳ್ಳವನಾಗಿ ಮುಕ್ತಿಯನ್ನೈದುವನು. ನಿನಗೂ ಜೀವನಿಗೂ ಭೇದವನ್ನು ಕಲ್ಪಿಸುವ ದ್ವೈತವಾದಿಗಳು ಎಂದೆಂದಿಗೂ ಮುಕ್ತಿಯ ದಾರಿಗೆ ಹೋಗಲಾರರು. ಅವರ ಜನ್ಮವು ಪಶುಗಳಂತೆ ವ್ಯರ್ಥವು.॥೨೭॥

ದ್ವೈತ ಎಂಬುದಾಗಿ ಕೆಲವರು, ವಿಶಿಷ್ಟಾದ್ವೈತ ಎಂಬುದಾಗಿ ಕೆಲವರು ಅಜ್ಞಾನದಿಂದ ಭ್ರಮಿಸುತ್ತಿರುವರು. ನಿಜವಾದ ಬ್ರಹ್ಮನೇ ತಾನೆಂಬ ಬ್ರಹ್ಮಭಾವವು ಉದಯಿಸಿದ ಮೇಲೆ ಏಕತ್ವವೂ ಇಲ್ಲ, ಭೇದವೂ ಇಲ್ಲ, ಬಂಧವೂ ಇಲ್ಲ, ಮುಕ್ತಿಯೂ ಇಲ್ಲ, ಉತ್ತಮನೂ ಇಲ್ಲ, ಅಧಮನೂ ಇಲ್ಲ, ಪರಮಾತ್ಮನೊರ್ವನೇ ತಾನೇ ತಾನಾಗಿ ಪ್ರಕಾಶಿಸುವನು. ॥೨೮॥

ಆತ್ಮಜ್ಞಾನದಿಂದ ಧನಮದವೂ ಅಜ್ಞಾನವೂ ತೊಲಗುವುವು. ತಾನು ಕರ್ತೃವೂ, ಭೋಕ್ತೃವೂ (ಅನುಭವಿಸುವವನೂ) ಎಂಬ ತಿಳಿವಳಿಕೆಯೂ ಹೋಗಿ ಸರ್ವವೂ ಆತ್ಮಸ್ವರೂಪವೆಂಬ ಆತ್ಮಜ್ಞಾನವು ತಾನೇತಾನಾಗಿ ಬೆಳಗುವುದು. ॥೨೯॥

ದರ್ಶನಂ ಚ ಹೃದಿ ತತ್ರ್ಪವಿಲಾಪ್ಯ ಸ್ವಾಪ್ತಕಾಮುಕಲನೋ ದಲಿತಾಶಃ ।
ಮೂಲಕೂಲಜನಿತಾಮಥ ವಿದ್ಯಾಂ ಹೃದ್ಯಮೇನ ಪರಿಧೂಯ ಅವಿದ್ಯಾಂ ॥೩೦॥

ಉಮಾಜಾನೇ ಜಾನೇ ತವ ಭವ ಯದಾರ್ತಂ ಜಗದಿದಂ
ನ ಜಾನೇ ತ್ವದ್ಭಿನ್ನಂ ಶಿವಭಜನಬೋಧೈರ್ಗುರುಜನ್ಯೈಃ ।
ಉಮಾಜಾನೇ ಜಾನೇ ಜನಿಮೃತಿನಿದಾನಾದಿವಿಮುಖಂ
ಮಹೇಜಾನೇಸೌಖ್ಯಂ ಲವಶತಸುರಾಣಾಂ ಮಮ ಕಿಯತ್ ॥೩೧॥

ತರ್ಕೈಸ್ತರ್ಕಿತುಮಪ್ಯಶಕ್ತಕರಣೈರ್ವಿಮಾಂಸ್ಯಮೇತನ್ನ ವೈ
ಶಬ್ದೈಶ್ಚಾಪಿ ಜಡೈಶ್ಚ ತಂತ್ರನಿವಹೈರ್ದೃಶ್ಯಃ ಕಿಮಾತ್ಮಾ ಭವಾಃ ।
ಮನಃಕ್ಲಪ್ತಾಸ್ತರ್ಕಾ ಗುಣಗಣಜಬುದ್ಧಿಪ್ರತಿಭುವಃ
ವಿಚಾರಂ ಚೇತೋ ಯತ್ತದಪಿ ಶಿವ ಮೀಮಾಂಸಕಮತಂ ॥೩೨॥

ಆಮೇಲೂ ಆತ್ಮಜ್ಞಾನವೂ ಹೋಗಿ ಆತ್ಮರೂಪವಾಗುವುದು. ಜ್ಞಾನಸ್ವರೂಪನಾಗುವನು, ಆನಂದಸ್ವರೂಪನಾಗುವನು. ಆದರಿಂದ ಯಾವ ಆಸೆಯೂ ಇಲ್ಲದ ಆಪ್ತಕಾಮನಾಗುವನು, ಆತ್ಮಜ್ಞಾನವು ಹೇಗೆ ಹೋಗುವುದೆಂದರೆ ಅವಿದ್ಯೆಯಿಂದಲೇ ಪ್ರಪಂಚವೆಲ್ಲವೂ ಜನಿಸುವುದು. ಅದರಂತೆ ಆತ್ಮಜ್ಞಾನವೂ ಅವಿದ್ಯೆಯಿಂದಲೇ ಜನಿಸುವುದು, ಕೊನೆಯಲ್ಲಿ ಆತ್ಮಜ್ಞಾನವು ಅವಿದ್ಯೆಯನ್ನು ಹೋಗಲಾಡಿಸಿ ತಾನೂ ಲಯವಾಗುವುದು, ಬೆಂಕಿಯನ್ನು ನಂದಿಸುವ ನೀರು ಬೆಂಕಿಯೊಡನೆ ಇಂಗಿಹೋಗುವಂತೆ. ॥೩೦॥

ಓ ಉಮಾಪತಿಯೇ, ಈ ಜಗತ್ತೆಲ್ಲವೂ ನಿನ್ನಲ್ಲಿಯೇ ಇರುವುದು, ನಿನ್ನ ಹೊರತಾಗಿಲ್ಲ, ಎಂದು ಗುರೂಪದೇಶದಿಂದ ತಿಳಿದು ಅನುಭವಮಾಡಿಕೊಂಡಿರುವೆನು. ನೀನು ಆನಂದಮಯನು, ನಿನ್ನ ಆನಂದಕ್ಕಿಂತಲೂ ದೇವಾದಿಗಳ ಆನಂದವು ಅತಿ ಕಮ್ಮಿಯಾದುದು, ಭೂಮಿಯಲ್ಲಿರುವ ಆನಂದವೆಲ್ಲವೂ ನಿನ್ನ ಆನಂದದ ಲೇಶಲೇಶಭಾಗಗಳು. (ಸ ಏಕೋಮಾನುಷ ಆನಂದಃ—ಎಂದು ಮೊದಲಾದ ಶ್ರುತಿಯ ಅರ್ಥವು ಇಲ್ಲಿ ಪ್ರತಿಪಾದಿಸಲ್ಪಟ್ಟಿದೆ.) ॥೩೧॥

ಓ ಪರಶಿವ, ನಿನ್ನನ್ನು ತರ್ಕದಿಂದ ತರ್ಕಿಸಲಸಾಧ್ಯವು. ಶಬ್ದಗಳಿಂದ ವಿಚಾರಿಸಲಸಾಧ್ಯವು, ತಂತ್ರಗಳೂ ನಿನ್ನನ್ನು ವಿಮರ್ಶಿಸಲಾರವು, ಚರ್ಮಚಕ್ಷುಸ್ಸಿನಿಂದ ನಿನ್ನನ್ನುನೋಡಲೂ ಸಾಧ್ಯವಿಲ್ಲ, ಮನಸ್ಸಿನಿಂದ ಊಹಿಸಲೂ ಆಗಲಾರದು.

ಯತಃ ಶಬ್ದೋ ವಾಗ್ಭೂರ್ಮನವಚನದೂರೇ ತ್ವಮಸಿ ದೃಕ್
ನ ವೈ ಜಾತಂ ಕಿಂಚಿನ್ನ ಚ ಭವತಿ ಸಂಪ್ರತ್ಯಪಿ ಭವತ್ ।
ನ ವೈ ಕಾರ್ಯಂ ತಸ್ಯ ಪ್ರಭುರಣುರಪಿ ಸ್ಥೂಲಮಸಿ ನ
ನ ರೂಪಂ ತ್ವಗ್ಗಂಧೋ ನ ರಸರಸನಾ ವಾಪಿ ಭಗರ್ವ ॥೩೩॥

ತ್ವಮಾತ್ಮಾ ಸ್ವೇ ಧಾಮ್ನಿ ಸ್ಥಿತ ಇವ ವಿಭಾಸೀದಮಖಿಲಂ
ನ ಚೋಪಾಧಿಭೂರ್ತಾನ್ಯಖಿಲತನವಃ ಕಲ್ಪಿತಧಿಯಾ ।
ಮಹಾವಿದ್ಯಾಮೋಹಾದ್ವಿವಿಧತರಶಾಸ್ತ್ರಸ್ಯ ವಿಷಯಂ
ಅವಿದ್ಯಾವತ್ಸರ್ವಂ ಭವತಿ ತ್ವಯಿ ದೃಷ್ಟೇ ಪರತರೇ ॥೩೪॥

ತದೇತತ್ತ್ವಂ ಚಾಪಿ ತ್ವಮಹಮಿತಿ ದೃಶ್ಯಂ ಚ ನ ಹಿ ದೃಕ್
ಅಖಂಡೇ ಪಿಂಡಾಂಡಪ್ರಭವವಿಹಿತೇ ಬುದ್ಧಿಕರಣೇ ।

ತರ್ಕಗಳು ಅವರ ಮನೋವೃತ್ತಿಗನುಸಾರವಾಗಿ ಆಗುವುವು. ಆದುದರಿಂದ ಮನಸ್ಸಿಗೂ ನಿಲುಕದ ನಿನ್ನನ್ನು ತರ್ಕವೂ ಶಬ್ದಗಳೂ ತಿಳಿಸಲಾರವೆಂದು ಮಹಾ ವೇದಾಂತಿಗಳು ಹೇಳುವರು. ॥೩೨॥

ಓ ಭಗವಂತ, ಪರಮಾತ್ಮನಾದ ನಿನ್ನನ್ನು ವಾಕ್ಕೂ ಮನಸ್ಸೂ ಗ್ರಹಿಸಲಾರವು. ಹೀಗಿರಲು ಕಣ್ಣು ಹೇಗೆ ಗ್ರಹಿಸೀತು? ಮಿಕ್ಕ ಇಂದ್ರಿಯಗಳು ಹೇಗೆ ಗ್ರಹಿಸಿಯಾವು? ಇಂದ್ರಿಯಗಳು ಗ್ರಹಿಸುವಂಥಹ ರೂಪವಾಗಲೀ, ಗಂಧವಾಗಲೀ, ಸ್ಪರ್ಶವಾಗಲೀ, ಶಬ್ದವಾಗಲೀ ನಿನ್ನಲ್ಲಿಲ್ಲ. ನೀನು ಅಣುವೂ ಅಲ್ಲ. ಸೂಕ್ಷ್ಮವೂ ಅಲ್ಲ, ನೀನು ವ್ಯಾಪಕನು, ನಿರ್ಗುಣನು, ನಿರಾಕಾರನು. ॥೩೩॥

ಪರಮಾತ್ಮನಾದ ನೀನೇ ಜನಗಳ ಆತ್ಮನಾಗಿ ಜಗತ್ತೆಲ್ಲವನ್ನೂ ಮಾಯೆಯಿಂದ ಬೆಳಗುತ್ತಿರುವೆ. ನಿನಗೆ ಆಧಾರವಾದ ಶರೀರಗಳೂ, ಅಸತ್ಯವಾದುವು, ಅವಿದ್ಯೆಯಿಂದ ಜನರು ನಿನ್ನನ್ನು ಅನೇಕ ರೀತಿಯಾಗಿ ತರ್ಕಿಸಿ ಶಾಸ್ತ್ರಾರ್ಥವನ್ನು ಮಾಡುವರು. ನಿನ್ನ ಸಾಕ್ಷಾತ್ಕಾರವಾದೊಡನೇ ಆ ಕುತರ್ಕಗಳೆಲ್ಲವೂ ಅವಿದ್ಯೆಯಂತೆ ಅಡಗುವುವು. ॥೩೪॥

ಕೊನೆಯಲ್ಲಿ ದೃಶ್ಯ (ದೃಷ್ಟಿಗೆ ವಿಷಯವೂ ಇಲ್ಲ. ದೃಷ್ಟಿಯೂ ಇಲ್ಲ) ಬೇರೆ, ದೃಷ್ಟಿ ಬೇರೆಯೆಂದು ಭೇದವು ಬಂದು ಅವ್ಯವಸ್ಥೆಯಾಗುವುದು, ಭೇದ

ತತೋ ಜಾತಂ ಶಾಸ್ತ್ರಂ ತವ ಶಿವದಬೋಧೇ ಕಥಮಿದಂ
ಜಡಂ ಚೇತೋ ವಾಗ್ಭಿಃ ಪ್ರತಿಪದವಿಮೃಶ್ಯಂ ಭವಶತೈಃ ॥೩೫॥

ಕುತರ್ಕೈರ್ನಾನೇವ ಪ್ರಭವಸಿ ಹಿ ಭಕ್ತ್ಯೈವ ಸುಕರಃ ॥೩೬॥

ಶ್ರದ್ಧಾಂತೇ ಶ್ರುತಿರಾಹ ಸೌಮ್ಯಪುರುಷೇತ್ಯೇತತ್ಪರೇ ನಿರ್ಗುಣೇ
ಸಾಂಬೇ ರೂಪಗುಣೈಕವಾಗ್ವಿಷಯಕೇ ನಾಮ್ನ್ಯರ್ಚನೇ ವಾ ತ್ವಯಿ ।
ಪ್ರಾರಬ್ಧಾಂತಿಮಸಂಭವೇನ ಹಿ ಯಥಾ ಯೋಽಯಂ ಚಕಾಸ್ತೇ ಯಥಾ
ಯಾವಚ್ಚಾಪ್ಯಧಿಕಾರಸಾಧನಪದಂ ತಸ್ಯ ತ್ವಮಾತ್ಮಾ ಸದಾ ॥೩೭॥

ಕುಟಿಲಜಟಿಲಶಬ್ದತರ್ಕಜಾಲೈಃ ಶ್ರುತಿಹರಿಣೀಂ ಭಷಂತಿ ವಾಕ್ಶ್ವಮಾಸ್ತೇ ।
ಗುಣಗಣವಿಹಿತಾಶ್ಮನಾಂ ಗಣಾಸ್ತೇ ತವ ಭಕ್ತ್ಯಾ ರಹಿತಾಹ್ಯಬುದ್ಧಬೋಧಾಃ ॥೩೮॥

ಮಿಥ್ಯಾಜಗದ್ಮೃಗಭವಾಃ ಪ್ರತಿಕಲ್ಪಮೇವಂ
ಮೂಢಾ ಗುಣಪ್ರಭವತೋ ಮುನಯೋಽಪಿ ಚಾಂಧಾಃ ।

ವಿರುವವರೆಗೂ ಮುಕ್ತಿಯಿಲ್ಲ, ಆ ಭೇದಬುದ್ಧಿಯಿಂದಲೇ ಅಜ್ಞಾನಿಗಳು ಇಲ್ಲದ ಅರ್ಥಗಳನ್ನು ಹೇಳಿ ಶಾಸ್ತ್ರಾರ್ಥವನ್ನು ಮಾಡುವರು. ವಾಕ್ಕು ತರ್ಕಗಳಿಂದ ನೂರಾರು ಜನ್ಮಗಳ ವರೆಗೆ ವಿಚಾರಮಾಡಿದರೂ ನಿನ್ನ ಸ್ವರೂಪವು ತಿಳಿಯಲಾರದು. ಭಕ್ತಿಯಿಂದ ಸುಲಭವಾಗಿ ನಿನ್ನನ್ನು ಪಡೆಯಬಹುದು. ||೩೫-೩೬||

ಇಂತಹ ನಿರ್ಗುಣಬ್ರಹ್ಮನಾದರೂ ನಿನ್ನನ್ನು ಪಾರ್ವತೀಪತಿ, ಶಿವ ಮೊದಲಾದ ಹೆಸರುಳ್ಳ, ನಾನಾರೂಪವುಳ್ಳ ಸಗುಣರೂಪನನ್ನಾಗಿ ಪೂಜಿಸಬಹುದೆಂದೂ ಶ್ರುತಿಯು ಹೇಳುವುದು. ಮನುಷ್ಯನು ಎಷ್ಟೇ ವಿರಕ್ತನಾಗಿದ್ದರೂ ಅವನ ಪ್ರಾರಬ್ಧ ಕರ್ಮಕ್ಷಯಿಸುವವರೆಗೂ ಪರಮಮುಕ್ತಿಯನ್ನು ಪಡೆಯುವುದಿಲ್ಲ. ಪ್ರಾರಬ್ಧಕರ್ಮವು ಕ್ಷಯಿಸಿದ ಮೇಲೆ ಮುಕ್ತನಾಗಿ ಪರಮಾತ್ಮನಾಗುವನು. ||೩೭||

ಭೇದವಾದಿಗಳೆಂಬ ಶುನಕಗಳು ಕುಟಿಲವಾದ ತರ್ಕಗಳಿಂದ ಶ್ರುತಿಯೆಂಬ ಜಿಂಕೆಯನ್ನು ವಿಪರೀತವಾಗಿ ಕಚ್ಚಿ ಬಗಳುವುವು. ನಿನ್ನ ಭಕ್ತಿಯಿಲ್ಲದೇ ಜ್ಞಾನವಿಲ್ಲದೇ ಕೊನೆಗೆ ಅಜ್ಞಾನಕೂಪದಲ್ಲಿ ಬೀಳುವುವು. ಎಂದಿಗೂ ಅವುಗಳಿಗೆ ಸುಖದೊರೆಯಲಾರದು. ||೩೮||

ಜಗತ್ತೆಲ್ಲವೂ ಅಸತ್ಯವಾದುದು, ಪ್ರತಿಕಲ್ಪದಲ್ಲಿಯೂ ಮೂಢರಾದ ಜನರು ಜನಿಸಿ ಜಗತ್ತು ಸತ್ಯವೆಂದು ಭೇದವಾದಿಗಳಾಗುವರು, ಕೆಲವರು ಮುನಿಗಳೂ

ಶಾಸ್ತ್ರಾಣಿ ತನ್ವತ ಜಗತ್ಪರಿವಂಚಕಾಸ್ತೇ
ಪೂರ್ವಾಪರೋರುವಚನೈಃ ಸ್ವಧಿಯೈವ ಮುಗ್ಧಾಃ ॥೩೯॥

ತಸ್ಮಾತ್ತ್ವಾಂ ಪರಿವಂಚಸೇಽದ್ಯ ಭಗವನ್ ನಾನಾರ್ಥಶಾಸ್ತ್ರಭ್ರಮೈಃ
ಮಿಥ್ಯಾವರ್ಣನಿಬಂಧನಾಶ್ರಮಗಣಶ್ರಾಂತಾನ್ ವಿತರ್ಕೇ ರತಾನ್ ।
ತಾಂಸ್ತಾಂಸ್ತದ್ಭವಭಾವಬೋಧಸಹಿತಾನ್ ಸ್ವರ್ಗಭ್ರಮೇ ದುಃಖಿತಾನ್
ಯಾತಾಯಾತಶತೇಷು ದುಃಖಭವನೇ ಯಾಮ್ಯೇ ಚ ದುಃಖೋತ್ಕಟಾನ್
॥೪೦॥

ಸ್ವಮತಿಮತಿಕೃತಂ ವಿತಸ್ತಶಾಸ್ತ್ರಂ
ನಿಂದಂತ್ಯನಿಶಂ ವಿಹಾಯ ವೇದಾನ್ ।
ನವಮಾಯಾಮಯಪಾಶಬದ್ಧಕೋಶಾಃ
ಫಲಜಾಲೇಷು ವೃಥೈವ ವರ್ಧಿತಾಶಾಃ ॥೪೧॥

ಅಶನವಸನಮಾತ್ರಸಾಭಿಲಾಷಾ ।
ಭ್ರಮತೋಽನ್ಯೋಽನ್ಯಮುಪಾಸಕಾಂಶ್ಚ ಭಂಡಾಃ ।
ಗುಣಖಂಡಹೃದಾ ವದಂತಿ ಯುದ್ಧೈ
ರ್ಮಧುಮಾದ್ಯನ್ಮಧುಪಾ ಯಥೈವ ಭಂಡಾಃ ॥೪೨॥

ಅಜ್ಞಾನಿಗಳಾಗಿ ತಮ್ಮ ಅಲ್ಪಬುದ್ಧಿಯಿಂದ ಭೇದಶಾಸ್ತ್ರಗಳನ್ನು ಕಲ್ಪಿಸುತ್ತಾ ಜಗತ್ತನ್ನೇ ವಂಚಿಸುತ್ತಿರುವರು. ॥೩೯॥

ಓ ಭಗವಂತ, ಅವರೆಲ್ಲರನ್ನೂ ಮಾಯೆಯಿಂದ ನೀನೇ ವಂಚಿಸುವೆ. ಅವರು ನಾನಾ ಬಗೆಯ ಭೇದಶಾಸ್ತ್ರಗಳನ್ನು ರಚಿಸುವಂತೆಯೂ, ವರ್ಣಾಶ್ರಮಗಳ ಗೊಂದಲಿಯಲ್ಲಿ ಆಯಾಸಪಡುವಂತೆಯೂ, ಸ್ವರ್ಗಭ್ರಾಂತಿಯಿಂದ ಕರ್ಮಮಾಡುವಂತೆಯೂ, ನರಕದಲ್ಲಿ ಬೀಳುವಂತೆಯೂ, ಪುನಃ ಪುನಃ ಜನ್ಮಗಳನ್ನೆತ್ತುವಂತೆಯೂ ಮಾಡುವವನು ನೀನೇ. ಅದಕ್ಕೆಲ್ಲಾ ಅಜ್ಞಾನವೇ ಕಾರಣ. ॥೪೦॥

ಅಜ್ಞಾನಿಗಳು ಮಾಯಾಪಾಶಕ್ಕೆ ಸಿಕ್ಕಿಬಿದ್ದು ನಾನಾ ಬಗೆಯ ಭೇದಶಾಸ್ತ್ರಗಳನ್ನು ಕಲ್ಪಿಸಿ ವೇದಗಳ ಮಾರ್ಗವನ್ನು ಬಿಟ್ಟು, ಅಭೇದವಾದವನ್ನು ನಿಂದಿಸುತ್ತಾ ನಾನಾ ಬಗೆಯ ಸಂಸಾರ ಸುಖಗಳ ಆಸೆಯಲ್ಲಿ ಮಗ್ನರಾಗುವರು. ॥೪೧॥

ಅಶನವಸನಗಳಿಗಾಗಿ ಒಬ್ಬರನ್ನೊಬ್ಬರಾಶ್ರಯಿಸುತ್ತಾ ಅಸ್ವತಂತ್ರತೆಯಿಂದ

ಕೇಚಿನ್ಮುಂಡಾಃ ಕುಟಿಲಜಟಿಲಾಶ್ಚ ಕೃತಸ್ನಾತಸ್ತಥಾನ್ಯೇ
ನಗ್ನಾ ಬೌದ್ಧಾಃ ಶ್ರಮಣನಿಚಯಾಸ್ತುಂಗಲಿಂಗಂ ವಹಂತಃ ।
ವಿಪ್ರಾವರ್ಣಾಶ್ರಮಭರಾಃ ಹಿಂಸಯಾಸ್ವರ್ಗಕಾಮಾಃ
ಕಾಮಾರಾತೌ ವಿಮುಖಹೃದಯಾ ಜ್ಞಾನಹೀನಾ ಭ್ರಮಂತಿ ॥೪೩॥

ತುರಂಗಾ ಮೋಹಾಂಧಾ ಮರುಜಲಧಿಬುದ್ಧ್ಯಾತಪತಪಾಃ
ಯಥಾ ಧಾವಂತೀಶ ಪ್ರಶಿಥಿಲಧಿಯಾತರ್ಷಿತಜಲಾಃ ।
ತಥೇಮೇ ಮೋಹಾಂಧಾ ಹೃದಯದಹರೇ ತ್ವಾಮಧಿವಸ
ದ್ಧ್ರುವಂತಂ ಹಿತ್ವೈವ ಪ್ರಭವಮರಣೈರ್ಭ್ರಾಂತಿವಶಗಾಃ ॥೪೪॥

ಅಭೇದ್ಯಂ ಭೇದ್ಯೇಷು ಪ್ರಕಟತರಹೃತ್ಪದ್ಮಸದನ
ಮವಿಜ್ಞಾತಂ ಜ್ಞಾತಂ ನಿರವಧಿಲಸಚ್ಚಿತ್ಸುಖವಪುಃ ।

ಜೀವಿಸುವರು, ಮತ್ತೆ ಕೆಲವರು ಪುಷ್ಪರಸಕ್ಕೆ ಹೊಡೆದಾಡುವ ದುಂಬಿಗಳಂತೆ ಭಂಡರಾಗಿ ಪರಸ್ಪರಕಾದಾಡುವರು. ॥೪೨॥

ಕೆಲವರು ತಲೆಬೋಳಿಸಿದ ಸನ್ಯಾಸಿಗಳಾಗಿಯೂ, ಕೆಲವರು ಜಟಾಧಾರಿಗಳಾಗಿಯೂ, ಕೆಲವರು ಬೌದ್ಧರಾಗಿಯೂ, ಕೆಲವರು ದಿಗಂಬರರಾಗಿಯೂ, ಕೆಲವರು ಶ್ರಮಣರಾಗಿಯೂ, ಕೆಲವರು ಭಾರವಾದ ಲಿಂಗವನ್ನು ಧರಿಸುವ ಲಿಂಗಾಯತರಾಗಿಯೂ, ಕೆಲವರು ವರ್ಣಾಶ್ರಮ ಕ್ರಮದಂತೆ ಇದ್ದು ಪಶುಹಿಂಸೆಯಿಂದ ಸ್ವರ್ಗವನ್ನು ಪಡೆಯಲಾಸೆಯುಳ್ಳವರಾಗಿಯೂ, ಇದ್ದು ಕಾಮವೈರಿಯಾದ ನಿನ್ನಲ್ಲಿ ಆಸಕ್ತಿಯಿಲ್ಲದವರಾಗಿ ಅಜ್ಞಾನದಿಂದ ಭ್ರಮಿಸುವರು. ವ್ಯರ್ಥವಾಗಿ ಕಾಲಕಳೆಯುವರು. ॥೪೩॥

ಜಿಂಕೆಗಳು ನೀರಡಿಕೆಯಿಂದ ಮೂಢವಾಗಿ ಬಿಸಿಲ್ಗುದುರೆಯನ್ನೇ ನೀರಿನ ಪ್ರವಾಹವೆಂದು ತಿಳಿದು ಆದನ್ನನುಸರಿಸಿ ಓಡುವಂತೆ, ಈ ಅಜ್ಞಾನಿ ಮಾನವರೂ ಸಹ ಭ್ರಾಂತಿಯಿಂದ ಅಸ್ಥಿರವಾದ ಸಂಸಾರಸುಖಗಳನ್ನನುಸರಿಸಿ ಧ್ಯಾನಿಸುತ್ತಾ, ತಮ್ಮ ಹೃದಯದಲ್ಲೇ ನೆಲಸಿರುವ ನಿನ್ನನ್ನು ಮರೆತುಬಿಡುವರು. ಮಾಯಾಮೋಹವೆಂಬುದೇ ಅಂತಹುದು. ॥೪೪॥

ಭಿನ್ನವಾಗುವ ವಸ್ತುವಿನಲ್ಲಿಯೂ ನೀನು ಅಭೇದ್ಯನಾಗಿರುವೆ, ಜನಗಳ ಹೃದಯಮಂದಿರದಲ್ಲಿ ಪ್ರಕಾಶಿಸುವೆ, ಅಜ್ಞಾನಿಗಳಿಗೆ ನೀನು ತಿಳಿಯದವನು. ಜ್ಞಾನಿ

ಭವನ್ಮಾಯಾಮೋಹಾದ್ಭ್ರಮತಿ ಪರಮಾನಂದಮಖಿಲಂ
ಜಗಲ್ಲೋಕಾಲೋಕಂ ಸಸುರನರತಿರ್ಯಗ್ಗತಧಿಯಂ ॥೪೫॥

ನಾಹಂ ನ ತ್ವಂ ನಚೇಮೇ ಭವ ಭವಭವಂ ವೈ ಗತಭಯಂ
ಸದಾನಂದಂ ಸಾಂದ್ರಂ ವಿರಲಮಪಿ ಭೇದಂ ನ ಹಿ ಮನಾಕ್ ।
ಅಖಂಡಂ ಪಿಂಡಾಂಡಂ ನ ಚ ಭವತಿ ಕಾರ್ಯಂ ಚ ಕರಣಂ
ನ ಮೋಕ್ಷೋ ನೋ ಬಂಧೋ ಭವತಿ ಭವದಾಲೋಕನವಶಾತ್ ॥೪೬॥

ಅನುಭವಮಿದಮೇವ ವೇದವೇದ್ಯಂ
ಯದಿ ಹಿತ್ವಾನುಭವೇ ಭವೋದ್ಭವಾದ್ಯಂ ।
ಅನುಭವಶತಕೋತ್ಥಕರ್ಮಚಿತ್ರಂ
ನ ಹಿ ನಾಶಾಯ ಭವೇದ್ಭವೇಷು ತಸ್ಯ ॥೪೭॥

ಗಳು ನಿನ್ನನ್ನು ಆತ್ಮರೂಪದಿಂದ ತಿಳಿಯುವರು. ನೀನು ಅನಂತನೂ, ಜ್ಞಾನಸ್ವರೂಪನೂ, ಸತ್ಯಸ್ವರೂಪನೂ, ಆನಂದ ಸ್ವರೂಪನೂ ಆಗಿರುವೆ. ದೇವತೆಗಳು ಮಾನವರು ತಿರ್ಯಗ್ಜಂತುಗಳು ಇವುಗಳಲ್ಲೆಲ್ಲಾ ನೆಲಸಿರುವೆ, ಆದರೆ ಮಾಯೆಯಿಂದ ಯಾರೂ ನಿನ್ನನ್ನು ತಿಳಿಯಲಾರರು. ಅಸ್ಥಿರವಾದ ಸಂಸಾರ ಸುಖದೆಡೆಗೆ ಓಡುವರು. ಇಲ್ಲಿ "ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಂ" "ಸತ್ಯಂ ಜ್ಞಾನಮಾನಂದಂ ಬ್ರಹ್ಮ" ಎಂದು ಮೊದಲಾದ ಶ್ರುತಿಗಳ ಅರ್ಥವು ಪ್ರತಿಪಾದಿಸಲ್ಪಟ್ಟಿದೆ. ॥೪೫॥

ಓ ದೇವ, ಪರಮಾತ್ಮನಾದ ನಿನ್ನ ಸಾಕ್ಷಾತ್ಕಾರವನ್ನು ಹೊಂದಿ ನೀನೇ ಆದ ಮೇಲೆ ನಾನು ನೀನು ಇವರು ಎಂಬ ಭೇದವು ಇಲ್ಲವೇ ಇಲ್ಲ. ಕೇವಲ ಆನಂದಮಯವಾದ ಆತ್ಮಸ್ವರೂಪವೇ ಬೆಳಗುವುದು. ಈ ಬ್ರಹ್ಮಾಂಡದಲ್ಲಿ ಕಾರ್ಯಕಾರಣಗಳೂ ಇಲ್ಲ, ಬಂಧವಾಗಲೀ ಮೋಕ್ಷವಾಗಲೀ ಇಲ್ಲ. ॥೪೬॥

ಇಂತಹ ಆತ್ಮಾನುಭವವು ವೇದಾಂತದಲ್ಲಿ ಪ್ರತಿಪಾದಿತವಾಗಿದೆ. ಇದನ್ನರಿಯದೆ ನೂರೆಂಟು ಆಸೆಗಳಿಂದ ನೂರೆಂಟು ಕರ್ಮಗಳನ್ನು ಮಾಡುವವನಿಗೆ ಎಂದೆಂದಿಗೂ ಮುಕ್ತಿಯಿಲ್ಲ. ॥೪೭॥

ಶಾಂತಂ ವೇದವಚೋಭಿರೀಡಿತಪರಃ ಸ್ವಾಂತಂ ನಿಶಾಂತೇ ಸದಾ
ಚಿಂತಾಶಾಂತನಿತಾಂತಶಾಂತಮನಸಾ ಕೋಽಹಂ ಕಥಂ ನ್ವೈ ಜಗತ್ ।
ನಾನಾಸ್ತೀತಿ ವಿಚಾರ್ಯ ವೇದನಿವಹೈರ್ಮುಕ್ತಸ್ಸಮುಕ್ತೋ ಭವೇತ್
ತದ್ಧ್ಯಾನೇಽಪಿ ಚ ದುರ್ಬಲೋ ಯದಿ ಭವೇದ್ರೂಪಂ ತವ ಪ್ರೇಮುಕ್ತೈತ್ ॥೪೮॥

ಸ್ವಾಂತಂ ಶಾಂತಮನಂತಮವ್ಯಯಮುಮಾಕಾಂತಂ ಸದಾ ಚಿಂತಯೇತ್
ತೇನೈವಾಶು ವಿನಾಶಿತಾಘನಿಚಯೋ ಭೂಯಾತ್ಪ್ರಮೋದಾಧಿಕಃ ।
ಕಾಮಾರಾತಿಪದಾಂಬುಜಾರ್ಚನರತೋ ಭಸ್ಮಾಕ್ಷಧೃಙ್ಮುಕ್ತಯೇ
ಯಾವತ್ಕಾಯಮಪಾಯದಾಯಕಮಿದಂ ಕಾಮಸ್ಯ ಯತ್ಸಾಯಕೈಃ ॥೪೯॥

ಭೇದ್ಯಂ ವೇದ್ಯಶತೈಶ್ಚಿಕಿತ್ಸಿತವಯಃ ಪಾಕೈರುಪಾಯೈರಪಿ
ತಸ್ಮಾದೇತಮುಮಾಸಹಾಯಮಧುನಾ ಧ್ಯಾಯೇ ವಿನಾಶ್ಯಂ ಸದಾ ।
ಹಾಯಂ ಜನ್ಮವಿನಾಶಭೋಗರಹಿತೋ ಯಾವದ್ದೃಢಾಂಗಸ್ಸದಾ ॥೫೦॥

"ತತ್ತ್ವಮಸಿ" "ಅಹಂ ಬ್ರಹ್ಮಾಸ್ಮಿ" "ಸತ್ಯಂ ಜ್ಞಾನಮಾನಂದಂ ಬ್ರಹ್ಮ" ಮೊದಲಾದ ವೇದಾಂತ ವಾಕ್ಯಗಳಿಂದ ಪರಮಾತ್ಮನನ್ನು ವಿಚಾರಮಾಡಿ ಮನಸ್ಸಿನಲ್ಲಿ ಮನನ ಮಾಡಿ, ನಾನಾರು ? ಜಗತ್ತೆಂತಹುದು ? ಎಂದು ವಿಮರ್ಶಿಸಿ, ನಾನಾತ್ಮನು, ಜಗತ್ತು ಅಸತ್ಯವು ಎಂದನುಭವದಿಂದ ತಿಳಿದು ಮುಕ್ತನಾಗುವನು. ಹೀಗೆ ಮಾಡಲು ಅಶಕ್ತನಾದವನು ನಿನ್ನನ್ನು ಭಕ್ತಿಯಿಂದ ಧ್ಯಾನಿಸಿಯಾದರೂ ಕಾಲಕ್ರಮದಲ್ಲಿ ಸಮರ್ಥನಾಗಿ ಮುಕ್ತಿಯನ್ನು ಪಡೆಯಬಹುದು. ॥೪೮॥

ತನ್ನ ಆತ್ಮನೂ, ಶಾಂತನೂ, ಅಂತವಿಲ್ಲದವನೂ ಆದ ಉಮಾಕಾಂತನನ್ನು ಸದಾ ಚಿಂತಿಸಬೇಕು. ಅದರಿಂದ ಪಾಪವೆಲ್ಲವೂ ನಾಶವಾಗಿ ಮುಕ್ತಿಭಾಗಿಯಾಗುವನು. ಕಾಮವೈರಿಯಾದ ಶಿವನನ್ನು ಭಸ್ಮರುದ್ರಾಕ್ಷಧಾರಿಯಾಗಿ ಅರ್ಚಿಸಿದರೇ ಮುಕ್ತಿಯು. ಮಾನವ ದೇಹವು ಕ್ಷಣಿಕವಾದುದು. ॥೪೯॥

ಆದುದರಿಂದ ಈ ದೇಹವು ಮನ್ಮಥ ಬಾಣಕ್ಕೆ ಗುರಿಯಾಗಿ ರೋಗಕ್ಕೆ ತುತ್ತಾಗಿ ಮುಪ್ಪಿನಿಂದ ಶಿಥಿಲವಾಗಿ ಜೀರ್ಣವಾಗುವುದರೊಳಗೆ ಪಾರ್ವತೀಪತಿಯನ್ನು ಭಕ್ತಿಯಿಂದ ಧ್ಯಾನಿಸುವೆನು. ॥೫೦॥

ಧನಗಣಗಣನಾ ವಿನಾಶಕಾಲೇ ವಿಗುಣ್ಯೈವೇಹ ಸದಾ ಮುದಾಯ ದೇಹೇ ।
ಗಣಗಣವಿನತಂ ಯದಾ ಪ್ರಪದ್ಯೇ ತ್ರಿಗುಣಾತೀತಗುಣಸ್ತದಾ ಮುದಾಹಂ ॥೫೧॥

ಶರ್ವಾಣೀರಮಣಾರ್ಚನೇನ ಹಿ ಸದಾ ಪಾತಾದ್ಭಯಂ ಸ್ವರ್ಗತಃ
ಗರ್ವೇಣಾಪ್ಯುರುಖರ್ವಪಾತಕವರ್ಗೈಃ ಕಿನ್ನೋ ಮಯಾ ಸಂಸೃತೇಃ ।
ಮಯ್ಯಾನಂದಪಯೋನಿಧೌ ಸುರಸರಿತ್ಕೂಲಾಃ ಪ್ರಯಾಂತ್ಯೇವ ತೇ
ಶಂಭೋಶ್ಶಂಭುವ ಏವ ಪಾಪಕಮಲಾನೋದ್ಯೈಕಮಾದ್ಯಂ ಮನಃ ॥೫೨॥

ಇತಿ ಸಂತತಮಂತಕಾಂತಕಂ ವಿಮೃಶಂತಃ ಸ್ವಹೃದಾ ಪ್ರಕಾಶಮಾನಂ ।
ಶಮಿತೇತರಸಂಗಭಂಗತಃ ಸ್ವತ ಏವಾದ್ಯ ಭವಂತಿ ತೇಽಸಂಗಾಃ ॥೫೩॥

ಗರ್ಭೇ ರಸನ್ನಪಿ ಶುಕಸ್ಸ ತದಾ ಹಿ ಭರ್ಗಂ
ಸ್ವಾತ್ಮಾನಮೇವ ಕಲಯನ್ ಸ ಜಗಾಮ ಮುಕ್ತಃ
ಪಿತ್ರಾನುರಕ್ತಹೃದಯೇನ ಸ ಹೂತಿಮಾತ್ರಾತ್
ವ್ಯಾಸಾಯ ಸೋಽಪ್ಯಖಿಲಗಃ ಪ್ರದದೌ ಹಿ ವಾಚಂ ॥೫೪॥

ಇತಿ ಶ್ರೀಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ
ವಿಂಶೋಽಧ್ಯಾಯಃ

ಧನದಾಸೆಯು ಮಾನವನಿಗೆ ಯಾವಾಗಲೂ ಹಾನಿಕರವಾದುದು. ಪ್ರಮಥ ಗಣಗಳಿಂದ ಸೇವಿತನಾದ ಉಮಾಕಾಂತನನ್ನು ಧ್ಯಾನಿಸುವೆನು. ಅದರಿಂದ ನಾನು ಸಂಸಾರ ಬಂಧನವಿಲ್ಲದವನಾಗಿ ನಿರ್ಗುಣ ಬ್ರಹ್ಮನಾಗುವೆ, ಆನಂದಮಯನಾಗುವೆನು. ||೫೧||

ಗಿರಿಜಾಪತಿಯನ್ನರ್ಚಿಸಿದರೆ ನನಗೆ ಸ್ವರ್ಗದಿಂದ ನರಕಕ್ಕೆ ಬೀಳುವೆನೆಂಬ ಭಯವಿಲ್ಲ. ಪಾಪಗಳಿಂದ ಸಂಸಾರದಲ್ಲಿ ತೊಳಲುವೆನೆಂಬ ದುಃಖವಿಲ್ಲ. ಆಗ ಆನಂದಸಾಗರನಾದ ನನ್ನಲ್ಲಿ ಚಿಕ್ಕಚಿಕ್ಕ ಆನಂದಗಳೆಲ್ಲ ಸೇರುವುವು. ||೫೨||

ಹೀಗೆ ತಮ್ಮ ಹೃದಯದಲ್ಲಿ ಬೆಳಗುವ ಪರಮೇಶ್ವರನನ್ನು ಚಿಂತಿಸುವವರು ಸಂಸಾರದ ಸುಖದುಃಖಗಳ ಸಂಬಂಧವಿಲ್ಲದವರಾಗಿ ಮುಗ್ಧರಾಗುವರು.” ||೫೩||

ಹೀಗೆ ಗರ್ಭದಲ್ಲಿಯೇ ಜ್ಞಾನಿಯಾದ ಶುಕನು ಜನಿಸಿದ ಕೂಡಲೇ ವಿರಕ್ತಿ

ಯಿಂದ ವನಕ್ಕೆ ತೆರಳಿದನು. ಆಗ ತಂದೆಯಾದ ವ್ಯಾಸನು ಮಮತೆಯಿಂದ ಅವನನ್ನು ಕರೆಯಲು ಅವನಿಗೆ ಈ ತತ್ವಜ್ಞಾನವನ್ನು ಪ್ರಕಟಿಸಿದನು. ಎಂದು ಸ್ಕಂದಸ್ವಾಮಿಯು ಶುಕಮಹರ್ಷಿಯ ಜ್ಞಾನಬೋಧಕವಾದ ಇತಿಹಾಸವನ್ನು ಜೈಗೀಷವ್ಯನಿಗೆ ಶ್ರುತಪಡಿಸಿದನು. ||೫೪||

ಇಲ್ಲಿಗೆ ಶ್ರೀಶಿವರಹಸ್ಯದಲ್ಲಿ ಇಪ್ಪತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಏಕವಿಂಶೋಽಧ್ಯಾಯಃ

॥ ಸ್ಕಂದ ಉವಾಚ ॥

ಅಗಸ್ತ್ಯೋಽಪಿ ತದಾ ಜಜ್ಞೇಽಂಗುಷ್ಠಮಾತ್ರೋ ತದಾ ಮುನಿಃ ।
ಅವಿಮುಕ್ತಂ ಸಮಾಸಾದ್ಯ ಲೋಪಾಮುದ್ರಾಪತಿಸ್ತದಾ ॥೧॥

ಅಗಸ್ತ್ಯೇಶ್ವರಸಂಜ್ಞಂ ಚ ಪ್ರತಿಷ್ಠಾಪ್ಯ ಮಹೇಶ್ವರಂ ।
ಸಮರ್ಚಯನ್ ಬಿಲ್ವಪತ್ರೈಃ ಫಲಂ ಮೂಲಂ ನಿವೇದಯನ್ ॥೨॥

॥ ಅಗಸ್ತ್ಯ ಉವಾಚ ॥

ಸ್ತೌತಿ ದೇವಂ ಸದಾಕಾಲೇ ತತ್ಸ್ತುತಿಂ ಶೃಣು ಸತ್ತಮ ॥೩॥

ಇಪ್ಪತ್ತೊಂದನೆಯ ಅಧ್ಯಾಯ

ಎಲೈ ಜೈಗೀಷವ್ಯನೇ, ಈಗ ಅಗಸ್ತ್ಯನ ಕತೆಯನ್ನು ಹೇಳುವೆನು. ಅಗಸ್ತ್ಯನು ಜನಿಸುವಾಗ ಕೇವಲ ಹೆಬ್ಬೆರಳಿನಷ್ಟು ಗಾತ್ರ ಇದ್ದನು. ಆಗಿನಿಂದಲೇ ಆತನು ಪರಮ ಶಿವಭಕ್ತನಾಗಿದ್ದನು. ಲೋಪಾಮುದ್ರೆಯೆಂಬುವವಳು ಅಗಸ್ತ್ಯನ ಹೆಂಡತಿಯು. ॥೧॥

ಅಗಸ್ತ್ಯೇಶ್ವರನೆಂಬ ಹೆಸರಿನಿಂದ ಕಾಶೀಕ್ಷೇತ್ರದಲ್ಲಿ ಈಶ್ವರನನ್ನು ಪ್ರತಿಷ್ಠಾಪಿಸಿ ಬಿಲ್ವಪತ್ರಗಳಿಂದರ್ಚಿಸುತ್ತಾ ಹಣ್ಣುಹಂಪಲುಗಳನ್ನು ನಿವೇದಿಸುತ್ತಾ ಸದಾ ಆ ಮಹಾದೇವನನ್ನು ಸ್ತುತಿಸುವನು. ಅವನ ಶಿವಸ್ತುತಿಯನ್ನು ಕೇಳು, ಹೇಳುವೆನು. ॥೨॥

"ಓ ದೇವ, ನೀನು ಪರಮೇಶ್ವರನು ಎಂದು ರುದ್ರಸೂಕ್ತವು "ನಮಸ್ತೇ ರುದ್ರಮನ್ಯವೆ" ಮೊದಲಾದ ನಮಸ್ಕಾರಯುಕ್ತವಾದ ವಾಕ್ಯನಿಂದ ಸ್ತುತಿಸುವುದು.

ಪತಿಸ್ತ್ವಂ ಸರ್ವಸ್ಯ ಶ್ರುತಿಶಿರಸಿ ರುದ್ರಸ್ಯ ವಚಸಾ
ನಮೋವಾಕ್ಯೈರ್ವಕ್ತಿ ಪ್ರಮಥಪತಿಭಕ್ತಾಂಶ್ಚ ನಮಸಾ ।
ವದತ್ಯೇವಂ ವೇದಃ ಶಿವಹರಭವಾದ್ಯೈಶ್ಚ ವಚನೈಃ
ಕಥಂ ತ್ವನ್ಯೇ ತುಲ್ಯಾಃ ಪರಮಶಿವ ಶೇಷಾ ಹಿ ವಿಹಿತಾಃ ॥೪॥

ಯತೋ ಜಾತಾಸ್ಸರ್ವೇ ವಿಧಿಹರೀಂದ್ರಾರ್ಕಮರುತೋ
ದಿಶಾಂನಾಥಾ ರುದ್ರಾ ಗಿರಿನದಿಸಮುದ್ರಾ ಗ್ರಹಗಣಾಃ ।
ಯಮಧ್ಯಾಸ್ತೇ ವಿಶ್ವಂ ಸುರನರವರಂ ಕರ್ಮ ವಿವಿಧಂ
ಮಹಾಭೂತೈಶ್ಚಾಂತೇ ವಿಲಯತಿ ಮಹೇಶೇ ಶಿವತರೇ ॥೫॥

ಭುವನಗಗನಸಂಸ್ಥಂ ಕೋಶಕಾಶಂ ಮಹೇಶಂ
ಸಿತತರಮೃದುಕಾಯಂ ಕಲ್ಪಿತಂ ವೇದಸಂಘೈಃ ।
ದೃಢತರಯಮಿಚಿತ್ತಚ್ಛೇದಕಂ ವೇದಗಮ್ಯಂ
ವಿಲಯನಮಧುರಾದ್ಯೈಸ್ಸಚ್ಚಿದಾನಂದಶಬ್ದೈಃ ॥೬॥

ಮಿಕ್ಕವೇದಗಳೂ ಸಹ ನಿನ್ನನ್ನು ಶಿವ ಹರ ಭವ ಮೊದಲಾದ ಹೆಸರುಗಳಿಂದ ಸ್ತುತಿಸುವುವು. ಇಂತಹ ದೇವದೇವನಾದ ನಿನ್ನನ್ನು ಸಾಮಾನ್ಯಮಾನವನು ಸ್ತುತಿಸಲಾಪನೆ ? ॥೩-೪॥

ಬ್ರಹ್ಮ, ಹರಿ, ಇಂದ್ರ, ಸೂರ್ಯ, ವಾಯು, ದಿಕ್ಪಾಲಕ, ರುದ್ರ, ಗಿರಿ, ನದಿ, ಸಮುದ್ರ, ಗ್ರಹ ಇವರೆಲ್ಲರೂ ಪರಮೇಶ್ವರನಾದ ನಿನ್ನಿಂದಲೇ ಜನಿಸಿರುವರು. ನಿನ್ನಲ್ಲಿಯೇ ಇರುವರು. ಕೊನೆಗೆ ನಿನ್ನಲ್ಲಿಯೇ ಲಯವನ್ನೈದುವರು. ಎಂದು "ಯತೋ ವಾ ಇಮಾನಿ ಭೂತಾನಿ ಜಾಯಂತೇ, ಯೇನ ಜಾತಾನಿ ಜೀವಂತಿ, ಯತ್ಪ್ರಯಂತ್ಯಭಿ ಸಂವಿಶಂತಿ" ಎಂಬ ವೇದಾಂತವಾಕ್ಯವು ತಿಳಿಸಿರುವುದು. ॥೫॥

ನಿರಾಕಾರನಾಗಿ ಆಕಾಶದಂತೆ ಜಗತ್ತೆಲ್ಲವನ್ನೂ ವ್ಯಾಪಿಸಿರುವ, ಜನಗಳ ಹೃದಯದಲ್ಲಿ ಆತ್ಮರೂಪದಿಂದ ಬೆಳಗುತ್ತಿರುವ ಪರಮೇಶ್ವರನನ್ನು ವೇದಗಳು ಮಾಯಾಕಲ್ಪಿತವಾದ ಶುದ್ಧಸ್ಫಟಿಕದಂತಿರುವ ರೂಪವುಳ್ಳವನೆಂದು ಹೇಳುವುವು. ದೃಢವಾದ ಯೋಗಿಗಳ ಮನಸ್ಸಿನಲ್ಲಿ ಬೆಳಗುವ ಆ ದೇವನನ್ನು ವಿಲಯನ, ಮಧುರ, ಸತ್, ಚಿತ್, ಆನಂದ ಮೊದಲಾದ ಶಬ್ದಗಳಿಂದ ಹೇಳುವುವು. ॥೬॥

ಅಹಮಹಮಿತಿ ಸರ್ವಪ್ರತ್ಯಯಾತ್ಮಾನಮಾರಾತ್
ವಿಮೃಶಿತಕರಣಾನಾಮಜ್ಞಮಾನೇಹಿ ಸಾಮ್ಯಂ ॥೭॥

ಹಿರಣ್ಯಬಾಹುಂ ಸುಹಿರಣ್ಯಸಂದೃಶಂ
ಗೂಢಂ ಸದಾನಂದಘನಂ ಮಹೇಶಂ ।
ಪ್ರಿಯಂ ಪ್ರಿಯಾಣಾಂ ಚ ಸಬಾಹ್ಯಮಾಂತರಂ
ತಂ ವ್ಯೋಮಕೇಶಂ ಪರಮಂಚ ಕಂ ಚ ಖಂ ॥೮॥

ದೇವವಿಶಾಮಗಜಾಮನೋಹರಂ ಕಾರ್ಯಕಾರಣಪರಂಪರಾತತಂ ।
ವೃಕ್ಷಬೀಜಮಿವ ವೃಕ್ಷವಿಸ್ತರೈರೇಕಏವ ಭಗವಾನ್ ಬಹುತ್ವಧೃಕ್ ॥೯॥

ಅಹಂ, ಅಹಂ, ಅಂದರೆ ನಾನೇ ಪರಮಾತ್ಮ ಎಂದು ಅನುಭವಧಾರೆಯುಳ್ಳ ಜ್ಞಾನಿಗಳಿಗೆ ಪಂಡಿತ, ಜಡ, ಮಾನವ, ಪ್ರಾಣಿ,-ಇವರೆಲ್ಲರಲ್ಲೂ ಒಂದೇ ವಿಧದ ದೃಷ್ಟಿಯಿರುವುದು. ಎಲ್ಲರ ಆತ್ಮನೂ ಓರ್ವನೇ, ಭೇದವಿಲ್ಲ, ಎಂದು ಅವನು ಎಲ್ಲರಲ್ಲೂ ಆತ್ಮನನ್ನೇ ನೋಡುತ್ತಿರುವರು. ॥೭॥

ಸುವರ್ಣಮಯವಾದ ತೋಳುಗಳುಳ್ಳವನೂ ಸುವರ್ಣದೃಷ್ಟಿಯುಳ್ಳವನೂ ಅಂದರೆ ಸುವರ್ಣದಂತೆ ಸ್ವಪ್ರಕಾಶನೂ, ಎಲ್ಲರ ಹೃದಯದಲ್ಲಿ ನೆಲಸಿರುವವನೂ, ಅಜ್ಞಾನಿಗಳಿಗೆ ತಿಳಿಯದವನೂ, ಎಲ್ಲರಿಗೂ ಅತಿ ಪ್ರಿಯವಾದ ವಸ್ತುವೂ-(ಅಂದರೆ ತಾನೇ ಆತ್ಮ ಆತ್ಮನೇ ತಾನು, ತನ್ನಲ್ಲಿ ಎಲ್ಲರಿಗೂ ಪ್ರೀತಿಯಿರುವುದು ತನ್ನಲ್ಲಿ ಯಾರಿಗೂ ಪ್ರೀತಿಯಿಲ್ಲದಿರುವುದಿಲ್ಲ, ಏನು ಮಾಡಿದರೂ ತನಗೇ ಎಂದು ಮಾಡುವರು) ಆನಂದಸ್ವರೂಪನೂ, ಪರಮೇಶ್ವರನೂ, ಪ್ರಪಂಚದ ಒಳಗೂ ಹೊರಗೂ ಪ್ರಕಾಶಿಸುವವನೂ, ಆಕಾಶವೇ ತಲೆಗೂದಲುಗಳುಳ್ಳ ವಿರಾಟ್ಪುರುಷನೂ, ಸರ್ವೋತ್ತಮನೂ, ಆಕಾಶದಂತೆ ಸರ್ವವ್ಯಾಪಿಯೂ, ಸುಖಸ್ವರೂಪನೂ ಆದ ಪರಮಾತ್ಮನನ್ನು ಜ್ಞಾನಿಗಳು "ನಾನೇ" ಎಂದು ತಿಳಿಯುವರು. ॥೮॥

ಅಂತಹ ಪರಮಾತ್ಮನಾದ ಗಿರಿಜಾಪತಿಯಾದ ನೀನು ಕಾರ್ಯಕಾರಣರೂಪವಾಗಿ ನಿನ್ನಲ್ಲಿಯೇ ಪ್ರಪಂಚವನ್ನು ತೋರಿಸುವೆ. ಬೀಜವೊಂದೇ, ಮೊಳಕೆ ಚಿಗುರು ಗಿಡ, ಮರ ಕೊಂಬೆ ಎಲೆ ಕಾಯಿಹಣ್ಣು-ಮೊದಲಾದ ನಾನಾರೂಪವನ್ನು ಧರಿಸುವಂತೆ ಕಾರಣನಾದ ನೀನೋರ್ವನೇ ಅನೇಕ ರೂಪಗಳನ್ನೂ ಧರಿಸುವೆ. ॥೯॥

ಅಪಾರಮಿಾಶಾನಚರಿತ್ರಮೇತ
ತ್ಕಥಂ ಚ ವರ್ಣ್ಯಾಶ್ರಮುಖಾನಿಯಾಸ್ಮೃಸೇ ।
ರೂಪಾವಲೋಕೇಽಪಿ ಸರೂಪಭಾಗ್ಭವೇ
ತ್ತಥಾ ಸ್ವಭಕ್ತೈರ್ಲವಣಂ ಯಥಾಬ್ಧೌ ॥೧೦॥

ತಸ್ಮಿನ್ ತದಾ ತಪ್ಯಮಾನೇ ದೇವಾ ದೈತ್ಯೈಃ ಪರಾಜಿತಾಃ ।
ಜಿತ್ವಾ ದೇವಾನ್ ತತೋ ದೈತ್ಯಾಃ ಸಾಗರಂ ಸಮುಪಾವಿಶನ್ ॥೧೧॥

ಅದೃಷ್ಟಾಸ್ತೇ ತತೋ ದೈತ್ಯಾಃ ಪುರಸ್ತಸ್ಥುರುದಾಯುಧಾಃ
ಛಿದ್ರೇಷು ಪ್ರಹರಂತ್ಯೇವ ದೇವಾನ್ ದಿತಿಸಮುದ್ಭವಾಃ ॥೧೨॥

ತದೈವ ಗುರುಣೋದ್ಬುದ್ಧಾಸ್ಸಂಸ್ತುವಂಸ್ತೇ ಮಹೇಶ್ವರಂ ॥೧೩॥

॥ ದೇವಾ ಊಚುಃ ॥

ಭರ್ಗಭೀಮ ಭವಗರ್ವವಿನಾಶ
ಗರ್ವಪರ್ವತಸುತರ್ಜಕ ಶಂಭೋ ।

ಓ ಪರಮೇಶ್ವರ, ನಿನ್ನ ಮಹಿಮೆಯು ಅಪಾರವಾದುದು, ಭಕ್ತನೂ ನಿನ್ನನ್ನು ಆರಾಧಿಸಿ ನಿನ್ನೊಡನೆ ಐಕ್ಯವಾಗುವನು. ಉಪ್ಪುಸಮುದ್ರವನ್ನು ಸೇರುವ ನದಿಗಳು ಉಪ್ಪಿನ ಮಯವೇ ಆಗುವಂತೆ ನಿನ್ನ ಸ್ವರೂಪವಾಗುವನು." ॥೧೦॥

ಹೀಗೆ ಅಗಸ್ತ್ಯನು ಶಿವನನ್ನು ಸ್ತುತಿಸುತ್ತಾ ತಪಸ್ಸುಮಾಡುತ್ತಿದ್ದನು. ಆಗ ದೇವಲೋಕದಲ್ಲಿ ದೇವತೆಗಳಿಗೂ, ದೈತ್ಯರಿಗೂ ಯುದ್ಧವಾಗಿ ದೈತ್ಯರು ಗೆದ್ದು ಸಮುದ್ರವನ್ನು ಹೊಕ್ಕು ಮರೆಯಾದರು. ॥೧೧॥

ಸಮುದ್ರದಲ್ಲಿ ಮರೆಯಾಗಿರುತ್ತಾ ದೇವತೆಗಳಿಗೆ ಕಾಣದಂತೆ ಬಂದು ಅವರನ್ನು ಆಯುಧಗಳಿಂದ ಹೊಡೆಯುತ್ತಿದ್ದರು. ಮತ್ತು ನಾನಾರೀತಿ ಹಿಂಸಿಸುತ್ತಿದ್ದರು. ॥೧೨॥

ಆಗ ದೇವತೆಗಳು ಬೃಹಸ್ಪತಿಯಿಂದ ಎಚ್ಚರಿಸಲ್ಪಟ್ಟು ಎಲ್ಲರೊಡನೆ ಮಹಾದೇವನನ್ನು ಹೀಗೆ ಸ್ತುತಿಸಿದರು. ॥೧೩॥

ಪಾಪನಾಶಕನೂ, ಸಂಸಾರದುಃಖನಾಶಕನೂ, ಇಂದ್ರನ ಗರ್ವವನ್ನು ಮುರಿದವನೂ, ದೂರ್ವೆಯಿಂದ ಅರ್ಚಿಸಲ್ಪಡುವವನೂ, ಪ್ರಳಯಕಾಲದಲ್ಲಿ ಜಗತ್ತೆಲ್ಲ

ಶರ್ವ ಖರ್ವಹರಿಗರ್ವವಿನಾಶ
ದೂರ್ವಯಾರ್ಚಿತ ಮಹಾರ್ಣವಸಂಸ್ಥ ॥೧೪॥

ಉಮಾರಮಣ ಶಂಕರ ತ್ರಿದಶನಾಥ ವಿಶ್ವಾಧಿಕ
ತ್ರಿಯಂಬಕ ಸದಾಶಿವ ತ್ರಿಪುರಮಾರಸಂಶೋಷಕ ।
ವಿಲೋಕಯ ಭವಾಬ್ಧಿಗಂ ಪ್ರಮಥನಾಥ ಪೋತೋಭವ
ಪ್ರಸೀದ ಕರುಣಾರ್ಣವ ತರಣಿಪುತ್ರನಿವಾರಣ ॥೧೫॥

ಶಿವೇನ ಪ್ರೇಷಿತೋ ದೇವಾ ಘಟಜಂ ಪ್ರಾಪ್ಯ ತದ್ವದನ್ ।
ದೈತ್ಯಸಂಪೀಡನಂ ತಚ್ಚ ಸಾಗರೇ ತಸ್ಯ ವೇಶನಂ ॥೧೬॥

ದೈತ್ಯಾನಾಂ ಸಮುನಿಃ ಶ್ರುತ್ವಾ ಶಿವಧ್ಯಾನಾರ್ಚನೇ ರತಃ ।
ದೇವಾನಾಮುಪಕಾರಾಯ ದೈತ್ಯಾನಾಂ ನಿಧನಾಯ ಚ ॥೧೭॥

ಅಪಿಬತ್ಸಾಗರಂ ತತ್ರ ಪುನಸ್ಸಂಪ್ರಾರ್ಥಿತೋಽಸೃಜತ್ ॥೧೮॥

ಜಲಮಯವಾಗಿರಲು ಆ ಸಮುದ್ರದಲ್ಲಿ ಶಿಶುವಿನ ರೂಪದಿಂದ ವಟಪತ್ರದಲ್ಲಿ ಮಲಗಿರುವವನೂ ಆದ ಓ ಮಹಾದೇವ, ಪಾಲಿಸು. ॥೧೪॥

ಓ ಗಿರಿಜಾಕಾಂತ, ಓ ಶಂಕರ, ಓ ದೇವದೇವ, ಓ ಸರ್ವೋತ್ತಮ, ಓ ಮುಕ್ಕಣ್ಣನಾದ ದೇವ, ಓ ಮಂಗಳರೂಪನಾದ ಶಿವ, ಓ ತ್ರಿಪುರಾಸುರಮನ್ಮಥರನ್ನು ಸಂಹರಿಸಿದ ದೇವನೆ, ಓ ಪರಮೇಶ್ವರ, ಸೂರ್ಯಪುತ್ರನಾಶಕನೇ, ಸಂಸಾರ ದುಃಖ ಸಾಗರದಲ್ಲಿ ಮುಳುಗಿರುವ ನಮ್ಮನ್ನು ಉದ್ಧರಿಸು. ॥೧೫॥

ದೇವತೆಗಳ ಈ ಸ್ತುತಿಯಿಂದ ಪ್ರಸನ್ನನಾದ ಶಿವನು ಅವರನ್ನು ಅಗಸ್ತ್ಯನ ಬಳಿಗೆ ಕಳುಹಿಸಿದನು. ಆ ಮುನಿಗೆ ದೇವತೆಗಳು ದೈತ್ಯರು ಪೀಡಿಸುವುದನ್ನೂ ಸಮುದ್ರದಲ್ಲಿ ಆ ದುಷ್ಟರು ಮರೆಯಾಗಿರುವುದನ್ನೂ ತಿಳಿಸಿದರು. ॥೧೬॥

ದೇವತೆಗಳ ಆ ಮಾತನ್ನು ಕೇಳಿ ಶಿವಧ್ಯಾನವನ್ನು ಮಾಡುತ್ತಿದ್ದ ಆ ಅಗಸ್ತ್ಯನು ದೇವತೆಗಳ ಉಪಕಾರಕ್ಕಾಗಿಯೂ ರಾಕ್ಷಸರ ನಾಶಕ್ಕಾಗಿಯೂ ಸಾಗರವನ್ನು ಸಂಪೂರ್ಣವಾಗಿ ಕುಡಿದನು. ಆಗ ಮರೆಯಾಗಿದ್ದ ದೈತ್ಯರು ಸಿಕ್ಕಿದರು. ದೇವತೆಗಳು ಆ ದುಷ್ಟರನ್ನು ಸಂಹರಿಸಿದರು. ಆ ಮೇಲೆ ದೇವತೆಗಳು ಪುನಃ ಪ್ರಾರ್ಥಿಸಲು ಅಗಸ್ತ್ಯನು ಸಾಗರದ ನೀರೆಲ್ಲವನ್ನೂ ಬಿಟ್ಟನು. ॥೧೭-೧೮॥

ರಿಂಗತ್ತುಂಗತರಂಗಮುಹಾಕೋಲಾಹಲೋಲ್ಲಾಸಿ ಯತ್
ಸಂಪ್ರಾಪ್ಯ ತ್ರಿಪುರಾರಿಪಾದಭಜನಾದಂಗುಷ್ಠಮಾತ್ರೋ ಮುನಿಃ ॥೧೯॥

ದೈತ್ಯಾನಾಂ ನಿಧನಾಯ ಶಂಕರಕೃಪಾಪೀಯೂಷತೋಬಿಂ ।
ದುಮತ್ತಂ ಚೈವಾಂಬುಧಿಮಾಚಮಯ್ಯ ಸ ತದಾ ಚೋತ್ಸೃಷ್ಟವಾನ್
ಶುಕ್ಲತಃ ॥೨೦॥

ಆನಂದಕಾನನಮವಾಪ್ಯ ತತಾಪ ಹೃಷ್ಟೋ
ವಿಶ್ವೇಶ್ವರಾರ್ಚನರತಃ ಪರಿಪೂರ್ಣಕಾಮಃ ।
ವಿಂಧ್ಯೋನ್ನತಿಪ್ರಶಮನಾಯ ಸುರಾಸುರೌಘೈಃ
ಸಂಪ್ರಾರ್ಥಿತೋ ಹಿ ಜಗತಾಮುಪಕಾರಹೇತೌ ॥೨೧॥

ಈಶಾಜ್ಞಯಾ ಹಿ ಸ ತು ರುದ್ರಗಣೌಘಸಂಘೈಃ
ಸಂಸ್ತಾವಿತಸ್ತು ಯಯೌ ಗಿರಿವೃದ್ಧಿನಾಶಃ ।
ಸನ್ನಾಮಯಂ ಭುವಿಗತಂ ಶಿಖರೈಶ್ಚಕಾರ
ವಿಂಧ್ಯಂ ಮಹೋದ್ಧತಮಹೋ ದಿವಿಚಂದ್ರಸೂರ್ಯೌ ॥೨೨॥

ಬೆಟ್ಟಗಳಂತೆ ಮೇಲೆಮೇಲೇರಿ ಬರುತ್ತಲಿರುವ ಅಲೆಗಳುಳ್ಳ ಭಯಂಕರವಾದ ಮಹಾಸಾಗರವನ್ನು ಅಂಗುಷ್ಠಮಾತ್ರನಾದ ಅಗಸ್ತ್ಯಮುನಿಯು ಪರಮೇಶ್ವರನ ಅನುಗ್ರಹಬಲದಿಂದ ಸಂಪೂರ್ಣವಾಗಿ ಕುಡಿದನು. ಅದರಿಂದ ದೇವತೆಗಳಿಗೆ ಉಪಕಾರವೂ ದೈತ್ಯನಾಶವೂ ಆಯಿತು. ಆಮೇಲೆ ಸಾಗರವನ್ನು ಮೂತ್ರರೂಪದಿಂದ ಹೊರಗೆ ಬಿಟ್ಟನು. ॥೧೯-೨೦॥

ಆಮೇಲೆ ಅಗಸ್ತ್ಯಮುನಿಯು ಆನಂದಕಾನನವನ್ನು ಪಡೆದು, ಶಿವನನ್ನಾರಾಧಿಸುತ್ತಾ ತಪವನ್ನಾಚರಿಸಿದನು. ಆಪ್ತಕಾಮನಾದ ಅವನ ಸಮೀಪಕ್ಕೆ ಆ ದೇವತೆಗಳು ಆಗ ಬಂದು ಲೋಕೋಪಕಾರಕ್ಕಾಗಿ ಅತ್ಯುನ್ನತವಾದ ವಿಂಧ್ಯಗಿರಿಯ ಔನ್ನತ್ಯವನ್ನು ಇಳಿಸು ಎಂದು ಪ್ರಾರ್ಥಿಸಿದರು. ॥೨೧॥

ಪರಮೇಶ್ವರನಪ್ಪಣೆಯಂತೆ ರುದ್ರಗಣಗಳೂ ಸಹ ವಿಂಧ್ಯಗಿರಿಯ ಉನ್ನತಿಯನ್ನು ಇಳಿಸು ಎಂದು ಪ್ರಾರ್ಥಿಸಿದರು. ಆಗ ವಿಂಧ್ಯಗಿರಿಯು ಕೊಬ್ಬಿ ಆಕಾಶದವರೆಗೆ ಬೆಳೆದು ಸೂರ್ಯಚಂದ್ರರ ಗತಿಯನ್ನೂ ತಡೆದಿತ್ತು. ಜಗತ್ತು ಹಾಹಾಕಾರ

ರುಂಧಂತಮಂಬರಮಪಾರಮಹೇಂದ್ರಶೈಲ
ಮಧ್ಯಾಸಸಾದ ಶಿವಪಾದಯುಗಂ ಸ್ಮರನ್ ಸಃ ॥೨೩॥

ಇತಿ ಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇಽಗಸ್ತ್ಯಸಮುದ್ರ
ಪಾನವಿಂಧ್ಯೋದ್ಧತನಾಶನವರ್ಣನಂ ನಾಮ್ನೈಕವಿಂಶೋಽಧ್ಯಾಯಃ

ಪಡತೊಡಗಿತ್ತು. ಇಂತಹ ಕೊಬ್ಬಿದ ವಿಂಧ್ಯಗಿರಿಯನ್ನು ಅಗಸ್ತ್ಯನು ಕೆಳಗೆಡಹಿ ಶಿವನನ್ನು ಸ್ಮರಿಸುತ್ತಾ ಮಹೇಂದ್ರಗಿರಿಗೆ ಬಂದನು. ಎಂದು ಕುಮಾರಸ್ವಾಮಿಯು ಅಗಸ್ತ್ಯಮಹಾಮುನಿಯ ಮಹಿಮೆಯನ್ನು ವಿವರಿಸಿದನು. ॥೨೨-೨೩॥

ಇಲ್ಲಿಗೆ ಶ್ರೀಶಿವರಹಸ್ಯದಲ್ಲಿ ಚತುರ್ಥಾಂಶದಲ್ಲಿ ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ದ್ವಾವಿಂಶೋಽಧ್ಯಾಯಃ

॥ ಸ್ಕಂದ ಉವಾಚ ॥

ದಧೀಚೋಽಪಿ ಮಹಾಯೋಗೀ ಹರಭಕ್ತೋ ಜಿತೇಂದ್ರಿಯಃ ।
ಭಾರ್ಗವೋ ಧುಂಧುಮೂಕಾಖ್ಯಸ್ತಪಸ್ವೀ ದ್ಯುಮಣಿದ್ಯುತಿಃ ॥೧॥

ತಸ್ಯ ಪುತ್ರೋ ಭವೇದ್ವಿಪ್ರೋ ದಧೀಚೋ ಬಾಲ ಏವ ಹಿ ।
ಉಪನೀತಸ್ತದಾ ಪಿತ್ರಾ ವೇದಾನಪ್ಯಗ್ರಹೀತ್ತದಾ ॥೨॥

ಸ್ವಾಶ್ರಮೇ ನಿವಸಂಸ್ತತ್ರ ಶಿವಪಾದಾರ್ಚನೇ ರತಃ ।
ಶರ್ಯಾತಿಪುತ್ರೋ ಮೇಧಾವೀ ಕ್ಷುಪೋ ನಾಮ ಮಹಾಬಲಃ ॥೩॥

ಇಪ್ಪತ್ತೆರಡನೆಯ ಅಧ್ಯಾಯವು

ಎಲೈ ಜೈಗೀಷವ್ಯನೇ, ಜಿತೇಂದ್ರಿಯನೂ ಮಹಾಯೋಗಿಯೂ ಆಗಿದ್ದ ದಧೀಚನೆಂಬ ಮುನಿಯು ಶಿವಭಕ್ತಾಗ್ರೇಸರನು. ಅವನ ಕಥೆಯನ್ನು ಹೇಳುವೆನು. ಹಿಂದೆ ಮಹಾತಪಸ್ವಿಯೂ ಸೂರ್ಯನಂತೆ ತೇಜಸ್ವಿಯೂ ಆದ ಭಾರ್ಗವ ಗೋತ್ರದ ಧುಂಧುಮೂಕನೆಂಬ ಮುನಿಯಿದ್ದನು. ॥೧॥

ಆ ಧುಂಧುಮೂಕನ ಪುತ್ರನೇ ದಧೀಚನು. ತಂದೆಯು ಸಕಾಲದಲ್ಲಿ ಉಪನಯನಮಾಡಲು ಆ ದಧೀಚಕುಮಾರನು ಶೀಘ್ರದಲ್ಲಿ ವೇದಗಳೆಲ್ಲವನ್ನೂ ಅಧ್ಯಯನಮಾಡಿದನು. ಆಮೇಲೆ ನಿತ್ಯವೂ ಶಿವನನ್ನು ಪೂಜಿಸುತ್ತಾ ಆಶ್ರಮ ದಲ್ಲಿದ್ದನು. ॥೨॥

ಆ ದಧೀಚನಿಗೆ ಕ್ಷುಪನೆಂಬ ರಾಜಕುಮಾರನು ಸಹಾಧ್ಯಾಯಿಯಾಗಿದ್ದನು. ಅವನು ಸೂರ್ಯವಂಶದ ಶೂರರಾಜನಾದ ಶರ್ಯಾತಿಯ ಪುತ್ರನು. ॥೩॥

ಸೂರ್ಯವಂಶಸಮುತ್ಪನ್ನಃ ಪಿತ್ರಾಸೋಽಪ್ಯುಪನಾಯಿತಃ ।
ಸಹಾಧ್ಯಾಯ್ಯಭವತ್ತಸ್ಯ ದಧೀಚಸ್ಯ ಮುನೇಸ್ತದಾ ॥೪॥

ಸ ರಥೇನಾಜಗಾಮಾಶು ಪಿತ್ರಾ ತಸ್ಯಾನುಮೋದಿತಃ ।
ಜಗ್ರಾಹ ಸ ಮುನೇಃ ಪಾದೌ ಧುಂಧುಮೂಕಸ್ಯ ಸತ್ತಮಃ ॥೫॥

ಉವಾಚ ಪ್ರಾಂಜಲಿರ್ವಿಪ್ರಂ ಕ್ಷುಪೋ ನೃಪತನೂದ್ಭವಃ ॥೬॥

॥ ಕ್ಷುಪ ಉವಾಚ ॥

ಅಧೀಷ್ವ ಮಾಮಪಿ ಗುರೋ ತವ ಪುತ್ರೇಣ ಶಾಧಿ ಮಾಂ ।
ಬ್ರಹ್ಮಚರ್ಯೇಣ ಭವತಿ ನಿವತ್ಸ್ಯಾಮಿ ದ್ವಿಜೋತ್ತಮ ॥೭॥

ಓಮಿತ್ಯುಕ್ತೇಽಥ ಮುನಿನಾ ದಧೀಚೇನ ಸಹಾದರಾತ್ ।
ಉವಾಸ ನಿಯತಸ್ತತ್ರ ಕ್ಷುಪಃ ಕ್ಷತ್ರಿಯನಂದನಃ ॥೮॥

ಧನುರ್ವೇದಂ ಚ ಗಾಂಧರ್ವಂ ವೇದಾನ್ ವೇದಾಂಗಮೇವ ಚ ।
ಸರಹಸ್ಯಂ ಚ ಜಗ್ರಾಹ ಸದಧೀಚಸ್ತದಾ ಮುನೇ ॥೯॥

ಮೇಧಾವಿಯಾದ ರಾಜಕುಮಾರನು ತಂದೆಯ ಅನುಮತಿಯನ್ನು ಪಡೆದು ರಥವನ್ನೇರಿ ಧುಂಧುಮೂಕನ ಆಶ್ರಮಕ್ಕೆ ಬಂದು ಅವನಿಗೆ ನಮಸ್ಕಾರಮಾಡಿದನು. ಆಮೇಲೆ ಅವನು ಕೈಜೋಡಿಸಿ ವಿನಯದಿಂದ, ॥೫-೬॥

ಓ ಗುರುವೆ, ನಿನ್ನ ಮಗನೊಡನೆ ನನಗೂ ವಿದ್ಯೆಯನ್ನು ಹೇಳಿಕೊಡು. ಬ್ರಹ್ಮಚರ್ಯದಿಂದ ನಿನ್ನನ್ನು ಸೇವಿಸುತ್ತಾ ಇಲ್ಲಿಯೇ ನೆಲಸುವೆನು. ಎಂದು ಪ್ರಾರ್ಥಿಸಿದನು. ॥೭॥

ಆಗ ಧುಂಧುಮೂಕನು ಅವನನ್ನು ಅಂಗೀಕರಿಸಲು ಕ್ಷತ್ರಿಯಕುಮಾರನಾದ ಕ್ಷುಪನು ಬ್ರಹ್ಮಚರ್ಯದಿಂದಿದ್ದು ದಧೀಚನೊಡನೆ ಅಲ್ಲಿಯೇ ಅಭ್ಯಸಿಸತೊಡಗಿದನು. ॥೮॥

ಧನುರ್ವಿದ್ಯೆಯನ್ನೂ, ಸಂಗೀತವಿದ್ಯೆಯನ್ನೂ, ವೇದವೇದಾಂಗಗಳನ್ನೂ ಅವುಗಳ ರಹಸ್ಯವನ್ನೂ ದಧೀಚಕುಮಾರನೊಡನೆ ಅಭ್ಯಾಸಮಾಡಿದನು. ॥೯॥

ಧುಂಧುಮೂಕಾತ್ ದ್ವಿಜಶ್ರೇಷ್ಠಾದುಭಾವಪಿ ಮುದಾ ತದಾ ।
ವಿಪ್ರಕ್ಷತ್ರಕುಲೋತ್ಪನ್ನೌ ದಧೀಚಿಃ ಕ್ಷುಪ ಏವ ಚ ॥೧೦॥

ತದಾ ಗುರುಕುಲೇ ತತ್ರ ವರ್ತಮಾನೌ ಸವರ್ಣಿನೌ ।
ದಧೀಚಿಸ್ತತ್ರ ತನಯಂ ನೃಪಸ್ಯಾಹ ತದಾ ಹಸನ್ ॥೧೧॥

॥ ದಧೀಚಿರುವಾಚ ॥

ಭವಾನ್ ಸ್ನಿಗ್ಧಸ್ಸಹಾಧ್ಯಾಯೀ ಗುರುರ್ಭ್ರಾತಾಹಮೇವ ತೇ ।
ತ್ವಯಿ ಶಾಸತಿ ತದ್ರಾಜ್ಯಂ ತ್ವತ್ಪಿತುರ್ನೃಪನಂದನ ॥೧೨

ತದಾಜ್ಞಯಾ ಸಮೇಷ್ಯಾಮಿ ತ್ವತ್ತಃ ಪೂರ್ಣಮನೋರಥಃ ।
ಹಿರಣ್ಯಗೋಭಿರ್ವಾಸೋಭಿರ್ಧನಧಾನ್ಯೈರ್ಮುದಾನ್ವಿತಃ ॥೧೩॥

ಇತ್ಯುಕ್ತಂ ಸ ದಧೀಚಸ್ಯ ಶ್ರುತ್ವಾ ಪ್ರಾಹ ನೃಪಾತ್ಮಜಃ ॥೧೪॥

ಹೀಗೆ ಬ್ರಾಹ್ಮಣೋತ್ತಮನಾದ ಧುಂಧುಮೂಕಮುನಿಯಿಂದ ಆ ಕ್ಷತ್ರಿಯ ಬ್ರಾಹ್ಮಣಕುಮಾರರು ಬ್ರಹ್ಮಚರ್ಯದಿಂದಿರುತ್ತಾ ಸಕಲ ವಿದ್ಯೆಯನ್ನೂ ಅಭ್ಯಾಸ ಮಾಡಿದರು. ॥೧೦॥

ಆಗ ದಧೀಚಿಯು ಒಂದು ದಿನ ರಾಜಕುಮಾರನಾದ ಕ್ಷುಪನನ್ನು ಕುರಿತು ಮಂದಹಾಸವನ್ನು ಬೀರುತ್ತಾ ಹೀಗೆ ಕೇಳಿದನು. ॥೧೧॥

“ಎಲೈ ರಾಜಕುಮಾರ, ನೀನು ನನಗೆ ಸ್ನೇಹಮಯನಾದ ಸಹಾಧ್ಯಾಯಿ ಯಾಗಿರುವೆ. ನಾನು ನಿನಗೆ ನ್ಯಾಯದಿಂದ ಗುರುವೂ ಸಹೋದರನೂ ಆಗಿರುವೆನು. ಮುಂದೆ ನೀನು ರಾಜ್ಯವನ್ನಾಳುವಾಗ ನಿನ್ನ ಅರಮನೆಗೆ ಬರುವೆನು. ಆಗ ಬಹುಶಃ ನಿನ್ನಿಂದ ಸತ್ಕರಿಸಲ್ಪಟ್ಟು ಧನ ಹಸು ವಸ್ತ್ರಗಳಿಂದ ಪೂಜಿಸಲ್ಪಟ್ಟವನಾಗಿ, ಧನಧಾನ್ಯ ಗಳೊಡನೆ ನಮ್ಮಾಶ್ರಮಕ್ಕೆ ಬರುವೆನು. ಆಗ ನನ್ನನ್ನು ನೀನು ಗೌರವಿಸುವೆ ಯಲ್ಲವೆ ?” ॥೧೨-೧೩॥

ದಧೀಚಿಯ ಈ ಮಾತನ್ನು ಕೇಳಿ ಕ್ಷುಪಕುಮಾರನು ಹೀಗೆಂದು ನುಡಿದನು. ॥೧೪॥

ಭವತಾ ಚ ಸುಖಂ ದುಃಖಂ ಮಮತುಲ್ಯಂ ದ್ವಿಜೋತ್ತಮ ।
ತ್ವಯಾ ಶಾಸೇಹಮತುಲಂ ಸ್ಫೀತಂ ಜನಪದಂ ಪಿತುಃ ॥೧೫॥

ಯದುಕ್ತಂ ತತ್ತ್ವಯಾ ವಿಪ್ರ ತತ್ಕರ್ತಾಸ್ಮ್ಯವಿಚಾರಿತಂ ।
ಇತ್ಯನ್ಯೋನ್ಯಂ ಮುದಾ ಯುಕ್ತೌ ದಧೀಚಿಃ ಕ್ಷುಪ ಏವ ಚ ॥೧೬॥

ಊಷತುರ್ದ್ವಾದಶಾಬ್ದಾಂತೇ ತಸ್ಮಿನ್ ವಿಪ್ರಾಶ್ರಮೇ ತದಾ ।
ಅನುಜ್ಞಾಪ್ಯ ಯಯೌ ದತ್ವಾ ಲಬ್ಧಾನುಜ್ಞೋ ಗುರೋಸ್ತದಾ ॥೧೭॥

ಧುಂಧುಮೂಕಂ ದಧೀಚಸ್ಯ ಪಿತರಂ ನೃಪನಂದನಃ ।
ಗೋಭಿರ್ವಾಸೋಭಿರ್ಭೂಮ್ಯಾ ರಥೇಭಧನಧಾನ್ಯಕೈಃ ॥೧೮॥

ಸಂಪೂಜ್ಯ ಪ್ರಯಯೌ ತತ್ರ ಪಿತರಂ ಚ ದಧೀಚಿನಃ ।
ಆಲಿಂಗ್ಯ ಸಾಶ್ರು ಸಸ್ನೇಹಂ ಯಯೌ ಸನೃಪನಂದನಃ ॥೧೯॥

ಕದಾಚಿಲ್ಲಬ್ಧವಿದ್ಯಂ ತಂ ಪುತ್ರಂ ವೀಕ್ಷ್ಯಾಥ ಚಿಂತಯನ್
ಶರ್ಯಾತಿಃ ಕನ್ಯಕಾಮಿಷ್ಟಾಮುದ್ವಾಹ್ಯಾಥ ಸಸೂನವೇ ॥೨೦॥

ಎಲೈ ಮುನಿಕುಮಾರ, ನಿನ್ನ ಸುಖದುಃಖಗಳೇ ನನ್ನ ಸುಖದುಃಖಗಳು, ಮುಂದಾದರೂ ನಿನ್ನ ಸಲಹೆಯಂತೆಯೇ ಪಿತ್ರಾರ್ಜಿತವಾದ ರಾಜ್ಯವನ್ನಾಳುವೆನು. ನೀನು ಹೇಳಿದುದನ್ನು ಸಂಶಯವಿಲ್ಲದೆಯೇ ಈಡೇರಿಸಿಕೊಡುವೆನು. ॥೧೫॥

ಹೀಗೆ ಪರಸ್ಪರವಾಗಿ ಸ್ನೇಹದಿಂದಿರುತ್ತಾ ಆ ದಧೀಚನೂ ಕ್ಷುಪಕುಮಾರನೂ ಸಹ ಆ ಆಶ್ರಮದಲ್ಲಿ ಹನ್ನೆರಡು ವರ್ಷಗಳ ವರೆಗೆ ವಿದ್ಯೆಯನ್ನಭ್ಯಾಸಮಾಡಿ ವಿದ್ಯಾವಂತರಾದರು. ॥೧೬॥

ಆಮೇಲೆ ಕ್ಷುಪಕುಮಾರನು ಗುರುವಾದ ಧುಂಧುಮೂಕಮುನಿಗೆ ಗುರುದಕ್ಷಿಣೆಯಾಗಿ ಹಸುಗಳು, ವಸ್ತ್ರಗಳು, ಭೂಮಿ, ರಥ, ಆನೆ, ಧನಧಾನ್ಯ--ಇವುಗಳನ್ನು ಕೊಟ್ಟು ನಮಸ್ಕರಿಸಿ ಊರಿಗೆ ಹೋಗಲು ಅನುಮತಿಯನ್ನು ಬೇಡಿದನು. ಸಹಾಧ್ಯಾಯಿಯಾದ ದಧೀಚಿಯನ್ನು ಸ್ನೇಹದಿಂದ ಆಲಿಂಗಿಸಿ ದುಃಖದಿಂದ ಬೀಳ್ಕೊಂಡು ಊರಿಗೆ ಹಿಂತಿರುಗಿದನು. ॥೧೭-೧೮-೧೯॥

ವಿದ್ಯಾವಂತನಾಗಿ ತುಂಬುಯೌವನವುಳ್ಳವನಾಗಿ ಮನೆಗೆ ಬಂದಿರುವ ಮಗನನ್ನು ನೋಡಿ ಶರ್ಯಾತಿರಾಜನು ಅವನ ಮನಸ್ಸಿಗೆ ಒಪ್ಪಿದ, ಅಂಗರಾಜನ ಮಗಳಾದ

ಅಂಗಸ್ಯಾಯಂ ನೃಪಸ್ಯಾಥ ಮಾಲಿನೀಂ ನಾಮ ನಾಮತಃ ।
ಸರ್ವಲಕ್ಷಣಸಂಪನ್ನಾಂ ಶುಭೇ ಕಾಲೇ ನೃಪೋತ್ತಮಃ ॥೨೧॥

ದಧೀಚೋಽಪಿ ತದಾ ಪಿತ್ರಾ ಧುಂಧುಮೂಕೇನ ಲಕ್ಷಿತಃ ।
ಲಬ್ಧವಿದ್ಯೋಽಥ ಜಗ್ರಾಹ ಕನ್ಯಾಂ ವೈರೋಚನಸ್ಯ ಚ ॥೨೨॥

ಮುನೇರ್ಗರ್ಗಸ್ಯ ತನಯಾಂ ಮಿತ್ರಾಣೀಂ ನಾಮ ನಾಮತಃ ।
ಕೃತೋದ್ವಾಹೌ ದ್ವಿಜನೃಪೌ ಲಬ್ಧಪುತ್ರೌ ತದೋಷತುಃ ॥೨೩॥

ಭೂಭೃತ್ಕುಲೇ ವಿಪ್ರಕುಲೇ ದ್ವಿಜರಾಜಕುಮಾರಕೌ ।
ಪಿತರ್ಯುಪರತೇ ತೌ ಚ ತಪೋರಾಜ್ಯಪರಾಯಣೌ ॥೨೪॥

ಕದಾಚಿದಾಗಾನ್ನೃಪತಿಂ ವೀಕ್ಷಿತುಂ ಸದಧೀಚಕಃ ।
ಸಖಾ ಸ ನೃಪತೇಃ ಪುತ್ರಂ ಪ್ರಾಪ್ತರಾಜ್ಯಂ ತದಾ ಮುದಾ ॥೨೫॥

ಸಕಲ ಲಕ್ಷಣಗಳುಳ್ಳ ಮಾಲಿನಿಯೆಂಬ ಕನ್ಯೆಯನ್ನು ತಂದು ಶುಭಮುಹೂರ್ತದಲ್ಲಿ ಮದುವೆಮಾಡಿದನು. ||೨೦-೨೧||

ಇತ್ತ ಧುಂಧುಮೂಕನೂ ಸಹ ತನ್ನ ಪುತ್ರನಾದ ದಧೀಚನು ಯೌವನಶಾಲಿಯಾದುದನ್ನು ನೋಡಿ ಅವನಿಗೆ ಗರ್ಗಮುನಿಯ ಮಗಳಾದ ಮಿತ್ರಾಣಿಯೆಂಬ ಕನ್ಯೆಯನ್ನು ತಂದು ಸುಮುಹೂರ್ತದಲ್ಲಿ ಮದುವೆಮಾಡಿದನು. ||೨೨||

ಹೀಗೆ ಆ ಬ್ರಾಹ್ಮಣಕುಮಾರರಾಜಕುಮಾರರಾದ ದಧೀಚಕ್ಷುಪಕುಮಾರರೀರ್ವರೂ ಮದುವೆಯಾಗಿ ಆಶ್ರಮ ಮತ್ತು ಅರಮನೆಗಳಲ್ಲಿ ವಾಸಿಸುತ್ತಾ, ಕಾಲಕ್ರಮೇಣ ಪುತ್ರಸಂತಾನವನ್ನು ಪಡೆದರು. ಕೆಲವು ಕಾಲದ ಮೇಲೆ ಅವರೀರ್ವರ ತಂದೆಗಳೂ ಮೃತರಾಗಲು ದಧೀಚನು ತಪೋರಾಜ್ಯದಲ್ಲಿಯೂ ಕ್ಷುಪನು ತನ್ನ ರಾಜ್ಯದಲ್ಲಿಯೂ ಆಸಕ್ತರಾಗಿದ್ದರು. ||೨೩-೨೪||

ಆಮೇಲೊಂದುದಿನ ದಧೀಚಮುನಿಯು ತನ್ನ ಸ್ನೇಹಿತನಾದ ಕ್ಷುಪರಾಜನನ್ನು ನೋಡಲು ಅವನ ಅರಮನೆಗೆ ಬಂದನು. ||೨೫||

ದೃಷ್ಟ್ವಾ ಚ ಸ್ವವಯಸ್ಯಂ ತಂ ಕ್ಷುಪಃ ಪೂಜಾಮಥಾತನೋತ್ ।
ವಿಷ್ಟರೇಣಾರ್ಘ್ಯಪಾದ್ಯೇನ ಗಾಮನುಜ್ಞಾಪ್ಯ ತಂ ತದಾ ॥೨೬॥

ಊಷತುರ್ಮುದಿತೌ ತತ್ರ ತಸ್ಮಿನ್ ನೃಪವರಾಲಯೇ ।
ಪ್ರಾಪ್ತರಾಜ್ಯಂ ಚ ನೃಪತೇಃ ಪುತ್ರಮಾಹ ರಹೋಗತಃ ॥೨೭॥

ದಧೀಚಿಸ್ತಪಸಾಂ ವರ್ಯಸ್ತಪಸಾಮುಲಭೋ ಮುನಿಃ ॥೨೮॥

॥ ದಧೀಚಿರುವಾಚ ॥

ಸಖೇ ತಪೋವನೇ ಪೂರ್ವಂ ಪಿತುರುಕ್ತಂ ತ್ವಯಾ ತದಾ ।
ಕಿಮದ್ಯ ಸ್ಮರಸೇ ರಾಜನ್ ಆವಯೋಃ ಪ್ರಸಭಂ ವಚಃ ॥೨೯॥

ತತ್ತಥ್ಯಂ ಕುರು ಮಾಹಾಸೀಃ ಸರ್ವೇ ಸತ್ಯೇ ಪ್ರತಿಷ್ಠಿತಾಃ ।
ಲೋಕಾ ಬ್ರಹ್ಮಾದಯೋ ದೇವಾಶ್ಶುಕ್ರಾದಿತ್ಯಾಸ್ಸಚಂದ್ರಕಾಃ ॥೩೦॥

ತನ್ನ ಸ್ನೇಹಿತನು ಬಂದುದನ್ನು ನೋಡಿ ಕ್ಷುಪನು ಆಸನದಿಂದೆದ್ದು ಅವನಿಗೆ ಅರ್ಘ್ಯಪಾದ್ಯ ಮಧುಪರ್ಕಗಳನ್ನು ಕೊಟ್ಟು ಆಸನವನ್ನಿತ್ತು ಸತ್ಕರಿಸಿ ಕುಳ್ಳಿರಿಸಿದನು. ||೨೬||

ಆಮೇಲಾದಿನ ದಧೀಚನು ಕ್ಷುಪನೊಂದಿಗೆ ಅವನರಮನೆಯಲ್ಲಿಯೇ ಉಳಿದನು. ಆಗ ರಾಜನಾದಾ ಕ್ಷುಪನನ್ನು ಕುರಿತು ಏಕಾಂತದಲ್ಲಿ ದಧೀಚಮುನಿಯು ಹೀಗೆ ಹೇಳಿದನು. ||೨೭-೨೮||

" ಎಲೈ ಸ್ನೇಹಿತನೇ, ನನ್ನ ತಂದೆಯ ಆಶ್ರಮದಲ್ಲಿ ನಾವೀರ್ವರೂ ಇದ್ದಾಗ ನೀನು ನನಗೆ ಬೇಕಾದ ಇಷ್ಟಾರ್ಥಗಳನ್ನು ಕೊಡುವೆನೆಂದು ಹೇಳಿದ್ದೆಯಲ್ಲವೆ? ಅದು ಈಗ ನಿನಗೆ ನೆನಪಿದೆಯೇ? ||೨೯||

ಆ ನಿನ್ನ ಮಾತನ್ನು ಸತ್ಯವಾಗಿ ನಡೆಯಿಸು. ಸತ್ಯದಲ್ಲಿಯೇ ಎಲ್ಲವೂ ಇರುವುದು, ಲೋಕಗಳೂ ಬ್ರಹ್ಮನೇ ಮೊದಲಾದವರೂ ಸತ್ಯದ ಬಲದ ಮೇಲೆಯೇ ಇರುವರು. ನಕ್ಷತ್ರಗಳೂ ಚಂದ್ರಸೂರ್ಯರೂ ಸಹ ಸತ್ಯದ ಬಲದಿಂದಲೇ ರಾತ್ರಿ ಹಗಲು ಬಿಡದೇ ಸಂಚರಿಸುತ್ತಿರುವರು. ||೩೦||

ಪರಿಭ್ರಮಂತಿ ಸತ್ಯೇನ ಅಹೋರಾತ್ರಮತಂದ್ರಿತಾಃ ।
ನಾತ್ಯೇತಿ ವೇಲಾಮುದಧಿಃ ಭೂಮಿಃ ಪರ್ವತಧೃಕ್ಸ್ವಯಂ ॥೩೦॥

ಶ್ರುತಿಭಿಃ ಕಥಿತೋ ರಾಜನ್ ಋತಂ ಸತ್ಯಂ ಮಹೇಶ್ವರಃ ।
ಸದಧೀಚಿವಚಃ ಶ್ರುತ್ವಾ ಕ್ಷುಪೋ ವಿಪ್ರಂ ಹಸಂಸ್ತದಾ ॥೩೨॥

ಸಕರಸ್ಫೋಟಮತ್ಯುಚ್ಚೈಃ ಗರ್ವಪರ್ವತಮಧ್ಯಗಃ ।
ಯೌವನೋನ್ಮಾದಸಂವೀತಃ ಪ್ರಾಪ್ತರಾಜ್ಯಶ್ಚ ಭೂಪತಿಃ ॥೩೩॥

॥ ಕ್ಷುಪ ಉವಾಚ ॥

ಅಹೋ ದ್ವಿಜಸ್ಯ ತೇ ಬುದ್ಧಿರ್ದೃಷ್ಟಾ ಕಷ್ಟಪ್ರದಾಯಿನೀ ।
ಆಢ್ಯೇನ ನ ದರಿದ್ರೋ ವೈ ಮಿತ್ರಂ ನಾವಿದುಷೋ ದ್ವಿಜ ॥೩೪॥

ವಿದ್ವಾಂಸ್ತಥಾ ಶ್ರೋತ್ರಿಯೇಣ ವಿಸ್ಪೃಹ್ಯಶ್ರೋತ್ರಿಯೋ ದ್ವಿಜಃ ।
ವಿಪ್ರಾಣಾಂ ಪಶ್ಚಿಮಾ ಬುದ್ಧಿರಿತಿ ವಾರ್ತಾ ಗರೀಯಸೀ ॥೩೫॥

ಸತ್ಯದ ಭಯದಿಂದಲೇ ಸಾಗರವು ದಡವನ್ನು ಮೀರಿಬರುವುದಿಲ್ಲ, ಭೂಮಿಯು ಚಲಿಸದೇ ಪರ್ವತಗಳನ್ನು ಧರಿಸಿ ನಿಂತಿರುವುದು. ಎಲೈ ರಾಜನೇ, ಪರಮೇಶ್ವರನೇ, ಸತ್ಯಸ್ವರೂಪನೆಂದು ವೇದವಾಕ್ಯಗಳು ಹೇಳುತ್ತಿರುವುವು." ॥೩೦॥

ದಧೀಚಿಯ ಈ ಮಾತನ್ನು ಕೇಳಿ ಕ್ಷುಪರಾಜನು ತಿರಸ್ಕಾರದಿಂದ ನಕ್ಕು ಚಪ್ಪಾಳೆ ತಟ್ಟಿ ಹಾಸ್ಯಮಾಡಿದನು. ಅವನಿನ್ನೂ ತರುಣ, ಮೇಲಾಗಿ ಹೊಸದಾಗಿ ರಾಜ್ಯಪದವಿಯು ಲಭಿಸಿತ್ತು. ಇದರಿಂದ ಅವನ ಗರ್ವವು ಏರಿಹೋಗಿತ್ತು, ಆಗ ಅವನು ದಧೀಚಿಯನ್ನು ಕುರಿತು ಹೀಗೆ ಹೇಳಿದನು. ॥೩೨-೩೩॥

" ಎಲೈ ಬ್ರಾಹ್ಮಣ, ಬುದ್ಧಿಯಿಲ್ಲದ ನಿನ್ನ ಮಾತನ್ನು ಕೇಳಲಾರೆನು. ಬಡವನಾದ ನೀನು ರಾಜನಾದ ನನಗೆ ಸ್ನೇಹಿತನಾಗಲಾರೆ. ಬಡವನು ಶ್ರೀಮಂತನಿಗೂ, ಮೂಢನು ವಿದ್ವಾಂಸನಿಗೂ, ಕರ್ಮನಿಷ್ಠನಲ್ಲದವನು ಕರ್ಮನಿಷ್ಠನಿಗೂ ಸ್ನೇಹಿತನಾಗಲಾರನು. ॥೩೪॥

ಬ್ರಾಹ್ಮಣರಿಗೆ ಕೆಟ್ಟಮೇಲೆ ಬುದ್ಧಿ, ಅಥವಾ ಅಪರಬುದ್ಧಿ ಎಂದು ಗಾದೆಯಿದೆ. ಅದನ್ನು ಈಗ ನಿನ್ನಲ್ಲಿ ನೋಡಿದಂತಾಯಿತು." ॥೩೫॥

ಯೋ ವೈ ಲೋಕೇಷು ಹೃಷ್ಟ್ವಾ ಸಾ ತ್ವಯಿ ಮೂಢಮತೇ ಮುನೌ ।
ಇತ್ಯುಕ್ತಂ ತದ್ವಚಃ ಶ್ರುತ್ವಾ ಸಾವಜ್ಞಂ ವಿಪ್ರಪುಂಗವಃ ॥೩೬॥

ಕ್ರೋಧಾಮರ್ಷಾಶ್ರುನಯನಃ ತಮಾಹ ನೃಪನಂದನಂ ॥೩೭॥

॥ ದಧೀಚಿರುವಾಚ ॥

ಧನ್ಯೋಽಸಿ ಕೃತಕೃತ್ಯೋಽಸಿ ಯಸ್ತೇ ವಾಕ್ಯಮರುಂತುದಂ ।
ಏಷ ಗಚ್ಛಾಮಿ ತಪಸಾ ಶರ್ವಮಾರಾಧಯಾಮ್ಯಹಂ ॥೩೮॥

ಸರ್ವಂ ಸಂಸಾಧಯಾಮ್ಯೇವ ಭುಕ್ತಿಂ ಮುಕ್ತಿಂ ಚ ಶಾಶ್ವತೀಂ ।
ತ್ವಂಚೈವಾಲ್ಪಪ್ರದೋ ಮೂಢ ರಾಜ್ಯಗರ್ವೇಣ ಮೋಹಿತಃ ॥೩೯॥

ವಿನಶ್ವರಂ ಧನಂ ತೇಽದ್ಯ ಕೋ ಹಿ ಸ್ವಲ್ಪೇ ಸಮೇಧತೇ ।
ಸೇವಾಂ ವೀಕ್ಷ್ಯೈವ ದಾತೃತ್ವಂ ತವ ಮೂಢತಮಸ್ಯ ಹಿ ॥೪೦॥

ಖಂಡಭೂಮ್ಯಧಿಪಸ್ತ್ವಂ ಚ ಕಿಂಚಿಜ್ಜ್ಞಃ ಕ್ಷತ್ರಬಂಧುಮಾನ್ ।
ಭೂರೇದಾತಾರಮೀಶಾನಂ ಸತ್ಪತಿಂ ಮೋಕ್ಷದಾಯಕಂ ॥೪೧॥

ಕ್ಷುಪರಾಜನ ಆ ಮಾತನ್ನು ಕೇಳಿ ದಧೀಚಿಮುನಿಯು ಕೋಪವುಳ್ಳವನಾಗಿ ಅವನನ್ನು ಕುರಿತು ಹೀಗೆ ನುಡಿದನು. ॥೩೬-೩೭॥

" ಎಲೈ ರಾಜ, ಇಂತಹ ಅಯೋಗ್ಯವಾದ ಮಾತನ್ನಾಡುವ ನೀನು ಧನ್ಯನಾದೆ, ಕೃತಾರ್ಥನಾದೆ, ಇರಲಿ, ಈಗ ನಾನು ಹೋಗುತ್ತೇನೆ. ತಪಸ್ಸಿನಿಂದ ಈಶ್ವರನನ್ನು ಆರಾಧಿಸುವೆನು, ಭೋಗವನ್ನೂ ಮೋಕ್ಷವನ್ನೂ ಸಾಧಿಸುವೆನು. ॥೩೮॥

ರಾಜ್ಯಮದದಿಂದ ಕೊಬ್ಬಿರುವ ಎಲೈ ಮೂಢ, ನೀನು ನನಗೆ ಏನು ಕೊಡ ಬಲ್ಲೆ ? ನಿನ್ನ ಧನವೆಲ್ಲವೂ ಅಸ್ಥಿರವಾದುದು. ॥೩೯॥

ನಿನ್ನನ್ನು ದೀನತೆಯಿಂದ ಸೇವಿಸುವವರಿಗೆ ಏನಾದರೂ ಸ್ವಲ್ಪ ಕೊಡಬಲ್ಲೆ. ಒಂದಿಷ್ಟು ಭೂಮಿಗೆ ಒಡೆಯನು ನೀನು, ನಿನ್ನ ತಿಳಿವಳಿಕೆಯೂ ಅಷ್ಟರಲ್ಲೇ ಇದೆ. ಕೊಟ್ಟಮಾತನ್ನು ನಡೆಯಿಸದ ನೀಚಕ್ಷತ್ರಿಯನು ನೀನು. ॥೩೯-೪೦॥

ಸಕಲೈಶ್ವರ್ಯಗಳನ್ನೂ ಕೊಡಬಲ್ಲ ಪರಮೇಶ್ವರನಾದ, ಮುಕ್ತಿಯನ್ನು ಕೊಡಬಲ್ಲ ಪರಬ್ರಹ್ಮನಾದ, ಚಂದ್ರಶೇಖರನಾದ, ಹರಿಬ್ರಹ್ಮ-ಮೊದಲಾದವರಿಂದ

ಅಖಂಡೇಂದುಕಲಾಮೌಳಿಂ ಬ್ರಹ್ಮವಿಷ್ಣ್ವಾದಿವಂದಿತಂ ।
ತಮೇವ ತಪಸಾಽಽರಾಧ್ಯ ಲಪ್ಸ್ಯೇ ಸರ್ವಮನೋರಥಂ ॥೪೨॥

ಬ್ರಾಹ್ಮಣಾನಾಮಧಿಪತಿಃ ಶಿವ ಏವ ಸನಾತನಃ ।
ಕ್ಷತ್ರಿಯಾಣಾಂ ಹರಿಃ ಪ್ರೋಕ್ತಃ ಸೋಪಿ ಶಂಕರಕಿಂಕರಃ ॥೪೩॥

ತದರ್ಚನೇನ ನರಕಂ ರಾಜ್ಯಾಂತೇ ತ್ವಮುಪಾಸ್ಯಸೇ ।
ಕಿಂಚಿದ್ವಿಹಸ್ಯ ಭೂಮೌ ತ್ವಂ ದುಃಖಾಧಿಕ್ಯೈಃ ಸುಖಭ್ರಮೈಃ ॥೪೪॥

ಅಹಮೀಶಪ್ರಸಾದೇನ ಭುಕ್ತಿಂ ಮುಕ್ತಿಮುಪಾಶ್ನುಯಾಂ ।
ಧಿಕ್ ಧಿಕ್ತ್ವಾಂ ದುಷ್ಟರಾಜಾನಂ ವಯಸ್ಯೇಪಿ ಸುನಿರ್ದಯಂ ॥೪೫॥

ಇತ್ಯುಕ್ತ್ವಾ ತಂ ತಿರಸ್ಕೃತ್ಯ ಕ್ಷುಪಂ ನೃಪವರಾತ್ಮಜಂ ।
ಜಗಾಮ ಸ್ವಾಶ್ರಮಾಯೈವ ದಧೀಚಿಃ ಕ್ರೋಧಮೂರ್ಛಿತಃ ॥೪೬॥

ಸೇವಿಸಲ್ಪಡುವ ಆ ಶಿವನನ್ನೇ ಆರಾಧಿಸುವೆನು. ಆ ದೇವದೇವನಿಂದ ನನ್ನಿಷ್ಟಾರ್ಥಗಳೆಲ್ಲವನ್ನೂ ಪಡೆಯುವೆನು. ॥೪೧-೪೨॥

ಬ್ರಾಹ್ಮಣರಿಗೆ ಪರಮೇಶ್ವರನೇ ಅಧಿಪತಿಯು. ಕ್ಷತ್ರಿಯರಿಗೆ ಹರಿಯು ಅಧಿಪತಿಯು, ಆ ಹರಿಯು ಶಂಕರನ ಸೇವಕನು. ॥೪೩॥

ಆ ಹರಿಯನ್ನರ್ಚಿಸುವ ನೀಚಕ್ಷತ್ರಿಯನಾದ ನೀನು ಸುಖಭ್ರಾಂತಿಯಿಂದ ಈ ರಾಜ್ಯದಲ್ಲಿ ತೊಳಗಿ ದುಃಖವನ್ನು ಅನುಭವಿಸುತ್ತಾ ಕೊನೆಯಲ್ಲಿ ನರಕವನ್ನು ಪಡೆಯುವೆ. ॥೪೪॥

ನಾನು ಶಿವನ ಅನುಗ್ರಹದಿಂದ ಭೋಗ ಮೋಕ್ಷಗಳೆರಡನ್ನೂ ಪಡೆಯುವೆನು. ಸ್ನೇಹಿತನಲ್ಲಿಯೂ ಆದರವಿಲ್ಲದ, ಕೃತಘ್ನನಾದ ದುಷ್ಟರಾಜನಾದ ನಿನಗೆ ಧಿಕ್ಕಾರವಿರಲಿ.” ॥೪೫॥

ಹೀಗೆ ಆ ರಾಜನನ್ನು ಕೋಪದಿಂದ ನಿಂದಿಸಿ ದಧೀಚಿಯು ತನ್ನ ಆಶ್ರಮಕ್ಕೆ ಹೊರಟುಹೋದನು. ॥೪೬॥

ಭಸ್ಮರುದ್ರಾಕ್ಷಸಹಿತಸ್ತ್ರಿಪುಂಡ್ರೋಜ್ಜ್ವಲಮಸ್ತಕಃ ।
ತಪಸಾ ತೋಷಯಾಮಾಸ ರುದ್ರಂ ಪಂಚಾಕ್ಷರೇಣ ಹಿ ॥೪೭॥

ಲಿಂಗಾರ್ಚನರತಃ ಸ್ತೌತಿ ರುದ್ರೇಣ ನಿಯತಂ ಮುನಿಃ ॥೪೮॥

॥ ದಧೀಚಿರುವಾಚ ॥

ಉಕ್ಷಾಧೀಶ್ವರಕೇತನಂ ತ್ರಿಭುವನಾಧ್ಯಕ್ಷಂ ಸುಧಾಧಾಮಖ
ತ್ವಂಡೋತ್ತಂಸಿತಲೋಚನಶ್ರವಣಜಾಪಾರೋರುಹಾರಪ್ರಿಯಂ ।
ದಿಗ್ವಾಸಂ ವಶಿತಪ್ರಪಂಚಹೃದಯಾಗಾರಪ್ರಮೋದಾಸ್ಪದಂ
ಮಾರಾರಾತಿಮಪಾರವೇದಶಿಖರೈರೀಡ್ಯಂ ಭಜೇ ಶಂಕರಂ ॥೪೯॥

ಹೃದಂಬುಜಚಿದಂಬರೇ ದಿವಸನಾಥಕೋಟಿಪ್ರಭಾ
ವಿಕಾಸಿಕನಕಾಂಬುಜೋದ್ಭವಪಯೋಧಿತಲ್ಪಾಂತಿಮ
ಪ್ರಕೃಷ್ಟನಯನಾಂಬುಜಪ್ರಥಿತಪೂಜ್ಯಪಾದಾಂಬುಜಂ
ಭಜಾಮಿ ಯಮಿಹೃತ್ಸುಧಾವಿಕಸಿತಾಂಬುಜೋದ್ಭಾಸಿತಂ
ಷದಂಬುಜಭವಾಸುತಾಂಬುಜಸುಕಾಯದಾಹೇಕ್ಷಣಂ ॥೫೦॥

ಆಮೇಲೆ ದಧೀಚಿಯು ಭಸ್ಮರುದ್ರಾಕ್ಷಿಧಾರಿಯಾಗಿ ಶಿವಲಿಂಗವನ್ನಾರಾಧಿಸುತ್ತಾ ಶಿವಪಂಚಾಕ್ಷರೀಮಂತ್ರವನ್ನು ಜಪಿಸುತ್ತಾ ರುದ್ರಸೂಕ್ತವನ್ನು ಹೇಳುತ್ತಾ ನಿತ್ಯವೂ ಹೀಗೆ ಸ್ತುತಿಸುವನು. ॥೪೭-೪೮॥

ವೃಷಭಧ್ವಜನೂ, ಮೂಲೋಕಗಳಿಗೊಡೆಯನೂ, ಚಂದ್ರಶೇಖರನೂ, ನಾಗಭೂಷಣನೂ, ದಿಗಂಬರನೂ, ಭಕ್ತರ ಹೃದಯದಲ್ಲಿ ನೆಲಸಿರುವವನೂ, ಮನ್ಮಥ ವೈರಿಯೂ, ವೇದಾಂತಗಳಲ್ಲಿ ಸ್ತುತಿಸಲ್ಪಡುವವನೂ ಆದ ಶಂಕರನನ್ನು ಭಜಿಸುವೆನು. ॥೪೯॥

ಭಕ್ತರ ಹೃದಯಾಕಾಶದಲ್ಲಿ ಕೋಟಿಸೂರ್ಯಪ್ರಭೆಯಿಂದ ಬೆಳಗುವವನೂ, ವಿಷ್ಣುವಿನ ನೇತ್ರಕಮಲದಿಂದ ಪೂಜಿತನೂ, ಬ್ರಹ್ಮ ನಾರಾಯಣ ಮೊದಲಾದ ದೇವನಾಯಕರಿಂದ ಪೂಜಿಸಲ್ಪಡುವವನೂ, ಯೋಗಿಗಳ ಹೃದಯದಲ್ಲಿ ನೆಲಸಿರುವವನೂ, ಮನ್ಮಥನನ್ನು ಮೂರನೆಯ ಉರಿಗಣ್ಣಿನಿಂದ ದಹಿಸಿದವನೂ ಆದ ಪರಶಿವನನ್ನು ಧ್ಯಾನಿಸುವೆನು. ॥೫೦॥

ಸುಧಾಸುಧಾಸಾಧನತೋಽಪಿ ದೇವಾನ್
ಖಿನ್ನಾನನಾನುರುಗರೋದ್ಧತಕೀಲದಗ್ಧಾನ್ ।
ಮುಗ್ಧಾನ್ ಸುದುಗ್ಧಪ್ರಭವೋಂಬುಧೇಸ್ತಟೇ
ದೇವಾನರಕ್ಷತ ಭಯೇಽಶರಣಾನ್ ಶರಣ್ಯಃ ॥೫೧॥

ಮುಗ್ಧೇಂದುಚೂಡಕರುಣಾತರಣಿಂ ವಿಹಾಯ
ಖದ್ಯೋತವದ್ವಿಧಿಹರೀಂದ್ರಮುಖಾನ್ ಸುರಾಂಶ್ಚ ।
ಸೇವಂತಿ ಗಾಢತಮಸೈಕವಿನಾಶಹೇತುಂ
ಮೂಢಾ ಹಿ ತೇ ದೃಢತರಂ ಮೃಡಭಕ್ತಿಹೀನಾಃ ॥೫೨॥

ಕಂದರ್ಪದರ್ಪಶಮನಾರ್ಚನಜಾತದರ್ಪಾತ್
ಕ್ವಾಯಂ ನೃಪಃ ಕ್ವ ಚ ಹರಿಃ ಕ್ವ ಚ ದೇವಸಂಘಾಃ ।
ನೇಕ್ಷೇ ತಂ ಕ್ಷಿತಿಪಾಧಮಂ ಕ್ಷತಸುಖಂ ಸಾಪೇಕ್ಷಮಿಾಕ್ಷೇ ಸದಾ
ತ್ರ್ಯಕ್ಷಂ ದಕ್ಷಸುಪಕ್ಷಪಾತಸುರತಾಸಂಧುಕ್ಷಿತಾಧೋಕ್ಷಜಂ ॥೫೩॥

ಅಮೃತಕ್ಕಾಗಿ ದೇವರಾಕ್ಷಸರು ಪಾಲ್ಗಡಲನ್ನು ಕಡೆದರು. ಆಗ ಮೊಟ್ಟ ಮೊದಲು ಅಮೃತಕ್ಕೆ ಬದಲಾಗಿ ಕಾಲಕೂಟವಿಷವು ಹುಟ್ಟಿತು. ಅದರಿಂದ ದೇವತೆಗಳೆಲ್ಲರೂ ಮೂರ್ಛಿತರಾಗಿ ಆ ಕಡಲಿನ ದಡದಲ್ಲುರುಳಿದರು. ಶರಣಾಳುವಾದ ಶಿವನೇ, ಆಗ ಆ ಕಾಲಕೂಟವಿಷವನ್ನು ನೀನು ಕುಡಿದು ದೇವತೆಗಳೆಲ್ಲರನ್ನೂ ರಕ್ಷಿಸಿರುವೆ. ॥೫೦-೫೧॥

ಬಾಲಚಂದ್ರಶೇಖರನಾದ ಕರುಣಾಸಾಗರನಾದ ಶಿವನನ್ನು ಬಿಟ್ಟು ಕೆಲ ಜನರು ಶಿವನೆದುರಿಗೆ ಮಿಂಚುಹುಳದಂತೆ ಅಲ್ಪರಾದ ಬ್ರಹ್ಮ ಹರಿ ಮೊದಲಾದ ದೇವತೆಗಳನ್ನಾಶ್ರಯಿಸುವರು. ಸಂಸಾರದುಃಖವನ್ನೂ ಅಜ್ಞಾನವನ್ನೂ ಹೋಗಲಾಡಿಸುವ ಅಂತಹ ಶಿವನಲ್ಲಿ ಭಕ್ತಿಯಿಲ್ಲದ ಅವರು ನಿಜವಾಗಿಯೂ ಮಹಾಮೂಢರು. ॥೫೨॥

ಮನ್ಮಥನ ದರ್ಪವನ್ನು ಇಳಿಸಿದ ಶಿವನನ್ನರ್ಚಿಸಿ, ಅದರಿಂದುಂಟಾಗುವ ದರ್ಪದ ಎದುರಿಗೆ ಈಕ್ಷುಪನೆಂಬ ಅಲ್ಪರಾಜನೆಲ್ಲಿ? ಹರಿಯೆಲ್ಲಿ? ಮಿಕ್ಕ ದೇವತೆಗಳೆಲ್ಲಿ? ಎಲ್ಲರೂ ಹುಲ್ಲಿಗಿಂತ ಕೀಳು, ಅಂತಹ ಶಿವನನ್ನರ್ಚಿಸುವ ನಾನು ಅಲ್ಪಸುಖ ಅಲ್ಪೈಶ್ವರ್ಯವುಳ್ಳ ನೀಚರಾಜನನ್ನು ಕಡೆಗಣ್ಣಿನಿಂದಲೂ ನೋಡಲಾರೆನು.

ಇತಿ ಶ್ರೀಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ದಧೀಚಿ ಕ್ಷುಪಸಂವಾದೇ ದಧೀಚಿ ತಪೋವರ್ಣನ ಶಿವಸ್ತೋತ್ರ ನಿರೂಪಣಂ ನಾಮ ದ್ವಾವಿಂಶೋಽಧ್ಯಾಯಃ

ದಕ್ಷಯಾಗದಲ್ಲಿ ಪಕ್ಷಪಾತವನ್ನೆಸಗಿದ ನಾರಾಯಣನೇ ಮೊದಲಾದ ದೇವತೆಗಳ ಗುಂಪಿನ ಗರ್ವವನ್ನು ಮುರಿದವನೂ, ಆ ಯಾಗವನ್ನು ಹಾಳುಮಾಡಿದವನೂ ಆದ ಪರಮೇಶ್ವರನನ್ನೇ ಸದಾ ಚಿಂತಿಸುವೆನು. ಜ್ಞಾನದೃಷ್ಟಿಯಿಂದ ನೋಡುವೆನು. ಎಂದು ದಧೀಚಿಯು ಶಿವಧ್ಯಾನಮಾಡಲಾರಂಭಿಸಿದನು.॥೫೩॥

ಇಲ್ಲಿಗೆ ಶ್ರೀಶಿವರಹಸ್ಯದ ಚತುರ್ಥಾಂಶದಲ್ಲಿ ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ತ್ರಯೋವಿಂಶೋಽಧ್ಯಾಯಃ

॥ ಸ್ಕಂದ ಉವಾಚ ॥

ತತ್ಸ್ತುತ್ಯಾ ತುಷ್ಟ ಈಶಾನೋ ದದೌ ತದ್ಧೃದಿ ಕಾಂಕ್ಷಿತಂ ।
ವೃಷಾರೂಢೋ ಮಹಾದೇವ್ಯಾ ಗಣೌಘೈಃ ಪುರತಃ ಸ್ಥಿತಃ ॥೧॥

ತಂ ಪ್ರಣಮ್ಯ ಸುರಾಧೀಶಂ ಸ್ತುತ್ವಾ ವಿಪ್ರೋಽಧ್ವರೇಶ್ವರಂ ।
ಜಾನುಭ್ಯಾಮವನಿಂ ಗತ್ವಾ ಸ್ತೋತ್ರಮೇತಜ್ಜಗಾದ ಹ ॥೨॥

ಗಂಗಾಚಂದ್ರಕಲಾಧರ ತ್ರಿಜಗತಾಂ ಕಾಮಾನ್ನಪೂರ್ಣಾರ್ಧಧೃಕ್
ತೂರ್ಣಂ ಮೇ ಹೃದಿ ಚಿಂತಿತಂ ದಿಶ ವಿಭೋ ಪಾಹೀಶ ಮಾಮರ್ಭಕಂ ।
ಊರ್ಣಾಚಕ್ರನಿಕಾಶಸಂಸೃತಿಮಹಾಚಕ್ರೇ ಚ ಬದ್ಧಾಂಗಕಃ
ತ್ವಾಮೇವಾಭಿಮುಖಂ ಪ್ರಯಾಮಿ ಶರಣಂ ಮಾಮದ್ಯ ಸಾಂಬಪ್ರಭೋ॥೩॥

ಇಪ್ಪತ್ತುಮೂರನೆಯ ಅಧ್ಯಾಯ

ಸ್ಕಂದಸ್ವಾಮಿಯು ಜೈಗೀಷವ್ಯನೊಡನೆ ಮುಂದಿನ ವಿಷಯವನ್ನು ಪ್ರಸ್ತಾಪಿಸುತ್ತಾ ಹೀಗೆಂದನು : — ದಧೀಚಿಯ ಆ ಸ್ತುತಿಯಿಂದ ಪ್ರಸನ್ನನಾಗಿ ಪರಮೇಶ್ವರನು ನಂದಿಯನ್ನೇರಿ ಪಾರ್ವತಿಯೊಡನೆಯೂ ಗಣಗಳೊಡನೆಯೂ ಆ ಮುನಿಯ ಎದುರಿಗೆ ಪ್ರತ್ಯಕ್ಷನಾದನು. ॥೧॥

ಯಜ್ಞಪತಿಯಾದ ಮಹಾದೇವನನ್ನು ನೋಡಿ ಅಡ್ಡಬಿದ್ದು ನಮಸ್ಕರಿಸಿ ಆ ದಧೀಚಿ ಮುನಿಯು ಭಕ್ತಿಯಿಂದ ಹೀಗೆ ಸ್ತುತಿಸಿದನು. ॥೨॥

‘‘ ಶಂಕರನೇ, ಗಂಗೆ ಮತ್ತು ಚಂದ್ರರನ್ನು ತಲೆಯಲ್ಲಿ ಧರಿಸಿರುವವನೆ, ಮೂರು ಲೋಕಗಳಿಗೂ ಅನ್ನವನ್ನೀಯುವ ಅನ್ನಪೂರ್ಣೆಯನ್ನೇ ಅರ್ಧಶರೀರದಲ್ಲಿ ಧರಿಸಿರುವ

ಅಗುಣಂ ಭಗಣಾಧಿಪೈಕಚೂಡಂ
ತ್ರಿಗುಣಾತೀತಗುಣಂ ಚ ನಿರ್ಗುಣಂ ತಂ ।
ಅರುಣಾಧಿಪಕಾರಣಂ ಸುರಾಣಾಂ
ವರುಣಾರ್ಚ್ಯಂ ಶರಣಂ ಶರಣ್ಯಮೀಡ್ಯಂ ॥೪॥

ಧೃತಭಸಿತಭುಜಂಗಂ ಭಕ್ತಚಿತ್ತೈಕಸಂಗಂ
ಕರಧೃತಸುಕುರಂಗಂ ಲಿಂಗತುಂಗೈಕಸಂಗಂ ।
ಮುನಿಜನಭವಭಂಗಂ ಕಾಲಕಾಲಂ ರಥಾಂಗ
ಪ್ರದಮಥ ಹರಯೇ ತಂ ಸಂಭಜೇ ಶಂಗಮೀಶಂ ॥೫॥

ತಮುತ್ಥಾಪ್ಯ ತಮಾಶೀರ್ಭಿರಭಿನಂದ್ಯ ಸದಾಶಿವಃ ।
ಕಾಮಂ ಕಾಮಾಂತಕಸ್ಯೈವ ಪ್ರಸಾದಶ್ಚಾಸ್ತು ಶಾಶ್ವತಂ ॥೬॥

ಪರಮೇಶ್ವರನೇ, ಬೇಡರಬಲೆಯಲ್ಲಿ ಸಿಕ್ಕುಬಿದ್ದ ನೊಣದಂತೆ ಸಂಸಾರಬಲೆಯಲ್ಲಿ ಸಿಕ್ಕಿಬಿದ್ದಿರುವ ನಾನು ನಿನ್ನನ್ನೇ ಶರಣು ಹೊಂದಿರುವೆನು. ಬಾಲಕನಾದ ನನ್ನನ್ನು ಪಾಲಿಸು. ॥೩॥

ಚಂದ್ರಕಲಾಧರನಾದ, ಸತ್ತ್ವರಜಸ್ತಮೋಗುಣಗಳ ಸಂಬಂಧವಿಲ್ಲದ ನಿರ್ಗುಣನಾದ, ಸೂರ್ಯಚಂದ್ರರಿಗೆ ಒಡೆಯನಾದ, ವರುಣನಿಂದ ಅರ್ಚಿಸಲ್ಪಡುವ, ದೇವತೆಗಳಿಗೆ ಆಶ್ರಯನಾದ, ಭಕ್ತರಕ್ಷಕನಾದ ನಿನ್ನನ್ನೇ ನಾನು ಸದಾ ಸ್ತುತಿಸುವೆನು.॥೪॥

ಭಸ್ಮಧಾರಿಯೂ, ನಾಗಭೂಷಣನೂ, ಭಕ್ತರ ಹೃದಯದಲ್ಲಿ ವಾಸಿಸುವವನೂ, ಕೈಯ್ಯಲ್ಲಿ ಜಿಂಕೆಯನ್ನು ಧರಿಸಿರುವವನೂ, ಮಹಾಲಿಂಗಸ್ವರೂಪನೂ, ಯೋಗಿಗಳ ಸಂಸಾರತಾಪತ್ರಯವನ್ನು ಹೋಗಲಾಡಿಸುವವನೂ, ಮೃತ್ಯುವಿಗೆ ಮೃತ್ಯುವೂ, ನಾರಾಯಣನಿಗೆ ಸುದರ್ಶನ ಚಕ್ರವನ್ನನುಗ್ರಹಿಸಿದವನೂ, ಆದ ಪರಶಿವನೇ, ನಿನ್ನನ್ನು ಭಜಿಸುವೆನು," ॥೫॥

ಎಂದು ದಧೀಚಿಯು ಪ್ರಾರ್ಥಿಸಿದುದನ್ನು ಕೇಳಿ ಶಿವನು ದಧೀಚಿಯನ್ನು ಹಿಡಿದು ಮೇಲಕ್ಕೆತ್ತಿ ಹೀಗೆ ಆಶೀರ್ವದಿಸಿದನು—ಮುನಿಯೇ, ಕಾಮವೈರಿಯಾದ ನನ್ನ ಅನುಗ್ರಹವು ನಿನ್ನಲ್ಲಿ ಸದಾ ನೆಲಸಿರಲಿ. ನಿನ್ನಿಷ್ಟದಂತೆ ಮರಣವು ನಿನಗೆ ಸಂಭವಿಸಲಿ, ನೀನು ನನ್ನ ಪರಮಭಕ್ತನು, ಎಂದು ಅನುಗ್ರಹಿಸಿದನು. ॥೬॥

ಸ್ವಚ್ಛಂದಮರಣಂ ತೇಸ್ತು ತ್ವಂ ಮೇ ಭಕ್ತಃ ಸುಪಾವನಃ ।
ತತ್ಪ್ರತಿಗ್ರಾಹ್ಯ ಸಮುನಿಃ ಉವಾಸ ನಿಜಕೇತನೇ ॥೭॥

॥ ಸೂತ ಉವಾಚ ॥

ಗೋಭಿರ್ಧಾನ್ಯಗಣೈರ್ಧನಾದಿವಿಭವೈ ರಮ್ಯೈರ್ಗೃಹೈರ್ಭೂಷಣೈಃ
ಸ್ವಾದ್ವನ್ನೈಃ ಶಿವಲಿಂಗಪೂಜನರತೋ ವಿಪ್ರೋಪ್ಯವಾಸಾಶ್ರಮೇ ।
ತಚ್ಛ್ರುತ್ವಾ ನೃಪತಿಃ ಶಿವಪ್ರಭವಜಂ ಭಾಗ್ಯಂ ಸ್ವವಿಷ್ಣ್ವರ್ಚನಾತ್
ಲಬ್ಧಂ ದರ್ಶಯಿತುಂ ರಥಾಶ್ವನಿವಹೈರಾಯಾನ್ಮುನಿಂ ತಂ ತದಾ ॥೮॥

ತೇನಾನ್ನಂ ಬುಭುಜೇ ಸುಷಡ್ರಸವರಂ ಸಂಪೂಜಿತಸ್ಸೋ ನೃಪೋ
ದ್ರಷ್ಟುಂ ತತ್ತಪಸಃ ಕ್ರಿಯಾಂ ತಮಾಹ ವಿಹರನ್ ಸೌಖ್ಯಾರ್ತ್ಸವಿಷ್ಣ್ವರ್ಚನ
ಪ್ರಾಪ್ತಂ ದರ್ಶಯದಸ್ತ್ರಜಾಲನಿಕರಂ ಸೋದರ್ಭಮುಷ್ಟ್ಯಾ ಬಲಾತ್
ನಿರ್ವೀರ್ಯೈರ್ನಿಜಶಸ್ತ್ರಜಾಲನಿವಹೈರ್ಮತ್ತೇಭಸಂಘಾಶ್ವಕೈಃ ॥೯॥

ಸೈನ್ಯೈರ್ನಾಶಮುಪಾಗತೇ ಸ ಹಿ ಮುನಿರ್ಜಿಗ್ಯೇ ಯದಾ ತಂ ನೃಪಂ
ವಿಷ್ಣುಃ ಶಾರ್ಙ್ಗಸುಚಕ್ರಧಾರಗದಯಾಃಭ್ಯಾಗಾನ್ಮುನೀಂದ್ರಂ ಚ ತಂ ।
ಭಕ್ತಂ ಸ್ವಂ ಶಿವಭಕ್ತವೀರ್ಯನಿಹತಂ ದರ್ಭಾಗ್ರಮುಷ್ಟ್ಯೈಕಯಾ ॥೧೦॥

ಹೀಗೆ ಶಿವನ ಅನುಗ್ರಹದಿಂದ ಎಲ್ಲವನ್ನೂ ಸಂಪಾದಿಸಿ ಆ ದಧೀಚಿಯು ಸುಖವಾಗಿ ತನ್ನ ಆಶ್ರಮದಲ್ಲಿ ಇರತೊಡಗಿದನು. ॥೭॥

ಅಲ್ಲಿ ಆ ದಧೀಚಿಯು ಹಸುಗಳಿಂದಲೂ ಧಾನ್ಯಗಳಿಂದಲೂ ಧನಾದ್ಯೈಶ್ವರ್ಯ ಗಳಿಂದಲೂ, ಮನೋಹರವಾದ ಮನೆ ಮತ್ತು ಅಲಂಕಾರಗಳಿಂದಲೂ, ಮೃಷ್ಟಾನ್ನ ಗಳಿಂದಲೂ ಸುಖಿಸುತ್ತಾ ಶಿವನನ್ನರ್ಚಿಸುತ್ತಾ ವಾಸವಾಗಿದ್ದನು. ದಧೀಚಿಯ ಈ ವೈಭವವನ್ನು ಕೇಳಿ ಕ್ಷುಪರಾಜನು ಅಸೂಯೆಪಟ್ಟು ತಾನೂ ಹರಿಯ ಅನುಗ್ರಹ ದಿಂದ ಪಡೆದ ಐಶ್ವರ್ಯವನ್ನು ದಧೀಚಿಮುನಿಗೆ ತೋರಿಸಲೋಸುಗ ರಥವನ್ನೇರಿ ಅವನಾಶ್ರಮಕ್ಕೆ ಬಂದನು. ॥೮॥

ತನ್ನಾಶ್ರಮಕ್ಕೆ ಬಂದ ಆ ಕ್ಷುಪರಾಜನನ್ನು ದಧೀಚಿಯು ಸತ್ಕರಿಸಿ ಮೃಷ್ಟಾ ನ್ನವನ್ನು ಬಡಿಸಿ ಉಪಚರಿಸಿದನು. ಅಷ್ಟಕ್ಕೆ ಸುಮ್ಮನಿರದೇ ಗರ್ವದಿಂದ ಕ್ಷುಪರಾ ಜನು ತಾನು ಹರಿಯನ್ನಾರಾಧಿಸಿ ಪಡೆದ ಅಸ್ತ್ರಗಳನ್ನು "ನೋಡು ನನ್ನ ಬಲ ವನ್ನು" ಎಂದು ದಧೀಚಿಯ ಮೇಲೆ ಪ್ರಯೋಗಿಸಿದನು. ಅದನ್ನು ನೋಡಿ

ದೃಷ್ಟ್ವಾ ಚ ಪ್ರಸಭಂ ತದಾ ಮುನಿವರೇ ಶಸ್ತ್ರಾಣಿ ಚೈವೋತ್ಸೃಜತ್
ಚಕ್ರಂ ತನ್ನಿಹತಾರವಿಶ್ವರಪರಂ ನತ್ವಾಭಿತಸ್ಥೇಂಜಲಿಂ ।
ದೃಷ್ಟ್ವಾಸ್ತ್ರೇಣ ವಿವರ್ಜಿತಂ ಸತು ಮುನಿರ್ಯಾಹೀತಿ ಚೋಕ್ತ್ವಾಹಸತ್
ಭಕ್ತಸ್ಯಾಪಿ ತವಾದ್ಯ ಘಾತಕವರಂ ಕಿಂ ಧಾರ್ಷ್ಟ್ಯಮೀಶಾತ್ಮಕೇ ॥೧೧॥

ದಧೀಚಿವಚಸಾ ಹರಿರ್ವಿಧುತಕೇಶಪಾಶಂ ನೃಪಂ
ಸಮೀಕ್ಷ್ಯ ಭುವಿ ಪಾತಿತಂ ಕುಶಶರೈರ್ಮುನೇರ್ಮಂತ್ರಜೈಃ ।
ಅದರ್ಶಯದಥಾಂಜಸಾ ಮುನಿವರಾಯ ಸಂದರ್ಶನಂ
ಜಗಜ್ಜಠರಕಲ್ಪಿತಂ ಸ ತು ಮುನಿರ್ಹರಿಂ ದರ್ಶಯನ್ ॥೧೨॥

ಶಿವಾಂಘ್ರಿಪದಪೂಜನಾತ್ ಸ್ವಯಮಪಿ ಪ್ರಬೋಧಂ ವಚೋ
ಜಗಾದ ಹರಯೇ ತದಾ ಮದನನಾಶಪಾದಾರ್ಚಕಃ ॥೧೩॥

ದಧೀಚಿಯು ಶಿವನನ್ನು ಸ್ಮರಿಸಿ ದರ್ಭೆಯೊಂದನ್ನು `ಮಂತ್ರಿಸಿ ಕ್ಷುಪನ ಮೇಲೆ ಪ್ರಯೋಗಿಸಿದನು. ಆದರಿಂದ ಆ ರಾಜನು ಹತನಾದನು. ಅವನ ಸೈನ್ಯವೆಲ್ಲವೂ ನಾಶವಾಯಿತು. ಹೀಗೆ ಶಿವಭಕ್ತನ ಧೈರ್ಯದಿಂದ ಹತನಾದ ತನ್ನ ಭಕ್ತನನ್ನು (ಕ್ಷುಪನನ್ನು) ನೋಡಿ ವಿಷ್ಣುವು ವೇಗವಾಗಿ ಅಲ್ಲಿಗೆ ಬಂದನು. ॥೯-೧೦॥

ಕೂಡಲೇ ಕೋಪದಿಂದ ಹರಿಯು ದಧೀಚಿಯ ಮೇಲೆ ತನ್ನ ಅಸ್ತ್ರಗಳನ್ನೂ ಚಕ್ರವನ್ನೂ ಪ್ರಯೋಗಿಸಿದನು. ಆಗ ದಧೀಚಿಯು ಅಂಜಲಿಯನ್ನು ಧರಿಸಿ ಶಿವನನ್ನು ಸ್ತುತಿಸಿ ದರ್ಭೆಯನ್ನು ಮಂತ್ರಿಸಿ ಹರಿಯ ಅಸ್ತ್ರಗಳೆಲ್ಲವನ್ನೂ ಭಸ್ಮಮಾಡಿದನು. ಚಕ್ರವನ್ನು ಶಕ್ತಿಯಿಲ್ಲದುದನ್ನಾಗಿ ಖಂಡಿಸಿದನು. ಆಮೇಲೆ ಅವನು “ ಎಲೈ ಹರಿ, ನಿನ್ನ ಭಕ್ತನಾದ ಕ್ಷುಪನಂತೆ ನೀನು ಶಿವಸ್ವರೂಪನಾದ ನನ್ನಲ್ಲಿ ದುಷ್ಟತನವನ್ನು ತೋರುವೆಯಾ ? ಹೋಗು?” ಎಂದು ಹಾಸ್ಯಮಾಡಿ ಗದರಿಸಿದನು. ॥೧೧॥

ದಧೀಚಿಯ ಆ ಮಾತನ್ನು ಕೇಳಿ ಹರಿಯು, ಭೂಮಿಯಲ್ಲಿ ಹತನಾಗಿ ತಲೆ ಬಿಚ್ಚಿಬಿದ್ದಿರುವ ತನ್ನ ಭಕ್ತಕ್ಷುಪರಾಜನನ್ನು ನೋಡಿ ದಧೀಚಿಯನ್ನು ಹೆದರಿಸಲು, ತಾನು ಪರಮೇಶ್ವರನೆಂದು ಪ್ರಕಟಿಸಿಕೊಳ್ಳುವಂತೆ ತನ್ನ ಶಂಖಚಕ್ರಲಾಂಛಿತವಾದ ವಿಷ್ಣುವಿನ ರೂಪವನ್ನು ಮಹಾವೈಭವದಿಂದ ಪ್ರದರ್ಶಿಸಿದನು. ॥೧೨॥

ಪರಮೇಶ್ವರನನ್ನರ್ಚಿಸಿ ಸಿದ್ಧನಾದ ಆ ದಧೀಚಿಯು ಹರಿಯ ಆ ಸ್ವರೂಪವನ್ನು ನೋಡಿ ಹೀಗೆ ನುಡಿದನು. ॥೧೩॥

॥ ದಧೀಚಿರುವಾಚ ॥

ಚಕ್ರಂ ಶಂಭುಕೃಪಾವಶಾತ್ತವ ಮಹಾನೇತ್ರಾಂಬುಜೈಃ ಪೂಜನಾತ್
ಸಂಪ್ರಾಪ್ತಂ ಮಯಿ ಶಂಭುಭಕ್ತಿಸುಮನಾಃ ಪಶ್ಯಾಂಜಲಿಂ ಸಂಸ್ಥಿತಂ ।
ಏತದ್ದೈತ್ಯವಧಾಯ ಕಲ್ಪಿತಮುಮಾಕಾಂತೇಶ ಶಾಂತಾತ್ಮನಾ
ಏತದ್ಯೋಗವಶಾದ್ಭವಾನ್ ಜಯಕಲಾಯುಕ್ತೋ ಜಗತ್ಪಾಸಿ ಚ ॥೧೪॥

ಮಾ ಧಾರ್ಷ್ಟ್ಯಂ ಕುರು ಶಾಂಕರೇಷು ತದಿತೋ ಗಚ್ಛಾಧುನಾ ಸ್ವಂ ಪದಂ
ಏಷೋಜ್ಜೀವತು ಮೇ ಸಖಾ ಸ್ವಸೈನ್ಯನಿವಹೈಸ್ಸ್ವಂರಾಜ್ಯಮಾಪ್ನೋತು ಚಿತಂ ।
ಚೋದ್ಬುದ್ಧ್ಯಾಯತಗರ್ವಪರ್ವತವಶೋ ಮಾಭೂಸ್ಸದಾ ತ್ವಂ ಹರೇ
ಇತ್ಯುಕ್ತೇ ಮುನಿನಾ ಜಗಾದ ನೃಪತಿಃ ಸುಪ್ತೋತ್ಥಿತೈವೋತ್ಥಿತಃ ॥೧೫॥

ಸೈನ್ಯೇನಾತ್ತಪರಾಭವೋ ಮುನಿವರಂ ನತ್ವಾ ಸವಿಷ್ಣುಸ್ತದಾ
ಸವ್ರೀಡೋ ವಿಮುಖೋ ಜಗಾಮ ನಗರಂ ರಾಜಾ ತದಾ ವಿಷ್ಣುನಾ ॥೧೬॥

ಎಲೈ ಹರಿಯೇ, ಈ ಚಕ್ರವನ್ನು ನೀನು ನಿನ್ನ ನೇತ್ರ ಕಮಲದಿಂದ ಶಿವನನ್ನರ್ಚಿಸಿ ಅವನಿಂದ ಪಡೆದಿರುವೆ. ಅಂತಹ ಶಂಕರನ ಭಕ್ತನಾದ ನನ್ನ ಮೇಲೆ ಈ ಚಕ್ರವನ್ನು ಪ್ರಯೋಗಿಸಿದರೆ ನಡೆಯುವುದೆ? ನೋಡು, ನಿನ್ನ ಈ ಚಕ್ರವು ನನ್ನೆದುರಿಗೆ ಹೆದರಿ ಅಂಜಲಿಯನ್ನು ಧರಿಸಿ ನಿಂತಿರುವುದು. ಶಿವನಾದರೋ ಈ ಚಕ್ರವನ್ನು ನಿನಗೆ ದೈತ್ಯರನ್ನು ಸಂಹರಿಸಿ ಜಗತ್ತಿಗೆ ಉಪಕಾರಮಾಡು ಎಂದು ಕೊಟ್ಟಿರುವನು. ನನ್ನಂತಹ ಭಕ್ತನ ಮೇಲೆ ಪ್ರಯೋಗಿಸುವುದು ವ್ಯರ್ಥವೆನಿಸುವುದು. ಶಿವನ ಅನುಗ್ರಹದಿಂದ ಲಭಿಸಿದ ಈ ಚಕ್ರದಿಂದಲೇ ನೀನು ಜಯಶಾಲಿಯಾಗಿ ದೈತ್ಯರನ್ನು ಸಂಹರಿಸುತ್ತಾ ಜಗತ್ತನ್ನು ಪಾಲಿಸಲು ಶಕ್ತನಾಗುವೆ. ॥೧೪॥

ವಿಷ್ಣುವೇ, ಇನ್ನು ಮುಂದಾದರೂ ಶಿವಭಕ್ತರ ವಿಷಯದಲ್ಲಿ ಎಚ್ಚರಿಕೆಯಿಂದಿರು. ನನ್ನ ಸ್ನೇಹಿತನಾದ ರಾಜನೂ ತನ್ನ ಸೈನ್ಯದೊಡನೆ ಈಗಲೆ ಜೀವಗೊಂಡೇಳುವನು. ಚಕ್ರವರ್ತಿಪದವಿಯನ್ನನುಭವಿಸುವನು. ನೀನೂ ನಿನ್ನ ಗರ್ವವನ್ನು ಇನ್ನು ಬಿಟ್ಟುಬಿಡು " ಎಂದು ದಧೀಚಿಯು ಹೇಳಲು, ಆ ಕೂಡಲೇ ಕ್ಷುಪ ರಾಜನು ನಿದ್ರೆಯಿಂದೆಚ್ಚೆತ್ತವನಂತೆ ಎಚ್ಚರಗೊಂಡೆದ್ದನು. ॥೧೫॥

ಆಗ ಆ ರಾಜನು ಹರಿಯ ಎದುರಿಗೆ ತನಗಾದ ಅಪಜಯವನ್ನು ನೋಡಿ

ಮಾಧಾರ್ಷ್ಯಂ ಕುರು ಶಾಂಭವೇಷು ನೃಪತೇ ತೇ ಶಂಕರಾರ್ಚಾಪರಾಃ
ದೇವಾದ್ಯೈರಪಿ ಪೂಜನೀಯಚರಿತಾ ಮಾಯಾ ಹಿ ಪೂಜಾ ಮಮ ।
ಮದ್ಭಕ್ತೈಶ್ಚ ಮಯಾಪಿ ಪೂಜಿತಮಹಾಪಾದಾಂಬುಜಾಸ್ತೇ ಸದಾ
ಶಾಂತಾಃ ಶರ್ವಪರಾಯಣಾ ಹರಮಹಾದೇವೇಶಪಾದಾರ್ಚಕಾಃ ॥೧೭॥

ಇತಿ ಶ್ರೀಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ಶಿವಾಗಮನಂ ದಧೀಚಿ
ವರಪ್ರಸಾದವರ್ಣನಂ ಕ್ಷುಪವಿಷ್ಣುಗರ್ವಹರಣಂ ನಾಮ
ತ್ರಯೋವಿಂಶೋಽಧ್ಯಾಯಃ

ಲಜ್ಜೆಗೊಂಡು ವಿನಯದಿಂದ ದಧೀಚಿಮುನಿಗೆ ನಮಸ್ಕರಿಸಿ, ಹರಿಯೊಡನೆ ತನ್ನ ನಗರಕ್ಕೆ ತೆರಳಿದನು. ಆಗ ರಾಜನಿಗೆ ಹರಿಯು ಹೀಗೆಂದನು. ॥೧೬॥

ಎಲೈ ಕ್ಷುಪರಾಜನೇ, ದಧೀಚಿಯಂತಹ ಶಾಂಭವರಲ್ಲಿ ಇನ್ನು ಮೇಲೆ ಗರ್ವವನ್ನು ತೋರಿಸಬೇಡ. ಶಿವನನ್ನರ್ಚಿಸುವ ಅವರು ಮಹಾಮಹಿಮರು, ದೇವತೆಗಳೂ ಅವರನ್ನು ವಂದಿಸಬೇಕು. ಆದುದರಿಂದ ನಾನೂ ನನ್ನ ಭಕ್ತರೂ ಅವರನ್ನು ತಿರಸ್ಕರಿಸದೇ ವಂದಿಸುವೆವು. ನಾವು ಸಹ ಶಂಕರನ ಪಾದಕಮಲವನ್ನು ತಪ್ಪದೆ ಪೂಜಿಸುತ್ತಿರುವೆವು. ಎಂದು ಕ್ಷುಪರಾಜನಿಗೆ ವಿಷ್ಣುವು ಸಮಾಧಾನ ಹೇಳಿದನು.॥೧೭॥

ಇಲ್ಲಿಗೆ ಶ್ರೀಶಿವರಹಸ್ಯದಲ್ಲಿ ಇಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಚತುರ್ವಿಂಶೋಽಧ್ಯಾಯಃ

|| ಸ್ಕಂದ ಉವಾಚ ||

ಔದ್ದಾಲಕೋ ರಿಟಿಃ ಪೂರ್ವಂ ಭಕ್ತ್ಯಾಽಽರಾಧಿತವಾನ್ ಹರಂ ।
ಪಿತ್ರಾ ಸಂತಾಪಿತಃ ಪೂರ್ವಂ ಮೂಢಭಕ್ತೋ ಜಗಾಮ ಹ ॥೧॥

ವನಂ ತುಂಗಮಹಾಸಾಲತಮಾಲಕದಲೀಯುತಂ ।
ನೀಲೇ ತದಾ ಗಿರಿವರೇ ರಮ್ಯಸಾನೌ ಶಿವಾಲಯೇ ॥೨॥

ತತಾಪ ಪರಯಾ ಭಕ್ತ್ಯಾ ಭಸ್ಮರುದ್ರಾಕ್ಷಭೂಷಣಃ ।
ಶಿವಾರ್ಚನೇನ ಸಂಪನ್ನಃ ಶಿವನೈವೇದ್ಯಭೋಜನಃ ॥೩॥

ಇಪ್ಪತ್ತುನಾಲ್ಕನೆಯ ಅಧ್ಯಾಯ

ಎಲೈ ಜೈಗೀಷವ್ಯನೇ, ಮತ್ತೊಂದು ಇತಿಹಾಸವನ್ನು ಕೇಳು. ಹಿಂದೆ ಉದ್ದಾಲಕನ ಪುತ್ರನಾದ ರಿಟಿಯೆಂಬ ಶಿವಭಕ್ತನೊಬ್ಬನಿದ್ದನು. ಅತಿ ಮೂಢನೆಂದು ತಿಳಿದು ತಂದೆಯು ಅವನನ್ನು ಮನೆಯಿಂದೋಡಿಸಿದನು. ಆ ಮೂಢಭಕ್ತನಾದ ರಿಟಿಯು ಮನೆಯನ್ನು ಬಿಟ್ಟು ಸಾಲ,ತಮಾಲ ಮೊದಲಾದ ಮರಗಳಿಂದ ನಿಬಿಡವಾದ ಅರಣ್ಯಕ್ಕೆ ತೆರಳಿದನು. ||೧||

ಅರಣ್ಯದಲ್ಲಿ ಆ ರಿಟಿಯು ನೀಲಗಿರಿಯ ತಪ್ಪಲಲ್ಲಿರುವ ಶಿವಾಲಯದಲ್ಲಿ ವಾಸಿಸುತ್ತಾ ಭಸ್ಮರುದ್ರಾಕ್ಷಿಧಾರಿಯಾಗಿ ಶಿವನನ್ನರ್ಚಿಸುತ್ತಾ, ಶಿವನೈವೇದ್ಯವನ್ನು ಸೇವಿಸುತ್ತಾ, ಶಿವನನ್ನು ಕುರಿತು ಭಕ್ತಿಯಿಂದ ತಪಸ್ಸನ್ನಾಚರಿಸಿದನು. ||೨-೩||

ತಸ್ಯೈವಂ ವರ್ತಮಾನಸ್ಯ ಈಶೋ ನೀಲೇಶ್ವರಸ್ತದಾ ।
ಜಗಾಮ ದರ್ಶನೇ ತಸ್ಮೈ ಶಿವಸ್ಸವೃಷಭಸ್ತದಾ ॥೪॥

ದೇವ್ಯಾ ಚ ಯುಕ್ತೋ ಭಗವಾನ್ ನೀಲಕಂಠ ಉಮಾಪತಿಃ ।
ವ್ಯಾಲಶೋಭಿಮಹಾಹಾರೋ ದೇವಃ ಶಶಿಕಲಾಧರಃ ॥೫॥

ಸ ದೃಷ್ಟ್ವಾ ದೇವದೇವೇಶಂ ಶಿವಾಲೋಕನತುಷ್ಟಧೀಃ ।
ಪ್ರಣಮ್ಯಾಸ್ತುವದೀಶಾನಂ ರಿಟಿರುದ್ದಾಲಕಾತ್ಮಜಃ ॥೬॥

॥ ರಿಟಿರುವಾಚ ॥

ಅಸಮಕುಸುಮಬಾಣಪಾಣಿನಾಶೈಕಬಾಣಃ ।
ಅಸಮವಿಭವಹೀನಃ ಸೋಮಧಾಮಾ ಲಲಾಮಃ ॥೭॥

ಉರ್ವೀ ಮೌರ್ವೀ ಚ ದರ್ವೀಕರರಥಗಿರಿರಾಡ್ಬಾಣಬಾಣಾಸನಂ ತೇ
ವಿಷ್ಣುರ್ಜಿಷ್ಣುಸ್ತ್ವಮೇವಾಗಮವರತುರಗೋತ್ತುಂಗಹೇಷೈರಪೀಡ್ಯಃ ।
ಸಾಮಸ್ತೋಮೈಕಭೂಮಾ ರವಿಶಶಿಹುತಭುಗ್ಧಾಮಸೀಮಾ ತ್ವಮಾತ್ಮಾ
ಸರ್ವೇಷಾಂ ಭೂರಿಕಾಮಪ್ರದ ವರದಗಿರೌ ದೇವದೇಹೋಸಿ ಸೋಮಃ॥೮॥

ಅವನು ಹಾಗೆ ತಪಸ್ಸುಮಾಡುತ್ತಿರಲು ನೀಲಕಂಠನಾದ ಪರಮೇಶ್ವರನು ಪಾರ್ವತಿಯೊಡನೆ ಕೂಡಿ ನಂದಿಯನ್ನೇರಿ ಚಂದ್ರಶೇಖರನಾಗಿ ನಾಗಭೂಷಣದಿಂದ ಕೂಡಿ ಪ್ರತ್ಯಕ್ಷನಾದನು. ||೪-೫||

ಪ್ರತ್ಯಕ್ಷನಾದ ಆ ಪರಮೇಶ್ವರನನ್ನು ನೋಡಿ ರಿಟಿಯು ಸಂತಸದಿಂದ ನಮಸ್ಕರಿಸಿ ಭಕ್ತಿಯಿಂದ ಹೀಗೆ ಸ್ತುತಿಸಿದನು. ||೬||

ಚಂದ್ರಶೇಖರನೂ ಸರ್ವೋತ್ತಮನೂ ಕಾಮವೈರಿಯೂ ಆದ ಪರಮೇಶ್ವರನೇ, ತ್ರಿಪುರಸಂಹಾರಕಾಲದಲ್ಲಿ ನಿನಗೆ ಭೂಮಿಯೇ ರಥವಾಗಿತ್ತು. ಸೂರ್ಯಚಂದ್ರರು ರಥಚಕ್ರಗಳಾಗಿದ್ದರು. ವೇದಗಳು ಕುದುರೆಗಳಾಗಿದ್ದುವು. ಬ್ರಹ್ಮನು ಸಾರಥಿಯಾಗಿದ್ದನು. ಮೇರುವು ಧನುಸ್ಸಾಗಿತ್ತು. ಆದಿಶೇಷನು ಧನುಸ್ಸಿನ ಹುರಿಯಾಗಿದ್ದನು. ಇಷ್ಟೆಲ್ಲ ಸಲಕರಣೆಗಳನ್ನೂ ಲೆಕ್ಕಿಸದೇ ನೀನು ಕೇವಲ ಒಂದೇ ಹುಂಕಾರದಿಂದ ತ್ರಿಪುರಾಸುರನನ್ನು ಸಂಹರಿಸಿರುವೆ. ||||೭-೮||

ಧಾತಾ ಯಂತಾ ಸುರಾಸ್ಸೇ ತವ ಹರ ಸುಕರಾಃ ಕಿಂಕರಾಃ ಶಂಕರಂ ತ್ವಾಂ
ಸ್ತೋತುಂ ಜ್ಞಾತುಂ ಕಿಲೇಶಃ ಮಮ ಪರಕರಣೇ ಕಾರಣಂ ತ್ವಂ ಮಹೇಶ ॥೯॥

ವಾಮದೇವ ಜಿತಕಾಮ ಸಾಮಸ್ತೋಮಸೀಮ ಸುದೀಧಿತಿಲಲಾಮ ।
ವ್ಯೋಮಕೇಶ ಕುಶಕಾಶಪೂಜಿತೋತ್ಕೃಷ್ಟಕೋಶಗಣಪಂಚಕದೂರ ॥೧೦॥

ಅಜಗಜವರಮೌಳಿಕೃತ್ತಿಧಾರಿನ್
ಸುರಗಜರಾಜಸಮರ್ಚಿತಾಬ್ಜಪಾದ ।
ಅಜಗಜಕರೇಣುಷು ಕಾರಣಂ ತ್ವಾಂ
ಭಜತಾಂ ನಾಸ್ತಿ ಭವೋ ಭವಪ್ರಪನ್ನೇ ॥೧೧॥

ಮಯಿ ಕುರು ಕರುಣಾಂ ಪಿನಾಕಪಾಣೇ
ಭವಭಾವೇಷು ನಿಮಗ್ನಮಾಶಕಾಶ ।
ಸುದಯಾರಸಸಾರಯಾ ದೃಶಾ
ಕೃಶಮಾಪಾದ್ಯ ವಿಲೋಕಯೇಂದುಚೂಡ ॥೧೨॥

ಪರಶಿವನೇ, ಆಗ ಬ್ರಹ್ಮನು ಸಾರಥಿಯಾಗಿದ್ದನು. ದೇವತೆಗಳೆಲ್ಲರೂ ನಿನ್ನ ಪಾದಸೇವಕರು. ನಿನ್ನನ್ನು ಸ್ತುತಿಸುವ ಶಕ್ತಿಯಾದರೂ ನನಗೆ ನಿನ್ನಿಂದಲೇ ಲಭಿಸಿರುವುದು. ॥೯॥

ಮನ್ಮಥನನ್ನು ಜಯಿಸಿದ ಸಾಮಗಾನದಿಂದ ಸ್ತುತಿಸಲ್ಪಡುವ, ಮಹಾಪ್ರಕಾಶ ಸ್ವರೂಪನಾದ, ಆಕಾಶವೇ ತಲೆಗೂದಲಾಗುಳ್ಳ, ವಿರಾಡ್ರೂಪನಾದ ಪರಶಿವನೇ, ಅನ್ನ ಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯಗಳೆಂಬ ಐದು ಕೋಶಗಳಿಂದ ದೂರನಾದ ಓ ಪರಮೇಶ್ವರ, ನನ್ನನ್ನು ಸಲಹು. ॥೧೦॥

ಉತ್ತಮವಾದ ಗಜಚರ್ಮವನ್ನು ಧರಿಸಿರುವ ಸುರಗಜವಾದ ಐರಾವತದಿಂದ ಅರ್ಚಿಸಲ್ಪಡುವ ಓ ದೇವನೇ, ಪ್ರಪಂಚಕಾರಣನಾದ ನಿನ್ನನ್ನು ಭಜಿಸುವವರಿಗೆ ಸಂಸಾರದುಃಖಗಳೆಂದಿಗೂ ಬರಲಾರವು. ॥೧೧॥

ಪಿನಾಕವೆಂಬ ಮಹಾಧನುಸ್ಸನ್ನು ಹಿಡಿದಿರುವ ಓ ದೇವನೇ, ಸಂಸಾರವೆಂಬ ದಾವಾನಲದಲ್ಲಿ ಬಿದ್ದು ಬೇಗೆ ಪಡುತ್ತಲಿರುವ ನನ್ನ ಮೇಲೆ ನಿನ್ನ ಕರುಣಾರಸದೃಷ್ಟಿ ಯನ್ನೆರಚುತ್ತಾ ಸರ್ವದಾ ಸಲಹು. ॥೧೨॥

ತತಸ್ತೋತ್ರತುಷ್ಟೋ ಭಗವಾನ್ ತಸ್ಮೈ ಸ ರಿಟಯೇ ಶಿವಃ ।
ಗಾಣಾಪತ್ಯಂ ದದೌ ದೇವೋ ದೇವ್ಯಾಃ ಪುತ್ರೋಽಪಿ ಕಲ್ಪಿತಃ ॥೧೩॥

ಸ ನಮಸ್ಕೃತ್ಯ ದೇವೇಶಂ ಗೃಹಮಭ್ಯಾಗತಃ ಪಿತುಃ ।
ಪ್ರಣಮ್ಯ ಪಿತರೌ ತತ್ರ ತಯೋರಾನಂದಧೃಕ್ಸ್ವಯಂ ॥೧೪॥

ಅನುಜ್ಞಾಪ್ಯ ಸ್ವಪಿತರೌ ಕೈಲಾಸಶಿಖರೇ ತದಾ ।
ಶಿವಸ್ಯಾನುಚರಸ್ತಸ್ಥೌ ಶಿವಸಾರೂಪ್ಯಭಾಗಭೂತ್ ॥೧೫॥

ರಾಜತ್ಕಪರ್ದವಿಲಸದ್ಗಂಗಾಚಂದ್ರಕಲಾಧರಃ ।
ತ್ರಿನೇತ್ರೋ ನೀಲಕಂಠಶ್ಚ ಭಸ್ಮರುದ್ರಾಕ್ಷಪುಂಡ್ರಕಃ ॥೧೬॥

ಸಂಶೋಭಿತಮಹಾನಾಗಾಶನಹಾರೋ ಗಣೋತ್ತಮಃ ।
ಗಣೈರ್ಲಕ್ಷಪರಿಮಿತೈಸ್ತಾದೃಶೈರಪಿ ಸೇವಿತಃ ॥೧೭॥

ಶಿವಂ ಪ್ರಣಮ್ಯ ತುಷ್ಟಾವ ರಿಟಿಃ ಸ್ತೋತ್ರೇಣ ಶಂಕರಂ ॥೧೮॥

ರಿಟಿಯ ಈ ಸ್ತುತಿಯಿಂದ ಪ್ರಸನ್ನನಾಗಿ ಶಿವನು, ಪಾರ್ವತಿಯ ಪ್ರಿಯಪುತ್ರನನ್ನಾಗಿ ಅವನನ್ನು ಸ್ವೀಕರಿಸಿ, ತನ್ನ ಗಣಗಳ ನಾಯಕತ್ವವನ್ನು ಅವನಿಗೆ ಅನುಗ್ರಹಿಸಿದನು. ॥೧೩॥

ಆಮೇಲೆ ರಿಟಿಯು ಶಿವನಿಗೆ ನಮಸ್ಕರಿಸಿ ಮನೆಗೆ ಬಂದು ತಂದೆತಾಯಿಗಳಿಗೆ ವಂದಿಸಿ, ತನಗೆ ಶಿವನ ವರವು ಲಭಿಸಿದುದನ್ನು ಹೇಳಿ ಅವರನ್ನು ಸಂತಸಪಡಿಸಿದನು. ॥೧೪॥

ಆ ಮೇಲೆ ತಂದೆತಾಯಿಗಳ ಅನುಮತಿಯನ್ನು ಪಡೆದು ಆ ರಿಟಿಯು ಕೈಲಾಸಗಿರಿಗೆ ಬಂದು ಶಿವನ ಸೇವಕನಾದನು. ಆಗ ಅವನಿಗೆ ಶಿವನ ಅನುಗ್ರಹದಿಂದ ಶಿವನ ಸ್ವರೂಪವೇ ಉಂಟಾಯಿತು. ॥೧೫॥

ಶಿವಸ್ವರೂಪವನ್ನು ಪಡೆದಾ ರಿಟಿಯು ಶಿವನಂತೆ ತಲೆಯಲ್ಲಿ ಜಟಿ, ಗಂಗಾಚಂದ್ರರುಳ್ಳವನಾದನು. ಮುಕ್ಕಣ್ಣನಾದನು, ನೀಲಕಂಠನಾದನು, ಭಸ್ಮರುದ್ರಾಕ್ಷಧಾರಿಯಾದನು, ನಾಗಭೂಷಣನಾದನು, ಲಕ್ಷಮಂದಿ ಶಿವಗಣಗಳಿಗೆ ಒಡೆಯನಾದನು. ॥೧೬-೧೭॥

ಆಗ ಅವನು ಶಿವನಿಗೆ ನಮಸ್ಕರಿಸಿ ಭಕ್ತಿಯಿಂದ ಹೀಗೆ ಸ್ತುತಿಸಿದನು. ॥೧೮॥

|| ರಿಟಿರುವಾಚ ||

ಸ್ವರ್ಣವರ್ಣಕೃತನೇತ್ರಕರ್ಣಜಾ
ಪಾರಹಾರ ಗಗನಾರ್ಣವಸಂಸ್ಥ ।
ಊರ್ಣನಾಭಿರಿವ ಜಾಗತಮೇತತ್
ತ್ವದ್ಗತಂ ವಿಸೃಜಸೇತ್ಸಿ ಚ ತೂರ್ಣಂ ||೧೯||

ಶರ್ವ ಸರ್ವಪರಿಪೂರಿತಕಾಮ
ಸ್ಮೃತೇಮಬಾಣಗಣನಾಕರುಣಾಢ್ಯ ।
ಲೋಕನೇಽಪಿ ಕಲನೇಽಪಿ ಕಾಲತಃ
ಕಾಮಕಾಯದಮನಾವ್ಯಯಮೂರ್ತೇ ||೨೦||

ಶ್ರೀಮತ್ತ್ರ್ಯಂಬಕ ಸದಾಶಿವ ವೇದವೇದ್ಯ
ವೈದ್ಯೋತ್ತಮ ಪ್ರಮಥನಾಥ ಸುರಾಸುರೇಡ್ಯ ।
ವಿಶ್ವನಾಥ ಮಮನಾಥ ಪಾಹಿ ಮಾಂ
ಭೀಮನಾಥ ಗಿರಿಜಾಧವ ನಾಥ ||೨೧||

"ಚಿನ್ನದ ಬಣ್ಣದ ಹಾವುಗಳನ್ನು ಕಿವಿ ಕೈಗಳಲ್ಲಿಯೂ ಕುಂಡಲ ಮತ್ತು ಹಾರಗಳನ್ನಾಗಿ ಧರಿಸಿರುವ, ಹಣೆಯಲ್ಲಿ ಉರಿಗಣ್ಣುಳ್ಳ, ಆಕಾಶ ಪಾತಾಳಗಳಲ್ಲೂ ನೆಲಸಿರುವ ಪರಮಾತ್ಮನಾದ ದೇವನೇ, ಜೇಡರ ಹುಳವು ಬಲೆಯನ್ನು ಕಟ್ಟಿ ಪುನಃ ತನ್ನಲ್ಲಿಯೇ ಸೇರಿಸಿಕೊಳ್ಳುವಂತೆ ನೀನು ಈ ಜಗತ್ತನ್ನು ಸೃಷ್ಟಿಸಿ ಪುನಃ ನಿನ್ನಲ್ಲಿಯೇ ಸೇರಿಸಿಕೊಳ್ಳುವೆ. ||೧೯||

ಭಕ್ತರ ಇಷ್ಟಾರ್ಥಗಳೆಲ್ಲವನ್ನೂ ಪೂರಯಿಸಿಕೊಡುವ, ಮರಣಕಾಲದಲ್ಲಿ ಮಾತ್ರ ಸ್ಮರಿಸಿದರೂ ಮೋಕ್ಷಕೊಟ್ಟು ಉದ್ಧರಿಸುವ, ಮನ್ಮಥನನ್ನು ಭಸ್ಮಮಾಡಿದ, ನಾಶರಹಿತನಾದ ದೇವದೇವನೇ, ನನ್ನನ್ನು ಸಲಹು. ||೨೦||

ವೇದಗಳಿಂದ ತಿಳಿಯಲ್ಪಡುವವನೂ, ಮಂಗಳರೂಪನೂ, ಸಂಸಾರವೆಂಬ ರೋಗವನ್ನು ಹೋಗಲಾಡಿಸುವ ಉತ್ತಮ ವೈದ್ಯನೂ, ಪ್ರಮಥಗಣಗಳಿಗೊಡೆಯನೂ, ದೇವಾಸುರರಿಗೆ ರಕ್ಷಕನೂ, ಪರಮೇಶ್ವರನೂ, ಪಾಪಿಗಳಿಗೆ ಭಯಂಕರನೂ ಆದ ಪಾರ್ವತೀಪತಿಯೇ, ನನ್ನನ್ನು ಪಾಲಿಸು." ||೨೧||

॥ ಸೂತ ಉವಾಚ ॥

ತತ್ಸ್ತುತ್ಯಾಽತೀವ ಸಂತುಷ್ಟೋ ಗಣೇಂದ್ರಾಯ ಮಹೇಶ್ವರಃ ।
ದದೌ ಸಂಪ್ರಾರ್ಥಿತಾನ್ ಕಾಮಾನ್ ಬ್ರಹ್ಮವಿಷ್ಣ್ವಾದಿದುರ್ಲಭಾನ್ ॥೨೨॥

ಗಾಣಾಪತ್ಯಂ ಚ ಸಂಪ್ರಾಪ ಶಿವನಾಮಪ್ರಭಾವತಃ ॥೨೩॥

ಭಸ್ಮಾಭ್ಯಕ್ತತನುರ್ಭವಾಮಿ ಸಿತಯುಕ್ಪುಂಡ್ರಾಂಕಗಾತ್ರೋಽಧ್ವನಂ
ರುದ್ರಾಕ್ಷಾದಿವಿಭೂಷಿತಃ ಶಿವಮನುವ್ಯಾಹಾರಮಾತ್ರಾದರಃ ।
ರುದ್ರಾಧ್ಯಾಯಜಪಾನುರಕ್ತಹೃದಯೋ ಲಿಂಗಾರ್ಚನಾತ್ಯಾದರಃ
ಭೂಯಾಜ್ಜನ್ಮಶತೇಷು ಏಷ ವಿಹಿತಸ್ತ್ವತ್ಪಾದಪದ್ಮೇಽಂಜಲಿಂ ॥೨೪॥

ಇತ್ಯೇತದ್ವಚಸಾ ಸುನಂದಿತಹೃದಾ ಸ್ಮೇರಾನನಃ ಶಂಕರಃ ।
ಪ್ರಾಹಾನಂದಭರೇಣ ವಾಕ್ಯಮಧುನಾ ಸಂವೀಕ್ಷ್ಯ ತಂ ವೈ ಶಿವಃ
ತನ್ಮೂರ್ಧ್ನಿ ಸ್ವಕರಾಂಬುಜಂ ಚ ವಿದಧಾವುಚ್ಚೈರ್ವದಂತಂ ಹರಃ ।
ಸರ್ವೇಷಾಮುಪಶೃಣ್ವತಾಂ ಸುರಗಣೇಂದ್ರಾಣಾಂ ಮುನೀನಾಮಪಿ ॥೨೫॥

॥ ಈಶ್ವರ ಉವಾಚ ॥

ಸ್ಕಂದಂ ವಿಘ್ನಾಧಿಪಂ ವಾ ತವ ಸದೃಶಗುಣಂ ನಾಭಿನಂದಾಮಿ ಪುತ್ರ
ವಿಶ್ವಾನಂದೋ ರಿಟಿಸ್ತ್ವಂ ಮಮ ಸುಗುಣಪರೋ ದೇವಸಂಘೈಶ್ಚ ವಂದ್ಯಃ

ರಿಟಿಯ ಈ ಸ್ತುತಿಯಿಂದ ಪ್ರಸನ್ನನಾಗಿ ಶಿವನು ಗಣನಾಯಕತ್ವನ್ನಲ್ಲದೇ ಅವನಿಗೆ ಬ್ರಹ್ಮ ವಿಷ್ಣುಗಳಿಗೂ ದುರ್ಲಭವಾದ ಇಷ್ಟಾರ್ಥಗಳನ್ನು ಅನುಗ್ರಹಿಸಿದನು. ॥೨೩॥

ಭಸ್ಮರುದ್ರಾಕ್ಷಧಾರಿಯಾಗಿ, ಶಿವಮಂತ್ರವನ್ನು ಜಪಿಸುತ್ತಾ ರುದ್ರಸೂಕ್ತವನ್ನು ಪಾರಾಯಣಮಾಡುತ್ತಾ, ಲಿಂಗಾರ್ಚನೆಯನ್ನು ಪ್ರತಿಜನ್ಮದಲ್ಲೂ ನಾನು ಮಾಡುತ್ತಿರುವಂತೆ ಅನುಗ್ರಹಿಸು, ಇದೋ ನಿನಗೆ ಸಾಷ್ಟಾಂಗನಮಸ್ಕಾರವು. ಎಂದು ಆಗಾಗ ಬೇಡುತ್ತಿದ್ದನು. ॥೨೪॥

ರಿಟಿಯ ಈ ಸ್ತುತಿಯಿಂದ ಸಂತಸಪಟ್ಟ ಶಂಕರನು ಮಂದಹಾಸವನ್ನು ಬೀರಿ ಅವನ ತಲೆಯನ್ನು ನೇವರಿಸಿ ಮುನಿಗಳೂ ದೇವತೆಗಳೂ ಕೇಳುವಂತೆ ಗಟ್ಟಿಯಾಗಿ ಹೀಗೆ ಹೇಳಿದನು. ॥೨೫॥

" ಎಲೈ ರಿಟಿಯೇ, ನಿನಗಿಂತಲೂ ಹೆಚ್ಚಾಗಿ ಸ್ಕಂದನನ್ನಾಗಲೀ ವಿನಾಯಕನನ್ನಾಗಲೀ ನಾನು ಆದರಿಸುವುದಿಲ್ಲ ನನ್ನ ಪರಮ ಭಕ್ತನಾದ ನೀನು ನನಗೆ

ಗೌರ್ಯಾಶ್ಚಾಪಿ ಪ್ರಿಯಸ್ತ್ವಂ ತವ ವರತಪಸಾ ನಾಮಜಪ್ಯಂ ಪ್ರಿಯಂ ಮಾಂ
ವಿದ್ಧಿ ತ್ವಯ್ಯೇವ ರಕ್ತಂ ಗಣವರವಿನುತಃ ಸತ್ಯಮುಧ್ಯ ಬ್ರುವೇಽಹಂ ॥೨೬॥

ಮತ್ಸಾರೂಪ್ಯಧರೋ ವಸಾತ್ರ ಭವನೇ ಕೈಲಾಸಮೌಲೌ ಮಮ
ಕುರ್ವನ್ ಮತ್ಪದಪೂಜನಂ ಸುವಿಹಿತೋ ಚಂದ್ರೋತ್ತಮಾಂಗೋ ಭವ ।
ವಿಷ್ಣುಬ್ರಹ್ಮಮಹೇಂದ್ರಮುಖ್ಯಮುಕುಟೀ ನೀರಾಜಿತಂ ಮೇ ಪದಂ
ಧ್ಯಾಯನ್ ಭೃಂಗಿಸಖೋ ಭವಾಶು ಗಣಪಶ್ರೇಷ್ಠಃ ಸದಾ ಮತ್ಪುರಃ ॥೨೭॥

ಏವಂ ಭಾವಃ ಸುಮತೇಸ್ಸುತೋಽಭವತ್
ಸ ಧೂರ್ಜಟಿಪ್ರೇಮಯುತೋ ರಿಟಿಸ್ತದಾ ।
ಲಲಾಟನೇತ್ರೇಣ ತದೈವ ವೀಕ್ಷಿತಃ
ಕಟಾಕ್ಷಕೋಟ್ಯಾ ಸಭವದ್ಗಣೋತ್ತಮಃ ॥೨೮॥

ಇತಿ ಶ್ರೀ ಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ರಿಟೀತಿಹಾಸವರ್ಣನಂ
ನಾಮ ಚತುರ್ವಿಂಶೋಽಧ್ಯಾಯಃ

ಅತಿ ಪ್ರಿಯನಾಗಿದ್ದು ಗೌರಿಯ ಪ್ರಿಯಪುತ್ರನಾಗಿರುವೆ. ದೇವತೆಗಳೂ ನಿನ್ನನ್ನು ವಂದಿಸುವರು. ನಿನ್ನ ತಪಸ್ಸಿನಿಂದ ಸಂತುಷ್ಟನಾದ ನಾನು ನಿನ್ನಲ್ಲಿ ಹೆಚ್ಚಾಗಿ ಆದರವುಳ್ಳವನಾಗಿರುವೆನೆಂದು ಮತ್ತೊಂದು ಬಾರಿ ಹೇಳುವೆನು. ಇದು ಸತ್ಯವಾದುದು. ॥೨೬॥

ನನ್ನ ಸಾರೂಪ್ಯವುಳ್ಳವನಾಗಿ ಸದಾ ಈ ಕೈಲಾಸದಲ್ಲಿ ಚಂದ್ರಶೇಖರನಾಗಿ ವಿಹರಿಸು. ಬ್ರಹ್ಮ ಇಂದ್ರಾದಿಗಳಿಂದ ವಂದಿಸಲ್ಪಡುವ ನನ್ನ ಅಡಿದಾವರೆಯನ್ನು ಅರ್ಚಿಸುತ್ತಾ, ಗಣಶ್ರೇಷ್ಠನಾಗಿ ಭೃಂಗಿಯ ಸಖನಾಗಿ ಸದಾ ನನ್ನ ಎದುರಿದಲ್ಲಿ ಇರುವವನಾಗು, ಎಂದು ಶಂಕರನು ರಿಟಿಗೆ ವರಕೊಟ್ಟನು. ॥೨೭॥

ಹೀಗೆ ಶಿವನ ಅನುಗ್ರಹಕ್ಕೆ ಪಾತ್ರನಾಗಿ ರಿಟಿಯು ಪ್ರಮಥಗಣನಾಯಕನಾದುದಲ್ಲದೇ ಶಿವನ ಪ್ರಿಯಪುತ್ರನೂ ಆಗಿ ಶಿವನಂತೆ ಹಣೆಯಲ್ಲಿ ಉರಿಗಣ್ಣುಳ್ಳವನಾದನು, ಎಂದು ಕುಮಾರಸ್ವಾಮಿಯು ಜೈಗೀಷವ್ಯ ಮುನಿಗೆ ತಿಳಿಸಿದನು. ॥೨೮॥

ಶಿವರಹಸ್ಯದಲ್ಲಿ ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಪಂಚವಿಂಶೋಽಧ್ಯಾಯಃ

|| ಸ್ಕಂದ ಉವಾಚ ||

ಕಣ್ವೋಽಪಿ ಪೂಜಯಾಮಾಸ ಮಹಾದೇವಂ ಮಹೇಶ್ವರಂ ।
ಧ್ಯಾನಾರ್ಚನೈರ್ವಂದನೈಶ್ಚ ಭಸ್ಮರುದ್ರಾಕ್ಷಭೂಷಣಃ ॥೧॥

ರುದ್ರಾಧ್ಯಾಯಜಪಾಸಕ್ತೋ ರುದ್ರಲಿಂಗಾರ್ಚನೇ ರತಃ ।
ಕುಶಾಶ್ರಮೇ ಪುರಾ ವಿಪ್ರ ಕುಶಕಾಶೈಃ ಸಮರ್ಚಯನ್ ॥೨॥

ತುಷ್ಟಾವಾಷ್ಟಾಕೃತಿಂ ಶಂಭುಂ ಕಣ್ವಃ ಕಂಜಜಪೂಜಿತಂ ॥೩॥

|| ಕಣ್ವ ಉವಾಚ ||

ಉಪಮನ್ಯುವರಪ್ರದೋರುಮನ್ಯೋ
ಶತಮನ್ಯುಶಿಕ್ಷ ದಕ್ಷಶಿಕ್ಷ ಶಂಭೋ ।

ಇಪ್ಪತ್ತೈದನೆಯ ಅಧ್ಯಾಯ

ಎಲೈ ಜೈಗೀಷವ್ಯನೇ, ಮತ್ತೊಂದು ಇತಿಹಾಸವನ್ನು ಕೇಳು. ಕಣ್ವ ಮುನಿಯು ಮಹಾಶಿವಭಕ್ತನು. ಅವನು ಕುಶಾಶ್ರಮದಲ್ಲಿ ವಾಸಿಸುತ್ತಾ ಭಸ್ಮ ರುದ್ರಾಕ್ಷಧಾರಿಯಾಗಿ ಧ್ಯಾನವಂದನಗಳಿಂದಲೂ, ರುದ್ರಸೂಕ್ತ ಜಪದಿಂದಲೂ ಶಿವನನ್ನರ್ಚಿಸುತ್ತಿದ್ದನು. ||೧-೨||

ಆಗ ಕಣ್ವನು ಬ್ರಹ್ಮಾದಿಗಳಿಂದ ಸೇವಿಸಲ್ಪಡುವ ಅಷ್ಟಮೂರ್ತಿಯಾದ ಶಿವನನ್ನು ಹೀಗೆ ಸ್ತುತಿಸಿದನು. ||೩||

"ಉಪಮನ್ಯುವಿಗೆ ವರಪ್ರದಾನಮಾಡಿದ, ಇಂದ್ರನ ಗರ್ವವನ್ನು ಮುರಿದ, ದಕ್ಷನ ಯಾಗವನ್ನು ಹಾಳುಮಾಡಿದ, ಜಟೆಯಲ್ಲಿ ಗಂಗೆಯನ್ನು ಧರಿಸಿದ, ಅರ್ಧ

ಸುರಮೂರ್ಧಸರಿನ್ನಗೇಂದ್ರಕನ್ಯಾ
ವರಮನ್ಯೇಹಮನ್ವೈಮಿ ಭಕ್ತಿಧನ್ಯಂ ॥೪॥

ಗಿರಿವರಧನುಶರಮುರಹರ
ವರಕಾಕೋದರಹಾರಮೌರ್ವಿ।
ಉರ್ವೀರಥ ರಥಿಕಾಗ್ನಿ ಸೂರಕೇಂದೋ
ಪ್ರವಿಜೇತಾ ಪುರಹನ್ ಭವಾದ್ಯ ಪಾಹಿ ॥೫॥

ಕುಸುಮಶರಾರಿಪುರಾರಿಪದಪದ್ಮೇ
ಪ್ರವಿಶ ಶರೇವ ಪ್ರಕೃಷ್ಟಪಾಥಃ।
ಮನಸಿಜಮನಸಾ ಜಗತ್ಪ್ರಮುಗ್ಧಂ
ಹರ ಮುಗ್ಧೇಂದುಕಿರೀಟಕೋಟಿಚೂಡೇ (?) ॥೬॥

ವಿಶ್ವಾಮಿತ್ರೋಽಪಿ ದೇವೇಶಂ ಸಮಾರಾಧ್ಯ ಪುರಾಮುನೇ।
ಭಸ್ಮರುದ್ರಾಕ್ಷಸಂಪನ್ನಃ ರುದ್ರಲಿಂಗಾರ್ಚನೇ ರತಃ ॥೭॥

ಶರೀರದಲ್ಲಿ ಗಿರಿಜೆಯನ್ನುಳ್ಳ, ಪರಮೇಶ್ವರನೇ, ನಿನ್ನನ್ನು ನಾನು ಭಕ್ತಿಯಿಂದ ಧ್ಯಾನಿಸುವೆನು. ॥೪॥

ತ್ರಿಪುರಸಂಹಾರ ಕಾಲದಲ್ಲಿ ಭೂಮಿಯನ್ನೇ ರಥವನ್ನಾಗಿಯೂ ಚಂದ್ರ ಸೂರ್ಯರನ್ನು ರಥಚಕ್ರವನ್ನಾಗಿಯೂ ಮಾಡಿ, ಬ್ರಹ್ಮನನ್ನು ಸಾರಥಿಯಾಗಿಟ್ಟು ಕೊಂಡು, ಮೇರು ಗಿರಿಯನ್ನು ಧನುಸ್ಸನ್ನಾಗಿಯೂ, ಆದಿಶೇಷನನ್ನು ಧನುಸ್ಸಿನ ಮೌರ್ವಿಯಾಗಿಯೂ ನಾರಾಯಣನನ್ನು ಬಾಣವಾಗಿಯೂ ಪರಿವರ್ತಿಸಿ ತ್ರಿಪುರಾಸು ರರನ್ನು ಸಂಹರಿಸಿದ ದೇವನೇ ನನ್ನನ್ನು ಪಾಲಿಸು. ॥೫॥

ಎಲೈ ಮನಸ್ಸೆ, ಮನ್ಮಥನ ಬಾಣಕ್ಕೆ ವಿಕಾರಗೊಳ್ಳಬೇಡ, ಮನ್ಮಥವೈರಿ ಯಾದ ಶಿವನನ್ನು ಭಜಿಸು; ಬಾಲಚಂದ್ರಕಲಾಧರನಾದ ತ್ರಿಪುರಸಂಹಾರಿಯಾದ ಮಹಾದೇವನನ್ನು ಧ್ಯಾನಿಸು ಬಾಣದಂತೆ ಶಿವಪಾದವನ್ನು ಭಜಿಸು." ॥೬॥

ಎಲೈ ಜೈಗೀಷವ್ಯನೇ, ಇದೇ ರೀತಿ ಹಿಂದೆ ವಿಶ್ವಾಮಿತ್ರಮುನಿಯೂ ಭಸ್ಮ ರುದ್ರಾಕ್ಷಧಾರಿಯಾಗಿ ಶಿವಲಿಂಗವನ್ನರ್ಚಿಸಿ ಶಿವನ ಅನುಗ್ರಹವನ್ನು ಪಡೆದು, ಆದರ ಪ್ರಭಾವದಿಂದ ತ್ರಿಶಂಕುವಿಗೆ ಸ್ವರ್ಗವನ್ನು ಕಲ್ಪಿಸಿದನು. ॥೭॥

ತ್ರಿಶಂಕುಶಂಕುಭೂತಂ ಚ ದೇವಾನಾಂ ಸ್ವರ್ಗಿಣಂ ವ್ಯಧಾತ್ ।
ಸ್ವಯಂ ವಿಧಾತೃಪದವೀಂ ಸಸರ್ಜ ಭುವನಂ ಮುನಿಃ ॥೮॥

ಶಿವಪೂಜಾಪ್ರಭಾವೇನ ಸ್ತುತ್ವಾ ಚ ಪರಮೇಶ್ವರಂ ॥೯॥

॥ ವಿಶ್ವಾಮಿತ್ರ ಉವಾಚ ॥

ಹೇಮಾಂಬುಜೋದ್ಭವಷಡಾನನವಾರಣಾಸ್ಯ
ಸಂಸೇವಿತಾಂಘ್ರಿಕಮಲಂ ತರುಣೇಂದುಚೂಡಂ ।
ಮಂದಾರವೃಂದಪರವಂದಿಮುಕುಂದನೇತ್ರ
ಪಾದಾರವಿಂದಮಗಜಾಪತಿಮೇವ ಯಾಮಿ ॥೧೦॥

ನಾಗನಾಗನಗವಾಸಕೃತ್ತಿಧೃಕ್
ಭೂರಿಹಾರ ಸುರವೀರಕುಮಾರ ।
ಮಾರಮಾರ ಕರವೀರಸುಮಾದ್ಯ
ಸ್ರಗ್ಧರಾಮರವರಾವ ಮಹೇಶ ॥೧೧॥

ಕಪಿಲೋಽಪಿ ಮಹಾಯೋಗೀ ಶೈವಾಚಾರ್ಯೋಽಭವನ್ಮುನೇ ।
ಭಸ್ಮರುದ್ರಾಕ್ಷಸಂಪನ್ನಃ ಶಿವಲಿಂಗಾರ್ಚನೇ ರತಃ ॥೧೨॥

ಸಂಸ್ತುವನ್ ಸಾಂಬಮೀಶಾನಂ ಕಪಿಲಃ ಪಿಕಲಾಯುತಃ ॥೧೩॥

ಶಿವಪೂಜೆಯ ಮಹಿಮೆಯಿಂದಾ ವಿಶ್ವಾಮಿತ್ರನು, ತಾನೇ ಸೃಷ್ಟಿಕರ್ತನಂತೆ ಪ್ರಪಂಚವನ್ನು ಸೃಷ್ಟಿಸಿದನು. ಆಗಲೂ ಅವನು, ||೮-೯||

ಬ್ರಹ್ಮದೇವ, ಷಣ್ಮುಖಸ್ವಾಮಿ, ಗಜಾನನ-ಇವರಿಂದ ಸೇವಿಸಲ್ಪಡುವವನೂ ನಾರಾಯಣನ ನೇತ್ರಕಮಲದಿಂದ ಅರ್ಚಿಸಲ್ಪಟ್ಟವನೂ ಆದ ಚಂದ್ರಶೇಖರನಾದ ಗಿರಿಜಾಪತಿಯನ್ನು ನಾನು ಶರಣು ಹೊಂದುವೆನು. ||೧೦||

ಗಜಚರ್ಮಧಾರಿಯೂ, ನಾಗಭೂಷಣನೂ; ಮಹಾವೀರನಾದ ಷಣ್ಮುಖನ ಜನಕನೂ, ಮನ್ಮಥವೈರಿಯೂ, ಕರವೀರ ಪುಷ್ಪಹಾರವುಳ್ಳವನೂ ಆದ ಪರಮೇಶ್ವರನೇ, ನನ್ನನ್ನು ಪಾಲಿಸು. ಎಂದು ಸ್ತುತಿಸಿದನು. ||೧೧||

ಎಲೈ ಮುನಿಯೇ, ವಿಶ್ವಾಮಿತ್ರನಂತೆ ಕಪಿಲಮುನಿಯೂ ಮಹಾಯೋಗಿಯಾಗಿದ್ದು ಶಿವಭಕ್ತಾಗ್ರೇಸರನಾಗಿದ್ದನು. ಅವನೂ ಭಸ್ಮ ರುದ್ರಾಕ್ಷಿಧಾರಿಯಾಗಿ ಶಿವಲಿಂಗವನ್ನು ಆರಾಧಿಸುತ್ತಾ ಭಕ್ತಿಯಿಂದ ಹೀಗೆ ಸ್ತುತಿಸಿದನು. ||೧೨-೧೩||

|| ಕಪಿಲ ಉವಾಚ ||

ಗಂಗೋತ್ತಮಾಂಗಶಶಿಸಂಗ ಭುಜಂಗಸಂಗತುಂಗೋ
ತ್ತಿತಾಂಗ ವೃಷಭಾಂಗ ಮಹೇಶ ಶಂಗ ।
ಶ್ರೀವ್ಯೋಮಕೇಶ ಭವಭಂಗ ಶುಭಾಂಗಶಂಭೋ
ಪಾಹೀಶ ಮಾಂ ತವ ದಯಾಪ್ರಸರೈರಪಾಂಗೈಃ ||೧೪||

ಯಾಮಿನೀರಮಣಖಂಡಧಾರಿಣಂ
ಕಾಮಿನೀವಿಧೃತಸಾಮಿವಿಗ್ರಹಂ ।
ಸ್ತೌಮಿ ದೇವಮಗಜಾಮನೋಹರಂ
ನೌಮಿ ಕಾಯಮನಸಾ ಸದೈವ ಹಿ ||೧೫||

ಸೌದಾಮಿನೀವ ತರಲಾಯುಷಿ ಶಂಭುಮಾಶಂ ||೧೬||

ದೂರ್ವಾಸಾಽಪಿ ಮಹಾಶೈವಃ ಶಿವಲಿಂಗಸಮರ್ಚಕಃ ।
ಭಸ್ಮರುದ್ರಾಕ್ಷರುದ್ರಾದಿಪಂಚಾಕ್ಷರಪರಾಯಣಃ ||೧೭||

" ಜಟೆಯಲ್ಲಿ ಚಂದ್ರಕಲೆಗಂಗೆಯರನ್ನು ಧರಿಸಿದವನೂ, ನಾಗಭೂಷಣನೂ, ವೃಷಭವಾಹನನೂ, ಸುಖಕರನೂ, ಆಕಾಶವೇ ತಲೆಗೂದಲಾಗುಳ್ಳ ವಿರಾಟ್ಪುರುಷನೂ, ಸುಂದರಶರೀರವುಳ್ಳವನೂ ಆದ ಓ ಪರಮೇಶ್ವರ, ನಿನ್ನ ಕರುಣಾದೃಷ್ಟಿಯಿಂದ ನನ್ನನ್ನು ನೋಡಿ ಸಲಹು. ||೧೪||

ರಾತ್ರಿರಮಣನಾದ ಚಂದ್ರನ ಕಲೆಯನ್ನು ಧರಿಸಿದವನೂ, ಅರ್ಧಶರೀರದಲ್ಲಿ ಕಾಮಿನಿ (ಗಿರಿಜೆ)ಯನ್ನು ಧರಿಸಿದವನೂ, ಆದ ಪಾರ್ವತೀಪತಿಯನ್ನು ಮನೋವಾಕ್ಕಾಯಗಳಿಂದ ಸದಾ ನಮಸ್ಕರಿಸುವೆನು. ||೧೫||

ಮಿಂಚಿನಂತೆ ಅಸ್ಥಿರವಾದೀ ನನ್ನ ಜೀವನದಲ್ಲಿ ಬದುಕಿದಷ್ಟು ದಿನವೂ ಬಿಡದೇ ಶಿವನನ್ನು ಧ್ಯಾನಿಸುವೆನು." ||೧೬||

ದೂರ್ವಾಸಮುನಿಯೂ ಮಹಾಶಿವಭಕ್ತನು. ಅವನು ಭಸ್ಮರುದ್ರಾಕ್ಷಧಾರಿಯಾಗಿ, ಶಿವಪಂಚಾಕ್ಷರಗಳನ್ನು ಜಪಿಸುತ್ತಾ ಸದಾ ಶಿವಲಿಂಗವನ್ನು ಭಕ್ತಿಯಿಂದ ಅರ್ಚಿಸುತ್ತಿದ್ದನು. ||೧೭||

ತುಷ್ಟಾವ ದೇವಮೀಶಾನಂ ದೇವದೇವಮುಮಾಪತಿಂ ॥೧೮॥

॥ ದೂರ್ವಾಸಾ ಉವಾಚ ॥

ಅಭೇದ್ಯ ವೈದ್ಯೋತ್ತಮ ವೇದವೇದ್ಯ
ವಿದ್ಯುತ್ಪ್ರಭೋದ್ಯತ್ಸುಕಪರ್ದ ಶಂಭೋ ।
ವಿದ್ಯಾಹ್ಯವಿದ್ಯಾಽಪಿ ಚ ತೇ ಕಟಾಕ್ಷತಃ
ಸುದ್ಯೋತತೇಽದ್ಯೈವ ವಿನಾಶಮೇತಿ ॥೧೯॥

ಉಡುಗಣಪತಿಚೂಡಂ ಹ್ಯಜ್ಞಡಾನಾಂ ಚ ದೂರಂ
ವೃಡಮನಡುಹಗೇಡ್ಯಂ ವೇದವೇದಾಂತಸಂಘೈಃ ।
ದೃಢತರಹೃದಯಾಬ್ಜೇ ಗಾಢಮಾಲಿಂಗ್ಯ ದೇವೀಂ
ಸ್ಥಿತಮನಲಶಿಖಾಗ್ರೇ ಶೂಲಪಾಣೇ ಭಜೇಽಹಂ ॥೨೦॥

ಭೃಗುಶ್ಚಾಪಿ ಸಮಾರಾಧ್ಯ ದೇವಮೀಶಂ ಕಪರ್ದಿನಂ ।
ಭಸ್ಮತ್ರಿಪುಂಡ್ರರುದ್ರಾಕ್ಷಧಾರಕಃ ಶಿವಪೂಜಕಃ ॥೨೧॥

ಆ ಮುನಿಯು ಹಾಗೆ ಅರ್ಚಿಸಿ ಮಹಾದೇವನನ್ನು ನಿತ್ಯವೂ ಹೀಗೆ ಸ್ತುತಿಸಿದನು. ॥೧೮॥

“ಶಸ್ತ್ರಾದಿಗಳಿಂದ ಭೇದಿಸಲಶಕ್ಯನೂ, ಸಂಸಾರವೆಂಬ ರೋಗವನ್ನು ಹೋಗಲಾಡಿಸುವ ಉತ್ತಮವೈದ್ಯನೂ, ವೇದಗಳಲ್ಲಿ ಸ್ತುತಿಸಲ್ಪಡುವವನೂ, ಆದ ಚಂದ್ರಶೇಖರನೇ, ನಿನ್ನ ಅನುಗ್ರಹದಿಂದಲೇ ಜ್ಞಾನವು ಉದಯಿಸುವುದು, ಅಜ್ಞಾನವು ನಾಶವಾಗುವುದು. ॥೧೯॥

ತಾರಾಧಿಪತಿಯಾದ ಚಂದ್ರನನ್ನು ಜಟೆಯಲ್ಲಿ ಧರಿಸಿದವನೂ, ಅಜ್ಞಾನಿಗಳಿಗೆ ಅಗೋಚರನೂ, ವೃಷಭವಾಹನನೂ, ವೇದವೇದಾಂತಗಳಿಂದ ಸ್ತುತಿಸಲ್ಪಡುವವನೂ, ಅರ್ಧ ಶರೀರದಲ್ಲಿ ಗಿರಿಜೆಯನ್ನಾಲಿಂಗಿಸಿಕೊಂಡಿರುವವನೂ, ಆದ ಮಹಾದೇವನನ್ನು ಹೃದಯದಲ್ಲಿ ದೃಢವಾಗಿ ಭಜಿಸುವೆನು.” ॥೨೦॥

ದೈತ್ಯಗುರುವಾದ ಭೃಗುಮುನಿಯೂ ಸಹ ಶಿವಭಕ್ತನಿದ್ದು ಭಸ್ಮರುದ್ರಾಕ್ಷಿಧಾರಿಯಾಗಿ ನಿತ್ಯವೂ ಮಹಾದೇವನನ್ನರ್ಚಿಸುತ್ತಿದ್ದನು. ॥೨೧॥

ವಿಷ್ಣುಂ ಶಶಾಪ ಕೋಪಾದ್ಧಿ ಸ್ವಭಾರ್ಯಾನಿಧನೇ ರತಂ ।
ದೈತ್ಯಸಾಹಾಯ್ಯಕರಣೇ ತದಾ ತುಷ್ಟಾವ ಶಂಕರಂ ॥೨೨॥

॥ ಭೃಗುರುವಾಚ ॥

ಅಜಗಜಪುರಮಾರದಕ್ಷಶಿಕ್ಷಂ
ಯಮಭಗಮುರವೈರಿಗರ್ವನಾಶಂ ।
ಜನವನಪಿತರಂ ಋಷಿಂ ಮಹೇಶಂ
ಮನಸಾ ಯಾಮಿ ಕಲಾಧರೋರುಮೌಳಿಂ ॥೨೩॥

ಜನಕಂ ಶ್ರುತಿಗೀತಮೇನಮೇಕಂ
ವಿಧಿವಿಷ್ಣ್ವಿಂದ್ರಯಮಾನಿಲಾನಲಾನಾಂ ।
ಮರುತಾಂ ಪಿತರಂ ಮಹೇಶಮಾದ್ಯಂ
ಶ್ರುತಿವೇದ್ಯಂ ಪರಮಂ ನತೋಽಸ್ಮಿ ಭಾವಪೂಜ್ಯಂ ॥೨೪॥

ತಥೈವ ಚ ಸನಂದೋಽಪಿ ಶಿವಲಿಂಗಂ ಸಮರ್ಚಯನ್ ।
ಭಸ್ಮರುದ್ರಾಕ್ಷಸಂಪನ್ನಃ ತುಷ್ಟಾವ ಜಗದೀಶ್ವರಂ ॥೨೫॥

ತನ್ನ ಹೆಂಡತಿಯನ್ನು ಕೊಲ್ಲಲುದ್ಯುಕ್ತನಾದ ನಾರಾಯಣನನ್ನು ಆ ಭೃಗು ಮುನಿಯು ಶಿವನ ಪ್ರಭಾವದಿಂದ ಶಪಿಸಿದನು. ದೈತ್ಯರ ಸಹಾಯಕ್ಕಾಗಿ ಆ ಮುನಿಯು ಶಿವನನ್ನು ಹೀಗೆ ಸ್ತುತಿಸಿರುವನು. ॥೨೨॥

"ಬ್ರಹ್ಮ, ಗಜಾಸುರ, ತ್ರಿಪುರಾಸುರ, ಮನ್ಮಥ ದಕ್ಷರನ್ನು ಶಿಕ್ಷಿಸಿದವನೂ, ಯಮ, ಸೂರ್ಯ, ನಾರಾಯಣರ ಗರ್ವವನ್ನು ಮುರಿದವನೂ, ಜ್ಞಾನಸ್ವರೂಪನೂ, ವೇದಗಳನ್ನು ಪ್ರಕಾಶಪಡಿಸಿದವನೂ, ಆದ ಚಂದ್ರಶೇಖರನನ್ನು ಮನಸ್ಸಿನಲ್ಲಿ ಧ್ಯಾನಿಸುವೆನು. ॥೨೩॥

ಜಗತ್ತಿಗೆ ಜನಕನೂ, ಬ್ರಹ್ಮ, ಹರಿ ಇಂದ್ರ ಯಮ ವಾಯು ಅಗ್ನಿ ಮರುತ್ತುಗಳಿಗೆ ಪಿತನೂ; ಅದ್ವಿತೀಯನೂ, ಅನಾದಿಪುರುಷನೂ, ವೇದಗಳಿಂದ ತಿಳಿಯಲ್ಪಡುವವನೂ, ಭಕ್ತಿಯಿಂದ ಲಭ್ಯನೂ ಆದ ಪರಮೇಶ್ವರನಿಗೆ ನಮಸ್ಕರಿಸುವೆನು." ॥೨೪॥

ಭೃಗುವಿನಂತೆ ಸನಂದನೆಂಬುವನೂ ಭಸ್ಮರುದ್ರಾಕ್ಷಧಾರಿಯಾಗಿ ಶಿವಲಿಂಗವನ್ನರ್ಚಿಸುತ್ತಿದ್ದು ಹೀಗೆ ಸ್ತುತಿಸಿರುವನು. ॥೨೫॥

|| ಸನಂದ ಉವಾಚ ||

ಅನೀಶಂ ತ್ವಾಮಿಶಂ ವದತಿ ರುಶತೀಭಿಶ್ಶ್ರುತಿತಮಾ
ಸನಾಥಂ ತ್ವಾಮಾದ್ಯಂ ಭವಹರಮಭೇದ್ಯಂ ಹಿ ಕರಣೇ ।
ಅಸಂಗಂ ಸಂಗೇಷು ಪ್ರಥಿತಪರಮಾನಂದಮಧುರಂ
ಧರಾನೀರವ್ಯೋಮ್ನಾಂ ಪವನತಪನೈರೇವ ಜಗತಿ ||೨೬||

ಪಶುಪಿಶಿತಹುತಾಶತರ್ಪಿತಾಶಾಃ
ಕಥಮಧುನಾ ಸುರಾ ಹಿ ಸತ್ರಕಾಶಾಃ ।
ಶರಣಾಯ ಭವಂತಿ ನಾರಕಾಣಾಂ
ತರುಣಾವಾರಿನಿಧಿಂ ವಿಹಾಯ ದೇವಂ ||೨೭||

ಸಾನಂದೋಽಪಿ ಪುರಾ ಪ್ರಾಪ್ಯ ಗಾಣಾಪತ್ಯಮವಾಪ ಸಃ ।
ಭಸ್ಮತ್ರಿಪುಂಡ್ರನಿಟಿಲೋ ಸಾನಂದೋ ನಂದಿತಾಂತರಃ ||೨೮||

|| ಸಾನಂದ ಉವಾಚ ||

ಅನಶನಮನನ್ಯೈರುಪಾಯಸಂಘ್ಯೈಃ
ನ ಹಿ ಮೋದಾಯ ನಮೈನಸಾಂ ಕ್ಷಯಾಯ ।

"ಓ ದೇವ, ಶ್ರುತಿಯು ನಿನ್ನನ್ನು ಒಡೆಯನಿಲ್ಲದ ಪರಮೇಶ್ವರನೆಂದೂ, ಅನಾಥರನ್ನು ಸಲಹುವವನೆಂದೂ, ಅನಾದಿಪುರುಷನೆಂದೂ, ಸಂಸಾರವನ್ನು ಹೋಗಲಾಡಿಸುವವನೆಂದೂ, ಇಂದ್ರಿಯಗಳಿಗೆ ನಿಲುಕದ ಪರಮಾತ್ಮನೆಂದೂ, ಆನಂದಸ್ವರೂಪನೆಂದೂ, ಭೂಮಿಜಲ ಆಕಾಶಗಾಳಿ ತೇಜಸ್ಸುಗಳಿಂದ ಜಗತ್ತನ್ನು ವ್ಯಾಪಿಸಿರುವವನೆಂದೂ ಹೇಳುವುದು. ||೨೬||

ನಾವು ಕೊಟ್ಟ ಪಶುವಿನ ಮಾಂಸದಿಂದ ಜೀವಿಸುವ ದೇವತೆಗಳು ನರಕದಲ್ಲಿ ಬೀಳುವವರನ್ನು ಹೇಗೆ ಉದ್ಧರಿಸಿಯಾರು? ದೇವ, ನಿನ್ನ ಹೊರತು ಯಾರೂ ನನ್ನನ್ನು ರಕ್ಷಿಸಲಾರರು." ||೨೭||

ಸಾನಂದನೆಂಬ ಶಿವಭಕ್ತನು ಶಿವನನ್ನು ಅನುದಿನವೂ ಆರಾಧಿಸಿ ಶಿವನ ಗಣಗಳ ನಾಯಕನಾದನು, ಆಗ ಅವನು ಶಿವನನ್ನು ಹೀಗೆ ಸ್ತುತಿಸಿದನು. ||೨೮||

"ಓ ದೇವ, ನಿರಾಹಾರದಿಂದಿದ್ದು ಎಷ್ಟೊಂದು ಬರಿಯ ಕರ್ಮಾಚರಣೆಗಳನ್ನು ನಡೆಸಿದರೂ ಭೋಗವಾಗಲೀ ಮುಕ್ತಿಯಾಗಲೀ ಸಿಗಲಾರದು. ಮಹಾರಾಜನನ್ನು

ಅವನೀತಲಪಾಲಸನ್ನಿಧೌ ಪ್ರಣಾಮಃ
ತವ ಭಕ್ತ್ಯಾ ಸುಕರೋ ಹಿ ಬಂಧಮುಕ್ತ್ಯೈ ॥೨೯॥

ರವಾರಮಣಕಾರಣಂ ವಿಧಿಹರೀಂದ್ರಸಂತೋಷಣಂ
ಗರಾರುಣಗಲಂರಣಂ ಕುಸುಮಬಾಣಸಂಶೋಷಣಂ ।
ಭಜಾಮಿ ಪವನಾಶನಪ್ರಥಿತಹಾರಬಾಣಾಸನೀ
ಕೃತಾಗಮಗಕನ್ಯಕಾಪತಿಮಪಾರವೇದೇಷಣಂ ॥೩೦॥

ಇತ್ಥಂ ದೇವಮುಮಾಪತಿಂ ಪಶುಪತಿಂ ಸಂಪೂಜ್ಯ ತೇ ಲೇಭಿರೇ
ಕಾಮಾನ್ ಕಾಮಾಂಗನಾಶಪ್ರಥಿತತರದಯಯಾ ವಿಪ್ರವರ್ಯಾ ಗಣೇಂದ್ರಾಃ।
ಸಾನಂದಾದ್ಯಾ ಮಹೇಶಂ ಹಿಮಗಿರಿಶಿಖರೇ ಕಾಮದೇ ವೈದ್ಯನಾಥೇ
ಶ್ರೀಶೈಲೇ ತ್ರ್ಯಂಬಕೇ ಚ ಚಿರಿಗಿರಿಶಿಖರೇ ಗೋನಗೇ ಕೃತ್ತಿಶೈಲೇ ॥೩೧॥

ಆರಾಧ್ಯೈವ ಸದಾಶಿವಂ ತ್ರಿಜಗತಾಮಾಧಾರಭೂತಂ ಹರಂ
ವಿಶ್ವಾತೀತಮಜೇಂದ್ರವಿಷ್ಣುಜನಕಂ ಸೋಮಂ ಮೃಡಂ ಕಾಮದಂ ।

ಸೇವಿಸಿದರೂ ಪ್ರಯೋಜನವಿಲ್ಲ. ಪರಮೇಶ್ವರನಾದ ನಿನ್ನನ್ನು ಭಕ್ತಿಯಿಂದ ಸೇವಿಸಿದರೆ ಮಾತ್ರ ಇಹದಲ್ಲಿ ಸೌಖ್ಯವೂ ಪರದಲ್ಲಿ ಮುಕ್ತಿಯೂ ಲಭಿಸುವುವು. ॥೨೯॥

ಹರಿಯನ್ನು ಸೃಷ್ಟಿಸಿದವನೂ, ಹರಿಬ್ರಹ್ಮ ಇಂದ್ರರನ್ನನುಗ್ರಹಿಸಿದವನೂ, ನೀಲಕಂಠನೂ, ಮದನವೈರಿಯೂ, ನಾಗಭೂಷಣನೂ, ಮೇರುವನ್ನು ಧನುಸ್ಸನ್ನಾಗಿ ಹಿಡಿದ ಮಹಾವೀರನೂ, ವೇದಗಳಿಂದ ಸ್ತುತಿಸಲ್ಪಡುವವನೂ ಆದ ಗಿರಿಜಾಪತಿಯನ್ನು ಭಕ್ತಿಯಿಂದ ಭಜಿಸುವೆನು.” ॥೩೦॥

ಹೀಗೆ ಆ ಸಾನಂದಾದಿಗಳು ಉಮಾಪತಿಯಾದ ಪರಮೇಶ್ವರನನ್ನು ಹಿಮಾಲಯ, ವೈದ್ಯನಾಥಕ್ಷೇತ್ರ, ಶ್ರೀಶೈಲಕ್ಷೇತ್ರ, ಚಿರಗಿರಿ, ಗೋಪರ್ವತ, ಕೃತ್ತಿ ಶೈಲ, ಗಳಲ್ಲಿ ಭಕ್ತಿಯಿಂದ ಆರಾಧಿಸಿ ಅವನ ಅನುಗ್ರಹವನ್ನು ಪಡೆದು ಸಕಲೇಷ್ಟಾರ್ಥಗಳನ್ನೂ ಹೊಂದಿದರು. ಶಿವನ ಗಣಗಳಿಗೆ ನಾಯಕರಾದರು. ಆ ದೇವದೇವನ ಸಾರೂಪ್ಯವನ್ನೂ ಹೊಂದಿದರು. ॥೩೧॥

ಮೂರು ಲೋಕಗಳಿಗೆ ಆಧಾರನೂ, ಬ್ರಹ್ಮವಿಷ್ಣು ಇಂದ್ರರನ್ನು ಸೃಷ್ಟಿಸಿದವನೂ, ಮಂಗಳಸ್ವರೂಪನೂ, ಇಷ್ಟಾರ್ಥಗಳೆಲ್ಲವನ್ನು ಅನುಗ್ರಹಿಸುವವನೂ, ಸಕಲ

ಸರ್ವೇಷಾಮಘನಾಶನಂ ಗರಧರಂ ಶರ್ವಂ ಪಶೂನಾಂ ಪತಿಂ
ಮುಕ್ತ್ವಾ ಏವ ಭವಾಂಘ್ರಿಪಂಕಜರತಾಃ ಭಾವಾಃ ಕೃತಾರ್ಥಾಃ ಪುರಾ ॥೩೨॥

ಇತಿ ಶ್ರೀ ಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ಕಣ್ವ-ವಿಶ್ವಾಮಿತ್ರ-ಕಪಿಲ ದೂರ್ವಾಸಭೃಗುಸನಂದನಸಾನಂದಾದಿಮಹರ್ಷಿತಪೋವರ್ಣನ ಶಿವಪ್ರಸಾದಾದಿವರ್ಣನಂ ನಾಮ ಪಂಚವಿಂಶೋಽಧ್ಯಾಯಃ

ಪಾಪಗಳನ್ನು ಹೋಗಲಾಡಿಸುವವನೂ, ನೀಲಕಂಠನೂ, ಪಶುಪತಿಯೂ ಆದ ಪರಮೇಶ್ವರನನ್ನು ಆರಾಧಿಸಿ ಆ ಸಾನಂದಾದಿಮುನಿಗಳೆಲ್ಲರೂ ಕೃತಾರ್ಥರಾದರು, ಶಿವಸಾರೂಪ್ಯವನ್ನು ಪಡೆದರು. ಎಂದು ಕುಮಾರಸ್ವಾಮಿಯು ಜೈಗೀಷವ್ಯ ಮಹಾಮುನಿಗೆ ತಿಳಿಸಿದನು. ॥೩೨॥

ಶಿವರಹಸ್ಯದಲ್ಲಿ ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಷಡ್ವಿಂಶತಿತಮೋಽಧ್ಯಾಯಃ

॥ ಸ್ಕಂದ ಉವಾಚ ॥

ವಿಧಿರ್ವಿಧಿವಶಾದ್ವಿಪ್ರ ಕೃತ್ವಾಽಽಗೋ ದುಷ್ಕರಂ ಪುರಾ ।
ನಾನಿಷ್ಕೃತಿಸ್ತ್ರೀನೇತ್ರಸ್ಯ ಪ್ರಸಾದೇನ ವಿನಾಶಿತಂ ॥೧॥

ಬ್ರಹ್ಮಘ್ನೋ ಮದ್ಯಪಸ್ತೇನೋ ಗುರುತಲ್ಪರತಸ್ತಥಾ ।
ತತ್ಸಂಯೋಗ್ಯುಪಪಾಪಾಶ್ಚ ಕಲ್ಪಾಂತೇ ಮುಕ್ತಪಾತಕಾಃ ॥೨॥

ಭವಿಷ್ಯಂತಿ ನನಿಂದಂತಃ ಶಿವಸ್ಯ ಪರಮಾತ್ಮನಃ ।
ನಾನಿಷ್ಕೃತ್ಯ ವಿನಾಶ್ಯಂ ತದಿತಿ ಮತ್ವಾ ಪ್ರಜಾಪತಿಃ ॥೩॥

ಇಪ್ಪತ್ತಾರನೆಯ ಅಧ್ಯಾಯ

ಎಲೈ ಜೈಗೀಷವ್ಯ ಮುನಿಯೇ, ಬ್ರಹ್ಮನು ಹಿಂದೆ ಶಿವನನ್ನು ನಿಂದಿಸಿ ಮಹಾಪಾಪಕ್ಕೆ ಗುರಿಯಾದನು. ಯಾವ ಪಾಪವಾದರೂ, ಶಿವನ ಅನುಗ್ರಹವಿಲ್ಲದಿದ್ದರೆ ಎಂದಿಗೂ ನಾಶವಾಗಲಾರದು. ಒಂದು ದಿನ ಬ್ರಹ್ಮನು. ॥೧॥

"ಬ್ರಹ್ಮಹತ್ಯೆಯನ್ನು ಮಾಡಿದವನು, ಮದ್ಯಪಾಯಿ, ಕಳ್ಳ, ಗುರುಪತ್ನಿಸಂಗವನ್ನು ಮಾಡಿದವನು, ಮತ್ತು ಪಾಪಿಗಳ ಸಹವಾಸವನ್ನು ಮಾಡಿದವರು, ಮೊದಲಾದ ಮಹಾಪಾಪಿಗಳೆಲ್ಲರೂ ಶಿವನ ಅನುಗ್ರಹದಿಂದ ಪರಿಶುದ್ಧರಾಗುವರು." ॥೨॥

ಎಂದು ಯೋಚಿಸಿ ಆ ಬ್ರಹ್ಮನು ಶಿವನಿಂದೆಯ ಪಾಪವನ್ನು ಹೊರಲಾರದೇ

ಪಂಚಭೂತಾತ್ಮಿಕಾಂ ಸೃಷ್ಟಿಂ ಪಂಚಕೋಶಸಮುದ್ಭವಾಂ ।
ಸ್ವಾತ್ಮಜೇಷು ನಿವೇಶ್ಯಾಥ ಸ ತದಾ ವಿಧಿರುಲ್ಬಣಂ ॥೪॥

ನಿಂದನಾಚ್ಛಂಕರಸ್ಯಾಪ ಪಾಪಂ ದುಃಖಂ ಮಹತ್ತರಂ ॥೫॥

॥ ಜೈಗೀಷವ್ಯ ಉವಾಚ ॥

ಕಥಂ ಕಿಮರ್ಥಂ ದೇವೇಶಂ ವೇದೇಡ್ಯಂ ಪರಮೇಶ್ವರಂ ।
ನಿನಿಂದ ತಂ ನಿಂದಿತಮನಾಃ ಕೇನ ಗರ್ವೇಣ ಸತ್ತಮ ॥೬॥

ವೇದ್ಯೈತತ್ಸವಿಶೇಷೇಣ ಸ್ಕಂದಾನಂದಘನಾವ್ಯಯಂ ॥೭॥

॥ ಸ್ಕಂದ ಉವಾಚ ॥

ಪೂರ್ವಮೇಕಾರ್ಣವೇ ಘೋರೇ ಪಂಚವಕ್ತ್ರಃ ಪ್ರಜಾಪತಿಃ ।
ವಿತತ್ಯ ಸೃಷ್ಟಿಮಖಿಲಾಂ ತೇನ ಗರ್ವೇಣ ಮೋಹಿತಃ ॥೮॥

ದೃಷ್ಟ್ವಾ ಸಾಶ್ಚರ್ಯಮಿತ್ಯೂಚೇ ಜಹಾಸಾರುಣಲೋಚನಃ ॥೯॥

॥ ಬ್ರಹ್ಮೋವಾಚ ॥

ಮಯೇದಂ ಸೃಜ್ಯತೇ ವಿಶ್ವಂ ಕಾರಣಂ ಜಗತಸ್ತ್ವಹಂ ।
ಪ್ರಜಾಪತಿರಹಂ ಸಾಕ್ಷಾತ್ಕಃ ಸಮೋ ಮಮ ಸಾಂಪ್ರತಂ ॥೧೦॥

ತನ್ನ ಪ್ರಪಂಚಸೃಷ್ಟಿಕಾರ್ಯವನ್ನು ಮಕ್ಕಳಿಗೆ ವಹಿಸಿ ತಾನು ತುಂಬಾ ದುಃಖಕ್ಕೆ ಗುರಿಯಾದನು. ಎಂದು ಸ್ಕಂದನು ಹೇಳಲು ಆಗ ಜೈಗೀಷವ್ಯನು, ॥೩-೪-೫॥

ಸ್ಕಂದಸ್ವಾಮಿಯೇ, ವೇದಗಳಿಂದ ಸ್ತುತಿಸಲ್ಪಡುವ ಪರಮೇಶ್ವರನನ್ನು ಬ್ರಹ್ಮನು ಏಕೆ ನಿಂದಿಸಿದನು, ಅವನಿಗೆ ಅಂತಹ ಗರ್ವವು ಹೇಗುಂಟಾಯಿತು, ಹೇಳು ಎನಲು ಆಗ ಸ್ಕಂದನಿಂತೆಂದನು. ॥೬-೭॥

ಹಿಂದೆ ಸೃಷ್ಟಿಯ ಆದಿಯಲ್ಲಿ ಬ್ರಹ್ಮನಿಗೂ ಐದು ಮುಖಗಳಿದ್ದವು. ರುದ್ರನು ಸಂಹರಿಸಿದ ಪ್ರಪಂಚವೆಲ್ಲವನ್ನೂ ಅವನು ಪುನಃ ಸೃಷ್ಟಿಸಿದನು. ಆ ತನ್ನ ಕಾರ್ಯಕ್ಕೆ ತಾನೇ ಗರ್ವಗೊಂಡು ಹೀಗೆ ಜಂಬ ಕೊಚ್ಚಿಕೊಂಡನು. ॥೮-೯॥

ನಾನೇ ಈ ಜಗತ್ತನ್ನು ಸೃಷ್ಟಿಸುವವನು, ಈ ಕಾರಣದಿಂದಲೇ ನಾನು ಜಗತ್ತಿಗೆ ಒಡೆಯನು. ನನಗೆ ಸಮರು ಯಾರು ? ॥೧೦॥

ಇತಿ ಗರ್ವೇಣ ಸಂಯುಕ್ತಂ ರುದ್ರಂ ವೀಕ್ಷ್ಯಾಹ ಶಂಕರಃ ॥೧೧॥

ಛಿಂಧಿ ತಸ್ಯ ಶಿರೋ ರುದ್ರ ಬ್ರಹ್ಮಣಃ ಪಂಚಮಂ ಮಹತ್ ।
ಕಾಲಾಗ್ನಿರುದ್ರೋ ನಿರ್ದೇಶಾದ್ಭವಸ್ಯ ಪರಮಾತ್ಮನಃ ॥೧೨॥

ಬ್ರಹ್ಮಣಶ್ಚ ಶಿರಸ್ತೇನ ಛಿನ್ನಂ ನಿಯುತಯೋಜನಂ ।
ತಮಾಹ ಪದ್ಮಜಂ ಖಿನ್ನಂ ಪ್ರಣಷ್ಟೋರುಶಿರೋಧರಂ ॥೧೩॥

॥ ಈಶ್ವರ ಉವಾಚ ॥

ಮನ್ನಿಂದನಾಚ್ಚ ಸಂಪ್ರಾಪ್ತಂ ಬ್ರಹ್ಮನ್ ತೇ ಪಶ್ಯ ತತ್ಫಲಂ ।
ಇತ್ಯುಕ್ತೋ ದೇವದೇವೇನ ಪ್ರಣಮ್ಯಾಸ್ತುವದೀಶ್ವರಂ ॥೧೪॥

॥ ಬ್ರಹ್ಮೋವಾಚ ॥

ಶಶಿಧಾಮಕಲಾಲಲಾಮಘಾಲಾನಲನೀಲಾಮಲಕಂಠ ಶಂಭೋ ।
ಕೃತಮಾಲತಮಾಲಪುಷ್ಪಮಾಲಾಕಲಿತಾಜಕಪಾಲಶೂಲ ಪಾಹಿ ॥೧೫॥

ಹೀಗೆ ಗರ್ವಗೊಂಡ ವಿಧಿಯನ್ನು ನೋಡಿ ಶಂಕರನು ರುದ್ರನನ್ನು ಕುರಿತು ಹೀಗೆ ಹೇಳಿದನು. ॥೧೧॥

"ಎಲೈ ರುದ್ರನೇ, ಗರ್ವಿಷ್ಠನಾದೀ ಬ್ರಹ್ಮನ ಐದನೆಯ ಮುಖವನ್ನು ಈಗಲೇ ಕತ್ತರಿಸು" ಎಂದು ಅಪ್ಪಣೆಮಾಡಿದನು.

ಈಶ್ವರನ ಅಪ್ಪಣೆಯಂತೆ ಕಾಲಾಗ್ನಿರುದ್ರನು ಬ್ರಹ್ಮನ ಐದನೆಯ ಶಿರಸ್ಸನ್ನು ಕತ್ತರಿಸಿ ಹತ್ತುಸಾವಿರ ಯೋಜನ ದೂರ ಎಸೆದನು. ॥೧೨॥

ಐದನೆಯ ಮುಖವನ್ನು ಕಳೆದುಕೊಂಡು ಅವಮಾನ ಹೊಂದಿದ ಬ್ರಹ್ಮನನ್ನು ಕುರಿತು ಈಶ್ವರನು, ॥೧೩॥

ಎಲೈ ಬ್ರಹ್ಮನೇ, ನನ್ನ ನಿಂದೆಯಿಂದ ನಿನಗಾದ ಈ ದುರವಸ್ಥೆಯನ್ನು ನೋಡಿಕೋ, ಎಂದು ಹೇಳಲು, ಮಹಾದೇವನಾ ಮಾತನ್ನು ಕೇಳಿ ಬ್ರಹ್ಮನು ಲಜ್ಜೆಪಟ್ಟು ನಮಸ್ಕರಿಸಿ ಹೀಗೆ ಸ್ತುತಿಸಿದನು. ॥೧೪॥

"ಜಟೆಯಲ್ಲಿ ಚಂದ್ರಕಲೆಯನ್ನು ಧರಿಸಿದವನೇ, ನೀಲಕಂಠನಾಗಿ ಕಕ್ಕೆಹೂವು, ಮತ್ತು ಹೊಂಗೆ ಪುಷ್ಪಗಳ ಮಾಲೆಯನ್ನು ಧರಿಸುವ ಶಂಭುವೇ, ನನ್ನನ್ನು ಪಾಲಿಸು. ॥೧೫॥

ಯೋ ದೇವಃ ಶ್ರುತಿಶೇಖರೈರ್ವಿಮೃಗಯತೇ ಜಾನಂತಿ ಯಂ ಯೈ ಹೃದಾ
ಜಾತಂ ಯೇನ ಸಮಸ್ತವಸ್ತುವಿಷಯಂ ಯಸ್ಮೈ ಚ ಸರ್ವೇ ನತಾಃ ।
ಯಸ್ಮಾನ್ನಾಪರಮಸ್ತಿ ಯಸ್ಯ ಸತತಂ ಲಿಂಗಾರ್ಚಕಾಸ್ತೇ ಸುರಾಃ
ಯಸ್ಮಿನ್ ವಿಶ್ವಮಿದಂ ಲಯಂ ಪ್ರಯಾತಿ ತಮಹಂ ವಂದೇ ಪಶೂನಾಂ
ಪತಿಂ ॥೧೬॥

ಸ ಬ್ರಹ್ಮವಚಸಾಂ ರುದ್ರಂ ಗತಗರ್ವಂ ಪ್ರಜಾಪತಿಂ ।
ಉವಾಚ ವಾಚಾ ಪ್ರಸಭಂ ಮಹೇಶೋ ಭಕ್ತವತ್ಸಲಃ ॥೧೭॥

॥ ಈಶ್ವರ ಉವಾಚ ॥

ಕಪಾಲಪಾಣಿ ರ್ಹಿ ಭವಾನಸ್ಯ ಬ್ರಹ್ಮಹಣೋ (?) ವ್ರತಂ ।
ದ್ವಾದಶಾಬ್ದಾವಧಿ ಸದಾ ಭಸ್ಮಚ್ಛನ್ನಕಲೇವರಃ ॥೧೮॥

ರುದ್ರಮಾವರ್ತಯನ್ ರುದ್ರ ದೇವಲೋಕೇಷು ಸಂಚರ ।
ಭಿಕ್ಷಾಶೀ ವಿಗತೈನಸ್ಕೋ ಭವಿಷ್ಯಸ್ಯವಿಮುಕ್ತಕೇ ॥೧೯॥

ಪತಿಷ್ಯತ್ಯವಶೇನೈವ ಕಪಾಲಂ ತ್ವತ್ಕರಾಗ್ರತಃ ।
ಬ್ರಹ್ಮಾಪ್ಯಯಂ ಮುಕ್ತಪಾಪೋ ಭವಿಷ್ಯತಿ ಮದರ್ಚನಾತ್ ॥೨೦॥

ವೇದವೇದಾಂತಗಳಲ್ಲಿ ವಿಮರ್ಶಿಸಲ್ಪಡುವವನೂ, ಯೋಗಿಗಳ ಮನಸ್ಸಿನಲ್ಲಿ ಧ್ಯಾನಿಸಲ್ಪಡುವವನೂ, ಸಕಲ ಜಗತ್ತನ್ನು ಸೃಷ್ಟಿಸಿದವನೂ, ಸರ್ವೋತ್ಕೃಷ್ಟನೂ, ದೇವವಂದ್ಯನೂ, ಪ್ರಪಂಚವನ್ನು ಕೊನೆಯಲ್ಲಿ ತನ್ನಲ್ಲಿಯೇ ಸೇರಿಸಿಕೊಳ್ಳುವವನೂ ಆದ ಪಶುಪತಿಯೇ, ನಿನಗೆ ನಮಸ್ಕರಿಸುವೆನು." ||೧೬||

ಹೀಗೆ ಸ್ತುತಿಸಿದ ಬ್ರಹ್ಮನ ಗರ್ವವಿಳಿದುದನ್ನು ನೋಡಿ ಈಶ್ವರನು ರುದ್ರನನ್ನು ಕುರಿತು, ||೧೭||

ರುದ್ರನೇ, ಈ ಬ್ರಹ್ಮಹತ್ಯೆಯ ಪ್ರಾಯಶ್ಚಿತ್ತಕ್ಕಾಗಿ ನೀನು ಆ ಬ್ರಹ್ಮ ಕಪಾಲವನ್ನೇ ಹಿಡಿದು ಭಸ್ಮಧಾರಿಯಾಗಿ ಹನ್ನೆರಡು ವರ್ಷಗಳವರೆಗೆ ಸಂಚರಿಸಬೇಕು. ||೧೮||

ರುದ್ರಸೂಕ್ತವನ್ನು ಪಠಿಸುತ್ತಾ ಈ ಕಪಾಲದಿಂದ ಭಿಕ್ಷವೆತ್ತಿ ಜೀವಿಸುತ್ತಾ ದೇವಲೋಕಗಳಲ್ಲಿ ಸಂಚರಿಸು. ಹನ್ನೆರಡು ವರ್ಷಗಳಾದ ಮೇಲೆ ಅವಿಮುಕ್ತ

ಸರ್ವೇಷಾಂ ಸರ್ವಪಾಪಾನಾಂ ಪ್ರಾಯಶ್ಚಿತ್ತಂ ಸ್ಮೃತೀರಿತಂ ।
ಮದ್ದ್ರೋಹನಿಂದನಸ್ಯಾದ್ಯ ಮದರ್ಚೈವ ಗತಿಃ ಪರಾ ॥೨೦॥

ತಚ್ಛ್ರುತ್ವಾ ಶಾಂಕರಂ ವಾಕ್ಯಂ ಪ್ರಾಹ ರುದ್ರೋ ಮಹೇಶ್ವರಂ॥೨೨॥

॥ ರುದ್ರ ಉವಾಚ ॥

ತವ ದ್ರೋಹಃ ಕಿಂ ಪ್ರಕಾರಃ ಕಾ ವಾ ತ್ವದ್ರೋಹಿಣೋ ಗತಿಃ ।
ಸಾ ಕೇನ ನಾಶಮಾಯಾತಿ ಕೃಪಯಾ ವದ ಮೇ ಪ್ರಭೋ ॥೨೩॥

ತದ್ರುದ್ರಾಯಾವದಚ್ಛಂಭುಃ ಶೃಣ್ವತೋ ಬ್ರಹ್ಮಣಸ್ತಥಾ ॥೨೪॥

॥ ಶ್ರೀಶಿವ ಉವಾಚ ॥

ಶೃಣು ಕಾಲಾಗ್ನಿರುದ್ರ ತ್ವಂ ಬ್ರಹ್ಮನ್ ತ್ವಮಪಿ ಸತ್ತಮ ।
ಅನಿಷ್ಕೃತಿಪರಂ ತ್ವೇತನ್ಮದ್ರೋಹಾಣಾಂ ಪರಂ ಯಯೌ ॥೨೫॥

ತೀರ್ಥದಲ್ಲಿ ನಿನ್ನ ಪಾಪವೆಲ್ಲವೂ ನಾಶವಾಗಿ ಈ ಕಪಾಲವು ತಾನಾಗಿಯೇ ಕೈಯಿಂದ ಕಳಚಿ ಬೀಳುವುದು. ॥೧೯-೨೦॥

ಎಲ್ಲ ಪಾಪಗಳಿಗೂ ಬೇರೆಬೇರೆ ಪ್ರಾಯಶ್ಚಿತ್ತಗಳುಂಟು. ಆದರೆ ನನ್ನನ್ನು ನಿಂದಿಸಿದ ಪಾಪವು ನನ್ನ ಅರ್ಚನೆಯಿಂದ ಮಾತ್ರವೇ ಹೋಗುವುದು, ಎಂದು ಆಜ್ಞೆಯಿತ್ತನು. ಆಗ ಕಾಲಾಗ್ನಿರುದ್ರನು, ॥೨೧-೨೨॥

"ಓ ಪ್ರಭು, ನಿನ್ನ ದ್ರೋಹವು ಎಂತಹುದು? ನಿನಗೆ ದ್ರೋಹಬಯಸಿದವನು ಯಾವ ಗತಿಯನ್ನು ಹೊಂದುವನು? ಆ ಗತಿಯು ಯಾವುದರಿಂದ ನಾಶವಾಗುವುದು? ಇದನ್ನು ದಯೆಯಿಟ್ಟು ಹೇಳು," ಎಂದು ಮತ್ತೆ ಪ್ರಾರ್ಥಿಸಿದನು.॥೨೩॥

ಆಗ ಶಿವನು ಬ್ರಹ್ಮಸಿಗೆ ಕೇಳುವಂತೆ ಹೀಗೆ ನುಡಿದನು. ॥೨೪॥

"ಎಲೈ ರುದ್ರ ಬ್ರಹ್ಮರೇ, ಕೇಳಿರಿ, ನನ್ನನ್ನು ನಿಂದಿಸಿದ ದ್ರೋಹಕ್ಕೆ ಪ್ರಾಯಶ್ಚಿತ್ತವೇ ಇಲ್ಲ. ॥೨೫॥

ಬ್ರಹ್ಮಘ್ನೋ ಮುಚ್ಯತೇ ಕಲ್ಪೇ ತಥಾಽನ್ಯೇ ತಾರತಮ್ಯತಃ ।
ಮಹಾಪಾಪೋಪಪಾಪೇಭ್ಯಃ ಮದ್ದ್ರೋಹೇ ನೈವ ನಿಷ್ಕೃತಿಃ ॥೨೬॥

ಶಾಸ್ತಾಹಂ ಮೋಚಕಸ್ತೇಷಾಂ ನ ಯಮೋ ಭೈರವೋ ನ ಹಿ ।
ಶೃಣು ದ್ರೋಹಂ ಮದೀಯಂ ತ್ವಂ ಬ್ರಹ್ಮಣಾ ರುದ್ರ ಸತ್ತಮ ॥೨೭॥

ಮದ್ಭಕ್ತನಿಂದನಂ ರುದ್ರನಿಂದನಂ ದ್ರೋಹ ಏವ ಚ ।
ಮದ್ಭಸ್ಮನಿಂದನಂ ರುದ್ರ ಮದ್ರೋಹಃ ಪರಮೋ ಮತಃ ॥೨೮॥

ಮದ್ರುದ್ರಾಕ್ಷಮಹಾನಿಂದಾ ಮದ್ರೋಹಃ ಪರಮೋ ಮತಃ ।
ತ್ರಿಪುಂಡ್ರಧಾರಿಣಾಂ ನಿಂದಾ ಮದ್ರೋಹಃ ಪರಮೋ ಮತಃ ॥೨೯॥

ರುದ್ರಾಧ್ಯಾಯಜಪೇ ನಿಂದಾ ಮದ್ರೋಹಃ ಪರಮೋ ಮತಃ ।
ಪಂಚಾಕ್ಷರಸ್ಯ ನಿಂದಾ ಚ ಅನ್ಯಮಂತ್ರಸಮತ್ವಧೀಃ ॥೩೦॥

ಬ್ರಹ್ಮಹತ್ಯೆಯನ್ನು ಮಾಡಿದವನೂ ಒಂದು ಕಲ್ಪದ ಮೇಲೆ ಪಾಪವಿಲ್ಲದವನಾಗುವನು. ಮಿಕ್ಕ ಮಹಾಪಾಪ ಉಪಪಾಪಗಳೂ ಕೆಲವು ಕಾಲಗಳಲ್ಲಿ ನಾಶವಾಗುವುವು. ಆದರೆ ನನ್ನ ದ್ರೋಹಕ್ಕೆ ಪ್ರಾಯಶ್ಚಿತ್ತವೇ ಇಲ್ಲ; ನನ್ನನ್ನು ನಿಂದಿಸಿದವರನ್ನು ಶಿಕ್ಷಿಸುವವನೂ ರಕ್ಷಿಸುವವನೂ ನಾನೇ. ಯಮನಾಗಲೀ ಭೈರವನಾಗಲೀ ರಕ್ಷಿಸಲಾರರು, ಶಿಕ್ಷಿಸಲಾರರು, ಎಲೈ ಬ್ರಹ್ಮರುದ್ರರೇ, ಈಗ ನನ್ನ ದ್ರೋಹದ ಪ್ರಕಾರವನ್ನು ಹೇಳುವೆನು ಕೇಳಿ. ||೨೬-೨೭||

ನನ್ನ ಭಕ್ತರನ್ನೂ ರುದ್ರಸೂಕ್ತವನ್ನೂ ನಿಂದಿಸುವುದು ನನ್ನ ದ್ರೋಹವು; ಭಸ್ಮವನ್ನು ನಿಂದಿಸುವುದೂ ಮಹಾದ್ರೋಹವು. ||೨೮||

ರುದ್ರಾಕ್ಷಿನಿಂದೆಯೂ ಮಹಾದ್ರೋಹವು, ಭಸ್ಮಧಾರಿಗಳನ್ನು ನಿಂದಿಸುವುದೂ ದ್ರೋಹವೆನಿಸುವುದು. ||೨೯||

ರುದ್ರಸೂಕ್ತಜಪನಿಂದೆ, ಶಿವಪಂಚಾಕ್ಷರನಿಂದನೆ, ರುದ್ರಾಧ್ಯಾಯನಿಂದನೆ, ಶಿವಪಂಚಾಕ್ಷರಮಂತ್ರವು ಮಿಕ್ಕಮಂತ್ರಗಳ ಸಮವೆಂದು ತಿಳಿಯುವುದು– ಇವೆಲ್ಲವೂ ಮಹಾದ್ರೋಹಗಳು. ||೩೦||

ಮನ್ನಾಮಜಪನಿಂದಾ ಚ ತಥಾ ಮತ್ಕ್ಷೇತ್ರವಾಸಿನಾಂ ।
ಅನ್ಯಕ್ಷೇತ್ರೋಪಮಾನೇನ ದರ್ಶನಂ ದ್ರೋಹ ಏವ ಚ ॥೩೧॥

ಶಿವಲಿಂಗಸ್ಯ ನಿಂದಾ ಚ ಮದ್ರೋಹಃ ಪರಮೋ ಮತಃ ।
ಶಿವಲಿಂಗಾರ್ಚನಂ ಸಾಮ್ಯಾದ್ವಿಷ್ಣುರೂಪಾದಿಪೂಜನಂ ॥೩೨॥

ಮದ್ರೋಹ ಏವ ಪರಮೋ ಸುಘೋರೋ ನರಕಾವಹಃ ।
ತಪ್ತಚಕ್ರಾಂಕನಾಲಾಪಭೋಜನಂ ಸಹ ಭಾಷಣಂ ॥೩೩॥

ಊರ್ಧ್ವಪುಂಡ್ರಾಂಕನಂ ಮೋಹಾನ್ಮದ್ರೋಹಃ ಪರಮೋ ಮತಃ ।
ಅನುದ್ಧೂಲಿತದೇಹೇನ ಅಗ್ನಿರಿತ್ಯಾದಿಮಂತ್ರತಃ ॥೩೪॥

ಊರ್ಧ್ವಪುಂಡ್ರೇಣ ಲಿಂಗಾರ್ಚಾ ಮದ್ರೋಹಃ ಪರಮೋ ಮತಃ ।
ರುದ್ರಾಕ್ಷಭಸ್ಮಪುಂಡ್ರಾಂಕವಿಹೀನೇನಾರ್ಚನಂ ಮಮ ॥೩೫॥

ನನ್ನ ಶಿವನಾಮಗಳ ಜಪದ ನಿಂದನೆ, ಮತ್ತು ಮಿಕ್ಕ ಕ್ಷೇತ್ರಗಳಂತೆಯೇ ನನ್ನ ಕ್ಷೇತ್ರಗಳನ್ನೂ ಭಾವಿಸುವುದೂ ಮಹಾದ್ರೋಹವು. ||೩೧||

ಶಿವಲಿಂಗ ನಿಂದೆ, ಮತ್ತು ಅದನ್ನು ವಿಷ್ಣುವಿಗ್ರಹಕ್ಕೆ ಸಮವಾಗಿ ಪರಿಗಣಿಸಿ ಸರ್ವೋತ್ತಮವಾದ ಶಿವಲಿಂಗವನ್ನರ್ಚಿಸುವುದು ಇವೂ ಮಹಾದ್ರೋಹಗಳು. ||೩೨||

ಇಂತಹ ಶಿವದ್ರೋಹವು ಭಯಂಕರವಾದುದು. ನರಕವನ್ನುಂಟುಮಾಡುವುದು. ತಪ್ತ ಮುದ್ರೆಯನ್ನು ಧರಿಸುವರ ಮನೆಯಲ್ಲಿ ಭೋಜನ, ಅವರೊಡನೆ ಸಂಭಾಷಣೆ, ಮತ್ತು ಮೂರು ನಾಮಗಳನ್ನಿಟ್ಟುಕೊಳ್ಳುವುದು ಇವು ಶಿವದ್ರೋಹಗಳು. ||೩೩||

"ಅಗ್ನಿರಿತಿ ಭಸ್ಮ" ಇತ್ಯಾದಿಮಂತ್ರಗಳಿಂದ ಭಸ್ಮವನ್ನು ಧರಿಸಿದೆ ನಾಮವನ್ನು ಧರಿಸಿ ಶಿವಲಿಂಗವನ್ನರ್ಚಿಸುವುದು ಮಹಾದ್ರೋಹವು. ||೩೪||

ರುದ್ರಾಕ್ಷಿ ಭಸ್ಮಗಳನ್ನು ಧರಿಸದೇ ನನ್ನನ್ನು ಅರ್ಚಿಸುವುದು, ಶಿವದೇವಾಲಯವನ್ನೂ ಶಿವತೀರ್ಥಗಳನ್ನೂ ಹಾಳುಮಾಡುವುದು ಮಹಾದ್ರೋಹವೆನಿಸುವುದು. ||೩೫||

ಶಿವಾಲಯಾನಾಂ ತೀರ್ಥಾನಾಂ ಭೇದನಂ ದ್ರೋಹ ಏವ ಮೇ ।
ಗಾವೋ ಧಾನ್ಯಂ ಧನಂ ವಸ್ತ್ರಂ ಘೃತಂ ತೈಲಂ ತಥಾ ಮಧು ॥೩೬॥

ಶಿವೋಪಕರಣಂ ದ್ರವ್ಯಂ ಹೃತ್ವಾ ಭಕ್ತಸ್ಯ ವಾ ವಿಧೇ ।
ಅನ್ಯಧರ್ಮೇಽಪಿ ವಾ ಯೋಜ್ಯಂ ಮದ್ರೋಹಾಯೈವ ಕಲ್ಪತೇ ॥೩೭॥

ಸಧರ್ಮೋ ಧರ್ಮನಿರ್ಮುಕ್ತಃ ಪಾಪಾಯೈವಾಶು ಕಲ್ಪತೇ ।
ಸದ್ರೋಹ ಏವ ಪರಮಃ ಸುಘೋರನರಕಪ್ರದಃ ॥೩೮॥

ಬ್ರಹ್ಮವಿಷ್ಣ್ವಾದಿಸಾಮ್ಯೇನ ಮಯಿ ಧೀರ್ನರಕಾವಹಾ ।
ಮದ್ಭಕ್ತಮನ್ಯಭಕ್ತೇನ ಸಾದೃಶ್ಯೇನಾಭಿವೀಕ್ಷಣಂ ॥೩೯॥

ಪ್ರದೋಷಸೋಮವಾರೇಷು ಭೂತಕಾಲಾಷ್ಟಮೀಷು ಚ ।
ವೇದೇ ಗುರೌ ಚ ವೇದಾಂತೇ ಪ್ರದ್ವೇಷಃ ಶಿವಯೋಗಿಷು ॥೪೦॥

ದಿವೈವ ಭುಕ್ತಿರ್ದ್ರೋಹೇನ ಸುಘೋರನರಕಪ್ರದಾ ॥೪೧॥

ನನಗೆ ಮೀಸಲಾಗಿರುವ, ಅಥವಾ ನನ್ನ ಭಕ್ತನ, ಹಸು, ಧಾನ್ಯ, ಧನ, ಬಟ್ಟೆ, ತುಪ್ಪ, ಎಣ್ಣೆ, ಜೇನುತುಪ್ಪ-ಇವುಗಳನ್ನು ಅಪಹರಿಸುವುದು ಮಹಾ ಪಾಪ ಕರ. ತನ್ನ ಧರ್ಮವನ್ನು ಬಿಡುವುದೂ ಮಹಾದ್ರೋಹವಾದೀತು. ||೩೬-೩೭||

ತಾನಾಚರಿಸುವ ಧರ್ಮವನ್ನು ಬಿಡುವುದು, ಅನ್ಯಧರ್ಮವನ್ನು ಆಶ್ರಯಿಸು ವುದೂ, ಮಹಾಪಾಪ. ಅದರಿಂದ ಘೋರನರಕವು ಲಭಿಸುವುದು. ||೩೮||

ಸರ್ವೋತ್ಕೃಷ್ಟನಾದ ನನ್ನನ್ನು ಬ್ರಹ್ಮ ವಿಷ್ಣು ಮೊದಲಾದವರಿಗೆ ಸಮನಾಗಿ ತಿಳಿಯುವುದೂ ಮಹಾದ್ರೋಹವು. ||೩೯||

ಪ್ರದೋಷ, ಸೋಮವಾರ, ಕೃಷ್ಣಚತುರ್ದಶೀ, ಕೃಷ್ಣಾಷ್ಟಮಿಗಳಲ್ಲಿ ನನ್ನನ್ನು ಪೂಜಿಸದಿರುವುದು, ವೇದವೇದಾಂತಗಳು, ಗುರು, ಶಿವಭಕ್ತರು ಇವರಲ್ಲಿ ದ್ವೇಷ ವಿಡುವುದು, ಇವು ಮಹಾದ್ರೋಹಗಳು. ||೪೦||

ಮೇಲೆ ಹೇಳಿದ ಶಿವತಿಥಿಗಳಲ್ಲಿ ಹಗಲು ಊಟ ಮಾಡುವುದೂ ಮಹಾ ಪಾಪವು, ಮತ್ತು ನರಕ ಪ್ರದವು. ||೪೧||

ಯಥಾ ಮಯೋಕ್ತಂ ಹೃದಿ ಧಾರ್ಯತಾಮೇತತ್
ನ ಹಿ ಪ್ರಕಾಶ್ಯಂ ಭುವಿ ಮಾನವೇಷು ।
ಮದ್ರೋಹನಿಷ್ಠಾಲಯಮೇವ ಸಾಮ್ಯಂ
ಘೋರಂ ಪರಂ ನೋಹದದುಃಖದಂ ಸದಾ ॥೪೨॥

ಸುತಪ್ತಚಕ್ರಕ್ರಕಚೈರ್ವಿಷೋಲ್ಬಣೈರಾಶೀವಿಷೈರ್ವಾನುಲಸದ್ಧೃದಾವಿಲೈಃ
ಪೂಯೈಶ್ಶೋಣಿತಗಂಧಮೇದುರಮಹಾಕಾಕೋರುಸಂತಾಡನೈಃ ।
ಉತ್ಕ್ರೋಶೀಕೃತಖಡ್ಗತಾಡನಮಹಾಕುಂಭಾದಿಪಾಕೈರಪಿ ॥೪೩॥

ಸಂತಪ್ತಾಯಸವಾಲುಕಾದಿಲುಠನೈರ್ಘೋರೈರ್ವ್ರಣಾಸೇಚನೈಃ
ಕ್ಷಾರೈಸ್ಸೂಚಿಮುಖೈರ್ವಿಲೂನನಖಜಾಪಾರಾಂಗಸಂಘಾವಪಿ ।
ಮದ್ರೋಹಪ್ರವಣಾಃ ಸದೈವ ನರಕೇ ಸಂತಪ್ತದುಃಖೌಘಕಾಃ
ಕಲ್ಪಾಂತೇಽಪಿ ನ ಮೋಚಿತಾ ಮಮ ಕೃಪಾಲೇಶೈಃ ಪರಂವರ್ಜಿತಾಃ ॥೪೪॥

ಎಲೈ ಬ್ರಹ್ಮರುದ್ರರೇ, ಹೀಗೆ ನಿಮಗೆ ಶಿವದ್ರೋಹದ ಪ್ರಕಾರವನ್ನು ವಿವರಿಸಿರುವೆನು. ಶಿವದ್ರೋಹದಿಂದ ಅಜ್ಞಾನವೂ, ಅಜ್ಞಾನದಿಂದ ದುಃಖವೂ ನರಕವೂ ಉಂಟಾಗುವುವು. ಆದರೀ ದ್ರೋಹ ಪ್ರಕಾರವನ್ನು ಮಾನವರಿಗೆ ತಿಳಿಸಕೂಡದು. ॥೪೨॥

ಶಿವದ್ರೋಹ ಮಾಡಿದವರನ್ನು ನರಕದಲ್ಲಿ (ಕುಂಭೀಪಾಕಾದಿಗಳಲ್ಲಿ) ಕಾಸಿದ ಕಬ್ಬಿಣದ ಚಕ್ರ ಗರಗಸಗಳಿಂದ ಕೊಯ್ಯುವರು; ಹಾವುಗಳಿಂದ ಕಚ್ಚಿಸುವರು; ಕೀವು ರಕ್ತಗಳಿಂದ ತುಂಬಿದ ಕೊಳದಲ್ಲಿ ಮುಳುಗಿಸುವರು. ಖಡ್ಗದಿಂದ ಕತ್ತರಿಸುವರು. ॥೪೩॥

ಕಾದ ಮರಳಿನ ರಾಶಿಯಲ್ಲಿ ಆ ಪಾಪಿಗಳನ್ನು ಉರುಳಿಸುವರು. ಶರೀರದಲ್ಲಿ ಗಾಯಮಾಡಿ ಅದಕ್ಕೆ ಉಪ್ಪಿನ ರಸವನ್ನು ಲೇಪಿಸುವರು. ಶಿವದ್ರೋಹಿಗಳು ಹೀಗೆ ನರಕದಲ್ಲಿ ದುಃಖವನ್ನನುಭವಿಸುವರು. ನನ್ನ ಕೃಪೆಗೆ ಪಾತ್ರರಲ್ಲದ ಅವರಿಗೆ ಜನ್ಮಜನ್ಮಾಂತರಗಳಲ್ಲೂ ನರಕದಿಂದ ಮುಕ್ತಿಯಿಲ್ಲ. ॥೪೪॥

ಯಾವದ್ಬ್ರಹ್ಮಪರಂಪರಾ ಹರಿಹರಾಶ್ಚೇಂದ್ರಾ ಮನೂನಾಂ ಕ್ರಮೈಃ
ಸಂಪ್ರಾಪ್ಯೈವ ಮಹಾಘದುಃಖಮಗಜಾಕಾಂತಾರ್ಚನಾವರ್ಜಿತಾಃ ।
ಏವಂ ತೇ ನಿವಸಂತಿ ಸಂತತಮವಿಶ್ರಾಂತ್ಯೈಕದುಃಖಾಕುಲಾಃ
ಜಾನೇ ನಾಹಮಪಿ ಪ್ರದಾತುಮಥವಾ ಹಸ್ತಾವಲಂಬಂ ಮಮ ॥೪೫॥

ಕಾ ವಾ ತೇಷು ಗತಿರ್ಭವೇ ಭವತಿ ವಾ ನೋ ವಾ ಕಥಂ ತೇ ಕಿಯತ್
ಕಾಲಂ ವಾ ಪರಿವರ್ತಿತಾರ್ತರುದಿತೈರ್ಜಾನಂತಿ ತಾನ್ನೋ ಯಮಾಃ ।
ಮದ್ದ್ರೋಹೋ ನ ಕದಾಪಿ ಕಾರ್ಯ ಇತಿ ಮೇ ಉಕ್ತಾ ಚ ಧೀಃ ಸ್ವಸ್ತಯೇ
ತಸ್ಮಾನ್ಮಾಂ ಶರಣಂ ಪ್ರಯಾತಿ ಯದಿ ಚೇತ್ತದ್ದ್ರೋಹನಾಶೋ ಭವೇತ್
॥೪೬॥

ಇತ್ಯುಕ್ತ್ವಾ ಸ ಜಗಾಮ ಚಾರುವೃಷಭಾರೂಢಃ ಸಹಾಂಬೋ ಭವೋ
ರುದ್ರೋ ನಂದವನಂ ಜಗಾಮ ರಭಸಾ ಸಾಪಾತ್ತದಾ ಮೋಚಿತಃ ।
ಬ್ರಹ್ಮಾ ಬ್ರಹ್ಮಪುರೇ ಉವಾಸ ನಿಯತಂ ಈಶಾರ್ಚನೇನಾನ್ವಿತೋ
ರುದ್ರಾಕ್ಷಾಮಲಭಸ್ಮಪುಂಡ್ರನಿಟಿಲೋ ವಕ್ತ್ರೈಃ ಸ್ತುವನ್ ಶಂಕರಂ ॥೪೭॥

ಬ್ರಹ್ಮಪರಂಪರೆ, ಹರಿಹರರು, ಇಂದ್ರರು, ಮನುಗಳು-ಎಷ್ಟೊಂದು ಬಾರಿ ಬದಲಾಯಿಸಿ ಬಂದುಹೋದರೂ ಆ ಶಿವದ್ರೋಹಿಗಳಿಗೆ ಮುಕ್ತಿಯಿಲ್ಲ. ನನ್ನ ಅವಲಂಬನೆಯು ಅವರಿಗೆ ದೊರೆಯದೆ, ನನ್ನ ಆಗ್ರಹಕ್ಕೆ ಪಾತ್ರರಾಗಿ ಅವರು ಸದಾ ನರಕದಲ್ಲಿ ಕೊಳೆಯುವರು. ॥೪೫॥

ಶಿವದ್ರೋಹಿಗಳ ಗತಿಯೇನು ? ಅವರೆಷ್ಟುಕಾಲ ನರಕದಲ್ಲಿ ಕೊಳೆಯುವರು ? ಎಂಬುದನ್ನು ಕಲ್ಪಕಲ್ಪಾಂತರಗಳ ಯಮರಿಗೂ ತಿಳಿಯದಾಗುವುದು. ಅಂದರೆ ಶಿವದ್ರೋಹವನ್ನು ಮಾಡಬಾರದು ಎಂಬುದಕ್ಕಾಗಿ ಇಷ್ಟು ನಿಜಾಂಶವನ್ನು ನಿನಗೆ ಹೇಳಿರುವೆನು, ನನ್ನನ್ನು ಮೊರೆಹೊಕ್ಕರೆಮಾತ್ರ ಶಿವದ್ರೋಹವು ನಾಶವಾಗಬಲ್ಲುದು. ॥೪೬॥

ಹೀಗೆ ಹೇಳಿ ಪರಮೇಶ್ವರನು ಗಿರಿಜೆಯೊಡನೆ ನಂದಿಯನ್ನೇರಿ ಕೈಲಾಸಕ್ಕೆ ತೆರಳಿದನು. ಕಾಲಾಗ್ನಿರುದ್ರನು ಸ್ವರ್ಗಕ್ಕೆ ತೆರಳಿದನು. ಶಿವದ್ರೋಹದಿಂದ ಬಿಡುಗಡೆ ಹೊಂದಿದ ಬ್ರಹ್ಮನು ತನ್ನ ಲೋಕಕ್ಕೆ ಹೋಗಿ ಅಲ್ಲಿ ಭಸ್ಮರುದ್ರಾಕ್ಷಧಾರಿಯಾಗಿ

ಇತಿ ಶ್ರೀಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ಬ್ರಹ್ಮಶಿರಶ್ಛೇದನ ಶಿವದ್ರೋಹನಿರೂಪಣಂ ನಾಮ ಷಡ್ವಿಂಶೋಽಧ್ಯಾಯಃ

ಶಿವನನ್ನು ಭಕ್ತಿಯಿಂದ ಸ್ತುತಿಸುತ್ತಾ ಆರಾಧಿಸತೊಡಗಿದನು, ಎಂದು ಶಂಕರನು ಹೇಳಿದ ವಿಷಯವನ್ನೇ ಕುಮಾರಸ್ವಾಮಿಯು ಜೈಗೀಷವ್ಯನಿಗೆ ತಿಳಿಯಪಡಿಸಿದನು. ||೪೭||

ಶಿವರಹಸ್ಯದಲ್ಲಿ ಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಸಪ್ತವಿಂಶೋಽಧ್ಯಾಯಃ

|| ಜೈಗೀಷವ್ಯ ಉವಾಚ ||

ಕಥಂ ಕಾಲಾಗ್ನಿರುದ್ರೋಽಸೌ ಚರನ್ ಬ್ರಹ್ಮಹಣೋ ವ್ರತಂ ।
ಈಶಾಜ್ಞಯಾ ತದಾ ಸ್ಕಂದ ನಂದಿತಾಮರವೃಂದಕ ॥೧॥

|| ಸೂತ ಉವಾಚ ||

ಇತಿ ತದ್ವಚನಂ ಶ್ರುತ್ವಾ ಸಾ ಚಾಹ ಮುನಿಸತ್ತಮಂ ।
ಗಜಾನನಾನುಜಃ ಶ್ರೀಮಾನ್ ಭವಸ್ಯ ಚರಿತಂ ಮಹತ್ ॥೨॥

|| ಸ್ಕಂದ ಉವಾಚ ||

ಈಶ್ವರಾಜ್ಞಾವಶಾದ್ರುದ್ರಃ ಸ್ವೀಚಕ್ರೇ ತಾಂ ದ್ವಿಜಾಹತಿಂ ।
ದಿಗಂಬರೋ ಜಟಾಮೌಳಿರ್ಭಸ್ಮಚ್ಛನ್ನಾಂಗಮಸ್ತಕಃ ॥೩॥

ಇಪ್ಪತ್ತೇಳನೆಯ ಅಧ್ಯಾಯ

ಮತ್ತೆ ಜೈಗೀಷವ್ಯನು, ದೇವಸೇನಾಪತಿಯಾದ ಸ್ಕಂದಸ್ವಾಮಿಯೇ, ಶಿವನ ಅಪ್ಪಣೆಯಂತೆ ಕಾಲಾಗ್ನಿರುದ್ರನು ಹೇಗೆ ಬ್ರಹ್ಮಹತ್ಯೆಯ ನಿಯಮವನ್ನು ಪಾಲಿಸಿದನು ? ಎಂದು ಪ್ರಶ್ನಿಸಲು, ||೧||

ಆ ಮಾತನ್ನು ಕೇಳಿ ಷಣ್ಮುಖಸ್ವಾಮಿಯು ಶಿವಚರಿತವನ್ನು ಹೀಗೆ ವಿಸ್ತರಿಸತೊಡಗಿದನೆಂದು ಸೂತಮಹರ್ಷಿಗಳು ಇತರ ಋಷಿಗಳಿಗೆ ತಿಳಿಸಿದರು. ||೨||

ಈಶ್ವರನ ಆಜ್ಞೆಯಂತೆ ರುದ್ರನು ಆ ಬ್ರಹ್ಮಹತ್ಯೆಯನ್ನು ಸ್ವೀಕರಿಸಿ ಕೂಡಲೇ ದಿಗಂಬರನಾದನು. ಜಟಾಧಾರಿಯಾದನು, ಮೈಗೆಲ್ಲ ಬೂದಿಬಳಿದುಕೊಂಡನು.

ಪಾದುಕಾವಿಲಸತ್ಪಾದೋ ಕಪಾಲಂ ಬ್ರಾಹ್ಮಮುದ್ವಹನ್ ।
ದಧತ್ಸವ್ಯೇನ ಶೂಲಂ ಚ ಚಂಚಚ್ಚಂದ್ರಕಲಾಧರಃ ॥೪॥

ವ್ಯಾಲಯಜ್ಞೋಪವೀತಶ್ಚ ಧೃತನಾಗಸುಕುಂಡಲಃ ।
ಡಮರುಂ ವಾದಯನ್ ಘೋರಂ ದೇವಲೋಕಾಂಶ್ಚ ಭೀಷಯನ್ ॥೫॥

ದ್ವಾದಶಾಬ್ದಂ ಚಚಾರಾಸೌ ದೇವಲೋಕಾಂಸ್ತದಾ ದ್ವಿಜ ।
ವೇದಾಂಶ್ಚ ಶ್ವಗಣಾಕಾರಾನ್ ಕೃತ್ವಾ ಕಾಲಾಗ್ನಿರುದ್ರಕಃ ॥೬॥

ಚಚಾರ ಭಿಕ್ಷಾವ್ಯಾಜೇನ ಮದದ್ವಿಪಗತಿಸ್ತದಾ ।
ಬ್ರಾಹ್ಮೇ ಚ ವೈಷ್ಣವೇ ಲೋಕೇ ಕುಬೇರೇಂದ್ರಮರುತ್ಸು ಸಃ ॥೭॥

ವಾಯವ್ಯೇ ವಾರುಣೇ ಯಾಮ್ಯೇ ನೈರ್ಋತಾಗ್ನಿಪುರೇಷ್ವಪಿ ।
ತಂ ದೃಷ್ಟ್ವಾ ಭಯವಿತ್ರಸ್ತಾ ದೇವಾ ಜಗ್ಮುರ್ಯಥಾಗತಂ ॥೮॥

ಶೂನ್ಯಾಲಯೇಷು ಬಭ್ರಾಮ ಗಜೋಽಸಲವನೇಷ್ವಿವ ।
ತತ್ರತ್ಯಂ ಮಧು ಮೈರೇಯಂ ಪಿಬನ್ ಕಲಶಜಾಲಕೈಃ ॥೯॥

ಪಾವುಗೆಯನ್ನು ಮೆಟ್ಟುವವನಾದನು, ಬಲಗೈಯಲ್ಲಿ ಕಪಾಲವನ್ನೂ ಎಡಗೈಯಲ್ಲಿ ತ್ರಿಶೂಲವನ್ನೂ ಧರಿಸಿದನು. ॥೩-೪॥

ಸರ್ಪವನ್ನು ಯಜ್ಞೋಪವೀತವನ್ನಾಗಿಯೂ ಕರ್ಣಕುಂಡಲವನ್ನಾಗಿಯೂ ಧರಿಸಿ, ಭಯಂಕರವಾಗಿ ಡಮರುವನ್ನು ಬಾರಿಸುತ್ತಾ ದೇವಲೋಕಾದಿಗಳಲ್ಲಿ ಹನ್ನೆರಡು ವರ್ಷಗಳ ವರೆಗೆ ಸಂಚರಿಸುತ್ತಾ ಭಿಕ್ಷವೆತ್ತಿದನು. ॥೫॥

ವೇದಗಳನ್ನು ನಾಯಿಗಳನ್ನಾಗಿ ಮಾಡಿಕೊಂಡು ಆ ರುದ್ರನು ಮದಿಸಿದ ಸಲಗದಂತೆ ಊರೂರುಗಳನ್ನು ಸುತ್ತತೊಡಗಿದನು. ॥೬॥

ಬ್ರಹ್ಮಲೋಕ, ವಿಷ್ಣುಲೋಕ, ಕುಬೇರಪುರ, ಇಂದ್ರಪುರ, ಮರುಲ್ಲೋಕ, ವಾಯುಲೋಕ, ವರುಣಲೋಕ, ಯಮಲೋಕ, ನಿರ್ಋತಿಲೋಕ, ಅಗ್ನಿಲೋಕಗಳಲ್ಲಿಯೂ ಸಂಚರಿಸಿದನು. ಆ ಲೋಕಗಳಲ್ಲಿನ ದೇವತೆಗಳು ಭಯಂಕರನಾದೀ ಕಾಲಾಗ್ನಿ ರುದ್ರನನ್ನು ನೋಡಿ ಭಯಗೊಂಡು ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದರು. ॥೭-೮॥

ಜನಶೂನ್ಯವಾದ ಕಬ್ಬಿನತೋಟಗಳಲ್ಲಿ ಸಲಗವು ಸ್ವೇಚ್ಛೆಯಾಗಿ ವಿಹರಿಸುವಂತೆ ಆ ರುದ್ರನು ದೇವತೆಗಳಿಲ್ಲದ ಆ ಲೋಕಗಳಲ್ಲಿ ಸಂಚರಿಸಿದನು. ಅಲ್ಲಿನ ಅಮೃ

ಭಕ್ಷ್ಯಾನುಚ್ಚಾವಚಾಂ ಶ್ಚಾದನ್ ಗಂಧಮಾಲೇಪಯಂಸ್ತದಾ ।
ದೇವೋದ್ಯಾನಸ್ರಜಾ ವರ್ಷ್ಮ ಶೋಭಯನ್ ಭಾತಿ ಭೂತಪಃ ॥೧೦॥

ಸಾ ಚಾನ್ವಗಾತ್ತದಾ ವಧ್ಯಾ ಕೃಷ್ಣಾಂಗೀ ನಿರ್ಜಿತೋದರೀ ।
ದಂಷ್ಟ್ರಾಕರಾಲವದನಾ ಸೃಕ್ವಿಣೀ ಲೇಲಿಹನ್ ಮುಹುಃ ॥೧೧॥

ಊರ್ಧ್ವೋರ್ಧ್ವದ್ವಿಕೃತಾ ತಾಮ್ರಕೇಶಾ ರಕ್ತಾರುಣೇಕ್ಷಣಾ ।
ದಂಡಹಸ್ತಾಽನುವವ್ರಾಜ ರುದ್ರಂ ಕಾಲಾಗ್ನಿಸಂಭವಂ ॥೧೨॥

॥ ಮುನಿರುವಾಚ ॥

ಈಶಾನೇಕ್ಷಣತಃ ಸ್ಕಂದ ನ ನಷ್ಟಾ ಕಿಂ ತದಾ ಹಿ ಸಾ ।
ಯಸ್ಯ ಸ್ಮರಣಮಾತ್ರೇಣ ನತ್ವಾ ಚೋಚ್ಚಾರಣೇನ ಹಿ ॥೧೩॥

ಶಿವೇತಿ ಕೀರ್ತನಾದೇವ ಬ್ರಹ್ಮಹತ್ಯಾ ವಿನಶ್ಯತಿ ।
ತಂ ರುದ್ರಮನುವವ್ರಾಜ ತದ್ವೈ ವಿಸ್ತರತೋ ವದ ॥೧೪॥

ತಾದಿಗಳನ್ನು ಕುಡಿದನು. ತಿಂಡಿತಿನಸುಗಳನ್ನು ತಿಂದನು. ಗಂಧವನ್ನು ಲೇಪಿಸಿಕೊಂಡನು. ನಂದನವನದ ದಿವ್ಯಪುಷ್ಪಗಳ ಮಾಲೆಯನ್ನಲಂಕರಿಸಿಕೊಂಡನು. ॥೯-೧೦॥

ಆ ಕಾಲಾಗ್ನಿರುದ್ರನೊಡನೆ ಆ ಬ್ರಹ್ಮಹತ್ಯೆಯೂ ಹೊರಟಿತು. ಅದು ಕರಿಯ ಮೈಯ್ಯುಳ್ಳದುದಾಗಿ ದೊಡ್ಡ ಹೊಟ್ಟೆಯುಳ್ಳದ್ದಾಗಿತ್ತು. ದವಡೆಯಿಂದ ಭಯಂಕರವಾದ ಕೋರೆದಾಡೆಗಳು ಹೊರಟಿದ್ದವು. ಉದ್ದದ ನಾಲಗೆಯನ್ನು ಚಾಚುತ್ತಿದ್ದಿತು. ಕೆಂಪಡರಿದ ದೊಡ್ಡದೊಡ್ಡ ಕಣ್ಣುಗಳು ಭಯಂಕರವಾಗಿ ಹೊಳೆಯುತ್ತಿದ್ದವು. ಕೆಂಪು ತಲೆಯ ಕೂದಲುಗಳು ಮೇಲುಮುಖವಾಗಿ ಹೊರಟು ಚದುರಿದ್ದವು. ॥೧೧-೧೨॥

ಎಂದು ಹೇಳಿದ ಸ್ಕಂದವಾಣಿಯನ್ನು ಕೇಳಿ ಜೈಗೀಷವ್ಯ ಮುನಿಯು ಓ ಸ್ಕಂದದೇವ, ಪರಮೇಶ್ವರನ ದೃಷ್ಟಿಯಿಂದಲೇ ಆ ಬ್ರಹ್ಮಹತ್ಯೆಯು ನಾಶವಾಗಲಿಲ್ಲವೆ? ಆ ದೇವನ 'ಶಿವ' ಎಂಬ ಹೆಸರನ್ನು ಕೀರ್ತಿಸಿದರೂ ಸ್ಮರಿಸಿದರೂ ಬ್ರಹ್ಮಹತ್ಯೆಯು ನಾಶವಾಗುವುದಲ್ಲವೆ? ಹೀಗಿರಲು ಅದು ರುದ್ರನನ್ನು ಅನುಸರಿಸುವುದೆಂದರೇನು? ಇದರ ರಹಸ್ಯವನ್ನು ಹೇಳು ಎಂದು ಪ್ರಶ್ನಿಸಲು, ॥೧೩-೧೪॥

|| ಸ್ಕಂದ ಉವಾಚ ||

ಲೋಕಸಂಗ್ರಹಣಾರ್ಥಾಯ ಈಶಾಜ್ಞಾವಶತಸ್ತದಾ ।
ಕಾಲಾಗ್ನಿರುದ್ರಸ್ತಾಂ ವಧ್ಯಾಂ ಮಾನಯಾಮಾಸ ವಿಶ್ವಪಃ ॥೧೫॥

ಚಚಾರ ದೇವಲೋಕೇಷು ತಚ್ಛೃಣುಷ್ವ ಮುನೀಶ್ವರ ।
ಐಂದ್ರೇ ಚ ವಾರುಣೇ ಯಾಮ್ಯೇ ವೈಷ್ಣವೇ ಬ್ರಹ್ಮಸದ್ಮನಿ ॥೧೬॥

ಕೌಬೇರಯಕ್ಷಸದನೇ ಗಾಂಧರ್ವೋರಗಸದ್ಮಸು ।
ಚಚಾರ ಭಿಕ್ಷಾಂ ರುದ್ರೋಽಸೌ ತೈಶ್ಚ ಸಂಪೂಜಿತೋ ಮುದಾ ॥೧೭॥

ತಂ ದೃಷ್ಟ್ವಾ ಕಾಲದಮನಂ ಶಂಕರಂ ಕಾಲಭೈರವಂ ।
ರೂಪಲಾವಣ್ಯಸಂಪನ್ನಂ ನಾರೀಕುಲಮಥಾಭ್ಯಗಾತ್ ॥೧೮॥

ಗಾಯಂತಂ ವಿವಿಧಂ ಗೀತಂ ನೃತ್ಯಂತಂ ದದೃಶುಸ್ತದಾ ।
ಸಸ್ಮಿತಂ ಪ್ರೇಕ್ಷ್ಯವದನಂ ಚಲದ್ಭ್ರೂಭಂಗಮೇವ ಚ ॥೧೯॥

ಸ ದೇವದಾನವಾದೀನಾಂ ಲೋಕಮಭ್ಯೇತ್ಯ ಶೂಲಭೃತ್ ।
ಜಗಾಮ ವಿಷ್ಣೋರ್ಭವನಂ ಯತ್ರಾಸ್ತೇ ಪುರುಷೋತ್ತಮಃ ॥೨೦॥

ಆಗ ಸ್ಕಂದನು ಹೀಗೆ ಹೇಳಿದನು—ಲೋಕಕ್ಷೇಮಕ್ಕಾಗಿ ಈಶ್ವರನಪ್ಪಣೆಯಂತೆ ರುದ್ರನು ಬ್ರಹ್ಮಹತ್ಯೆಯನ್ನು ಸ್ವೀಕರಿಸಿದನು. ಅದಕ್ಕೆ ಗೌರವವಿತ್ತನು ಇರಲಿ, ರುದ್ರನು ದೇವಲೋಕಾದಿಗಳಲ್ಲಿ ಸಂಚರಿಸಿದುದನ್ನು ಹೇಳುವೆನು ಕೇಳು. ||೧೫||

ರುದ್ರನು ಇಂದ್ರಲೋಕ, ವರುಣಲೋಕ, ಯಮಲೋಕ, ವಿಷ್ಣುಲೋಕ, ಬ್ರಹ್ಮಲೋಕ, ಕುಬೇರಲೋಕ, ಗಂಧರ್ವಲೋಕಗಳಲ್ಲಿ ಪಾತಾಳದಲ್ಲಿಯೂ ಭಿಕ್ಷೆಗಾಗಿ ಸಂಚರಿಸುತ್ತಾ ಅಲ್ಲಿನವರಿಂದ ಪೂಜಿಸಲ್ಪಡುತ್ತಾ ವಿಹರಿಸಿದನು. ||೧೬-೧೭||

ರೂಪಯೌವನಸಂಪನ್ನನಾದ ಆ ಕಾಲಾಗ್ನಿರುದ್ರನನ್ನು ನೋಡಿ ದೇವಲೋಕದ ಸುಂದರಸ್ತ್ರೀಯರು, ಅವನ ಗಾನ, ನರ್ತನ ಮಂದಹಾಸಗಳಿಂದ ಮುಗ್ಧರಾಗಿ ಆಶ್ಚರ್ಯದಿಂದ ಅವನನ್ನು ನೋಡುತ್ತಿದ್ದರು. ||೧೮-೧೯||

ಹೀಗೆ ಆ ರುದ್ರನು ದೇವದಾನವಾದಿಗಳ ಲೋಕಗಳೆಲ್ಲವನ್ನೂ ಸಂಚರಿಸಿ ಪುರುಷೋತ್ತಮನಾದ ವಿಷ್ಣುವಿನ ಲೋಕಕ್ಕೆ ಬಂದನು. ||೨೦||

ಸಹೈವ ಭೂತಪ್ರವರೈಃ ಪ್ರವೇಷ್ಟುಮುಪಚಕ್ರಮೇ ।
ಅವಿಜ್ಞಾಯ ಪರಂ ಭಾವಂ ರುದ್ರಸ್ಯ ಪರಮಾತ್ಮನಃ ॥೨೧॥

ನ್ಯವಾರಯತ್ತ್ರಿಶೂಲಾಂಕಂ ದ್ವಾರಪಾಲೋ ಮಹಾಬಲಃ ।
ಶಂಖಚಕ್ರಗದಾಪಾಣಿರ್ವಿಷ್ವಕ್ಸೇನೋ ಗಣೋತ್ತಮಃ ॥೨೨॥

ತಂ ಶೂಲಮೂಲೇನೋದ್ಭಿದ್ಯ ಭ್ರಾಮಯಾಮಾಸ ವೇಗತಃ ।
ವಮನ್ ಸ ರುಧಿರಂ ವರ್ಣಂ ವವರ್ಷ ಮುಖತೋ ದ್ವಿಜ ॥೨೩॥

ತತ್ಯಾಜ ಜೀವಿತಂ ತತ್ರ ಮೃಗಾ ವ್ಯಾಧಹತಾ ಇವ ।
ವಿವೇಶ ವಿಷ್ಣೋರ್ಭವನಂ ತಸ್ಯಾದಾಯ ಕಲೇವರಂ ॥೨೪॥

ತಂ ವೀಕ್ಷ್ಯ ಜಗತೋ ಹೇತುಂ ಈಶ್ವರಂ ಜಗತೋ ಹರಿಃ ।
ತುಷ್ಟಾವ ಪ್ರಣತೋ ಭೂತ್ವಾ ತಂ ರುದ್ರಂ ಹರಿರವ್ಯಯಃ ॥೨೫॥

॥ ವಿಷ್ಣುರುವಾಚ ॥

ಕರಕಲಿತಕಪಾಲಂ ಬ್ರಹ್ಮರುಂಡೋರುಮಾಲಂ
ಗಲಲಸದಹಿಮಾಲಂ ಶೂಲಕೀಲಾವಿಶಾಲಂ ।

ಭೂತಗಳೊಡನೆ ರುದ್ರನು ಸಹಸಾ ಪ್ರವೇಶಮಾಡತೊಡಗಿದನು. ಪರಮಾತ್ಮನಾದ ರುದ್ರನ ಮಾಹಾತ್ಮ್ಯವನ್ನರಿಯದೇ ವಿಷ್ಣುವಿನ ದ್ವಾರಪಾಲಕನಾದ ಬಲಿಷ್ಠನಾದ ವಿಷ್ವಕ್ಸೇನನು ಚಕ್ರಗದಾಧಾರಿಯಾಗಿ ಅವನನ್ನು ಬಾಗಿಲಲ್ಲಿ ತಡೆದನು. ॥೨೧-೨೨॥

ಆ ವಿಶ್ವಕ್ಸೇನನನ್ನು ಶೂಲದಿಂದ ಇರಿದು ಮೇಲಕ್ಕೆತ್ತಿ ರುದ್ರನು, ಗಿರಗಿರನೆ ತಿರುಗಿಸಿದನು. ರಕ್ತವನ್ನು ಕಾರುತ್ತಾ ವಿಷ್ವಕ್ಸೇನನು ಬೇಡರಿಂದ ಹೊಡೆಯಲ್ಪಡುವ ಮೃಗಗಳಂತೆ ಒದ್ದಾಡಿ ಸತ್ತನು. ॥೨೩॥

ಅವನ ದೇಹವನ್ನೆತ್ತಿಕೊಂಡು ರುದ್ರನು ವಿಷ್ಣುವಿನ ಭವನದೊಳಗೆ ಪ್ರವೇಶಿಸಿದನು. ಹರಿಯು ಜಗತ್ಕಾರಣನಾದ ಪರಮೇಶ್ವರಸ್ವರೂಪನಾದ ಆ ರುದ್ರನನ್ನು ನೋಡಿ ನಮಸ್ಕರಿಸಿ ಹೀಗೆ ಸ್ತುತಿಸಿದನು. ॥೨೪-೨೫॥

“ಕೈಯಲ್ಲಿ ಬ್ರಹ್ಮಕಪಾಲವನನ್ನು ಹಿಡಿದು, ರುಂಡಮಾಲೆಯುನ್ನು ಕೊರಳಲ್ಲಿ ಧರಿಸಿ, ಸರ್ಪಹಾರದಿಂದಲಂಕೃತನಾಗಿ, ತ್ರಿಶೂಲಧಾರಿಯಾಗಿರುವ, ಮದ್ದಾನೆಯಂತೆ

ಮದಗಜವರಲೀಲಾಲೋಕನಾಲೋಡಿನಾಲಂ
ಸುರಕುವಲಯಸೋಮಂ ತ್ವಾಂ ಭಜೇ ಕಾಲಕಾಲಂ ॥೨೬॥

ಕರಧೃತಮೃಗಬಾಲಂ ಬಾಲವಿಪ್ರಾನುಕೂಲಂ
ಸುನಿಹಿತಗರನೀಲಂ ಶರ್ವಪಾದಾಬ್ಜಲೋಲಂ।
ಸುರವರದಲನಾದ್ಯೈರ್ಮದ್ಗಣಪ್ರಾಣಲೀಲಂ
ನತಜನಪರಿಪಾಲಂ ತ್ವಾಂ ಭಜೇ ಕಾಲಕಾಲಂ ॥೨೭॥

ಅನಲಕಲಿತಶೂಲಂ ತ್ವಾಂ ಭಜೇ ಕಾಲಕಾಲಂ ॥೨೮॥

॥ ಸೂತ ಉವಾಚ ॥

ತದಾ ವಿಷ್ಣುಸ್ತುತೋ ರುದ್ರೋ ಹರ್ಷವರ್ಷೇಣ ಭೂಯಸಾ ।
ದೇಹಭಿಕ್ಷಾಮಿಹೋವಾಚ ಯಾವನ್ಮೇ ತುಷ್ಟಿರದ್ಯ ಭೋ ॥೨೯॥

ತತೋ ಧ್ಯಾತ್ವಾ ತದಾ ವಿಷ್ಣೂ ರುದ್ರಮಾಹ ಗತವ್ಯಥಃ ।
ಗೃಹಾಣೇದಂ ಹಿ ಭಗವನ್ ನಾನ್ಯೈಸ್ತೃಪ್ತಿರಿಹಾದ್ಯ ತೇ ॥೩೦॥

ಗಂಭೀರವಾಗಿ ನೋಡುವ ಮತ್ತು ನಡೆಯುವ, ದೇವತೆಗಳೆಂಬ ಕನ್ನೈದಿಲೆಗಳನ್ನ ರಳಿಸುವ ಚಂದ್ರನಾದ ಓ ಸ್ವಾಮಿಯೇ, ಯಮಶಿಕ್ಷಕನಾದ ನಿನ್ನನ್ನು ನಾನು ಭಜಿಸುವೆನು. ॥೨೬॥

ಕೈಯಲ್ಲಿ ಮೃಗಶಿಶುವನ್ನು ಧರಿಸಿದವನೂ, ತ್ರಿಶೂಲಧಾರಿಯೂ, ಮುನಿ ಬಾಲನಾದ ಉಪಮನ್ಯುವಿಗೆ ವರದಾನಮಾಡಿದವನೂ, ನೀಲಕಂಠನೂ, ಶಿವಪಾದ ಸೇವಕನೂ, ವಿರುದ್ಧರಾದ ದೇವತೆಗಳನ್ನೂ ಮತ್ತು ನನ್ನ ಗಣಗಳನ್ನೂ ಶಿಕ್ಷಿಸಿ ದವನೂ, ಭಕ್ತರನ್ನು ಪಾಲಿಸುವನೂ ಆದ ದೇವನೇ, ನಿನ್ನನ್ನು ಸೇವಿಸುವೆನು." ॥೨೭-೨೮॥

ಆ ವಿಷ್ಣುವಿನ ಸ್ತುತಿಯಿಂದ ಸಂತುಷ್ಟನಾಗಿ ರುದ್ರನು ಹರಿಯನ್ನು ಕುರಿತು, "ಎಲೈ ವಿಷ್ಣುವೇ, ನಿನ್ನ ದೇಹವನ್ನು ನನಗೆ ಭಿಕ್ಷೆಯಾಗಿ ಕೊಟ್ಟು ತೃಪ್ತಿಪಡಿಸು" ಎಂದು ಕೇಳಿದನು. ॥೨೯॥

ಆಗ ಹರಿಯು ಯೋಚಿಸಿ, ಓ ಸ್ವಾಮಿಯೇ, ಈ ನನ್ನ ಶರೀರವನ್ನು

ತದಾ ತ್ರಿಶೂಲಮೂಲೇನ ತಚ್ಛಿರೋಽಭಿದ್ಯ ವೈಷ್ಣವಂ ।
ತದ್ರಕ್ತಮಪಿಬದ್ರುದ್ರೋ ಘನಘೋಷೋ ಹಸನ್ಮುಹುಃ ॥೩೧॥

ನೀರಕ್ತಂ ಮಾಧವಂ ದೃಷ್ಟ್ವಾ ತಮುಜ್ಜೀವಯದಂಜಸಾ ।
ಬ್ರಾಹ್ಮ್ಯಂ ಕಪಾಲಮಾದಾಯ ತದ್ಗಣಂ ಪ್ರಮುಮೋಚ ಹ ॥೩೨॥

ತೇನಾನುಜ್ಞಾಪಿತಸ್ತತ್ರ ಈಶಾಜ್ಞಾವಶತಸ್ತದಾ ।
ಜಗಾಮ ಲೀಲಯಾ ರುದ್ರೋ ದಿವ್ಯಾಂ ವಾರಾಣಸೀಂ ಪುರೀಂ ॥೩೩॥

ತತಸ್ಸರ್ವಾಣಿ ತೀರ್ಥಾನಿ ಸರ್ವಾಣ್ಯಾಯತನಾನಿ ಚ ॥೩೪॥

॥ ಸ್ಕಂದ ಉವಾಚ ॥

ಏವಂ ಭಿಕ್ಷಾನುಶಿಕ್ಷಾವಿಧಿಹರಿಸುರರಾಡ್ಯಾದಸಾಂ ನಾಮ ಲೋಕೇ
ಯಾಮ್ಯೇ ಭೀತೈಕ್ಷ ದೇವೈರ್ಮುನಿವರನಿಕರೈರ್ಧಾರ್ವಿತೈರ್ವೀಕ್ಷ್ಯ ರುದ್ರಃ ।
ಉಚ್ಚೈರ್ಘೋರಘೋಹಸಂಶ್ಚ ಹರಿಗಣಪವರೈಃ ಶೂಲಮೂಲೇ ಚ ಪ್ರೋತಂ
ಪ್ರೇತಂ ತದ್ವಕ್ತ್ರಧಾರಾಂ ಹರಿಶಿರಸಿಭವಾಂ ಬ್ರಹ್ಮಮುಂಡೇ ಪಿಬಂಸ್ತಾಂ
॥೩೫॥

ಈಗಲೇ ಸ್ವೀಕರಿಸು, ಇದು ಹೊರತು ನಿನಗೆ ಇನ್ನಾವುದರಿಂದಲೂ ತೃಪ್ತಿಯಾಗಲಾರದು" ಎಂದನು. ॥೩೦॥

ಆಗ ರುದ್ರನು ತ್ರಿಶೂಲದಿಂದ ಹರಿಯ ಶಿರವನ್ನು ಕತ್ತರಿಸಿ ಭಯಂಕರವಾಗಿ ಗರ್ಜಿಸುತ್ತಾ ನಗುತ್ತಾ ತೃಪ್ತಿಯಾಗಿ ಅವನ ರಕ್ತವನ್ನು ಕುಡಿದನು. ॥೩೧॥

ಹರಿಯು ರಕ್ತಹೀನನಾದುದನ್ನು ನೋಡಿ ರುದ್ರನು, ರಕ್ತಪಾನವನ್ನು ನಿಲ್ಲಿಸಿ ಹರಿಯನ್ನೂ ಅವನ ಗಣವನ್ನೂ ಬದುಕಿಸಿದನು. ॥೩೨॥

ಆಮೇಲೆ ಹರಿಯ ಅನುಮತಿಯನ್ನು ಪಡೆದು ಈಶ್ವರನ ಅಪ್ಪಣೆಯಂತೆ ಹೊರಟು ಅನೇಕತೀರ್ಥಕ್ಷೇತ್ರಗಳಲ್ಲಿ ಸಂಚರಿಸುತ್ತಾ ಪವಿತ್ರವಾದ ಕಾಶಿಗೆ ಬಂದನು. ॥೩೩-೩೪॥

ಹೀಗೆ ಆ ಕಾಲಾಗ್ನಿ ರುದ್ರನು ಪ್ರೇತವನ್ನು ತ್ರಿಶೂಲಾಗ್ರದಲ್ಲಿ ಸಿಕ್ಕಿಸಿಕೊಂಡು, ಹರಿಯ ರಕ್ತವನ್ನು ಬ್ರಹ್ಮಕಪಾಲದಲ್ಲಿ ಕುಡಿಯುತ್ತಾ, ಗಟ್ಟಿಯಾಗಿ ಗರ್ಜಿಸುತ್ತಾ, ನಗುತ್ತಾ ಹೊರಟು, ಬ್ರಹ್ಮ ಇಂದ್ರ ಮೊದಲಾದ ದೇವತೆಗಳ ಲೋಕವನ್ನು ತನ್ನ ಗಣಗಳೊಡನೆ ಸಂಚರಿಸಿದನು. ॥೩೫॥

ಭೀತ್ಯಾ ರುದ್ರಸ್ಯ ಧಾವನ್ ಭುಜಗಶಮನಸದ್ರೂಪಯುಕ್ತಸ್ಸುರೇಶೋ
ತತ್ರಾಪಾಂಪತಿರಪ್ಯಥಾಖುವರಕೋ ಧ್ವಾಂಕ್ಷೋಽಭವದ್ವೈ ಯಮಃ ।
ಯಕ್ಷೋ ಭಿಕ್ಷಣಶಿಕ್ಷಣೇನ ಸರಮಾಪುತ್ರೋಽಭವದ್ಭೀತಿತಃ
ಕಾ ವಾನ್ಯತ್ರ ಕಥಾ ಸುರೇಷು ವಿಹಿತಾ ತೇ ಕಾಂದಿಶೀಕಾಽಭವನ್ ॥೩೬॥

ವಿಶ್ವೇಶಸ್ಯ ಪುರೀಮಿಯಾಯ ಗಣಪೈ ರುದ್ರೋಽಪಿ ಶರ್ವಾಜ್ಞಯಾ
ವಧ್ಯಾ ಚಾಪಿ ತಿರಶ್ಚಕಾರ ಸಹಸಾ ರೂಪಂ ಸ್ವಮತ್ಯಾದರಾತ್ ।
ತಚ್ಛೈಲೋಪಮಮಂಡಲಪ್ರತಿನಿಭಂ ಭೂಮೌ ಕಪಾಲಂ ಪತತ್
ಸ್ನಾತ್ವಾಸೌ ಮಣಿಕರ್ಣಿಕಾಮಲಜಲೇ ನತ್ವಾ ಚ ವಿಶ್ವೇಶ್ವರಂ ॥೩೭॥

ತತ್ತೀರ್ಥಂ ಸಮಭೂತ್ಕಪಾಲಶಮನಂ ಪುಣ್ಯಂ ಚ ಕಾಶ್ಯಾಂ ಪರಂ ॥೩೮॥

॥ ಶ್ರೀ ರುದ್ರ ಉವಾಚ ॥

ನಿರ್ವಾಣಾರ್ಣವಕರ್ಣಧಾರ ಭಗವಂಸ್ತ್ವಂ ಶರ್ವರೀಶಾನನಾ
ವಾಮಾರ್ಧಾಂಗಭುಜಂಗಸಂಗತಮಹಾಭಸ್ಮೈಕಸಂಗ ಪ್ರಭೋ ।

ಇಂತಹ ಕಾಲಾಗ್ನಿರುದ್ರನನ್ನು ನೋಡಿ ಹೆದರಿ ಇಂದ್ರನು ಗರುಡರೂಪದಿಂದ ಓಡಿದನು. ವರುಣನು ಇಲಿಯಾಗಿ ಧಾವಿಸಿದನು. ಯಮನು ಕಾಗೆಯಾದನು. ಕುಬೇರನು ನಾಯಿಯಾದನು. ಇಂತಿಂತಹ ದೇವನಾಯಕರ ಗತಿಯೇ ಹೀಗಾದ ಮೇಲೆ ಮಿಕ್ಕ ದೇವತೆಗಳ ಅವಸ್ಥೆಗಳನ್ನು ಹೇಳಬೇಕೆ? ಅವರೆಲ್ಲರೂ ದಿಕ್ಕಾಪಾಲಾಗಿ ಚದುರಿಹೋದರು. ॥೩೬॥

ಆಮೇಲೆ ಪರಶಿವನ ಅಪ್ಪಣೆಯಂತೆ ಗಣಗಳೊಡನೆ ಕಾಶಿಗೆ ಬಂದನು. ಅಲ್ಲಿಗೆ ಬಂದೊಡನೆ ಅವನ ಬೆನ್ನುಹತ್ತಿದ್ದ ಬ್ರಹ್ಮಹತ್ಯೆಯು ನಾಶವಾಯಿತು. ಬೆಟ್ಟದಂತಿದ್ದ ಬ್ರಹ್ಮಕಪಾಲವೂ ಕೈಯಿಂದ ಕಳಚಿಬಿದ್ದಿತು. ಆ ಮೊದಲುಗೊಂಡು ಆ ತೀರ್ಥಕ್ಕೆ ಕಪಾಲಮೋಚನವೆಂಬ ಹೆಸರುಬಂದು ಪುಣ್ಯವೆನಿಸಿತು. ಕಾಲರುದ್ರನು ಅಲ್ಲಿ ಮಣಿಕರ್ಣಿಕೆಯಲ್ಲಿ ಸ್ನಾನಮಾಡಿ ವಿಶ್ವೇಶ್ವರನನ್ನು ಹೀಗೆ ಸ್ತುತಿಸಿದನು. ॥೩೭-೩೮॥

“ಓ ದೇವ, ನೀನು ಸಂಸಾರಸಾಗರವನ್ನು ದಾಟಿಸುವ ಕರ್ಣಧಾರ (ಅಂಬಿಗ)ನು. ಚಂದ್ರಕಲೆಯನ್ನು ಜಟೆಯಲ್ಲಿ ಧರಿಸಿರುವೆ. ಎಡಭಾಗದಲ್ಲಿ ಗಿರಿಜೆ

ಯತ್ಕಾಶ್ಯಾಂ ವಿಶತಾಂ ಮಹೌಘನಿವಹಂ ದೂರೇಪ್ಯದೂರಸ್ಸತಾಂ
ತ್ವಂ ಚಾನ್ನಾಧಿಪತಿಸ್ಸದೈವ ಮುದಿತೋ ವೇದೇಷು ಜೇಗೀಯಸೇ ॥೩೯॥

ಅಂಬಾನ್ನಪ್ರಿಯದಾಯಿನೀ ಭಗವತಃ ಪುತ್ರೋಪ್ಯಸೌ ಢುಂಢಿರಾಟ್
ದಂಡ್ಯಾನ್ ದಂಡಯತಿ ಪ್ರತಿಕ್ಷಣಮಸೌ ಶ್ರೀದಂಡಪಾಣಿಃ ಸದಾ।
ಭೀರೂಣಾಂ ಭಯನಾಶನಾಯ ಭವತಾ ಶ್ರೀಭೈರವಃ ಕಲ್ಪಿತಃ
ಶ್ರೀಕರ್ಣೇ ಮಣಿಕರ್ಣಿಕಾ ವಿಜಯತೇ ಲಿಂಗಾಲಿಸೌಧೋತ್ತರಾ ॥೪೦॥

ವಿಶ್ವೇಶಾನ ತವ ಪ್ರಭಾವಮತುಲಂ ಜಾನೀತ ಕೋ ದುರ್ಜನಃ
ಯಸ್ಮಿನ್ನಂತಕಭೀತಿಲೇಶರಹಿತೇ ತ್ವಂ ಚಾಂತ್ಯಭೂಷಾಪ್ರದೇ।
ದಿವ್ಯೋಂಕಾರಮಹಾಧ್ವನಿಂ ಹ್ಯುಪದಿಶನ್ ಮುಕ್ತ್ಯಂಗನಾಕಾಮಿನಂ
ಕೃತ್ವಾ ಭೋಗಿಫಣಾಲಿಹಾರಸುಭಗಂ ಚಂದ್ರಾರ್ಧಗಂಗಾಧರಂ ॥೪೧॥

ಯನ್ನು ಧರಿಸಿರುವೆ, ನಾಗಭೂಷಣನಾಗಿರುವೆ, ಭಸ್ಮಧಾರಿಯಾಗಿರುವೆ, ಕಾಶಿಯಲ್ಲಿ ಪ್ರವೇಶಮಾಡುವವರೆಲ್ಲರ ಪಾಪವನ್ನು ಹೋಗಲಾಡಿಸುವೆ. ನೀನು ಅಗೋಚರನಾಗಿದ್ದರೂ ಜ್ಞಾನಿಗಳಿಗೆ ಹತ್ತಿರದಲ್ಲಿಯೇ ಇರುವೆ. ಜಗತ್ತಿಗೆ ಅನ್ನವನ್ನು ಕೊಡುವ ದೇವನೆಂದು "ಅನ್ನಾನಾಂ ಪತಯೇ ನಮಃ" ಎಂಬ ವೇದವು ನಿನ್ನನ್ನು ಸದಾ ಸ್ತುತಿಸುವುದು. ॥೩೯॥

ಜಗನ್ಮಾತೆಯಾದ ಅನ್ನಪೂರ್ಣೆಯು ಭಕ್ತರಿಗನ್ನವನ್ನೀಯುತ್ತಾ ಇಲ್ಲಿ ನೆಲಸಿರುವಳು. ನಿನ್ನ ಮಗನಾದ ಢುಂಢಿರಾಜನು ದುಷ್ಟರನ್ನು ಶಿಕ್ಷಿಸುತ್ತಾ ದಂಡಧಾರಿಯಾಗಿ ಈ ಕಾಶಿಯಲ್ಲಿ ನಿಂತಿರುವನು. ಭೀತರ ಭಯವನ್ನು ಹೋಗಲಾಡಿಸಲೋಸುಗ ಶ್ರೀಭೈರವನು ನಿನ್ನಪ್ಪಣೆಯಂತೆ ಇಲ್ಲಿ ನೆಲಸಿರುವನು. ನಿನ್ನ ದೇವಾಲಯದ ಬಳಿಯಲ್ಲಿ ಮಣಿಕರ್ಣಿಕಾನದಿಯು ಹರಿಯುತ್ತಾ ಜನತೆಯ ಪಾಪವನ್ನು ತೊಳೆಯುತ್ತಿರುವಳು. ॥೪೦॥

ವಿಶ್ವೇಶ್ವರನೇ, ನಿನ್ನ ಮಹಾಮಹಿಮೆಯನ್ನು ತಿಳಿಯಬಲ್ಲವರಾರು? ಯಮನ ಭಯವಿಲ್ಲದ ಈ ಕಾಶಿಯಲ್ಲಿ ನೆಲಸಿ, ನೀನು ಮುಕ್ತಿಯನ್ನು ಬಯಸುವ ಭಕ್ತನಿಗೆ ಓಂಕಾರತತ್ವವನ್ನುಪದೇಶಿಸಿ ನಾಗಹಾರವುಳ್ಳವನಾಗಿ, ಶಿರಸ್ಸಿನಲ್ಲಿ ಚಂದ್ರಕಲೆಗಂಗೆಯನ್ನು ಹೊಂದುವ ನಿನ್ನ ಸಾರೂಪ್ಯವನ್ನು (ಸಮಾನರೂಪವನ್ನು) ಅವನಿಗೆ ಕರುಣಿಸುವೆ. ॥೪೧॥

ಭಸ್ಮಾಭ್ಯಕ್ತತನುಂ ಕರೀಂದ್ರಜಮಹಾಚರ್ಮಾಂಬರೋದ್ಯತ್ಕಟಿಂ
ಹಸ್ತೇ ಶೂಲಕಪಾಲಕಾಲಿವಿಹಿತಂ ನೇತ್ರತ್ರಯೇಣೋಜ್ವಲಂ ।
ಉಕ್ಷಾಧೀಶ್ವರಕೇತನಂ ಗರಗಲಂ ಕೃತ್ವಾ ನರಂ ಪಾವನಂ
ಇತ್ಯುಕ್ತ್ವಾ ಪ್ರಣತೋ ವಿಧೀಂದ್ರಸಹಿತೋ ರುದ್ರಸ್ತದಾ ನಿರ್ಯಯೌ॥೪೨॥

ಹೃಷ್ಟೋ ಹರ್ಷಪರಂಪರಾಸುದಿನತೋ ಧಾಮ ಸ್ವಮುತ್ಯಾದರಾತ್
ಗಚ್ಛಂಸ್ತತ್ರ ಜಗಾದ ಸೂಕ್ತಿಪರಮೈರಾನಂದವರ್ಷೈರ್ಯುತಃ ।
ತಚ್ಚಾನಂದವನಂ ಸನಂದನಮುಹಾಯೋಗೀಂದ್ರಸೇವ್ಯಂ ಸದಾ
ಯಶ್ಚಾತ್ರ ಸ್ವತನುಂ ಜಹಾತಿ ಸ ನರೋ ಧನ್ಯೋ ಭವೇನ್ನೇತರಃ ॥೪೩॥

॥ ಶ್ರೀರುದ್ರ ಉವಾಚ ॥

ವಾರಾಣಸಿ ತ್ವಯಿ ಸದೈವ ಸರೋಗಭೂಮೌ
ಆರೋಗ್ಯಭೂರಿತಿ ನಿಕಾಮಮಲೀಕವಾದಃ ।
ಸಂತಸ್ಥುಷಾಂ ಭವತಿ ಯತ್ರ ವಪುಸ್ಸಶೂಲಂ
ಜನ್ಮಾಂತರೇಪಿ ಜಲಭಾರವದುತ್ತಮಾಂಗಂ ॥೪೪॥

ನಿನ್ನ ಸಾರೂಪ್ಯವನ್ನು ಹೊಂದಿದವನು ನಿನ್ನಂತೆ ಭಸ್ಮಧಾರಿಯಾಗುವನು. ಗಜಚರ್ಮಧಾರಿಯಾಗುವನು. ತ್ರಿಶೂಲಕಪಾಲಧಾರಿಯಾಗುವನು. ತ್ರಿನೇತ್ರನಾಗುವನು. ವೃಷಭಧ್ವಜನಾಗುವನು. ನೀಲಕಂಠನಾಗುವನು" ಎಂದು ಸ್ತುತಿಸಿ ರುದ್ರ ಬ್ರಹ್ಮಾದಿಗಳೊಡನೆ ಅಲ್ಲಿಂದ ಹೊರಟನು. ॥೪೨॥

ಹಾಗೆ ಹೊರಟು ಆ ರುದ್ರನು ದಾರಿಯಲ್ಲೊಂದೆಡೆಯಲ್ಲಿ ಕಾಶಿಯನ್ನುದ್ದೇಶಿಸಿ ಆನಂದದಿಂದ ಹೀಗೆ ಹೊಗಳಿದನು. ಅಂದಿನಿಂದ ಆ ಸ್ಥಳವು ಆನಂದವನವೆಂದು ಪ್ರಸಿದ್ಧವಾಯಿತು. ಸನಂದನಾದಿಯೋಗಿಗಳೂ ಆ ವನವನ್ನು ಸೇವಿಸಿರುವರು. ಆ ಆನಂದವನದಲ್ಲಿ ಶರೀರವನ್ನು ಬಿಟ್ಟರೆ ಕೂಡಲೇ ಮುಕ್ತಿಯು ಲಭಿಸುವುದು. ॥೪೩॥

"ವಾರಾಣಸಿ (ಕಾಶಿ)ಯೇ, ನೀನು ಸದಾ ರೋಗಭೂಮಿಯಾಗಿರುವೆ. ಇಂತಹ ನಿನ್ನನ್ನು ಆರೋಗ್ಯಭೂಮಿಯೆಂದು ಕರೆಯುವುದು ಶುದ್ಧತಪ್ಪು. ಏಕೆಂದರೆ ನಿನ್ನಲ್ಲಿ ವಾಸಿಸುವರಿಗೆ ಈ ಜನ್ಮದಲ್ಲಲ್ಲದೇ ಜನ್ಮಾಂತರದಲ್ಲೂ ಯಾವುದಾದರೂ ಶೂಲೆಗಳಿದ್ದೇ ಇರುವುವು. ತಲೆಯಲ್ಲಿ ನೀರುತುಂಬಿಕೊಳ್ಳುವುದು, (ಅಂದರೆ ಈಶ್ವರನ ಸಾರೂಪ್ಯ

ಯೇ ಮೃಷ್ಟಾನ್ನಭುಜೋ ಗಜೋತ್ತಮಾರೋಹಾಃ ಸ್ವದೇಹಾಂತರೇ
ಮತ್ತಾಭಿರ್ಮಹಿಲಾಭಿರತ್ರ ವಿಹರಂತ್ಯಾಮುಕ್ತಮುಕ್ತಾಸ್ರಜಃ ।
ತೇ ಘೋರಾಸ್ಥಿಧರಾ ವಿರಾಜದನಡುದ್ವಾಹಾಃ ವಿಷಾಹಾರಿಣಃ
ನರ್ತಿಷ್ಯಂತ್ಯವಶಾ ಶ್ಮಶಾನನಿಲಯೇ ನೀಚೈಃ ಪಿಶಾಚೈಸ್ಸಮಂ ॥೪೫॥

ವಾರಾಣಸೀಂ ಪ್ರಾಪ್ಯ ಬುಧಾಃ ಪಿತೃಭ್ಯಃ
ಜಲಾಂಜಲಿಂ ಸಾದರಮರ್ಪಯಂತಿ ।
ಪಾಪಾನಿ ಸರ್ವಾಣಿ ತತಃ ಪಿತೄಣಾಂ
ಭವಂತ್ಯಹೋ ದತ್ತಜಲಾಂಜಲೀನಿ ॥೪೬॥

ದತ್ತಂ ಶಾಂಭವಪುಂಗವೇ ಕಮಪಿ ತತ್ಕ್ಷೇತ್ರಪ್ರಭಾವಾದ್ಭವೇ
ದ್ದಾನಂ ಕೋಟಿಗುಣಾನ್ವಿತಂ ಭವತಿ ತತ್ಖ್ಯಾತಂ ತ್ವಯಿ ತ್ವಾಸ್ಥಯಾ ।
ವಾಸಂ ಪ್ರಾಪ್ಯ ಮುಹುರ್ಬಹೂನಿ ದದತೋ ವಾಸಾಂಸಿ ಜನ್ಮಾಂತರೇ
ಲೋಕಾ ಹಂತ ಭಜಂತಿ ದಿಗ್ವಸನತಾಂ ಹೇ ಕಾಶಿತುಭ್ಯಂ ನಮಃ ॥೪೭॥

ಬಂದು ಶೂಲಧಾರಿಗಳೂ ಗಂಗಾಧರರೂ ಆಗುವರು ಎಂದು ಇಲ್ಲಿ ವ್ಯಾಜಸ್ತುತಿಯನ್ನು ಮಾಡಿದ್ದಾನೆ.) ಶೂಲವನ್ನು ಧರಿಸುವುದು, ಇವು ತಪ್ಪಲಾರವು. ||೪೪||

ಮೃಷ್ಟಾನ್ನವನ್ನು ತಿಂದು ಉತ್ತಮಾರಭರಣವನ್ನಿಟ್ಟು ಆನೆ ಕುದುರೆಗಳನ್ನೇರಿ ಸುಂದರಿಯರೊಡನೆ ವಿಹರಿಸುವಂತಹವರು ನಿನ್ನಲ್ಲಿ ಬಂದು ವಾಸಮಾಡಿದರೆ, ವಿಷಾಹಾರಿಗಳಾಗಿ ಮುದಿಯೆತ್ತನ್ನೇರಿ ಎಲುಬನ್ನಲಂಕರಿಸಿಕೊಂಡು ಸ್ಮಶಾನದಲ್ಲಿ ನೀಚವಾದ ಪಿಶಾಚಿಗಳೊಡನೆ ವಿಹರಿಸುವರು. (ಅಂದರೆ ರುದ್ರರೂಪರಾಗುವರು). ||೪೫||

ಕಾಶಿಗೆ ಬಂದು ಗಂಗೆಯಲ್ಲಿ ಮಿಂದು ಪಿತೃಗಳಿಗೆ ಜಲಾಂಜಲಿಯನ್ನು ಕೊಟ್ಟರೆ ಆದರಿಂದ ಅವರ ಪಿತೃಗಳ ಪಾಪಗಳೆಲ್ಲವೂ ಜಲಾಂಜಲಿಗಳೇ ಆಗುವುವು. ಆ ಪಾಪಗಳು ಜಲದಲ್ಲೆಸದ ಪುಷ್ಪಾಂಜಲಿಯಂತೆ ತೊಳೆದು ನಾಶವಾಗುವುವು. ||೪೬||

ಯಾವ ಕ್ಷೇತ್ರದಲ್ಲಾಗಲಿ ಒಂದುಸಾರಿ ಯತ್ಕಿಂಚಿತ್ ದ್ರವ್ಯವನ್ನು ಶೈವಶ್ರೇಷ್ಠನಿಗೆ ದಾನಮಾಡಿದರೆ ಕೋಟಿದಾನಮಾಡಿದ ಫಲವುಂಟಾಗುವುದು, ಎಂದು ನಂಬಿ, ಕಾಶೀಮಾತೆಯೇ, ನಿನ್ನಲ್ಲಿ ಬಂದು ವಸ್ತ್ರವನ್ನು ದಾನಮಾಡಿದರೆ ಅವನು ಜನ್ಮಾಂತರದಲ್ಲಿ ದಿಗಂಬರನಾಗುವನು. ಅಂದರೆ ಶಿವಸಾರೂಪ್ಯವನ್ನು ಹೊಂದು

ಇತಿ ಶ್ರೀಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ಕಾಲಾಗ್ನಿರುದ್ರಕೃತ ಬ್ರಹ್ಮಹತ್ಯಾಪಾಲನ ವಿಷ್ಣುರಕ್ತಪಾನ ವಾರಾಣಸೀಗಮನಬ್ರಹ್ಮಹತ್ಯಾಪಾಲ ಮೋಚನತೀರ್ಥವರ್ಣನವಾರಾಣಸೀಸ್ತುತಿರ್ನಾಮ ಸಪ್ತವಿಂಶೋಽಧ್ಯಾಯಃ

ವನು. ಇಂತಹ ಪವಿತ್ರಳಾದ ನಿನಗೆ ನಮಸ್ಕಾರವು. ವಾರಾಣಸಿಯೇ, ಹೇಗಿದ್ದರೂ ನೀನು ಭಕ್ತರಿಗೆ ಶಿವಸಾರೂಪ್ಯವನ್ನು ಕೊಡತಕ್ಕವಳು" ಎಂದು ಕಾಲಾಗ್ನಿರುದ್ರನು ಕಾಶಿಯನ್ನು ಸ್ತುತಿಸಿ ಮುಂದುವರಿದನು. ||೪೭||

ಇಲ್ಲಿಗೆ ಶಿವರಹಸ್ಯದಲ್ಲಿ ಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಅಷ್ಟಾವಿಂಶತಿತಮೋಽಧ್ಯಾಯಃ

|| ಸ್ಕಂದ ಉವಾಚ ||

ಬ್ರಹ್ಮಾಪಿ ಶಿವನಿಂದಾಯಾಃ ಕಾರಣೇನಾತಿದುಃಖಿತಃ ।
ಶ್ರುತ್ವಾ ಶಿವಸ್ಯ ವಚನಂ ಪ್ರಣಮ್ಯಾಹ ಮಹೇಶ್ವರಂ ॥೧॥

ಭಿನ್ನಶೀರ್ಷಸ್ಸರುದ್ರೇಣ ವ್ರೀಡಾವನತಕಂಧರಃ ।
ತುಷ್ಟಾವ ಪರಮೇಶಾನಂ ಕೃತನಿಂದಾಪನುತ್ತಯೇ ॥೨॥

|| ಬ್ರಹ್ಮೋವಾಚ ||

ಮದಮುದಿತಮದನದಮನ ಸದನೀಕೃತಗಿರಿವಂದನ
ಸಂಕ್ರಂದನಕೃತವಂದನ ಯಮುನಾನುಜಭವನ ।
ಸಿಕತಾಶನತನಯರಕ್ಷಣ ಭುವನಾಧಿಪ ಗಗನಾಂತರ
ಗಹನಾಕೃತಿಮನನ ಗಿರಿಜಾನನಕಮಲೋದ್ಭವಪರಿಗಂ ॥೩॥

ಇಪ್ಪತ್ತೆಂಟನೆಯ ಅಧ್ಯಾಯ

ಎಲೈ ಜೈಗೀಷವ್ಯಮುನಿಯೇ, ಹಿಂದೆ ಹೇಳಿದಂತೆ ಶಿವನು ತನ್ನನ್ನು ನಿಂದೆ ಮಾಡಿದ ಬ್ರಹ್ಮನನ್ನು ತಿರಸ್ಕರಿಸಿದನು. ರುದ್ರನು ಅವನ ಐದನೆಯ ಶಿರವನ್ನು ಕತ್ತರಿಸಿದನು. ಆಗ ಬ್ರಹ್ಮನು ನಾಚಿ ವಿನಯದಿಂದ ಬಗ್ಗಿ ತನ್ನ ಪಾಪಪ್ರಾಯಶ್ಚಿತ್ತಕ್ಕಾಗಿ ಶಿವನನ್ನು ಹೀಗೆ ಸ್ತುತಿಸಿದನು. ||೧-೨||

"ಗರ್ವಿಷ್ಠನಾದ ಮನ್ಮಥನನ್ನು ದಹಿಸಿದ, ಕೈಲಾಸದಲ್ಲಿ ವಾಸಿಸುವ, ದೇವೇಂದ್ರನಿಂದ ವಂದಿಸಲ್ಪಡುವ, ಪರಶಿವನೇ, ನೀನು ಸೂರ್ಯಮಂಡಲದಲ್ಲಿ ಅಧಿದೇವತೆಯಾಗಿ ನೆಲಸಿರುವೆ. ಶಿಲಾದಮುನಿಯ ಮಗನ (ನಂದಿಯ) ನ್ನು

ಧಿತಸಂಹನನ ಅರುಣಾನುಜಕೃತವಾಹನಪರಿಪೂಜನ ।
ಪರಿತೋಷಣ ತರಣಿಪ್ರಭ ದಿತಿಜಾಂತಕ ಖರವಸ್ತ್ರಕ ಅರಶೋ ॥೪॥

ಭಿತಚಕ್ರವರಪ್ರದ ವರುಣಾಲಯಕೃತಪಾರಣಮುನಿಪೂಜಿ
ತಕರಣ ಅರುಣಾಚಲವಸತೇ ಶಿವಕರುಣಾಂ ಕುರು ಶಂಭೋ ॥೫॥

॥ ಸೂತ ಉವಾಚ ॥

ಬ್ರಹ್ಮಣಃ ಸಂಸ್ತವಂ ಶ್ರುತ್ವಾ ತಮಾಹ ಪ್ರಸಭಂ ವಚಃ ।
ದೇವದೇವೋ ವಿರೂಪಾಕ್ಷಃ ಸ್ಮಾಹ ಪಂಕಜಸಂಭವಃ ॥೬॥

॥ ಶ್ರೀ ಈಶ್ವರ ಉವಾಚ ॥

ಮಾಭೈರ್ಬ್ರಹ್ಮನ್ ತವಾನೇನ ಸ್ತೋತ್ರವರ್ಯೇಣ ಪದ್ಮಜ ।
ಮಾಮೇವ ತಪಸಾಽರಾಧ್ಯ ಪ್ರತಿಷ್ಠಾಂ ಲಿಂಗಸಂಭವಾಂ ॥೭॥

ಮನ್ನಿಂದಾಯಾಃ ಫಲಂ ಪ್ರಾಪ್ತಂ ಕಾಲರುದ್ರೇಣ ಶಿಕ್ಷಿತಃ ।
ತ್ವತ್ಕಪಾಲಕರಸ್ಸೋಽಪಿ ನಿಯುಕ್ತೋ ಭಕ್ಷಣೇ ಸುರೇ ॥೮॥

ರಕ್ಷಿಸಿದೆ. ಆಕಾಶದಂತೆ ಪ್ರಪಂಚವೆಲ್ಲವನ್ನೂ ವ್ಯಾಪಿಸಿರುವ ಪರಮಾತ್ಮನಾದ ಬ್ರಹ್ಮನ ಐದನೆಯ ಮುಖವನ್ನು ಕತ್ತರಿಸಿದೆ. ನಾರಾಯಣನಿಂದ ಪೂಜಿಸಲ್ಪಟ್ಟು ಅವನಿಗೆ ಹರಿತವಾದ ಮೊನೆಯುಳ್ಳ ಚಕ್ರವನ್ನನುಗ್ರಹಿಸಿದೆ. ಸಮುದ್ರವನ್ನು ಪಾನ ಮಾಡಿದ ಅಗಸ್ತ್ಯಮುನಿಯಿಂದ ಪೂಜಿತನಾದೆ. ಅರುಣಾಚಲದಲ್ಲಿ ನೆಲಸಿರುವ ಓ ಪರಮೇಶ್ವರನೇ, ನನ್ನಲ್ಲಿ ದಯೆಯುಳ್ಳವನಾಗು." ||೩-೪-೫||

ಬ್ರಹ್ಮನ ಈ ಸ್ತೋತ್ರವನ್ನು ಕೇಳಿ ಸಂತಸಗೊಂಡು ಶಿವನು ಅವನನ್ನು ಹೀಗೆ ಅನುಗ್ರಹಿಸಿದನು. ||೬||

ಬ್ರಹ್ಮನೇ, ಭಯಗೊಳ್ಳಬೇಡ, ನನ್ನ ನಿಂದೆಯನ್ನು ಮಾಡಿದುದಕ್ಕೆ ತಕ್ಕ ಫಲವು ನಿನಗೆ ಲಭಿಸಿತು. ಈಗ ನೀನು ಹೇಳಿದ ಸ್ತುತಿಯಿಂದ ಶಿವಲಿಂಗವನ್ನು ಪ್ರತಿಷ್ಠಿಸಿ ನನ್ನನ್ನು ಪೂಜಿಸು. ||೭||

ನಿನ್ನ ಕಪಾಲವನ್ನು ಹಿಡಿದು ಬ್ರಹ್ಮಹತ್ಯಾನಿವಾರಣೆಗಾಗಿ ರುದ್ರನು ದೇವ ಲೋಕಗಳಲ್ಲಿ ಸಂಚರಿಸುತ್ತಿರುವನು. ಅವನನ್ನು ನೋಡಿ ಹೆದರಿ ದೇವತೆಗಳೆಲ್ಲರೂ ಪಲಾಯನಮಾಡುತ್ತಿರುವರು. ||೮||

ಆದಾಯ ಭಿಕ್ಷಾಂ ದೇವೇಷು ಭೀತೇಷು ಸುರಸತ್ತಮ ।
ಗರುಡಧ್ವಜಮಾಸಾದ್ಯ ತಸ್ಯ ವೈ ರಕ್ತಭಾರಯಾ ॥೯॥

ಅರ್ಧಪೂರ್ಣಕಪಾಲೇನ ಶೂಲಪ್ರೋತಂ ಚ ತಂ ಗಣಂ ।
ವಿಷ್ವಕ್ಸೇನಂ ಸಮಾದಾಯ ಪಶ್ಚ ಗಚ್ಛತಿ ಶೂಲಭೃತ್ ॥೧೦॥

ಶಾರದಾಭ್ರಘನಪ್ರಖ್ಯೋ ವಿಮುಂಚನ್ಭೈರವಸ್ವನಂ ।
ಜಟಾಮೌಳಿಸ್ಸದಾ ರುದ್ರೋ ವೇದಸಂಘೈರ್ವೃತಸ್ಸದಾ ॥೧೧॥

ಅವಿಮುಕ್ತಂ ಪ್ರವಿಷ್ಟೋಽಸೌ ತತ್ಕರಾಗ್ರಾತ್ಕಪಾಲಕಂ ।
ಸಬ್ರಹ್ಮವಧ್ಯಂ ಪತತಿ ಯತ್ರ ತೇ ಪತಿತಂ ಶಿರಃ ॥೧೨॥

ಕಪಾಲಮೋಚನಾಖ್ಯಂ ತತ್ಕಪಾಲೇಶಸಮೀಪತಃ ।
ಸರಃ ಪಾಪೈಕಶಮನಂ ಸ್ನಾತಾನಾಂ ಸಂಭವಿಷ್ಯತಿ ॥೧೩॥

ಆಮೇಲಾರುದ್ರನು ವಿಷ್ಣುಲೋಕಕ್ಕೆ ಹೋಗುವನು. ಅಲ್ಲಿ ಹರಿಯ ದ್ವಾರಪಾಲಕನು ತಡೆಯುವನು. ಆ ವಿಷ್ವಕ್ಸೇನನನ್ನು ಕೊಂದು ತ್ರಿಶೂಲದಲ್ಲಿ ಸಿಕ್ಕಿಸಿಕೊಂಡು ವಿಷ್ಣುಭವನದೊಳಕ್ಕೆ ಹೋಗಿ ಹರಿಯ ಶಿರವನ್ನು ಕತ್ತರಿಸಿ ಅರ್ಧ ಕಪಾಲ ತುಂಬಿದ ಅವನ ರಕ್ತವನ್ನು ಕುಡಿದು ಆಮೇಲೆ ಅವನನ್ನು ಬದುಕಿಸಿ ಅನಂತರ ಕಾಶಿಗೆ ತೆರಳುವನು. ॥೯-೧೦॥

ಹೋಗುತ್ತಾ ಅವನು ಮೇಘದಂತೆ ಗಂಭೀರವಾದ ಗರ್ಜನೆಯನ್ನು ಮಾಡುವನು. ವೇದಗಳು ನಾಯಿಗಳ ರೂಪದಿಂದ ಅವನೊಡನೆಯೇ ಇರುವುವು. ॥೧೧॥

ಕಾಶಿಗೆ ಹೋಗಿ ರುದ್ರನು ಮೊದಲು ಅವಿಮುಕ್ತತೀರ್ಥವನ್ನು ಪ್ರವೇಶಿಸುವನು. ಅಲ್ಲಿಅವನ ಕೈಯಿಂದ ಬ್ರಹ್ಮಕಪಾಲವು ಕಳಚಿ ಬೀಳುವುದು. ಬ್ರಹ್ಮಹತ್ಯೆಯೂ ನಾಶವಾಗುವುದು. ॥೧೨॥

ಬ್ರಹ್ಮಕಪಾಲವು ರುದ್ರನ ಕೈಯಿಂದ ಕಳಚಿಬಿದ್ದ ಪ್ರದೇಶವು "ಕಪಾಲಮೋಚನತೀರ್ಥ"ವೆಂದು ಪ್ರಸಿದ್ಧವಾಗುವುದು. ಆ ತೀರ್ಥದ ಬಳಿಯಲ್ಲಿ ಕಾಪಾಲೇಶ್ವರನು ನೆಲಸಿರುವನು. ಅಲ್ಲಿ ಸ್ನಾನಮಾಡಿದವರ ಪಾಪವೆಲ್ಲವೂ ನಾಶವಾಗುವುದು ॥೧೩॥

ತ್ವಮಪಿ ಶ್ರದ್ಧಯಾ ಬ್ರಹ್ಮನ್ ಶಿವನಿಂದಾಘಶಾಂತಯೇ ।
ಮುಕ್ತಯೇ ಚಾಪಿ ಮಾಮೀಶಮಾರಾಧಯ ಮಹೇಶ್ವರಂ ॥೧೪॥

ವಿರಿಂಚಿಕಾಖ್ಯೇ ಸ್ವಪುರೇ ಲಿಂಗಾರಾಧನಕೃತ್ಸದಾ ।
ಭಸ್ಮರುದ್ರಾಕ್ಷಸಂಪನ್ನೋ ನಿರ್ದೈನಾಸ್ತ್ವಂ ಭವಿಷ್ಯಸಿ ॥೧೫॥

ಮದ್ದ್ರೋಹನಿಂದಾ ಪಾಪಾನಾಂ ಅಹಮೇವಾಶು ಮೋಚಕಃ ।
ಅನಿಷ್ಕೃತಿಪರಂ ಹ್ಯೇತದದ್ಯ ಮೋಘಂ ಭವಿಷ್ಯತಿ ॥೧೬॥

ನೈತತ್ಪಾಪವಿನಾಶಾಯ ನ ಯಮೋ ನಹರಿಃ ಸುರಾಃ ।
ಭಕ್ತ್ಯಾ ಮಾಮೀಶಮಾರಾಧ್ಯ ಮುಕ್ತಪಾಪೋ ಭವಿಷ್ಯತಿ ॥೧೭॥

ನೋ ಚೇತ್ಪ್ರವರ್ಧತೇ ನಿತ್ಯಂ ದುಃಖಾನಂತಫಲಪ್ರದಂ ।
ಮದ್ದ್ರೋಹಪಾತಕಂ ಘೋರಂ ಯಥಾ ಕಾಶ್ಯಾಂ ಕೃತಂ ತ್ವಘಂ॥೧೮॥

ತಸ್ಮಾನ್ಮಾಮೇವ ಶರಣಮುಪಯಾಹಿ ವಿಧೇಽಧುನಾ ॥೧೯॥

ಎಲೈ ಬ್ರಹ್ಮನೇ, ನೀನೂ ಸಹ ನನ್ನ ನಿಂದಿಸಿದ ಪಾಪದ ಶಾಂತಿಗಾಗಿಯೂ ಮುಕ್ತಿಗಾಗಿಯೂ ಪರಮೇಶ್ವರನಾದ ನನ್ನನ್ನು ಆರಾಧಿಸು. ॥೧೪॥

ನಿನ್ನ ಲೋಕದಲ್ಲಿಯೇ ನೀನು ಭಸ್ಮರುದ್ರಾಕ್ಷಿಧಾರಿಯಾಗಿ ಶಿವಲಿಂಗವನ್ನು ಅರ್ಚಿಸು. ಅದರಿಂದ ನಿನ್ನ ಪಾಪವೆಲ್ಲವೂ ನಾಶವಾಗುವುದು. ॥೧೫॥

ನನ್ನನ್ನು ನಿಂದಿಸಿದವರ ಪಾಪಗಳನ್ನು ಹೋಗಲಾಡಿಸುವವನು ನಾನೇ. ಆ ಪಾಪಕ್ಕೆ ಪ್ರಾಯಶ್ಚಿತ್ತವಿಲ್ಲದಿದ್ದರೂ ನನ್ನ ಅನುಗ್ರಹವೊಂದರಿಂದಲೇ ನಾಶವಾಗುವುದು. ॥೧೬॥

ಆ ಪಾಪವನ್ನು ಯಮನಾಗಲೀ ಹರಿಯಾಗಲೀ ಮಿಕ್ಕ ದೇವತೆಗಳಾಗಲೀ ಹೋಗಲಾಡಿಸಲಾರರು. ಭಕ್ತಿಯಿಂದ ನನ್ನನ್ನರ್ಚಿಸಿದರೇ ಅದು ನಾಶವಾಗುವುದು.

ಇಲ್ಲದಿದ್ದರೆ ಆ ಪಾಪವು ದಿನದಿನವೂ ಬೆಳೆದು ಅನಂತದುಃಖವನ್ನುಂಟು ಮಾಡುವುದು. ಕಾಶಿಯಲ್ಲೀಮಾಡಿದ ಪಾಪದಂತೆ ನನ್ನನ್ನು ನಿಂದಿಸಿದ ಪಾಪವು ಘೋರವಾದುದು. ಆದುದರಿಂದ ಎಲೈ ವಿಧಿ, ನಿನ್ನ ಪಾಪನಾಶಕ್ಕಾಗಿ ನನ್ನನ್ನೇ ಶರಣು ಹೊಂದು. ॥೧೮-೧೯॥

॥ ಸೂತ ಉವಾಚ ॥

ಸ ಧಾತಾ ಶಿವವಾಕ್ಯೇನ ತ್ಯಕ್ತಮೋಹೋ ಮಹೇಶ್ವರಂ ।
ನತ್ವಾ ಗತೇ ದೇವದೇವೇ ಸ್ವಯಂ ಚಕ್ರೇ ತಪೋಽಯುತಂ ॥೨೦॥

ವರ್ಷಾಣಾಂ ನಿಯತಾತ್ಮಾ ಸನ್ ಭಸ್ಮರುದ್ರಾಕ್ಷಧಾರಣಃ ।
ಭಾರತ್ಯಾ ಚ ಯುತೋ ವೇಧಾಃ ರುದ್ರಮಾವರ್ತಯಂಸ್ತದಾ ॥೨೧॥

ಪಂಚಾಕ್ಷರಜಪಾಸಕ್ತಃ ಪಂಚಾಸ್ಯಧ್ಯಾನತತ್ಪರಃ ।
ವಿರಿಂಚಿಪುರಮಾಸಾದ್ಯ ಲಿಂಗಂ ಪೂಜಯದಂಜಸಾ ॥೨೨॥

ಪಂಚಾಮೃತಾಸೇಚನೈಶ್ಚ ಗಂಧಪುಷ್ಪಾನುಲೇಪನೈಃ ।
ಧೂಪೈರ್ದೀಪೈಶ್ಚ ನೈವೇದ್ಯೈರ್ವಾದ್ಯನೀರಾಜನೋತ್ಸವೈಃ ॥೨೩॥

ತ್ರಿಕಾಲಂ ನಿಯಮಾದ್ವೇಧಾ ದ್ವಾದಶಾಬ್ದಂ ತದಾ ಮುದಾ ।
ಫಲಮೂಲಾಶನಸ್ತತ್ರ ದ್ವಾದಶಾಬ್ದಂ ತದಾ ಮುದಾ ॥೨೪॥

ವಾಯ್ವಾಹಾರೋ ಜಲಾಹಾರಃ ಫಲಪರ್ಣಾಶನೋ ವಿಧಿಃ ।
ಸ್ತುವನ್ ಸಾಂಬಂ ಹೃದಂಭೋಜೇ ಶಿವಲಿಂಗಂ ವಿಲೋಕಯನ್ ॥೨೫॥

ಶಿವನ ಮಾತಿನಿಂದ ವಿಧಿಗೆ ಜ್ಞಾನೋದಯವಾಗಿ ಬ್ರಹ್ಮನು ಅವರಿಗೆ ನಮಸ್ಕರಿಸಿ ತನ್ನ ಲೋಕಕ್ಕೆ ತೆರಳಿ ಭಸ್ಮರುದ್ರಾಕ್ಷಿಧಾರಿಯಾಗಿ ಹತ್ತುಸಾವಿರ ವರ್ಷಗಳ ವರೆಗೆ ಘೋರತಪಸ್ಸನ್ನಾಚರಿಸಿದನು. ||೨೦||

ರುದ್ರಸೂಕ್ತವನ್ನು ಪಠಿಸುತ್ತಾ ಪಂಚಾಕ್ಷರಮಂತ್ರವನ್ನು ಜಪಿಸುತ್ತಾ ಶಿವನನ್ನು ಧ್ಯಾನಿಸುತ್ತಾ ಆ ಬ್ರಹ್ಮನು ತನ್ನ ಲೋಕದಲ್ಲಿ ಸರಸ್ವತಿಯೊಡನೆ ಶಿವನನ್ನಾರಾಧಿಸಿದನು. ||೨೧-೨೨||

ಪಂಚಾಮೃತಾಭಿಷೇಕ, ಗಂಧಪುಷ್ಪಧೂಪದೀಪನೈವೇದ್ಯನೀರಾಜನಾದಿಗಳಿಂದ ನಿತ್ಯವೂ ತ್ರಿಕಾಲಗಳಲ್ಲಿ ಶಿವಲಿಂಗವನ್ನು ಆ ಬ್ರಹ್ಮನು ಅರ್ಚಿಸಿದನು. ಹನ್ನೆರಡು ವರ್ಷಗಳ ವರೆಗೆ ಗೆಡ್ಡೆಗೆಣಸು ಹಣ್ಣುಗಳನ್ನು ಮಾತ್ರ ಸೇವಿಸಿದನು. ||೨೩-೨೪||

ಪುನಃ ಹನ್ನೆರಡು ವರ್ಷಗಳಲ್ಲಿ ಗಾಳಿಯನ್ನೂ, ನೀರನ್ನೂ, ಎಲೆಗಳನ್ನೂ

ನಿನಾಯ ಕಾಲಂ ನಿಸಯಾತ್ ಕಾಲಕಾಲಾರ್ಚನಾದ್ವಿಧಿಃ ॥೨೬॥

ಭವಂ ಹರಂ ಮೃಡಂ ಶಿವಂ ಮಹೇಶಮೀಶಶಂಕರಂ
ಪುರಾಶನಂ ಸ್ಮರಾಶನಂ ಭಜೇ ಸದಾಘಮೋಚಕಂ ।
ಗರಾಶನಂ ಶರಾಸನೇ ಗಿರೀಂದ್ರಮೌಳಿಧಾರಿಣಂ
ಉಮಾಧವಂ ರಮಾಧವಾಬ್ಜನೇತ್ರಪೂಜ್ಯಪಾದುಕಂ ॥೨೭॥

॥ ಬ್ರಹ್ಮೋವಾಚ ॥

ಅಜಾದ್ಯಮುಂಡಷಂಡಭೃಜ್ಮಹಾಂಡಕೋಟಿಮಂಡಲ
ಪ್ರಚಂಡತಾಂಡವೋಲ್ಲಸತ್ಸ್ವಗಂಡಕುಂಡಲೀಶ್ವರಂ ।
ಶಿಖಂಡಖಂಡಸೋಮಧೃಕ್ಸ್ವಪುಂಡರೀಕಸಂಭವ
ಪ್ರಕಾಶಚರ್ಮವಾಸಿಸಂ ಭಜಾಮ್ಯಖಂಡಮೀಶ್ವರಂ ॥೨೮॥

॥ ಸೂತ ಉವಾಚ ॥

ತತ್ಸ್ತುತ್ಯಾ ತುಷ್ಟಹೃದಯೋ ವೃಷಾರೂಢೋಽಭ್ಯಗಾಚ್ಛಿವಃ ।
ರಾಜದ್ಭುಜಂಗವಲಯೋ ಜಟಾಹೀಂದುವಿಭೂಷಿತಃ ॥೨೯॥

ಸೇವಿಸುತ್ತಾ ಶಿವಲಿಂಗವನ್ನು ನೋಡುತ್ತಾ ಭಕ್ತಿಯಿಂದ ಹೃದಯದಲ್ಲಿ ಶಂಕರನನ್ನು ಧ್ಯಾನಿಸುತ್ತಾ ಹೀಗೆ ಸ್ತುತಿಸಿದನು. ॥೨೫-೨೬॥

"ಪಾಪನಾಶಕನೂ, ಜಗನ್ಮಯನೂ, ಮಂಗಳಸ್ವರೂಪನೂ, ಪರಮೇಶ್ವರನೂ, ಸುಖಕರನೂ, ಪಾರ್ವತೀಪತಿಯೂ ಆದ ಶಂಕರನೇ, ನೀನು ಹರಿಯ ನೇತ್ರಕಮಲದಿಂದ ಅರ್ಚಿಸಲ್ಪಡುವವನು. ವಿಷವನ್ನು ಭಕ್ಷಿಸಿದವನು ಮನ್ಮಥ ತ್ರಿಪುರಾಸುರರನ್ನು ಸಂಹರಿಸಿದವನು. ಮೇರುವನ್ನು ಧನುಸ್ಸಾಗಿ ಹಿಡಿದವನು. ಪಾಪನಾಶಕನು. ಇಂತಹ ನಿನ್ನನ್ನು ಭಜಿಸುವೆನು. ॥೨೭॥

ಬ್ರಹ್ಮಕಪಾಲವನ್ನು ಹಿಡಿದವನೂ, ವ್ಯಾಘ್ರಚರ್ಮವನ್ನು ಧರಿಸಿದವನೂ ಚಂದ್ರಾರ್ಧಶೇಖರನೂ "ತಾಂಡವ"ವೆಂಬ ಭಯಂಕರವಾದ ಪ್ರಳಯನರ್ತನವನ್ನು ಮಾಡುವವನೂ, ನಾಗಭೂಷಣನೂ ಆದ ಪರಮೇಶ್ವರನೇ, ನಿನ್ನನ್ನು ನಂಬಿರುವೆನು." ॥೨೮॥

ಬ್ರಹ್ಮನ ಈ ಸ್ತುತಿಯಿಂದ ಪ್ರಸನ್ನನಾಗಿ ಶಿವನು ವೃಷಭವನ್ನೇರಿ ಅವನ ಬಳಿಗೆ ಬಂದನು. ॥೨೯॥

ದೇವ್ಯಾಲಿಂಗಿತವಾಮಾಂಗೋ ಗಣಬೃಂದನಿಷೇವಿತಃ ।
ತಮಾಹ ದೇವಃ ಪ್ರಹಸನ್ ಗಿರಿಜಾಂ ವೀಕ್ಷ್ಯ ವೈ ವಿಧಿಂ ॥೩೦॥

ದೇವಾನಾಂ ಗಣವೃಂದಾನಾಂ ಪಶ್ಯತಾಂ ಮುನಿಸತ್ತಮ ॥೩೧॥

॥ ಈಶ್ವರ ಉವಾಚ ॥

ನಿರೈನಾಸ್ತ್ವಂ ಮುಕ್ತಪಾಪೋ ಮದರ್ಚಾತೋ ವಿಧೇಽಧುನಾ ।
ಗಚ್ಛ ತ್ವಂ ಸೃಜ ಭೂತಾನಿ ಸತ್ಯಲೋಕೇ ವಸನ್ಮುದಾ ॥೩೨॥

ಮದ್ರೋಹಘೋರಪಾಪಾನಾಂ ನಿಷ್ಕೃತಿರ್ಮಮ ಪೂಜನಂ ।
ಸವಾಣ್ಯಾ ವಿಧೀರೀಶಾನಂ ಶರ್ವಾಣೀಪತಿಮೀಶ್ವರಂ ॥೩೩॥

ನತ್ವಾ ಯಯೌ ಗತೇ ಶಂಭೌ ಸತ್ಯಲೋಕಾಧಿಪಸ್ಸುಖಂ ।
ಸಸದಸ್ಯೈಃ ಪೂಜಿತಶ್ಚ ಪುತ್ರೈರ್ದೈರ್ವೈಶ್ಚ ಸೋ ವಿಧಿಃ ॥೩೪॥

ವಿತೇನೇ ವಿವಿಧಾಂ ಸೃಷ್ಟಿಮೀಶಾನಾಜ್ಞಾಪ್ರಚೋದಿತಃ ॥೩೫॥

ಪಾರ್ವತಿಯೊಡನೆಯೂ ಗಣಗಳೊಡನೆಯೂ ಬ್ರಹ್ಮನ ಬಳಿಗೆ ಹೋಗಿ ಶಿವನು ಗಿರಿಜೆಯನ್ನು ನೋಡುತ್ತಾ ಮಂದಹಾಸವನ್ನು ಬೀರಿ, ದೇವತೆಗಳೂ ಗಣಗಳೂ ನೋಡುತ್ತಿರುವಂತೆ ಬ್ರಹ್ಮನೊಡನೆ ಹೀಗೆಂದನು. ॥೩೦-೩೧॥

"ಬ್ರಹ್ಮನೇ, ನೀನೀಗ ಪಾಪವನ್ನು ಕಳೆದುಕೊಂಡವನಾಗಿ ಪರಿಶುದ್ಧನಾದೆ, ಹೋಗು. ಇನ್ನು ನಿನ್ನ ಲೋಕದಲ್ಲಿ ವಾಸಿಸುತ್ತಾ ಪ್ರಾಣಿಗಳನ್ನು ಸೃಜಿಸು. ನನಗೆ ದ್ರೋಹವನ್ನು ಮಾಡಿದರೆ, ಆ ಪಾಪಕ್ಕೆ ನನ್ನ ಪೂಜೆಯೇ ಪ್ರಾಯಶ್ಚಿತ್ತವು." ॥೩೨॥

ಶಿವನ ಈ ಅನುಗ್ರಹದಿಂದ ಸಂತೋಷಗೊಂಡು ಬ್ರಹ್ಮನು ಅವನಿಗೆ ನಮಸ್ಕರಿಸಿದನು. ಆಮೇಲೆ ಶಿವನು ಅಲ್ಲಿಯೇ ಅಂತರ್ಧಾನನಾದನು, ಬ್ರಹ್ಮನೂ ಸರಸ್ವತಿಯೊಡನೆ ತನ್ನ ಲೋಕಕ್ಕೆ ತೆರಳಿದನು. ॥೩೩॥

ಅಲ್ಲಿ ತನ್ನ ಸಭ್ಯರು, ಪುತ್ರರು, ಮತ್ತು ದೇವತೆಗಳಿಂದ ಓಲೈಸಿಕೊಳ್ಳುತ್ತಾ ವಿಧಿಯು ಶಿವನಪ್ಪಣೆಯಂತೆ ಸಕಲ ಸೃಷ್ಟಿಯನ್ನು ಮಾಡತೊಡಗಿದನು. ॥೩೪-೩೫॥

॥ ಸ್ಕಂದ ಉವಾಚ ॥

ಇತ್ಥಂ ವೇಧಾಽಪಿ ಮೋಹಾಚ್ಛಿವಮಜರಮಹಾನಿಂದನಾನ್ಮುಕ್ತಪಾಪೋ
ಭಕ್ತ್ಯಾಽಽರಾಧ್ಯೈವ ಶಂಭುಂ ಹರಿಹರವಿಧಿಭಿಃ ಪೂಜಿತಂ ಲಿಂಗಮೈಶಂ ।
ಭಕ್ತ್ಯಾ ಶಂಕರಪಾದಪದ್ಮಮನಘಂ ಸಂಪೂಜ್ಯ ಭಕ್ತ್ಯಾ ವೃತಃ
ತಲ್ಲಿಂಗೇಕ್ಷಣತೋಽಪಿ ಪಾತಕವರ್ಗೈರ್ಯುಕ್ತೋ ವಿಮುಕ್ತೋ ಭವೇತ್॥೩೬॥

ಪಂಚಾದಿಪಾತಕವರ್ಗೈಃ ಪರವಂಚನಾದಿ ಕುರ್ವನ್
ಗೃಹಾದಿಷು ಪವಿಭುರ್ಜಮುಂಚಿತಾಶಃ ।
ಭಕ್ತ್ಯಾ ಕುಲುಂಚಪತಿವಂಚನಕೃನ್ಮಹೇಶಂ
ಖ್ಯಾತೋ ವಿರಿಂಚಿರಪಿ ಕಿಂಚನ ನಾಪ ಪಾಪಂ ॥೩೭॥

ಕಿಂ ವರ್ಣಾಶ್ರಮತತ್ಪರಶ್ರಮಭರೈರ್ವಿಶ್ರಾಮಭೂಮಿಃ ಪರಾ
ಕಾಶೀ ನಾಶಿತಪಾಪಸಂಘಸುಕೃತಾಂ ಕಾಶ್ಯೈಕನಿಶ್ರೇಣಿಕಾ ।
ಸಾ ವೇಣೀ ಮಣಿಕರ್ಣಿಕಾ ಸುಕೃತಿನಾಂ ಈಶಾರ್ಚನಾಲ್ಲಭ್ಯತೇ
ಲಬ್ಧ್ವಾ ಪ್ಯಂತಿಮಲೋಲಕಾಲಕರಣೇ ಮೋಕ್ಷೈಕವಿಶ್ರಾಣಿಕಾ ॥೩೮॥

ಹೀಗೆ ಬ್ರಹ್ಮನು ಅಜ್ಞಾನದಿಂದ ಶಿವನನ್ನು ನಿಂದಿಸಿ ಪಾಪಕ್ಕೆ ಗುರಿಯಾದನು. ಆಮೇಲೆ ಶಿವನನ್ನರ್ಚಿಸಿ ಪರಿಶುದ್ಧನಾದನು. ಇದರಂತೆ ಪವಿತ್ರವಾದ ಶಿವಲಿಂಗವನ್ನು ಪೂಜಿಸಿದರೂ ದರ್ಶನಮಾಡಿದರೂ ಮಾನವನು ಸಕಲ ಪಾಪಗಳಿಂದಲೂ ಬಿಡಲ್ಪಡುವನು ಎಂದು ಕುಮಾರಸ್ವಾಮಿಯು ಶಿವಕಥೆಯನ್ನು ಮುಂದುವರಿಸಿದನು. ||೩೬||

ಬ್ರಹ್ಮಹತ್ಯೆಯೇ ಮೊದಲಾದ ಐದು ಮಹಾಪಾಪಗಳನ್ನು ಮಾಡಿದವನಾದರೂ ಮಾನವನು ಪರಶಿವನನ್ನು ಭಕ್ತಿಯಿಂದ ಅರ್ಚಿಸಿದರೆ, ಆ ಪಾಪವೆಲ್ಲವೂ ನಾಶವಾಗುವುದು. ಬ್ರಹ್ಮನೂ ಸಹ ಶಿವನನ್ನಾರಾಧಿಸಿ ಪಾಪವನ್ನು ಕಳೆದುಕೊಂಡನು. ಬ್ರಹ್ಮನೇ ಶಿವಾನುಗ್ರಹದಿಂದ ಶುದ್ಧನಾದಮೇಲೆ ಮತ್ತೆ ಹೇಳುವುದೇನು ? ||೩೭||

ಆಡಂಬರದ ವರ್ಣಾಶ್ರಮಗಳಿಂದ ಏನೂ ಪ್ರಯೋಜನವಿಲ್ಲ. ಕಾಶಿಯೊಂದೇ ಸಕಲ ಪಾಪಗಳನ್ನೂ ಹೋಗಲಾಡಿಸುವುದು; ಅಲ್ಲಿನ ಮಣಿಕರ್ಣಿಕೆಯು ಮುಕ್ತಿಗೆ ದಾರಿ (ಏಣಿ) ಯಾಗಿದೆ. ಆ ಕಾಶಿಯ ಮಣಿಕರ್ಣಿಕೆಯಲ್ಲಿ ಸ್ನಾನಮಾಡಿ ಶಿವನನ್ನು

ಇತಿ ಶ್ರೀಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ
ಬ್ರಹ್ಮಸ್ತುತಿಶಿವಪ್ರಸಾದವರ್ಣನಂ ನಾಮಾಷ್ಟಾವಿಂಶತಿತಮೋಽಧ್ಯಾಯಃ

ಭಕ್ತಿಯಿಂದ ಆರಾಧಿಸಿದವನಿಗೆ ತಪ್ಪದೇ ಮುಕ್ತಿಯು ಲಭಿಸುವುದು, ಇದರಲ್ಲಿ ಸಂಶಯವಿಲ್ಲವೆಂದು ಸ್ಕಂದಸ್ವಾಮಿಯು ನುಡಿದನು. ||೩೮||

ಇಲ್ಲಿಗೆ ಶ್ರೀ ಶಿವರಹಸ್ಯದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಏಕೋನತ್ರಿಂಶೋಽಧ್ಯಾಯಃ

॥ ಸ್ಕಂದ ಉವಾಚ ॥

ಇಂದ್ರೋಽಪಿ ವೃತ್ರವಧ್ಯಾತೋ ಬ್ರಹ್ಮಹತ್ಯಾಮವಾಪ್ತವಾನ್ ।
ವೃತ್ರೇ ವಿಶ್ವಸ್ತಘಾತೇನ ದೇವಾನಾಂ ಕಾರ್ಯಹೇತವೇ ॥೧॥

ಇಂದ್ರಸ್ಯ ಬ್ರಹ್ಮವಧ್ಯಾಂ ತಾಂ ತೇ ದೇವಾ ಗುರುಣಾ ಸಹ ।
ಭೂಮೌ ವನಸ್ಪತೌ ಸ್ತ್ರೀಷು ತಾಂ ತ್ರೇಧಾ ವ್ಯಭಜಂಸ್ತದಾ ॥೨॥

ವರೇಣ ಛಂದಯಂಸ್ತೇ ಚ ದೇವಾನ್ ಸಗುರುಮಿಂದ್ರಕಂ ।
ಯದಿ ದೇಯೋ ವರೋಽಸ್ಮಾಕಂ ತವ ವಧ್ಯಾಂ ಸುರೋತ್ತಮ ॥೩॥

ಇಪ್ಪತ್ತೊಂಭತ್ತನೆಯ ಅಧ್ಯಾಯ

ಜೈಗೀಷವ್ಯನೇ, ಹಿಂದೆ ವಿಶ್ವಾಸಘಾತಕನಾದ ವೃತ್ರನೆಂಬ ಬ್ರಾಹ್ಮಣನನ್ನು ದೇವತೆಗಳ ಹಿತಕ್ಕಾಗಿ ದೇವೇಂದ್ರನು ಸಂಹರಿಸಿ, ಬ್ರಹ್ಮಹತ್ಯೆಯನ್ನು ಪಡೆದು ಶಿವಾನುಗ್ರಹದಿಂದ ಬದುಕಿದ ಕಥೆಯನ್ನು ಈಗ ವಿವರಿಸುವೆನು ಕೇಳು. ಎಂದು ಸ್ಕಂದನು ಕಥೆಯನ್ನು ಮುಂದುವರಿಸಿದನು. ॥೧॥

ದೇವತೆಗಳು ಬೃಹಸ್ಪತಿಯೊಡನೆ ಯೋಚಿಸಿ ಇಂದ್ರನ ಬ್ರಹ್ಮಹತ್ಯೆಯನ್ನು ಮೂರು ಭಾಗವಾಗಿ ಮಾಡಿ ಭೂಮಿಯಲ್ಲೂ ಮರಗಳಲ್ಲೂ ಸ್ತ್ರೀಯರಲ್ಲೂ ಹಂಚಿದರು. ॥೨॥

ಬ್ರಹ್ಮಹತ್ಯೆಯನ್ನು ಸ್ವೀಕರಿಸುವಾಗ ಆ ಮೂವರೂ, ದೇವತೆಗಳನ್ನು ಕುರಿತು ನಮಗೀ ಬ್ರಹ್ಮಹತ್ಯೆಯನ್ನು ಧರಿಸುವ ಶಕ್ತಿಯಿಲ್ಲ. ನಮಗೆ ವರಗಳನ್ನು

ಗೃಹ್ಣೀಮೋ ನ ವಯಂ ಶಕ್ತಾಃ ಕಾಮಂ ನೋಽಸ್ಯ ಪ್ರಪೂರಯ ।
ತಾನೂಚುಃ ಪ್ರಸಭಂ ದೇವಾಃ ವೃಣುತೇತಿ ಪೃಥಕ್ ಪೃಥಕ್ ॥೪॥

ಖಾತಪ್ರಸರಣಂ ಭೂಮಿಃ ಪುರಾ ಸಂಪತ್ಸರಾಂತರೇ ।
ವೃಕ್ಷಾಣಾಂ ಪುನರುತ್ಥಾನಂ ವೃಕ್ಷಾಣಾಂ ಮುನಿಸತ್ತಮ ॥೫॥

ಸ್ತ್ರೀಣಾಂ ಪ್ರಸೂತಿಯಾರ್ವದ್ವೈ ತಾವತ್ಕಾಮೋಪಯೋಜನಂ ।
ಸಂಪ್ರಾಪ್ಯೈತದ್ವರಂ ಶಕ್ರಾದ್ವಧ್ಯಾಭಾಗಚತುಷ್ಟಯಂ ॥೬॥

ಜಗೃಹುಸ್ತೇ ತ್ರಯೋಽಪೀಂದ್ರಮೇಕಾಂಶೇನ ವ್ಯವಸ್ಥಿತಾ ।
ತೇಷಾಂ ತಲ್ಲಾಂಛನಾನ್ಯಾಹುರ್ನಿರ್ಯಾಸೋ ಮಲವಾಸಸಾ ॥೭॥

ಊಷರಸ್ತು ತದಾ ಭೂಮೇರ್ವೃಕ್ಷಾಣಾಂ ಸ್ತ್ರೀಗಣಸ್ಯ ಚ ।
ಪಾವಿತೋ ಹಯಮೇಧೇನ ಗುರುಣಾ ಸುರಸತ್ತಮೈಃ ॥೮॥

ಕೊಟ್ಟರೆ ಮಾತ್ರ ಧರಿಸಬಲ್ಲೆವು ಎಂದರು. ಆಗ ದೇವತೆಗಳು ಬೇಕಾದ ವರಗಳನ್ನು ಕೇಳಿರಿ ಎಂದರು. ॥೩-೪॥

ಆಗ ಭೂಮಿವೃಕ್ಷ ಸ್ತ್ರೀಯರು, ಹಳ್ಳಬಿದ್ದ ಭೂಮಿಯು ಕೆಲವು ವರ್ಷಗಳಾದ ಮೇಲಾದರೂ ತುಂಬಿ ಸರಿಯಾಗಬೇಕು. ಮರವನ್ನು ಕಡಿದ ಮೇಲೆ ಪುನಃ ಅದು ಚಿಗುರಬೇಕು, ಮಕ್ಕಳಾಗುತ್ತಿರುವ ವರೆಗೂ ಸ್ತ್ರೀಯರು ಕಾಮಸುಖವನ್ನನುಭವಿಸುವಂತಾಗಬೇಕು ಎಂದು ವರಗಳನ್ನು ಕೇಳಿಕೊಂಡರು. ॥೫॥

ಇಂದ್ರನು ಅದೇರೀತಿ ಅವರುಗಳನ್ನನುಗ್ರಹಿಸಲು, ಬ್ರಹ್ಮಹತ್ಯೆಯ ನಾಲ್ಕು ಭಾಗಗಳಲ್ಲಿ ಮೂರು ಭಾಗಗಳನ್ನು ಆ ಮೂವರೂ ಸ್ವೀಕರಿಸಿದರು. ಉಳಿದೊಂದು ಭಾಗವು ಇಂದ್ರನಲ್ಲೇ ಉಳಿಯಿತು. ॥೬॥

ಬ್ರಹ್ಮಹತ್ಯೆಯ ಗುರುತಾಗಿ ಭೂಮಿಯಲ್ಲಿ ಬಂಜರುಪ್ರದೇಶವೂ, ಮರಗಳಲ್ಲಿ ಅಂಟೂ, ಸ್ತ್ರೀಯರಲ್ಲಿ ರಜೋದೋಷ (ಮುಟ್ಟಾಗುವುದು) ವೂ ಉಂಟಾದುವು.॥೭॥

ಆಮೇಲೆ ದೇವತೆಗಳೂ ಬೃಹಸ್ಪತಿಯೂ ಪರಿಶುದ್ಧತೆಗಾಗಿ ಇಂದ್ರನಿಂದ ಅಶ್ವಮೇಧಯಾಗವನ್ನು ಮಾಡಿಸಿದರು. ಆದರೂ ಬಿಡದೇ ಆ ಬ್ರಹ್ಮಹತ್ಯೆಯು ಅವನನ್ನೇ ಬೆನ್ನಟ್ಟಿತು. ॥೮॥

ತ್ವಷ್ಟುಃ ಪುತ್ರಸಭೋತ್ಪನ್ನಾ ಸಾನುವವ್ರಾಜ ತಂ ಹರಿಂ ।
ತಪಸ್ವಿನಂ ತ್ರಿಶಿರಸಂ ಶಕ್ರಃ ಶತ್ರುಂ ಸುರೈಸ್ಸಹ ॥೯॥

ಬ್ರಹ್ಮದತ್ತವರೋ ಧಾವನ್ ವಜ್ರೇಣಾಥ ತದಚ್ಛಿನತ್ ।
ತದ್ವಕ್ತ್ರಾಪಿ ಪತನ್ಭೂರ್ನ್ಯಾಂ ರೋದಸೀ ಕಂಪಯನ್ನಿವ ॥೧೦॥

ಪ್ರಥಮಂ ಸೋಮಪಾನಾಖ್ಯಂ ದ್ವಿತೀಯಂ ತು ಸುರಾದನಂ ।
ಅನ್ನಾದನಂ ತೃತೀಯಂ ತು ತೇಭ್ಯೋ ವೈ ಪಕ್ಷಿಣೋಽಭವನ್ ॥೧೧॥

ತಿತ್ತಿರಿಃ ಕಟವಿಂಕಶ್ಚ ಕ್ರಮೇಣ ಚ ಕಪಿಂಜಲಃ ।
ಸಾ ವಧ್ಯಾ ಶತಮನ್ಯುಂ ಚ ಅನ್ವಗಾತ್ಕೃತಮನ್ಯುನಾ ॥೧೨॥

ದಂಡಹಸ್ತಾ ಕರಾಳಾಕ್ಷೀ ಊರ್ಧ್ವಕೇಶೀ ಭಯಂಕರೀ ।
ಕೃಷ್ಣಾಂಗೀ ಕೃಷ್ಣವಸನಾ ಮಲಪಂಕಧರಾ ತದಾ ॥೧೩॥

ತಾಂ ದೃಷ್ಟ್ವಾ ಭಯದಗ್ಧಾಂಗೋ ಹೃತರಾಜ್ಯೋಽಥ ದೈತ್ಯಪೈಃ ।
ಬಲಜಂಭಾದಿಭಿರ್ದೈತ್ಯೈರ್ನಮುಚೀಬಲಿಭಿಸ್ತಥಾ ॥೧೪॥

ಆ ವೃತ್ರನು ಮೂರು ತಲೆಗಳುಳ್ಳವನಾಗಿದ್ದನು. ಇಂದ್ರನು ದಧೀಚಿಯು ಕೊಟ್ಟ ವಜ್ರಾಯುಧದಿಂದ ಆ ಮೂರು ತಲೆಗಳನ್ನೂ ಕತ್ತರಿಸಿದ್ದನು. ॥೯॥

ಆ ತಲೆಗಳು ಭೂಮಿಯನ್ನು ನಡುಗಿಸುತ್ತಾ ನೆಲಕ್ಕೆ ಬಿದ್ದುವು. ಆ ತಲೆಗಳಿಗೆ ಸೋಮಪಾನ, ಸುರಾದನ, ಅನ್ನಾದನಗಳೆಂದು ಹೆಸರು. ಅವುಗಳಿಂದ ಮೂರು ಹಕ್ಕಿಗಳು ಜನಿಸಿದುವು. (ಸೋಮರಸವನ್ನು ಕುಡಿಯುವುದು, ಸುರೆಯನ್ನು ಕುಡಿಯುವುದು, ಅನ್ನವನ್ನು ತಿನ್ನುವುದು) ॥೧೦-೧೧॥

ತಿತ್ತಿರಿ, ಗುಬ್ಬಿ, ಕಪಿಂಜಲ ಇವೇ ಆ ಮೂರು ಹಕ್ಕಿಗಳು. ಉಳಿದ ನಾಲ್ಕನೆಯ ಭಾಗವಾದ ಬ್ರಹ್ಮಹತ್ಯೆಯು ದಂಡಧಾರಿಯಾಗಿ ನೀಳವಾದ ಮತ್ತು ಮೇಲ್ಮುಖವಾದ ತಲೆಗೂದಲುಳ್ಳ, ಕಪ್ಪುಬಣ್ಣದ, ಕಪ್ಪುಬಟ್ಟೆಯ ಕೊಳಕಾದ ಮತ್ತು ಭಯಂಕರವಾದ ಸ್ತ್ರೀರೂಪದಿಂದ ಇಂದ್ರನನ್ನು ಬೆನ್ನಟ್ಟಿತು. ॥೧೨-೧೩॥

ಹೀಗೆ ಬ್ರಹ್ಮಹತ್ಯೆಯು ಇಂದ್ರನಿಗೆ ತಗಲಿದುದನ್ನು ತಿಳಿದು, ಬಲಾಸುರ, ಜಂಭಾಸುರ, ನಮುಚಿ, ಬಲಿ ಮೊದಲಾದ ದಾನವರು ಬಂದು ಅವನ ರಾಜ್ಯವನ್ನು ಅಪಹರಿಸಿಕೊಂಡರು. ॥೧೪॥

ಶೋಚ್ಯೇ ಮನೂನಾಮಧಿಪೇ ದೇವೈರಿಂದ್ರೇನುಧಾವತಿ ।
ವಿಶ್ವಸ್ತತಾಪಸವಧಾದುದ್ಭೂತಬ್ರಹ್ಮಹತ್ಯಯಾ ॥೧೫॥

ಶಚ್ಯಾ ಸುರೈಶ್ಚ ಗುರುಣಾ ಮಾನಸಾಂತರ್ಜಲೇ ಸ್ಥಿತೇ ।
ಪದ್ಮಕೋಶೇ ನಿಲಿಲ್ಯೇ ಸ ಯುಗಮೇಕಮತಂದ್ರಿತಃ ॥೧೬॥

ಪುನಸ್ತದ್ರಾಜ್ಯಮಖಿಲಂ ನಹುಷಃ ಪ್ರಶಶಾಸ ಹ ।
ಸ ಪ್ರಾರ್ಥಯನ್ ಶಚೀಂ ಕಾಮಾದಗಸ್ತ್ಯೇನೋಢ್ಧತೋ ನೃಪಃ॥೧೭॥

ನಿಯೋಜಿತಸ್ಸ ಚೋದ್ವಾಹೇ ಶಾಂಭವೋ ಮುನಿಸತ್ತಮಃ ।
ಶಶಾಪ ತಂ ನೃಪಂ ಪಾಪಂ ಪದಸಂಗೇನ ಚುಕ್ರುಧೇ ॥೧೮॥

ವಿಶ್ವಾಸವುಳ್ಳ ಬ್ರಾಹ್ಮಣಕುಮಾರನಾದ ವೃತ್ರನನ್ನು ಸಂಹರಿಸಿ ಉಂಟಾದಂತಹ ಬ್ರಹ್ಮಹತ್ಯೆಯಿಂದ ಇಂದ್ರನಿಗೆ ಇಂತಹ ದುರವಸ್ಥೆಯುಂಟಾಯಿತು. ಆಗ ಅವನು ಭಯದಿಂದ ಗುರುಶಚಿಯರೊಡನೆ ಓಡಿಹೋಗಿ ಮಾನಸಸರೋವರದ ಒಳನೀರಿನಲ್ಲಿದ್ದ ಕಮಲದ ಕೋಶವೊಂದರಲ್ಲಿ ಅಡಗಿ ಒಂದು ದೇವಯುಗದ ವರೆಗೆ ಕುಳಿತನು. ||೧೫-೧೬||

ಆಗ ನಹುಷನು ಸ್ವರ್ಗರಾಜ್ಯವನ್ನಾಳತೊಡಗಿದನು. ಆದರೆ ಆ ರಾಜನು ಇಂದ್ರನಂತೆ ತಾನೂ ಶಚೀದೇವಿಯನ್ನು ಉಪಭೋಗಿಸಬೇಕೆಂದು ಇಚ್ಛೆಪಟ್ಟನು. ||೧೭||

ಶಚಿಯನ್ನು ವರಿಸಲು ಆ ನಹುಷನು ಅಗಸ್ತ್ಯನೇ ಮೊದಲಾದ ಮುನಿಗಳಿಂದ ಹೊರಲ್ಪಟ್ಟ ಪಾಲಕಿಯಲ್ಲಿ ಕುಳಿತು ಹೊರಟನು. ಶಾಂಭವಶ್ರೇಷ್ಠನಾದ ಅಗಸ್ತ್ಯ ಮುನಿಯು ಕುಳ್ಳನು. ನಡಗೆಯಲ್ಲಿ ನಿಧಾನವಾಯಿತು. ಆಗ ನಹುಷನು ಬೇಗ ನಡೆಯೆಂದು ಆ ಮುನಿಯನ್ನು ಕಾಲಿನಿಂದ ಒದೆದನು. ಅದರಿಂದ ಆ ಮುನಿಗೆ ಕೋಪ ಬಂದು ಸರ್ಪವಾಗಿಹೋಗು ಎಂದು ಶಪಿಸಿದನು. ಇಂದ್ರನಾಗಿದ್ದ ನಹುಷನು ಅಗಸ್ತ್ಯಮುನಿಯು ಶಾಪದಿಂದ ಕ್ಷಣಮಾತ್ರದಲ್ಲಿ ಸರ್ಪವಾಗಿ ಭೂಮಿಗೆ ಬಿದ್ದನು. ||೧೮||

ಸರ್ಪೋ ಭೂತ್ವಾ ಪಪಾತೋರ್ವ್ಯಾಂ ಸೋಽಪಿ ನಿರ್ವಿಣ್ಣಮಾನಸಃ ।
ಇಂದ್ರೋಽಪಿ ಗುರುಣಾ ಸಾರ್ಧಂ ಗತ್ವಾ ಹಾಲಾಸ್ಯಶಂಕರಂ ॥೧೯॥

ಶಫರಾಕ್ಷೀಯುತಂ ಸಾಕ್ಷಾತ್ತುಷ್ಟಾವಾಭ್ಯರ್ಚ್ಯ ಭಕ್ತಿತಃ ।
ಸಂವತ್ಸರಶತಂ ಸಾಗ್ರಂ ಭಸ್ಮರುದ್ರಾಕ್ಷಧಾರಣಃ ॥೨೦॥

ಸುವರ್ಣಪದ್ಮಿನೀತೀರೇ ಉವಾಸ ನಿಯತಾಶನಃ ।
ಫಲಪರ್ಣಾಂಬುನಿರತಃ ಶಕ್ರಃ ಸಾಂಭಂ ಸನಾತನಂ ॥೨೧॥

ತುಷ್ಟಾವಾಷ್ಟಾಕೃತಿಂ ಶಂಭುಂ ಸುಂದರಂ ಭಕ್ತವತ್ಸಲಂ ॥೨೨॥

॥ ಶಕ್ರ ಉವಾಚ ॥

ಬಲಪ್ರಮಥನಂ ಹರಂ ಬಹುದಬಾಹುಸಂಶೋಭಿತಂ
ಬಲಾರಿಬಲಿನಂದನೈಃ ಪ್ರಥಿತವಂದನಂ ಶಂಕರಂ ।
ಬಲಂ ಧನವರಪ್ರದಂ ಬಕುಲಪುಷ್ಪಮಾಲೋಜ್ವಲಂ
ಬಲಂ ಬಿಲಶಯಾಂಘ್ರಿಕಂ ಬಡಬಪೂಜ್ಯಪಾದಾಂಬುಜಂ ॥೨೩॥

ಅತ್ತ ಇಂದ್ರನು ಬೃಹಸ್ಪತಿಯೊಡನೆ ಹಾಲಾಸ್ಯಕ್ಷೇತ್ರಕ್ಕೆ ಹೋಗಿ ಅಲ್ಲಿ ಶಫರಾಕ್ಷೀದೇವಿ (ಮೀನಾಕ್ಷಿ) ಯೊಡನೆ ನೆಲಸಿರುವ ಶಿವನನ್ನು ಭಕ್ತಿಯಿಂದ ಅರ್ಚಿಸಿದನು. ॥೧೯॥

ಅಲ್ಲಿಯೇ ಸುವರ್ಣಪದ್ಮಿನೀನದಿಯ ತೀರದಲ್ಲಿ ವಾಸಿಸುತ್ತಾ ಇಂದ್ರನು ಭಸ್ಮರುದ್ರಾಕ್ಷಧಾರಿಯಾಗಿ ಹಣ್ಣು ಎಲೆ ನೀರುಗಳನ್ನು ಮಾತ್ರ ಆಹಾರವಾಗಿ ಸೇವಿಸುತ್ತಾ, ಸಂಪೂರ್ಣವಾಗಿ ನೂರುವರ್ಷಗಳವರೆಗೆ ಭಕ್ತವತ್ಸಲನೂ, ಸುಂದರನೂ, ಜಗನ್ಮಯನೂ, ಅನಾದಿಪುರುಷನೂ ಆದ ಶಿವನನ್ನು ಅರ್ಚಿಸಿ ಹೀಗೆ ಸ್ತುತಿಸಿದನು. ॥೨೦-೨೧-೨೨॥

"ದುಷ್ಟರ ಬಲವನ್ನು ಮುರಿಯುವವನೂ, ಭಕ್ತರ ಇಷ್ಟಾರ್ಥಗಳನ್ನು ಪೂರೈಸುವವನೂ, ಪಾಪನಾಶಕನೂ, ಬ್ರಹ್ಮನೇ ಮೊದಲಾದವರಿಂದ ವಂದಿಸಲ್ಪಡುವವನೂ, ಬಕುಲಪುಷ್ಪಹಾರವನ್ನು ಧರಿಸಿದವನೂ, ನಾಗಭೂಷಣನೂ, ವಡವಾಗ್ನಿಯಿಂದ ಪೂಜಿಸಲ್ಪಡುವವನೂ ಆದ ಶಂಕರನೇ, ನಿನ್ನನ್ನು ಮೊರೆಹೊಕ್ಕಿರುವೆನು. ॥೨೩॥

ವಿನೀತಜನವತ್ಸಲಂ ವಿಗತಮಾನಹೃತ್ತಾಪಹಂ
ವಿಮಾನವರಸಂಚರಂ ವಿದಿತವೇದಗೀತಾಶಯಂ ।
ವಿಶೇಷಣವಿವರ್ಜಿತಂ ವಿವಿಧಬಂಧುದುಃಖಾಪಹಂ
ಭವಾಂಬುಧಿವಿಶೋಷಕಂ ಭವಹರಂ ಪ್ರಪದ್ಯೇ ಶಿವಂ ॥೨೪॥

ಶ್ರುತಿಶ್ರವಣಭೂಷಣಂ ಕುಸುಮಬಾಣಸಂಶೋಷಣಂ
ತ್ರಿಪುಂಡ್ರಪರಿತೋಷಣಂ ಯಮಪುರಾದಿಸಂಹಾರಿಣಂ ।
ಭಜಾಮ್ಯಘಪ್ರಹಾರಿಣಂ ಸುಕೃತರಾಶಿಸಂಪೂರಣಂ
ಸ್ವಭಕ್ತಜನಪೋಷಣಂ ಉಡುಗಣೇಂದ್ರಸಂಭೂಷಣಂ ॥೨೫॥

ಉಡುರಾಜಕಲಾಧರಂ ಮಹೇಶಂ
ವರಕಾಕೋದರಹಾರಭೂಷಿತಂ ।
ಸುರರಾಜಸಮರ್ಚಿತಾಂಘ್ರಿಪದ್ಮಂ
ಭಜತಾಂ ನಾಸ್ತಿ ಪುನರ್ಭವೋ ಭವೇಷು ॥೨೬॥

ಭಕ್ತರ ಹೃದಯದುಃಖವನ್ನು ಪರಿಹರಿಸಿ ರಕ್ಷಿಸುವವನೂ, ವಿಮಾನ ಸಂಚಾರಿಯೂ, ವೇದಗಳಿಂದ ಸ್ತುತಿಸಲ್ಪಡುವವನೂ, ಭೇದವಿಲ್ಲದವನೂ, ಸಂಸಾರ ಬಂಧನವನ್ನು ಹೋಗಲಾಡಿಸುವನೂ ಆದ ಪರಶಿವನನ್ನೇ ನಾನು ಶರಣು ಹೊಂದುವೆನು. ॥೨೪॥

ವೇದಗಳಿಗೆ ಅಲಂಕಾರನೂ, ಮನ್ಮಥನನ್ನು ದಹಿಸಿದವನೂ, ಭಸ್ಮಧಾರಣ ದಿಂದ ಸಂತೋಷಿಸುವವನೂ, ಯಮ ತ್ರಿಪುರರನ್ನು ಸಂಹರಿಸಿದವನೂ, ಪಾಪನಾಶಕನೂ, ಪುಣ್ಯರಾಶಿಯನ್ನು ಹೆಚ್ಚಿಸುವವನೂ, ಭಕ್ತವತ್ಸಲನೂ, ಚಂದ್ರಶೇಖರನೂ ಆದ ಪರಮೇಶ್ವರನೇ, ನನ್ನನ್ನು ಸಲಹು. ನಿನ್ನನ್ನೇ ಶರಣು ಹೊಂದುವೆನು. ॥೨೫॥

ಚಂದ್ರಶೇಖರನೂ, ನಾಗಹಾರವನ್ನು ಧರಿಸಿದವನೂ, ದೇವೇಂದ್ರನಿಂದ ಅರ್ಚಿಸಲ್ಪಡುವವನೂ ಆದ ಮಹೇಶ್ವರನನ್ನು ಭಜಿಸುವವರಿಗೆ ಪುನರ್ಜನ್ಮವಿಲ್ಲ." ॥೨೬॥

॥ ಸೂತ ಉವಾಚ ॥

ತತ್ಸ್ತುತ್ಯಾ ಭಗವಾನುಮಾವೃಷಯುತೋ ದೇವಃ ಪಶೂನಾಂ ಪತಿಃ
ಪ್ರಾದುರ್ಭೂಯ ಪುರಸ್ಥಿತಸ್ತ್ರಿನಯನಃ ಸೋಮಾರ್ಧಚೂಡೋ ಹರಃ
ಇಂದ್ರಂ ವೃತ್ರವಧಾರ್ದಿತಂ ಸುಮಹತ್ತದ್ಬ್ರಹ್ಮವಧ್ಯಾರ್ದಿತಂ
ಮಾಭೈಷ್ಟೇತಿ ಗಿರಾಭ್ಯುವಾಚ ಸುದೃಢಂ ತದ್ಭಕ್ತಿದಾರ್ಢ್ಯಾದ್ಧರಃ ॥೨೭॥

॥ ಈಶ್ವರ ಉವಾಚ ॥

ತ್ವಂ ವೃತ್ರಹತ್ಯಾಭವತೋಘಮುಕ್ತೋ
ಭಕ್ತ್ಯಾ ಮಮಾಂಘ್ರ್ಯಂಬುಜಪೂಜನೇನ ।
ಯುಕ್ತೋಽಧುನಾ ಶಾಸಯ ದೇವರಾಜ್ಯಂ
ದೇವೈರ್ಯುತೋ ಭಕ್ತಿಯುತೋ ಮಯೀಶೇ ॥೨೮॥

ಸಭಾರ್ಯೋ ದೇವೇಷು ಪ್ರಥಿತಯಶಸಾ ದೈವತಗಣಂ
ಮಹಾಲಿಂಗಾರ್ಚಾತೋ ಮಮ ಗಣವರಃ ಖಾದಿಷು ಚರಃ ।
ಸುರೈರ್ಯುಕ್ತೋ ಗಚ್ಛ ತ್ವಮಸುರಜಯೋದ್ಯದ್ಧೃತಶಿರಾ
ಇತೀಶೇನೋದ್ದಿಷ್ಟೋ ವೈ ಸುರವರಪುರಂ ಯಾಯತ ತದಾ ॥೨೯॥

ಇಂದ್ರನ ಈ ಸ್ತುತಿಯಿಂದ ಪಶುಪತಿಯೂ ತ್ರಿನೇತ್ರನೂ, ಚಂದ್ರಶೇಖರನೂ ಆದ ಶಿವನು ಪ್ರಸನ್ನನಾಗಿ ಗಿರಿಜೆಯೊಡನೆ ಪ್ರತ್ಯಕ್ಷನಾದನು. ಮತ್ತು ಆ ಬ್ರಹ್ಮಹತ್ಯೆಯಿಂದ ಪೀಡಿಸಲ್ಪಟ್ಟು ಕಂಗೆಟ್ಟಿರುವ ಇಂದ್ರನನ್ನು ಕುರಿತು "ಹೆದರಬೇಡ" ಎಂದು ಹೇಳಿ ಅವನನ್ನು ಸಮಾಧಾನಗೊಳಿಸಿದನು. ॥೨೭॥

ಎಲೈ ಇಂದ್ರನೇ, ಭಕ್ತಿಯಿಂದ ನೀನು ನನ್ನನ್ನರ್ಚಿಸಿದುದರಿಂದ ವೃತ್ರನನ್ನು ಸಂಹರಿಸಿದ ಬ್ರಹ್ಮಹತ್ಯೆಯು ಈಗ ನಾಶವಾಯಿತು ಎಂದು ತಿಳಿ. ಇನ್ನು ನೀನು ಸ್ವರ್ಗಕ್ಕೆ ಹೋಗಿ ದೇವತೆಗಳೊಡನೆ ಸೇರಿ ನನ್ನನ್ನು ಧ್ಯಾನಿಸುತ್ತಾ ನಿನ್ನ ದೇವರಾಜ್ಯವನ್ನು ಆಳು. ॥೨೮॥

ಶಚಿಯೊಡನೆ ದೇವತೆಗಳನ್ನು ಪಾಲಿಸುತ್ತಾ ಕೀರ್ತಿವಂತನಾಗಿ ಶಿವಲಿಂಗವನ್ನರ್ಚಿಸುತ್ತಾ ಸುಖವಾಗಿರು. ದೈತ್ಯರನ್ನು ಜಯಿಸಿ ವಿಜಯಪತಾಕೆಯಿಂದ ವಿಜೃಂಭಿಸು, ನನ್ನ ಉತ್ತಮ ಭಕ್ತನಾಗಿರು. ॥೨೯॥

ಮುಹುರ್ನತ್ವಾ ಶಂಭುಂ ಶಚಿಗುರುಸುರಾದ್ಯೈರಭಿಯಯೌ
ದಿವಂ ಪಾಪೈರ್ಮುಕ್ತಃ ಪಶುಪತಿಕೃಪಾತಃ ಶತಮುಖಃ
ಪ್ರಸಹ್ಯಾಜೌ ದೈತ್ಯಾನ್ ವಿಜಿಗದಥ ರಾಜ್ಯೇನ ಮುದಿತಃ ॥೩೦॥

ಇತಿ ಶ್ರೀಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ವೃತ್ರವಧ ಬ್ರಹ್ಮಹತ್ಯಾ ದೋಷಾದಿಂದ್ರಮುಕ್ತಿಕಥನಂ ನಾಮೈಕೋನವಿಂಶಃ

ಪರಮೇಶ್ವರನ ಈ ಆಜ್ಞೆಯನ್ನು ಕೇಳಿ ಸಂತಸಗೊಂಡು ಇಂದ್ರನು ಭಕ್ತಿಯಿಂದ ದೇವದೇವನಿಗೆ ನಮಸ್ಕರಿಸಿ, ಶಚಿ ಬೃಹಸ್ಪತಿಗಳೊಡನೆ ಸ್ವರ್ಗಕ್ಕೆ ತೆರಳಿದನು. ಅಲ್ಲಿದ್ದ ರಾಕ್ಷಸರೆಲ್ಲರನ್ನೂ ಶಿವನ ಕೃಪೆಯಿಂದ ಜಯಿಸಿ ರಾಜ್ಯವನ್ನಾಳುತ್ತಾ ಸುಖವಾಗಿದ್ದನು ಎಂದು ಕುಮಾರಸ್ವಾಮಿಯು ಇಂದ್ರನು ಬ್ರಹ್ಮಹತ್ಯೆಯನ್ನು ಕಳೆದುಕೊಂಡ ವಿಷಯವನ್ನು ತಿಳಿಸಿದನು. ॥೩೦॥

ಇಲ್ಲಿಗೆ ಶ್ರೀ ಶಿವರಹಸ್ಯದ ಚತುರ್ಥಾಂಶದಲ್ಲಿ ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ತ್ರಿಂಶತಿತಮೋಽಧ್ಯಾಯಃ

|| ಸ್ಕಂದ ಉವಾಚ ||

ವಿಷ್ಣುಶ್ಚಾಪಿ ಪುರಾ ದೇವೈಃ ಪಾದ್ಮೇ ಕಲ್ಪೇ ಮುನೀಶ್ವರ ।
ಪ್ರಾರ್ಥಿತೋ ವಿಜಯೋದ್ಯುಕ್ತೋ ಸಮಾರಾಧ್ಯ ಮಹೇಶ್ವರಂ ॥೧॥

ದೈತ್ಯಾನಾಂ ನಿಧನಾನ್ವೇಷೀ ಶಸ್ತ್ರಹೀನಬಲೋ ಹರಿಃ ।
ದೃಷ್ಟ್ವಾ ಕ್ಷೇತ್ರಾಣಿ ಬಹುಶೋ ದೇವದೇವಸ್ಯ ಶೂಲಿನಃ ॥೨॥

ಪರಿಬಭ್ರಾಮ ಲಕ್ಷ್ಮ್ಯಾ ವೈ ಗರುಡೇನ ಸಹಾದರಾತ್ ।
ತೇಜಿನೀವಿಪಿನೇ ಲಿಂಗಮದ್ರಾಕ್ಷೀನ್ನೇತ್ರಮಂಗಲಂ ॥೩॥

ಮೂವತ್ತನೆಯ ಅಧ್ಯಾಯ

ಜೈಗೀಷವ್ಯನೇ, ಮತ್ತೂ ಒಂದು ಇತಿಹಾಸವನ್ನು ಹೇಳುವೆನು ಕೇಳು. ಹಿಂದೆ ಪದ್ಮಕಲ್ಪದಲ್ಲಿ ವಿಷ್ಣುವೂ ಸಹ ದೈತ್ಯರ ವಧೆಗಾಗಿ ಮಹೇಶ್ವರನನ್ನರ್ಚಿಸಿದನು. ಆಗ ಅವನಿಗೆ ಯುದ್ಧಮಾಡಲು ಯಾವ ಆಯುಧವೂ ಇರಲಿಲ್ಲ. ||೧||

ಆಗ ಹರಿಯು ಶಿವನನ್ನರ್ಚಿಸಲು ಯೋಗ್ಯವಾದ ಕ್ಷೇತ್ರಗಳನ್ನು ಹುಡುಕುತ್ತಾ ಲಕ್ಷ್ಮೀಗರುಡರೊಡನೆ ಶಿವಧ್ಯಾನದಿಂದಲೇ ಸಂಚರಿಸಿದನು. ||೨||

ಆಗ ಅವನಿಗೆ ತೇಜಿನೀವನದಲ್ಲಿ ಮನೋಹರವಾದ ಶಿವಲಿಂಗವೊಂದು ಕಾಣಿಸಿತು. ಅದು ಪುರೂರವನಿಂದ ಪೂಜಿಸಲ್ಪಟ್ಟುದು. ||೩||

ಸಪುರೂರವಸಾ ಪೂರ್ವಂ ಪೂಜಿತಂ ದಿವ್ಯಧಾಮುಗಂ ।
ಮುನಿಭಿಃ ಪೂಜಿತಂ ಸ್ವೇಷ್ಟಂ ದೃಷ್ಟ್ವಾ ಸಹ್ಯಾದ್ರಿಜಾಮುಪಿ ॥೪॥

ಸಮಾಹೂಯ ತದಾ ವಿಷ್ಣುಃ ಸಂಸ್ನಾವಯಿತುಮಾದರಾತ್ ।
ಸಾಗಾತ್ತತ್ರ ಸಮಾಹೂತಾ ಹರಾರಾಧನತರ್ಷಿಣಾ ॥೫॥

ಹರಿಣಾ ಹರಿಣಾಕ್ಷೀ ಸಾ ರಾಜದುತ್ಫುಲ್ಲಪಂಕಜಾ ।
ತಸ್ಯಾಂ ಸಸ್ನೌ ಹರಿರ್ಭಕ್ತ್ಯಾ ಭಸ್ಮರುದ್ರಾಕ್ಷಪುಂಡ್ರಧೃಕ್ ॥೬॥

ಶಾಂತಃ ಸ್ವಮನಸಾ ರುದ್ರಮಾವರ್ತಯದತಂದ್ರಿತಃ ।
ಲಕ್ಷ್ಮೀಃ ಶಿವಾರಾಧನಾನಿ ದದೌ ತಸ್ಮೈ ಪದೇ ಪದೇ ॥೭॥

ಪುಷ್ಪಾಣಿ ಸುರಭೀಣ್ಯೇವ ಕಮಲಾನ್ಯಮಲಾನ್ಯಪಿ ।
ಸ್ವಯಂ ಜಹಾರ ಲಕ್ಷ್ಮೀಂದ್ರೋ ಹರಪಾದಾಂಬುಜಾರ್ಚನೇ ॥೮॥

ಅನ್ಯೇಽಪಿ ತದ್ಗಣಾಸ್ತತ್ರ ತಂ ಸೇವಂತಿ ತದಾ ಹರಿಂ ।
ವರ್ಷಾಯುತಂ ತಪಶ್ಚಕ್ರೇ ಫಲಾಹಾರೋಂಬುಜೇಕ್ಷಣಃ ॥೯॥

ಮುನಿಗಳಿಂದ ಪೂಜಿತವಾದ ಆ ಶಿವಲಿಂಗವನ್ನು ನೋಡಿ ಹರಿಯು ಸಂತೋಷಪಟ್ಟು ತಾನು ಸ್ನಾನಮಾಡುವುದಕ್ಕೋಸುಗ ಅಲ್ಲಿಗೆ ಸಹ್ಯಾದ್ರಿಜಾನದಿಯನ್ನು ಕರೆದನು. ॥೪॥

ಆ ನದಿಯು, ಶಿವಾರಾಧನೆಗಾತುರನಾದ ಹರಿಯು ಕರೆಯಲು, ಮನೋಹರವಾದ ಅರಳಿದ ಅನೇಕ ಕಮಲಗಳುಳ್ಳದ್ದಾಗಿ ಅಲ್ಲಿಗೆ ಹರಿದು ಬಂದಿತು. ಹರಿಯು ಆ ನದಿಯಲ್ಲಿ ಸ್ನಾನಮಾಡಿ ಭಸ್ಮರುದ್ರಾಕ್ಷಿಧಾರಿಯಾಗಿ ರುಕ್ತಸೂಕ್ತವನ್ನು ಜಪಿಸುತ್ತಾ ಶಾಂತಿಯಿಂದಲೂ ಭಕ್ತಿಯಿಂದಲೂ ಶಿವನನ್ನಾರಾಧಿಸತೊಡಗಿದನು. ॥೫-೬॥

ಆಗ ಲಕ್ಷ್ಮೀದೇವಿಯು ಶಿವನ ಪೂಜೆಗಾಗಿ ತಾನೇ ಹೂಗಳನ್ನು ಕೊಯ್ದು ಪತಿಗೆ ಕೊಡುತ್ತಿದ್ದಳು. ಹರಿಯೂ ಕೂಡ ತಾನೇ ಸುಗಂಧಮಯವಾದ ಕಮಲಗಳನ್ನಾರಿಸಿ ತರುತ್ತಿದ್ದನು. ॥೭-೮॥

ಹರಿಯ ಗಣಗಳೂ ಸಹ ಶಿವಪೂಜೆಗೆ ಅಣಿಮಾಡಿ ಶಿವನನ್ನು ಸೇವಿಸು

ಸಹಸ್ರಕಮಲೈರೀಶಂ ಪೂಜಯನ್ ತೇಜಿನೀಶ್ವರಂ ।
ದಿವ್ಯಧಾಮಾತನೋಚ್ಚಂಭೋಃ ಸರ್ವರತ್ನಮನೋಹರಂ ॥೧೦॥

ತಸ್ಮಿನ್ನುಪಚಿತಿಂ ಶಂಭೋರ್ವಿಸ್ತರೇಣಾಕರೋದ್ಧರಿಃ ।
ಸ್ಮೃತಿಮಾತ್ರಾಗತೈಸ್ಸರ್ವೈಸ್ಸಂಭಾರೈಃ ಶಿವಪೂಜಕಃ ॥೧೧॥

ಕ್ಷೀರಸಾಗರಸಂಭೂತೈರ್ಘಟಲಕ್ಷೈರ್ಮಹೇಶ್ವರಂ ।
ದಧಿಖಂಡಕಭಾಂಡೈಶ್ಚ ನವೋದ್ಧೃತಘಟೇಸ್ಥಿತೈಃ ॥೧೨॥

ಅಕ್ಷುದ್ರಫಲದೈಃ ಕ್ಷೌದ್ರೈಃ ಶರ್ಕರಾಗಿರಿಭಿರ್ಹರಿಃ ।
ನಾರಿಕೇಲಾಮ್ರಸುರಸೈಃ ರಂಭಾನಿಂಬಭರೈ ರಸೈಃ ॥೧೩॥

ಪನಸೋರುಮಹಾಕೋಶೈರ್ದ್ರಾಕ್ಷೇಕ್ಷುರಸಕುಂಭಕೈಃ ।
ಗಂಧಕರ್ಪೂರಸಲಿಲೈರ್ವಾಸಿತಾಂತರ್ಘಟೇಭರೈಃ ॥೧೪॥

ತ್ತಿದ್ದವು. ಹೀಗೆ ಹಣ್ಣನ್ನು ಮಾತ್ರ ಸೇವಿಸುತ್ತಾ ಹರಿಯು ಹತ್ತುಸಾವಿರ ವರ್ಷಗಳ ವರೆಗೆ ಶಿವನನ್ನಾರಾಧಿಸುತ್ತಾ ತಪಸ್ಸುಮಾಡಿದನು. ||೯||

ದಿನವೂ ಆ ಹರಿಯು ಸಾವಿರ ಕಮಲಗಳಿಂದ ತೇಜಿನೀಕ್ಷೇತ್ರಾಧಿಪತಿಯಾದ ಶಿವನನ್ನರ್ಚಿಸುತ್ತಾ ಶಿವಲಿಂಗವನ್ನು ಅಂದವಾದ ರತ್ನಗಳಿಂದ ಅಲಂಕರಿಸುತ್ತಿದ್ದನು. ||೧೦||

ಸ್ಮರಣಮಾಡಿದ ಮಾತ್ರದಿಂದಲೇ ಒದಗಿದ ನಾನಾಬಗೆಯ ಪೂಜಾವಸ್ತುಗಳಿಂದ ಹರಿಯು ಶಿವನನ್ನು ವಿಶೇಷವಾಗಿ ಆರಾಧಿಸಿದನು. ||೧೧||

ಕ್ಷೀರಸಾಗರದ ಲಕ್ಷಕೊಡ ಹಾಲುಗಳಿಂದಲೂ ಅನೇಕ ಗಟ್ಟಿಮೊಸರಿನ ಮಡಕೆಗಳಿಂದಲೂ ಶಿವಲಿಂಗಕ್ಕೆ ಅಭಿಷೇಕಮಾಡಿದನು. ||೧೨||

ಹೊಸ ಜೇನುತುಪ್ಪಗಳಿಂದಲೂ ಸಕ್ಕರೆಯ ಬೆಟ್ಟಗಳಿಂದಲೂ, ತೆಂಗಿನಕಾಯಿ ರಸ, ಮಾವಿನಹಣ್ಣಿನ ರಸ, ಬಾಳೆಹಣ್ಣಿನ ರಸ, ನಿಂಬೆರಸ ಇವುಗಳಿಂದಲೂ ಶಿವಲಿಂಗಕ್ಕೆ ಆ ಹರಿಯು ಅಭಿಷೇಕಮಾಡಿದನು. ||೧೩||

ಹಲಸಿನ ಹಣ್ಣಿನ ರಸ, ದ್ರಾಕ್ಷಿರಸ, ಕಬ್ಬಿನ ಹಾಲು, ಗಂಧಕರ್ಪೂರಮಿಶ್ರಿತವಾದ ಜಲ ಇವುಗಳನ್ನು ಕೊಡಕೊಡಗಳಿಂದ ಶಿವಲಿಂಗಕ್ಕೆ ಅಭಿಷೇಕಮಾಡಿದನು. ||೧೪||

ವಾಸೋಭಿಃ ಸ್ವರ್ಣಕೂಲೈಃ ಪರಿವೇಷ್ಟ್ಯ ಮಹೇಶ್ವರಂ ।
ಸಮಭ್ಯಷಿಂಚದ್ದ್ರವ್ಯೈಶ್ಚ ಗಂಧೈರಾಮೌಳಿಪೀಠಕಂ ॥೧೫॥

ಸ್ವರ್ಣರತ್ನಪರಿಕ್ಲೃಪ್ತೈರ್ಭೂಷಣೈರ್ಭೂಷ್ಯ ಶಂಕರಂ ।
ತೇಜನೀಶಂ ಜೀವಿತೇಶಂ ಪಾರ್ವತ್ಯಾ ನ್ವೈ ತದಾ ಹರಿಃ ॥೧೬॥

ತಗರಾಗರುಸಾರೈಶ್ಚ ಧೂಪಯತ ಶಂಕರಂ ।
ದೀಪೈಃ ಕರ್ಪೂರಖಂಡೋತ್ಥೈಃ ಘೃತೋದ್ಭೂತೈಃ ಸಹಸ್ರಶಃ॥೧೭॥

ಮೃದಂಗಮುರಜಾಪಾರಕಾಹಲೀಶಂಖಮರ್ದಲೈಃ ।
ವೇಣುವೀಣಾರವೈರೀಶಂ ದುಂದುಭೀನಾಂ ಮಹಾರವೈಃ ॥೧೮॥

ತರ್ಜಿತಾಂಭೋಧಿನಿನದೈರಪ್ಸರೋಗಣನರ್ತನೈಃ ।
ಛತ್ರಚಾಮರಪಂಕ್ತೀಭಿಃ ಪತಾಕಾದರ್ಶನೈರಪಿ ॥೧೯॥

ಪ್ರದಕ್ಷಿಣನಮಸ್ಕಾರೈರ್ಬಿಲ್ವಪಂಕಜಪೂಜನೈಃ ।
ನಾನಾವಿಧೋದ್ಯತ್ಸುರಭಿಪುಷ್ಪಾಣಾಂ ರಾಶಿಭಿಃ ಶಿವಂ ॥೨೦॥

ಚಿನ್ನದ ಅಂಚಿನ ವಸ್ತ್ರಗಳನ್ನುಡಿಸಿ ಸುಗಂಧವನ್ನು ಲೇಪಿಸಿ ಭಕ್ತಿಯಿಂದ ಶಿವನನ್ನಾರಾಧಿಸಿದನು. ॥೧೫॥

ರತ್ನಖಚಿತವಾದ ಚಿನ್ನದ ಒಡವೆಗಳಿಂದ ತೇಜನೀಶ್ವರನನ್ನೂ ಪಾರ್ವತಿಯನ್ನು ಅಂದವಾಗಿ ಅಲಂಕರಿಸಿದನು. ॥೧೬॥

ಸುವಾಸನೆಯಾದ ಅಗರುಧೂಪಗಳನ್ನು ಅರ್ಪಿಸಿದನು. ತುಪ್ಪದ ದೀಪವನ್ನೂ ಕರ್ಪೂರದ ಆರತಿಯನ್ನೂ ಆ ದೇವದೇವನಿಗೆ ಎತ್ತಿದನು. ॥೧೭॥

ಮೃದಂಗ, ಮುರಜ, ಕಹಳೆ, ಶಂಖ, ಮದ್ದಳೆ, ಕೊಳಲು ವೀಣೆಗಳನ್ನೂ ನಗಾರಿಯನ್ನೂ ಆ ದೇವನೆದುರಿಗೆ ಮನೋಹರವಾಗಿರುವಂತೆ ಬಾರಿಸಿಸಿದನು. ॥೧೮॥

ಅಪ್ಸರೆಯರಿಂದ ನರ್ತನ ಮಾಡಿಸಿದನು. ಛತ್ರಚಾಮರಗಳಿಂದ ಸೇವಿಸಿದನು. ಪತಾಕೆ ಕನ್ನಡಿಗಳನ್ನು ಪ್ರದರ್ಶಿಸಿದನು. ॥೧೯॥

ಪ್ರದಕ್ಷಿಣ ನಮಸ್ಕಾರದಿಂದಲೂ, ಬಿಲ್ವಪತ್ರೆ, ಕಮಲ ಮೊದಲಾದ ಅನೇಕ ಬಗೆಯ ಸುವಾಸನೆಯ ಹೂಗಳಿಂದಲೂ ಶಿವನನ್ನು ಹರಿಯು ವಿಶೇಷವಾಗಿ ಆರಾಧಿಸಿದನು. ॥೨೦॥

ನೈವೇದ್ಯೈರ್ಭಕ್ಷ್ಯಭೋಜ್ಯಾನಾಂ ರಾಶಿಭಿಶ್ಚಾನ್ನಕಲ್ಪಿತೈಃ ।
ಏವಂ ವರ್ಷಾಯುತಂ ವಿಷ್ಣುಸ್ತ್ರಿಕಾಲಂ ಶಂಕರಾರ್ಚಕಃ ॥೨೧॥

ತೇಜಿನೀವಿಪಿನೇಶಾನಮಾಲಸ್ಯಪರಿವರ್ಜಿತಃ ।
ಸ್ತುವನ್ ಪರಮಯಾ ಭಕ್ತ್ಯಾ ಲಕ್ಷ್ಮ್ಯಾ ಚ ಗರುಡೇನ ಚ ॥೨೨॥

ವಿಷ್ವಕ್ಸೇನಾದಿಗಣಪೈರುಮಾಸಾವಮರಪುಂಗವಃ ।
ತಾದೃಶಸ್ತಪಸೋ ರಾಶಿರ್ನದೃಷ್ಟೋ ನ ಶ್ರುತೋ ಮಯಾ ॥೨೩॥

ಸಹಸ್ರನಾಮಭಿಃ ಸಾಂಬಂ ಅಂಬುಜೋತ್ಫುಲ್ಲಲೋಚನಃ ।
ಅಂಬುಜೈಃ ಪೂರಯಾಮಾಸ ಆರಕ್ತೈಃ ಶಿವಹರ್ಷದೈಃ ॥೨೪॥

ಮುನಯೋಽಪಿ ಹರಿಂ ವೀಕ್ಷ್ಯ ತಪಸ್ಯಂತಂ ಸುವಿಸ್ಮಿತಾಃ ।
ನಿಮೀಲಿತಾಕ್ಷಂ ಧ್ಯಾಯಂತಮಿದಮೂಚುಸ್ತದಾ ವಚಃ ॥೨೫॥

॥ ಮುನಯ ಊಚುಃ ॥

ಕಸ್ತೇ ಕಾಮೋಽಮರಶ್ರೇಷ್ಠ ಸರ್ವಪೂಜ್ಯೋ ಭವಾನ್ಯತಃ ।
ಕಿಂ ತವಾಪಿ ಮಹಾದೇವಃ ಪೂಜ್ಯೋಽಸ್ತಿ ಪರಮೇಶ್ವರಃ ॥೨೬॥

ಭಕ್ಷ್ಯಭೋಜ್ಯಗಳನ್ನೂ ಅನ್ನದ ರಾಶಿರಾಶಿಗಳನ್ನು ಶಿವನಿಗೆ ನೈವೇದ್ಯ ಮಾಡಿದನು. ಹೀಗೆ ವಿಷ್ಣುವು ಆ ತೇಜನೀವನದಲ್ಲಿ ಆಲಸ್ಯವಿಲ್ಲದೆ ಲಕ್ಷ್ಮೀ, ಗರುಡರೊಡನೆ ವಾಸಿಸುತ್ತಾ ಭಕ್ತಿಯಿಂದ ಸ್ತುತಿಸುತ್ತಾ ಹತ್ತುಸಾವಿರ ವರ್ಷಗಳ ವರೆಗೆ ಶಿವನನ್ನು ಆರಾಧಿಸಿದನು. ಅಂತಹ ಘೋರತಪಸ್ವಿಯನ್ನು ನಾನು ಎಲ್ಲಿಯೂ ನೋಡಿಯೂ ಇಲ್ಲ, ಕೇಳಿಯೂ ಇಲ್ಲ. ॥೨೧-೨೨-೨೩॥

ಶಿವನ ಇಷ್ಟವಾದ ಸಾವಿರ ಕೆಂದಾವರೆಗಳಿಂದ ಆ ಕಮಲಾಕ್ಷನು ಶಿವನಿಗೆ ಸಹಸ್ರನಾಮಾರ್ಚನೆಯನ್ನು ಮಾಡಿದನು. ॥೨೪॥

ಕೆಲವರು ಮಹಾಮುನಿಗಳು ಕಣ್ಣನ್ನುಮುಚ್ಚಿ ಶಿವನನ್ನು ಧ್ಯಾನಿಸುತ್ತಾ ಹರಿಯು ತಪಸ್ಸುಮಾಡುತ್ತಿರುವುದನ್ನು ನೋಡಿ ಅಚ್ಚರಿಗೊಂಡು, ವಿಷ್ಣುವಿನೊಡನೆ, ॥೨೫॥

ಓ ಪುರುಷೋತ್ತಮ, ತಪಸ್ಸು ಮಾಡಿ ನೀನು ಸಾಧಿಸಬೇಕಾದುದೇನು? ನೀನೇ ಸರ್ವರಿಗೂ ಪೂಜ್ಯನಲ್ಲವೇ? ನಿನಗೂ ಒಬ್ಬ ದೇವದೇವನಾದ ಪರಮೇಶ್ವರನಿರುವನೆ? ಎಂದು ಪ್ರಾರ್ಥಿಸಿಕೊಂಡರು. ॥೨೬॥

ಇತಿ ವಿಪ್ರವಚಃ ಶ್ರುತ್ವಾ ಮುನೀನಾಹ ಹರಿಸ್ತದಾ ॥೨೭॥

॥ ವಿಷ್ಣುರುವಾಚ ॥

ಏಷ ಬ್ರಹ್ಮೈಷ ರುದ್ರೋ ಹರಿವಿಧಿಜನಕೋ ಸೂರ್ಯಚಂದ್ರಾನಲಾನಾಂ
ವೇದೈರ್ಗೀತೋ ಮಹೇಶಃ ಪ್ರತಿಪದನಮಸಾಂ ರಾಶಿಭಿಃ ಸರ್ವರುದ್ರೈಃ ।
ಯದ್ವಾಮಾಂಗಭವೋ ಹರಿರ್ವಿಧಿರಯಂ ಸ್ರಷ್ಟಾ ತು ದಕ್ಷಾಂಗಜಃ
ತನ್ನೇತ್ರಾಂಬುಜಸಂಭವೋ ಹರ ಇತಿ ಶ್ರುತ್ಯಾಽಭಿಧತ್ತೇ ದ್ವಿಜಾಃ ॥೨೮॥

ತಂ ವೈ ಕಾರಣಕಾರಣಂ ಪರಶಿವಂ ಲಿಂಗೇ ಚ ತುಂಗೇ ಸದಾ
ಧ್ಯಾಯಾಮಿ ಪ್ರತಿವಾಸರಂ ಪ್ರವಿಕಚೈಃ ಪದ್ಮಾಂಬುಜೈಃ ಪೂಜಯೇ ॥೨೯॥

ನ ವಿಜ್ಞೇಯೋ ದೇವಃ ಶ್ರುತಿಶಿಖರವಾಚಾಂ ಸುಮನಸಾಂ
ಯತೋ ಜಾತಂ ವಿಶ್ವಂ ವಿವಿಧಕರಣಂ ಸ್ಥಾವರಚರಂ ।
ನ ಜಾನಂತೀಶಾನಂ ಮಮ ಸುವಿಹಿತಾ ಮಾಮಕಧಿಯಾ
ಯತೋ ವಿಶ್ವಂ ಮುಕ್ತ್ಯೈ ಪ್ರಭವತಿ ಕಿಲಾಸ್ಯೇಶಭಜನೈಃ ॥೩೦॥

ಮುನಿಗಳ ಆ ಮಾತನ್ನು ಕೇಳಿ ಹರಿಯು ಹೀಗೆಂದನು. ॥೨೭॥

"ಆ ಪರಶಿವನೇ ಬ್ರಹ್ಮನು, ಅವನೇ ರುದ್ರನು, ಅವನೇ ಹರಿ, ಬ್ರಹ್ಮ ಮೊದಲಾದ ದೇವತೆಗಳ ಜನಕನು. ರುದ್ರಸೂಕ್ತವು ಅನೇಕ ನಮಸ್ಕಾರ ವಾಚಕ ಪದಗಳಿಂದ ಸ್ತುತಿಸುವುದು. ವಿಷ್ಣುವಾದ ನಾನು ಆ ಶಿವನ ಎಡಶರೀರದಿಂದ ಜನಿಸಿದವನು, ಬಲಶರೀರದಿಂದ ಬ್ರಹ್ಮನು ಜನಿಸಿರುವನು. ಕಣ್ಣಿನಿಂದ ರುದ್ರನು ಜನಿಸಿರುವನು ಹೀಗೆಂದು ವೇದವೇ ಸಾರುತ್ತಿರುವುದು. ॥೨೮॥

ಅಂತಹ ಮಹಾಮಹಿಮನಾದ ಅನಾದಿಕರಣನಾದ ಪರಶಿವನನ್ನೇ ನಾನು ಈ ಮಹಾಲಿಂಗದಲ್ಲಿ ನಿತ್ಯವೂ ಅರಳಿದ ಸಾವಿರ ಕಮಲಗಳಿಂದರ್ಚಿಸುತ್ತಾ ಧ್ಯಾನಿಸುವೆನು. ॥೨೯॥

ವೇದವೇದಾಂತಗಳಿಂದ ಆ ಶಿವನನ್ನು ತಿಳಿಯುಲಸಾಧ್ಯ. ಅವನಿಂದಲೇ ಸ್ಥಿರಚರಾತ್ಮಕವಾದ ಈ ಜಗತ್ತೆಲ್ಲವೂ ಜನಿಸಿರುವುದು. "ನಾನು, ನನ್ನದು" ಎಂಬ ಅಹಂಕಾರಕ್ಕೊಳಗಾಗಿ ಜನರು ಆ ಶಿವನನ್ನು ತಿಳಿಯದವರಾಗಿರುವರು. ಆ ಶಿವನನ್ನು ಭಜಿಸಿದರೆ ಸುಲಭವಾಗಿ ಮುಕ್ತಿಯು ಲಭಿಸುವುದು. ॥೩೦॥

ಅತೋ ಮೋಹಾಂಧಾನಾಂ ವಿವಿಧಜಗತಾಂ ಕಾರಣತಯಾ
ವದಂತೀಶಾನಂ ಮಾಂ ವಿಧಿವಿಹಿತಬುದ್ಧ್ಯಾಗತಧಿಯಃ ।
ಭ್ರಮಂತೀಶಂ ಹಿತ್ವಾ ಜನನಮರಣೈರ್ಭ್ರಾಂತಿವಿವಶಾಃ
ದ್ವಿಜಾ ಮೋಹೇನಾಂಧಾಃ ಪಶುಪತಿಪದಾಂಭೋಜವಿಮುಖಾಃ ॥೩೦॥

ಸ ಕರ್ತಾ ಸರ್ವೇಷಾಂ ಪ್ರಭುರಖಿಲಕೆರಣೇ ಕಾರಣತಯಾ
ವಿಭುರ್ಭಾಸ್ವನ್ನಾತ್ಮಾ ವಪುಷಿ ಪರಮಾನಂದಕುಹರಃ ।
ಅಜೋಽಜೀರ್ಯೋ ನೇತಾ ಸುರವರನೃತಿರ್ಯಕ್ಷು ವಿಹಿತೋ
ಮಹಾದೇವೋ ವಿಶ್ವಂ ಭುವನಭವನಾಂತರ್ದ್ಯುತಿಕರಃ ॥೩೧॥

ಯಮೀಶಾನಂ ಚಿತ್ತೇ ಯಮಿತಹೃದಯಾ ಕಾರಣಮುಮಾ
ಸನಾಥಂ ಮನ್ನಾಥಂ ಪ್ರಥಿತವಿಷಯೈರ್ವಿಸ್ಮೃತಧಿಯಃ ।
ನ ಜಾನಂತೀಶಾನಂ ಹೃದಯದಹರೇ ಸಂಸ್ಥಿತಮಹೋ
ಶ್ರುತಿಶ್ರದ್ಧಾಹೀನಾಃ ಪಶುರಿವ ಹಿ ಮುಗ್ಧಾ ವಿಧಿಹತಾಃ ॥೩೨॥

ಆ ಪರಶಿವನೇ ಜಗದೊಡೆಯನೂ ಜಗತ್ಕಾರಣನೂ ಆಗಿರಲು ಅಜ್ಞಾನಿಗಳಾದ ಕೆಲವರು ನನ್ನನ್ನೇ ಜಗತ್ಕಾರಣನೆಂದೂ ಪರಮೇಶ್ವರನೆಂದೂ ಹೇಳುವರು. ಶಿವನನ್ನರ್ಚಿಸದೇ ನನ್ನನ್ನೇ ಅರ್ಚಿಸುವರು. ಅಂತಹವರು ಈ ಜನನಮರಣ ರೂಪವಾದ ಸಂಸಾರದಲ್ಲಿಯೇ ಕೊಳೆಯುತ್ತಾ ದುಃಖವನ್ನೇ ಸದಾ ಅನುಭವಿಸುವರು. ॥೩೦॥

ಆ ಪರಶಿವನೇ ಸರ್ವಕರ್ತನು, ಸರ್ವಕಾರಣನು, ಪರಮೇಶ್ವರನು, ಸೂರ್ಯ ಮಂಡಲದಲ್ಲಿ ನೆಲಸಿರುವವನು. ಮಾನವ ಹೃದಯದಲ್ಲಿ ಪರಮಾತ್ಮನಾಗಿರುವನು. ಉತ್ಪತ್ತಿನಾಶಗಳಿಲ್ಲದವನು. ದೇವ ಮಾನವ ಪಶುಗಳಲ್ಲೆಲ್ಲಾ ನೆಲಸಿರುವನು, ಪ್ರಪಂಚದ ಒಳಗೂ ಹೊರಗೂ ಪ್ರಕಾಶಿಸುವವನು ಅವನೇ. ॥೩೧॥

ಶಂಕರನು ಮಾನವರ ಹೃದಯದಲ್ಲೇ ಇರುವನು. ಇಂತಹವನನ್ನು ತಮ್ಮಲ್ಲಿಯೇ ಇರಿಸಿಕೊಂಡಿದ್ದರೂ ಜನರು ಸಂಸಾರಸುಖಗಳಿಗಧೀನರಾಗಿ ತಿಳಿಯಲಾರದವರಾಗಿರುವರು ಮತ್ತು ಭಜಿಸಲೂ ಆರರು. ಪಶುಗಳಂತೆ ಅಜ್ಞಾನಿಗಳಾಗಿರುವರು. ಅಂತಹವರು ಕೇವಲ ಅದೃಷ್ಟಹೀನರಲ್ಲವೆ? ॥೩೨॥

ಯೇ ಶಂಕರಾರ್ಚನರತಾ ಧೃತಭಸ್ಮಪುಂಡ್ರಾಃ
ರುದ್ರಾಕ್ಷವಕ್ಷಸ ಇಮೇ ಮಮ ಪೂಜ್ಯಪಾದಾಃ ।
ರುದ್ರಾನುವೃತ್ತಿಪರಮಾವರಪಂಚಮಂತ್ರ
ಪಂಚಾಸ್ಯಲಿಂಗಪರಿಪೂಜನಸಕ್ತಚಿತ್ತಾಃ ॥೩೪॥

॥ ಸ್ಕಂದ ಉವಾಚ ॥

ತೇ ಮನ್ಮನಸ್ಯಭಿರತಾ ಹರಪಾದಪದ್ಮ
ಸಂಗೋತ್ತಮೋರುಹೃದಯಾ ಮಮ ಪೂಜ್ಯಶಾಂಗಾಃ ।
ತತ್ಸಂಗಸಂಗತಮಹಾಪವನಾಣುರೇಣು
ಸಂಸ್ಪರ್ಶನೇ ಶುಚಿತರಂ ಮಮ ಗಾತ್ರಮೇತತ್ ॥೩೫॥

ಪಾತ್ರಂ ತ್ರಿನೇತ್ರಪದಪಂಕಜಪೂಜನಾಯ
ಮಿತ್ರಾನುರಕ್ತಹೃದಯಾಬ್ಜವಿಕಾಸಿಪತ್ರಂ ।
ಚಿತ್ರಂ ವಿಚಿತ್ರಮಿದಮೇವ ಸುಚಿತ್ರವಾಕ್ಯೈ
ರ್ವೇದಾಂತಬೋಧಿತಧಿಯೋಽಪಿ ವದಂತಿ ಇತ್ಥಂ ॥೩೬॥

ಇತ್ಯುಕ್ತ್ವಾ ಹರಿಣಾ ಮುನೀಶ್ವರಗಣಾಃ ಪ್ರೋಚುರ್ಮಹಾಶಾಂಭವಾಃ ।
ತ್ವತ್ಪ್ರೇಮಪ್ರವಣಾನುರಕ್ತಹೃದಯಾಃ ವ್ಯಾಚಕ್ಷ್ಮಹೇ ತ್ವದ್ಧಿಯಂ ॥೩೭॥

ರುದ್ರಾಕ್ಷಿಭಸ್ಮಧಾರಿಗಳಾದ, ರುದ್ರಸೂಕ್ತವನ್ನು ಜಪಿಸುವ, ಶಿವಪಂಚಾಕ್ಷರ ಮಂತ್ರವನ್ನು ಪುರಶ್ಚರಣೆ ಮಾಡುವ ಶಿವಲಿಂಗವನ್ನರ್ಚಿಸುವ ಮಹಾತ್ಮರು ನನಗೆ ಸರ್ವದಾ ಪೂಜ್ಯರು. ॥೩೪॥

ಶಿವನ ಪಾದಕಮಲವನ್ನರ್ಚಿಸುವ ಈಶ್ವರ ಭಕ್ತರು ನನಗೆ ವಿಶ್ವಾಸಪಾತ್ರರು. ಅವರ ಗಾಳಿಯು ನನಗೆ ಸೋಂಕಿದರೆ ಅದರಿಂದ ನಾನು ಪವಿತ್ರನಾಗುವೆನು. ॥೩೫॥

ಪರಮೇಶ್ವರನ ಪಾದಕಮಲವನ್ನರ್ಚಿಸುವುದಕ್ಕೆ ಅವನಲ್ಲಿ ನೆಲಸಿರುವಂತಹ ವಿಕಸಿತವಾದ ಭಕ್ತಹೃದಯಕಮಲವೇ ಯೋಗ್ಯವು. ಹೃದಯಕಮಲದಿಂದಲೇ ಶಿವನ ಪಾದಕಮಲವನ್ನು ಅರ್ಚಿಸಬೇಕು. ವಿಚಿತ್ರವಾದೀ ವಿಷಯವನ್ನು ವೇದಾಂತಿಗಳೂ ಸದಾ ಹೇಳುತ್ತಿರುವರು. ॥೩೬॥

ಎಂದುಸುರಿದ ವಿಷ್ಣುವಿನ ಮಾತನ್ನು ಕೇಳಿ ಶಿವಭಕ್ತರಾದ ಆ ಮುನಿಗಳು,

ತ್ವಂ ಶರ್ವಪಾದಕಮಲೋತ್ತಮಸಂಗಚಿತ್ತೋ
ಹೃತ್ತಾಪಪಾಪರಹಿತೋ ವರಕರ್ಮದೇವಃ ।
ತ್ವಾದೃಙ್ಮನೋ ನ ಹಿ ಸುರೇಷು ಮಹೇಶ್ವರಾಂಘ್ರಿ
ಪದ್ಮೋತ್ಥಭೃಂಗಮನಸಾ ತ್ವಮಿಹಾಸಿ ಭಕ್ತಃ ॥೩೮॥

ಇತಿ ಶಿವರಹಸ್ಯೇ ಚತುರ್ಥಾಂಶೇ ಶಿವಪ್ರಭಾವವರ್ಣನಂ ನಾಮ ತ್ರಿಂಶೋಽಧ್ಯಾಯಃ

ಮಹಾವಿಷ್ಣುವೇ, ನಿನ್ನ ಈ ಶಿವಾರ್ಚನೆಯಿಂದ ನಿನ್ನಲ್ಲಿ ಗೌರವವುಳ್ಳ ನಾವು ಸ್ನೇಹದಿಂದ ಕೆಲವು ಮಾತನ್ನು ಆಡುವೆವು. ॥೩೭॥

ಶಿವನ ಅಡಿದಾವರೆಯಲ್ಲಿ ನಟ್ಟಮನಸ್ಸುಳ್ಳ ನೀನು ಯಾವ ಮನಸ್ತಾಪಗಳೂ ಇಲ್ಲದವನಾಗಿ ನಿಜವಾಗಿ ನಿನ್ನ ಕರ್ಮದಿಂದಲೇ ದೇವನಾಗಿರುವೆ. ದೇವತೆಗಳಲ್ಲಿ ನಿನ್ನಂತೆ ಇರುವ ಮಹಾತ್ಮರಿಲ್ಲ. ಕಮಲವನ್ನೇ ಆಶ್ರಯಿಸುವ ದುಂಬಿಯಂತೆ ನೀನು ಸದಾ ಶಿವನನ್ನೇ ಆಶ್ರಯಿಸಿ ಉತ್ತಮ ಭಕ್ತನಾಗಿರುವೆ. ನೀನೇ ಧನ್ಯನು. ಇಂತಹ ನೀನು ನಮಗೂ ಪೂಜ್ಯನು ಎಂದು ಹೇಳುತ್ತಾ ತಾವು ಹರ್ಷಚಿತ್ತರಾದರು. ॥೩೮॥

ಇಲ್ಲಿಗೆ ಶ್ರೀಶಿವರಹಸ್ಯದ ಚತುರ್ಥಾಂಶದಲ್ಲಿ ಮೂವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಏಕತ್ರಿಂಶೋಽಧ್ಯಾಯಃ

॥ ಸ್ಕಂದ ಉವಾಚ ॥

ವರ್ಷಾಣಾಂ ಪಂಚಮಂ ವಿಷ್ಣುಃ ಫಲಾಶೀ ರುದ್ರಪೂಜಕಃ ।
ಪಂಚವರ್ಷಾಣಿ ನೀರಾಶೀ ವಾರಾಶಿರಿವ ತಸ್ಥಿವಾನ್ ॥೧॥

ಪವನಾಶೀ ತತೋ ವರ್ಷಂ ಮರುತ್ವಾರಣಭುಗ್ಘಹಃ ।
ತಚ್ಚಿತ್ತದಾರ್ಢ್ಯಂ ವಿಜ್ಞಾತುಂ ಸಹಸ್ರಾಂಬುಜಬೃಂದಕೇ ॥೨॥

ಏಕಂ ವೈ ನ್ಯೂನಮಕರೋದ್ಧರೇರ್ಭಕ್ತಿಂ ವಿಲೋಕಿತುಂ ।
ನ್ಯೂನೇಂಬುಜಾಕ್ಷೋಽಸೌ ನಾಮ್ನೋಂತೇ ಪ್ರಸಭಂ ಹರಿಃ ॥೩॥

ಮೂವತ್ತೊಂದನೆಯ ಅಧ್ಯಾಯ

ಎಲೈ ಜೈಗೀಷವ್ಯನೇ, ಆ ವಿಷ್ಣುವು ಆ ರೀತಿ ಐದು ವರ್ಷಗಳು ಬರಿಯ ಹಣ್ಣುಗಳನ್ನು ತಿನ್ನುತ್ತಲೂ, ಮತ್ತೈದುವರ್ಷ ಕೇವಲ ನೀರನ್ನು ಪಾನಮಾಡುತ್ತಲೂ, ಮತ್ತೊಂದುವರ್ಷ ಕೇವಲ ಗಾಳಿಯನ್ನೆ ಸೇವಿಸುತ್ತಲೂ ತಪಸ್ಸುಮಾಡಿದನು. ॥೧॥

ಒಂದು ದಿನ ಶಿವನು ಹರಿಯ ಮನೋದಾರ್ಢ್ಯವನ್ನೂ ಭಕ್ತಿಯನ್ನೂ ಪರೀಕ್ಷಿಸಲೋಸುಗ ಪೂಜೆಗಾಗಿ ಅವನಿಟ್ಟುಕೊಂಡಿದ್ದ ಸಾವಿರಕಮಲಗಳಲ್ಲೊಂದನ್ನು ಅಪಹರಿಸಿದನು. ॥೨॥

ಒಂಭೈನೂರ ತೊಂಬತ್ತೊಂಬತ್ತು ಕಮಲಗಳ ಅರ್ಚನೆಯಾಯಿತು. ಇನ್ನೊಂದುಕಮಲ ಅಲ್ಲಿ ಇಲ್ಲದುದನ್ನು ನೋಡಿ ಹರಿಯು ಹೆದರದೆ ಕೂಡಲೇ ತನ್ನ ಕಣ್ಣನ್ನೇ ಕಿತ್ತು ಸಹಸ್ರನಾಮಾರ್ಚನೆಯನ್ನು ಪೂರ್ತಿಗೊಳಿಸಿದನು ; ಅವನು

ಛೀಮುಪಾಪಾರ್ಚಸನ್ಯಗ್ರೋ ನಿರ್ಭಯೇನಾಂತರಾತ್ಮನಾ ।
ನಖಾಗ್ರತೋಗ್ರಹೃದಯೇಸೋತ್ಕೃತ್ಯ ನಯನಾಂಬುಜಂ ॥೪॥

ಉತ್ಫುಲ್ಲಾರಕಪದ್ಮಾಭಂ ಸ್ರವದ್ರಕ್ತೋರ್ಚಯದ್ಧರಂ ।
ನಾಮ್ನಾಂತಿಮೇನ ಲಕ್ಷ್ಮ್ಯಾ ಚ ಪಶ್ಯಂತ್ಯಾ ಗರುಡೇನ ಚ ॥೫॥

ಸುವಿಸ್ಮಯೇನ ಸ್ವಹೃದಾ ಪಶ್ಯದ್ಭಿರ್ಮುನಿಪುಂಗವೈಃ ।
ತಸ್ಮಿಂ ಲಿಂಗೇ ಮಹಾದೇವಃ ಪ್ರಾದುರ್ಭೂತಸ್ಸಹೋಮಯಾ ॥೬॥

ಗಂಗಾಚಂದ್ರಕಲಾಮೌಳಿರೇಣಶೂಲಾದಿಬಾಹುಮಾನ್ ।
ಫಣಾಮಣಿಮಹಾರತ್ನಕಲ್ಪಿತಾಕಲ್ಪಸುಂದರಃ ॥೭॥

ಗಣವೃಂದೈಃ ಪರಿವೃತಃ ಸ್ಕಂದನಂದಿಗಜಾನನೈಃ ।
ಸ್ತುವದ್ಭಿರ್ವೇದಜಾಲೈಶ್ಚ ಬ್ರಹ್ಮೇಂದ್ರಾದಿಮರುದ್ಗಣೈಃ ॥೮॥

ದೃಷ್ಟ್ವಾ ಲಿಂಗೇ ಮಹಾದೇವಂ ಪ್ರಣನಾಮ ಹರಿಸ್ತದಾ ।
ಪದ್ಮಾಕ್ಷಸ್ತಂ ವಿರೂಪಾಕ್ಷಂ ಅಭಿತುಷ್ಟಾವ ಭಕ್ತಿತಃ ॥೯॥

ಕಮಲಾಕ್ಷನಲ್ಲವೆ? ಆದುದರಿಂದ ಅವನು ಕಣ್ಣನ್ನೇ ಕಮಲವನ್ನಾಗಿ ಅರ್ಪಿಸಿದನು. ಆ ರಕ್ತನೇತ್ರವು ಪರಶಿವನಿಗೆ ಕೆಂಪುಕಮಲವಾಗಿ ಪರಿಣತವಾಯಿತು. ||೩-೪||

ಸಹಸ್ರನಾಮಾರ್ಚನೆಯಾಯಿತು. ಹರಿಯ ಕಣ್ಣಿನಿಂದ ನೆತ್ತರವು ಒಸರುತ್ತಿದೆ. ಲಕ್ಷ್ಮಿಯೂ, ಗರುಡನೂ, ಮಹಾಮುನಿಗಳೂ ಅತ್ಯಾಶ್ಚರ್ಯದಿಂದ ಅದನ್ನು ನೋಡುತ್ತಿರುವರು. ||೫||

ಆಗ ಆ ಶಿವಲಿಂಗದಲ್ಲಿಯೇ ಮಹಾದೇವನು ಗಿರಿಜೆಯೊಡನೆ ಪ್ರತ್ಯಕ್ಷನಾದನು. ಅವನು ಗಂಗಾಧರನೂ ಚಂದ್ರಶೇಖರನೂ ಆಗಿದ್ದು ಮೃಗತ್ರಿಶೂಲಾದಿಗಳನ್ನು ಹಿಡಿದು ನಾಗರತ್ನಗಳ ಸುಂದರವಾದ ಹಾರವನ್ನು ಧರಿಸಿದ್ದನು. ||೬-೭||

ಅವನೊಡನೆ ಸ್ಕಂದ, ನಂದಿ, ಗಜಾನನ ಮೊದಲಾದ ಅವನ ಪ್ರಮಥಗಣಗಳೂ ಬಂದಿದ್ದರು. ವೇದಪುರುಷರು ದೇವನನ್ನು ಸ್ತುತಿಸುತ್ತಿದ್ದರು. ಬ್ರಹ್ಮ ಇಂದ್ರ ಮೊದಲಾದ ದೇವತೆಗಳು ಆ ಮಹಾದೇವನನ್ನು ಪ್ರಾರ್ಥಿಸುತ್ತಿದ್ದರು. ||೮||

ಲಿಂಗದಲ್ಲಿ ಪ್ರತ್ಯಕ್ಷನಾದ ಮಹಾದೇವನನ್ನು ನೋಡಿ ಹರಿಯು ನಮಸ್ಕರಿಸಿ

ಭವಂ ಭವನಿಯಂತಾರಂ ಭಾವಭೂತೇನ ಚೇತಸಾ ॥೧೦॥

॥ ಹರಿರುವಾಚ ॥

ಭವ ಭೀಮ ಪುರಸ್ಮರಾಂಧಕಾರೇ
ಭಜತಾಂ ಸಕಲಪ್ರದೋಽಸಿ ಶಂಭೋ ।
ತವ ಶಂಕರ ಕಿಂಕರೋಽಸ್ಮ್ಯಹಂ
ಭವ ಭಾವಾನುಭವಪ್ರಭಾವಮೂರ್ತೇ ॥೧೧॥

ಸುರವರ್ಗನಿಖರ್ವವೇದವಾದ್ಯೈಃ
ವಿಧಿಗೀತೈಶ್ಚತುರಾನನೈರಪೀಡ್ಯ ।
ಪುರಗರ್ವಾದಿಹರಾಂಧಕಾಂತಕಾರೇ
ಶರಣಂ ಮೇ ಭವತಾರಣಾಯ ಶಂಭೋ ॥೧೨॥

ಶ್ರುತಿಶೇಖರವಾಕ್ಯಜಾತಪೂಜ್ಯೇ
ಭಗವಂಸ್ತ್ವಚ್ಚರಣಾಂಬುಜದ್ವಯೇ ।
ನಯನಾಮಲಪದ್ಮಸಂಗಮೇ
ಪದಪದ್ಮಂ ಭಜತಾಂ ನತೇಽಸ್ತಿ ಬಂಧಹೇತುಃ ॥೧೩॥

ದನು. ಪರಮೇಶ್ವರನಾದ ಮತ್ತು ಸಂಸಾರದುಃಖನಾಶಕನಾದ ದೇವನನ್ನು ಭಕ್ತಿಯಿಂದ ಹೀಗೆ ಸ್ತುತಿಸಿದನು. ॥೯-೧೦॥

" ಜಗನ್ಮಯನಾಗಿ ದುಷ್ಟ ಭಯಂಕರನಾಗಿ, ತ್ರಿಪುರಾಸುರ, ಅಂಧಕಾಸುರರನ್ನು ಸಂಹರಿಸಿದ, ಭಜಿಸುವವರಿಗೆ ಸಕಲೇಷ್ಟಾರ್ಥಗಳನ್ನೂ ಅನುಗ್ರಹಿಸುವ ಓ ಶಂಭುವೇ, ಮಹಾಮಹಿಮನಾದ ನಿನ್ನ ಸೇವಕನು ನಾನು. ॥೧೧॥

ದೇವತೆಗಳಿಂದ ಸ್ತುತಿಸಲ್ಪಡುವವನೂ, ಬ್ರಹ್ಮನ ನಾಲ್ಕು ಮುಖಗಳಿಂದ ವೇದರೂಪವಾಗಿ ಹೊಗಳಲ್ಪಡುವವನೂ ಆದ ಪರಮೇಶ್ವರನೇ, ಸಂಸಾರತಾಪತ್ರಯಗಳನ್ನು ಹೋಗಲಾಡಿಸಲು ನೀನೇ ನನಗೆ ಶರಣು. ॥೧೨॥

ವೇದಾಂತವಾಕ್ಯಗಳಿಂದ ವರ್ಣಿಸಲ್ಪಡುವ ನಿನ್ನ ಸ್ವರೂಪವನ್ನು ಮನವಿಟ್ಟು ಧ್ಯಾನಿಸಿ ಭಜಿಸುವವರಿಗೆ, ಸಂಸಾರಬಂಧನವು ಖಂಡಿತವಾಗಿಯೂ ಇರುವುದಿಲ್ಲ. ಸರ್ವರಿಗೂ ಮುಕ್ತಿಪ್ರದನು ನೀನು. ॥೧೩॥

ಅಕುಂಠದಯಯಾ ವಿಭೋ ತವ ಸುನೀಲಕಂಠಾಧುನಾ
ಅಕುಂಠಿತಸುಚಕ್ರಧೃಕ್ಪ್ರಸಭಮಾಜಿಮಧ್ಯಂಗತಃ ।
ಸುರೇಂದ್ರದಿತಿಜೋದ್ಭವರಣಕಠೋರಜೇತಾಸ್ಮ್ಯಹಂ
ಪಿಠಾರಜಗತೀ ಭವ ಭವಭವೇದ್ಯ ವೈಕುಂಠಪತಿಃ ॥೧೪॥

ತವ ವಾಮಭವಾಂಗಸಂಭವೋಽ
ಸ್ಮ್ಯಹಮೀಶಾನ ತವಾದ್ಯದಕ್ಷಭಾಗಃ ।
ತವ ಫಾಲತಲಾದ್ಬಭೂವ ರುದ್ರೋ
ಜಗತಾಮವನೇಽಶನೇಸ್ಥಿತಾವಜಃ ॥೧೫॥

ಮಮ ನಾಭಿಪಯೋಜಸಂಭವೋ
ವಿಧಿಫಾಲೋದ್ಭವ ಏಷ ಏಷ ರುದ್ರಃ ।
ವಯಂ ಮರಣೇ ಜಗತ್ಕೃತೌ ಚ ನಾಶೇ
ವಿನಿಯುಕ್ತಾ ಪುರಹನ್ ತ್ವಯೈವ ಕಲ್ಪೇ ॥೧೬॥

ತ್ವಾಮೀಶಂ ಶ್ರುತಿಭಿರ್ವಿಮೃಗ್ಯಮಾನಂ
ಮೋಹಾಂಧಾಃ ಶಿವಮೇಕಮೇವಮಾದ್ಯಂ ।
ಮಮ ಮಾಯಾಮಯಪಾಶಬದ್ಧಬುದ್ಧ್ಯಾ
ಜಗತಾಂ ಮಾಂ ಕರಣಂ ತಥಾಽಽಹುರನ್ಯೇ ॥೧೭॥

ಸ್ವಾಮಿ, ನಿನ್ನ ದಯೆಯಿಂದ ನಾನು ಅಮೋಘವಾದ ಚಕ್ರವನ್ನು ಹಿಡಿದು ಯುದ್ಧಕ್ಕೆ ತೆರಳಿ ದೇವದಾನವರ ಯುದ್ಧದಲ್ಲಿ ಜಯಶಾಲಿಯಾಗುವೆನು ಮತ್ತು ಪ್ರತಿಕಲ್ಪದಲ್ಲಿಯೂ ವೈಕುಂಠಕ್ಕೆ ಅಧಿಪತಿಯಾಗಿರುವೆನು. ॥೧೪॥

ನಿನ್ನ ಎಡಭಾಗದಿಂದ ನಾನು ಜನಿಸಿರುವೆನು. ಬ್ರಹ್ಮನು ಬಲಭಾಗದಿಂದ ಹುಟ್ಟಿರುವನು, ರುದ್ರನು ಹಣೆಯಿಂದ ಜನಿಸಿದನು. ನಾವು ಮೂವರೂ ಕ್ರಮವಾಗಿ ಪಾಲನ ಸೃಷ್ಟಿ ಸಂಹಾರಗಳನ್ನು ಮಾಡುತ್ತಿರುವೆವು. ॥೧೫॥

ನನ್ನ ನಾಭಿಕಮಲದಲ್ಲಿ ಜನಿಸಿದ ಬ್ರಹ್ಮನೂ, ಬ್ರಹ್ಮನ ಹಣೆಯಿಂದ ಜನಿಸಿದ ರುದ್ರನೂ, ನಾನೂ ಸಹ ಜಗತ್ತಿನ ಸೃಷ್ಟಿ ನಾಶ ಪಾಲನಗಳನ್ನು ಮಾಡಲು ನಿನ್ನಿಂದಲೇ ನಿಯಮಿಸಲ್ಪಟ್ಟಿರುವೆವು. ॥೧೬॥

ವೇದಗಳಿಂದ ಹುಡುಕಲ್ಪಡುವಂತಹ, ಅನಾದಿಪುರುಷನೂ, ಓರ್ವನೇ

ಭವ ಭರ್ಗ ಮಹೇಶ ದೇವ ಶಂಭೋ
ಶಶಿಧಾಮದ್ಯುತಿಮೌಳಿಶೋಭಿತಾಂಗ ।
ಕರುಣಾರಸಸಾಗರಾವ ಶಂಭೋ
ಭುವನೇಶಾನ ನತೋಽಸ್ಮಿ ತೇ ಪದಾಬ್ಜಂ ॥೧೮॥

ಕರಕಲಿತಕಪಾಲಶೂಲಮೂಲ ಬಾಲಾ
ವಿಧೃತಾರ್ಧಾಕೃತಿಕಾಲಕಾಲ ಫಾಲಾ
ನಲನೀಲಾಮಲಗಲಗರಲೋತ್ಥಿತಾಧಿಕೀಲಾ
ರಚಿತಾಂತಾಂತಕ ಲೋಕದೇಹಲೀಲಾ
ಕರತೂಲಾಯಿತಗಾಂಗಮೌಳಿಮಾಲಾ
ಮಲವ್ಯಾಲೋರುಮಹಾಂಗಜಾತಲೀಲ ॥೧೯॥

ಶಶಿತರಣಿಹುತಾಶೋತ್ಫುಲ್ಲಫಾಲಾಬ್ಜನೇತ್ರಂ
ದಿನಮಣಿಕಿರಣೋದ್ಯಚ್ಚಕ್ರಧಾಮಪ್ರದಂ ಮೇ ।
ರಣರಣಿತಸುರಾರಿವೃಂದಬಂಧ
ದ್ವಿಷದಿತಿಜಾಸುಹರಂ ಹರಂ ಪ್ರಪದ್ಯೇ ॥೨೦॥

ಪರಮೇಶ್ವರನೂ ಆದ ನಿನ್ನನ್ನು ನನ್ನ ಮಾಯಾಪಾಶಕ್ಕೊಳಗಾದ ಜನರು ತಿಳಿಯದೇ ನಾನೇ ಜಗತ್ಕಾರಣನೆಂದೂ ಜಗದೀಶ್ವರನೆಂದೂ ಹೇಳುವರು. ॥೧೭॥

ಜಗನ್ಮಯನೂ, ಪಾಪನಾಶಕನೂ, ಪರಮೇಶ್ವರನೂ, ಚಂದ್ರಕಲಾಧರನೂ ಕರುಣಾಸಾಗರನೂ ಆದ ಓ ಶಂಕರನೇ, ನಿನಗೆ ನಾನು ನಮಸ್ಕರಿಸುವೆನು. ॥೧೮॥

ಕೈಗಳಲ್ಲಿ ಕಪಾಲತ್ರಿಶೂಲಗಳನ್ನು ಧರಿಸಿ, ಎಡಭಾಗದ ಶರೀರದಲ್ಲಿ ಗೌರಿಯನ್ನು ಧರಿಸಿರುವ, ವಿಷದಿಂದ ಕಪ್ಪಾದ ಕಂಠವುಳ್ಳ, ಯಮನನ್ನು ಶಿಕ್ಷಿಸಿದ ಪ್ರಪಂಚಲೀಲೆಯನ್ನು ವಿಸ್ತರಿಸುವ, ಗಂಗಾಧರನಾದ ನಾಗಭೂಷಣನಾದ ಅಗ್ನಿನೇತ್ರನಾದ ಪರಮೇಶ್ವರನೇ, ನಿನ್ನನ್ನು ನಾನು ಭಕ್ತಿಯಿಂದ ಭಜಿಸುವೆನು. ॥೧೯॥

ಚಂದ್ರ ಸೂರ್ಯ ಅಗ್ನಿಗಳೇ ಮೂರು ಕಣ್ಣುಗಳಾಗುಳ್ಳ ನೀನು ನನಗೆ ಮಹಾಪ್ರಭೆಯುಳ್ಳ ಸುದರ್ಶನಚಕ್ರವನ್ನು ಅನುಗ್ರಹಿಸಿರುವೆ. ದೇವತೆಗಳಿಗೆ ಪ್ರಬಲ ಶತ್ರುಗಳೂ ಬಲಿಷ್ಠರೂ ಆದ ದೈತ್ಯರನ್ನು ಸಂಹರಿಸುವ ಶಕ್ತಿಯುಳ್ಳ ಪರಶಿವನನ್ನು ನಾನು ಶರಣುಹೊಂದುವೆನು. ॥೨೦॥

ಅಲಮಲಮನುವೇಲಂ ಕಾಲಕಾಲಂ ಸಲೀಲಂ
ಜಗತಿ ಕಲಿತಕಾಲಂ ವ್ಯಾಲಮಾಲಂ ಸಶೂಲಂ ।
ಬಲಿಬಲಿಬಲಿನಂದನಾರ್ಚ್ಯಪಾದಂ
ಮುನಿಬಾಲಾವನತಂ ತ್ವಾಂ ಶಿವಂ ಪ್ರಪದ್ಯೇ ॥೨೧॥

ಅಂಗಜಭಂಗತುರಂಗಥಾಂಗಭುಜಂಗಮಹಾಂಬರಸಂಗ ।
ಶತಾಂಗವಿಹಂಗಪತಂಗನಿಷಂಗಕುರಂಗಮಹೋಕ್ಷಾಂಗಕಸಂಗ ॥೨೨॥

ಪರಿಪಾಹಿ ವಿಭೋ ಸುದೃಶಾಂಗದೃಶಾಂಗಮಹೋರುಮಹಾಂಗಸ್ಫುಲಿಂಗ ॥೨೩॥

॥ ಸ್ಕಂದ ಉವಾಚ ॥

ಏವಂ ವಿಷ್ಣುಸ್ತುತಿವಿವಶತೋ ಹರ್ಷವರ್ಷೋರುತರ್ಷೈಃ
ವೀಕ್ಷ್ಯಾಬ್ಜಾರುಣಲೋಚನಂ ಪುರಹರಸ್ತ್ರ್ಯಕ್ಷೋ ಹರಿಂ ತಂ ನತಂ ।
ಉದ್ಯದ್ಭಾಸ್ಕರಕೋಟಿಕೋಟಿನಿಭಮುತ್ಕ್ಯದ್ದೈತ್ಯಾಸುಹೃತ್
ಚಕ್ರಂ ಶುಕ್ರವಿಭೀತಿದೇ ಹರಿಕರೇ ದತ್ವಾಽಽಹ ವಿಶ್ವೇಶ್ವರಃ ॥೨೪॥

ಮಿಕ್ಕಗೊಡವೆಗಳು ನನಗೆ ಸಾಕು, ಸಾಕು. ಮೃತ್ಯುಂಜಯನೂ, ಲೀಲಾಮಯನೂ, ಜಗತ್ತಿನಲ್ಲಿ ಅಂತರ್ಯಾಮಿಯಾಗಿ ನೆಲಸಿರುವವನೂ, ನಾಗಭೂಷಣನೂ, ತ್ರಿಶೂಲಧಾರಿಯೂ, ಬಲಿಷ್ಠನಾದ ಬಲಿಚಕ್ರವರ್ತಿಯ ಪುತ್ರನಾದ ಬಾಣನಿಂದ ಅರ್ಚಿಸಲ್ಪಡುವವನೂ, ಮುನಿಬಾಲನಾದ ಮಾರ್ಕಂಡೇಯನನ್ನು ರಕ್ಷಿಸಿದವನೂ ಆದ ಶಿವನೊಬ್ಬನನ್ನು ಮಾತ್ರ ಭಜಿಸುವೆನು. ॥೨೧॥

ಮನ್ಮಥನನ್ನು ದಹಿಸಿದವನೇ, ಕುದುರೆ, ಹಂಸ, ಹಾವು, ಚಕ್ರವಾಕ, ದುಂಬಿ, ಜಿಂಕೆ ಇವುಗಳಲ್ಲಿಯೂ ನೆಲಸಿರುವವನೇ, ವೃಷಭವಾಹನನಾದ, ಹಣೆಯಲ್ಲಿ ಉರಿಗಣ್ಣುಳ್ಳ, ಓ ಸ್ವಾಮಿನ್ ಕರುಣಾದೃಷ್ಟಿಯಿಂದ ನನ್ನನ್ನು ನೋಡಿ ಪಾಲಿಸು."॥೨೨-೨೩॥

ಹರಿಯು ಈ ಸ್ತುತಿಯಿಂದ ಶಿವನು ತುಂಬಾ ಪ್ರಸನ್ನನಾಗಿ ವಿನೀತನಾಗಿ ನಿಂತಿರುವ ಹರಿಯನ್ನು ನೋಡಿ, ಕೋಟಿಸೂರ್ಯರ ಪ್ರಭೆಯುಳ್ಳ ದೈತ್ಯಗುರುವಾದ ಶುಕ್ರಾಚಾರ್ಯನಿಗೂ ಭೀತಿಯನ್ನುಂಟುಮಾಡುವಂತಹ ಸುದರ್ಶನಚಕ್ರವನ್ನು ಆ ಹರಿಯ ಕೈಗೆ ಕೊಟ್ಟು ಹೀಗೆ ಹೇಳಿದನು. ॥೨೪॥

|| ಈಶ್ವರ ಉವಾಚ ||

ಭೋಗಿತಲ್ಪ ಸುರಕಲ್ಪಕಪುಷ್ಪೈಃ ಕೋಟಿಕಲ್ಪಕಮಲಾರ್ಚನಶಿಲ್ಪಂ ।
ಜಾತಮದ್ಯ ತವ ನೇತ್ರಸುಪದ್ಮಾನ್ನ್ಯತೋಽಷದಮಿದಂ ತ್ವಯಿ ಚಾಲ್ಪಂ॥೨೫॥

ದತ್ತಮೇತದನಲಾರಮಪಾರಾವಾರದೈತ್ಯನಿವಹಾಂತಕಮೇತತ್ ।
ದತ್ತಮುಬ್ಧಿತನಯಾಪತಯೇ ತೇ ಪೋತಭೂತಮಿದಮಾಜಿಷು ರಕ್ಷಾ ॥೨೬॥

ನಾಶಸ್ತ್ರೇಷು ವಿನೀತವೇಷವಪುಷಾ ಶಾಂತೇಷು ಮತ್ಪ್ರೇಮಜಾ
ಪಾರಾವಾರಮಹಾಘುಸಂತತಿಹರಾಹಾರೇಷು ನೈತನ್ಮಮ ।
ಯೋಜ್ಯಂ ತೇ ರಣಶೂರದೈತ್ಯನಿವಹೇ ಶೌರೇಽದ್ಯ ಶೂರೋಽಧುನಾ
ಮಾರಸ್ಯಾಪಿ ಗುರುರ್ಯತೋದ್ಯಸುಮಹಾಪದ್ಮಾಕ್ಷ ಇತ್ಯಾಹತಂ ॥೨೭॥

|| ಸೂತ ಉವಾಚ ||

ಪುಣ್ಯೇಂಶೇ ಜಿತತೇಜಿನೀವಿಪಿನಕೇ ಆರಕ್ತಫುಲ್ಲಾಂಬುಜೈಃ
ಪತ್ರೈಃ ಕೇಸರಕರ್ಣಿಕಾದಿಸಹಿತೈಃ ಸಾಹಸ್ರಸಂಖ್ಯಾಯುತೈಃ ।

ವಿಷ್ಣುವೇ, ನಿನ್ನ ಕಣ್ಣನ್ನೂ ಕಿತ್ತು ಪೂಜಿಸಿ ನನಗೆ ಕೋಟಿ ಕಮಲಗಳ ಅರ್ಚನೆಯನ್ನು ಮಾಡಿದ ಮಹಾಭಕ್ತನಾದ ನಿನಗೆ ನಾನು ಕೊಟ್ಟಿರುವ ಈ ಚಕ್ರವು ಅಲ್ಪವಾದುದು. ನಿನ್ನ ತಪಸ್ಸಿಗೆ ತಕ್ಕ ವರವಲ್ಲ. ||೨೫||

ಬೆಂಕಿಯ ಜ್ವಾಲೆಗಳನ್ನೇ ಉಗುಳುವ ಈ ಮಹಾಚಕ್ರವನ್ನು ನಿನಗೆ ಈಗ ಅನುಗ್ರಹಿಸಿರುವೆನು. ಯುದ್ಧಸಾಗರವನ್ನು ದಾಟುವುದಕ್ಕೆ ಇದು ನಿನಗೆ ಹಡಗಿನಂತಿರುವುದು. ||೨೬||

ಆಯುಧವಿಲ್ಲದವರ ಮೇಲೂ, ಶಾಂತರಾದ ಯೋಗಿಗಳ ಮೇಲೂ, ನನ್ನ ಭಕ್ತರ ಮೇಲೂ ಈ ಚಕ್ರವನ್ನು ಪ್ರಯೋಗಿಸಕೂಡದು. ಶೂರರಾದ ದೈತ್ಯರ ಮೇಲೆ ಮಾತ್ರವೇ ಯುದ್ಧದಲ್ಲಿ ನೀನು ಇದನ್ನು ಪ್ರಯೋಗಿಸಬೇಕು. ನೀನೀಗ ಶೂರನೂ ನಿನ್ನ ಕಮಲಾಕ್ಷತೆಗೆ ಸರಿಯಾಗಿ ಮನ್ಮಥಜನಕನೂ ಆಗಿರುವೆ." ಎಂದು ಸಂತೈಸಿದನು. ||೨೭||

ಹೀಗೆ ಹರಿಯು ತೇಜಿನೀವನದಲ್ಲಿ ತನ್ನ ಕಣ್ಣಿನೊಡನೆ ಸಾವಿರಕಮಲಗಳಿಂದ ಶಿವಲಿಂಗವನ್ನು ಅರ್ಚಿಸಿ, ಸಕಲ ದೈತ್ಯನಾಶಕವಾದ ಚಕ್ರವನ್ನೂ ಪುನಃ ಕಣ್ಣನ್ನೂ

ಸಂಪೂಜ್ಯ ಪ್ರಮಥಾಧಿನಾಥಸುಮಹಾಲಿಂಗಸ್ಥಿತಂ ಮಾಪತಿಃ
ಲೇಭೇ ಚಕ್ರಮನಂತದೈತ್ಯಶಮನಂ ನೇತ್ರಂ ತದೋಮಾಪತೇಃ ॥೨೮॥

ಇತಿ ಶ್ರೀಶಿವರಹಸ್ಯೇ ಚತುರ್ಥಾಂಶೇ ವಿಷ್ಣುತಪೋವರ್ಣನಂ
ನೇತ್ರಾರ್ಪಣಚಕ್ರಪ್ರಾಪ್ತಿವರ್ಣನಂ ನಾಮ
ಏಕತ್ರಿಂಶೋಽಧ್ಯಾಯಃ

ಆ ಶಿವನ ಅನುಗ್ರಹದಿಂದ ಪಡೆದನು. ಎಂದು ಕುಮಾರಸ್ವಾಮಿಯು ಜೈಗೀಷವ್ಯನಿಗೆ ಹೇಳಿದುದನ್ನು ಸೂತಮಹರ್ಷಿಯು ಇತರ ಋಷಿಗಳಿಗೆ ತಿಳಿಯಪಡಿಸಿದನು. ॥೨೮॥

ಇಲ್ಲಿಗೆ ಶ್ರೀಶಿವರಹಸ್ಯದ ಚತುರ್ಥಾಂಶದಲ್ಲಿ ಮೂವತ್ತೊಂದನೆಯ ಅಧ್ಯಾಯವು
ಮುಗಿದುದು.

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ದ್ವಾತ್ರಿಂಶೋಽಧ್ಯಾಯಃ

|| ಸ್ಕಂದ ಉವಾಚ ||

ಶೃಣು ತ್ವಂ ಮುನಿಶಾರ್ದೂಲ ಪೂರ್ವಮಾರಾಧಯನ್ ಹರಂ ।
ಭಗೀರಥೋಽಪಿ ರಾಜರ್ಷಿಸ್ತಪಸಾ ಚಾಮಿತದ್ಯುತಿಃ ॥೧॥

ಕೋಸಲೇಷು ನೃಪಶ್ರೇಷ್ಠೋ ರಾಜರಾಜಸಮದ್ಯುತಿಃ ।
ದಾಕ್ಷಿಣ್ಯೋ ಯಜಮಾನಶ್ಚ ಸರ್ವವಿದ್ರಾಘವೋ ಮುನೇ ॥೨॥

ಸ ರಾಜ್ಯಮಖಿಲಂ ಶಾಸನ್ನಿಹತಾರಿಃ ಪುರಾರಿಹೃತ್ ।
ಕಪಿಲಾಗ್ನಿವಿನಿರ್ಧೂತಾನ್ ಸಾಗರಾನ್ ನೃಪಸತ್ತಮಃ ॥೩॥

ಉದ್ದಿಧೀರ್ಷುರಮಾತ್ಯೇಷು ನಿಧಾಯ ಸ ಭುವಂ ನೃಪಃ ।
ಹಿಮವಚ್ಛಿಖರಂ ಗತ್ವಾ ತಪಸಾಯುತಮೋಜಸಾ ॥೪॥

ಮೂವತ್ತೆರಡನೆಯ ಅಧ್ಯಾಯವು

ಎಲೈ ಜೈಗೀಷವ್ಯನೇ, ಕೇಳು. ಹಿಂದೆ ಇದೇ ರೀತಿ ಭಗೀರಥನೆಂಬ ರಾಜರ್ಷಿಯು ಕೂಡ ಘೋರತಪಸ್ಸಿನಿಂದ ಶಿವನನ್ನು ಆರಾಧಿಸಿದನು. ||೧||

ಆ ರಾಜನು ಕೋಸಲದೇಶದವನು. ಐಶ್ವರ್ಯದಲ್ಲಿ ಕುಬೇರನಿಗೆ ಸಮನಾದವನು, ಉದಾರನು, ಸಮರ್ಥನು, ಕರುಣಿಯು, ಯಾಗನಿರತನು, ಸರ್ವಜ್ಞನು.||೨||

ರಘುವಂಶದ ರಾಜನಾದ ಆ ಭಗೀರಥನು ಶತ್ರುಗಳೆಲ್ಲರನ್ನೂ ಜಯಿಸಿ ಶಿವನನ್ನು ಧ್ಯಾನಿಸುತ್ತಾ ಸುಖವಾಗಿ ರಾಜ್ಯವಾಳುತ್ತಿದ್ದನು. ಹಿಂದೆ ಅವನ ವಂಶದವರಾದ ಸಗರಪುತ್ರರು ಅರವತ್ತುಸಾವಿರಮಂದಿ ಪಿತೃಗಳು ಕಪಿಲಮುನಿಯ ಕೋಪಾಗ್ನಿಗೆ

ಕೇದಾರಂ ಸಮ್ಯಗಾರಾಧ್ಯ ಹಿಮವಚ್ಛಿಖರಾಶ್ರಯಃ ।
ಭಸ್ಮರುದ್ರಾಕ್ಷಸಂಪನ್ನೋ ರುದ್ರಾಧ್ಯಾಯಪರಾಯಣಃ ॥೫॥

ಪಂಚಾಕ್ಷರಜಪಾಸಕ್ತಃ ಸಕ್ತೋ ಲಿಂಗಾರ್ಚನೇ ಸದಾ ।
ಊರ್ಧ್ವಬಾಹುಸ್ಸದಾ ಪಶ್ಯನ್ ದಿವಾಕರಮತಂದ್ರಿತಃ ॥೬॥

ವರ್ಷಾಣಾಮಯುತಂ ಮೌನೀ ಫಲಪರ್ಣಾಂಬುಭೋಜನಃ । ॥೭॥

ಭಸ್ಮಸಂಗೈಕಸುಭಗೋ ನಿರ್ಜಿತಾಖಿಲಹೃತ್ತಮಃ ।
ಕೇದಾರೇಶಂ ಸಮಭ್ಯರ್ಚ್ಯ ತ್ರಿಕಾಲಂ ಬಿಲ್ವಪಲ್ಲವೈಃ ॥೮॥

ದೀಪೈರ್ಧೂಪೈಶ್ಚ ನೈವೇದ್ಯೈಃ ಷೋಡಶೈರುಪಚಾರಕೈಃ ।
ಸಂಸ್ತುವನ್ ಸಾಂಬಮೀಶಾನಂ ಭೂರಥಂ ಸ ಭಗೀರಥಃ ॥೯॥

ತುಷ್ಟಾವ ದೇವದೇವೇಶಂ ಚಂದ್ರಾರ್ಧಕೃತಶೇಖರಂ ॥೧೦॥

ತುತ್ತಾಗಿ ನರಕದಲ್ಲಿ ಕೊಳೆಯುತ್ತಿದ್ದರು. ಅವರನ್ನು ಉದ್ಧರಿಸಲೋಸುಗ ಭಗೀರಥ ರಾಜನು ತನ್ನ ರಾಜ್ಯಭಾರವನ್ನು ಮಂತ್ರಿಗಳಲ್ಲಿರಿಸಿ ತಾನು ತಪಸ್ಸುಮಾಡಲೋಸುಗ ಹಿಮಾಲಯಕ್ಕೆ ತೆರಳಿದನು. ॥೩-೪॥

ಹಿಮಾಲಯಕ್ಕೆ ಬಂದು ಭಸ್ಮರುದ್ರಾಕ್ಷಿಧಾರಿಯಾಗಿ ರುದ್ರಸೂಕ್ತವನ್ನು ಪಠಿಸುತ್ತಾ, ಶಿವಪಂಚಾಕ್ಷರಮಂತ್ರವನ್ನು ಜಪಿಸುತ್ತಾ, ಕೇದಾರೇಶ್ವರಲಿಂಗವನ್ನು ಅರ್ಚಿಸತೊಡಗಿದನು. ಆದ ಅವನು ಕೈಮೇಲಕ್ಕೆತ್ತಿ ನಿಂತು ಸೂರ್ಯನನ್ನು ನೆಟ್ಟ ದೃಷ್ಟಿಯಿಂದ ನೋಡುತ್ತಾ ಶಿವನನ್ನು ಧ್ಯಾನಿಸುತ್ತಿದ್ದನು. ॥೫-೬॥

ಹತ್ತುಸಾವಿರ ವರ್ಷಗಳ ವರೆಗೆ ಹಣ್ಣು, ಎಲೆ, ಗಾಳಿಗಳನ್ನು ಸೇವಿಸುತ್ತಾ ತಪಸ್ಸಿನಿಂದ ಶರೀರವನ್ನು ಶೋಷಿಸುತ್ತಾ ಮೌನದಿಂದಲೇ ಧ್ಯಾನಮಾಡುತ್ತಿದ್ದನು. ॥೭॥

ಭಸ್ಮಧಾರಿಯಾಗಿ ಜಿತೇಂದ್ರಿಯನಾಗಿ ಕೇದಾರೇಶ್ವರನನ್ನು ಬಿಲ್ವದಳಗಳಿಂದ ಅರ್ಚಿಸಿ, ಧೂಪದೀಪಗಳು ನೈವೇದ್ಯ ಮೊದಲಾದ ಹದಿನಾರು ಉಪಹಾರಗಳಿಂದಲೂ ಪೂಜಿಸಿ, ದೇವದೇವನಾದ ಚಂದ್ರಶೇಖರನನ್ನು ಆ ಭಗೀರಥನು ಭಕ್ತಿಯಿಂದ ಹೀಗೆ ಸ್ತುತಿಸಿದನು. ॥೮-೯-೧೦॥

॥ ರಾಜೋವಾಚ ॥

ಇಂದುಖಂಡಕಲಿತಾಮಲಮೌಳಿಂ
ಕುಂಡಲೀಶಮಣಿಕುಂಡಲಗಂಡಂ ।
ಚಂಡಪಾಪಹರಣಂ ವಿಧಿಮುಂಡೋ
ಲ್ಲಾಸಿಪಾಣಿಕಮಲಂ ಶಿವಮೀಡೇ ॥೧೧॥

ಭಸ್ಮಪುಂಡ್ರನಿಟಿಲಾಂಬರಪೂಷ್ಣ
ಕಾಜಿನಂ ಕರಟಿಚರ್ಮಧರಂ ಹರಂ ತ್ವಾಂ ।
ಶೂಲಾಮಲೋದ್ಯೋತಕರಂ ಶಶಿಧಾಮಚೂಡ
ಮೀಡೇ ಶಿವಂ ಗರುಡವಾಹಸುಪೂಜಿತಾಂಘ್ರಿಂ ॥೧೨॥

ತತ್ಸ್ತುತ್ವಾ ತುಷ್ಟಹೃದಯೋ ಮಹಾದೇವ ಉವಾಚ ತಂ ।
ಸಾಂಬಶ್ಚಂದ್ರಕಲಾಮೌಲಿರ್ವೃಷಾರೂಢಸ್ಸಹೋಮಯಾ ॥೧೩॥

॥ ಈಶ್ವರ ಉವಾಚ ॥

ವೃಣು ಕಾಮಂ ನೃಪಶ್ರೇಷ್ಠ ತದ್ದದಾಮ್ಯವಿಚಾರಿತಂ ।
ತಪಸಾ ತವ ಸುಪ್ರೀತಃ ಕೇದಾರಾರಾಧನೇನ ಚ ॥೧೪॥

ಜಟೆಯಲ್ಲಿ ಚಂದ್ರಕಲೆಯನ್ನು ಧರಿಸಿರುವ, ನಾಗರತ್ನವನ್ನು ಕುಂಡಲವನ್ನಾಗಿ ನಿರ್ಮಿಸಿರುವ, ಪಾಪನಾಶಕನಾದ, ಬ್ರಹ್ಮಕಪಾಲವನ್ನು ಹಿಡಿದಿರುವ ಪರಮೇಶ್ವರನನ್ನು ನಾನು ಭಕ್ತಿಯಿಂದ ಸ್ತುತಿಸುವೆನು. ॥೧೧॥

ಭಸ್ಮಧಾರಿಯೂ, ದಿಗಂಬರನೂ ಗಜಚರ್ಮದುಡಿಗೆಯುವನೂ, ತ್ರಿಶೂಲಧಾರಿಯೂ ನಾರಾಯಣನಿಂದ ಸ್ತುತಿಸಲ್ಪಡುವವನೂ ಆದ ಚಂದ್ರಮೌಳಿಯನ್ನು ಭಕ್ತಿಯಿಂದ ನಮಿಸುವೆನು." ॥೧೨॥

ಭಗೀರಥನ ಈ ಸ್ತುತಿಗೆ ಮೆಚ್ಚಿ ಮಹಾದೇವನು ವೃಷಭವನ್ನೇರಿ ಗಿರಿಜೆಯೊಡನೆ ಪ್ರತ್ಯಕ್ಷನಾಗಿ ಹೀಗೆ ನುಡಿದನು. ॥೧೩॥

"ರಾಜೋತ್ತಮನೇ, ನಿನ್ನ ತಪಸ್ಸಿಗೆ ಮೆಚ್ಚಿರುವೆನು. ಬೇಕಾದ ವರವನ್ನು ಕೇಳು ಕೊಡುವೆನು" ಎಂದು ಆಶ್ವಾಸನ ಕೊಡಲು, ॥೧೪॥

ತದಾ ಶಿವವಚಃ ಶ್ರುತ್ವಾ ಪ್ರಾಂಜಲಿರ್ನೃಪನಂದನಃ ।
ಪ್ರಣಮ್ಯ ದೇವಂ ವರದಂ ಉವಾಚೋತ್ಫುಲ್ಲಮಾನಸಃ ॥೧೫॥

॥ ರಾಜೋವಾಚ ॥

ತ್ವತ್ಪಾದಾಂಬುರುಹೇ ಭಕ್ತಿಂ ಕಾಮಯೇ ಕಾಮನಾಶನ ।
ತ್ವದ್ಭಕ್ತ್ಯಾ ಕಿಮಸಾಧ್ಯಂ ಮೇ ಕಿಂ ತ್ವೇಕಂ ಕಾಂಕ್ಷತೇ ಮನಃ ॥೧೬॥

ಶಾಂಭವೇನೈವ ಮುನಿನಾ ಕಪಿಲೇನ ಮಹೇಶ್ವರ ।
ನಿರ್ದಗ್ಧಾಃ ಸಾಗರಾಃ ಪೂರ್ವಂ ಪತಂಗಾ ಇವ ಮನ್ಯುನಾ ॥೧೭॥

ಉದ್ದಿಧೀರ್ಷುರಹಂ ತಾನ್ವೈ ಸಲಿಲಂ ಪಾವನಂ ಹರ ।
ದಾತುಮರ್ಹಸಿ ಲೋಕಾನಾಂ ಪಾವನಾಯ ಚ ಶಂಕರ ॥೧೮॥

ಇತಿ ರಾಜ್ಞೋ ವಚಃ ಶ್ರುತ್ವಾ ತಮುವಾಚ ಪರಮೇಶ್ವರಃ ॥೧೯॥

ಶಿವನ ಆ ಮಾತನ್ನು ಕೇಳಿ ಹರ್ಷಗೊಂಡು ಭಗೀರಥನು ನಮಸ್ಕರಿಸಿ ಅಂಜಲಿಯನ್ನು ಧರಿಸಿ ಹೀಗೆ ಪ್ರಾರ್ಥಿಸಿಕೊಂಡನು. ॥೧೫॥

“ಮನ್ಮಥವೈರಿಯೇ, ನಿನ್ನಲ್ಲಿ ಭಕ್ತಿಯು ನನಗೆ ಸ್ಥಿರವಾಗಿರಲಿ; ಆ ಭಕ್ತಿಯಿಂದಲೇ ಬೇಕಾದುದನ್ನು ಸಾಧಿಸಿಕೊಳ್ಳುವೆನು; ಆದರೀಗ ಒಂದು ವಿಷಯವನ್ನು ಮಾತ್ರ ಅಪೇಕ್ಷಿಸುತ್ತಿರುವೆನು. ॥೧೬॥

ನಿನ್ನ ಭಕ್ತನಾದ ಕಪಿಲಮುನಿಯ ಕೋಪಾಗ್ನಿಗೆ ತುತ್ತಾಗಿ ನನ್ನ ಪಿತೃಗಳಾದ ಸಾಗರರು ಬೆಂಕಿಯಲ್ಲಿ ಬಿದ್ದ ಪತಂಗಹುಳುಗಳಂತೆ ಭಸ್ಮವಾದರು. ॥೧೭॥

ಈಗ ನಾನು ಪಿತೃಗಳನ್ನು ಉದ್ಧರಿಸಬೇಕೆಂದಿರುವೆನು. ಆ ನನ್ನ ಕಾರ್ಯಕ್ಕಾಗಿಯೂ ಲೋಕಕ್ಷೇಮಕ್ಕಾಗಿಯೂ ಪವಿತ್ರವಾದ ಜಲವ (ನದಿಯ)ನ್ನು ನನಗೆ ಅನುಗ್ರಹಿಸು.” ॥೧೮॥

ರಾಜನ ಈ ಪ್ರಾರ್ಥನೆಯನ್ನು ಮನ್ನಿಸಿ ಶಿವನು ಹೀಗೆ ನುಡಿದನು. ॥೧೯॥

॥ ಈಶ್ವರ ಉವಾಚ ॥

ಗಂಗಾ ತ್ರಿಪಥಗಾ ಚೈಷಾ ತವ ದತ್ತಾ ನೃಪೋತ್ತಮ ।
ವಿಯತ್ತಟಾಚ್ಚ ತಟಿನೀ ಪತಂತೀ ಭೂಮಿಮಂಡಲೇ ॥೨೦॥

ಮದಾಜ್ಞಯಾ ಮಹಾಭಾಗ ಗಚ್ಛ ತ್ವಂ ವಿಗತಜ್ವರಃ ।
ಇತ್ಯುಕ್ತಃ ಶಂಭುನಾ ರಾಜಾ ಗಂಗಾಪತನಮೈಕ್ಷತ ॥೨೧॥

ಹಿಮವಚ್ಛಿಖರಂ ತತ್ರ ಪತಂತೀಂ ತಾಂ ಶಿವಾಜ್ಞಯಾ ।
ತಾಂ ಧರ್ತುಮೀಶ್ವರಂ ತತ್ರ ಪುನಸ್ತುಷ್ಟಾವ ಪೃಷ್ಟಧೀಃ ॥೨೨॥

॥ ರಾಜೋವಾಚ ॥

ಶಶಿಶಿಖಿಹರಿಬಾಣವಿಾಶಿತಾರಂ
ತ್ರಿಪುರಯಮಾಂಧಕಸೂದನಂ ಮಹೇಶಂ ।
ನರಹರಿಗಜಕೃತ್ತಿಧಾರಿಣಂ ಸುರೇಶಂ
ಶರಣಮುಪಾಗತೋಽಸ್ಮಿ ದೇವದೇವಂ ॥೨೩॥

ಎಲೈ ರಾಜನೇ, ನಿನ್ನ ಪಿತೃಗಳ ಉದ್ಧಾರಕ್ಕಾಗಿ (ನನ್ನ ತಲೆಯಲ್ಲಿರುವ) ಈ ಪುಣ್ಯಗಂಗೆಯನ್ನು ಕೊಡುವೆನು. ನನ್ನಪ್ಪಣೆಯಂತೆ ಈ ಗಂಗೆಯು ಗಗನ ಮಾರ್ಗದಲ್ಲಿ ಬೀಳುತ್ತಾ ಭೂಮಿಗಿಳಿಯುವಳು. ನೀನು ಹೋಗು. ನಿಶ್ಚಿಂತನಾಗಿರು. ॥೨೦॥

ಎಂದು ಅನುಗ್ರಹಿಸಿದ ಶಿವನ ವಾಣಿಯನ್ನು ರಾಜನು ಕೇಳುತ್ತಿರುವಾಗಲೇ ಆ ದೇವನ ಜಟೆಯಿಂದ ಗಂಗೆಯು ಹೊರಟು ಹಿಮಾಲಯದ ಶಿಖರಕ್ಕೆ ಬೀಳ ತೊಡಗಿದಳು. ಅಲ್ಲಿ ಆ ನದಿಯನ್ನು ಧರಿಸಲು ಭಗೀರಥನು ಪುನಃ ಶಿವನನ್ನೇ ಭಕ್ತಿಯಿಂದ ಹೀಗೆ ಸ್ತುತಿಸಿದನು. ॥೨೧-೨೨॥

" ಚಂದ್ರ, ಸೂರ್ಯ, ಅಗ್ನಿಗಳೇ ಕಣ್ಣುಗಳಾಗುಳ್ಳವನೇ, ಹರಿಯೇ ಬಾಣವಾಗುಳ್ಳವನೇ, ನೀನು ತ್ರಿಪುರಾಸುರ ಯಮ ಅಂಧಕಾಸುರರನ್ನು ಸಂಹರಿಸಿದವನು. ವ್ಯಾಘ್ರಚರ್ಮ ಗಜಚರ್ಮಗಳನ್ನು ತೊಡುವವನೂ, ದೇವದೇವನೂ ಆದ ಪರಶಿವನೇ, ನಿನ್ನನ್ನು ನಾನು ಮರೆಹೊಗುವೆನು. ॥೨೩॥

ಅರುಣತರಣಿಶಂಬರಾಂಕವಹ್ನಿ
ನ್ಯ್ಯಿನಯನಂ ಸುರಶೇಖರಂ ಮಹೇಶಂ ।
ವಿಧಿಹರಿವಿಮೃಶೋತ್ತಮಾಂಗಮೂಲಂ
ಶರಣಮುಪಾಗತೋಽಸ್ಮಿ ದೇವದೇವಂ ॥೨೪॥

ಪುನಸ್ತಮಾಹ ದೇವೇಶೋ ಅನ್ಯತ್ಕಿಂ ಕಥಯಾಧುನಾ ।
ವರಂ ದದಾಮಿ ತೇ ರಾಜನ್ ಭಕ್ತ್ಯಾ ಪ್ರೀತೋಽಹಮೀಶ್ವರಃ ॥೨೫॥

ತದಾ ಶಾರ್ವಂ ವಚಃ ಶ್ರುತ್ವಾ ರಾಜಾ ಪ್ರಾಂಜಲಿರಬ್ರವೀತ್ ॥೨೬॥

॥ ರಾಜೋವಾಚ ॥

ಕೋ ವಾನ್ಯಃ ಪರಮೇಶಾನ ಧರ್ತುಂ ಗಂಗಾರಯೋಽಧುನಾ ।
ಗಂಗಾಧರಸ್ತ್ವಮೇವಾದ್ಯ ಮಹಾದೇವ ದಯಸ್ವ ಮೇ ॥೨೭॥

ತಥೇತಿ ಚ ಕಪರ್ದೀ ತಾಂ ಅಬಿಭ್ರಚ್ಛಂಕರಸ್ತದಾ ।
ಗಂಗಾಗರ್ವಾವಲೇಪಂ ತನ್ನಿರ್ವೀರ್ಯಮಕರೋತ್ತದಾ ॥೨೮॥

ದೇವಶ್ರೇಷ್ಠನೂ, ಬ್ರಹ್ಮಹರಿಗಳಿಂದ ಹುಡುಕಲ್ಪಟ್ಟ ಶಿರಸ್ಸು ಮತ್ತು ಮೂಲಭಾಗಗಳುಳ್ಳವನೂ, ಮನ್ಮಥವೈರಿಯೂ ಆದ ಶಿವನನ್ನು ಶರಣು ಹೊಂದಿರುವೆನು.” ॥೨೪॥

ಎಂಬ ಭಗೀರಥನ ಈ ಸ್ತುತಿಗೆ ಮೆಚ್ಚಿ ಶಿವನು “ಎಲೈ ರಾಜನೇ, ನಿನಗೆ ಬೇಕಾದುದೇನು? ಹೇಳು, ನಿನ್ನ ಭಕ್ತಿಗೆ ಸಂತುಷ್ಟನಾಗಿರುವೆನು” ಎಂದನು. ॥೨೫॥

ಶಿವನೆಂದ ಮಾತನ್ನು ಕೇಳಿ ಭಗೀರಥನು ಕೈಜೋಡಿಸಿ ಹೀಗೆ ಪ್ರಾರ್ಥಿಸಿದನು. ॥೨೬॥

“ಓ ಪರಮೇಶ್ವರ, ನಿನ್ನ ಹೊರತು ಈ ಗಂಗೆಯ ಪ್ರವಾಹವನ್ನು ತಡೆಯುವವರಾರು? ಆದುದರಿಂದ ನೀನೇ ಈಗ ದಯೆಯಿಟ್ಟು ಗಂಗಾಧರನಾಗು” ಎಂದು ರಾಜನು ಗಂಗೆಯನ್ನು ಧರಿಸುವಂತೆ ಪ್ರಾರ್ಥಿಸಿಕೊಳ್ಳಲು, ॥೨೭॥

ಹಾಗೆಯೇ ಆಗಲೆಂದು ಶಿವನು ಗಂಗೆಯನ್ನು ತನ್ನ ಜಟೆಯಲ್ಲಿ ಬಂಧಿಸಿದನು. ಆ ನದಿಯ ಗರ್ವವೆಲ್ಲವನ್ನೂ ಮುರಿದನು. ॥೨೮॥

ಗಿರೀಂದ್ರಶಿಖರಾಕಾರೇ ತಜ್ಜಟಾಮಂಡಲೇ ಮುಹುಃ ।
ಭ್ರಮಂತೀ ಸರಿತಾಂ ಶ್ರೇಷ್ಠಾ ಸಾ ವರ್ಷಾಣಾಂ ಶತಂ ತದಾ ॥೨೯॥

ವಿನಿರ್ಗತಾಂ ತದಾ ಗಂಗಾಂ ದೃಷ್ಟ್ವಾ ಶಂಭುಂ ನೃಪಸ್ತದಾ ।
ತುಷ್ಟಾವ ವಾಗ್ಭಿರಿಷ್ಟಾಭಿಃ ಪುನಃ ಶಂಕರಮೇವ ಹಿ ॥೩೦॥

|| ರಾಜೋವಾಚ ||

ಭಜೇ ಭವಾನೀರಮಣಂ ಶಿವಂ ಭವಂ
ಭಯಾಪಹಂ ಭೀಮನಭೋರ್ಧ್ವಕೇಶಂ ।
ಭವಾಂತಕಂ ಭರ್ಗಮುಮಾಸಹಾಯಂ
ಭಸ್ಮಾಂಗರಾಜಂ ಭುಜಗಾಂಗಹಾರಂ ॥೩೧॥

ವಾಮದೇವಮಗಜಾಮನೋಹರಂ
ವ್ಯೋಮಕೇಶಮಸಮೇಷುದಾಹಕಂ ।
ಸೋಮಧಾಮಜಕಲೋತ್ತಮಮೌಳಿಂ
ಹೇಮದೇಹಮುಮಯಾ ಭಜಾಮ್ಯಹಂ ॥೩೨॥

ಬೆಟ್ಟದ ಶಿಖರದಂತಿರುವ ಶಿವನ ಜಟಾಮಂಡಲದೊಳಗೆ ಆ ಗಂಗಾನದಿಯು ನೂರಾರುವರ್ಷಗಳ ವರೆಗೆ ಭ್ರಮಿಸಿತು, ಆದರೂ ಹೊರಬರಲಾಗಲಿಲ್ಲ. ||೨೯||

ಶಿವನ ಜಟೆಯಿಂದ ಗಂಗೆಯು ಹೊರಡದಿದ್ದುದನ್ನು ನೋಡಿ ಭಗೀರಥನು ಪುನಃ ಪರಮೇಶ್ವರನನ್ನು ಭಕ್ತಿಯಿಂದ ಹೀಗೆ ಸ್ತುತಿಸಿದನು. ||೩೦||

" ಭವಾನೀರಮಣನೂ, ಜಗನ್ಮಯನೂ, ಭಯನಾಶಕನೂ, ಗಗನವೇ ತಲೆಗೂದಲಾಗುಳ್ಳವನೂ, ಸಂಸಾರತಾಪತ್ರಯಗಳನ್ನು ಹೋಗಲಾಡಿಸುವವನೂ, ಭಸ್ಮಧಾರಿಯೂ, ನಾಗಭೂಷಣನೂ ಆದ ಪರಶಿವನೇ, ನಿನ್ನನ್ನು ಭಜಿಸುವೆನು.||೩೧||

ಸಂಹಾರಕರ್ತನಾದ ದೇವನೂ, ಗಿರಿಜೆಯ ಮನೋಹರನೂ, ಮನ್ಮಥನನ್ನು ದಹಿಸಿದವನೂ, ಚಂದ್ರಕಲೆಯನ್ನು ಜಟೆಯಲ್ಲಿ ಧರಿಸಿದವನೂ, ಎಡಶರೀರವನ್ನೇ ಗಿರಿಜೆಗೆ ಕೊಟ್ಟ ಪ್ರೇಮಮಯನೂ ಆದ ಶಿವನನ್ನು ನಾನು ಭಜಿಸುವೆನು. ||೩೨||

ಯಮಮದದಮನಂ ಜಿತೈಕಕಾಮಂ
ಯಮಿಹೃತ್ಪದ್ಮಗತಂ ಜನಾಧಿವಾಸಂ ।
ಫಣಿಗಣಕಲಿತಾಂಘ್ರಿಪಾಣಿಭೂಷಂ
ಸಿತಭಸ್ಮೈವ ಸತಾಂ ತ್ರಿಪುಂಡ್ರಭೂಷಂ ॥೩೩॥

ತತ್ಸ್ತುತ್ಯಾ ತುಷ್ಟಹೃದಯೋ ವಿಸಸರ್ಜ ತದಾ ಹರಃ ।
ಗಂಗಾಂ ಹಿಮವತೋ ಮೌಳೌ ಪತಂತೀಂ ಖಾತ್ತದಾ ಸದಾ ॥೩೪॥

॥ ಗಂಗೋವಾಚ ॥

ಅನಂಗರಿಪುಮೀಶ್ವರಂ ವಿಧಿಸುಮೌಳಿಪಾದಂ ಹರಂ
ಭುಜಂಗವರಹಾರಕಂ ಮಣಿಜರಂಗಸೃತ್ತಾದರಂ ।
ಮಹಾಗಜತ್ವಗಂಬರಂ ಮಮ ರಯೋರುಗರ್ವಾಪಹಂ
ಕುರಂಗಶಿಶುಧಾರಿಣಂ ಶರಣಮಾಶು ಚೇಕ್ಷೇ ಶಿವಂ ॥೩೫॥

ಗಂಗಾಧರಾಂಧಕರಿಪೋ ಪ್ರಮಥಾಧಿನಾಥ
ಶ್ರೀವಿಶ್ವನಾಥ ಕರುಣಾಕರ ಶೂಲಪಾಣೇ ।

ಯಮನ ಗರ್ವವನ್ನು ಮುರಿದವನೂ, ಯತಿಗಳ ಹೃದಯದಲ್ಲಿ ನೆಲಸಿರುವವನೂ, ಪ್ರಪಂಚಕ್ಕೆ ಆಧಾರನೂ, ಹಾವುಗಳನ್ನೇ ಕೈಕಾಲುಗಳ ಆಭರಣವನ್ನಾಗಿ ಧರಿಸಿದವನೂ ಆದ ಪರಮೇಶ್ವರನನ್ನು ಭಕ್ತಿಯಿಂದ ಭಜಿಸುವೆನು. " ||೩೩||

ಭಗೀರಥನ ಆ ಸ್ತುತಿಗೆ ಮೆಚ್ಚಿ ಶಿವನು, ಗಗನದಿಂದ ಬಿದ್ದ ಗಂಗಾನದಿಯನ್ನು ಹಿಮಾಲಯದ ಶಿಖರಕ್ಕೆ ಬಿಟ್ಟನು. ಆಗ ಆ ಗಂಗಾನದಿಯು ಹೀಗೆ ಸ್ತುತಿಸಿದಳು. ||೩೪||

ಮನ್ಮಥವೈರಿಯೂ, ಬ್ರಹ್ಮನಿಂದ ವಂದಿಸಲ್ಪಡುವವನೂ, ನಾಗಭೂಷಣನೂ, ತಾಂಡವ ನಾಟ್ಯವನ್ನು ಆಡುವವನೂ, ಗಜಚರ್ಮಧಾರಿಯೂ, ನನ್ನ ಪ್ರವಾಹ ವೇಗದ ಗರ್ವವನ್ನು ಮುರಿದವನೂ, ಜಿಂಕೆಯನ್ನು ಧರಿಸಿದವನೂ, ಆದ ಪರಮೇಶ್ವರನನ್ನು ಈಗ ಶರಣುಹೊಂದುವೆನು. ||೩೫||

ಓ ಗಂಗಾಧರ, ಓ ಅಂಧಕಾಸುರವೈರಿ, ಓ ಪ್ರಮಥಗಣಗಳೊಡೆಯನೇ, ಓ ಪರಮೇಶ್ವರನೇ. ದಯಾಮಯನೇ, ತ್ರಿಶೂಲಧಾರಿಯೇ, ತ್ರಿಣೇತ್ರನೇ, ಓ ಐದು

ಮಾ ಮೋಚಯಾದ್ಯ ಕುಟಿಲಾಂ ನಿಟಿಲಾಸನಾಕ್ಷ
ಪಾಹಿ ಪ್ರಸೀದ ಪರಮೇಶ್ವರ ಪಂಚವಕ್ತ್ರ ॥೩೬॥

॥ ಈಶ್ವರ ಉವಾಚ ॥

ಗಚ್ಛಾಧುನಾ ನೃಪವರಂ ಭಗೀರಥರಥಾನುಗಾ ॥೩೭॥

ಕಪಿಲಾಗ್ನಿವಿನಿರ್ಧೂತಾನ್ ಸಾಗರಾನ್ ಪ್ಲಾವಯಾಶು ವೈ
ಪೂರ್ವಮೇವಾವಿಮುಕ್ತೇ ಚ ಚಕ್ರತೀರ್ಥಂ ಕೃತಂ ಮಯಾ ॥೩೮॥

ಆನಂದವನಮಾಸಾದ್ಯ ಯಾಹಿ ತ್ವಂ ಸರಿತಾಂ ಪತಿಂ ।
ವಸಾಮಿ ತ್ವಯ್ಯಹಂ ಶಂಭೋ ಮಾಮನುಜ್ಞಾತುಮರ್ಹಸಿ ॥೩೯॥

ಮಹಾದೇವಂ ಮಹಾನಂದಂ ಸಾ ಗಂಗಾಹ ಸದಾಶಿವಂ ॥೪೦॥

॥ ಗಂಗೋವಾಚ ॥

ವಸಾಮಿ ತ್ವಯ್ಯಹಂ ಶಂಭೋ ಮಾಮನುಜ್ಞಾತುಮರ್ಹಸಿ ॥೪೧॥

ಮುಖಗಳುಳ್ಳ ಪರಶಿವನೇ, ಕುಟಿಲಳಾದ ನನ್ನನ್ನು ಬಿಡು. ಪ್ರಸನ್ನನಾಗಿ ಅನುಗ್ರಹಿಸು.'' ಎಂದು ಪ್ರಾರ್ಥಿಸುವ ವಿನೀತಳಾದಾ ಗಂಗೆಯನ್ನು ಕುರಿತು ಶಿವನು ಹೀಗೆಂದನು. ॥೩೬॥

ಎಲೌ ಗಂಗೆಯೇ, ಹೋಗು, ಈ ಭಗೀರಥನ ರಥವನ್ನು ಅನುಸರಿಸು. ಕಪಿಲನ ಕೋಪದುರಿಗೆ ತುತ್ತಾದ ಸಗರಪುತ್ರರನ್ನು ಉದ್ಧರಿಸು. ॥೩೭॥

ಈ ಹಿಂದೆಯೇ ನಾನು ಅವಿಮುಕ್ತತೀರ್ಥದಲ್ಲಿ ಚಕ್ರತೀರ್ಥವನ್ನು ನಿರ್ಮಿಸಿರುವೆನು. ಆ ತೀರ್ಥಕ್ಕೂ ಆನಂದವನಕ್ಕೂ ಹರಿದು ಆಮೇಲೆ ಸಮುದ್ರವನ್ನು ಸೇರು. ॥೩೮॥

ಎಂದು ಅಪ್ಪಣೆಮಾಡಿದ ಶಿವನ ಈ ಮಾತನ್ನು ಕೇಳಿ ಗಂಗೆಯು ಕೈಜೋಡಿಸಿ ನಮಸ್ಕರಿಸಿ ಆನಂದಪ್ರದನಾದ ದೇವದೇವನನ್ನು ಕುರಿತು, ॥೩೯-೪೦॥

ಶಂಭುವೇ, ನಿನ್ನಲ್ಲಿಯೇ ನಾನು ವಾಸಿಸುವೆನು. ನನಗೆ ಅನುಜ್ಞೆಯನ್ನು ಕೊಡು. ಎಂದು ಪ್ರಾರ್ಥಿಸಿದಳು. ॥೪೧॥

ತದಾ ತಾಮಾಹ ದೇವೇಶೋ ರಾಜ್ಞಾ ಗಚ್ಛ ಸರಿದ್ವರೇ ।
ಸಾಗರಾಣಾಂ ಗತಿಂ ದತ್ವಾ ತ್ವಜ್ಜಲಾಪ್ಲಾವನೇನ ಹಿ ॥೪೨॥

ಅವಿಮುಕ್ತಂ ಸಮಾಸಾದ್ಯ ವಿಶ್ವೇಶ್ವರಸಮೀಪಗಾ ।
ಆಚಂದ್ರಾರ್ಕಂ ವಹಂತೀ ತ್ವಂ ಲೋಕಂ ಪಾವಯ ಚಾಶು ಚ ॥೪೩॥

ಏಕಾಂಶೇನ ವಸಾತ್ರೈವ ಮನ್ಮೂರ್ಧ್ನಿ ಕೃತಕೇತನಾ ।
ತೇನ ಗಂಗಾಧರೋ ನಾಮ್ನಾ ಭವಿಷ್ಯಾಮಿ ಸರಿದ್ವರೇ ॥೪೪॥

ಸ್ನಾತಾನಾಂ ತ್ವಯಿ ಸಾರೂಪ್ಯಂ ಮಮ ದಾಸ್ಯಾಮ್ಯಸಂಶಯಂ ॥೪೫॥

ಇತ್ಯುಕ್ತಾ ಶಶಿಶೇಖರೇಣ ಜಗತಾಂ ಸಂಪಾವನೇ ಸಾ ಸರಿತ್
ಶಂಭೋರ್ಮೂರ್ಧ್ನಿ ಸದೈವ ವಾಸಮಕರೋದ್ರಾಜ್ಞಾ ತದಾ ತತ್ರ ವೈ ।
ತದ್ಭಸ್ಮಾರುಣಮಂಡಲಂ ಸಗರಜಂ ಸಂಪ್ಲಾವಯಂತೀ ಯಯೌ
ಪುಣ್ಯಾನಂದವನಂ ತದಾ ನೃಪತಿನಾ ದೇವಾಜ್ಞಯಾ ಹರ್ಷಿತಾ ॥೪೬॥

ಆಗ ಪರಶಿವನು, ಈಗ ನೀನು ಈ ರಾಜನೊಡನೆ ಹೋಗು, ಸಾಗರರ ಭಸ್ಮವನ್ನು ತೊಳೆದು ಅವರನ್ನುದ್ಧರಿಸು. ಅವಿಮುಕ್ತತೀರ್ಥಕ್ಕೆ ಹೋಗಿ ಕಾಶಿಯಲ್ಲಿ ವಿಶ್ವೇಶ್ವರನ ಬಳಿಯಲ್ಲಿಯೇ ಹರಿಯುವವಳಾಗು. ಚಂದ್ರಸೂರ್ಯರಿರುವವರೆಗೂ ಹರಿಯುತ್ತಾ ಭೂಲೋಕವನ್ನು ಪಾವನಮಾಡು. ॥೪೨-೪೩॥

ಒಂದು ಭಾಗದಿಂದ ನನ್ನ ಶಿರಸ್ಸಿನಲ್ಲಿಯೇ ಇರು. ಅದರಿಂದ ನಾನು ಗಂಗಾಧರನೆಂಬ ಹೆಸರುಳ್ಳವನಾಗುವೆನು. ಭೂಲೋಕದಲ್ಲಿ ನಿನ್ನಲ್ಲಿ ಸ್ನಾನಮಾಡಿದವರಿಗೆ ನನ್ನ ಸಮಾನರೂಪವನ್ನು ಕರುಣಿಸುವೆನು. ಎಂದು ವರವಿತ್ತನು. ॥೪೪-೪೫॥

ಶಿವನ ಅಪ್ಪಣೆಯಂತೆ ಆ ಗಂಗೆಯು ಒಂದು ಭಾಗದಿಂದ ಆ ದೇವನ ಶಿರಸ್ಸಿನಲ್ಲಿ ನಿಂತಳು. ಮಿಕ್ಕ ಭಾಗದಿಂದ ಹೊರಟು ಭಗೀರಥನನ್ನನುಸರಿಸುತ್ತಾ ಸಗರಪುತ್ರರ ಭಸ್ಮವನ್ನು ತೊಳೆದು ಪವಿತ್ರವಾದ ಆನಂದವನದಲ್ಲಿದ್ದ ಅವಿಮುಕ್ತತೀರ್ಥಕ್ಕೆ ತೆರಳಿದಳು. ॥೪೬॥

ರಾಜಾಽಪಿ ತ್ರಿದಿವಂ ಗತಾನ್ನೃಪಸುತಾನ್ ದೃಷ್ಟ್ವಾಽಥ ಹೃಷ್ಟೋಽಭವತ್
ಸ್ತುತ್ವಾ ತಾಂ ಮಣಿಕರ್ಣಿಕಾಮುಗಸುತಾಂ ದೃಷ್ಟ್ವಾನ್ನಪೂರ್ಣಾಮಪಿ ।
ವಿಶ್ವೇಶಂ ಶರಣಾರ್ಥಿನಾಂ ಚ ಸುಖದಂ ನತ್ವಾ ಚ ದತ್ವಾ ಧನಂ
ಶೈವೇಭ್ಯಃ ಸ ಯಯೌ ಮುದಾ ಪುರವರಂ ಅಂತೇಽಯಯೌ ಶಂಕರಂ ॥೪೭॥

ಇತಿ ಶಿವರಹಸ್ಯೇ ಭಗೀರಥತಪೋವರ್ಣನಂ ಗಂಗಾನಯನಂ ಸಾಗರಮುಕ್ತಿ ಮಣಿಕರ್ಣಿಕಾನ್ನಪೂರ್ಣಾವಿಶ್ವೇಶ್ವರದರ್ಶನಂ ರಾಜಶಿವಸಾಯುಜ್ಯ ಪ್ರಾಪ್ತಿವರ್ಣನಂ ನಾಮ ದ್ವಾತ್ರಿಂಶೋಽಧ್ಯಾಯಃ

ಭಗೀರಥರಾಜನು ತನ್ನ ಪಿತೃಗಳಾದ ಸಾಗರರು ಸ್ವರ್ಗವೇರಿದುದನ್ನು ನೋಡಿ ಹರ್ಷಗೊಂಡು, ಮಣಿಕರ್ಣಿಕೆಯನ್ನೂ ಅನ್ನಪೂರ್ಣಾದೇವಿಯನ್ನೂ ದರ್ಶನಮಾಡಿ ಶರಣಾಗತರನ್ನು ರಕ್ಷಿಸುವ ವಿಶ್ವೇಶ್ವರನಿಗೆ ನಮಸ್ಕರಿಸಿ ಶಿವಭಕ್ತರಿಗೆ ಹೇರಳವಾಗಿ ದಾನಮಾಡಿ ತನ್ನ ರಾಜ್ಯಕ್ಕೆ ತೆರಳಿ ಸುಖವಾಗಿ ರಾಜ್ಯವಾಳುತ್ತಿದ್ದನು. ಮತ್ತು ಕೊನೆಯಲ್ಲಿ ಶಿವಲೋಕವನ್ನು ಹೊಂದಿದನು ಎಂದು ಭಗೀರಥನು ಶಿವನನ್ನು ಮೆಚ್ಚಿಸಿದ ಕಥೆಯನ್ನು ವಿವರವಾಗಿ ಕುಮಾರಸ್ವಾಮಿಯು ತಿಳಿಯಪಡಿಸಿದನು.॥೪೭॥

ಇಲ್ಲಿಗೆ ಶ್ರೀ ಶಿವರಹಸ್ಯದ ಚತುರ್ಥಾಂಶದಲ್ಲಿ ಮೂವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯ ನಮಃ ॥

ಅಥ ಶ್ರೀ ಶಿವರಹಸ್ಯೇ

ಚತುರ್ಥಾಂಶೇ

ತ್ರಯಸ್ತ್ರಿಂಶೋಽಧ್ಯಾಯಃ

॥ ಸ್ಕಂದ ಉವಾಚ ॥

ವೃಷಭೋಽಪಿ ಪುರಾ ಧರ್ಮೋ ಗೋಮುಕ್ತೀಶಂ ಮಹೇಶ್ವರಂ ।
ಚತುಷ್ಪಾದಃ ಸ್ಥಿತಸ್ತತ್ರ ಸಮ್ಯಗಾರಾಧ್ಯ ಶಂಕರಂ ॥೧॥

ತತಾಪ ನಿಯತಂ ತತ್ರ ಗೋಮುಕ್ತೀಶ್ವರಸನ್ನಿಧೌ ।
ವರ್ಷಾಣಾಮಯುತಂ ಧರ್ಮಃ ಶಿವಲಿಂಗಾವಲೋಕಕಃ ॥೨॥

ನಿರಾಹಾರಃ ಸ್ಥಿತೋ ಧರ್ಮಃ ಸನ್ನಿಧೌ ಪರಮೇಶಿತುಃ ।
ಅಹರ್ನಿಶಮವಿಶ್ರಾಂತಂ ಪಶ್ಯನ್ ಲಿಂಗಂ ಪಿನಾಕಿನಃ ॥೩॥

ಭಸ್ಮರುದ್ರಾಕ್ಷಕವಚಃ ಕಕುದಾಲಂಬಿಚಾಮರಃ ।
ವಿಷಾಣಮುಕುಟೀಕೋಟಿತಾರಾಘಂಟಾವಳೀಯುತಃ ॥೪॥

ಮೂವತ್ತುಮೂರನೆಯ ಅಧ್ಯಾಯವು

ಎಲೈ ಜೈಗೀಷವ್ಯನೇ, ಹಿಂದೆ ಧರ್ಮಪುರುಷನು ವೃಷಭದ ರೂಪದಲ್ಲಿದ್ದನು. ಆಗ ಅವನು ಗೋಮುಕ್ತೀಶ್ವರನೆಂಬ ಹೆಸರುಳ್ಳ ಶಿವನನ್ನು ಆರಾಧಿಸುತ್ತಾ ಭಕ್ತಿಯಿಂದ ತಪಸ್ಸುಮಾಡಿದನು. ॥೧॥

ನಿರಾಹಾರವಾಗಿದ್ದು ಆ ಧರ್ಮಪುರುಷನು ಶಿವನ ಸನ್ನಿಧಿಯಲ್ಲಿ ಶಿವ ಲಿಂಗವನ್ನೇ ನೆಟ್ಟದೃಷ್ಟಿಯಿಂದ ನೋಡುತ್ತಾ, ರಾತ್ರಿಹಗಲು ಬಿಡದೇ ಧ್ಯಾನಿಸುತ್ತಿದ್ದನು. ಹೀಗೆ ಹತ್ತು ಸಾವಿರ ವರ್ಷಗಳ ವರೆಗೆ ತಪಸ್ಸುಮಾಡಿದನು. ॥೨-೩॥

ಭಸ್ಮರುದ್ರಾಕ್ಷಧಾರಿಯಾಗಿ ಭುಜದಿಂದ ಶಿವನಿಗೆ ಚಾಮರವನ್ನು ಬೀಸುತ್ತಾ ಕೋಡುಕತ್ತುಗಳಲ್ಲಿ ಗಂಟೆಗಳ ನಾದವನ್ನು ಮಾಡುತ್ತಾ, ಆ ಧರ್ಮವೃಷಭನು

ಪಾದೈಸ್ತ್ರಿಷ್ಠನ್ ಸಹಸ್ರಂ ವೈ ಪ್ರಜಪನ್ ರುದ್ರಮೇವ ಹಿ ।
ಘನಗಂಭೀರಘೋಷೇಣ ವರ್ಷಾಣಿ ನಿಯಮಾತ್ತದಾ ॥೫॥

ತ್ರಿಪುಂಡ್ರೇಣೋಜ್ವಲದ್ವಕ್ತ್ರೋ ರುದ್ರಾಧ್ಯಾಯಜಪಾದರಃ ।
ಶಿವವಿನ್ಯಸ್ತನಯನೋ ಜಗದ್ವಿನ್ಯಸ್ತಮಾನಸಃ ॥೬॥

ಪಾದತ್ರಯೈರಥೋತ್ತಿಷ್ಠನ್ ಸಾಕ್ಷಾದ್ಧರ್ಮಮಯೋ ದ್ವಿಜ ।
ಸಹಸ್ರಮೇಕಂ ವರ್ಷಾಣಾಂ ಜಪನ್ ರುದ್ರಂ ಮಹೇಶ್ವರಂ ॥೭॥

ಪಶ್ಯನ್ನಗ್ರಂ ತಥೈವಾಗ್ರೇ ಗ್ರೀಷ್ಮಸಂತಾಪಿತಾಂಗಕಃ ।
ಪದದ್ವಯೇನ ವರ್ಷಾಣಾಂ ಸಹಸ್ರಂ ವೃಷಭಃ ಸ್ಥಿತಃ ॥೮॥

ಜಪನ್ ರುದ್ರಂ ಮಹಾದೇವಂ ಸಂವೀಕ್ಷ್ಯ ತಪಸಾ ಸ್ಥಿತಃ ।
ಏಕಪಾದೇನ ವೃಷಭಃ ಸ ತದಾಧಿಷ್ಠಿತಸ್ತದಾ ॥೯॥

ರುದ್ರವಿನ್ಯಸ್ತನಯನೋ ರುದ್ರಾಧ್ಯಾಯಜಪಾದರಃ ।
ಸಹಸ್ರಸ್ಯಾಂತಿಮೇ ವರ್ಷೇ ತದಾ ಪ್ರಾದುರ್ಬಭೌ ಹರಃ ॥೧೦॥

ಗಂಭೀರವಾದ ಧ್ವನಿಯಿಂದ ರುದ್ರಸೂಕ್ತವನ್ನು ಹೇಳುತ್ತಾ ಲೋಕಕ್ಷೇಮಕ್ಕಾಗಿ ಶಿವನಲ್ಲೇ ನಟ್ಟಮನಸ್ಸುಳ್ಳವನಾಗಿ ತಪಸ್ಸುಮಾಡಿದನು. ॥೬॥

ಒಂದುಸಾವಿರ ವರ್ಷ ಪೂರ್ತಿಯಾಗಿ ಧರ್ಮವೃಷಭನು ಮೂರು ಕಾಲುಗಳಿಂದಲೇ ನಿಂತು ರುದ್ರಸೂಕ್ತವನ್ನು ಪಠಿಸುತ್ತಾ ಮಹೇಶ್ವರನನ್ನಾರಾಧಿಸಿದನು. ॥೭॥

ಉರಿಬೇಸಿಗೆಯಲ್ಲಿ ಎರಡೇ ಕಾಲುಗಳಿಂದ ನಿಂತು ಆ ಧರ್ಮಪುರುಷನು, ರುದ್ರಸೂಕ್ತವನ್ನು ಪಠಿಸುತ್ತಾ, ಪರಮೇಶ್ವರಲಿಂಗವನ್ನು ನೆಟ್ಟದೃಷ್ಟಿಯಿಂದ ನೋಡುತ್ತಾ, ಮತ್ತೆ ಸಾವಿರ ವರ್ಷಗಳ ವರೆಗೆ ತಪಸ್ಸುಮಾಡಿದನು. ॥೮॥

ಮತ್ತೆ ಸಾವಿರ ವರ್ಷಗಳ ವರೆಗೆ ಒಂದು ಕಾಲಿನಿಂದಲೇ ನಿಂತು ರುದ್ರಾಧ್ಯಾಯವನ್ನು ಜಪಿಸುತ್ತಾ ಪರಶಿವನನ್ನು ಭಕ್ತಿಯಿಂದ ಆರಾಧಿಸಿದನು. ॥೯॥

ಆ ಸಾವಿರ ವರ್ಷಗಳ ಕೊನೆಯಲ್ಲಿ ಶಿವನು ಪರಿವಾರದೊಡನೆಯೂ ಪಾರ್ವತಿಯೊಡನೆಯೂ ಆ ಲಿಂಗದಿಂದಲೇ ಪ್ರತ್ಯಕ್ಷನಾದನು. ॥೧೦॥

ತಲ್ಲಿಂಗಾದಂಬಿಕಾಯುಕ್ತೋ ಗಣಬೃಂದನಿಷೇವಿತಃ ।
ಪ್ರಣಮಂತಂ ಪಾದಪದ್ಮೇ ಸ್ತುವಂತಂ ವೀಕ್ಷ್ಯ ಭಕ್ತಿತಃ ॥೨೧॥

ಪಸ್ಪರ್ಶ ತನ್ಮುಖಾಂಭೋಜಂ ಪೂಷದಂತಹರಸ್ತದಾ ।
ಹರಸಂಸ್ಪರ್ಶನಾದೇವ ಚಂದ್ರೋದಯ ಇವಾಂಬುಧಿಃ ॥೧೨॥

ತರಂಗಮಾಲಾವಿತತೋ ವರ್ಧತೇಽನರ್ಗಲಂ ಯಥಾ ।
ಪ್ರಾಲೇಯಾಚಲಸಂಕಾಶಸ್ತಪಸಾ ಕರ್ಶಿತೋಽಪಿ ಸನ್ ॥೧೩॥

ಅವರ್ಧತ ತದಾ ಧರ್ಮಸ್ತುಷ್ಟುವೇ ಸಾಂಬಮೀಶ್ವರಂ ॥೧೪॥

॥ ಧರ್ಮ ಉವಾಚ ॥

ಪಾಹೀಶಾನ ದಯಾನಿಧಾನ ಜಗತಾಂ ನಾಥಾಧುನಾ ಮಾಂ ಸದಾ
ತ್ರ್ಯಕ್ಷಾಕ್ಷಯ್ಯದೃಶಾ ಕ್ಷಪಾಪತಿಕಲಾಮೌಲೇ ವಿಲೋಕ್ಯಾದರಾತ್ ।
ಮಾಮಾನಂದಯ ನಂದಯ ತ್ರಿಭುವನಂ ಪಾಪೌಘಸಂಘೋಜ್ಝಿತಂ
ತ್ವತ್ಪಾದಾಂಬರುಹೇಕ್ಷಣಂ ಕ್ಷಣಮತೋಪೇಕ್ಷೇ ತಥಾ ನೋ ಕುರು ॥೧೫॥

ಹರ ಶಂಭೋ ಶಶಿಖಂಡಚೂಡ ಭಗವನ್ ಸ್ವಾಮಿನ್ ಮೃಡಾನೀಪತೇ
ತ್ವಾಮೀಡ್ಯಂ ವರವೇದವಾಕ್ಯನಿವಹೈಸ್ತೋತುಂ ಸಮರ್ಥೋಽದ್ಯ ಕಃ ।

ತನ್ನ ಕಾಲಿಗೆ ಬೀಳುತ್ತಲಿರುವ ಧರ್ಮವೃಷಭನನ್ನೆತ್ತಿ ಶಿವನು ಕರುಣೆಯಿಂದ ಅವನ ಮೈಯನ್ನೊಂದುಬಾರಿ ನೇವರಿಸಿದನು. ॥೧೧॥

ಚಂದ್ರೋದಯವಾದೊಡನೆಯೇ, ಸಾಗರವು ಅಲೆಗಳಿಂದುಕ್ಕೇರುವಂತೆ ಆ ವೃಷಭನು ಪರಶಿವನ ಕೈಸ್ಪರ್ಶವಾದೊಡನೆ ತಪಸ್ಸಿನಿಂದ ಕೃಶವಾಗಿದ್ದರೂ ಅತಿ ಸಂತಸದಿಂದ ಉಬ್ಬಿ ಆ ದೇವನನ್ನು ಹೀಗೆ ಸ್ತುತಿಸಲಾರಂಭಿಸಿದನು.॥೧೨-೧೩-೧೪॥

ದಯಾನಿಧಿಯೂ, ಜಗದೀಶ್ವರನೂ, ಚಂದ್ರಶೇಖರನೂ ಆದ ಪರಮೇಶ್ವರನೇ, ನನ್ನನ್ನು ಕರುಣಾದೃಷ್ಟಿಯಿಂದ ನೋಡಿ ಆನಂದಗೊಳಿಸು. ಮೂರು ಲೋಕಗಳನ್ನೂ ಸಹ ಪಾಪರಹಿತವಾದದ್ದನ್ನಾಗಿ ಧರ್ಮದಿಂದ ತುಂಬಿರುವಂತೆ ಮಾಡು. ನಿನಗೆ ನಮಸ್ಕಾರವು. ॥೧೫॥

ಓ ಪಾರ್ವತೀಪ್ರಿಯನಾದ ಭಗವಂತನೇ, ವೇದವಾಕ್ಯಗಳಿಂದ ಸ್ತುತಿಸಲ್ಪಡುವ ನಿನ್ನನ್ನು ಸ್ತುತಿಸಲು ಸಮರ್ಥನಾರು? ಆದುದರಿಂದ ನಾನು ಪಶುವಿನ

ಸ್ತೋಷ್ಯೇ ತ್ವಾಂ ಪಶುಭಾವತಃ ಪಶುಪತೇ ಭಕ್ತ್ಯೈವ ಮುಕ್ತ್ಯೈದರೋ
ಬದ್ಧಂ ಮೋಚಯ ಸಂಸೃತೇರಘಚಯೈರ್ಜಾನೇ ನ ಕಿಂಚಿತ್ಪ್ರಭೋ॥೧೬॥

ಭವಹರ ಭುವನಾಕೃತೇ ಮಹೇಶ
ತ್ರಿದಶವರೋತ್ತಮ ದೇವಸಾರ್ವಭೌಮ ।
ತವ ಭರವಹನೇ ಸಮರ್ಥಮೀಶ
ತ್ರಿಭುವನಧಾಮಭರಂ ಯಥಾ ವಹೇಯಂ ॥೧೭॥

ವಿತರ ಬಲವರಂ ಬಲಪ್ರಮಥನ
ಪ್ರಮಥನಾಥ ಮಹೇಶ ದೀನನಾಥ ।
ಅವ ಶಿವ ಸದಯಂ ಉಮಾಸನಾಥ
ಬಲಮೈಶಪ್ರದ ದೇಹಿ ಮೇ ತನೂಷು ॥೧೮॥

॥ ಸೂತ ಉವಾಚ ॥

ತತ್ಸ್ತುತ್ಯಾ ತುಷ್ಟಹೃದಯೋ ಮಹೇಶಾನ ಉವಾಚ ತಂ ।
ಸಂವೀಕ್ಷ್ಯ ವೃಷಭಂ ಚಾಗ್ರೇ ಯುಗಪಾದೈರ್ವ್ಯವಸ್ಥಿತಂ । ॥೧೯॥

ರೂಪವನ್ನು ಧರಿಸಿ ಭಕ್ತಿಯ ಮೂಲಕ ಮುಕ್ತಿಯನ್ನು ಪಡೆಯಲೋಸುಗ ನಿನ್ನನ್ನು ಸ್ತುತಿಸುವೆನು. ನನಗೇನೂ ತಿಳಿಯದು. ಪ್ರಪಂಚದ ಮಹಾಪಾಪಗಳಿಂದ ಸುತ್ತುವರಿಯಲ್ಪಟ್ಟ ನನ್ನನ್ನು ಬಿಡಿಸಿ ರಕ್ಷಿಸು. ||೧೬||

ಜಗನ್ಮಯನೂ, ದೇವದೇವೋತ್ತಮನೂ, ದೇವಚಕ್ರವರ್ತಿಯೂ ಆದ ಓ ಪರಶಿವನೇ, ನಿನ್ನ ಭಾರವನ್ನೂ ಪ್ರಪಂಚಭಾರವನ್ನೂ ವಹಿಸಲು ಸಮರ್ಥನಾಗುವಂತೆ ನನ್ನನ್ನು ಕರುಣೆಯಿಂದ ಅನುಗ್ರಹಿಸು. ||೧೭||

ದುಷ್ಟರ ಬಲವನ್ನು ಇಳಿಸಿ ದೀನರಿಗೆ ಬಲವನ್ನು ಕೊಡುವ ಓ ಪರಮೇಶ್ವರನೇ, ದಯೆಯಿಂದ ನನ್ನನ್ನು ರಕ್ಷಿಸು, ನನ್ನ ಶರೀರಕ್ಕೆ ಬಲವನ್ನನುಗ್ರಹಿಸು. ಸರ್ವಶಕ್ತಿಯನ್ನೂ ನನಗೆ ನೀಡು. ||೧೮||

ಧರ್ಮವೃಷಭನ ಈ ಸ್ತುತಿಗೆ ಮೆಚ್ಚಿ ಶಿವನು ಎರಡು ಕಾಲುಗಳಲ್ಲೇ ನಿಂತು ಅವನನ್ನು ನೋಡಿ ಹೀಗೆಂದನು. ||೧೯||

ವರಂ ವರಯ ಭದ್ರಂ ತೇ ಧರ್ಮ ರುದ್ರಜಪಾದರ ।
ತವಾದೇಯಂ ನ ಮೇ ಕಿಂಚಿನ್ಮಮ ಭಕ್ತ್ಯಾ ತಪಸ್ಯಯಾ ॥೨೦॥

ಇತ್ಯುಕ್ತೋ ದೇವದೇವೇನ ಪ್ರಾಹ ಧರ್ಮೋ ಮಹೇಶ್ವರಂ ॥೨೧॥

॥ ವೃಷಭ ಉವಾಚ ॥

ತವ ಭಕ್ತಿಂ ಸ್ಥಿರಾಂ ಶಂಭೋ ಯಾಚೇಽಹಂ ಸರ್ವಕಾಮದಂ ।
ನಾನ್ಯಂ ವೃಣೇ ಮಹಾದೇವ ತವೋದ್ವಾಹೇ ಸಮರ್ಥತಾಂ ॥೨೨॥

ದೇಹಿ ದೇವ ವಿರೂಪಾಕ್ಷ ತ್ರಿಲೋಕಜಠರ ಪ್ರಭೋ ।
ತ್ವತ್ಸನ್ನಿಧಾವೇವ ರತಿರ್ಮಮಾಸ್ತು ಹರ ಶಂಕರ ॥೨೩॥

॥ ಸ್ಕಂದ ಉವಾಚ ॥

ಇತ್ಯುಕ್ತಂ ವೃಷವಚನಂ ನಿಶಮ್ಯ ದೇವೋ
ದೇವಾನಾಂ ಪ್ರಮುಖಮಥಾಜುಹಾವ ॥೨೪॥

ಎಲೈ ಧರ್ಮನೇ, ನಿನಗೆ ಬೇಕಾದ ವರವನ್ನು ಕೇಳು. ನಿನ್ನ ತಪಸ್ಸಿಗೆ ಮೆಚ್ಚಿರುವೆನು. ಕೇಳಿದ ವರವನ್ನು ಕೊಡುವೆನು. ॥೨೦॥

ಮಹಾದೇವನ ಈ ಮಾತನ್ನು ಕೇಳಿ ಧರ್ಮವೃಷಭನು ಹೀಗೆ ಪ್ರಾರ್ಥಿಸಿದನು. ॥೨೧॥

ಓ ಮಹಾದೇವನೇ, ನಿನ್ನ ಭಕ್ತಿಯು ನನ್ನಲ್ಲಿ ಸ್ಥಿರವಾಗಿರಲಿ. ನಿನ್ನನ್ನು ಹೊರುವ ಸಾಮರ್ಥ್ಯವು ನನಗುಂಟಾಗಲಿ. ನನಗೆ ಇನ್ನಾವ ವರವೂ ಬೇಡ. ನಿನ್ನ ಭಕ್ತಿಯೊಂದರಿಂದ ಎಲ್ಲವೂ ನನಗೆ ಸಿದ್ಧಿಸುವುವು. ॥೨೨॥

ಮೂರು ಲೋಕಗಳನ್ನೂ ಹೊಟ್ಟೆಯಲ್ಲಿಟ್ಟುಕೊಂಡಿರುವ ಓ ದೇವನೇ, ನಿನ್ನ ಸನ್ನಿಧಿಯಲ್ಲೇ ನನಗೆ ವಾಸವೂ ಪ್ರೀತಿಯೂ ಸದಾ ಲಭಿಸಲಿ. ॥೨೩॥

ಧರ್ಮವೃಷಭನ ಆ ಮಾತನ್ನು ಕೇಳಿ ಪರಶಿವನು ಆಗ ದೇವೇಂದ್ರನನ್ನು ತನ್ನಲ್ಲಿಗೆ ಕರೆಯಿಸಿದನು. ॥೨೪॥

ಧೇನೂನಾಂ ಗಣಪುಂಗವೋತ್ತಮಗಣೇ ನಂದಾಂ ಸುಭದ್ರಾಂ ತಥಾ
ಕಾಮಾಖ್ಯಾಂ ಸುರಭಿಂ ಚ ಪುಣ್ಯನಿವಹಾಂ ದೇವೀಂ ಸುನಂದಾಮಪಿ ।
ತಸ್ಯೋದ್ವಾಹಯದೀಶ್ವರಃ ಸುರವರ್ಯೈಸ್ತೂರ್ಯೌಘಸಂಘೈಸ್ತದಾ
ಧರ್ಮೇಂದ್ರಾಯ ವೃಷಾಯ ಪಾವನಮುಮಾಕಾಂತೋ ವರಂ ತದ್ದದೌ ॥೨೫॥

॥ ಈಶ್ವರ ಉವಾಚ ॥

ಯೋ ಮೇ ಮಂದಪ್ರದೋಷೇ ವೃಷವೃಷಣಕರಸ್ತುಂಗಲಿಂಗಂ ಹಿ ಶೃಂಗೇ
ಸಂಪಶ್ಯೇತ್ಸ ತು ಮಂದಪಾಪನಿಚಯಃ ಪುಣ್ಯಾದ್ರಿಸಂಘೈರ್ಯುತಃ ।
ಕಿಂ ತಸ್ಯಾವಭೃಥಶ್ರಮೈರ್ವರಮಹಾದಾನೈಶ್ಚ ದೀನಾವನೈಃ
ಧರ್ಮಸ್ಯಾಶ್ರಯತಃ ಸದೈವ ಹಿ ಸಮೋ ಹೃತ್ಪಂಕಜೇ ಸಂಸ್ಥಿತಃ ॥೨೬॥

॥ ಸ್ಕಂದ ಉವಾಚ ॥

ಇತ್ಥಂ ಧರ್ಮವರೇ ವರಂ ಸುಬಹುಶೋ ದತ್ವಾ ತಿರೋಧತ್ತ ವೈ
ತಸ್ಮಿನ್ ಲಿಂಗವರೇ ಪ್ರತರ್ದನಮುನಿಸ್ಸಂಪೂಜಿತೇ ಕಾಮದೇ ।

ಆ ಇಂದ್ರನಿಂದ ನಂದೆ, ಸುಭದ್ರೆ, ಸುನಂದೆ, ಕಾಮಧೇನು ಮೊದಲಾದ ಪವಿತ್ರವಾದ ದೇವಧೇನುಗಳನ್ನು ತರಿಸಿ ಆ ಧರ್ಮವೃಷನಿಗೆ ಕೊಟ್ಟು ಮದುವೆ ಮಾಡಿಸಿದನು. ಆಗ ದೇವತೆಗಳು ಮಂಗಳವಾದ್ಯಗಳನ್ನು ಬಾರಿಸಿದರು. ಆಮೇಲೆ ಶಿವನು ಆ ಧರ್ಮವೃಷಭನಿಗೆ ಹೀಗೆ ವರವನ್ನು ಕೊಟ್ಟನು. ||೨೫||

ಶನಿಪ್ರದೋಷದ ದಿನದಲ್ಲಿ ನನ್ನೆದುರಿನಲ್ಲಿರುವ ನಿನ್ನ ವೃಷಣಕ್ಕೆ ಕೈಯಿಟ್ಟು ನಿನ್ನ ಕೋಡುಗಳ ಮಧ್ಯಭಾಗದಲ್ಲಿ ಯಾವನು ನನ್ನನ್ನು ನೋಡುವನೋ ಅವನ ಪಾಪವೆಲ್ಲವೂ ನಾಶವಾಗುವುದು, ಧರ್ಮ ವೃದ್ಧಿಯಾಗುವುದು. ಅವನಿಗೆ ಇನ್ನಾವ ಯಾಗ-ದಾನ ಮೊದಲಾದ ಧರ್ಮಕಾರ್ಯಗಳ ಅವಶ್ಯಕತೆಯೂ ಇರುವುದಿಲ್ಲ. ಅಂತಹವನು ನನಗೆ ಪ್ರಿಯಭಕ್ತನಾಗುವನು. ಎಂದು ಶಂಕರನು ಧರ್ಮವೃಷಭನಿಗೆ ಅಭಯವಚನವನ್ನಿತ್ತನು. ||೨೬||

ಹೀಗೆ ವರವನ್ನು ಕೊಟ್ಟು ಶಿವನು ಅಲ್ಲಿಯೇ ಅಂತರ್ಧಾನನಾದನು ಧರ್ಮನು ಪ್ರತರ್ದನಮುನಿಯು ಪೂಜಿಸಿದಂತಹ ಆ ಗೋಮುಕ್ತೇಶ್ವರನ ಸನ್ನಿಧಿಯಲ್ಲಿಯೇ

ಧರ್ಮೋಽಪಿ ಸ್ಥಿತ ಏವ ಸನ್ನಿಧಿವರೇ ಉದ್ವಾಹ್ಯ ಧೇನೂಗಣಂ
ದೃಷ್ಟ್ವಾ ಲಿಂಗವರೇಕ್ಷಣೇನ ಪರಮಾನಂದೋಲ್ಲಸದ್ಭಕ್ತಿತಃ ॥೨೭॥

ಇತಿ ಶಿವರಹಸ್ಯೇ ಚತುರ್ಥಾಂಶೇ ತ್ರಯಸ್ತ್ರಿಂಶತ್ತಮೋಽಧ್ಯಾಯಃ

ನೆಲಸಿದನು. ಶಿವನೆದುರಿನಲ್ಲಿರುವ ಧರ್ಮವೃಷಭನ ವೃಷಣವನ್ನು ಮುಟ್ಟಿ ಕೋಡುಗಳ ನಡುವಿನಲ್ಲಿ ಶಿವಲಿಂಗವನ್ನು ದರ್ಶನಮಾಡಿದರೆ ಮುಕ್ತಿಯು ಲಭಿಸುವುದು ಎಂಬುದು ಆಗ ಎಲ್ಲರಿಗೂ ತಿಳಿಯಿತು. ಹೀಗೆ ದೇವಧೇನುಗಳ ಪತಿಯಾದ ವೃಷಭರಾಜನು ಶಿವದರ್ಶನಾನಂದವನ್ನನುಭವಿಸುತ್ತಾ ಸುಖದಿಂದ ಕಾಲಕಳೆದನು. ॥೨೭॥

ಇಲ್ಲಿಗೆ ಶ್ರೀಶಿವರಹಸ್ಯದ ಚತುರ್ಥಾಂಶದಲ್ಲಿ ಮೂವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀಶಿವಾಯ ನಮಃ ॥

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಚತುಸ್ತ್ರಿಂಶತ್ತಮೋಽಧ್ಯಾಯಃ

॥ ಸ್ಕಂದ ಉವಾಚ ॥

ವರುಣೋಽಪಿ ಪುರಾ ಕಣ್ವಶಪ್ತೋ ಜಲರುಜಾರ್ದಿತಃ ।
ಔದರೇಣ ಮಹಾದೇವಂ ಭಸ್ಮರುದ್ರಾಕ್ಷಧೃಕ್ಪುರಾ ॥೧॥

ಶ್ರೀಶೈಲೇಶಂ ಸಮಾರಾಧ್ಯ ಸ್ತುತ್ವಾ ಮುಕ್ತಶ್ಚ ರೋಗತಃ ॥೨॥

॥ ವರುಣ ಉವಾಚ ॥

ಅಶೇಷಸುರತಾಮದಪ್ರಭವನಾಶನಾಶೀವಿಷಾ
ವಿಶೇಷಗರಭೂಷಣಂ ಉರಗಕಂಠಹಾರದ್ಯುತಿಂ ।
ಉಷಃಕರಣಕಾರಣಂ ವೃಷವರಾಧಿಸಂರೋಹಣಂ
ವಿಷಾಣವೃಷಪೂಜಿತಂ ವಪುಸುಶೋಭಿಕಾಂತಾರ್ಧಕಂ ॥೩॥

ಮೂವತ್ತನಾಲ್ಕನೆಯ ಅಧ್ಯಾಯ

ಎಲೈ ಜೈಗೀಷವ್ಯನೇ, ಹಿಂದೆ ವರುಣನಿಗೆ ಕಣ್ವಮುನಿಯ ಶಾಪದಿಂದ ಜಲೋದರ ರೋಗವು ಬಂದಿತು. ಆಗ ಅವನು ಶ್ರೀಶೈಲೇಶ್ವರನನ್ನು ಹೀಗೆ ಸ್ತುತಿಸಿ ರೋಗದಿಂದ ಬಿಡಲ್ಪಟ್ಟು ಕೊನೆಗೆ ಆರೋಗ್ಯವಂತನಾದನು. ॥೧-೨॥

" ಮಹಾದೇವನೇ, ನೀನು ದೇವತೆಗಳೆಲ್ಲರ ಬಲವನ್ನು ಮುರಿದು ಕಾಲಕೂಟ ವಿಷವನ್ನು ಪಾನಮಾಡಿದವನೂ, ನಾಗಭೂಷಣನೂ, ಸೂರ್ಯನೇ ಮೊದಲಾದ ತೇಜಸ್ಸುಗಳಿಗೆ ಕಾರಣವಾದ ಮಹಾತೇಜಸ್ವಿಯೂ, ವೃಷಭವಾಹನನೂ, ಎಡಶರೀರ ದಲ್ಲಿ ಕಾಂತೆಯನ್ನು ಧರಿಸಿದವನೂ ಆಗಿರುವೆ. ಇಂಥಹ ನಿನ್ನನ್ನು ಭಜಿಸುವೆನು. ॥೩॥

ಏಕೋಽದ್ವಿತೀಯಃ ಶಿವ ಏವ ಕರ್ತಾ
ದೇವಸ್ತುರೀಯಃ ಪ್ರಥಮಶ್ಚತುರ್ಥಃ ।
ಸನಾತನೋಽವ್ಯಕ್ತಗತಿಃ ಪರಾತ್ಪರೋ
ಧ್ಯೇಯಃ ಪರಿತ್ಯಜ್ಯ ಸಮಸ್ತಮನ್ಯತ್ ॥೪॥

ಅಗ್ನಿಶ್ಚ ಭೃಗುಶಾಪೇನ ಸರ್ವಭಕ್ಷೋ ಬಭೂವ ಹ ।
ತತ್ಪಾಪಪರಿಹಾರಾಯ ಸೋಮಭೂಧರನಾಯಕಂ ॥೫॥

ಕರುಣಾತರಣಿಂ ಗತ್ವಾ ಶರಣಂ ನೋಽಚಿತಸ್ತ್ವಸ್ಯೈಃ ॥೬॥

॥ ಅಗ್ನಿರುವಾಚ ॥

ಅಂಬಾಮುಖಾಂಭೋಜವಿಕಾಸಿಭಾನುಂ
ಇಭೇಂದ್ರತಾರಾಸುತ ಹರ್ಷನೇತ್ರಂ ।
ಅಂಭೋಜಜಾತೋತ್ತಮಮೌಳಿಪಾಣಿ
ಮಂಭೋಜನೇತ್ರಾರ್ಚಿತಪಾದಪದ್ಮಂ ॥೭॥

ಶಿವನು ಓರ್ವನೇ ಜಗತ್ಕರ್ತನು, ಅವನೇ ಮೊದಲನೆಯವನು ಮತ್ತು ಕೊನೆಯವನು. ಅವನ ಹೊರತು ಯಾರೂ ಬೇರೆ ಇಲ್ಲ. ಸರ್ವೋತ್ತಮನು, ಅನಾದಿಪುರುಷನು, ಇಂದ್ರಿಯಗಳಿಗೆ ಅಗೋಚರನು, ಎಲ್ಲವನ್ನೂ ಬಿಟ್ಟು ಅವನೋರ್ವನನ್ನೇ ಧ್ಯಾನಿಸಬೇಕು. '' ಇದೇ ವರುಣಕೃತಸ್ತುತಿ. ॥೪॥

ಅಗ್ನಿಯೂ ಸಹ ಭೃಗುಮುನಿಯ ಶಾಪದಿಂದ ನಿಂದ್ಯವಾದ ಮತ್ತು ಅನಿಂದ್ಯವಾದುದೆಲ್ಲವನ್ನೂ ಭಕ್ಷಿಸುವವನಾದನು. ಆ ಪಾಪಪರಿಹಾರಕ್ಕೋಸುಗ ಅಗ್ನಿಯು ಪರಮೇಶ್ವರನನ್ನು ಅರ್ಚಿಸಿ ಹೀಗೆ ಸ್ತುತಿಸಿ ಪರಿಶುದ್ಧನಾದನು. ॥೫-೬॥

'' ಜಗನ್ಮಾತೆಯಾದ ಗೌರಿಯ ಮುಖಕಮಲವನ್ನರಳಿಸುವ ಸೂರ್ಯನೂ, ಗಜಾನನಷಣ್ಮುಖರ ಪ್ರಿಯ ಜನಕನೂ, ಚಂದ್ರಶೇಖರನೂ, ಕಮಲಾಕ್ಷನಿಂದ ಅರ್ಚಿಸಲ್ಪಡುವವನೂ ಆದ ಪರಶಿವನನ್ನು ಭಜಿಸುವೆನು. ॥೭॥

ಯಸ್ಮಾನ್ಮಹೇಶಾದ್ಧರಿಧಾತೃರುದ್ರ
ದೇವೇಂದ್ರದೇವಾ ಮುನಯಃ ಪ್ರಸೂತಾಃ ।
ಸ ವ್ಯೋಮಕೇಶೋಽಖಿಲಕೋಶಮೂರ್ತಿಃ
ಶಂಭುಸ್ಸದಾನಂದಘನೋ ಮಹೇಶಃ ॥೮॥

ಶ್ರೀಶೂಲಪಾಣಿಚರಣಾರ್ಚನಜಾತಪುಣ್ಯೈಃ
ವಾಣೀಪತಿತ್ವಮರವಿಂದಗತಾಸುಜಾನೇಃ ।
ಪದೇ ಪದೇ ಮೇ ನ ಭವೇನ್ಮನಃ ಪದೇ
ಕಿಂಚಾತ್ಮಭೋಗೇಷು ನ ಸಜ್ಯತೇ ಸದಾ ॥೯॥

ಅರ್ವಸಪ್ತಕವಹಾರ್ಣವಗರ್ವಾ
ಪಾರಹರ್ಷಹರಿಣಾಮಲನೇತ್ರಂ ।
ಶಂಬರಾಂಬರತನೋಃ ಸುಲಾಂಛನೋ
ದ್ಭಾಸಿನೇತ್ರಸುಲಲಾಮಮುಪಾಸೇ ॥೧೦॥

ವ್ಯಾಲಮಾಲಗರನೀಲಶೂಲಧೃಕ್
ಕಾಲಕಾಲಮಬಲಾರ್ಧಕಕಾಯಂ ।

ಪರಮೇಶ್ವರನಿಂದಲೇ ಹರಿ, ಬ್ರಹ್ಮ, ರುದ್ರ, ದೇವೇಂದ್ರ ಇವರೇ ಮೊದಲಾದ ದೇವತೆಗಳೂ ಮುನಿಗಳೂ ಜನಿಸುವರು. ಜಗನ್ಮಯನಾದ ದೇವನು ಜನಗಳೆಲ್ಲರ ಹೃದಯದಲ್ಲಿ ನೆಲಸಿರುವನು. ಆನಂದಸ್ವರೂಪನಾದ ಪರಮಾತ್ಮನವನು. ॥೮॥

ಶಿವನನ್ನರ್ಚಿಸಿದ ಪುಣ್ಯರಾಶಿಗಳಿಂದ ಬ್ರಹ್ಮನು ವಾಣೀಪತಿಯಾದನು. ವಿಷ್ಣುವು ಲಕ್ಷ್ಮೀಪತಿಯಾದನು. ಅಂತಹ ಪರಮಾತ್ಮನನ್ನು ಚಿಂತಿಸದೇ ನನ್ನ ಮನವು ಪ್ರಪಂಚದ ಅಸ್ಥಿರವಾದ ವಿಷಯಗಳಲ್ಲೇ ಪದೇ ಪದೇ ಆಸಕ್ತವಾಗುವುದು. ॥೯॥

ಏಳು ಕುದುರೆಗಳ ರಥದ ಮೇಲೆ ಹೋಗುವ ಸೂರ್ಯನನ್ನೂ, ಬಡಬಾಗ್ನಿಯನ್ನೂ, ಚಂದ್ರನನ್ನೂ ನೇತ್ರವನ್ನಾಗಿ ಹೊಂದಿರುವ ಪರಮೇಶ್ವರನನ್ನು ನಾನು ಸದಾ ಧ್ಯಾನಿಸುವೆನು. ॥೧೦॥

ಸರ್ಪವನ್ನು ಹಾರವಾಗಿ ಧರಿಸಿರುವವನೂ, ನೀಲಕಂಠನೂ, ತ್ರಿಶೂಲ ಧಾರಿಯೂ, ಯಮನನ್ನು ಜಯಿಸಿದ ಮೃತ್ಯುಂಜಯನೂ, ಅರ್ಧ ಶರೀರದಲ್ಲಿ

ಫಾಲಮೂಲನಿಹಿತಾನಲಕೀಲ
ಜ್ವಾಲಯಾ ಹುತಪುರಾದಿಕಕಾಯಂ ॥೧೧॥

ವಾಯುರ್ಮಾತಂಗಶಾಪೇನ ನಿರ್ವೀರ್ಯೋ ಹ್ಯಭವತ್ಪುರಾ ।
ಭಸ್ಮಸಪ್ತಕಮಂತ್ರೇಣ ಸಮುದ್ಧೂಲ್ಯಾಂಗಮಾದರಾತ್ ॥೧೨॥

ಸ ಸಪ್ತವಾಯುಭಿಸ್ಸಾರ್ಧಂ ತ್ರ್ಯಂಬಕೇ ಗೌತಮೀತಟೇ ।
ಸ್ತುವನ್ನುವಾಸ ದೇವಂ ತಂ ತದಾ ಮುಕ್ತೋಽಭವತ್ತ್ವಘಾತ್ ॥೧೩॥

ಪರಾವರಶರಾವರೀಕೃತಮಹಾಬ್ಧಿಗಂಗಾರಯೋ
ಜ್ವಲಚ್ಛಶಿಜಟಾಕುಟೀನಿಧೃತಭಸ್ಮಪುಂಡ್ರಾಂಕಿತ ।
ಮಹೋಕ್ಷವರವಾಹನ ವಿಧೃತರತ್ನರುದ್ರಾಕ್ಷಜ
ಶ್ರುತೀನಯನಹಾರಧೃಗ್ವರಕಪಾಲಮಾಲಾಧರ ॥೧೪॥

॥ ವಾಯುರುವಾಚ ॥

ಅಂಗಜಭಂಗತುರಂಗರಥಾಂಗಭುಜಂಗಮಹಾಂಗಾಂಬರಚರ್ಮ ।
ಶತಾಂಗವಿಹಂಗಪತಂಗನಿಷಂಗಕುರಂಗಮಹಾಂಗಪುರಸ್ಫುಲಿಂಗ ॥೧೫॥

ಗಿರಿಜೆಯನ್ನುಳ್ಳವನೂ, ಹಣೆಯ ಉರಿಗಣ್ಣಿನಿಂದ ಮನ್ಮಥ ತ್ರಿಪುರರನ್ನು ದಹಿಸಿದವನೂ ಆದ ಶಿವನನ್ನು ಭಜಿಸುವೆನು ಎಂದು ಭಜಿಸಿ ಅಗ್ನಿಯು ಶಿವಪ್ರೀತಿಯನ್ನು ಗಳಿಸಿದನು. ॥೧೧॥

ಹಿಂದೆ ವಾಯುವು ಮತಂಗಮುನಿಯ ಶಾಪದಿಂದ ಬಲಹೀನನಾದನು. ಆಗ ಅವನು ಗೌತಮೀತೀರದಲ್ಲಿ ಭಸ್ಮರುದ್ರಾಕ್ಷಧಾರಿಯಾಗಿ ತ್ರ್ಯಂಬಕೇಶ್ವರನನ್ನು ಆರಾಧಿಸಿ ಹೀಗೆ ಸ್ತುತಿಸಿ ಆ ಶಾಪದಿಂದ ಬಿಡುಗಡೆ ಹೊಂದಿದನು. ॥೧೨-೧೩॥

"ನಾರಾಯಣನನ್ನು ಬಾಣವಾಗಿ ಹಿಡಿದವನೂ, ಜಟೆಯಲ್ಲಿ ಗಂಗೆಯನ್ನು ಬಂಧಿಸಿಟ್ಟುಕೊಂಡಿರುವವನೂ, ಭಸ್ಮರುದ್ರಾಕ್ಷಿಶೋಭಿತನೂ, ಸರ್ಪವನ್ನು ಹಾರವಾಗಿ ಧರಿಸಿದವನೂ, ಬ್ರಹ್ಮಕಪಾಲಧಾರಿಯೂ ಆದ ಓ ದೇವನೇ, ರಕ್ಷಿಸು. ॥೧೪॥

ಮನ್ಮಥವೈರಿಯಾದ, ವೇದಗಳೇ ರಥದ ಕುದುರೆಯಾಗುಳ್ಳ, ನಾಗಭೂಷಣನಾದ, ಗಜಚರ್ಮಧಾರಿಯಾದ, ಸೂರ್ಯಚಂದ್ರರೇ ರಥಚಕ್ರಗಳಾಗುಳ್ಳ, ಹರಿಯೇ ಬಾಣವಾಗುಳ್ಳ, ಮೃಗಧರನಾದ ಪರಶಿವನೇ, ನನ್ನನ್ನು ರಕ್ಷಿಸು. ॥೧೫॥

ಆಗಮಚಂದ್ರಾರ್ಧವಿಹಗಾಧಿಪಶರಧರಸಾಗರ ಉರಗೋತ್ತಮ
ಗಿರಿಭೂಮಿವಿಧಿಗ್ರಹನಾಯಕ ಸಂಭೃತಿಸಂಹೃತಗರ್ವ
ಪುರತ್ರಿತಯ ಪರಿಪಾಹಿ ದಯಾರಸಯಾ
ಸ್ವದೃಶಾ ಭವಭವತಾರಕ ಶರಣಾಯ ॥೧೬॥

ಯಮೋಽಪಿ ಮಾಂಡುಶಾಪೇನ ಶೂದ್ರೋ ಭೂತ್ವಾಽಪಿ ಯೋಗಿವತ್।
ಗೋಕರ್ಣೇಶಂ ಸಮಾರಾಧ್ಯ ಭಸ್ಮರುದ್ರಾಕ್ಷಭೂಷಣಃ ॥೧೭॥

ತುಷ್ಟಾವ ಕಷ್ಟನಿರ್ಮುಕ್ತ್ಯೈ ಶಿಪಿವಿಷ್ಟಂ ಸಮರ್ಚಯ ॥೧೮॥

॥ ಯಮ ಉವಾಚ ॥

ಭವ ಭರ್ಗ ಭಗಾಕ್ಷಿಹರಾವ್ಯಯ ಮಧುಮಥಸೂದನಪೂಜಿತಪಾದ ।
ದಮಿತಯಮ ಸ್ಮರಗಜಹರ ಶಂಕರ ಹರ ಗಂಗಾಧರ ಪರಿಪಾಹಿ ॥೧೯॥

ಜಟೆಯಲ್ಲಿ ಚಂದ್ರಕಲೆಯನ್ನು ಧರಿಸಿರುವವನೂ, ನಾರಾಯಣನೇ ಬಾಣವಾಗುಳ್ಳವನೂ, ಸಮುದ್ರವೇ ಬತ್ತಳಿಕೆಯಾಗುಳ್ಳವನೂ, ಆದಿಶೇಷನೇ ಧನುಸ್ಸಿನ ಮೌರ್ವಿಯಾಗುಳ್ಳವನೂ, ಮೇರುವೇ ಧನುಸ್ಸಾಗುಳ್ಳವನೂ, ಭೂಮಿಯೇ ರಥವಾಗುಳ್ಳವನೂ ಆಗಿ ತ್ರಿಪುರಾಸುರರನ್ನು ಸಂಹರಿಸಿದ ಪರಮೇಶ್ವರನೇ, ಕರುಣಾ ದೃಷ್ಟಿಯಿಂದ ನನ್ನನ್ನು ನೋಡು, ನನ್ನನ್ನು ರಕ್ಷಿಸು ಎಂದು ಪ್ರಾರ್ಥಿಸಿ ವಾಯುವು ಪಾರಾದನು. ॥೧೬॥

ಯಮನೂ ಸಹ ಹಿಂದೆ ಮಾಂಡುಮುನಿಯ ಶಾಪದಿಂದ ಶೂದ್ರನಾದನು. ನೀಚಜಾತಿಯವನಾದರೂ ಆ ಯಮನು ಭಸ್ಮರುದ್ರಾಕ್ಷಿಧಾರಿಯಾಗಿ ಗೋಕರ್ಣೇಶ್ವರನನ್ನು ಆರಾಧಿಸಿ ಹೀಗೆ ಸ್ತುತಿಸಿ ಶಾಪದಿಂದ ಬಿಡುಗಡೆ ಹೊಂದಿದನು.॥೧೭-೧೮॥

ಜಗನ್ಮಯನಾದ, ಪಾಪನಾಶಕನಾದ, ಭಗನೆಂಬ ಸೂರ್ಯನ ಕಣ್ಣುಗಳನ್ನು ಕಿತ್ತಂತಹ ಮಹಾದೇವನೇ, ಹರಿಯಿಂದರ್ಚಿಸಲ್ಪಡುವ, ಯಮನನ್ನು ಶಿಕ್ಷಿಸಿದ, ಮನ್ಮಥನನ್ನು ದಹಿಸಿದ, ಗಜಾಸುರನನ್ನು ಸಂಹರಿಸಿದ, ಗಂಗೆಯನ್ನು ಧರಿಸಿರುವ, ಸುಖಕರನಾದ ಪರಮೇಶ್ವರನೇ, ನನ್ನನ್ನು ಪಾಲಿಸು. ॥೧೯॥

ವರಗಿರಿವರಶಯ ಪುರಹರ ಭವಹರ ಪ್ರಥಿತಭವಾರ್ಣವಬಡಬಾಗ್ನೇ ।
ನಿಟಿಲವಿಲೋಚನ ಕುಟಿಲಜಟಾಧರ ತಟಿನೀವರಕಲಿತೇಂದುಲಲಾಮ॥೨೦॥

ಉಗ್ರಮಹೋಗ್ರಸಟಾಪಟಲೀಯುತ ಭೀಮಮೃಗೇಂದ್ರಾಜಿನವಸನ ।
ಕರಟೀಕಟಿತಟಪಟಭವಚರ್ಮಜವಸನಾಂತಕ ಪರಿಪಾಹಿ ॥೨೧॥

ಭವಭವದಕ್ಷಸುರಾದ್ಯ ಭವಾಂಗಜವಿಧಿಹರಿನಮಿತಾರುಣಪಾದ ।
ಶಮಿತಾಂತಕ ಹರ ಸ್ಮರಗರಶೋಷಣ ಇಂದುಕಲಾಧರ ಪರಿಪಾಹಿ ॥೨೨॥

ಕುಬೇರೋಽಪಿ ಪುರಾ ದೇವೀಂ ದೇವಾಂಕಸ್ಥಾಂ ವಿಲೋಕ್ಯ ಚ ।
ದುಷ್ಟಾಮಹೃಚ್ಛಲೇನಾಸೀದ್ದೇವ್ಯಾಂ ನೇತ್ರಾರ್ಪಣಕೋಟಿತಃ ॥೨೩॥

ಭವ ಪಾಪೈಕಪಿಂಗಾಕ್ಷ ಇತಿ ಶಪ್ತೋಽಂಬಯಾ ತಯಾ ।
ಪ್ರಣಮ್ಯ ದೇವಂ ಯಕ್ಷೇಶಸ್ತ್ರ್ಯಕ್ಷಂ ವೀಕ್ಷಿತಮನ್ಮಥಂ ॥೨೪॥

ಕೇದಾರೇ ಸಮ್ಯಗಾರಾಧ್ಯ ಸದಾರತನಯಃ ಪುರಾ ।
ದೇವ್ಯಾ ದುರ್ವಾರಶಾಪಾತೋಽಸ್ತುವನ್ಮುಕ್ತೋ ಮಹೇಶ್ವರಂ ॥೨೫॥

ಕೈಲಾಸದಲ್ಲಿ ವಾಸಿಸುವವನೂ, ತ್ರಿಪುರವೈರಿಯೂ, ಸಂಸಾರಸಾಗರಕ್ಕೆ ಬಡಬಾಗ್ನಿಯಂತಿರುವವನೂ, ಮುಕ್ಕಣ್ಣನೂ, ಜಟೆಯಲ್ಲಿ ಚಂದ್ರಕಲೆ ಗಂಗೆಯರನ್ನು ಧರಿಸಿದವನೂ ಆದ ಶಂಕರನೇ ಪಾಲಿಸು. ॥೨೦॥

ಭಯಂಕರವಾದ ಸಿಂಹದ ಚರ್ಮವನ್ನು ಹೊದೆದಿರುವವನೂ, ಆನೆಯ ಚರ್ಮವನ್ನು ಉಡುವವನೂ ಆದ ದೇವನೇ, ನನ್ನನ್ನು ಪಾಲಿಸು. ॥೨೧॥

ಆದಿದೇವನೂ, ಸರ್ವಸಮರ್ಥನೂ, ಬ್ರಹ್ಮಹರಿಗಳಿಂದ ವಂದಿಸಲ್ಪಡುವವನೂ, ಯಮನನ್ನು ಶಿಕ್ಷಿಸಿದವನೂ, ವಿಷಧರನೂ ಆದ ಓ ಚಂದ್ರಶೇಖರ, ನನ್ನನ್ನು ಪಾಲಿಸು. ಎಂದು ಯಮನು ಸ್ತುತಿಸಿ ಶಾಪಮುಕ್ತನಾದನು. ॥೨೨॥

ಹಿಂದೆ ಕುಬೇರನು ಪರಶಿವನ ತೊಡೆಯಮೇಲೆ ಕುಳಿತಿದ್ದ ಸುಂದರಿಯಾದ ಪಾರ್ವತೀದೇವಿಯನ್ನು ನೋಡಿ ಮೋಹಗೊಂಡು ಒಂದು ಕಣ್ಣಿನಿಂದ ಮರೆಯಾಗಿ ಅವಳನ್ನು ಪುನಃ ಪುನಃ ನೋಡಿದನು. ಅದನ್ನು ತಿಳಿದು ದೇವಿಯು "ಎಲೈ ಪಾಪಿಷ್ಠನೇ, ನನ್ನನ್ನು ಕಾಮುಕದೃಷ್ಟಿಯಿಂದ ನೋಡಿದ ನಿನ್ನೊಂದು ಕಣ್ಣು ಮಂಕಾಗಲಿ" ಎಂದು ಶಪಿಸಿದಳು. ॥೨೩॥

ಆಗ ಕುಬೇರನು ಖತಿಗೊಂಡು ಪತ್ನೀಪುತ್ರರೊಡನೆ ಕೇದಾರಕ್ಷೇತ್ರಕ್ಕೆ

|| ಕುಬೇರ ಉವಾಚ ||

ಭುವನಜನಾವನ ದನುತನಯಾಸನವರಪರಿಶೀಲನ
ಅನಲವಿಲೋಚನ ಅವ ಸದಯಂ ।
ವರವರುಣಾಲಯಪೀತಮಹಾಮುನಿತೋಷಣ
ಪನ್ನಗ ಪರಿಪಾಹಿ ||೨೬||

ಅರುಣಾನುಜಪತಿಪೂಜಿತಪಾದ ಪ್ರಕಟಸರೋರುಹಭವವಿನುತ ।
ತರಣಿದ್ಯುತಿಶಶಿನಯನಾಮಲಹರ ಉಕ್ಷಕಕುದ್ಮಗ ಪರಿಪಾಹಿ ||೨೭||

ತುರಗಾಂತಕವಹಶಿಕ್ಷಣಚಣಚರಣಾಂಬುಜ ಶಂಕರ ಉಕ್ಷವಹಾ
ಧ್ವರಶಿಕ್ಷಿತದಕ್ಷಸುಪಕ್ಷ ಅಧೋಕ್ಷಜ ಭಕ್ಷಿತವಿಷ ಪರಿಪಾಹಿ ||೨೮||

ಗಂಧವಹಾಂಗಪತಂಗಭುಜಂಗಧೃತಾಂಬುಧಿ
ಸಂಗತಸೋಮಪ ಅಂಬರ ವರಸಂಹನನ ।
ಪರಿಪಾಹಿ ವಿಭೋ ಕರುಣಾರಸಯಾ
ಸರಸೀರುಹಸನ್ನಿಭದೃಶಾ ||೨೯||

ಬಂದು ಅಲ್ಲಿ ಮನ್ಮಥವೈರಿಯಾದ ಮಹೇಶ್ವರನನ್ನು ಆರಾಧಿಸಿ ಹೀಗೆ ಸ್ತುತಿಸಿ ದೇವಿಯು ಆ ಶಾಪದಿಂದ ಬಿಡುಗಡೆ ಹೊಂದಿದನು. ||೨೪-೨೫||

ಪ್ರಪಂಚವನ್ನು ಪಾಲಿಸುವ, ದುಷ್ಟರನ್ನು ಶಿಕ್ಷಿಸುವ, ಅಗ್ನಿನಯನನಾದ, ಕರುಣಾಸಾಗರನಾದ, ಸಮುದ್ರವನ್ನು ಪಾನಮಾಡಿದ ಮಹಾಮುನಿ ಅಗಸ್ತ್ಯನಿಂದ ಸ್ತುತಿಸಲ್ಪಟ್ಟ, ನಾಗಭೂಷಣನಾದ ಓ ದೇವನೇ, ಪಾಲಿಸು. ||೨೬||

ನಾರಾಯಣನಿಂದ ಪೂಜಿಸಲ್ಪಡುವ, ಬ್ರಹ್ಮನಿಂದ ವಂದಿಸಲ್ಪಡುವ, ಚಂದ್ರ ಸೂರ್ಯ ಅಗ್ನಿಗಳೇ ಕಣ್ಣಾಗುಳ್ಳ, ಪಾಪನಾಶಕನಾದ, ವೃಷಭವಾಹನನಾದ ದೇವನೇ ಪಾಲಿಸು. ||೨೭||

ಮಹಿಷವಾಹನನಾದ ಯಮನನ್ನು ಉಳಿಸಿದ, ಗರ್ವಿಷ್ಠನಾದ ದಕ್ಷಬ್ರಹ್ಮನನ್ನೂ, ಅವನ ಯಾಗವನ್ನೂ ಶಿಕ್ಷಿಸಿದ, ವಿಷವನ್ನು ಕುಡಿದ ನೀಲಕಂಠನಾದ ದೇವನೇ, ನಮ್ಮನ್ನು ಪಾಲಿಸು. ||೨೮||

ಭೂಮಿ, ಜಲ, ವಾಯು, ಚಂದ್ರ, ಆಕಾಶ, ಸೂರ್ಯ, ಅಗ್ನಿ, ದೀಕ್ಷಿತ ಈ

ಭಾರ್ಯಾಂ ಸಂಜ್ಞಾಂ ಪರಿತ್ಯಜ್ಯ ಯದಾ ಛಾಯಾಮನಿಂದಿತಾಂ ।
ತದ್ಭಾರ್ಯಾತ್ಯಾಗಪಾಪೇನ ತದಾ ಶಪ್ತೋ ರವಿಃ ಪುರಾ ॥೩೦॥

ನಿರ್ವೀರ್ಯೋ ಹಿ ತದಾ ತೂರ್ವ್ಯಾಂ ಚಚಾರ ಪ್ರಾಕೃತೋ ಯಥಾ ।
ಕಾಂಚ್ಯಾಮೇಕಾಮ್ರನಾಥಂ ಸ ಸಮಾರಾಧ್ಯೈವ ವತ್ಸರಂ ॥೩೧॥

ಭಸ್ಮತ್ರಿಪುಂಡ್ರರುದ್ರಾಕ್ಷಧರೋ ರುದ್ರಜಪಾದರಃ ।
ಸ್ತುತ್ವಾ ಚೈಕಾಮ್ರನಿಲಯಂ ಚಂಡವೀರ್ಯೋಽಭವದ್ರವಿಃ ॥೩೨॥

॥ ರವಿರುವಾಚ ॥

ಖಂಡಸೋಮಫಣಿಕುಂಡಲಗಂಡಂ ಪಾಣಿಮಂಡಲಲಸದ್ವಿಧಿಮುಂಡಂ ।
ಆಖಂಡಲಸ್ತಂಭಿತಬಾಹುದಂಡಂ ತಂ ಖಂಡಪರಶುಂ ಪ್ರಣಮಾಮ್ಯಖಂಡಂ ॥೩೩॥

ಗಂಗಾತುಂಗತರಂಗರಂಜಿತಮಹಾಜಟಾಭಾರಂ ಕೃಪಾಸಾಗರಂ
ಹಾರಾಹೀಶ್ವರಶಂಕರಂ ಶರಸುರಂ ಮಾರಾರಿಣಂ ಭಾಸುರಂ ।

ಎಂಟು ರೂಪಗಳಿಂದ ಪ್ರಪಂಚವನ್ನು ವ್ಯಾಪಿಸಿರುವ ಓ ದೇವನೇ, ಕರುಣೆಯಿಂದ ನನ್ನನ್ನು ನೋಡು. ॥೨೯॥

ಸೂರ್ಯನಿಗೆ ಇಬ್ಬರು ಹೆಂಡಿರು. ಅವರಲ್ಲೊಬ್ಬಳಾದ ಸಂಜ್ಞಾದೇವಿಯನ್ನು ಬಿಟ್ಟು ಸೂರ್ಯನು ಛಾಯಾದೇವಿಯಲ್ಲೇ ಅನುರಕ್ತನಾದನು. ಅದಕ್ಕಾಗಿ ಸಂಜ್ಞೆಯು ಅವನನ್ನು " ನಿರ್ವೀರ್ಯನಾಗು " ಎಂದು ಶಪಿಸಿದಳು. ಅದರಿಂದವನು ನಪುಂಸಕನಾದನು. ॥೩೦॥

ಆಗ ಅವನು ಕಾಂಚಿಗೆ ಬಂದು ಏಕಾಮ್ರೇಶ್ವರನನ್ನು ಒಂದುವರ್ಷ ಆರಾಧಿಸಿ ಭಸ್ಮರುದ್ರಾಕ್ಷಿಧಾರಿಯಾಗಿ ರುದ್ರಸೂಕ್ತವನ್ನು ಜಪಿಸುತ್ತಾ, ಹೀಗೆ ಸ್ತುತಿಸಿ ಆ ದೇವನ ಅನುಗ್ರಹದಿಂದ ಮಹಾವೀರ್ಯಶಾಲಿಯಾದನು. ॥೩೧-೩೨॥

"ಚಂದ್ರಶೇಖರನೂ, ನಾಗಭೂಷಣನೂ, ಬ್ರಹ್ಮಕಪಾಲಧಾರಿಯೂ, ಇಂದ್ರನ ಕೈಗಳನ್ನು ಬಂಧಿಸಿದವನೂ, ಆದ ಪರಶಿವನನ್ನು ಭಕ್ತಿಯಿಂದ ನಮಸ್ಕರಿಸುವೆನು. ॥೩೩॥

ಜಟೆಯಲ್ಲಿ ಗಂಗೆಯನ್ನು ಬಂಧಿಸಿದವನೂ, ಹಾವನ್ನು ಹಾರವಾಗಿ ಧರಿಸಿದವನೂ, ಮನ್ಮಥನನ್ನು ದಹಿಸಿದವನೂ, ದಯಾಸಾಗರನೂ, ಬ್ರಾಹ್ಮಣೋತ್ತಮ

ವೀರಂ ಭೂಸುರಪೂಜಿತಾಂಘ್ರಿಕಮಲಂ ವಿಸ್ತಾರತಾರಾಧಿಪೋ
ತ್ತುಂಗಪ್ರಮ್ಯಕಲಾಧರಂ ಪುರಹರಂ ತಾರಂ ಭಜೇ ಸ್ವಾಂತರಂ ॥೩೪॥

ಚಂದ್ರೋಽಪಿ ದಕ್ಷಶಾಪೇನ ಯಕ್ಷ್ಮಾಣಂ ಸೋಽಪ್ಯವಿಂದತ ।
ರೋಹಿಣ್ಯಾಂ ಭೋಗಸಂಯುಕ್ತ ಅತ್ರಿಂ ನತ್ವಾ ತದುಕ್ತಿತಃ ॥೩೫॥

ಶ್ರೀಮದ್ದಭ್ರಸಭಾನಾಥಂ ಸಂಪೂಜ್ಯೋಡುಪತಿಸ್ತದಾ ।
ಭಸ್ಮಾಭ್ಯಕ್ತೋ ರುದ್ರಜಾಪೀ ಯಕ್ಷ್ಮಮುಕ್ತೋಽಭವತ್ತದಾ ॥೩೬॥

ದೇವೇನ ಮಾನಿತಸ್ತತ್ರ ಪೂರ್ಣೇ ಪಕ್ಷೇಽಭವತ್ಕಲಾಃ ॥೩೭॥

ಅಂಡಜಾಂಡಜಗತೀಶರಾಯು ತೇ ಚಂಡಶೀತಕಿರಣೈಸ್ತವ ಚಕ್ರೇ ।
ಭೂಮಿಮಂಡಲ ಇದಂ ರಥ ಈಶ ವೇದಮಂಡಲಮಿದಂ ಹರಯಸ್ತೇ॥೩೮॥

ಜ್ಯಾಕುಂಡಲೀಶೋ ಭಗವನ್ ಸುಮೇರು
ಕೋದಂಡಧೃಗ್ಸರಸುಹಾರಕಪುಂಡರೀಕ ।
ಕರಿವರಚರ್ಮವಸಾನ ಶಂಭೋ
ಹೃತ್ಪುಂಡರೀಕವಸತೇ ಕಲಿತತ್ರಿಪುಂಡ್ರ ॥೩೯॥

ರಿಂದ ಪೂಜಿಸಲ್ಪಡುವವನೂ, ತ್ರಿಪುರಾಸುರರನ್ನು ಸಂಹರಿಸಿದವನೂ ಆದ ಚಂದ್ರಶೇಖರನನ್ನು ಹೃದಯದಲ್ಲಿ ಭಜಿಸುವೆನು." ॥೩೪॥

ಮಿಕ್ಕ ತಾರಾಪತ್ನಿಯರನ್ನು ಬಿಟ್ಟು ರೋಹಿಣಿಯೊಬ್ಬಳಲ್ಲೇ ವಿಹರಿಸುತ್ತಿದ್ದ ಕಾರಣ ಚಂದ್ರನಿಗೆ ದಕ್ಷಬ್ರಹ್ಮನ ಶಾಪವು ಬಂದು ಕ್ಷಯರೋಗಿಯಾದನು. ॥೩೫॥

ಅತ್ರಿಮುನಿಯ ಮಾತಿನಂತೆ ಆ ಚಂದ್ರನು ದಿವ್ಯಸಭಾನಾಥನಾದ ಶಿವನನ್ನು ಭಸ್ಮರುದ್ರಾಕ್ಷಿಧಾರಿಯಾಗಿ ರುದ್ರಜಪವನ್ನು ಮಾಡುತ್ತಾ ಆರಾಧಿಸಿದನು. ಶಿವನು ಪ್ರಸನ್ನನಾಗಿ ಅವನ ಕ್ಷಯರೋಗವನ್ನು ಹೋಗಲಾಡಿಸಿದನು. ಆಗ ಚಂದ್ರನು ಹೀಗೆ ಸ್ತುತಿಸಿದನು. ॥೩೬-೩೭॥

ತ್ರಿಪುರಸಂಹಾರ ಕಾಲದಲ್ಲಿ ಭೂಮಿಯೇ ರಥವಾಗುಳ್ಳ, ಸೂರ್ಯಚಂದ್ರರೇ ರಥಚಕ್ರಗಳಾಗುಳ್ಳ, ವೇದಗಳೇ ಕುದುರೆಗಳಾಗಿ, ಬ್ರಹ್ಮನೇ ಸಾರಥಿಯಾಗುಳ್ಳ,

ಈಶಾನೋ ಕಾಲಹಸ್ತೀಶಂ ಸಮಾರಾಧ್ಯೇಂದುಶೇಖರಂ ।
ರುದ್ರಾಣಾಮಧಿಪೋ ಜಾತಃ ಸ್ತುವನ್ ಸಾಂಬಂ ಮಹೇಶ್ವರಂ ॥೪೦॥

॥ ಈಶಾನ ಉವಾಚ ॥

ದಿಶಾಂ ಪತಿಂ ಪಶುಪತಿಂ ಪತ್ತೀನಾಂ ಮಿತಿಮೀಶ್ವರಂ
ಅನ್ನಾನಾಂ ಚ ಪತಿಂ ಪರಾತ್ಪರತರಂ ತ್ವಾಂ ವ್ಯೋಮಕೇಶಂ ಹರಂ
ಪುಷ್ಟಾನಾಂ ಚ ಪತಿಂ ರಮಾಪತಿಲಸನ್ನೇತ್ರಾರವಿಂದಾರ್ಚಿತಂ ತ್ವಾಂ
ಬಭ್ಲುಶಂ ಹರಿಶರಂ ಹರಿಕೇಶಮೀಶಮಾಶಾಮುಖಂ ಶರಣಮಾಶು ಶಿವಂ
ಪ್ರಪದ್ಯೇ ॥೪೧॥

ಯಸ್ತ್ವಂತಕಾಂತಕಮಹೇಶ್ವರಪಾದಪದ್ಮ
ಸದ್ಮಾಯಿತೇನ ಮನಸಾ ನಿಶಿತೇನ ಯುಕ್ತಃ ।
ಸಂಶಾಂತಸಂಸೃತಿಚಿರಭ್ರಮತೋಽಪಿ ಮುಕ್ತೋ
ಯುಕ್ತ್ಯಾ ಭವಾಬ್ಧಿಮಪಿ ಸಂತರತೇ ಸದಾ ಹಿ ॥೪೨॥

ಇತಿ ಶ್ರೀಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ
ಚತುಸ್ತ್ರಿಂಶತ್ತಮೋಽಧ್ಯಾಯಃ

ಮೇರುವೇ ಧನುಸ್ಸಾಗಿ ವಿಷ್ಣುವೇ ಬಾಣವಾಗಿ ಆದಿಶೇಷನೇ ಮೌರ್ವಿಯಾಗುಳ್ಳ ಪರಶಿವನೇ, ನನ್ನನ್ನು ಪಾಲಿಸು. ॥೩೮-೩೯॥

ಹನ್ನೊಂದು ಮಂದಿ ರುದ್ರರಲ್ಲೋರ್ವನಾದ ಈಶಾನನು ಕಾಲಹಸ್ತೀಶ್ವರನಾದ ಶಿವನನ್ನಾರಾಧಿಸಿ ಹೀಗೆ ಸ್ತುತಿಸಿ ರುದ್ರರಲ್ಲಿ ಮುಖ್ಯನಾದನು. ॥೪೦॥

“ದಿಕ್ಕುಗಳೊಡೆಯನೂ, ಕಾಲಾಳುಗಳ ಪತಿಯೂ, ಪಶುಗಳ ಯಜಮಾನನೂ, ಆಹಾರಗಳೊಡೆಯನೂ, ಸರ್ವೋತ್ತಮನೂ, ಶ್ರೀಮಂತರೊಡೆಯನೂ, ಹರಿಯ ನೇತ್ರಕಮಲದಿಂದರ್ಚಿಸಲ್ಪಟ್ಟವನೂ, ಹರಿಯೇ ಬಾಣವಾಗುಳ್ಳವನೂ, ಹಳದಿಯ ತಲೆಗೂದಲುಳ್ಳವನೂ ಆದ ಪರಶಿವನನ್ನು ಶರಣುಹೊಂದುವೆನು. ॥೪೧॥

ಮೃತ್ಯುವಿಗೆ ಮೃತ್ಯುವಾದ ಪರಮೇಶ್ವರನ ಪಾದಕಮಲವನ್ನು ಯಾವನು ಭಕ್ತಿಯಿಂದ ಅರ್ಚಿಸುವನೋ ಅವನು ಅಪಾರವಾದಂತಹ ಸಂಸಾರಸಾಗರವನ್ನು

ಜಾಗ್ರತೆಯಾಗಿ ದಾಟಿ ಮುಕ್ತಿಯನ್ನೈದುವನು." ಎಂದು ಈಶಾನನು ಸ್ತುತಿಸಿ ಮಹಾದೇವನ ಪ್ರೀತಿಯನ್ನು ಗಳಿಸಿದನು. ಎಂದು ಕುಮಾರಸ್ವಾಮಿಯು ಜೈಗೀಷವ್ಯ ಮಹಾಮುನಿಗೆ ತಿಳಿಯಪಡಿಸಿದನು. ||೪೨||

ಇಲ್ಲಿಗೆ ಶ್ರೀಶಿವರಹಸ್ಯದ ಚತುರ್ಥಾಂಶದಲ್ಲಿ ಮೂವತ್ತನಾಲ್ಕನೆಯ

ಅಧ್ಯಾಯವು ಮುಗಿದುದು.

|| ಶ್ರೀಃ ||

|| ಶ್ರೀಶಿವಾಯ ನಮಃ ||

ಅಥ ಶ್ರೀಶಿವರಹಸ್ಯೇ

ಚತುರ್ಥಾಂಶೇ

ಪಂಚತ್ರಿಂಶೋಽಧ್ಯಾಯಃ

|| ಸ್ಕಂದ ಉವಾಚ ||

ವಿಶ್ವಾವಸುಶ್ಚ ಗಂಧರ್ವೋ ಗಾನಾಚಾರ್ಯೋಽಭವತ್ಪುರಾ ।
ಗಾನಬಂಧುಸ್ಸಬಂಧುಶ್ಚ ತಥಾ ನಾರದಪರ್ವತೌ ॥೧॥

ಹಾಹಾಹೂಹೂ ಮಹಾದೇವಂ ಚಿರಂ ಚಿರಗಿರೀಶ್ವರಂ ।
ಭಸ್ಮಚ್ಛನ್ನಾರ್ಚಯಾಮಾಸುರ್ಗಾನಸ್ತುತ್ಯಾಭಿತೋಷಯನ್ ॥೨॥

ರುದ್ರವೀಣಾಪಾಣಯಸ್ತೇ ಶಿವನಾಮ್ನಾ ಶುಕಾನನೈಃ ॥೩॥

|| ಗಂಧರ್ವಾಊಚುಃ ||

ದಕ್ಷಶಿಕ್ಷ ವಿಷಮಾಕ್ಷಮುಕ್ಷ
ಮುಕ್ಷವಾಹಮರವಿಂದದಲಾಕ್ಷಂ ।
ಮೋಕ್ಷದಾಯಕ ಸುಭಕ್ಷರಕ್ಷಿತಂ
ಕಾಲಕೂಟಗರಲಾತ್ಕಿಲ ದೇವಾನ್ ॥೪॥

ಮೂವತ್ತೈದನೆಯ ಅಧ್ಯಾಯ

ಜೈಗೀಷವ್ಯ ಮಹರ್ಷಿಯೇ, ಇದೇ ರೀತಿ ವಿಶ್ವಾವಸುವೆಂಬ ಗಂಧರ್ವನೂ, ಗಾನಬಂಧು ಸುಬಂಧುವೆಂಬುವವರೂ, ನಾರದ ಪರ್ವತರೂ, ಹಾಹಾ ಮತ್ತು ಹೂಹೂಯೆಂಬ ಗಂಧರ್ವರೂ ಸಹ ಹಿಂದೆ ಭಸ್ಮರುದ್ರಾಕ್ಷಿಧಾರಿಗಳಾಗಿ ಶಿವನ ನಾಮಗಳನ್ನು ಇಂಪಾಗಿ ಗಾನಮಾಡಿ ರುದ್ರವೀಣೆಯನ್ನು ನುಡಿಸಿ ಶಂಕರನನ್ನು ಸ್ತುತಿಸಿ ಆ ದೇವನ ಅನುಗ್ರಹದಿಂದ ಸಂಗೀತಾಚಾರ್ಯರಾದರು. ||೧-೨-೩||

ಆಗ ಗಂಧರ್ವರು ಈರೀತಿ ಪ್ರಾರ್ಥಿಸಿದರು. “ ದಕ್ಷಬ್ರಹ್ಮನನ್ನು ಶಿಕ್ಷಿಸಿದ,

ವಸವೋ ಬ್ರಹ್ಮಣಾ ಶಪ್ತಾಸ್ತೇಽಪಿ ಗೋಪರ್ವತೇಶ್ವರಂ ।
ಸಮಾರಾಧ್ಯೈವ ಮುಕ್ತಾಃ ಸ್ಯುಃ ಸ್ತುವಂತಃ ಪಶುಪಂ ಶಿವಂ ॥೫॥

॥ ವಸವ ಊಚುಃ ॥

ಶಂಭೋ ಪಾಹಿ ದಯಾಂಬುಧೇ ಗತಭಯಂ ಸಂಸಾರಪಾರಂಗತಂ
ತ್ವತ್ಪಾದಾಂಬುರುಹಾರ್ಚನೇನ ಭಗವನ್ ವಿಶ್ವೇಶ ವಿಶ್ವಾಧಿಕ ।
ರಾಜಚ್ಛಿಂಗಜಟೋತ್ತಸಂಗಸುಮಹಾಧಾಮೇಂದುಚೂಡಾಮಣೇ
ಗಂಗಾಗರ್ವಹರಾವ್ಯಯೇಶ್ವರಮಹಾದೇವೇಶ ರಕ್ಷಾಧುನಾ ॥೬॥

ತಂಡುರಿಂದುಕಳಾಮಲಮೌಳಿರಿಂದುಖಂಡಸದೃಶೋಡುಕಪಾಲಂ।
ಭಸ್ಮಪುಂಡ್ರನಿಟಿಲೋ ಭರಿತಾಶೋ ವೀಕ್ಷ್ಯ ನಮ್ರಶಿರಸಾ ಗಣವರ್ಯಃ॥೭॥

ಶರ್ವಪಾದಕಲನೇನ ಸರ್ವದಾ ಪಾಪಪರ್ವತವರೈರ್ನ ಬಿಭೇತಿ ।
ಇಂದುಚೂಡ ಚರಣಾಂಬುಜಸಂಗೇಽಪ್ಯಂತರಂಗಕರಣೋ ಗಣವರ್ಯಃ ॥೮॥

ವೃಷಭವಾಹನನಾದ, ಮೂರುಕಣ್ಣುಗಳುಳ್ಳ ದೇವನೇ, ಮುಕ್ತಿಯನ್ನು ಕರುಣಿಸುವವನೇ, ವಿಷವನ್ನು ಪಾನಮಾಡಿ ದೇವತೆಗಳನ್ನು ರಕ್ಷಿಸಿದ ಪರಮೇಶ್ವರನೇ, ನಿನ್ನನ್ನು ನಾವು ಸದಾ ಭಜಿಸುವೆವು.” ॥೪॥

ಅಷ್ಟವಸುಗಳೂ ಸಹ ಹಿಂದೆ ಬ್ರಹ್ಮನಿಂದ ಶಾಪಹೊಂದಿ ಗೋಪರ್ವತೇಶ್ವರನನ್ನಾರಾಧಿಸಿ ಹೀಗೆ ಸ್ತುತಿಸಿ ಶಾಪದಿಂದ ಬಿಡುಗಡೆ ಹೊಂದಿದರು. ॥೫॥

ದಯಾಮಯನಾದ ಪರಮೇಶ್ವರನೇ, ನಿನ್ನ ಪಾದಕಮಲವನ್ನರ್ಚಿಸುವ ನಮ್ಮನ್ನು ರಕ್ಷಿಸು. ಗಂಗೆಯ ಗರ್ವವನ್ನು ಅಪಹರಿಸಿದ, ಚಂದ್ರಶೇಖರನಾದ, ನಾಶರಹಿತನಾದ ಜಟಾಧಾರಿಯಾದ ಮಹಾದೇವನೇ, ನಮ್ಮನ್ನು ಭಯದಿಂದ ತಪ್ಪಿಸಿ ಪಾಲಿಸು ಎಂದು ವಸುಗಳು ಪ್ರಾರ್ಥಿಸಿದರು. ॥೬॥

ತಂಡುವೆಂಬ ಮುನಿಯು ಹಿಂದೆ ಭಸ್ಮರುದ್ರಾಕ್ಷಿಧಾರಿಯಾಗಿ ಚಂದ್ರಶೇಖರನೆನಿಸಿದ ಪರಮೇಶ್ವರನನ್ನರ್ಚಿಸಿ, ಹೀಗೆ ಸ್ತುತಿಸಿ ಸಕಲ ಪಾಪಗಳನ್ನೂ ಕಳೆದುಕೊಂಡು ಚಿತ್ತಶುದ್ಧಿಯಿಂದ ಕೊನೆಗೆ ಪರಶಿವನ ಗಣಶ್ರೇಷ್ಠನಾದನು. ॥೭-೮॥

॥ ತಂಡುರುವಾಚ ॥

ಗರಧರ ಗಿರಿವರಶಯ ಪರಮುರಹರಶರ ಶಂಕರ ಕುರು ಕರುಣಾಂ ।
ಸಮಶರದೇಹವಿದಾರಕ ಈಶ್ವರ ನರಹರಿಕೃತ್ತಿವಸಾವ ಮಹೇಶ ॥೯॥

ಅಶ್ವಿನೌ ಚ ಪುರಾ ದೇವೈರ್ನಿರಸ್ತೌ ಭಿಷಜಾವಿತಿ ।
ಶ್ರೀಕಂಠೇಶಂ ಸಮಾರಾಧ್ಯ ಭವತಾಂ ಸೋಮಭಾಗಿನೌ ॥೧೦॥

॥ ಅಶ್ವಿನಾವೂಚತುಃ ॥

ಕುಂದವೃಂದನಿಭದೇಹ ಇಂದುಧೃಙ್ಮಂದರಾದ್ರಿವಸತೀಶ್ವರ ಪಾಹಿ ।
ಇಂದುಶುಕ್ತಿವರಹಾರ ಇಂದಿರಾನಾಥಪೂಜ್ಯಪದಪದ್ಮಸುಂದರ ॥೧೧॥

ಇಂದ್ರೇಣ ನಿಕೃತಾಸ್ಸರ್ವೇ ಮರುತೋ ಹಿ ಮಹೌಜಸಃ ।
ಇಂದ್ರೇಣಾಪ್ಯಲಭಂಸ್ತೇ ವೈ ಸೋಮಭಾಗಂ ಶಿವಾರ್ಚಯಾ ॥೧೨॥

ತೃಣಜ್ಯೋತಿಂ ಸಮಾರಾಧ್ಯ ಸ್ತುತ್ವೇಶಸ್ಯ ಕೃಪಾವಶಾತ್ ॥೧೩॥

ನೀಲಕಂಠನೂ, ಕೈಲಾಸನಿಲಯನೂ, ನಾರಾಯಣನೇ ಬಾಣವಾಗುಳ್ಳವನೂ, ಮನ್ಮಥನನ್ನು ದಹಿಸಿದವನೂ, ಸಿಂಹಚರ್ಮವನ್ನು ತೊಡುವವನೂ ಆದ ಓ ಪರಮೇಶ್ವರನೇ, ನನಗೆ ಅನುಗ್ರಹಮಾಡು ಎಂದು ತಂಡುವು ಬೇಡಿಕೊಂಡನು.॥೯॥

ಹಿಂದೆ ಅಶ್ವಿನೀ ದೇವತೆಗಳನ್ನು ವೈದ್ಯರೆಂದು ದೇವತೆಗಳು ತಿರಸ್ಕರಿಸಿ ಅವರಿಗೆ ಯಾಗದಲ್ಲಿ ಹವಿರ್ಭಾಗವಿಲ್ಲದಂತೆ ಮಾಡಿದ್ದರು. ಆಗ ಆ ಅಶ್ವಿನೀದೇವತೆಗಳು ಶ್ರೀಕಂಠೇಶ್ವರನನ್ನು ಆರಾಧಿಸಿ ಯಜ್ಞಭಾಗಿಗಳಾದರು. ॥೧೦॥

ಗಿರಿಮಲ್ಲಿಗೆಯಂತೆ ಬಿಳುಪಾದ ನಿರ್ಮಲ ದೇಹವುಳ್ಳ, ಮಂದರಗಿರಿಯಲ್ಲಿ ವಾಸಿಸುವ, ನಾರಾಯಣನಿಂದ ಅರ್ಚಿಸಲ್ಪಡುವ ಓ ಚಂದ್ರಶೇಖರನೇ ನನ್ನನ್ನು ಪಾಲಿಸು. ॥೧೧॥

ಹಿಂದೆ ಆಹವ ಮೊದಲಾದ ಏಳು ವಾಯುಗಳಿಗೆ ಇಂದ್ರನು ಹವಿರ್ಭಾಗವು ಸಿಗದಂತೆ ಮಾಡಿದ್ದನು. ಆಗ ಆವಾಯುಗಳು ತೃಣಜ್ಯೋತೀಶ್ವರನಾದ ಶಿವನನ್ನಾರಾಧಿಸಿ ಹೀಗೆ ಸ್ತುತಿಸಿ ಅವನ ಅನುಗ್ರಹದಿಂದ ಪುನಃ ಯಾಗದಲ್ಲಿ ಹವಿರ್ಭಾಗವನ್ನು ಪಡೆದುವು. ॥೧೨-೧೩॥

॥ ಮರುತ ಊಚುಃ ॥

ಯಃ ಕಾಲಕಾಲಮನಿಲಾಶನಶೋಭಿಗಾತ್ರಂ
ರುದ್ರಂ ತ್ರಿಣೇತ್ರಮಗರಾಜಸುತಾರ್ಧಗಾತ್ರಂ ।
ನೇತ್ರೀಕೃತಾಬ್ಜಹೃದಯೋರುವಿಕಾಸಿ ಮಿತ್ರಂ
ಮಂತ್ರೀ ಚ ಯಂತ್ರಿತಭವೋ ಭವತೀಹ ಭಾವಃ ॥೧೪॥

ಆದಿತ್ಯಾಶ್ಚಾಪಿ ತಪಸಾ ಸಮಾರಾಧ್ಯ ಮಹೇಶ್ವರಂ ।
ಸಹ್ಯಜಾತೀರಲಿಂಗೇಷು ತುಂಗೇಷು ನಿಯತಂ ತದಾ ॥೧೫॥

ಧೃತೇಶೇ ಪುಷ್ಪನಾಥೇ ಚ ಪ್ರಣತೇಶೇ ಚ ವೈದ್ಯಕೇ ।
ಶ್ರೀಖಂಡೇ ತೃಣಜಕ್ಷೇತ್ರೇ ವೇದಿಕಾಖ್ಯೇ ಪ್ರಯಾಣಕೇ ॥೧೬॥

ಜಂಬುಲಿಂಗೇ ಮಾತೃಶೈಲೇ ರತ್ನಶೈಲೇ ಇರಾವತೇ ।
ಸ್ತುವಂತೇ ದೀಪ್ತತನವೋಽಭವಂಸ್ತೇ ಶಂಕರಾರ್ಚನಾತ್ ॥೧೭॥

ಯಶ್ಚಂದ್ರಚೂಡಚರಣಾಂಬುಜಸೇವನೇನ
ಕಾಲಂ ನಯೇತ್ಸ ಹಿ ಭವಂ ಸುಗುಣಾಲವಾಲಃ ।

ಮೃತ್ಯುವಿಗೆ ಮೃತ್ಯುವೂ, ನಾಗಭೂಷಣನೂ, ಕೊನೆಯಲ್ಲಿ ಜಗತ್ತನ್ನು ಸಂಹರಿಸುವವನೂ, ಮುಕ್ಕಣ್ಣನೂ, ಪಾರ್ವತೀದೇವಿಯನ್ನು ಅರ್ಧಶರೀರದಲ್ಲಿ ಧರಿಸಿದ ಅರ್ಧನಾರೀಶ್ವರನೂ, ಸೂರ್ಯಚಂದ್ರಾಗ್ನಿಗಳೇ ಕಣ್ಣುಗಳಾಗುಳ್ಳವನೂ, ಸಂಸಾರದುಃಖವನ್ನು ಹೋಗಲಾಡಿಸುವವನೂ ಆದ ಶಿವನನ್ನು ಭಜಿಸುವೆವು. ॥೧೪॥

ಹನ್ನೆರಡುಮಂದಿ ಆದಿತ್ಯರೂ ಸಹ ಹಿಂದೆ ಸಹ್ಯಜಾನದಿಯ ತೀರದಲ್ಲಿರುವ ಧೃತೇಶ, ಪುಷ್ಪನಾಥ, ಪ್ರಣತೇಶ, ವೈದ್ಯನಾಥ, ಶ್ರೀಖಂಡೇಶ್ವರ, ತೃಣೇಶ್ವರ, ವೇದಿಕೇಶ್ವರ, ಪ್ರಯಾಣೇಶ್ವರ, ಜಂಬುಲಿಂಗೇಶ್ವರ, ರತ್ನಶೈಲೇಶ್ವರ, ಮಾತೃಶೈಲೇಶ್ವರ, ಇರಾವತೇಶ್ವರ ಎಂಬ ಈ ಹನ್ನೆರಡು ಲಿಂಗಗಳನ್ನು ಕ್ರಮವಾಗಿ ಅರ್ಚಿಸಿ ಸ್ತುತಿಸಿ ಶಿವನ ಅನುಗ್ರಹದಿಂದ ಜ್ಯೋತಿರ್ಮಯರಾದರು. (ಸೂರ್ಯರಾದರು) ॥೧೫-೧೬-೧೭॥

ಯಾವನು ಚಂದ್ರಶೇಖರನ ಅಡಿದಾವರೆಗಳನ್ನು ಭಕ್ತಿಯಿಂದ ಅರ್ಚಿಸುವನೋ, ಅವನು ಶಿವನಂತೆ ನಾಗಹಾರವುಳ್ಳವನಾಗಿ, ನೀಲಕಂಠನಾದ ಶಿವನ

ವ್ಯಾಲೇಂದ್ರಮಾಲಗರಳಾಶನರೂಪಮಾಪ್ಯ
ಕೈಲಾಸಮೌಳಿಷು ಸದಾ ವಿಹರತ್ಯಜಸ್ರಂ ॥೧೮॥

ರುದ್ರಾಶ್ಚೈಕಾದಶ ಪುರಾ ಸಮಾರಾಧ್ಯ ಮಹೇಶ್ವರಂ ।
ರುದ್ರಸಾರೂಪ್ಯಮಾಪನ್ನಾಃ ಶಂಕರಸ್ಯ ಪ್ರಸಾದತಃ ॥೧೯॥

ದುರ್ಗೇಶೇ ಕ್ಷೀರಿಣೀಕ್ಷೇತ್ರೇ ಮಾಧವ್ಯಾಂ ಸುಂದರೇ ವನೇ ।
ತೇಜಿನೀವಿಪಿನೇ ಕೋಟೌ ಮಂಗಳೇ ದಕ್ಷಿಣಾವೃತೇ ॥೨೦॥

ವೈದ್ಯನಾಥೇ ವಿಧಿವನೇ ಕಾಲನಾಶೇಂಬಿಕೇಶ್ವರಂ ।
ಸ್ತುವಂತಃ ಪರಮಾಂ ಕಾಷ್ಠಾಂ ತೇ ಸರ್ವೇ ರುದ್ರಮೂರ್ತಯಃ॥೨೧॥

॥ ರುದ್ರಾ ಊಚುಃ ॥

ಯಸ್ಮಾತ್ಪರಂ ನ ಪರಮಸ್ತಿ ಸುರಾದಿಕೇಷ್ವ
ನೋಘೌಘಸಂಘಜಭಯಂ ನ ಭವೇದ್ಧಿ ತಸ್ಯ ।
ಯಸ್ಯಾರ್ಚನೇನ ಕಿಲ ಮುಕ್ತಿಪದಾಭಿಷಂಗೋ
ಶಾಂಗಸ್ಯ ಲಿಂಗವಿಹಿತಾಮಲಪೂಜಿತಸ್ಯ ॥೨೨॥

ರೂಪವನ್ನು ಹೊಂದಿ ಕೈಲಾಸಗಿರಿಯಲ್ಲಿ ಸದಾ ವಿಹರಿಸುವನು, ಎಂದು ದ್ವಾದಶಾದಿತ್ಯರು ಪ್ರಾರ್ಥಿಸಿದರು. ॥೧೮॥

ಹನ್ನೊಂದುಮಂದಿ ರುದ್ರರೂ ಸಹ ಹಿಂದೆ ಪರಶಿವನನ್ನು ಆರಾಧಿಸಿ ಸ್ತುತಿಸಿ ಅವನ ಅನುಗ್ರಹದಿಂದ ಶಿವನ ರೂಪವನ್ನು ಪಡೆದರು. ॥೧೯॥

ಆ ರುದ್ರರು, ದುರ್ಗೇಶ, ಕ್ಷೀರಿಣೀಕ್ಷೇತ್ರ, ಮಾಧವೀಕ್ಷೇತ್ರ, ಸುಂದರಕ್ಷೇತ್ರ, ತೇಜಿನೀವನ, ಕೋಟೇಶ್ವರ, ಮಂಗಳೇಶ್ವರ, ದಕ್ಷಿಣಾವರ್ತ, ವೈದ್ಯನಾಥ, ವಿಧಿವನ, ಕಾಲನಾಶನ ಈ ಕ್ಷೇತ್ರಗಳಲ್ಲಿ ಕ್ರಮವಾಗಿ ಪರಮೇಶ್ವರನನ್ನರ್ಚಿಸಿ ಅವನ ಅನುಗ್ರಹದಿಂದ ರುದ್ರರೂಪವನ್ನು ಹೊಂದಿದರು. ॥೨೦-೨೧॥

ಆಗ ಆ ರುದ್ರದೇವತೆಗಳು, ಯಾವನಿಗಿಂತಲೂ ಶ್ರೇಷ್ಠರಾದ ದೇವತೆಗಳಿಲ್ಲವೋ, ಯಾವನ ಅರ್ಚನೆಯಿಂದ ಪಾಪಗಳೆಲ್ಲವೂ ತೊಲಗಿ ಮುಕ್ತಿಯು ಲಭಿಸುವುದೋ ಶಿವಲಿಂಗಸ್ವರೂಪಿಯಾದ ಅಂತಹ ಪರಶಿವನನ್ನು ಭಕ್ತಿಯಿಂದ ಸ್ತುತಿಸುವೆವು. ॥೨೨॥

ರುದ್ರಾಕ್ಷಭಸ್ಮಕಲಿತಾಮಲಕಾಲಕಂಠಃ
ಕುಂಡೀಕೃತಾಘನಿಚಯಸ್ಸ ತು ನೀಲಕಂಠಃ ।
ವೈಕುಂಠಪೂಜಿತಪದಾಂಬುಜಶೀಲನೇನ
ಪಾಠೀನಸಧ್ವಜಕೃತಾಂ ನ ರುಜಂ ವಹೇತ ॥೨೩॥

ಪಿತರಶ್ಚ ತಥಾಽನ್ಯೇಷು ತತ್ರ ಸಹ್ಯೋದ್ಭವಾತಟೇ ।
ಲಿಂಗೇಷು ಪೂಜಯಾಮಾಸುಃ ಸ್ತುವಂತಃ ಸಾಂಬಮೀಶ್ವರಂ ॥೨೪॥

॥ ಪಿತರ ಊಚುಃ ॥

ಮುಕುಟತಟನಿಬದ್ಧಸೋಮಧಾಮೋರುಲಿಂಗ
ಸ್ಫುಟಪರಿಚಯಪೂಜಾಧ್ಯಾನತೋ ಮುಕ್ತಿಕಾಂತಾಂ ।
ಕಲಯತಿ ಸುಕೃತಾನಾಂ ರಾಶಿರೀಶಪ್ರಸಾದಾ
ದನುದಿನಗಲಿತಾಘಃ ಶಾಂಭವಃ ಶಂಭುಭಕ್ತಃ ॥೨೫॥

ಗ್ರಹಾದ್ಯಾ ಋಷಯಶ್ಚೇಮೇ ಮುನಯೋಽನ್ಯೇ ಪಿನಾಕಿನಂ ।
ಸಮಭ್ಯರ್ಚ್ಯ ಸ್ತುವಂತಸ್ತೇ ಲೇಭಿರೇ ವಾಂಛಿತಾನಿ ಹಿ ॥೨೬॥

ನಾರಾಯಣನಿಂದ ಪೂಜಿಸಲ್ಪಡುವ, ರುದ್ರಾಕ್ಷಭಸ್ಮಗಳಿಂದಲಂಕೃತವಾದ ಕಂಠವುಳ್ಳ ನೀಲಕಂಠನನ್ನು ಆರಾಧಿಸಿದರೆ ಅಂತಹವನು ಯಾವ ದುಃಖವೂ ಇಲ್ಲದವನಾಗಿ ಮನ್ಮಥನ ಹಿಂಸೆಗೆ ಸಿಲುಕದೆ ಶಿವನಂತೆಯೇ ರೂಪವುಳ್ಳವನಾಗುವನು, ಮತ್ತು ಶಿವಸಾರೂಪ್ಯವನ್ನು ಹೊಂದುವನು ಎಂದು ಭಯಭಕ್ತಿಯಿಂದ ಪ್ರಾರ್ಥಿಸಿದರು. ॥೨೩॥

ಪಿತೃದೇವತೆಗಳೂ ಸಹ ಸಹ್ಯಜಾನದಿಯ ತಟದಲ್ಲಿ ಶಿವಲಿಂಗವನ್ನರ್ಚಿಸಿ ಹೀಗೆ ಸ್ತುತಿಸಿದರು. ॥೨೪॥

" ಕಿರೀಟದಲ್ಲಿ ಚಂದ್ರನನ್ನು ಧರಿಸಿದ ಪರಮೇಶ್ವರನ ಪೂಜ್ಯಲಿಂಗವನ್ನು ಭಕ್ತಿಯಿಂದ ಅರ್ಚಿಸುವವನು ಪಾಪಗಳೆಲ್ಲವನ್ನೂ ಕಳೆದುಕೊಂಡು ಪುಣ್ಯವಂತನಾಗಿ ಅತಿ ಜಾಗ್ರತೆಯಾಗಿ ಮುಕ್ತಿಯನ್ನು ಪಡೆಯುವನು. ಆ ಶಾಂಭವನೂ ಪರಮಪೂಜ್ಯನಲ್ಲವೇ ? " ॥೨೫॥

ಸೂರ್ಯನೇ ಮೊದಲಾದ ಗ್ರಹಗಳೂ ಮುನಿಗಳೂ ಸಹ ಪರಮೇಶ್ವರನನ್ನು ಆರಾಧಿಸಿ ಸ್ತುತಿಸಿ ತಮ್ಮ ಇಷ್ಟಾರ್ಥಗಳನ್ನು ಪಡೆದರು. ॥೨೬॥

ಕುಂಭಕೋಣೇ ತಥಾ ಭಾನುಶ್ಚಂದ್ರೋ ಮಧ್ಯಾರ್ಜುನೇ ತಥಾ ।
ಮಂಗಲೋಽಪಿ ಚ ಮಾಯೂರೇ ಬುಧಶ್ಚೇತಾಟವೀತಟೇ ॥೨೭॥

ಛಾಯಾವನೇ ಗುರುರ್ದೇವಂ ಶ್ರೀವಾಂಛಾಂ ಭೃಗುರೀಶ್ವರಂ ।
ಮಂದೋಽಪಿ ಕಮಲಾಪುರ್ಯಾಂ ಕೇತುರ್ದೇವವನೇ ಶಿವಂ ॥೨೮॥

ರಾಹುರ್ವಾತಪುರೀನಾಥಂ ಧ್ರುವೋ ವೈ ಸೇತುಬಂಧನೇ ।
ತಥಾನ್ಯೇ ಮುನಯಃ ಪೂರ್ವಂ ಭೂತಭವ್ಯಾಃ ಸನಾತನಾಃ ॥೨೯॥

ತತ್ರೈವ ಪೂಜಯಾಮಾಸುಶ್ಚತುರ್ದಶಸು ಸತ್ತಮಾಃ ।
ಸ್ತುವಂತಃ ಸಾಂಬಮೀಶಾನಂ ಲೇಭಿರೇ ವಾಂಛಿತಾನಿ ಹಿ ॥೩೦॥

ಗ್ರಹಾಮನವೋಮುನಯಶ್ಚೂಚುಃ ॥

ಜಯ ಜಯ ಮಹಾಭೈರವ ಮಹಾಭೂತಭೂಷಿತಮೂಲಕುಂಡಲೀ ಕುಂಡಲಾಲಂಕೃತಾತಿಘನವಿಲಾಸಿತವಿದ್ಯುದತಿಚಲದುರುತರನಾಲನಿಖಿಲ ಸರಸಿಜಾಸನವಿಸ್ತಾರಿತ ಸಮಸ್ತವ್ಯಸ್ತಸಮಸ್ತಜಗದ್ವಿಸ್ತಾರಸಂಹಾರನ ದ್ಧನಿರ್ಗುಣನಿರವಧಿಕಪರಿಮಾಣನೀಹಾರಪರಿಹಾರಮರೀಚಿವೀಚ್ಯಾಪಾರ ಪತ್ನೀಜಲಲುಲಿತಜಟಾಜೂಟಾಭಿರಾಮ ಹರ ಅಪಾರಾಂಗನಾಸಂಭೋಗಸರಾಗಪತಂಗಭಂಗ್ಯವಿತತೋತ್ತಮಾಂಗ ಭ್ರೂಮಧ್ಯನಯನವದನ

ಕುಂಭಕೋಣದಲ್ಲಿ ಸೂರ್ಯನೂ, ಮಧ್ಯಾರ್ಜುನದಲ್ಲಿ ಚಂದ್ರನೂ, ಮಾಯೂರಕ್ಷೇತ್ರದಲ್ಲಿ ಕುಜನೂ, ಚೇತಾಟವೀತೀರದಲ್ಲಿ ಬುಧನೂ, ಛಾಯಾವನದಲ್ಲಿ ಗುರುವೂ, ಶ್ರೀವಾಂಛಾಕ್ಷೇತ್ರದಲ್ಲಿ ಶುಕ್ರನೂ, ಕಮಲಾಪುರಿಯಲ್ಲಿ ಶನೈಶ್ಚರನೂ, ದೇವವನದಲ್ಲಿ ಕೇತುವೂ, ವಾತಪುರಿಯಲ್ಲಿ ರಾಹುವೂ, ಪರಶಿವನನ್ನಾರಾಧಿಸಿ ವರಗಳನ್ನು ಪಡೆದರು. ॥೨೭-೨೮॥

ಮತ್ತು ಪ್ರಾಚೀನರಾದ ಮುನಿಗಳೂ ಚತುರ್ದಶಮನುಗಳೂ ಪರಶಿವನನ್ನು ಆರಾಧಿಸಿ ಸ್ತುತಿಸಿ ಇಷ್ಟಾರ್ಥಗಳನ್ನು ಹೊಂದಿದರು. ॥೨೯-೩೦॥

"ಮಹಾಭಯಂಕರನೂ, ಜಗನ್ಮಯನೂ, ಸರ್ಪವನ್ನೇ ಕುಂಡಲವಾಗಿ ಧರಿಸಿದ ನಾಗಭೂಷಣನೂ, ಬ್ರಹ್ಮನು ನಿರ್ಮಿಸಿದ ಸಕಲ ಪ್ರಪಂಚವನ್ನು ಸಂಹರಿ

ಮತ್ತಮಧುಕರಜಝುಂಕಾರಸಂಕಾಶನಿಜಸಂಗಸಂಸರಣಕಿಂಕಿಣೀಕ್ವಣಿತ
ಲಲಿತಪದಾಹೃತಿಲೀನಮಹೀಮಂಡಲಾಧಾರಾಂಡಜಪ್ರಸ್ತೂಯಮಾಸ
ತಾಂಡ
ವಾಡಂಬರಯುತ್ಕಾರೋತ್ಕರ್ಷಧ್ವಸ್ತದೈತ್ಯದಾನವಸಂಘಾತನಿರಂತರಾತಿರಿ
ತಶಾಂತಾಂತಃಕರಣಾನವರತಧಾರಾಧರಧ್ವಾನಗಂಭೀರಘುರ್ಘುರಗಲಗವ
ಯಫೂತ್ಕಾರಸಂಭರಿಗಹ್ವರಗುಹಾರಾಜೀವಿರಾಜಮಾನಧರಾಧರಾಧೀಶ
ಕನ್ಯಾಕಾಂತಿಸಂಕ್ರಾಂತನೀಲಕಳೇಬರೈಕದೇಶ ಅಖಿಲಜಗತ್ಯಧೀಶ
ಮಹೇಶ ನಮಸ್ತೇ ನಮಸ್ತೇ ನಮಸ್ತೇ ನಮಸ್ತೇ ನಮಸ್ತೇ ॥೩೧॥

ಆದೌ ಕರ್ಮವಶಾದುದಂಚದಖಿಲತ್ರೈಲೋಕ್ಯಮೂಲಾಂಕುರಂ
ಪಂಚೋತ್ಪಲ್ಲವಿತೋತ್ತರಂಗವಿಭವಶ್ರೇಣೀಸಮುನ್ಮೇಖಲಂ ।
ಅಂತೇ ಲೋಚನಮುದ್ರಣಾವಿಘಟನಾಭಂಗಿಪ್ರಗಲ್ಭಂ ಮಹ
ರ್ಭಾಲೇಲೋಚನಮಾವಿರಸ್ತು ಪುರತಃ ಸಂಸಾರಸಮ್ಮೋಹನಂ ॥೩೨॥

ಸುವವನೂ, ನಿರ್ಗುಣನೂ, ತುದಿಮೊದಲಿಲ್ಲದವನೂ, ಸಾಗರಪತ್ನಿಯಾದ ಗಂಗೆಯನ್ನು ಜಟೆಯಲ್ಲಿ ಬಂಧಿಸಿಟ್ಟವನೂ, ಕುಟಿಲನಾದ ಮನ್ಮಥನನ್ನು ಉರಿಗಣ್ಣಿನಿಂದ ದಹಿಸಿದವನೂ, ಎಡಭಾಗ (ನಾರೀಶರೀರ) ದಿಂದ ಸುಂದರ ನರ್ತನವನ್ನೂ ಬಲಭಾಗದಿಂದ ತಾಂಡವವೆಂಬ ಪ್ರಳಯನರ್ತನವನ್ನು ಮಾಡುವವನೂ, ಬ್ರಹ್ಮನಿಂದ ಸ್ತುತಿಸಲ್ಪಡುವವನೂ, ದುಷ್ಟದಾನವರನ್ನು ಸಂಹರಿಸಿದವನೂ, ವಿಷವನ್ನುಗುಳುವ ಸರ್ಪಹಾರನೂ, ಗುಹಾದಿಗಳಿಂದ ಭಯಂಕರನಾದ ಹಿಮಾಲಯನ ಕುಮಾರಿಯ ಪ್ರಿಯ ಪತಿಯೂ, ಅರ್ಧನಾರೀಶ್ವರನೂ ಆದ ಓ ಪರಮೇಶ್ವರ, ನಿನಗೆ ನಮಸ್ಕಾರವು ಪುನಃ ಪುನಃ ವಂದನೆಗಳು. ॥೩೧॥

ಮೊದಲು ಕರ್ಮವಶಾತ್ ಜನಿಸುವ ಪ್ರಪಂಚದ ಅಂಕುರವೂ, ಮಧ್ಯದಲ್ಲಿ ಪಂಚಮಹಾಭೂತಗಳೆಂಬ ಚಿಗುರೆಲೆಗಳಿಂದ ತುಂಬಿ ಬೆಳೆಯುವುದೂ, ಕೊನೆಯಲ್ಲಿ ಆ ಪ್ರಪಂಚವನ್ನು ತನ್ನಲ್ಲಿ ಅಡಗಿಸುವುದೂ ಆದಂತಹ ಮೂರು ಕಣ್ಣುಗಳುಳ್ಳ ಜನಗಳಲ್ಲಿ ಸಂಸಾರಮೋಹವನ್ನುಂಟುಮಾಡುವ ಹಾಗೆಯೇ ಅದನ್ನು ನಾಶಮಾಡುವ ದೇವಸ್ವರೂಪವು ನನ್ನೆದುರಿಗೆ ಪ್ರತ್ಯಕ್ಷವಾಗಲಿ. ॥೩೨॥

ಆಧಾರಂ ಚತುರಾನನಸ್ಯ ಕರಕಾಸನ್ನದ್ಧಪಾಥಶ್ರುತೇಃ
ಆಧೇಯಂ ಗಿರಿಕನ್ಯಕಾಕುಚತಟಾಭೋಗಸ್ಯ ಭಂಗ್ಯಾಕೃತೇಃ ।
ಆಶಾಪಾಲಕವಾಲವಾಲಮಖಿಲಂ ಬ್ರಹ್ಮಾಂಡಭಾಂಡಸ್ಥಿತೇಃ
ಆಶಾಪಾಶವಿಮೋಚನಾಯ ಪ್ರಣವಾವಾಂತರ್ಮಹಸ್ತನ್ಮಹಃ ॥೩೩॥

॥ ಸೂತ ಉವಾಚ ॥

ಏವಂ ಲಿಂಗೇಷು ತುಂಗೇಷ್ವಮರವರಮಹಾಮಾತರೋ ದೇವಸಂಘಾಃ
ಖುಕ್ಷೋ ಯಕ್ಷಾಧಿನಾಥಾ ಮನುಮುನಯಃ ಇಮೇ ಸಹ್ಯಜಾಪುಣ್ಯತೀರೇ ।
ಸಂಪೂಜ್ಯ ಪ್ರಮಥಾಧಿನಾಥಮನಲಾಲಂಕಾರಫಾಲಾಕ್ಷರಂ
ಕಾಷ್ಠಾಮಾಪುರತೀವ ತುಷ್ಟಹೃದಯಾಃ ಶಂಭೋಃ ಕಟಾಕ್ಷಾಂಕುರೈಃ ॥೩೪॥

ಯಲ್ಲಿಂಗಾರ್ಚನಮಾತ್ರಕೋಃಖಿಲಮಹಾಸಾಮ್ರಾಜ್ಯಮಾಪ್ಯಾತ್ರ ವೈ
ಅಂತೇ ಮುಕ್ತಿಮವಾಪ್ನುವಂತಿ ನಿಯತಂ ಭಕ್ತ್ಯೈವ ಶಂಭೋಃ ಪದೇ ॥೩೫॥

ಬ್ರಹ್ಮನ ಮುಖದಿಂದ ಹೊರಟ ವೇದಗಳಿಗೆ ಆಧಾರವೂ, ಗಿರಿಜಾಸುಂದರಿಯ ತುಂಬುಸ್ತನಗಳಲ್ಲಿ ವಿಶ್ರಮಿಸುವವನೂ, ಬ್ರಹ್ಮಾಂಡವೃಕ್ಷಕ್ಕೆ ಪಾತೆಯಾಗಿರುವಂತಹ ತೇಜಸ್ವಿಯೂ ಆದ ಶಿವನನ್ನು ಆಶಾಪಾಶಗಳಿಂದ ಬಿಡುಗಡೆಹೊಂದಲು ಭಜಿಸುವೆವು" ಎಂದು ಸಕಲ ಗ್ರಹಗಳೂ ಮನುಗಳೂ ದೇವತೆಗಳೂ ಪ್ರಾರ್ಥಿಸಿದರು. ॥೩೩॥

ಹೀಗೆ ಸಹ್ಯಜಾನದಿಯ ತೀರದ ಶಿವಲಿಂಗಗಳಲ್ಲಿ ಈ ದೇವನಾಯಕರೂ ಮಹಾಮಾತೃಕೆಯೂ ಮಿಕ್ಕ ದೇವತೆಗಳೂ ಯಕ್ಷಾಧಿಪತಿಯೂ ರಾಕ್ಷಸಾಧಿಪತಿಗಳೂ ಮನುಗಳೂ ಮುನಿಗಳೂ ಸಹ ಭಕ್ತಿಯಿಂದ ಪರಶಿವನನ್ನಾರಾಧಿಸಿ ಅತ್ಯುತ್ತಮ ಪದವಿಯನ್ನು ಪಡೆದು ಸುಖದಿಂದೋಲಾಡಿದರು. ॥೩೪॥

ಮಹಾಮಹಿಮನಾದ ಪರಶಿವನನ್ನು ಭಕ್ತಿಯಿಂದ ಅರ್ಚಿಸಿದ ಮಾತ್ರದಿಂದಲೇ ಮಾನವನು ಈ ಲೋಕದಲ್ಲಿ ಚಕ್ರವರ್ತಿ ಪದವಿಯನ್ನು ಪಡೆಯುವನು. ಪರದಲ್ಲಿ ಮುಕ್ತಿಯನ್ನೇ ಹೊಂದುವನು. ॥೩೫॥

ದೇವೇ ದೇವಾಪಿ ಮೋದಾಮುಧಿತಧಿಯಃ ಶಾಂತಸಂಸಾರರಾಗಾಃ
ರೋಗಾಪಾಯೈರ್ವಿಮುಕ್ತಾ ಧೃತಸಿತಭಸಿತಪ್ರೇಮರುದ್ರಾಕ್ಷಸಂಗಾಃ ।
ಏವಂ ತೇಽಭಿಹಿತೋ ಹರಾಂಶಮಹಿಮಾ ಹಾರೇಷು ಸಂಹಾರಕೃತ್
ಪಾಪಾನಾಂ ಶ್ರುತಿವೀಕ್ಷಣೋತ್ತಮಮಹಾಹಾರಾರ್ಚಕೇಷು ಧ್ರುವಂ ॥೩೬॥

ಶ್ರುತ್ವಾಽಽಖ್ಯಾನಮುಮಾಪತಿಪ್ರಿಯಮಹಾಭಕ್ತ್ಯಭಿಪುಣ್ಯಾರ್ಥದಂ
ಚಾಖ್ಯಾನಂ ಶ್ರುತಿಶೇಖರೋತ್ತಮಪದ್ಯೈಃ ಶ್ರುತ್ವೈಷ ತುಷ್ಟೋ ಭವ ॥೩೭॥

ಪುಣ್ಯೈಃ ಪರಂ ಶಿವರಹಸ್ಯಮಧುಪ್ರಕೃಷ್ಟ
ಮೀಶಾಸ್ಯಪಂಕಜವರಾತ್ಪರಿನಿಃಸೃತಂ ಯತ್ ।
ಪೇಪೀಯ ಷಡ್ವದನಷಟ್ಚರಣಾತ್ಸುಗಂಧಿಂ
ಸನ್ಯಸ್ಯತಿ ಪ್ರಕಥಯನ್ ಗಣವಿಪ್ರಸಂಗೇ ॥೩೮॥

ಶ್ರುತ್ವೇದಂ ಪುರುಷಾರ್ಥಸಾರನಿಗಮೋಪಾತ್ತಂ ಪ್ರಕೃಷ್ಟಾರ್ಥದಂ
ಭಕ್ತ್ಯಾಖ್ಯಾನಮನೋಹರಂ ವರಚತುರ್ಥಾಂಶಂ ರಹಸ್ಯಂ ಶಿವಂ ।

ದೇವತೆಗಳೂ ಸಹ ಆ ಮಹಾದೇವವನ್ನು ಭಸ್ಮರುದ್ರಾಕ್ಷಿಧಾರಿಗಳಾಗಿ ಅರ್ಚಿಸಿದರೆ ಸಂಸಾರ ದುಃಖಕ್ಕೆ ಸಿಲುಕದೇ ಮುಕ್ತಿಯನ್ನು ಪಡೆಯುವರು. ಎಲೈ ಮುನಿಗಳೇ, ನಿಮಗೆ ಈಗ ಅಂತಹ ಶಾಂಭವಶ್ರೇಷ್ಠರ ಮಹಿಮೆಯನ್ನು ವಿಸ್ತರಿಸಿ ಹೇಳಿರುವೆನು. ಪರಮೇಶ್ವರನ ಭಕ್ತರನ್ನು ದರ್ಶನಮಾಡುವುದರಿಂದ ಅವರ ಕಥೆಗಳನ್ನು ಕೇಳುವುದರಿಂದ ಪಾಪಗಳೆಲ್ಲವೂ, ನಿಜವಾಗಿಯೂ ನಾಶವಾಗುವುವು. ॥೩೬॥

ವೇದವೇದಾಂತಗಳಲ್ಲಿ ಸ್ತುತಿಸಲ್ಪಡುವ ಪರಶಿವನ ಇಂತಹ ಪುಣ್ಯಚರಿತವನ್ನು ಕೇಳಿ, ಎಲೈ ಮುನಿಗಳೇ ನೀವು ಸುಖಿಗಳಾಗಿರಿ. ॥೩೭॥

ಪರಶಿವನ ಮುಖಕಮಲದಿಂದ ಸ್ರವಿಸುವ ಷಣ್ಮುಖನೆಂಬ ಭ್ರಮರದಿಂದ ಆಸ್ವಾದಿಸಲ್ಪಟ್ಟ ಈ ಶಿವರಹಸ್ಯವೆಂಬ ಮಕರಂದವನ್ನು ಪಡೆದು ಶಾಂಭವನು ಶಿವಗಣಗಳೊಡನೆ ಸುಖವಾಗಿ ವಿಹರಿಸುವನು. ॥೩೮॥

ಸಕಲ ಪುರುಷಾರ್ಥಗಳನ್ನೂ ಉಂಟುಮಾಡುವ ಭಕ್ತಿಪ್ರಧಾನವಾದ ಈ ಶಿವರಹಸ್ಯದ ಚತುರ್ಥಾಂಶವನ್ನು ಓದುವವನೂ ಕೇಳುವವನೂ ಸಹ ಶಿವಲೋಕ

ಸಂಪ್ರಾಪ್ನೋತಿ ಗಣೇಂದ್ರಮುಖ್ಯಪದವೀಂ ಕಿಂ ಕಾಮನಾಭಿಃ ಪರಂ
ನಾಮ್ನಾ ಶಂಕರನಾಮಕೋಯಮತುಲೋ ಭಕ್ತ್ಯಾ ಶೃಣೋದ್ಯೋ ನರಃ ॥೩೯॥

ಇತಿ ಶ್ರೀಶಿವರಹಸ್ಯೇ ಶಿವಾಖ್ಯೇ ಚತುರ್ಥಾಂಶೇ ಗಂಧರ್ವವಸುತಂಡು ಅಶ್ವಿನ್ಯಾದಿತ್ಯೈಕಾದಶರುದ್ರಪಿತೃನವಗ್ರಹಋಷಿ ಮುನಿದೇವ ಮಾತೃಯಕ್ಷಯಕ್ಷಾಧಿನಾಥಮನುಮುನಯಃ ಶಿವಾರಾಧನಾದಿಷ್ಟಾರ್ಥಂ ಪ್ರಾಪುರಿತಿನಿರೂಪಣಂ ನಾಮ ಪಂಚತ್ರಿಂಶೋಽಧ್ಯಾಯಃ

॥ ಚತುರ್ಥಾಂಶಸ್ಸಮಾಪ್ತಃ ॥

॥ ಶ್ರೀಕಾಶೀವಿಶ್ವೇಶ್ವರಾರ್ಪಣಮಸ್ತು ॥

ವನ್ನು ಪಡೆದು ಶಿವಗಣಗಳಿಗೆ ಮುಖ್ಯನಾಗಿ ಶಿವನಂತೆ ರೂಪವುಳ್ಳವನಾಗಿ ಆನಂದವನ್ನು ಪಡೆಯುವನು. ಎಂದು ಜೈಗೀಷವ್ಯನಿಗೆ ಕುಮಾರಸ್ವಾಮಿಯು ಬೋಧಿಸಿದುದನ್ನು ಸೂತಮಹರ್ಷಿಗಳು ವಾಜಶ್ರವಸಾದಿ ಸಕಲ ಮುನಿವೃಂದಕ್ಕೂ ಉಪದೇಶಿಸಿದರು. ॥೩೯॥

ಈ ಅಂಶದಲ್ಲಿ ಅನೇಕ ಶಿವಸ್ತೋತ್ರಗಳೂ, ಈಶ್ವರ ಭಕ್ತರ ಇತಿಹಾಸಗಳೂ ವಿಶೇಷವಾಗಿ ಬರುತ್ತವೆ. ಗ್ರಂಥಕಾರರು ಸ್ವಯಂಶಿವಭಕ್ತಿಪರವಶರಾಗಿ, ಈಶ್ವರ ಸ್ತುತಿಗೆ ಸಾಧ್ಯವಾದಷ್ಟು ಸನ್ನಿವೇಶಗಳನ್ನು ಕಲ್ಪಿಸಿಕೊಂಡು ಮನಃಪೂರ್ವಕವಾಗಿ ಶಿವಸ್ತೋತ್ರಗಳನ್ನು ಬರೆದಿರುವರು. ಮಾರ್ಕಂಡೇಯ, ನಂದೀಶ್ವರ, ಬ್ರಹ್ಮ, ವಿಷ್ಣು, ಉಪಮನ್ಯು, ಭಗೀರಥ, ದಧೀಚಿ, ಇನ್ನೂ ಅನೇಕ ದೇವತೆಗಳು ನಾನಾ ಕಷ್ಟಗಳಿಗೆ ಒಳಗಾಗಿ, ಈಶ್ವರನನ್ನು ಮೊರೆಹೊಕ್ಕು ಆಯಾ ದುಃಖಗಳಿಂದ ಪಾರಾಗಿರುವರು. ಈಗ ಜನಜನಿತವಾಗಿ ಪ್ರಚಾರದಲ್ಲಿರುವ ಮಾರ್ಕಂಡೇಯಕೃತ ಶಿವಸ್ತೋತ್ರವು ಈ ಅಂಶದ ಹದಿನಾಲ್ಕನೆಯ ಅಧ್ಯಾಯದಲ್ಲಿ ಬಂದಿರುವುದು. ಹಾಗೆಯೇ ಇಪ್ಪತ್ತನೆಯ ಅಧ್ಯಾಯದಲ್ಲಿ ಉಪನಿಷದರ್ಥ ಬೋಧಕವಾದ ಕೆಲವು ಸ್ತೋತ್ರಗಳು ಶುಕಮಹರ್ಷಿಕೃತವೆಂದು ನಿರೂಪಿಸಲ್ಪಟ್ಟಿವೆ. ದೂರ್ವಾಸ, ದಧೀಚಿ, ಕಾಲಾಗ್ನಿ ರುದ್ರ ಮೊದಲಾ

ದವರಿಂದ ಪ್ರತಿಪಾದಿತವಾಗಿರುವ ಶಿವಸ್ತೋತ್ರಗಳು ಬೇರೆಬೇರೆ ವೃತ್ತಗಳಿಂದಲೂ, ಅರ್ಥವತ್ತಾದ ಪದಗಳಿಂದಲೂ ಬಹಳ ಹೃದಯಂಗಮವಾಗಿ ಬಂದಿವೆ. ಒಟ್ಟಿನಲ್ಲಿ ಈ ಅಂಶಪೂರ್ತಿ ಶಿವಸ್ತುತಿ, ಶಿವವಿಷಯಕವಾದ ಭಕ್ತಿ, ಶಿವಭಕ್ತರ ಮಹಿಮೆ, ಶೈವ ಧರ್ಮಸ್ವರೂಪ ಈ ವಿಚಾರಗಳಿಂದಲೇ ತುಂಬಿರುವುದು.

ಇಲ್ಲಿಗೆ ಶ್ರೀಶಿವರಹಸ್ಯದ ಚತುರ್ಥಾಂಶದಲ್ಲಿ ಗಂಧರ್ವಾದಿ ಸಕಲ ದೇವತೆಗಳೂ ಶಿವಾರಾಧನೆಯಿಂದ ತಮ್ಮ ಸಕಲವಾದ ಇಷ್ಟಾರ್ಥಗಳನ್ನೂ ಪಡೆದರೆಂಬ ವಿಷಯವನ್ನು ತಿಳಿಸುವ, ಮೂವತ್ತೈದನೆಯ ಅಧ್ಯಾಯವು ಮುಗಿದುದು.

ನಾಲ್ಕನೆಯ ಅಂಶವು ಮುಗಿದುದು